ಅಭಿವೃದ್ಧಿ - ಸ್ಥಳಾಂತರ ಮತ್ತು ಪುನರ್‌ವಸತಿ:
ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಆರ್ಥಿಕ ವಲಯದ ಒಂದು ಅಧ್ಯಯನ.

ರಾಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಪಟ್ಟಂತೆ ಪಿಹೆಚ್.ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ
ಪ್ರವೀಣ್. ಕೆ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬.

ಮಾರ್ಗದರ್ಶಕರು
ಡಾ. ಎ. ಶ್ರೀಧರ
ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬.

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬
೨೦೧೬

ಅಭಿವೃದ್ಧಿ – ಸ್ಥಳಾಂತರ ಮತ್ತು ಪುನರ್‌ವಸತಿ:
ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಆರ್ಥಿಕ ವಲಯದ ಒಂದು ಅಧ್ಯಯನ

ರಾಜ್ಯಶಾಸ್ತ್ರ ವಿಷಯಕ್ಕೆ ಸಂಬಂಧಪಟ್ಟಂತೆ ಪಿಹೆಚ್.ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ

ಪ್ರವೀಣ್ .ಕೆ

ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩ ೨೭೬.

ಮಾರ್ಗದರ್ಶಕರು

ಡಾ. ಎ. ಶ್ರೀಧರ

ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩ ೨೭೬.

ಸಮಾಜ ವಿಜ್ಞಾನಗಳ ನಿಕಾಯ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ – ೫೮೩ ೨೭೬

೨೦೧೬

720

ಸಂಶೋಧಕರ ಘೋಷಣಾ ಪತ್ರ

"ಅಭಿವೃದ್ಧಿ–ಸ್ಥಳಾಂತರ ಮತ್ತು ಪುನರ್‌ವಸತಿ: ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಆರ್ಥಿಕ ವಲಯದ ಒಂದು ಅಧ್ಯಯನ" ಎಂಬ ರಾಜ್ಯಶಾಸ್ತ್ರ ವಿಷಯದ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಎ. ಶ್ರೀಧರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೦೨-06-೨೦16

ಸ್ಥಳ : ವಿದ್ಯಾರಣ್ಯ

(ಪ್ರವೀಣ್ ಕೆ.)

ಸಂಶೋಧನಾ ವಿದ್ಯಾರ್ಥಿ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ,

ಹಂಪಿ,

ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಪ್ರವೀಣ್ ಕೆ. ಇವರು ರಾಜ್ಯಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಅಭಿವೃದ್ಧಿ–ಸ್ಥಳಾಂತರ ಮತ್ತು ಪುನರ್‌ವಸತಿ: ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಆರ್ಥಿಕ ವಲಯದ ಒಂದು ಅಧ್ಯಯನ"** ಎಂಬ ವಿಷಯದ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೦೨-೦೬-೨೦16

ಸ್ಥಳ : ವಿದ್ಯಾರಣ್ಯ

(ಡಾ. ಎ. ಶ್ರೀಧರ)
ಮಾರ್ಗದರ್ಶಕರು ಹಾಗೂ
ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ – ೫೮೩ ೨೭೬.

ಪರಿವಿಡಿ

ಪ್ರಸ್ತಾವನೆ

1. ಪೀಠಿಕೆ.
2. ಸಮಸ್ಯೀಕರಣ.
3. ವಿಶೇಷ ಆರ್ಥಿಕ ವಲಯಗಳು.
4. ಅಧ್ಯಯನದ ಉದ್ದೇಶಗಳು.
5. ಅಧ್ಯಯನದ ಮಹತ್ವ.
6. ಅಧ್ಯಯನದ ವಿಧಾನ.
7. ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳು.
8. ಅಧ್ಯಯನದ ವಿಭಾಗೀಕರಣ.

ಅಧ್ಯಾಯ – 1 ಭಾರತದಲ್ಲಿ ಅಭಿವೃದ್ಧಿ ಮತ್ತು ಸ್ಥಳಾಂತರದ ಬಗೆಗಿನ ಪರಿಕಲ್ಪನಾತ್ಮಕ ವಿವರಣೆ

1.1 ಸ್ಥಳಾಂತರ ಮತ್ತು ಪುನರ್‌ವಸತಿಯ ಬಗೆಗಿನ ಸಾಹಿತ್ಯ ವಿಮರ್ಶೆ.
1.2 ಅಭಿವೃದ್ಧಿ ಬಗೆಗಿನ ಸಾಹಿತ್ಯದ ಪರಾಮರ್ಶನ.
1.3 ಅಭಿವೃದ್ಧಿ ಮತ್ತು ಸ್ಥಳಾಂತರಕ್ಕೆ ಸಂಬಂಧಪಟ್ಟಂತೆ ಕರ್ನಾಟಕವನ್ನು ಕೇಂದ್ರೀಕರಿಸಿ ನಡೆಸಲಾದ ಸಾಹಿತ್ಯ ಪರಾಮರ್ಶನ.
1.4 ಅಭಿವೃದ್ಧಿ ಮತ್ತು ಸ್ಥಳಾಂತರದ ಬಗೆಗಿನ ಸೈದ್ಧಾಂತಿಕ / ತಾತ್ವಿಕ ಚೌಕಟ್ಟು.
1.5 ಅಭಿವೃದ್ಧಿಯ ಫಲಿತಗಳು.

ಅಧ್ಯಾಯ – 2 ಅಧ್ಯಯನದ ಕ್ಷೇತ್ರ ಪರಿಚಯ ಮತ್ತು ಮಂಗಳೂರು ವಿಶೇಷ ಆರ್ಥಿಕ ವಲಯದ ಭೂಸ್ವಾಧೀನ, ಸ್ಥಳಾಂತರ ಮತ್ತು ಪುನರ್‌ವಸತಿ ನೀತಿಗಳು

ಭಾಗ – 1: ದಕ್ಷಿಣ ಕನ್ನಡ ಜಿಲ್ಲೆಯ ಸಂಕ್ಷಿಪ್ತ ಪರಿಚಯ.
ಭಾಗ – 2: ಅಧ್ಯಯನಕ್ಕೊಳಪಡಿಸಿದ ಗ್ರಾಮಗಳ ಬಗೆಗಿನ ವಿವರಗಳು.
ಭಾಗ – 3: ಪುನರ್‌ವಸತಿಯ ಬಗೆಗಿನ ಕರ್ನಾಟಕ ಸರಕಾರದ ನೀತಿಗಳು.

ಅಧ್ಯಾಯ – 3 ಸ್ಥಳಾಂತರಗೊಂಡ ಸಂತ್ರಸ್ತರ ಕ್ಷೇತ್ರಕಾರ್ಯಾಧಾರಿತ ವಿಶ್ಲೇಷಣೆ, ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳು

3.1 ಅಧ್ಯಯನದ ಸ್ಥಳ ಮತ್ತು ಆರಿಸಲ್ಪಟ್ಟ ಮಾದರಿ ನಮೂನೆ.
3.2 ರಿಂದ 3.18 – ಸ್ಥಳಾಂತರದ ಸಾಮಾಜಿಕ ಪರಿಣಾಮಗಳ ವಿಶ್ಲೇಷಣೆ.
3.19 ರಿಂದ 3.34 – ಸ್ಥಳಾಂತರದ ರಾಜಕೀಯ ಪರಿಣಾಮಗಳ ವಿವರಣೆ.

ಸಂಕೇತ ಸೂಚಿ

ಮ.ವಿ.ಆ.ವ.	–	ಮಂಗಳೂರು ವಿಶೇಷ ಆರ್ಥಿಕ ವಲಯ
ಕೆ.ಐ.ಎ.ಡಿ.ಬಿ.	–	ಕರ್ನಾಟಕ ಇಂಡಸ್ಟ್ರೀಯಲ್ ಎರಿಯಾ ಡೆವಲಪ್‌ಮೆಂಟ್ ಬೋರ್ಡ್
ಎಂ.ಸಿ.ಎಫ್.	–	ಮ್ಯಾಂಗಲೂರ್ ಕೆಮಿಕಲ್ಸ್ ಎಂಡ್ ಫರ್ಟಿಲೈಸರ್ಸ್
ಎಂ.ಆರ್.ಪಿ.ಎಲ್.	–	ಮ್ಯಾಂಗಲೂರ್ ರಿಫೈನರಿ ಎಂಡ್ ಪೆಟ್ರೋಲಿಯಂ ಲಿಮಿಟೆಡ್
ಎನ್.ಎಂ.ಪಿ.ಟಿ.	–	ನ್ಯೂ ಮ್ಯಾಂಗಲೂರ್ ಪೋರ್ಟ್ ಟ್ರಸ್ಟ್
ಐ.ಎಸ್.ಪಿ.ಆರ್.ಎಲ್.	–	ಇಂಡಿಯನ್ ಸ್ಟ್ರೆಟಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್
ಬಿ.ಎ.ಎಸ್.ಎಫ್.	–	ಬೆಡನ್ ಎನಿಲೈನ್ ಎಂಡ್ ಸೋಡ ಫ್ಯಾಕ್ಟರಿ
ಎ.ಸಿ.ಸಿ.	–	ಎಸೋಸಿಯೆಟೆಡ್ ಸಿಮೆಂಟ್ ಕಂಪೆನಿ
ಎನ್.ಐ.ಟಿ.ಕೆ.	–	ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ
ಓ.ಎನ್.ಜಿ.ಸಿ.	–	ಆಯಿಲ್ ಎಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೋರೇಶನ್
ಯು.ಪಿ.ಸಿ.ಎಲ್.	–	ಉಡುಪಿ ಪವರ್ ಕಾರ್ಪೊರೇಷನ್ ಲಿಮಿಟೆಡ್
ಎನ್.ಎ.ಎಲ್.ಕೊ.	–	ನ್ಯಾಷನಲ್ ಎಲ್ಯೂಮಿನಿಯಂ ಕಂಪೆನಿ
ಎನ್.ಟಿ.ಪಿ.ಸಿ.	–	ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಶನ್
ಕೆ.ಐ.ಓ.ಸಿ.ಎಲ್.	–	ಕುದುರೆಮುಖ ಐಯರ್ನ್ ಓರ್ ಕಂಪೆನಿ ಲಿಮಿಟೆಡ್
ಎಚ್.ಡಿ.ಆರ್.	–	ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್
ಆರ್ ಎಂಡ್ ಆರ್	–	ರೀಸೆಟ್ಲ್‌ಮೆಂಟ್ ಎಂಡ್ ರೀಹೆಬಿಲಿಟೇಷನ್
ಆರ್.ಡಿ.	–	ರೆವಿನ್ಯೂ ಡಿಪಾರ್ಟ್‌ಮೆಂಟ್

ಕೋಷ್ಟಕಗಳು

ಪ್ರಸ್ತಾವನೆ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1. ಪೀಠಿಕೆ

ಒಂದು ಭೂಪ್ರದೇಶದ ಜನರ ಜೀವನ ಅಭಿವೃದ್ಧಿಯಾಗಬೇಕಾದರೆ ಕೈಗಾರಿಕೀಕರಣ ಆಗಬೇಕು ಎಂಬುದು ಸಾಂಪ್ರದಾಯಿಕ ವಾದ. ಆದರೆ ಈ ಅಭಿವೃದ್ಧಿಗಾಗಿ ನಾವು ಆಯ್ಕೆಮಾಡಿಕೊಂಡಿರುವ 'ಪಶ್ಚಿಮದ ಮಾದರಿಯ' ಅಭಿವೃದ್ಧಿಯ ಪಥ ಎಷ್ಟರ ಮಟ್ಟಿಗೆ ಸೂಕ್ತವಾಗುತ್ತದೆ ಎಂಬುದರ ಕುರಿತು ವೈಜ್ಞಾನಿಕವಾಗಿ ಚರ್ಚೆಯಾಗಬೇಕಾಗಿರುವುದು ಇಂದಿನ ಅವಶ್ಯಕತೆಯಾಗಿರುತ್ತದೆ. ಅಭಿವೃದ್ಧಿಯನ್ನು ಸಾಧಿಸಲು ಯಾವುದಾದರೂ ಒಂದು ಮಾದರಿಯನ್ನು ಆಯ್ಕೆಮಾಡಿಕೊಳ್ಳುವ ಮುನ್ನ ಕೆಲವೊಂದು ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಅಭಿವೃದ್ಧಿ ಅಂದರೆ ಏನು? ಅದು ಯಾವ ರೀತಿಯ ಅಭಿವೃದ್ಧಿ, ಅದನ್ನು ಸಾಧಿಸಲು ಅನುಸರಿಸಬೇಕಾದ ಮಾರ್ಗ ಹಾಗೂ ತೆರಬೇಕಾದ ಬೆಲೆ ಏನು ಎಂಬುದನ್ನು ಮೊದಲು ಸ್ಪಷ್ಟಪಡಿಸಬೇಕು. ಸಾಧಿಸಲಿರುವ ಅಭಿವೃದ್ಧಿಯ ಫಲ ಏನು? ಆ ಫಲ ಸಮುದಾಯದ ಎಲ್ಲಾ ವರ್ಗಗಳಿಗೂ ಸಂಪೂರ್ಣವಾಗಿ ಮತ್ತು ಸಮಾನವಾಗಿ ಹಂಚಿಕೆಯಾಗಲ್ಪಡುತ್ತದೆಯೇ? ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಹೀಗೆ ವಿವೇಚಿಸಿ, ಸಂಯಮದಿಂದ ಸಾಧಿಸಿದ ಅಭಿವೃದ್ಧಿ ಮಾತ್ರ ಪರಿಣಾಮಕಾರಿ ಹಾಗೂ ಸಾರ್ಥಕವಾಗಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಎಂದರೆ ಏನು, ಸಹ್ಯ ಅಭಿವೃದ್ಧಿಯ ಹೂರಣ ಏನು ಎಂಬುದನ್ನು ಚರ್ಚಿಸುವುದು ಹಾಗೂ ವಿಶೇಷ ಆರ್ಥಿಕ ವಲಯಗಳ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಮಜಲುಗಳನ್ನು ಮಂಗಳೂರು ವಿಶೇಷ ಆರ್ಥಿಕ ವಲಯವನ್ನು ಕೇಂದ್ರೀಕರಿಸಿ ಅರ್ಥೈಸುವುದು ಪ್ರಸ್ತುತ ಅಧ್ಯಯನದ ಮೂಲ ಉದ್ದೇಶವಾಗಿರುತ್ತದೆ.

ಕೋಟ್ಯಾಂತರ ಜನರು ಹಿಂದಿನಿಂದ ನೆಲೆಸಿಕೊಂಡು ಬಂದಿರುವ ಭೂಮಿಯನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂದು ಪರಿಗಣಿಸಿರುತ್ತಾರೆ. ಆದರೆ ಕೈಗಾರಿಕೀಕರಣ ಮತ್ತು ಬೃಹತ್ ಉದ್ಯಮಗಳು ಸ್ಥಾಪನೆಯಾಗುವಂತಹ ಸಂದರ್ಭದಲ್ಲಿ, ಭೂಮಿಯನ್ನು ಕಳೆದುಕೊಳ್ಳುವುದು ಮತ್ತು ಅವರಿಗೆ ಬೇರೆ ಪ್ರದೇಶದಲ್ಲಿ ಪುನರ್‌ವಸತಿಯನ್ನು ಕಲ್ಪಿಸಿಕೊಡುವುದನ್ನು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಹಜ[1] ಎಂಬುದಾಗಿ ಜಾಗತಿಕ ಮಟ್ಟದಲ್ಲಿ ಪರಿಗಣಿಸಲಾಗಿದೆ. ಸ್ವತಂತ್ರ ಭಾರತದ ಸರ್ವತೋಮುಖ ಅಭಿವೃದ್ಧಿಗೆ ಚಾಲನೆ ನೀಡಿದ, ಮಿಶ್ರ ಆರ್ಥಿಕ ನೀತಿ ಹಾಗೂ ಸಮಾಜವಾದಿ ಹರಿಕಾರ ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂರವರು 'ಜಲಾಶಯಗಳು ಭಾರತದ ಅಭಿವೃದ್ಧಿಯ ದೇವಾಲಯಗಳು'[2] ಎಂಬುದಾಗಿ ವ್ಯಾಖ್ಯಾನಿಸಿ, ಒರಿಸ್ಸಾದ ಹಿರಾಕುಡ್ ಅಣೆಕಟ್ಟನ್ನು ನಿರ್ಮಿಸುವ ಸಂದರ್ಭದಲ್ಲಿ ನಿರ್ವಸಿತರನ್ನು ಉದ್ದೇಶಿಸಿ ಮಾತನಾಡುತ್ತಾ, 'ರಾಷ್ಟ್ರವು

ಒಟ್ಟು ಅಭಿವೃದ್ಧಿಯನ್ನು ಸಾಧಿಸುವ ಪ್ರಕ್ರಿಯೆಯಲ್ಲಿ ಕೆಲವು ಜನರು ತ್ಯಾಗ ಮಾಡುವುದು ಅನಿವಾರ್ಯವಾಗುತ್ತದೆ[3] (1960) ಎಂಬುದಾಗಿ ಸಮರ್ಥಿಸಿಕೊಂಡಿದ್ದನ್ನು ಇಲ್ಲಿ ಉಲ್ಲೇಖಿಸುವುದು ಸಮಂಜಸವಾಗುತ್ತದೆ. ಈ ಮೂಲಕ ಆಡಳಿತ ವ್ಯವಸ್ಥೆಯು ಹೇಗೆ ಬಲವಂತದ ಸ್ಥಳಾಂತರವನ್ನು ಸಮರ್ಥಿಸಿಕೊಳ್ಳುತ್ತದೆ ಎಂಬುದನ್ನು ಅರ್ಥೈಸಿಕೊಳ್ಳಬಹುದು. ಇಲ್ಲಿಯವರೆಗೆ ಭಾರತದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಅನೇಕ ಜಲಾಶಯಗಳ ನಿರ್ಮಾಣ, ವಿದ್ಯುತ್ ಉತ್ಪಾದಿಸುವ ಸ್ಥಾವರಗಳ ರಚನೆ, ಮಿಲಿಟರಿ ನೆಲೆಗಳ ಸ್ಥಾಪನೆ, ರೈಲ್ವೆ ಮತ್ತು ಹೆದ್ದಾರಿಗಳ ನಿರ್ಮಾಣ, ಬೃಹತ್ ಕೈಗಾರಿಕೆಗಳ ಸ್ಥಾಪನೆ ಹಾಗೂ ಇದರೊಂದಿಗೆ ನೈಸರ್ಗಿಕ ವಿಕೋಪಗಳಿಂದಾಗಿ ನಾಲ್ಕು ಕೋಟಿಗಿಂತಲೂ ಹೆಚ್ಚಿನ ಜನರು ತಾವು ನೆಲೆಸಿಕೊಂಡು, ಉಪಯೋಗಿಸುತ್ತಿದ್ದ ಭೂಮಿಯನ್ನು ಕಳೆದುಕೊಂಡಿರುತ್ತಾರೆ ಎಂಬುದು ಪ್ರಮುಖವಾಗಿ ಗಮನಿಸಬೇಕಾದ ಅಂಶವಾಗಿರುತ್ತದೆ.[4] (ತನೇಜ ಮತ್ತು ಮಯ್ಯರ್ ಆರ್. ಎಂ., 2000). ಸರ್ದಾರ್ ಸರೋವರ ಅಣೆಕಟ್ಟು ಯೋಜನೆಯೊಂದರಿಂದಲೇ ಸುಮಾರು 1,27,000 ಜನರನ್ನು ಬಲವಂತವಾಗಿ ತಮ್ಮ ಭೂಮಿಯಿಂದ ಸ್ಥಳಾಂತರಿಸಲಾಯಿತು.[5] ಸಂತ್ರಸ್ತರ ಪುನರ್‌ವಸತಿಯ ಕುರಿತಾಗಿ ಹೆಚ್ಚಿನ ಹೋರಾಟಗಳು ಮತ್ತು ಸಂಶೋಧನೆಗಳು ಈ ಯೋಜನೆಯ ಮೂಲಕ ಈಗಾಗಲೇ ನಡೆದಿವೆ. ಭೂಮಿಯನ್ನು ಕಳೆದುಕೊಂಡ ಜನರ ಪುನರ್‌ವಸತಿ ಹಾಗೂ ಹೋರಾಟಗಳ ಬಗ್ಗೆ ಜೀನ್ ಡ್ರೀಸ್, ಮೀರಾ ಸಾಮ್ಸನ್ ಮತ್ತು ಸತ್ಯಜಿತ್ ಸಿಂಗ್ ಸಂಪಾದಿಸಿದ 'ಅಣೆಕಟ್ಟು ಮತ್ತು ರಾಷ್ಟ್ರ' (1997) ಎಂಬ ಗ್ರಂಥದಲ್ಲಿ ಸಂತ್ರಸ್ತರ ಬವಣೆಗಳನ್ನು ಹಾಗೂ ಯೋಜನೆಯ ವಿರುದ್ಧ ನಡೆದ ಹೋರಾಟಗಳ ಬಗ್ಗೆ ವಿವರವಾಗಿ ಉಲ್ಲೇಖಿಸಿರುತ್ತಾರೆ.

ಅಭಿವೃದ್ಧಿಯ ಹೆಸರಿನಲ್ಲಿ, ತಲೆಮಾರುಗಳಿಂದ ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುತ್ತಿರುವ ಜನಾಂಗ/ಕುಟುಂಬಗಳು ಇಂದು ಸ್ಥಳಾಂತರಗೊಳ್ಳುತ್ತಿವೆ. ಈ ಪ್ರಕ್ರಿಯೆಯು, ಆಮಿಷ, ಬಲಾತ್ಕಾರಗಳ ಮೂಲಕ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ, ಭೂಮಿಯ ಒಡೆತನ ಹೊಂದಿರುವ ಕುಟುಂಬಗಳು ಅನಿವಾರ್ಯವಾಗಿ ತಮ್ಮ ಭೂಮಿಯನ್ನು ಬಿಟ್ಟುಕೊಡಬೇಕಾಗುತ್ತದೆ. ಜೊತೆಗೆ, ಆ ನೆಲದ ಸಾಮಾಜಿಕ ಸಂರಚನೆ, ಸಂಸ್ಕೃತಿ, ನಂಬಿಕೆ ಮೊದಲಾದವುಗಳನ್ನೂ ತ್ಯಜಿಸಬೇಕಾಗುತ್ತದೆ. ಇಂತಹ ಪ್ರದೇಶಗಳಲ್ಲಿ ವಾಸಿಸುವ ಕುಟುಂಬಗಳು, ಸಾಮಾನ್ಯವಾಗಿ ಪ್ರದೇಶವಾರು ಭಿನ್ನತೆಯಿದ್ದರೂ, ಒಂದೇ ತೆರನಾದ ಸಮಸ್ಯೆಗಳನ್ನು ಹೊಂದಿರುತ್ತವೆ ಎಂದು ಹೆಚ್ಚಿನ ಅಧ್ಯಯನಗಳು ತಿಳಿಸಿವೆ. ವಿಶ್ವಬ್ಯಾಂಕ್‌ಗೋಸ್ಕರ ಜಗತ್ತಿನಾದ್ಯಂತ ಅಭಿವೃದ್ಧಿ ಪ್ರೇರಿತ ಸ್ಥಳಾಂತರ ಸೃಷ್ಟಿಸಿರುವ ಅವಾಂತರಗಳು, ನಷ್ಟ ಲಾಭಗಳ ಬಗ್ಗೆ ಅಧ್ಯಯನವನ್ನು ನಡೆಸಿರುವ ಮೈಕಲ್ ಸೆರ್ನ್ನಾರವರು ತಮ್ಮ 'ದ ಎಕನಾಮಿಕ್ಸ್ ಆಫ್ ಇನ್‌ವಾಲ್ಯೆಂಟರಿ ರೀಸೆಟ್ಲ್‌ಮೆಂಟ್, ಕ್ವೆಶ್ಚನ್ಸ್ ಎಂಡ್ ಚಾಲೆಂಜಸ್' ಎಂಬ ಸಂಶೋಧನಾ ಗ್ರಂಥದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಂದ ಸ್ವಯಂಪ್ರೇರಿತವಲ್ಲದೆ ಸ್ಥಳಾಂತರಿಸಲ್ಪಟ್ಟ ಸಂತ್ರಸ್ತರು ತಮ್ಮ ಪೂರ್ವಸ್ಥಿತಿಗಿಂತ ಸ್ಥಳಾಂತರದ ನಂತರ ಮತ್ತಷ್ಟು ಬಡವರಾಗುವ ಸಾಧ್ಯತೆಯಿರುತ್ತದೆ[6] ಎಂಬ ಫಲಿತವನ್ನು ಕಂಡುಕೊಂಡಿರುವುದನ್ನು ಉಲ್ಲೇಖಿಸುತ್ತಾ ಇದಕ್ಕೆ ಸಂತ್ರಸ್ತರಿಗೆ ಸರಿಯಾದ ರೀತಿಯಲ್ಲಿ ಪರಿಹಾರಗಳು ಸಿಗದೇ ಇರುವುದು ಮತ್ತು

ಸಂತ್ರಸ್ತರ ಸಬಲೀಕರಣಕ್ಕೆ ಯೋಜನೆಗಳ ಪ್ರವರ್ತಕರುಗಳು ಯಾವುದೇ ರೀತಿಯಲ್ಲಿ ಸಹಾಯ ಮಾಡದೆ ಇರುವುದು ಮುಖ್ಯ ಕಾರಣವಾಗಿರುತ್ತದೆ ಎಂದು ವಿಶ್ಲೇಷಿಸಿರುತ್ತಾರೆ. ಸ್ಥಳಾಂತರ ಪ್ರಕ್ರಿಯೆಗಳಿಗೆ ಬಲವಂತದಿಂದ ಒಳಗಾದ ಯೋಜನೆಯ ಬಲಿಪಶುಗಳು ಪರಸ್ಪರ ಸಂಬಂಧವಿರುವ ಎಂಟು ರೀತಿಯ ತೊಂದರೆಗಳಿಗೆ ಒಳಗಾಗಿ ಅದರಿಂದ ಹೊರಬರಲಾಗದೆ ಸಂಕಷ್ಟಗಳನ್ನು ಮುಂದಿನ ದಿನಗಳಲ್ಲಿ ಅನುಭವಿಸುತ್ತಾರೆಯೆಂದು[7] ವಿವರಿಸಿರುತ್ತಾರೆ.

'ಬೃಹತ್ ಅಭಿವೃದ್ಧಿ ಯೋಜನೆಗಳು ನಾಶಪಡಿಸುವುದಕ್ಕಿಂತ ಹೆಚ್ಚಿನ ಸಂಪತ್ತುಗಳನ್ನು ಸೃಷ್ಟಿಸುತ್ತದೆಯೇ?'[8] ಎಂದು ಪ್ರಶ್ನಿಸಿದ ವಿದ್ವಾಂಸರಾದ ಕ್ಲಾಡ್ ಅಲ್ವರಿಸ್ ಮತ್ತು ರಮೇಶ್ ಬಿಲ್ಲೋರಿಯವರು 'ಬೃಹತ್ ಯೋಜನೆಗಳ ಸ್ಥಾಪನೆಯ ನಿರ್ಣಯಗಳನ್ನು ಯಾವುದೇ ವೈಜ್ಞಾನಿಕ ಅಧ್ಯಯನದ ಆಧಾರದಲ್ಲಿ ರಚಿಸಿರುವುದಿಲ್ಲ ಅಥವಾ ಅವುಗಳು ಜನರ ಮತ್ತು ನೈಸರ್ಗಿಕ ಪರಿಸರದ ಮೇಲೆ ಬೀರುವ ಪರಿಣಾಮಗಳ ಆಧಾರದಲ್ಲಿ ತೆಗೆದಿರುವುದಿಲ್ಲ. ನರ್ಮದಾ ಅಣೆಕಟ್ಟುಗಳ ನಿರ್ಮಾಣದ ತೀರ್ಮಾನ ತೆಗೆಯುವ ಸಂದರ್ಭದಲ್ಲಿ ಅದು ಸಂತ್ರಸ್ತರು ಮತ್ತು ಪರಿಸರದ ಮೇಲೆ ಯಾವ ಪರಿಣಾಮಗಳನ್ನು ಬೀರುತ್ತದೆ ಎಂಬುದಾಗಿ ಪರಿಗಣಿಸಲೇ ಇಲ್ಲ. ಈ ಯೋಜನೆಗಳು ನ್ಯಾಯ ಸಮ್ಮತವೇ? ಅವುಗಳ ಸ್ಥಾಪನೆಯಿಂದ ಸರಕಾರ ಏನನ್ನು ಸಾಧಿಸಲು ಹೊರಟಿದೆ? ಇದು ನೆಹರೂರವರ ಪರಿಕಲ್ಪನೆಯ ಆಧುನಿಕ ದೇವಾಲಯಗಳ ನಿರ್ಮಾಣಗಳ ಇನ್ನೊಂದು ವ್ಯರ್ಥ ಪ್ರಯತ್ನವೇ? ಸ್ವತಂತ್ರ ಭಾರತದ ಅಣೆಕಟ್ಟು ನಿರ್ಮಾಣಗಳ ಯಾವುದೇ ಅನುಭವಗಳನ್ನು ಅಳವಡಿಸಿಕೊಂಡು ಜನರ ಜೀವನದ ಹಾಗೂ ಪರಿಸರದ ಮೇಲೆ ಬೀರಬಹುದಾದ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡು ಮಾಡಿದ ತೀರ್ಮಾನವೇ?'[9] ಎಂಬ ಮೂಲಭೂತ ಪ್ರಶ್ನೆಗಳನ್ನು ಅವರು ಎತ್ತುತ್ತಲೇ ಹೋಗುತ್ತಾರೆ.

ಭಾರತದ ಹಳ್ಳಿಗಳ ಜೀವನವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿರುವಂತಹ ವಿದ್ವಾಂಸರಾದ ಪಿ. ಸಾಯಿನಾಥ್‌ರವರು ವಿವರಿಸುವಂತೆ, 'ಬೃಹತ್ ಯೋಜನೆಗಳಿಂದ ಸಂತ್ರಸ್ತರಾದ ಜನರಿಗೆ ಪರಿಹಾರವಾಗಿ ಹಣವನ್ನು ನೀಡಿದರೆ, ಅದನ್ನು ಅವರು ತಮ್ಮ ಐಷಾರಾಮದ ಜೀವನಕ್ಕಾಗಿ ವ್ಯಯಿಸುತ್ತಾರೆ ಮತ್ತು ಪರಿಹಾರದ ಹಣ ಯಾವುದೇ ಉಪಯೋಗಕ್ಕೆ ಬಾರದಂತೆ ಖರ್ಚಾಗುತ್ತದೆ. ಸಂತ್ರಸ್ತರ ಹೆಂಡತಿ ಮಕ್ಕಳಿಗೆ ಬದುಕು ದುಸ್ತರವಾಗುತ್ತದೆ. ಭೂಮಿ ಇದ್ದಾಗ ಅದರಿಂದ ಕೃಷಿ ಮಾಡಿ ಫಸಲು ತೆಗೆಯಲು ಆಗುತ್ತದೆ. ಆದರೆ ಭೂಮಿಯೇ ಇಲ್ಲವಾದಾಗ ಸಂತ್ರಸ್ತರ ಕುಟುಂಬದ ಸದಸ್ಯರ ಬದುಕು ದುರಂತದಲ್ಲಿ ಮುಕ್ತಾಯವಾಗುತ್ತದೆ'[10] ಎಂದು ವಿವರಿಸಿದ್ದಾರೆ.

ಹರಿಮೋಹನ್ ಮಾಥೂರ್ ಮತ್ತು ಡೇವಿಡ್ ಮರ್ಸ್‌ಡೇನ್‌ರವರು ತಮ್ಮ ಸಂಪಾದಿತ ಕೃತಿಯಲ್ಲಿ ಪುನರ್‌ವಸತಿಯ ಬಗ್ಗೆ ಪರಿಣಾಮಕಾರಿಯಾಗಿ ಚರ್ಚಿಸುತ್ತಾ 'ರಾಷ್ಟ್ರ ಮತ್ತು ಸರಕಾರಗಳು ಪ್ರಮುಖ ರಾಷ್ಟ್ರೀಯ

ಹಿತಾಸಕ್ತಿಗಳನ್ನು ಸಾಧಿಸಬೇಕಾದರೆ ಸ್ಥಳೀಯ ಮತ್ತು ಬಡಜನರಿಗೆ ತೊಂದರೆಯಾದರೂ ಪರವಾಗಿಲ್ಲ ಎಂದು ಪರಿಭಾವಿಸಿಕೊಂಡಿರುತ್ತವೆ. ಪರಿಸರದ ಮತ್ತು ಸಾಮಾಜಿಕ ಕಾಳಜಿ ಹಾಗೂ ಕೃಷಿಭೂಮಿಯ ಕೊರತೆ ಇರುವ ಪ್ರಸ್ತುತ ಕಾಲಘಟ್ಟದಲ್ಲಿ, ಅಭಿವೃದ್ಧಿ ಪ್ರಕ್ರಿಯೆಯಿಂದ ಸ್ಥಳಾಂತರಿಸಲ್ಪಟ್ಟಿರುವ ಸಂತ್ರಸ್ತರ ಸಾಂಪ್ರದಾಯಿಕ ಜೀವನಶೈಲಿ ಬದಲಾಗಿರುವುದನ್ನು ಮತ್ತು ಅವರುಗಳ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಸುಲಭವಾಗಿ ಕಡೆಗಣಿಸುವಂತಿಲ್ಲ. ಸಂತ್ರಸ್ತರಿಗೆ ಉತ್ತಮ ಬುದ್ಧಿಕೌಶಲ್ಯವಿರುತ್ತದೆ ಹಾಗೂ ಜಗತ್ತಿನ ಆಗುಹೋಗುಗಳ ಬಗ್ಗೆ ಅರಿವಿರುತ್ತದೆ. ಅಂತಾರಾಷ್ಟ್ರೀಯ ಸಂಘಟನೆಗಳು ಇಂದು ಅವರುಗಳ ಬೆಂಬಲಕ್ಕೆ ನಿಂತು ಆಧುನಿಕ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಸೂತ್ರಗಳು ಪ್ರಸ್ತುತ ನೇರವಾಗಿ ಸ್ಥಳಾಂತರಕ್ಕೆ ಅವಕಾಶ ಮಾಡಿಕೊಡುತ್ತಿದೆ ಎಂದು ಅಭಿವೃದ್ಧಿಯ ಪ್ರಕ್ರಿಯೆಯನ್ನೇ ಪ್ರಶ್ನಿಸುತ್ತಿದೆ'[11] ಎಂದು, 'ಇಂತಹ ಸಂಘಟನೆಗಳು ಸಂತ್ರಸ್ತರಲ್ಲಿ ಅರಿವು ಮೂಡಿಸುವ ಪ್ರಯತ್ನದಲ್ಲಿ ತೊಡಗಿಸಿಕೊಂಡಿರುವುದನ್ನು ಕಡೆಗಣಿಸುವಂತಿಲ್ಲ'[12] ಎಂದಿದ್ದಾರೆ.

ಭಾರತದಲ್ಲಿ ಹಿಂದೆ ಜಾರಿಯಲ್ಲಿದ್ದ ಸ್ಥಳಾಂತರ ಮತ್ತು ಪುನರ್‌ವಸತಿ ಕಾರ್ಯಕ್ರಮಗಳಲ್ಲಿನ ಲೋಪದೋಷಗಳನ್ನು ಉಲ್ಲೇಖಿಸುತ್ತಾ, ಲೇಖಕರು 'ಸಂತ್ರಸ್ತರ ಪುನರ್‌ವಸತಿ ಕಾರ್ಯಕ್ರಮ ಅತ್ಯಂತ ಕ್ಲಿಷ್ಟಕರವಾಗಿರುವಂತಹದು, ದುಬಾರಿಯಾಗಿರುತ್ತದೆ ಮತ್ತು ದೀರ್ಘಾವಧಿ ಸಮಯವನ್ನು ತೆಗೆಯುವಂತಹದ್ದು. ಹಣದ ಕೊರತೆ, ಯೋಜನೆಗಳ ಸಂತ್ರಸ್ತರ ಸಂಪೂರ್ಣ ಮಾಹಿತಿ ಇಲ್ಲದೇ ಇರುವುದು ಮತ್ತು ಪುನರ್‌ವಸತಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡ ಸಂಸ್ಥೆಗಳು ಬಲಹೀನವಾಗಿರುವುದು ಸಂತ್ರಸ್ತರ ಪುನರ್‌ವಸತಿಯನ್ನು ಮತ್ತಷ್ಟು ಜಟಿಲಗೊಳಿಸಿರುತ್ತದೆ. 1990ರ ನಂತರ ವಿಶ್ವಬ್ಯಾಂಕಿನ ನಿರ್ದೇಶನದ ಮೇರೆಗೆ ಸ್ಥಳಾಂತರ ಮತ್ತು ಪುನರ್‌ವಸತಿ ಪ್ರಕ್ರಿಯೆಯಲ್ಲಿ ಬದಲಾವಣೆಯಾಯಿತು. ನಿಖರವಾದ ಸಮೀಕ್ಷೆಗಳಿಗೆ ಅನುಗುಣವಾಗಿ ಪುನರ್‌ವಸತಿಯ ಕ್ರಿಯಾಯೋಜನೆಗಳು ರಚಿಸಲಾರಂಭಿಸಲ್ಪಟ್ಟಿತು. ಹೆಚ್ಚಿನ ಅನುದಾನ ಮತ್ತು ನುರಿತ ತಜ್ಞರನ್ನು ಸ್ಥಳಾಂತರ ಮತ್ತು ಪುನರ್‌ವಸತಿ ಪ್ರಕ್ರಿಯೆಯಲ್ಲಿ ಉಪಯೋಗಿಸಲಾರಂಭಿಸಿದ ನಂತರ ಸಂತ್ರಸ್ತರ ಬವಣೆಗಳು ಕಡಿಮೆಯಾಗಲಾರಂಭಿಸಿತು'[13] ಎಂದು ವಿಶ್ಲೇಷಿಸಿದ್ದಾರೆ. '1990ರ ನಂತರ ಪುನರ್‌ವಸತಿ ಯೋಜನೆಗಳಲ್ಲಿ ಸಂತ್ರಸ್ತರ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಆದ್ಯತೆ ನೀಡಿರುವುದು ಪರಿಸ್ಥಿತಿ ಬದಲಾಗಲು ಕಾರಣವಾಯಿತು' ಎಂದಿದ್ದಾರೆ. 'ಬಲಿಷ್ಠ ರಾಷ್ಟ್ರೀಯ ಸ್ಥಳಾಂತರ ಮತ್ತು ಪುನರ್‌ವಸತಿ ನೀತಿಯನ್ನು ಹೊಂದುವುದು, ಯೋಜನೆಗಳ ಬಗ್ಗೆ ಸಂತ್ರಸ್ತರ ಸಮೀಕ್ಷೆಗಳಿಂದ ನಿಖರವಾಗಿ ಅವರ ಜೀವನಶೈಲಿಯ ಬಗ್ಗೆ ತಿಳಿದುಕೊಳ್ಳುವುದು ಮತ್ತು ಅದಕ್ಕನುಗುಣವಾಗಿ ಪರಿಹಾರವನ್ನು ಸಂತ್ರಸ್ತರಿಗೆ ವಿತರಿಸುವುದು, ನಂತರ ಅದು ಸರಿಯಾದ ರೀತಿಯಲ್ಲಿ ಉಪಯೋಗಿಸಲ್ಪಡುತ್ತದೆಯೇ ಎಂದು ಪರಿಶೀಲಿಸುವುದರ ಮೂಲಕ ಸಂತ್ರಸ್ತರ ಸಂಕಷ್ಟಗಳನ್ನು ಕಡಿಮೆ ಮಾಡಬಹುದು'[14] ಎಂದು ಲೇಖಕರು ಅಭಿಪ್ರಾಯಪಟ್ಟಿರುತ್ತಾರೆ.

ಸಾವಿತ್ರಿ ರಾಮಯ್ಯ ಅವರು 'ಸ್ಥಳಾಂತರ ಮತ್ತು ಪುನರ್‌ವಸತಿಗಳ ಬಗ್ಗೆ ನಡೆದಂತಹ ಹೆಚ್ಚಿನ ಅಧ್ಯಯನಗಳು ಸಂತ್ರಸ್ತರಿಗೆ ಆರ್ಥಿಕವಾಗಿ ದೊಡ್ಡ ಹೊಡೆತವನ್ನು ನೀಡಿರುತ್ತದೆ ಹಾಗೂ ಅವರ ಜೀವನಶೈಲಿಯಲ್ಲಿ ಬದಲಾವಣೆಯಾಗಿರುತ್ತದೆ ಎಂಬುದನ್ನು ಬೆಟ್ಟು ಮಾಡಿ ತೋರಿಸುತ್ತಾ ಸ್ಥಳಾಂತರದಿಂದ ಸಂತ್ರಸ್ತರ ಆರೋಗ್ಯ ಮತ್ತು ಪೌಷ್ಠಿಕಾಂಶದ ಲಭ್ಯತೆಯ ಬಗ್ಗೆ ಹೆಚ್ಚಿನ ಅಧ್ಯಯನಗಳು ಆಗಿಲ್ಲ ಎಂಬುದನ್ನು ವಿವರಿಸಿ, ಈ ಅಂಶಗಳಿಗೆ ಪ್ರಾಮುಖ್ಯತೆಯನ್ನು ನೀಡಿ 1994–95ರಲ್ಲಿ ಆರು ರಾಜ್ಯಗಳಲ್ಲಿ ಹರಡಿಕೊಂಡಿದ್ದ ಎಂಟು ಅಭಿವೃದ್ಧಿ ಯೋಜನೆಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನವನ್ನು ಮಾಡಿರುತ್ತಾರೆ. ತಮ್ಮ ಅಧ್ಯಯನದ ಫಲಿತಗಳನ್ನು ವಿವರಿಸುತ್ತಾ ಲೇಖಕರು ಪುನರ್‌ವಸತಿಯ ಬಳಿಕ ಸಂತ್ರಸ್ತರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮತ್ತಷ್ಟು ಬಲಿಷ್ಟಗೊಂಡರೂ ಅವರ ಆರೋಗ್ಯ, ಪರಿಸರ ಮತ್ತು ಪೌಷ್ಠಿಕಾಂಶಗಳ ಆಹಾರಗಳಲ್ಲಿನ ಕೊರತೆ ಹೆಚ್ಚಾಗಲಾರಂಭಿಸಿತು. ಇದಕ್ಕೆ ಮುಖ್ಯಕಾರಣ ಪುನರ್‌ವಸತಿ ಕಾಲನಿಗಳು ನಿರ್ಮಿಸಲ್ಪಟ್ಟಲ್ಲಿ ಕೆಲವು ಮೂಲಭೂತ ಅವಶ್ಯಕತೆಗಳು ಲಭ್ಯವಿರದಿರುವುದು ಎಂದಿದ್ದಾರೆ. ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು, ಶೌಚಾಲಯಗಳ ಅಲಭ್ಯತೆ, ಅನುಪಯುಕ್ತ ವಸ್ತುಗಳ ವಿಲೇವಾರಿಗೆ ವ್ಯವಸ್ಥೆ ಇಲ್ಲದೇ ಇರುವುದು ನಿರ್ವಸಿತ ಕುಟುಂಬಗಳಲ್ಲಿ ಆರೋಗ್ಯದ ಸಮಸ್ಯೆ ಹೆಚ್ಚುವುದಕ್ಕೆ ಕಾರಣವಾಯಿತು'[15] ಎಂದಿದ್ದಾರೆ.

ಭೂಸ್ವಾಧೀನ ಪ್ರಕ್ರಿಯೆ ಸ್ವಾತಂತ್ರ್ಯಪೂರ್ವ ಭಾರತದಲ್ಲಿ 1793ರಲ್ಲಿ ಖಾಯಂ ಗುತ್ತಿಗೆ ಪದ್ಧತಿಯೊಂದಿಗೆ ಪ್ರಾರಂಭವಾಯಿತು. ತೆರಿಗೆ ಸಂಗ್ರಹಕೋಸ್ಕರ ಭೂಮಿಯನ್ನು ಜಮೀನುದಾರರಿಗೆ ಹಸ್ತಾಂತರಿಸುವ ಮೂಲಕ ಈ ಕ್ರಿಯೆ ಭಾರತದಲ್ಲಿ ವಿಧ್ಯುಕ್ತವಾಗಿ ಆರಂಭವಾಯಿತು. 1894ರಲ್ಲಿ ಭಾರತದಲ್ಲಿನ ಬ್ರಿಟಿಷ್ ವಸಾಹತುಶಾಹಿ ಆಡಳಿತ ಭೂಸ್ವಾಧೀನ ಕಾಯ್ದೆ ಜಾರಿಗೆ ತಂದಿತು. ಸ್ವಾತಂತ್ರ್ಯಾನಂತರ ಇತ್ತೀಚಿನವರೆಗೂ ಈ ಕಾಯಿದೆಗೆ ಮತ್ತು 'ರಾಷ್ಟ್ರದ ವಿಶೇಷ ಅಧಿಕಾರ'[16] ಎಂಬ ನೆಲೆಯಲ್ಲಿ ಸಾರ್ವಜನಿಕ ಉಪಯೋಗದ ಹೆಸರಿನಲ್ಲಿ ಸರಕಾರ ಭೂಮಿಯನ್ನು ಸ್ವಾಧೀನ ಪಡಿಸುತ್ತಿತ್ತು. ಜನರ ಒಪ್ಪಿಗೆ ಇಲ್ಲದೆ, ಯಾವ ಕಾರಣಕೋಸ್ಕರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ ಎಂಬುದನ್ನು ತಿಳಿಸದೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರವನ್ನು ಸರಕಾರಕ್ಕೆ 1894ರ ಭೂಸ್ವಾಧೀನ ಕಾಯಿದೆ ನೀಡಿತ್ತು. 2004ರಲ್ಲಿ ಕೇಂದ್ರ ಸರಕಾರ ಎರಡು ದಶಕಗಳಿಗೂ ಹೆಚ್ಚು ಕಾಲ ನಡೆದ ಚರ್ಚೆ ಮತ್ತು ಒತ್ತಡದ ಕಾರಣಗಳಿಗೋಸ್ಕರವಾಗಿ ಅಭಿವೃದ್ಧಿಯ ಹೆಸರಿನಲ್ಲಿ ಸ್ಥಳಾಂತರಿಸಲ್ಪಟ್ಟ ಸಂತ್ರಸ್ತರಿಗಾಗಿ ಹೊಸ ರಾಷ್ಟ್ರೀಯ ಸ್ಥಳಾಂತರ ಮತ್ತು ಪುನರ್‌ವಸತಿ ನೀತಿಯನ್ನು ಜಾರಿಗೆ ತಂದಿತು. 2013ರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಯು.ಪಿ.ಎ. ಸರಕಾರ ಭೂಸ್ವಾಧೀನ ಕಾನೂನುಗಳಿಗೆ ಬದಲಾವಣೆಯನ್ನು ತಂದು ಅಭಿವೃದ್ಧಿ ಆಧಾರಿತ ಚಟುವಟಿಕೆಗಳಿಗೆ ಭೂಸ್ವಾಧೀನಪಡಿಸುವಂತಹ ಸಂದರ್ಭದಲ್ಲಿ ಶೇಕಡಾ 80ರಷ್ಟು ರೈತರ ಒಪ್ಪಿಗೆ ಬೇಕು ಮತ್ತು ಭೂಸ್ವಾಧೀನಕ್ಕಿಂತ ಮೊದಲು ಅದು ಸಂತ್ರಸ್ತರ ಮೇಲೆ ಬೀರುವಂತಹ ಸಾಮಾಜಿಕ ಪರಿಣಾಮಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನವನ್ನು ನಡೆಸಬೇಕು[17] ಎಂಬುದಾಗಿ ತಿದ್ದುಪಡಿ ಮಾಡಿತು.

2014ರಲ್ಲಿ ಅಧಿಕಾರಕ್ಕೆ ಬಂದ ಎನ್.ಡಿ.ಎ. ಸರಕಾರ ತನ್ನ ಹೊಸ ಆರ್ಥಿಕ ನೀತಿಗಳಾದ 'ಮೇಕ್ ಇನ್ ಇಂಡಿಯಾ', 'ಸ್ಮಾರ್ಟ್ ಸಿಟಿ', 'ಸರ್ವರಿಗೂ ಸೂರು' ಮತ್ತು ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾಗಿ ಹೊರಡಿಸಿದ ಮೂರು ಆಧ್ಯಾದೇಶಗಳು ಭೂಸ್ವಾಧೀನಕ್ಕೆ 50% ಸಂತ್ರಸ್ತರ ಒಪ್ಪಿಗೆ ಸಾಕು ಹಾಗೂ ಕೃಷಿ ಭೂಮಿಯನ್ನು ಕೈಗಾರಿಕೋದ್ಯಮಿಗಳು ಸ್ವಾಧೀನಪಡಿಸಿ ಕೈಗಾರಿಕೆಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಭೂಮಿಯ ಮಾರುಕಟ್ಟೆ ದರಕ್ಕಿಂತ ನಾಲ್ಕು ಪಟ್ಟು ಹೆಚ್ಚುವರಿ ಮೊತ್ತವನ್ನು ಸಂತ್ರಸ್ತರಿಗೆ ಪರಿಹಾರವನ್ನಾಗಿ ನೀಡಬೇಕೆಂದು[18] ಸ್ಪಷ್ಟಪಡಿಸಿತ್ತು. ಸಾರ್ವಜನಿಕ ಉದ್ದೇಶಗಳಿಗೋಸ್ಕರ ಸಮರ್ಪಕ ಪರಿಹಾರಗಳನ್ನು ನೀಡಿ ಭೂಮಿಯನ್ನು ಸ್ವಾಧೀನಪಡಿಸಬಹುದು ಎಂಬುದಾಗಿ 2014ರಲ್ಲಿ ಕೇಂದ್ರ ಸರಕಾರ ಹೊರಡಿಸಿದ ಎಲ್ಲಾ ಆಧ್ಯಾದೇಶಗಳು ಸ್ಪಷ್ಟಪಡಿಸಿರುತ್ತದೆ. ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಪಾಶ್ಚಿಮಾತ್ಯ ರಾಷ್ಟ್ರಗಳಂತೆ ಕೃಷಿ ಪ್ರಧಾನ ವ್ಯವಸ್ಥೆ ಕೈಗಾರಿಕೀಕರಣ ಪ್ರಧಾನ ಸಮಾಜವಾಗಿ ಪರಿವರ್ತನೆಯಾದಾಗ ಮಾತ್ರ ಸಾಧ್ಯವೆಂಬ ಆಡಳಿತಶಾಹಿ ವ್ಯವಸ್ಥೆಯ ಗ್ರಹಿಕೆ ಹಲವಾರು ಜ್ವಲಂತ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಹುಟ್ಟು ಹಾಕಿರುತ್ತದೆ. ಇವುಗಳಿಗೆ ಪೂರಕವಾಗಿ ಕೈಗಾರಿಕೋದ್ಯಮಿಗಳು ಮತ್ತು ಬಂಡವಾಳಶಾಹಿಗಳಿಗೆ ನೇರವಾಗಿ ಅನುಕೂಲವಾಗುವಂತಹ ಕಾನೂನುಗಳನ್ನು ಮತ್ತು ಆಧ್ಯಾದೇಶಗಳನ್ನು ಕಾಲಕಾಲಕ್ಕೆ ಸರಕಾರಿ ಯಂತ್ರ ಜಾರಿಗೆ ತರುತ್ತಿರುವುದನ್ನು ಗಮನಿಸಬಹುದು. ಈ ಜಿಜ್ಞಾಸೆಯಿಂದಾಗಿ ಅಭಿವೃದ್ಧಿ ಯೋಜನೆಗಳಿಂದ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ ಜನರ ಬಗೆಗಿನ ವಿವಿಧ ಅಧ್ಯಯನಗಳು ಹಾಗೂ ಸರಕಾರದ ಭೂಸ್ವಾಧೀನ ಕಾನೂನುಗಳನ್ನು ಅಧ್ಯಯನ ಮಾಡಿದಾಗ ಕೆಲವು ಮೂಲಭೂತ ಪ್ರಶ್ನೆಗಳು ಹುಟ್ಟಿಕೊಳ್ಳುತ್ತದೆ.

- ಅಭಿವೃದ್ಧಿ ಮತ್ತು ಕೈಗಾರಿಕೆಗಳ ಸ್ಥಾಪನೆಗಳಿಗಾಗಿ ಕೃಷಿಕರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಎಷ್ಟು ಸೂಕ್ತ?
- ಅಭಿವೃದ್ಧಿಯ ಹೆಸರಿನಲ್ಲಿ ಜನರನ್ನು ತಮ್ಮ ಮೂಲನೆಲೆಗಳಿಂದ ಬಲವಂತದಿಂದ ಸ್ಥಳಾಂತರಿಸುವುದು ನ್ಯಾಯಸಮ್ಮತವೇ?
- ಸ್ಥಳಾಂತರ ಪ್ರಕ್ರಿಯೆಯು ಸಂತ್ರಸ್ತ ಜನರ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಇತರ ವಿಷಯಗಳ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರುತ್ತದೆ?
- ಸ್ಥಳಾಂತರಿಸುವುದು ಅನಿವಾರ್ಯವಾದಲ್ಲಿ ಯಾವ ರೀತಿಯ ಪುನರ್‌ವಸತಿಯನ್ನು ಸಂತ್ರಸ್ತರು ಬಯಸುತ್ತಾರೆ?
- ಆರಂಭಿಸಲ್ಪಡುವ ಉದ್ದಿಮೆಗಳಿಂದ ಸಂತ್ರಸ್ತ ಜನರ ಸಮಸ್ಯೆಯನ್ನು ಪರಿಹರಿಸಲು ಯಾವ ರೀತಿಯ ಪ್ರಯತ್ನಗಳಾಗಿವೆ?
- ನೀಡಲ್ಪಟ್ಟ ಪರಿಹಾರದ ಪ್ಯಾಕೇಜ್‌ಗಳು ಸಂತ್ರಸ್ತರುಗಳಿಗೆ ಉತ್ತಮ ಜೀವನವನ್ನು ನಡೆಸಲು ಅವಕಾಶ ಮಾಡಿಕೊಟ್ಟಿರುತ್ತವೆಯೇ?

- ಯೋಜನೆಗಳನ್ನು ನಿರೂಪಿಸುವವರು ಮತ್ತು ಅದನ್ನು ಜಾರಿಗೆ ತರುವ ಅಧಿಕಾರಿಗಳು ಯಾವ ರೀತಿಯಲ್ಲಿ ಪುನರ್‌ವಸತಿ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುತ್ತಾರೆ?

ಈ ಎಲ್ಲಾ ಮೂಲಭೂತ ಪ್ರಶ್ನೆಗಳನ್ನು ಪ್ರಮುಖವಾಗಿ ಗಮನದಲ್ಲಿರಿಸಿ ಹಾಗೂ ಭಾರತ ಮತ್ತು ಇತರ ರಾಷ್ಟ್ರಗಳಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಬಲವಂತವಾಗಿ ಸ್ಥಳಾಂತರಿಸುವ ಪ್ರಕ್ರಿಯೆಯನ್ನು ಪ್ರಮುಖವಾಗಿಸಿ, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದುವರೆಗೆ ಪ್ರಗತಿಯ ಹೆಸರಿನಲ್ಲಿ ಆಗಿರುವ ಸ್ಥಳಾಂತರಗಳನ್ನು ಗಮನಿಸಿ, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ ಹಾಗೂ ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ 'ವಿಶೇಷ ಆರ್ಥಿಕ ವಲಯದ' ಸ್ಥಾಪನೆಗಾಗಿ ಸ್ವಾಧೀನ ಪಡಿಸಿಕೊಳ್ಳಲಾಗಿರುವ ಎರಡು ಸಾವಿರದ ಮುನ್ನೂರ ಇಪ್ಪತ್ತೊಂಬತ್ತು ಎಕ್ರೆ ಭೂಸ್ವಾಧೀನದಿಂದ ಉದ್ಭವಿಸಿರುವ ಮೂಲಸೌಕರ್ಯಗಳ ಸಮಸ್ಯೆ, ಸ್ಥಳಾಂತರ, ಪುನರ್‌ವಸತಿ, ಹೊಸ ನೆಲೆಗಳ ನಿರ್ಮಾಣ, ಉದ್ಯೋಗಾಸಕ್ತ ಸಂತ್ರಸ್ತರಿಗೆ ತರಬೇತಿ, ಅಂತೆಯೇ ಈ ಪ್ರಕ್ರಿಯೆಯಲ್ಲಿ ವಶಪಡಿಸಿಕೊಂಡಿರುವ ಭೂಮಿಯು ನೈಜ ಉದ್ದೇಶಕೋಸ್ಕರವೇ ಉಪಯೋಗಿಸಲ್ಪಡುತ್ತಿದೆಯೇ? ಮತ್ತು ಉಂಟು ಮಾಡಿರುವ ಇತರ ಸಮಾಜೋ–ಆರ್ಥಿಕ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿರುತ್ತದೆ.

1970ರ ದಶಕದ ನಂತರ ನವಮಂಗಳೂರು ಬಂದರಿನ ಉದ್ಘಾಟನೆಯೊಂದಿಗೆ ಆಗಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ತನ್ನನ್ನು ಕೈಗಾರಿಕೀಕರಣ ಪ್ರಕ್ರಿಯೆಗಳಿಗೆ ತೆರೆದುಕೊಂಡಿತು. ಎಂ.ಸಿ.ಎಫ್., ಎಂ.ಆರ್.ಪಿ.ಎಲ್., ಸುಜ್ಲಾನ್, ನಂದಿಕೂರು ಕಲ್ಲಿದ್ದಲು ವಿದ್ಯುತ್ ಸ್ಥಾವರ, ಬಿ.ಎ.ಎಸ್.ಎಫ್., ಬಜ್ಪೆ ವಿಮಾನ ನಿಲ್ದಾಣದ ವಿಸ್ತರಣೆ, ಐ.ಎಸ್.ಪಿ.ಆರ್.ಎಲ್., ಸಾಫ್ಟ್‌ವೇರ್ ಪಾರ್ಕ್‌ಗಳು, ರಾಷ್ಟ್ರೀಯ ಹೆದ್ದಾರಿಯ ವಿಸ್ತರಣೆಗೆ ಮತ್ತು ಕೊಂಕಣ ರೈಲ್ವೆ ಹಳಿಯ ರಚನೆ ಮುಂತಾದ ಅಭಿವೃದ್ಧಿ ಪ್ರೇರಿತ ಚಟುವಟಿಕೆಗಳಿಗೆ ಸುಮಾರು 25000 ಎಕ್ರೆಗಿಂತ ಹೆಚ್ಚಿನ ಕೃಷಿಯೋಗ್ಯ ಭೂಮಿಗಳು ಸ್ವಾಧೀನಪಡಿಸಲ್ಪಟ್ಟಿದ್ದು, 10000ಕ್ಕಿಂತಲೂ ಹೆಚ್ಚಿನ ಕುಟುಂಬಗಳು ತಮ್ಮ ಮೂಲ ನೆಲೆಗಳಿಂದ ಬಲವಂತವಾಗಿ ಸ್ಥಳಾಂತರಿಸಲ್ಪಟ್ಟಿರುತ್ತಾರೆ.[19] ಜಾಗತಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಮತ್ತು ಸ್ಥಳಾಂತರಗಳ ಬಗ್ಗೆ ಹೆಚ್ಚು ಅಧ್ಯಯನಗಳು ಆಗಿದ್ದರೂ, ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿದ ಪ್ರದೇಶದಲ್ಲಿ ಈ ಬಗೆಗೆ ಹೆಚ್ಚಿನ ವ್ಯವಸ್ಥಿತ ಅಧ್ಯಯನಗಳು ನಡೆಯದಿರುವುದರಿಂದ 'ಮಂಗಳೂರು ವಿಶೇಷ ಆರ್ಥಿಕ ವಲಯ–ಸ್ಥಳಾಂತರ ಮತ್ತು ಪುನರ್‌ವಸತಿ ಸಾಧಕ–ಬಾಧಕಗಳ' ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನಗಳಾಗಬೇಕಾದ ಅನಿವಾರ್ಯತೆ ಇದೆ. ಇಲ್ಲಿನ ಸಂತ್ರಸ್ತರ ಪುನರ್‌ವಸತಿ ಹಾಗೂ ಸ್ಥಳಾಂತರದಿಂದಾಗಿ ಸ್ಥಿತ್ಯಂತರಗೊಂಡಿರುವ ಅವರ ಬದುಕು ಮತ್ತು ರಾಜಕೀಯ, ಸಮಾಜೋ–ಆರ್ಥಿಕ ಸ್ಥಿತಿಗತಿಯ ಬಗ್ಗೆ ಅಧ್ಯಯನ ನಡೆಸುವುದು ಅತ್ಯಂತ ಸೂಕ್ತವೆನಿಸಿದ್ದರಿಂದ ಈ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ.

2. ಸಮುಸ್ಯೀಕರಣ

'ಅಭಿವೃದ್ಧಿ'ಗೆ ಸಂಬಂಧಪಟ್ಟಂತೆ ಲಭ್ಯವಿರುವ ವಿಪುಲ ಸಾಹಿತ್ಯವನ್ನು ವಿಶ್ಲೇಷಿದಾಗ ಈ ಪರಿಕಲ್ಪನೆಯು 1930ರ[20] ನಂತರ ಜಾಗತಿಕ ಮಟ್ಟದಲ್ಲಿ ಹೆಚ್ಚು ಚರ್ಚೆಗೊಳಪಟ್ಟ ವಿಷಯಗಳಲ್ಲೊಂದಾಗಿದೆ ಎಂದು ಹೇಳಬಹುದು. ಆಧುನಿಕತೆ ಮತ್ತು ವೇಗವಾಗಿ ಬದಲಾಗುತ್ತಿರುವ ಸಾಮಾಜಿಕ, ರಾಜಕೀಯ ವ್ಯವಸ್ಥೆಯಲ್ಲಿ 'ಅಭಿವೃದ್ಧಿಯ ಪರಿಕಲ್ಪನೆ' ವಿಶೇಷವಾದ ಮತ್ತು ಆಕರ್ಷಕವಾದ ಪದವೆನಿಸಿದೆ. ಈ ಕುರಿತಂತೆ ಲಭ್ಯವಿರುವ ಸಾಹಿತ್ಯವನ್ನು ಗಮನಿಸಿದಾಗ ಹಲವಾರು ವೈವಿಧ್ಯಮಯ, ದಿಗ್ಭ್ರಮೆ ಹುಟ್ಟಿಸುವ, ಇತರರನ್ನು ಒಪ್ಪಿಕೊಳ್ಳುವಂತೆ ಮಾಡುವ ದೃಷ್ಟಿಕೋನಗಳು ಮತ್ತು ಗೊಂದಲ ಮೂಡಿಸುವಂತಹ ಸಕಾರಾತ್ಮಕ ಅಭಿಪ್ರಾಯಗಳನ್ನು ನೀಡುತ್ತದೆ. ಪ್ರಚಲಿತದಲ್ಲಿದ್ದ ಹಿಂದಿನ ಆಕರ್ಷಕವೆನಿಸಿದ ಅಭಿವೃದ್ಧಿಯ ವ್ಯಾಖ್ಯಾನಗಳು ಇಂದು ವ್ಯಾಪಕವಾಗಿ ಪ್ರಶ್ನಾರ್ಹವಾಗಿದ್ದು, ಸಾಂಪ್ರದಾಯಿಕ ಮಾದರಿಗಳು ಕೂಡಾ ತೀವ್ರವಾಗಿ ಚರ್ಚೆಗೊಳಪಡುತ್ತಿವೆ. ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿಯ ಪರಿಕಲ್ಪನೆ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದಂತಹ ರಾಷ್ಟ್ರಗಳಲ್ಲಿ ಹೊಗಳುವಿಕೆಗಿಂತ ಇಂದು ಹೆಚ್ಚು ಟೀಕೆಗೊಳಪಡುತ್ತಿವೆ[21] ಎಂದು ಶ್ರೀವಾಸ್ತವರವರು ಅಭಿಪ್ರಾಯಪಟ್ಟಿರುತ್ತಾರೆ. ಹೀಗಾಗಿ ಅಭಿವೃದ್ಧಿ ಕುರಿತಂತೆ ನಿರ್ದಿಷ್ಟವಾಗಿ ಒಂದು ಒಮ್ಮತದ ಅಭಿಪ್ರಾಯವನ್ನು ನೀಡುವುದು ಕಷ್ಟವೂ ಹೌದು.

ಒಪ್ಪಿಕೊಂಡ ಆರ್ಥಿಕ ಅಭಿವೃದ್ಧಿಯ ಮಾದರಿಗಳು ಇಂದು ಅಸಹಜ ಹಾಗೂ ತಪ್ಪಾಗಿ ಅರ್ಥೈಸಿಕೊಂಡಿರುವ ನಂಬಿಕೆ ಎಂದು ಪರಿಗಣಿಸಲ್ಪಟ್ಟ ಸಂದರ್ಭದಲ್ಲಿ ಚರ್ಚೆಯ ಕೇಂದ್ರ ಬಿಂದು ಅಭಿವೃದ್ಧಿಯ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ತಾಂತ್ರಿಕ ಮತ್ತು ಪರಿಸರದ ಮೇಲಿನ ಪ್ರಭಾವದ ಮೇಲೆ ತನ್ನದೇ ಆದ ವೈಚಾರಿಕತೆ ಮತ್ತು ತತ್ವಗಳ ಆಧಾರದಲ್ಲಿ ನಡೆಯುತ್ತಿದೆ. ಇದರಿಂದಾಗಿಯೇ ಪ್ರಸ್ತುತ ವ್ಯವಸ್ಥೆಗೆ ಸೂಕ್ತವಾಗಿ ಹೊಂದಿಕೆಯಾಗುವ ಮತ್ತು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಗೆ ಪೂರಕವಾಗುವಂತಹ ಆಶ್ಚರ್ಯ ಹುಟ್ಟಿಸುವ ಸಿದ್ಧಾಂತಗಳು, ತತ್ವಗಳು, ಬರವಣಿಗೆಗಳು ಮತ್ತು ಅಭಿವೃದ್ಧಿಯ ಬಗೆಗಿನ ಹೊಸ ಸಿದ್ಧಾಂತಗಳು ಪೂರಕವಾಗಿ ಹುಟ್ಟಿಕೊಳ್ಳುತ್ತಿದೆ. ಆಧುನಿಕ ಅಭಿವೃದ್ಧಿ ಸಿದ್ಧಾಂತಗಳ ಮೇಲಿನ ಟೀಕೆಗಳು ಪರ್ಯಾಯ ವ್ಯವಸ್ಥೆಗಳ ನಷ್ಟ ಪ್ರತಿಪಾದಿಸದೆ ಹೆಚ್ಚು ಪರಿಣಾಮಕಾರಿಯಾದ, ವಸ್ತುನಿಷ್ಟವಾದ ಹಾಗೂ ತೃಪ್ತಿಕರವಾಗಿರುವಂತಹ ಸ್ವದೇಶೀ ವ್ಯವಸ್ಥೆಗಳ ಬಗ್ಗೆ ಪ್ರತಿಪಾದಿಸುತ್ತದೆ. ಇವುಗಳು ಪ್ರಬಲವಾದ ಪಾಶ್ಚಿಮಾತ್ಯ ಸಿದ್ಧಾಂತಗಳಿಗಿಂತ ತುಂಬಾ ಭಿನ್ನವಾಗಿರುತ್ತದೆ (ರಜನಿ ಕೊಠಾರಿ, 1998)[22] ಎಂಬ ಅಭಿಪ್ರಾಯವನ್ನು ಹೆಚ್ಚಿನ ಭಾರತೀಯ ವಿದ್ವಾಂಸರುಗಳು ವ್ಯಕ್ತಪಡಿಸುತ್ತಿದ್ದಾರೆ.

ಒಂದು ರಾಷ್ಟ್ರದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸಿ, ಆ ಮೂಲಕ ಜನಸಮುದಾಯದ ಆರ್ಥಿಕ ಕಲ್ಯಾಣವನ್ನು ಸಾಧಿಸಿ ರಾಷ್ಟ್ರೀಯ ವರಮಾನವನ್ನು ಹೆಚ್ಚಿಸುವ ಪ್ರಕ್ರಿಯೆಯನ್ನು ಆರ್ಥಿಕ ಅಭಿವೃದ್ಧಿ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಅರ್ಥಶಾಸ್ತ್ರದ ವಿದ್ವಾಂಸರಾದ

ಅಮರ್ತ್ಯ ಕೆ. ಸೇನ್‌ರವರು ಅಭಿವೃದ್ಧಿಯ ಪರಿಕಲ್ಪನೆಯನ್ನು ವಿಶ್ಲೇಷಿಸುತ್ತಾ ಹಿಂದೆ 'ವರಮಾನ' ಅಭಿವೃದ್ಧಿಯ ಏಕಮೇವ ಮಾಪನವಾಗಿ ಪರಿಗಣಿಸಲ್ಪಡುತ್ತಿತ್ತು. ಉತ್ಪನ್ನ, ಬಂಡವಾಳ, ಉಳಿತಾಯಗಳನ್ನು ಆಧರಿಸಿದ ಅಭಿವೃದ್ಧಿಯ ಮಾದರಿಗಳನ್ನು ಸೂತ್ರಸಮೀಕರಣದ ರೂಪದಲ್ಲಿ ಹಿಂದೆ ಕಟ್ಟಲಾಗಿತ್ತು ಹಾಗೂ ಉಳಿತಾಯ, ಹೂಡಿಕೆಗಳು ಅಭಿವೃದ್ಧಿಯ ಮೂಲಗಳು ಮತ್ತು ಚಾಲಕ ಶಕ್ತಿಯಾಗಿತ್ತು. ಆದುದರಿಂದ ಇರುವ ಸಂಪನ್ಮೂಲಗಳ ಸೂಕ್ತ, ಸಮಾನ ವಿತರಣೆಯ ಮೂಲಕ ಸಮಾಜದ ಎಲ್ಲಾ ವರ್ಗ, ವರ್ಣ, ಜಾತಿ, ಲಿಂಗ, ಪ್ರದೇಶಗಳ ನಡುವೆ ಸಮಾನವಾಗಿ ವಿತರಿಸುವುದರ ಮೂಲಕ ಜನರ ಜೀವನ ಮಟ್ಟವನ್ನು ಉತ್ತಮ ಪಡಿಸಲು ಪ್ರಯತ್ನಿಸುವುದೇ ಅಭಿವೃದ್ಧಿಯ ಪ್ರಕ್ರಿಯೆ"[23] ಎಂಬ ವಾದವನ್ನು ಅಭಿವೃದ್ಧಿಯ ಕುರಿತಾಗಿ ಮಂಡಿಸಿರುತ್ತಾರೆ. ಅಂದರೆ ರಾಷ್ಟ್ರದ ಎಲ್ಲಾ ಜನರಿಗೂ ಉತ್ತಮ ಆರೋಗ್ಯ, ಶಿಕ್ಷಣ ಮತ್ತು ಉತ್ತಮ ಜೀವನ ಮಟ್ಟವನ್ನು ಒದಗಿಸುವುದು ಅಭಿವೃದ್ಧಿಯ ಆಶಯ ಆಗಿರಬೇಕು ಎಂಬುವುದು ಅಮರ್ತ್ಯ ಕೆ. ಸೇನ್‌ರವರ ವಾದವಾಗಿತ್ತು.

ಆರ್ಥಿಕ ಅಭಿವೃದ್ಧಿಯನ್ನು ಒಂದು ಪ್ರಕ್ರಿಯೆ ಎಂದು ಸಾಮಾನ್ಯವಾಗಿ ಪರಿಗಣಿಸಲಾಗುತ್ತದೆ. ಈ ಪ್ರಕ್ರಿಯೆಯನ್ನು ಯಾವ ರೀತಿಯಲ್ಲಿ ಆರಂಭಿಸಿ ಮುಂದುವರಿಸುವುದು ಎಂಬುದಾಗಿ ವಿದ್ವಾಂಸರಲ್ಲಿ ಒಮ್ಮತದಿಂದ ಒಪ್ಪಿಕೊಂಡ ಅಭಿಪ್ರಾಯಗಳಿಲ್ಲ. ಅರ್ಥಶಾಸ್ತ್ರದ ವಿದ್ವಾಂಸರು ಆರ್ಥಿಕಾಭಿವೃದ್ಧಿಗೆ ಸಂಬಂಧಪಟ್ಟಂತೆ ವಿಭಿನ್ನವಾದ ದೃಷ್ಟಿಕೋನವನ್ನು ಪ್ರತಿಪಾದಿಸುತ್ತಾರೆ. ಒಂದು ವರ್ಗಕ್ಕೆ ಸೇರಿದ ಅರ್ಥಶಾಸ್ತ್ರದ ವಿದ್ವಾಂಸರು ನಿಧಾನಗತಿಯಲ್ಲಿ ಹಂತಹಂತವಾಗಿ ಅಭಿವೃದ್ಧಿಯನ್ನು ಸಾಧಿಸುವುದರ ಬಗ್ಗೆ ಪ್ರತಿಪಾದಿಸಿದರೆ, ಇನ್ನೊಂದು ವರ್ಗದ ಅರ್ಥಶಾಸ್ತ್ರಜ್ಞರು 'ಬೃಹತ್ ತಳ್ಳುವಿಕೆ'ಯ[24] ಮೂಲಕ ಮಾತ್ರ ತೃತೀಯ ಜಗತ್ತಿನ ಅಭಿವೃದ್ಧಿ ಹೊಂದದ ರಾಷ್ಟ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ನಿಧಾನಗತಿಯಲ್ಲಿ ಹಂತಹಂತವಾಗಿ ಅಭಿವೃದ್ಧಿಯನ್ನು ಸಾಧಿಸುವ ವಿಧಾನವನ್ನು ಪ್ರತಿಪಾದಿಸಿದ ವಿದ್ವಾಂಸರು ಯೋಜಿತ ರೀತಿಯ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಯಾವುದೇ ರೀತಿಯ ಆದ್ಯತೆಯನ್ನು ನೀಡುವುದಿಲ್ಲ. ಅತ್ಯಂತ ಕಡಿಮೆ ಅವಧಿಯಲ್ಲಿ ಹಾಗೂ ಶೀಘ್ರಗತಿಯಲ್ಲಿ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿರುವ ಪ್ರಜ್ಞಾಪೂರ್ವಕ, ಶಿಸ್ತುಬದ್ಧವಾಗಿ ಮಾಡಿದಂತಹ ಕೈಗಾರಿಕೀಕರಣ ಪ್ರಕ್ರಿಯೆಗಳು ನಿಧಾನಗತಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಪ್ರಕ್ರಿಯೆಗಿಂತ ತುಂಬಾ ಕಠಿಣವಾಗಿರುವಂತಹದು[25] (ನಾರ್ಮನ್ ಎಸ್. ಬುಕನಾನ್, 1946). ಇಂತಹ ಮಾದರಿಯು ಮಾರುಕಟ್ಟೆ ವ್ಯವಸ್ಥೆಯ ಮೇಲೆ ಸಂಪೂರ್ಣವಾಗಿ ಅವಲಂಬಿಸಿದ್ದು ನಿರ್ದಿಷ್ಟವಾಗಿ ಯೋಜನೆಗಳನ್ನು ತಯಾರಿಸುವ ಮಟ್ಟವನ್ನು ನಿಯಂತ್ರಿಸುವುದಲ್ಲದೇ ಖಾಸಗಿ ಕ್ಷೇತ್ರದ ಪ್ರಯತ್ನಗಳನ್ನು ಹಾಗೂ ಅಭಿವೃದ್ಧಿಯ ಅಡೆತಡೆಗಳನ್ನು ಹಂತ ಹಂತವಾಗಿ ನಿವಾರಿಸುವುದರ ಬಗ್ಗೆ ಕೇಂದ್ರೀಕರಿಸುತ್ತದೆ[26] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಸರಕಾರ ಕೈಗಾರಿಕಾ ಕ್ಷೇತ್ರಗಳ ವ್ಯವಸ್ಥಿತ ವಿಸ್ತರಣೆಗೆ ಆದ್ಯತೆಯನ್ನು ನೀಡದೆ ಇತರ ಕ್ಷೇತ್ರಗಳಲ್ಲಿಯೂ ಬೆಳವಣಿಗೆಯನ್ನು ಸಾಧಿಸುವುದಕ್ಕೆ ಪ್ರೋತ್ಸಾಹ

ನೀಡಿದಾಗ ಕೈಗಾರಿಕಾಭಿವೃದ್ಧಿಯು ಸಾಧ್ಯವಾಗುತ್ತದೆ ಎಂಬ ನಂಬಿಕೆಯನ್ನು ನಿಧಾನಗತಿಯ ಅಭಿವೃದ್ಧಿ ಯೋಜನೆಯ ವಿಧಾನವನ್ನು ಪ್ರತಿಪಾದಿಸಿದ ವಿದ್ವಾಂಸರು ತಮ್ಮ ವಾದದಲ್ಲಿ ಮಂಡಿಸಿರುತ್ತಾರೆ. ಕೈಗಾರಿಕೆಗಳ ಅಭಿವೃದ್ಧಿಯು ಅಂತಿಮವಾಗಿ ಇತರ ಕ್ಷೇತ್ರಗಳಲ್ಲಿಯೂ ವಿಸ್ತರಣೆಯನ್ನು ಹೊಂದುವ ಪ್ರೇರಣೆಯನ್ನು ಹೊಂದಿರಬೇಕು. ಸಮರ್ಥ ಉತ್ಪಾದನಾ ವಿಧಾನವನ್ನು ಭಾಗಶಃ ಅಳವಡಿಸುವ ಮೂಲಕ ಹಾಗೂ ಅಣೆಕಟ್ಟುಗಳ ನಿರ್ಮಾಣ, ಉತ್ತಮ ರಸ್ತೆ ವ್ಯವಸ್ಥೆ ಸಮರ್ಪಕ ನೀರಾವರಿ ವ್ಯವಸ್ಥೆಗಳನ್ನು ಹೊಂದುವುದರ ಮೂಲಕ ಪ್ರಥಮವಾಗಿ ಕೃಷಿ ಕ್ಷೇತ್ರದಲ್ಲಿ ವರಮಾನವನ್ನು ಹೆಚ್ಚಿಸಬೇಕು. ತನ್ಮೂಲಕ ಆರಂಭದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯು ಕೃಷಿ ವ್ಯವಸ್ಥೆಯ ಬೆಳವಣಿಗೆಗೆ ಪೂರಕವಾಗಿರಬೇಕು. ಪ್ರಾರಂಭದಲ್ಲಿ ಮಾತ್ರ ಕೃಷಿಗೆ ಆದ್ಯತೆಯನ್ನು ಕೊಟ್ಟು ಅಭಿವೃದ್ಧಿಯ ಅಂತಿಮ ಗುರಿ ಉತ್ಪಾದನೆಯ ಮಟ್ಟವನ್ನು ಪ್ರೋತ್ಸಾಹಿಸುವುದು ಆಗಿರುತ್ತದೆ ಎಂಬುದಾಗಿ ಈ ಸಿದ್ಧಾಂತದ ಪ್ರತಿಪಾದಕರು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಅಭಿವೃದ್ಧಿ ಕಾರ್ಯಕ್ರಮಗಳು ಸಮರ್ಥವಾಗಿ ಆರಂಭಗೊಂಡು ತೀವ್ರತೆಯನ್ನು ಪಡೆದುಕೊಂಡು ಹೆಚ್ಚು ಯಶಸ್ವಿಯಾಗಬೇಕಾದರೆ ಒಂದು ರಾಷ್ಟ್ರದ ಆರ್ಥಿಕ ವ್ಯವಸ್ಥೆಯು ಎಲ್ಲಾ ರಂಗಗಳಲ್ಲಿ ಸಮಗ್ರವಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ಸಾಧ್ಯವಾಗುತ್ತದೆ ಎಂಬುದು ಬೃಹತ್ ತಳ್ಳುವಿಕೆಯ ಸಿದ್ಧಾಂತದ ಪ್ರತಿಪಾದಕರ ವಾದವಾಗಿರುತ್ತದೆ. "ನಿಧಾನಗತಿಯ ಬೆಳವಣಿಗೆಯ ಮಾದರಿ ಅತ್ಯಂತ ಕಷ್ಟಕರ ಹಾಗೂ ಹೆಚ್ಚು ಅಪಾಯಕಾರಿ. ಏಕೆಂದರೆ ಅದು ಎದುರಾಗುವ ಎಲ್ಲಾ ಅಡೆತಡೆಗಳನ್ನು, ಸಮಸ್ಯೆಗಳನ್ನು ಎದುರಿಸುವಲ್ಲಿ ಯಶಸ್ವಿಯಾಗುವುದಿಲ್ಲ[27] (ಹಿಗ್ಗಿನ್ಸ್. ಬಿ, 1986). ಯಾವುದೇ ಬೃಹತ್ ಬದಲಾವಣೆಗಳನ್ನು ಹೊಂದಿಲ್ಲದ ಕಾರ್ಯಕ್ರಮಗಳು, ಅಭಿವೃದ್ಧಿಯ ಪ್ರಕ್ರಿಯೆಗಳು ಸ್ವಂತವಾಗಿ ನೆಲೆ ನಿಲ್ಲಲು ಹಾಗೂ ಬೆಳವಣಿಗೆಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂದು ನಂಬಲಾಗಿರುತ್ತದೆ. "ಓಡುವುದೇ ಓಟದ ಮುಖ್ಯ ಉದ್ದೇಶವಾದರೆ ಅದಕ್ಕೆ ವೇಗದ ಮಿತಿಯು ಅವಶ್ಯಕವಾಗಿರುತ್ತದೆ" ಎಂಬ ವಾದವನ್ನು ಬೃಹತ್ ತಳ್ಳುವಿಕೆಯ ಸಿದ್ಧಾಂತದ ಪ್ರತಿಪಾದಕರು ಮಂಡಿಸುತ್ತಾ ವಿಮಾನವೊಂದು ಮೇಲೇರಲು ಗರಿಷ್ಠ ಕನಿಷ್ಠ ವೇಗದ ಅವಶ್ಯಕತೆಯಿದೆ ಎನ್ನುವ ಉದಾಹರಣೆಯನ್ನು ನೀಡುವ ಮೂಲಕ ವಿವರಿಸಿದ್ದಾರೆ[28] (ರೋಸೆನ್‌ಸ್ಟೈನ್ ರೊಡಾನ್, 1943).

ಬೃಹತ್ ತಳ್ಳುವಿಕೆಯ ಸಿದ್ಧಾಂತದ ಪ್ರತಿಪಾದಕರನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಪ್ರಥಮ ವರ್ಗದ ವಿದ್ವಾಂಸರ ಪ್ರಕಾರ ಆರ್ಥಿಕ ಅಭಿವೃದ್ಧಿಯಲ್ಲಿ ತಲಾ ವರಮಾನದ ಹೆಚ್ಚಳಕ್ಕೂ, ಜನಸಂಖ್ಯಾ ಪ್ರಮಾಣದ ಬೆಳವಣಿಗೆಯ ನಡುವೆ ನೇರ ಸಂಬಂಧವಿದೆ ಎಂಬ ವಾದವನ್ನು ಮಂಡಿಸುತ್ತಾ, ತಲಾ ವರಮಾನದಲ್ಲಿ ಸಣ್ಣ ಮಟ್ಟದಲ್ಲಿ ಏರಿಕೆಯಾದಾಗ ಅದರಿಂದಾಗಿ ಹೆಚ್ಚಳವಾದ ಜನಸಂಖ್ಯೆಯು ವರಮಾನದಲ್ಲಿ ಆದ ಏರಿಕೆಯನ್ನು ನುಂಗಿಹಾಕಬಹುದು. ಆದುದರಿಂದ ಅಭಿವೃದ್ಧಿಯ ಪ್ರಕ್ರಿಯೆಗಳಿಂದಾಗಿ ದೊಡ್ಡ ಮಟ್ಟದಲ್ಲಿ ತಲಾ ವರಮಾನ ನಿರ್ದಿಷ್ಟ ಕನಿಷ್ಠ ಮಟ್ಟಕ್ಕಿಂತ ಹೆಚ್ಚಾದಾಗ ಮಾತ್ರ ಆರ್ಥಿಕತೆಯಲ್ಲಿ ಬೆಳವಣಿಗೆಯನ್ನು ಸಾಧಿಸಿ ಜನಸಂಖ್ಯೆಯ

ಪ್ರಮಾಣ ಹೆಚ್ಚಾದರೂ ಅಭಿವೃದ್ಧಿಯ ಮಟ್ಟದಲ್ಲಿ ಏರಿಕೆಯಿರುತ್ತದೆ[29] (ಮ್ಯಿಂಟ್ ಎಚ್.ಎಲ್.) ಆದುದರಿಂದ ಬೃಹತ್ ಮಟ್ಟದಲ್ಲಿ ಬಂಡವಾಳದ ಹೂಡಿಕೆ ಅವಶ್ಯಕವಾಗಿದೆ. ಇದರಿಂದಾಗಿ ಉತ್ಪಾದನೆಯ ಹಾಗೂ ಲಾಭದ ಪ್ರಮಾಣವು ಜನಸಂಖ್ಯೆಯ ಪ್ರಮಾಣದಲ್ಲಿ ಆದ ಹೆಚ್ಚಳಕ್ಕಿಂತಲೂ ದೊಡ್ಡ ರೀತಿಯಲ್ಲಿ ಹೆಚ್ಚಿರುತ್ತದೆ ಎಂದು ಅಭಿಪ್ರಾಯ ಪಡುತ್ತಾ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ದೊಡ್ಡ ಮಟ್ಟದ ಬಂಡವಾಳ ಹೂಡಿಕೆ ಹಾಗೂ ಬೃಹತ್ ತಳ್ಳುವಿಕೆಯ ಅನಿವಾರ್ಯತೆಯ ಅಗತ್ಯದ ಬಗ್ಗೆ ವಿವರಿಸಿದ್ದಾರೆ. ಲೈಬೆನ್‌ಸ್ಟೈನ್‌ರವರ[30] ಸಂದಿಗ್ಧ ಕನಿಷ್ಟ ಪ್ರಯತ್ನದ ಸಿದ್ದಾಂತ ಹಾಗೂ ನೆಲ್ಸನ್‌ರವರು[31] ಪ್ರತಿಪಾದಿಸಿದ ತಳಹಂತದ ಸಂತುಲಿತ ಸಿದ್ಧಾಂತ ಇವುಗಳಲ್ಲಿ ಪ್ರಮುಖವಾದದ್ದು.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಬಡತನವೆಂಬ ವಿಷವರ್ತುಲದ ಲಕ್ಷಣಗಳನ್ನು ಹೊಂದಿದ್ದು ಅವು ಆಯಾ ರಾಷ್ಟ್ರಗಳ ತಲಾ ವರಮಾನವನ್ನು ಕನಿಷ್ಟ ಮಟ್ಟದ ಸುತ್ತ ಸುತ್ತುತ್ತಾ ಇರುವಂತೆ ಮಾಡುತ್ತದೆ. ಬಡತನದ ವಿಷವರ್ತುಲದಿಂದ ಹೊರ ಬರಬೇಕಾದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕನಿಷ್ಟ ಸಂದಿಗ್ಧ ಪ್ರಯತ್ನಗಳ ಮೂಲಕ ಸಹ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತಂದು ತಲಾ ವರಮಾನದಲ್ಲಿ ಏರಿಕೆಯನ್ನು ಮಾಡುವುದು ಅತ್ಯಂತ ಅನಿವಾರ್ಯವಾಗಿರುತ್ತದೆ[32] ಎಂದು ವಿಶ್ಲೇಷಿಸಿದ ಹಾರ್ವೆ ಲೈಬೆನ್‌ಸ್ಟೈನ್‌ರವರ ಪ್ರಕಾರ ಪ್ರತಿಯೊಂದು ಆರ್ಥಿಕ ವ್ಯವಸ್ಥೆಯು 'ಆಘಾತ' ಮತ್ತು 'ಉತ್ತೇಜಿಸುವ' ಅಂಶಗಳಿಂದ ಪ್ರಭಾವಿತವಾಗಿರುತ್ತದೆ. ಆರಂಭಿಕವಾಗಿ ತಲಾ ವರಮಾನದ ಮೇಲೆ ಪ್ರಭಾವ ಬೀರಿ ಅದನ್ನು ಕುಗ್ಗಿಸುವ ಗುಣ ಆಘಾತಕಾರಿ ಅಂಶಗಳಿಗಿದ್ದರೆ, ಆರ್ಥಿಕ ವ್ಯವಸ್ಥೆಗೆ ಉತ್ತೇಜನಕಾರಿಯಾದ ಅಂಶಗಳು ತಲಾ ವರಮಾನದ ಏರಿಕೆಗೆ ಸಹಕಾರಿಯಾಗುತ್ತದೆ. ಉತ್ತೇಜನಕಾರಿಯಾದ ಅಂಶಗಳ ಪ್ರಮಾಣ ಕಡಿಮೆಯಿದ್ದು ಆರ್ಥಿಕತೆಗೆ ಹೊಡೆತ ನೀಡುವ ಆಘಾತಕಾರಿ ಅಂಶಗಳು ಹೆಚ್ಚಿರುವುದೇ ರಾಷ್ಟ್ರಗಳು ಹಿಂದುಳಿಯಲು ಪ್ರಮುಖ ಕಾರಣವಾಗಿರುತ್ತದೆ. ಇದರಿಂದಾಗಿ ರಾಷ್ಟ್ರದ ಆರ್ಥಿಕ ವ್ಯವಸ್ಥೆ ಹಾಗೂ ವರಮಾನದ ಆದಾಯವನ್ನು ಹೆಚ್ಚಿಸುವ ಕ್ರಮಗಳನ್ನು ಉತ್ತೇಜಿಸಿ ಆರ್ಥಿಕತೆಗೆ ಆಘಾತಕಾರಿಯಾದ ಅಂಶಗಳನ್ನು ಕನಿಷ್ಟ ಮಟ್ಟಕ್ಕೆ ತಂದಾಗ ಮಾತ್ರ ಆರ್ಥಿಕ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ[33] ಎಂದಿದ್ದಾರೆ.

'ಅಭಿವೃದ್ಧಿಶೀಲ ರಾಷ್ಟ್ರಗಳು ತಳಮಟ್ಟದ ಸಂತುಲಿತ ವರ್ತುಲಗಳಲ್ಲಿ ಸಿಕ್ಕಿಹಾಕಿಕೊಂಡಿವೆ. ಅಭಿವೃದ್ಧಿಯನ್ನು ಹೊಂದದ ರಾಷ್ಟ್ರಗಳ ಆರ್ಥಿಕ ಅಸ್ವಸ್ಥತೆಗೆ ಜನರ ಜೀವನಾಧಾರಕ್ಕೆ ಅವಶ್ಯಕವಿರುವಷ್ಟು ತಲಾ ವರಮಾನದಲ್ಲಿ ಏರಿಕೆಯನ್ನು ಸಾಧಿಸುವುದರ ಮೂಲಕ ಮಾತ್ರ ರೋಗಶಮನವನ್ನು ಮಾಡಬಹುದು'[34] ಎಂದು ನೆಲ್ಸನ್‌ರವರು ತಮ್ಮ ವಾದವನ್ನು ಮಂಡಿಸಿರುತ್ತಾರೆ. ಹಾರ್ವೆ ಲೈಬೆನ್‌ಸ್ಟೈನ್‌ರವರ ಕನಿಷ್ಟ ಸಂದಿಗ್ಧ ಪ್ರಯತ್ನದ ಸಿದ್ಧಾಂತದಂತೆ, ಮಾಲ್ತಸ್‌ರವರ ಆರ್ಥಿಕ ಸಿದ್ಧಾಂತದಲ್ಲಿಯೂ ಒಂದು ರಾಷ್ಟ್ರದ ಜನಸಂಖ್ಯೆಯ ಪ್ರಮಾಣದಲ್ಲಿ ಹೆಚ್ಚಳವಾದಾಗ ತಲಾ ವರಮಾನದಲ್ಲಿ ಕನಿಷ್ಟ ಮಟ್ಟದಲ್ಲಿ ಏರಿಕೆಯಾಗುತ್ತದೆ. ಆದರೆ ಜನಸಂಖ್ಯೆಯ ಮಟ್ಟ ಗರಿಷ್ಟ ಮಟ್ಟದಲ್ಲಿ

ಏರಿಕೆಯಾದಾಗ ತಲಾ ವರಮಾನದಲ್ಲಿಯೂ ಹೆಚ್ಚಳವಾಗಿ ಕ್ರಮೇಣ ಜನಸಂಖ್ಯೆಯ ಪ್ರಮಾಣ ಕಡಿಮೆಯಾಗಲು ಆರಂಭವಾಗುತ್ತದೆ ಎಂದಿದ್ದಾರೆ. ರಾಷ್ಟ್ರೀಯ ವರಮಾನದ ಏರಿಕೆಯ ಉದ್ದೇಶವಿಟ್ಟುಕೊಂಡು ಉಳಿತಾಯ ಹಾಗೂ ಬಂಡವಾಳದ ಹೂಡಿಕೆಗಳಲ್ಲಿ ಹೆಚ್ಚಳವನ್ನು ಸಾಧಿಸಲು ಮಾಡಿದಂತಹ ಎಲ್ಲಾ ಪ್ರಯತ್ನಗಳು ಜನಸಂಖ್ಯೆಯ ಪ್ರಮಾಣದಲ್ಲಿ ಆದ ಹೆಚ್ಚಳದ ಕಾರಣದಿಂದ ತಲಾ ವರಮಾನದ ಏರಿಕೆಯ ಮಟ್ಟವನ್ನು ತನ್ನ ಪೂರ್ವ ಸುಸ್ಥಿರ ಸಂತುಲಿತ ವ್ಯವಸ್ಥೆಗೆ ಒಯ್ಯುತ್ತಿದೆ. ಇದರಿಂದಾಗಿ ಅಭಿವೃದ್ಧಿ ಹೊಂದದ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆ ತಳಮಟ್ಟದ ಸಂತುಲಿತ ವ್ಯವಸ್ಥೆಯಲ್ಲಿ ಸಿಕ್ಕಿ ಹಾಕಿಕೊಂಡು ಹೊರಬರಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ.[35] (ನೆಲ್ಸನ್, 1956) ಎಂಬ ಅಭಿಪ್ರಾಯವನ್ನು ವರ್ಧಮಾನಕ್ಕೆ ಬರುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯ ಬಗ್ಗೆ ಇವರುಗಳು ಬೆಳಕು ಚೆಲ್ಲಿರುತ್ತಾರೆ.

ರೋಸೆನ್‌ಸ್ಟೈನ್ ರೊಡಾನ್‌ರವರು ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿ ಸಮಸ್ಯೆಗಳನ್ನು ನಿವಾರಿಸಲು ಬೃಹತ್ ತಳ್ಳುವಿಕೆ ಅಗತ್ಯವೆಂಬ ವಾದವನ್ನು ಮಂಡಿಸಿರುತ್ತಾರೆ. 'ಅಭಿವೃದ್ಧಿಯ ಹಾದಿ ನೇರವಾಗಿರದೆ ಅನೇಕ ಅಡ್ಡಿ ಆತಂಕಗಳಿಂದ ತುಂಬಿರುತ್ತದೆ. ಅಭಿವೃದ್ಧಿಯು ಅನೇಕ ಅವ್ಯಾಹತವಲ್ಲದ ನೆಗೆತಗಳನ್ನು ಮತ್ತು ತಡೆಗಳನ್ನು ಒಳಗೊಂಡಿರುವ ಒಂದು ಪ್ರಕ್ರಿಯೆ. ಆದುದರಿಂದ ಆರ್ಥಿಕ ನಿಧಾನವಾದವು ನಿರಾಶೆಯನ್ನಷ್ಟೆ ಉಂಟು ಮಾಡಬಹುದಲ್ಲದೆ ಆರ್ಥಿಕ ಅಭಿವೃದ್ಧಿಯ ಅಡ್ಡಿ ಆತಂಕಗಳನ್ನು ನಿವಾರಿಸಲಾರದು. ನಿಧಾನಗತಿಯ ಅಭಿವೃದ್ಧಿ ಮಾದರಿಗಳು ರಾಷ್ಟ್ರವೊಂದನ್ನು ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯಲು ಸಾಧ್ಯವಾಗುವುದಿಲ್ಲ. ನಿರೀಕ್ಷಿತ ಯಶಸ್ಸನ್ನು ಸಾಧಿಸುವುದಕ್ಕೆ ಕನಿಷ್ಠ ಪ್ರಮಾಣದಲ್ಲಿ ಬಂಡವಾಳವನ್ನು ಹೂಡಿಕೆ ಮಾಡುವುದು ಅನಿವಾರ್ಯವಾಗಿರುತ್ತದೆ. ವಿದೇಶೀ ಆರ್ಥಿಕ ವ್ಯವಸ್ಥೆಯ ಸಹಕಾರವನ್ನು ಪಡೆದುಕೊಂಡು ತಾಂತ್ರಿಕವಾಗಿ ಪರಸ್ಪರ ಅವಲಂಬಿತವಾಗಿರುವ ಕೈಗಾರಿಕೆಗಳ ಸ್ಥಾಪನೆಯಿಂದ ಅಭಿವೃದ್ಧಿ ಸಾಧ್ಯವಾಗುತ್ತದೆ' ಎಂದು ಪ್ರತಿಪಾದಿಸಿದ ರೊಡಾನ್‌ರವರು ಹಿಂದುಳಿದ ಅರ್ಥವ್ಯವಸ್ಥೆಗಳು ಸ್ಥಗಿತ್ಯ ಮತ್ತು ಬಡತನದ ವಿಷವರ್ತುಲದಿಂದ ಹೊರಬರಬೇಕಾದರೆ ವಿಪರೀತ ಪ್ರಯತ್ನಗಳ ಅಗತ್ಯತೆಯ ಬಗ್ಗೆ ವಿವರಿಸಿ ಆರ್ಥಿಕ ಅಭಿವೃದ್ಧಿ ಯಶಸ್ಸನ್ನು ಸಾಧಿಸಬೇಕಾದರೆ ವಿದೇಶೀ ಆರ್ಥಿಕತೆಯಿಂದ ಕನಿಷ್ಟ ಮಟ್ಟದ ಬಂಡವಾಳ ಹರಿದು ಬರುವುದು ಅವಶ್ಯಕವಾಗಿರುತ್ತದೆ[36] (ರೊಡಾನ್, 1953) ಎಂಬ ವಾದವನ್ನು ಮಂಡಿಸಿರುತ್ತಾರೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆರ್ಥಿಕ ಹಿಂದುಳಿಯುವಿಕೆಗೆ ಹಾಗೂ ಬಡತನದ ವಿಷವರ್ತುಲಕ್ಕೆ ಮುಖ್ಯ ಕಾರಣವೆಂದರೆ ಆ ರಾಷ್ಟ್ರಗಳಲ್ಲಿನ ವಿಸ್ತೃತಗೊಳ್ಳದ ಮಾರುಕಟ್ಟೆ ಹಾಗೂ ಜನರ ಕಡಿಮೆ ಪ್ರಮಾಣದ ಕೊಳ್ಳುವಿಕೆ ಎಂದು ವಿಶ್ಲೇಷಿಸಿದ ಅರ್ಥಶಾಸ್ತ್ರದ ವಿದ್ವಾಂಸರುಗಳು ಮಾರುಕಟ್ಟೆಗಳ ವಿಸ್ತರಣೆ ಹಾಗೂ ಜನರ ಕೊಳ್ಳುವಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದರ ಮೂಲಕ ಬಡತನದ ವಿಷವರ್ತುಲದಿಂದ ಹೊರಬರಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆರ್ಥಿಕಾಭಿವೃದ್ಧಿಗೆ ಬಂಡವಾಳ ಹೂಡಿಕೆಯ

ಅಗತ್ಯತೆಯ ಬಗೆಗೆ ಈ ಗುಂಪಿನ ವಿದ್ವಾಂಸರು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುತ್ತಾರೆ. ರಾಗ್ನರ್ ನರ್ಕ್ಸ್‌ರವರು ವೈವಿಧ್ಯಮಯ ಕ್ಷೇತ್ರಗಳ ಅಭಿವೃದ್ಧಿಗೆ ದೊಡ್ಡ ಮಟ್ಟದ ಬಂಡವಾಳದ ಹೂಡಿಕೆಯ ಬಗ್ಗೆ ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ 'ಬಡತನದ ವಿಷವರ್ತುಲದಿಂದಾಗಿ ಹಿಂದುಳಿದ ರಾಷ್ಟ್ರಗಳ ಬೆಳವಣಿಗೆ ಕುಂಠಿತವಾಗಿರುತ್ತದೆ. ಬಡತನದ ವಿಷವರ್ತುಲವನ್ನು ನಿರ್ಮೂಲನಗೊಳಿಸಲು ಮತ್ತು ಮಾರುಕಟ್ಟೆಗಳನ್ನು ವಿಸ್ತರಿಸಲು ಬೃಹತ್ ಕೈಗಾರಿಕೆಗಳಿಗೆ ಗರಿಷ್ಟ ಬಂಡವಾಳದ ಏಕಕಾಲಿಕ ಹೂಡಿಕೆ ಅಗತ್ಯ. ಸಮಗ್ರ ಕೈಗಾರಿಕೀಕರಣಕ್ಕೆ ಒತ್ತು ನೀಡುವ ಮೂಲಕ ಆಂತರಿಕ ಹಾಗೂ ಬಾಹ್ಯ ಮಿತವ್ಯಯ ಸಾಧನೆಗೆ ಸಂತುಲಿತ ಬೆಳವಣಿಗೆ ಅಗತ್ಯವಿದೆ' ಎಂದು ಪ್ರತಿಪಾದಿಸಿರುತ್ತಾರೆ. ನರ್ಕ್ಸ್‌ರವರು ಹೇಳುವಂತೆ ಹಿಂದುಳಿದ ರಾಷ್ಟ್ರಗಳಿಗೆ ಸಂತುಲಿತ ಬೆಳವಣಿಗೆಯ ತಂತ್ರವನ್ನು ಅಳವಡಿಸದೆ ಅನ್ಯಮಾರ್ಗವಿರುವುದಿಲ್ಲ. ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಸಾರ್ವಜನಿಕ ಬಂಡವಾಳವನ್ನು ಅಳವಡಿಸಿಕೊಳ್ಳಬೇಕೇ ಅಥವಾ ಖಾಸಗಿ ಹೂಡಿಕೆಯನ್ನು ಪ್ರೋತ್ಸಾಹಿಸಬೇಕೇ ಎನ್ನುವುದನ್ನು ನಿರ್ಧರಿಸಬೇಕಾಗುತ್ತದೆ. ನರ್ಕ್ಸ್‌ರವರ ಪ್ರಕಾರ ಇದು ಆಡಳಿತಾತ್ಮಕ ಸಮಸ್ಯೆಯಾಗಿರುತ್ತದೆ. ಹೆಚ್ಚಿನ ಅರ್ಥಶಾಸ್ತ್ರಜ್ಞರು ಹಿಂದುಳಿದ ರಾಷ್ಟ್ರಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆಯೇ ಸಂತುಲಿತ ಬೆಳವಣಿಗೆಯನ್ನು ಸಾಧಿಸಲಾರದೆಂದು ಅದಕ್ಕೆ ಸರಕಾರದ ದೊಡ್ಡ ಮಟ್ಟದ ಹಸ್ತಕ್ಷೇಪದ ಅಗತ್ಯವಿದೆಯೆಂದು ಭಾವಿಸುತ್ತಾರೆ. ಖಾಸಗಿ ಉದ್ದಿಮೆಗಳ ಸ್ಥಾಪನೆಯಿಂದ ಬೆಳವಣಿಗೆ ಸಾಧ್ಯವಾದರೂ ಅದು ಸಾಮಾಜಿಕ ನ್ಯಾಯವನ್ನು ಕಡೆಗಣಿಸುತ್ತದೆ. ಆದುದರಿಂದ ಸರಕಾರದ ಭಾಗವಹಿಸುವಿಕೆಯ ಮೂಲಕ ಸಂತುಲಿತ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.[37] ರೊಡಾನ್‌ರವರು ಪ್ರತಿಪಾದಿಸಿದ ಬೃಹತ್ ತಳ್ಳುವಿಕೆಯ ಸಿದ್ಧಾಂತ ಮತ್ತು ಹರ್ಷ್‌ಮೆನ್‌ರವರ[38] ಅಸಮತೋಲನ ಸಿದ್ಧಾಂತಗಳು ಈ ದೃಷ್ಟಿಕೋನದ ಆಧಾರದ ಮೇಲೆ ನಿರ್ಮಾಣಗೊಂಡವುಗಳಾಗಿರುತ್ತವೆ.

ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮೇಲೆ ವಿವರಿಸಿದ ಪ್ರಮುಖ ಸಿದ್ಧಾಂತಗಳು ಹಾಗೂ ಇಲ್ಲಿಯವರೆಗೆ ನೀಡಲ್ಪಟ್ಟಿರುವ ಅಭಿವೃದ್ಧಿಯ ಪರಿಕಲ್ಪನೆಗಳ ಪ್ರಕಾರ ರಾಷ್ಟ್ರದ ಒಟ್ಟು ಉತ್ಪನ್ನ ಹಾಗೂ ಸೀಮಿತ ಮಟ್ಟದ ತಲಾ ವರಮಾನ ರಾಷ್ಟ್ರಗಳ ಹಿಂದುಳಿಯುವಿಕೆಗೆ ಪ್ರಮುಖ ಕಾರಣಗಳಾಗಿರುತ್ತವೆ. ಆದುದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಯೋಜಿತ ರೀತಿಯಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆ ಹಾಗೂ ದೊಡ್ಡ ಮಟ್ಟದಲ್ಲಿ ಬಂಡವಾಳದ ಹೂಡಿಕೆ ಅನಿವಾರ್ಯವಾಗುತ್ತದೆ ಎಂದು ವಿಶ್ಲೇಷಿಸಿರುತ್ತಾರೆ. ಜಾನ್ ನಡರ್‌ವಿನ್‌ರವರು ಬದಲಿ ಅಭಿವೃದ್ಧಿ ಯೋಜನೆಗಳ ಬಗ್ಗೆ ವಿವರಿಸುತ್ತಾ ಅಭಿವೃದ್ಧಿಯ ಗುರಿಗಳನ್ನು ಮತ್ತು ಅದನ್ನು ಸಾಧಿಸಲು ಉಪಯೋಗಿಸಲ್ಪಡುವ ವಿಧಾನಗಳನ್ನು ಪುನರ್‌ವ್ಯಾಖ್ಯಾನ ಮಾಡುವುದು ಇಂದಿನ ಅವಶ್ಯಕತೆಯಾಗಿರುತ್ತದೆ ಎಂದು ಪ್ರತಿಪಾದಿಸುತ್ತಾ ಅಭಿವೃದ್ಧಿ ಯೋಜನೆಗಳ ಉದ್ದೇಶ ರಾಷ್ಟ್ರೀಯ ವರಮಾನವನ್ನು ಏರಿಕೆ ಮಾಡುವುದಕ್ಕೋಸ್ಕರ ಮಾತ್ರ ಸೀಮಿತವಾಗಿರಬಾರದು. ಮಾನವ ಸಂಪನ್ಮೂಲಗಳನ್ನು

ಪರಿಣಾಮಕಾರಿಯಾಗಿ ಉಪಯೋಗಿಸುವಂತಿರಬೇಕು. ಅಭಿವೃದ್ಧಿ ಚಟುವಟಿಕೆಗಳಲ್ಲಿ ಜನರು ಮತ್ತು ಸಮುದಾಯ ಪಾಲ್ಗೊಳ್ಳುವಂತಾದರೆ ಮಾತ್ರ ಅಭಿವೃದ್ಧಿಗಾಗಿ ಅಳವಡಿಸಿಕೊಂಡಿರುವ ಯೋಜನೆಗಳು ಹೆಚ್ಚು ಯಶಸ್ವಿಯಾಗುತ್ತದೆ[39] ಎಂದು ಉಲ್ಲೇಖಿಸಿರುತ್ತಾರೆ.

ಸಾವಿರದ ಒಂಬೈನೂರ ಎಪ್ಪತ್ತರ ನಂತರ ಮುಖ್ಯವಾಹಿನಿಯ ಅಭಿವೃದ್ಧಿ ಸಿದ್ಧಾಂತಗಳ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿ ಜನಪರವಾದ ಬದಲಿ ಒಲವು ವ್ಯಕ್ತವಾಗಲಾರಂಭಿಸಿತು. 1975ರ ಡೆಗ್ ಹೆಮರ್‌ಸ್ಕೊಚೊಲ್ ಫೌಂಡೇಶನ್ ಅಭಿವೃದ್ಧಿಯ ಬಗ್ಗೆ ನೀಡಿದ ತನ್ನ ವರದಿಯಲ್ಲಿ 'ಈಗ ಏನು? ಇನ್ನೊಂದು ರೀತಿಯ ಅಭಿವೃದ್ಧಿ, ಅಭಿವೃದ್ಧಿ ಪ್ರಕ್ರಿಯೆಗಳ ಉದ್ದೇಶಗಳು ಜನರ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು. ಸ್ವಾವಲಂಬನೆಯನ್ನು ಸಾಧಿಸುವುದಕ್ಕೆ ಮತ್ತು ಪರಿಸರಕ್ಕೆ ಹೆಚ್ಚು ಒತ್ತು ನೀಡುವಂತಿರಬೇಕು' ಎಂದು ಅಭಿವೃದ್ಧಿಯ ಮೂಲ ಆಶಯವನ್ನೇ ಪ್ರಶ್ನಿಸಿರುತ್ತಾರೆ.[40] ಬದಲಿ ಅಭಿವೃದ್ಧಿ ಯೋಜನೆಗಳ ಬಗ್ಗೆ ಹೆಚ್ಚು ಒಲವನ್ನು ಭಾರತದಲ್ಲಿ ವಿದ್ವಾಂಸರಾದ ಅಶಿಶ್ ನಂದಿ, ಶಿವ ವಿಶ್ವನಾಥನ್, ಕ್ಲಾಡ್ ಅಲ್ವರಿಸ್ ಮತ್ತು ವಂದನ ಶಿವ ಇವರುಗಳೆಲ್ಲಾ ವ್ಯಕ್ತಪಡಿಸಿರುತ್ತಾರೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವೈಜ್ಞಾನಿಕ ಮತ್ತು ಆಧುನಿಕ ತಂತ್ರಜ್ಞಾನವನ್ನು ವಿರೋಧಿಸಿದವರಲ್ಲಿ ಪ್ರಮುಖರಾದ ವಂದನ ಶಿವರವರು ಬದಲಿ ಅಭಿವೃದ್ಧಿ ಯೋಜನೆಗಳ ಬಗ್ಗೆ ವಿವರಿಸುತ್ತಾ ಅಭಿವೃದ್ಧಿ ಯೋಜನೆಗಳಲ್ಲಿ ಸ್ಥಳೀಯ ಜನರ ಜ್ಞಾನವನ್ನು ಉಪಯೋಗಿಸಬೇಕು. ಇದನ್ನು ಪರಿಗಣಿಸದೆ ಇದ್ದರೆ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂದಿದ್ದಾರೆ.

ಬದಲಿ ಅಭಿವೃದ್ಧಿ ದೃಷ್ಟಿಕೋನವನ್ನು ಪ್ರತಿಪಾದಿಸಿದ ಶೂಮಾಕರ್‌ರವರು 'ಚಿಕ್ಕದು ಸುಂದರವಾಗಿರುತ್ತದೆ' ಎಂದು ವ್ಯಾಖ್ಯಾನಿಸಿ ಚಿಕ್ಕ ಕೈಗಾರಿಕಾ ಘಟಕಗಳ ಸ್ಥಾಪನೆಯಿಂದಾಗಿ ಸ್ವಾವಲಂಬನೆಯನ್ನು ಸಾಧಿಸಬಹುದಾಗಿದೆ. ಇದು ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಪರ್ಯಾಯವಾಗುತ್ತದೆ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಉಲ್ಲೇಖಿಸಿ ಹೆಚ್ಚಿನ ಎಲ್ಲಾ ಅಭಿವೃದ್ಧಿ ದೃಷ್ಟಿಕೋನಗಳಿಗಿಂತ ಇದು ಭಿನ್ನವಾಗಿರುತ್ತದೆ. ಚಿಕ್ಕ ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಸ್ವಾವಲಂಬನೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ಆಗುವ ಹಾನಿಗಳನ್ನು ತಪ್ಪಿಸಬಹುದು[41] ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಡಾರೆನ್ ಎಕಮೊಗ್ಲುರವರು ಅಭಿವೃದ್ಧಿ ಪ್ರಕ್ರಿಯೆಯನ್ನು ವಿಶ್ಲೇಷಣೆ ಮಾಡುತ್ತಾ "ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ನಡುವೆ ಸಂಬಂಧವಿರುವುದರಿಂದ ಇವುಗಳನ್ನು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪ್ರತ್ಯೇಕವಾಗಿ ಪರಿಗಣಿಸಲು ಸಾಧ್ಯವಾಗುವುದಿಲ್ಲ, ಆದುದರಿಂದ ಅಭಿವೃದ್ಧಿ ಪ್ರಕ್ರಿಯೆಯು ಆರ್ಥಿಕ ಬೆಳವಣಿಗೆಯ ಜೊತೆಯಲ್ಲಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಮತ್ತು ಅಭಿವೃದ್ಧಿಗೆ ಕಾರಣವಾಗಬೇಕು"[42] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಅಭಿವೃದ್ಧಿಗೆ ಸಂಬಂಧಿಸಿದ ಮೇಲೆ ಚರ್ಚಿಸಿದ ಎಲ್ಲಾ ಸಿದ್ಧಾಂತಗಳ ವಿವಿಧ ಆಯಾಮಗಳನ್ನು ಅಧ್ಯಯನ ಮಾಡಿದಾಗ ಅಭಿವೃದ್ಧಿಯು ಜನ ಕೇಂದ್ರೀಕೃತವಾಗಿರಬೇಕು ಹಾಗೂ ಎಲ್ಲರಿಗೂ ಸಮಾನ ನ್ಯಾಯ, ಅವಕಾಶ ಮತ್ತು ಭಾಗವಹಿಸುವಿಕೆಗೆ ಪ್ರಾಮುಖ್ಯತೆ ನೀಡಬೇಕು ಎಂದು ವಿಶ್ಲೇಷಿಸಬಹುದು. ಸಮುದಾಯದ ಸಹಭಾಗಿತ್ವದ, ಜನರ ಪಾಲ್ಗೊಳ್ಳುವಿಕೆಯ ಅಭಿವೃದ್ಧಿಯು ಇಂದಿನ ಅವಶ್ಯಕತೆಯಾಗಿರಬೇಕು ಎಂಬ ತೀರ್ಮಾನಕ್ಕೆ ಬರಬಹುದು ಹಾಗೂ ಅಭಿವೃದ್ಧಿಯು ಮಾನವ ಮುಖಿಯಾಗಿರಬೇಕು ಎಂದು ಸ್ಪಷ್ಟವಾಗಿ ಹೇಳಬಹುದು. ಬದಲಿ ಅಭಿವೃದ್ಧಿ ಯೋಜನೆಗಳನ್ನು ಬಿಟ್ಟು ಬೇರೆ ಯಾವುದೇ ದೃಷ್ಟಿಕೋನವು ಕೈಗಾರಿಕೆಗಳಿಂದ ಆಗುವ ಹಾನಿಗಳ ಬಗೆಗೆ ಉಲ್ಲೇಖಿಸಿರುವುದಿಲ್ಲ. ಜನರ ಸಾಮರ್ಥ್ಯ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಎಲ್ಲಿಯೂ ಹೇಳಿರುವುದಿಲ್ಲ. ಹೆಚ್ಚಿನ ಸಿದ್ಧಾಂತಗಳು ತೃತೀಯ ಜಗತ್ತಿನ ಹಾಗೂ ಅಭಿವೃದ್ಧಿಯನ್ನು ಹೊಂದುತ್ತಿರುವ ರಾಷ್ಟ್ರಗಳಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆ ಹಾಗೂ ದೊಡ್ಡ ಮಟ್ಟದ ಹೂಡಿಕೆ ಅನಿವಾರ್ಯವಾಗಿರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆಯೆ ವಿನಹ ಇದರಿಂದ ಜನರ ಜೀವನದ ಮೇಲೆ ಆಗುವ ಪರಿಣಾಮಗಳನ್ನು ತಿಳಿದುಕೊಳ್ಳುವುದಕ್ಕೆ ಯಾವುದೇ ರೀತಿಯ ಪ್ರಯತ್ನಗಳನ್ನು ಮಾಡಿರುವುದಿಲ್ಲ. ಅಭಿವೃದ್ಧಿಗೆ ಸಂಬಂಧಪಟ್ಟಂತಹ ಪ್ರಮುಖ ಸಿದ್ಧಾಂತಗಳು ಬೃಹತ್ ಯೋಜನೆಗಳಿಂದ ಸಂತ್ರಸ್ತರಾಗುವವರ ಮುಂದಿನ ಜೀವನ, ಸ್ಥಳಾಂತರ ಮತ್ತು ಪುನರ್‌ವಸತಿಯ ಬಗ್ಗೆ ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ. ಇಂದು ಯಾವುದೇ ರೀತಿಯ ಸ್ಥಳಾಂತರದ ಸಮಸ್ಯೆಗಳನ್ನು ಸೃಷ್ಟಿಸದ ಅಭಿವೃದ್ಧಿ ಚಟುವಟಿಕೆಗಳ ಅವಶ್ಯಕತೆಯಿರುತ್ತದೆ. ಹೆಚ್ಚಿನ ಸಿದ್ಧಾಂತಗಳು ಬಂಡವಾಳವನ್ನು ತೊಡಗಿಸಿ ರಾಷ್ಟ್ರದ ಒಟ್ಟು ಆದಾಯವನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಪ್ರಕ್ರಿಯೆಗಳಲ್ಲಿ ಹೆಚ್ಚಳವನ್ನು ಸಾಧಿಸುವುದೇ ಅಭಿವೃದ್ಧಿ ಎಂಬುದಾಗಿ ಪ್ರತಿಪಾದಿಸಿರುವುದು ಕಂಡುಬರುತ್ತದೆ.

ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಜನರನ್ನು ನಿರ್ದಿಷ್ಟ ಕಾರಣಕ್ಕೆ ಇನ್ನೊಂದು ಪ್ರದೇಶಕ್ಕೆ ಹೋಗುವಂತೆ ಮಾಡುವುದೇ ಒಕ್ಕಲೆಬ್ಬಿಸುವಿಕೆ ಅಥವಾ ಸ್ಥಳಾಂತರ ಎಂದು ಕರೆಸಿಕೊಳ್ಳುತ್ತದೆ. ಹಲವಾರು ಕಾರಣಗಳಿಗೋಸ್ಕರ ಸರ್ಕಾರ ಒಂದು ಪ್ರದೇಶದ ಜನರನ್ನು ಇನ್ನೊಂದು ಪ್ರದೇಶಕ್ಕೆ ಸ್ಥಳಾಂತರ ಮಾಡಿರುವುದನ್ನು ಜಾಗತಿಕ ಮಟ್ಟದಲ್ಲಿ ಗಮನಿಸಬಹುದು. ನೈಸರ್ಗಿಕ ವಿಕೋಪಗಳಿಂದಾಗಿಯೇ ಕೋಟ್ಯಾಂತರ ಜನರನ್ನು ಸ್ಥಳಾಂತರಿಸಲಾಗಿರುತ್ತದೆ. ಅಭಿವೃದ್ಧಿ ಪ್ರೇರಿತ ಕಾರಣಗಳಿಗೋಸ್ಕರ ಜಾಗತಿಕವಾಗಿ ಕೋಟ್ಯಾಂತರ ಸಂಖ್ಯೆಯ ಜನರನ್ನು ತಮ್ಮ ಕಾನೂನು ಬದ್ಧವಾದ ನೆಲದಿಂದ ಬಲವಂತದಿಂದ ಸ್ಥಳಾಂತರಿಸಲಾಗುತ್ತದೆ. ಜಲಾಶಯ ಮತ್ತು ಅಣೆಕಟ್ಟುಗಳ ನಿರ್ಮಾಣ, ವಿದ್ಯುತ್ ಉತ್ಪಾದನೆಯ ಸ್ಥಾವರದ ನಿರ್ಮಾಣಕ್ಕಾಗಿ, ಮಿಲಿಟರಿ ನೆಲೆಗಳ ಸ್ಥಾಪನೆಗೆ, ಹೆದ್ದಾರಿ ರಚನೆಗೆ, ರೈಲು ಮಾರ್ಗ ಮತ್ತು ವಿಮಾನ ನಿಲ್ದಾಣದ ರಚನೆಗೆ, ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಜನತೆಯನ್ನು ಒಂದು ನಿರ್ದಿಷ್ಟ ಪ್ರದೇಶದಿಂದ ಅಪರಿಚಿತವಾದ ಇನ್ನೊಂದು ಪ್ರದೇಶಕ್ಕೆ ಸ್ಥಳಾಂತರಗೊಳಿಸಲಾಗುತ್ತದೆ. ಪ್ರಸ್ತುತ ಭಾರತದಾದ್ಯಂತ ನಿರ್ಮಿಸಲಾಗುತ್ತಿರುವ ವಿಶೇಷ ಆರ್ಥಿಕ ವಲಯಗಳ

ಸ್ಥಾಪನೆಗೋಸ್ಕರ ಜನರನ್ನು ಬಲವಂತದಿಂದ ಸ್ಥಳಾಂತರಿಸುವ ಪ್ರಕ್ರಿಯೆ ನಡೆಯುತ್ತಿದೆ. ಜವಾಹರ್‌ಲಾಲ್ ನೆಹರೂರವರ ಕಲ್ಪನೆಯ ಪ್ರಕಾರ, ಸ್ವಾತಂತ್ರ್ಯಾನಂತರ ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬ ಪರಿಕಲ್ಪನೆ, ನಂತರದ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಸ್ಥಳಾಂತರಕ್ಕೆ ಕಾರಣವಾಯಿತು. ಇಲ್ಲಿಯವರೆಗೆ ಅಭಿವೃದ್ಧಿಯ ನೆಪದಲ್ಲಿ ಸುಮಾರು ನಾಲ್ಕು ಕೋಟಿಯಷ್ಟು ಜನರನ್ನು ಭಾರತದಲ್ಲಿ ಸ್ಥಳಾಂತರ ಮಾಡಲಾಗಿರುತ್ತದೆ ಎಂದು ತನೇಜ ಮತ್ತು ಮಯ್ಯರ್ (2000)[43] ತಮ್ಮ ಅಧ್ಯಯನದಲ್ಲಿ ವಿವರಿಸಿದ್ದಾರೆ.

ಸ್ವತಂತ್ರ ಭಾರತದ ಸಂವಿಧಾನದ ಮೂರನೇ ಅಧ್ಯಾಯದ 12ನೇ ವಿಧಿಯಿಂದ 32ನೇ ವಿಧಿಯವರೆಗೆ ನಾಗರಿಕರಿಗೆ ನೀಡಲಾಗಿರುವ ಮೂಲಭೂತ ಹಕ್ಕುಗಳ ಬಗ್ಗೆ ಸುಧೀರ್ಘವಾಗಿ ವಿವರಿಸಲಾಗಿರುತ್ತದೆ. 1978ರಲ್ಲಿ ಸಂವಿಧಾನಕ್ಕೆ 44ನೇ ತಿದ್ದುಪಡಿಯನ್ನು ತರುವುದಕ್ಕಿಂತ ಮೊದಲು ಆಸ್ತಿಯ ಹಕ್ಕು ಕೂಡ ಮೂಲಭೂತ ಹಕ್ಕಾಗಿತ್ತು ಮತ್ತು ಇದನ್ನು ಯಾರೂ ಕೂಡಾ ಪ್ರಶ್ನಿಸುವಂತಿರಲಿಲ್ಲ. ಸಂವಿಧಾನದ ಮೂರನೇ ಅಧ್ಯಾಯದ 19ನೇ ಮತ್ತು 31ನೇ ವಿಧಿಗಳು ಆಸ್ತಿಯನ್ನು ಹೊಂದುವ, ಅನುಭವಿಸುವ ಮತ್ತು ವಿಕ್ರಯ ಮಾಡುವುದರ ಬಗ್ಗೆ ಸುದೀರ್ಘವಾಗಿ ಉಲ್ಲೇಖಿಸಿತ್ತು. ಸಂವಿಧಾನಕ್ಕೆ ತಂದ 44ನೇ ತಿದ್ದುಪಡಿಗೆ ಅನುಗುಣವಾಗಿ ಆಸ್ತಿಯ ಹಕ್ಕು ಇಂದು ಮೂಲಭೂತ ಹಕ್ಕಾಗಿ ಉಳಿದಿಲ್ಲ. ಸರಕಾರ ಸಾರ್ವಜನಿಕ ಉದ್ದೇಶಕೋಸ್ಕರ ಸಮರ್ಪಕ ಪರಿಹಾರವನ್ನು ನೀಡುವುದರ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರ ಹೊಂದಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ನ್ಯಾಯಾಲಯದಲ್ಲಿ ಸಂವಿಧಾನದ 32ನೇ ವಿಧಿಗೆ ಅನುಗುಣವಾಗಿ ಪ್ರಶ್ನಿಸುವ ಅಧಿಕಾರವನ್ನು ನಾಗರಿಕರು ಹೊಂದಿಲ್ಲ. ನೀಡಲಾದ ಪರಿಹಾರ ಮತ್ತು ಹೆಚ್ಚುವರಿ ಭೂಸ್ವಾಧೀನದ ಬಗ್ಗೆ ಮಾತ್ರ ಪ್ರಶ್ನಿಸುವ ಅಧಿಕಾರ ಸಾರ್ವಜನಿಕರಿಗೆ ಇಂದು ಇದೆ.

ಯೋಜನೆಯ ಸಂತ್ರಸ್ತರ ಪುನರ್‌ವಸತಿಗೆ ಸಂಬಂಧಪಟ್ಟಂತಹ ಎಲ್ಲಾ ರಾಷ್ಟ್ರೀಯ ನೀತಿಗಳು ಕೆಲವು ಜ್ವಲಂತ ವಿಷಯಗಳ ಬಗ್ಗೆ ಉಲ್ಲೇಖಿಸಿರುವುದಿಲ್ಲ. ನಿರ್ವಸಿತರ ಮುಂದಿನ ತಲೆಮಾರಿನ ಸಮಸ್ಯೆಗಳ ಬಗ್ಗೆ ಯಾವುದೇ ರೀತಿಯ ವಿವರಣೆಗಳು ಇದರಲ್ಲಿ ಕಂಡುಬರುವುದಿಲ್ಲ. ನಿರ್ವಸಿತರ ಪುನರ್‌ವಸತಿಯ ಬಗ್ಗೆ ಹೇಳುವ ನೀತಿ, ಯೋಜನೆಯ ಸಂತ್ರಸ್ತರ ಸಬಲೀಕರಣಕ್ಕೆ ಯಾವುದೇ ಕಾರ್ಯಕ್ರಮಗಳನ್ನು ವಿವರಿಸಿರುವುದಿಲ್ಲ. ಯೋಜನೆಗಳ ಜಾರಿಯಲ್ಲಿ ಸಂತ್ರಸ್ತರ ಪಾಲ್ಗೊಳ್ಳುವಿಕೆ ಬಗ್ಗೆ ವಿವರಣೆ ಇರುವುದಿಲ್ಲ. ಹೆಚ್ಚಿನ ಅಭಿವೃದ್ಧಿ ಯೋಜನೆಗಳು ಜಾರಿಗೆ ಬಂದ ಪ್ರದೇಶಗಳಲ್ಲಿ, ಅಲ್ಲಿನ ಬುಡಕಟ್ಟು ಜನರು ಸಂತ್ರಸ್ತರಾಗಿರುತ್ತಾರೆ. ಅವರುಗಳು ತಮ್ಮ ಪ್ರದೇಶಗಳಲ್ಲಿಯೇ ಒತ್ತೆಯಾಳುಗಳಾಗಿ ಜೀವಿಸಬೇಕಾದ ಸಂದರ್ಭ[44] ಬಂದೊದಗಿರುತ್ತವೆ. ಸ್ಥಳಾಂತರಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಕಾನೂನು ಮತ್ತು ಶಿಸ್ತಿಗೆ ಸಂಬಂಧಿಸದ ಸಮಸ್ಯೆಗಳು ಎಂದು ಉಲ್ಲೇಖಿಸಿ ದಮನ[45] ಮಾಡುವ ಪ್ರಯತ್ನ ಭೂಸ್ವಾಧೀನಕ್ಕೆ ಸಂಬಂಧಪಟ್ಟ ರಾಷ್ಟ್ರೀಯ ನೀತಿಯಿಂದಾಗಿ ಆಗಿರುತ್ತದೆ.

ಅಭಿವೃದ್ಧಿ ಯೋಜನೆಯಿಂದ ನಿರ್ವಸಿತರಾದ ಸಂತ್ರಸ್ತರಿಗೆ ಯಾವ ರೀತಿಯ ಪುನರ್‌ವಸತಿ ಮತ್ತು ಪರಿಹಾರದ ಪ್ಯಾಕೇಜ್‌ಗಳನ್ನು ನೀಡಬಹುದು ಎಂಬ ಪ್ರಶ್ನೆ ಬಂದಾಗ ಪರಿಹಾರದ ರೂಪವಾಗಿ ಹಣವನ್ನು ನೀಡಿದರೆ ಅದು ಮತ್ತಷ್ಟು ಸಮಸ್ಯೆಗಳನ್ನು ಸೃಷ್ಟಿಸುವ ಸಾಧ್ಯತೆ ಇರುತ್ತದೆ. ಸಂತ್ರಸ್ತರು ತಮ್ಮ ಮೂಲ ಉದ್ಯೋಗದಿಂದ ಇತರ ಉದ್ಯೋಗಗಳನ್ನು ತಮ್ಮ ಜೀವನಾಧಾರಕ್ಕಾಗಿ ಬದಲಾಯಿಸುವುದು ಕೂಡ ಸುಲಭದ ಮಾತಾಗಿರುವುದಿಲ್ಲ. ಭೂಮಿ ಕಳೆದುಕೊಂಡ ರೈತರಿಗೆ ಹೊಸ ಭೂಮಿಯನ್ನು ನೀಡುವುದು ಕಾರ್ಯಸಾಧುವಾಗುವುದಿಲ್ಲ. ಯಾಕೆಂದರೆ ಫಲವತ್ತಾದ ಬೆಳೆ ಬೆಳೆಯುವ ಭೂಮಿಯ ಕೊರತೆಯು ಈ ಸಾಧ್ಯತೆಯನ್ನು ಇಲ್ಲವಾಗಿಸುತ್ತದೆ. ಸ್ಥಾಪಿಸಲ್ಪಡುವ ಉದ್ದಿಮೆಗಳಲ್ಲಿ ಉದ್ಯೋಗ ನೀಡುವ ಸಾಧ್ಯತೆಗಳು ಸಂತ್ರಸ್ತರು ಕಡಿಮೆ ಕೌಶಲ್ಯ ಮತ್ತು ಹೆಚ್ಚಿನ ವಿದ್ಯಾಭ್ಯಾಸ ಹೊಂದಿಲ್ಲದೇ ಇರುವುದರಿಂದ ಸಾಧ್ಯವಾಗುವುದಿಲ್ಲ. ಯಾವುದೇ ಕಾರಣಕ್ಕೂ ಅಭಿವೃದ್ಧಿಯ ಹೆಸರಿನಲ್ಲಿ ನಿರ್ವಸಿತರಾದ ಜನರ ಆದಾಯವು ಮೊದಲಿನ ಸ್ಥಿತಿಗಿಂತ ಕಡಿಮೆಯಾಗಬಾರದು[46] ಎಂಬುದಾಗಿ ವಿಶ್ವಬ್ಯಾಂಕ್ ಅಭಿವೃದ್ಧಿ ಪ್ರಕ್ರಿಯೆಗಳಿಗೆ ಸಾಲದ ರೂಪದಲ್ಲಿ ಬಂಡವಾಳವನ್ನು ಒದಗಿಸುವ ಸಂದರ್ಭದಲ್ಲಿ ತನ್ನ ನೀತಿಯನ್ನು ಸ್ಪಷ್ಟಪಡಿಸಿರುತ್ತದೆ. ಬೃಹತ್ ಯೋಜನೆಗಳ ಸಂತ್ರಸ್ತರ ಆದಾಯ ಸ್ಥಳಾಂತರದ ನಂತರ ಹೊಸ ನೆಲೆಗಳಲ್ಲಿ ಯಾವುದೇ ಕಾರಣಕ್ಕೂ ಕಡಿಮೆಯಾಗಬಾರದೆಂಬುದಾಗಿ ರಾಷ್ಟ್ರೀಯ ಪುನರ್‌ವಸತಿಯ ಕರಡು ನೀತಿ ಮತ್ತು ನರ್ಮದಾ ನೀರು ಹಂಚಿಕೆಯ ವಿವಾದವನ್ನು ತೀರ್ಮಾನಿಸಿದ ಟ್ರಿಬ್ಯುನಲ್[47] ಕೂಡ ವಿವರವಾಗಿ ಸ್ಪಷ್ಟಪಡಿಸಿರುತ್ತದೆ. ಈ ನಿಲುವುಗಳನ್ನು ಗಮನಿಸಿದಾಗ, ಸಂತ್ರಸ್ತ ಜನರ ಜೀವನಮಟ್ಟವನ್ನು ವ್ಯಾಖ್ಯಾನಿಸುವುದು ಮತ್ತು ನಿರ್ಧರಿಸುವ ಮಾಪನಗಳು ಯಾವುದು ಎಂಬುವುದು ಸ್ಪಷ್ಟವಾಗುವುದಿಲ್ಲ. ಪ್ರಸ್ತುತ ಯೋಜನೆಯ ಸಂತ್ರಸ್ತರುಗಳಿಗೆ ಯಾವ ರೀತಿಯ ಪರಿಹಾರವನ್ನು ನೀಡಬೇಕು ಎಂಬುದಾಗಿ ತೀರ್ಮಾನಿಸುವ ಅಧಿಕಾರವನ್ನು ಸರಕಾರ ಅಥವಾ ಯೋಜನೆಗಳನ್ನು ಜಾರಿಗೆ ತರುವ ಪ್ರಾಧಿಕಾರಗಳಿಗೆ ನೀಡಲಾಗಿರುತ್ತದೆ. ಯೋಜನೆಯಿಂದ ತೊಂದರೆಗೊಳಗಾದ ಜನರಿಗೆ ಯಾವ ರೀತಿಯ ಪುನರ್‌ವಸತಿ ಪ್ಯಾಕೇಜ್‌ಗಳನ್ನು ನೀಡಬೇಕು ಎಂದು ನಿರ್ಧರಿಸಲು ಬಿಡುವುದು ಸಂಪೂರ್ಣವಾಗಿ ಹೊಸ ದೃಷ್ಟಿಕೋನವಾಗುತ್ತದೆ. ಇದರ ಪ್ರಕಾರ ಸಂತ್ರಸ್ತರು ಮತ್ತು ಯೋಜನೆಯ ಪ್ರವರ್ತಕರ ನಡುವೆ ಪುನರ್‌ವಸತಿಗೆ ಸಂಬಂಧಪಟ್ಟಂತೆ ಒಮ್ಮತವಾಗುವ ಪ್ಯಾಕೇಜ್ ಒಪ್ಪಿಗೆಯಾಗುವವರೆಗೆ ಯೋಜನೆಯನ್ನು ಜಾರಿಗೆ ತರದೆ ಇರುವುದು ಹೊಸ ಪ್ರಯೋಗವಾಗುತ್ತದೆ. ಪುನರ್‌ವಸತಿಗೆ ಸಂಬಂಧಪಟ್ಟ ಒಂದು ಹೊಸ ದೃಷ್ಟಿಕೋನ ಮಾತ್ರ ಪ್ರಚಲಿತದಲ್ಲಿರುವ ನೀತಿಯ ಇತಿಮಿತಿಗಳಿಂದ ಹೊರಬರಲು ಸಾಧ್ಯವಾಗಬಹುದು ಎಂದು ಅಭಿಪ್ರಾಯಪಡಬಹುದು.

3. ವಿಶೇಷ ಆರ್ಥಿಕ ವಲಯಗಳು

ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸುವುದರ ಮೂಲಕ ಬೃಹತ್ ಕೈಗಾರಿಕಾ ಸಂಕೀರ್ಣಗಳನ್ನು ರಚಿಸಿ ರಾಷ್ಟ್ರದ ಒಟ್ಟು ಅಭಿವೃದ್ಧಿಯನ್ನು ಸಾಧಿಸಬಹುದು ಎಂಬುವುದನ್ನು ಹೆಚ್ಚಿನ ರಾಷ್ಟ್ರಗಳು ಪರಿಭಾವಿಸಿಕೊಂಡಿವೆ.

ಭಾರತದಲ್ಲಿ 2005ರ ನಂತರ ಈ ಅಭಿವೃದ್ಧಿಯ ಮಾದರಿಯನ್ನು ಒಪ್ಪಿಕೊಂಡು ರಾಷ್ಟ್ರಾದ್ಯಂತ ವಿಶೇಷ ಆರ್ಥಿಕ ವಲಯಗಳನ್ನು ನಿರ್ಮಿಸಿ ರಫ್ತಿನ ಪ್ರಮಾಣವನ್ನು ಹಾಗೂ ರಾಷ್ಟ್ರದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬ ನಂಬಿಕೆಯ ಆಧಾರದಲ್ಲಿ ಈ ಪ್ರಕ್ರಿಯೆಯು ಆರಂಭವಾಯಿತು. ಇದರಿಂದಾಗಿ ಲಕ್ಷಾಂತರ ಕೃಷಿ ಭೂಮಿಗಳು ಸ್ವಾಧೀನಪಡಿಸಲ್ಪಟ್ಟು ಕೃಷಿ ಚಟುವಟಿಕೆಗಳ ಅವನತಿಗೆ ಹಾಗೂ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ದುಃಸ್ಥಿತಿಗೆ ಕಾರಣವಾಯಿತು. ಪ್ರಸ್ತುತ ಅಧ್ಯಯನವು ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳಿಗೆ ಸಂಬಂಧಪಟ್ಟದ್ದಾದುದರಿಂದ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಯ ನೀತಿ, ಅವುಗಳು ಬೆಳೆದು ಬಂದ ಬಗೆ ಹಾಗೂ ಸೃಷ್ಟಿಸಿರುವ ಸಮಸ್ಯೆಗಳ ಬಗ್ಗೆ ಅರ್ಥೈಸಿಕೊಳ್ಳುವುದು ಅಗತ್ಯವಾಗಿರುತ್ತದೆ.

ಒಂದು ರಾಷ್ಟ್ರದ ಸಾಮಾನ್ಯ ಆರ್ಥಿಕ ಕಾನೂನಿಗಿಂತ ಭಿನ್ನವಾಗಿ ಉದಾರವಾದಿ ಆರ್ಥಿಕ ಕಾನೂನುಗಳನ್ನು ಹೊಂದಿರುವ ಭೌಗೋಳಿಕ ಭೂಪ್ರದೇಶಗಳನ್ನು ವಿಶೇಷ ಆರ್ಥಿಕ ವಲಯಗಳು ಎನ್ನುತ್ತಾರೆ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು, ತೆರಿಗೆ ಹಾಗೂ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ವಿದೇಶೀ ಬಂಡವಾಳ ಮತ್ತು ತಂತ್ರಜ್ಞಾನಗಳನ್ನು ಆಕರ್ಷಿಸಲು, ವಿಶೇಷ ವಿನಾಯಿತಿ ಹಾಗೂ ಪ್ರೋತ್ಸಾಹಗಳನ್ನು ಹೊಂದಿರುವ, ರಾಷ್ಟ್ರಗಳ ವ್ಯಾಪಾರ ಸಾಮರ್ಥ್ಯವನ್ನು ಹೆಚ್ಚಿಸಲು ಉಪಯೋಗಿಸಲ್ಪಡುವ ಸಾಧನಗಳೆಂದು ಅವುಗಳನ್ನು ವಿವರಿಸಲಾಗಿರುತ್ತದೆ. ಪ್ರಸ್ತುತ ಜಗತ್ತಿನಾದ್ಯಂತ ಸುಮಾರು ಮೂರು ಸಾವಿರ ವಿಶೇಷ ಆರ್ಥಿಕ ವಲಯಗಳು ಕಾರ್ಯಾಚರಿಸುತ್ತಿದ್ದು, ಆರುನೂರು ಮಿಲಿಯ ಅಮೆರಿಕನ್ ಡಾಲರುಗಳನ್ನು ಬಂಡವಾಳವಾಗಿ ತೊಡಗಿಸಿಕೊಂಡಿದ್ದು, ರಾಷ್ಟ್ರಗಳ ರಫ್ತು ವ್ಯವಸ್ಥೆಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಸರಿಸುಮಾರು ಐವತ್ತು ಮಿಲಿಯ ಉದ್ಯೋಗಗಳನ್ನು ಸೃಷ್ಟಿಸಿರುತ್ತದೆ.[48] ತನ್ನ ವಿಶೇಷ ಸೌಲಭ್ಯಗಳ ಮುಖಾಂತರ ವಿಶೇಷ ಆರ್ಥಿಕ ವಲಯಗಳು ವಿದೇಶಿ ವಿನಿಮಯ, ಬಂಡವಾಳಗಳ ಆಕರ್ಷಣೆ ಹಾಗೂ ಹೆಚ್ಚಿನ ಉದ್ಯೋಗಗಳ ಸೃಷ್ಟಿಗೆ ಕಾರಣವಾಗಿ ಆಧುನಿಕ ತಂತ್ರಜ್ಞಾನದ ಬೆಳವಣಿಗೆ ಹಾಗೂ ಅತ್ಯುತ್ತಮ ಮೂಲಭೂತ ಸೌಲಭ್ಯಗಳ ರಚನೆಗೆ ಕಾರಣವಾಗಿರುತ್ತದೆ.

ತನ್ನ ಆಮದು ರಫ್ತು ನೀತಿಗೆ (ಎಕ್ಸಿಮ್) ಅನುಗುಣವಾಗಿ ಏಪ್ರಿಲ್, 2000ದ ಇಸವಿಯಲ್ಲಿ ಪ್ರಥಮವಾಗಿ ವಿಶೇಷ ಆರ್ಥಿಕ ವಲಯಕ್ಕೆ ಸಂಬಂಧಪಟ್ಟ ನೀತಿಗಳನ್ನು ಭಾರತದಲ್ಲಿ ಕೇಂದ್ರ ಸರಕಾರ ಜಾರಿಗೆ ತಂದಿರುತ್ತದೆ. ವಿದೇಶಿ ಬಂಡವಾಳವನ್ನು ಉತ್ತೇಜಿಸಿ, ರಾಷ್ಟ್ರದಿಂದ ರಫ್ತಿನ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ, ಸ್ವದೇಶಿ ಉದ್ಯಮಗಳು ಹಾಗೂ ಉತ್ಪನ್ನಗಳು ಜಾಗತಿಕ ಮಟ್ಟದ ಗುಣಮಟ್ಟವನ್ನು ಹೊಂದಿ ಇತರ ರಾಷ್ಟ್ರಗಳ ಜೊತೆಯಲ್ಲಿ ಸಮರ್ಥವಾಗಿ ಸ್ಪರ್ಧಿಸುವ ಸಲುವಾಗಿ ಕೇಂದ್ರ ಸರಕಾರ ಏಪ್ರಿಲ್, 2000ದ ಇಸವಿಯಲ್ಲಿ ವಿಶೇಷ ಆರ್ಥಿಕ

ವಲಯಕ್ಕೆ ಸಂಬಂಧಿಸಿದ ನೀತಿಗಳನ್ನು ಪ್ರಕಟಿಸಿತು. ಈ ಭೂಪ್ರದೇಶಗಳು ವ್ಯಾಪಾರ ಸಂಬಂಧಿ ವ್ಯವಹಾರಗಳು, ತೆರಿಗೆ ಹಾಗೂ ಇತರ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ವಿದೇಶಿ ನೆಲೆಗಳಿಗೆ ಸಮಾನವಾಗಿರುತ್ತದೆಯೆಂದು ವಿಶೇಷ ಆರ್ಥಿಕ ವಲಯದ ನೀತಿ ವಿವರಿಸುತ್ತದೆ. ರಫ್ತು ವಹಿವಾಟುಗಳಿಗೆ ಸಂಬಂಧಪಟ್ಟಂತೆ ಅನಾನುಕೂಲತೆಗಳನ್ನು ತಪ್ಪಿಸಿ, ಅನೌಪಚಾರಿಕ ವಾತಾವರಣವನ್ನು ಸೃಷ್ಟಿಸಿ ವಿಶೇಷ ಆರ್ಥಿಕ ವಲಯ ಪ್ರದೇಶಗಳಲ್ಲಿ ತಮ್ಮ ಉತ್ಪಾದನಾ ಘಟಕಗಳನ್ನು ಆರಂಭಿಸಿ ಉತ್ಪಾದನೆ, ವಹಿವಾಟು ಹಾಗೂ ಸೇವೆಯನ್ನು ಹೆಚ್ಚಿಸಲು ಈ ನೀತಿಗಳು ಅವಕಾಶ ಮಾಡಿಕೊಡುತ್ತವೆ. ಈ ಪ್ರದೇಶಗಳಲ್ಲಿ ಕಾರ್ಯಾಚರಿಸುವ ಉದ್ಯಮ ಘಟಕಗಳು ವಿದೇಶೀ ವಿನಿಮಯಗಳನ್ನು ಗಳಿಸುವ ಸಾಮರ್ಥ್ಯವನ್ನು ಹೊಂದಿರಬೇಕಾಗಿರುತ್ತದೆ. ಆದರೆ ಇವುಗಳಿಗೆ ಕನಿಷ್ಠ ಇಷ್ಟೇ ಪ್ರಮಾಣದಲ್ಲಿ ವಿದೇಶೀ ವಿನಿಮಯ ಆದಾಯವನ್ನು ಹೊಂದಿರಬೇಕು ಎಂಬ ನಿಯಮಗಳು ಅನ್ವಯಿಸುವುದಿಲ್ಲ. ಆಂತರಿಕ ಮಾರುಕಟ್ಟೆಯಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವುಗಳು ಪ್ರಸ್ತುತ ರಾಷ್ಟ್ರದಲ್ಲಿ ಜಾರಿಯಲ್ಲಿರುವ ಆಮದು ನೀತಿ ಹಾಗೂ ಪೂರ್ಣ ಪ್ರಮಾಣದಲ್ಲಿ ಕಸ್ಟಮ್ಸ್ ತೆರಿಗೆಯನ್ನು ತೆರಬೇಕೆಂಬ ನೀತಿಯನ್ನು ಅಳವಡಿಸಲಾಗಿರುತ್ತದೆ. ವಿಶೇಷ ಆರ್ಥಿಕ ವಲಯಗಳನ್ನು ಸಾರ್ವಜನಿಕ, ಖಾಸಗಿ, ಸರಕಾರ ಮತ್ತು ಖಾಸಗಿ ಕ್ಷೇತ್ರಗಳ ಜಂಟಿ ಹೂಡಿಕೆಯಿಂದ ಆರಂಭಿಸಬಹುದು ಎಂಬುದಾಗಿ ವಿವರಿಸುವ ನೀತಿಯು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ರಫ್ತು ಉದ್ಯಮ ವಲಯಗಳನ್ನು ಮುಂದಕ್ಕೆ ವಿಶೇಷ ಆರ್ಥಿಕ ವಲಯಗಳನ್ನಾಗಿ ಪರಿವರ್ತಿಸುವ ಸಾಧ್ಯತೆಗಳನ್ನು ವಿವರಿಸುತ್ತದೆ. ವಿಶೇಷ ಆರ್ಥಿಕ ವಲಯದ ಕಾಯಿದೆಯು ಭಾರತದಲ್ಲಿ ವಿದೇಶೀ ಉದ್ಯಮಗಳ ಬಂಡವಾಳಗಳನ್ನು ತೊಡಗಿಸಿಕೊಳ್ಳುವ ಉದ್ದೇಶಗಳನ್ನು ಮಾತ್ರ ಹೊಂದಿರದೇ ಸ್ಥಳೀಯ ಉದ್ದಿಮೆದಾರರು ವಿದೇಶಿ ಪಾಲುದಾರಿಕೆಯ ಮೂಲಕ ಸ್ಪರ್ಧಾತ್ಮಕ ದರದಲ್ಲಿ ರಫ್ತು ಮಾಡುವ ಪ್ರಕ್ರಿಯೆಗೆ ಬೆಂಬಲವನ್ನು ನೀಡುವ ಉದ್ದೇಶವನ್ನೂ ಹೊಂದಿರುತ್ತದೆ. ಇತರ ವ್ಯಾಪಾರಿ ವಲಯಗಳಿಗಿಂತ ಭಿನ್ನವಾದ ಉದಾರವಾದಿ ತೆರಿಗೆ ನೀತಿಗಳು, ವಿನಾಯಿತಿ, ಇತರ ಕೈಗಾರಿಕಾಸ್ನೇಹೀ ಸೌಲಭ್ಯಗಳನ್ನು ಸರಕಾರ ನೀಡುತ್ತದೆ. ಮುಕ್ತ ವ್ಯಾಪಾರ ನೀತಿ, ಕೈಗಾರಿಕೆಗಳನ್ನು ಆರಂಭಿಸಲು ಬೇಕಾದ ನಿರಾಕ್ಷೇಪಣಾ ಪ್ರಮಾಣಪತ್ರಗಳನ್ನು ಪಡೆಯುವಲ್ಲಿ ಇರುವ ಅಡೆತಡೆಗಳನ್ನು ಮತ್ತು ಅವುಗಳನ್ನು ಆರಂಭಿಸುವಲ್ಲಿ ಇರುವ ಸುದೀರ್ಘ ಪ್ರಕ್ರಿಯೆಯನ್ನು ಇಲ್ಲವಾಗಿಸಿ ಬಹುರಾಷ್ಟ್ರೀಯ ಕಂಪೆನಿಗಳು ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳವನ್ನು ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಕೈಗಾರಿಕೆಗಳನ್ನು ಆರಂಭಿಸಲು ಸರಕಾರದ ಅನುಮೋದನೆಯನ್ನು ಪಡೆಯಲು ಏಕಗವಾಕ್ಷಿ ಯೋಜನೆಯನ್ನು ಆರಂಭಿಸಿದ್ದು ಈ ಪ್ರಕ್ರಿಯೆ ಪಾರದರ್ಶಕತ್ವಕ್ಕೆ ಆದ್ಯತೆಯನ್ನು ನೀಡಿರುತ್ತದೆ.

ಏಪ್ರಿಲ್, 2000ದಂದು ಭಾರತದಲ್ಲಿ ವಿಶೇಷ ಆರ್ಥಿಕ ವಲಯ ನೀತಿಯನ್ನು ಪ್ರಥಮವಾಗಿ ಅಳವಡಿಸಲಾಯಿತು. ಏಷ್ಯಾ ಖಂಡದಲ್ಲಿ ರಫ್ತು ವ್ಯವಹಾರಗಳಲ್ಲಿ ಹೆಚ್ಚಳವನ್ನು ಸಾಧಿಸಲು ರಫ್ತು ಆಧಾರಿತ

ವಲಯಗಳ ಪ್ರಾಮುಖ್ಯತೆಯನ್ನು ಮನಗಂಡ ಪ್ರಥಮ ರಾಷ್ಟ್ರ ಭಾರತವಾಗಿರುತ್ತದೆ. 1965ರಲ್ಲಿ ಏಷ್ಯಾದ ಪ್ರಥಮ ರಫ್ತು ಆಧಾರಿತ ವಲಯ ಮಹಾರಾಷ್ಟ್ರದ ಖಂಡ್ಲಾದಲ್ಲಿ ಆರಂಭವಾಯಿತು. ಜಾಗತಿಕ ಮಟ್ಟದ ಮೂಲಭೂತ ಸೌಲಭ್ಯಗಳ ಕೊರತೆ, ಕೈಗಾರಿಕೆಗಳನ್ನು ಆರಂಭಿಸಲು ಇದ್ದಂತಹ ದೀರ್ಘವಾದ ಪ್ರಕ್ರಿಯೆಗಳನ್ನು ತಪ್ಪಿಸಲು, ಸುಸ್ಥಿರ ಆರ್ಥಿಕ ಕಾನೂನುಗಳ ಅಲಭ್ಯತೆಯಿಂದಾಗಿ ವಿದೇಶಿ ಬಂಡವಾಳವನ್ನು ಭಾರತದಲ್ಲಿ ತೊಡಗಿಸುವಂತೆ ಪ್ರೇರೇಪಿಸಲು ವಿಶೇಷ ಆರ್ಥಿಕ ವಲಯಗಳ ರಚನೆಯ ನೀತಿಯನ್ನು ಕೇಂದ್ರ ಸರಕಾರ ಏಪ್ರಿಲ್ 2000ದ ಇಸವಿಯಲ್ಲಿ ಪ್ರಕಟಿಸಿತು.

ಆಗಿನ ಕೇಂದ್ರ ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾಗಿದ್ದ ಮುರಸೋಳಿ ಮಾರನ್‌ರವರು, ಚೀನಾದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ವಿಶೇಷ ಆರ್ಥಿಕ ವಲಯಗಳ ಕಾರ್ಯಾಚರಣೆಯ ಶೈಲಿ ಮತ್ತು ಅವುಗಳು ರಾಷ್ಟ್ರದ ವಿದೇಶಿ ವಿನಿಮಯ ಹಾಗೂ ರಫ್ತು ಚಟುವಟಿಕೆಗಳ ಅಭಿವೃದ್ಧಿಗೆ ನೀಡಿದ್ದ ಕೊಡುಗೆಗಳನ್ನು ಗಮನಿಸಿ, ಪ್ರಭಾವಿತರಾಗಿ ಭಾರತದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಚೀನಾದ ಮಾದರಿಯನ್ನು ಜಾರಿಗೆ ತರುವ ಉದ್ದೇಶದಿಂದ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗೆ ಅವಕಾಶ ಒದಗಿಸಿದರು. ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು, ಜಾಗತಿಕ ಗುಣಮಟ್ಟದ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಆಕರ್ಷಕ ಆರ್ಥಿಕ ನೀತಿ, ಕೊಡುಗೆಗಳನ್ನು ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಕನಿಷ್ಟ ನೀತಿಗಳಲ್ಲಿ ಒದಗಿಸುವ ಉದ್ದೇಶದಿಂದ ವಿಶೇಷ ಆರ್ಥಿಕ ವಲಯದ ಕಾಯಿದೆ 01/11/2000 ದಿಂದ 9/2/2006ರವರೆಗೆ ವಿದೇಶಿ ವ್ಯಾಪಾರ ನೀತಿ ಹಾಗೂ ಹಣಕಾಸಿನ ಕೊಡುಗೆಗಳೊಂದಿಗೆ ಅಸ್ತಿತ್ವದಲ್ಲಿದ್ದ ಕಾಯಿದೆಗಳಿಗೆ ಅನುಗುಣವಾಗಿ ನೀಡಲಾಯಿತು.

ಹೂಡಿಕೆದಾರರಲ್ಲಿ ವಿಶ್ವಾಸವನ್ನು ಮೂಡಿಸುವುದಕ್ಕಾಗಿ ಹಾಗೂ ವಿಶೇಷ ಆರ್ಥಿಕ ವಲಯದ ನೀತಿಯ ಬಗೆಗಿನ ಸರಕಾರದ ಬದ್ಧತೆಯನ್ನು ವ್ಯಕ್ತಪಡಿಸುವುದಕ್ಕಾಗಿ, ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು, ಹಾಗೂ ಹೂಡಿಕೆದಾರರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ಪ್ರೋತ್ಸಾಹಿಸುವುದಕ್ಕಾಗಿ ವಿಶೇಷ ಆರ್ಥಿಕ ವಲಯಗಳ ಕಾಯಿದೆಯ ಕರಡು ಮಸೂದೆಯನ್ನು ರಚಿಸಲಾಯಿತು. ತದನಂತರ ಈ ಕರಡು ಮಸೂದೆಯ ಮೇಲೆ ಎಂಟುನೂರಕ್ಕಿಂತ ಹೆಚ್ಚು ಸಲಹೆಗಳನ್ನು ಪಡೆದು ಹಿರಿಯ ಆಡಳಿತಾಧಿಕಾರಿಗಳು, ಕೈಗಾರಿಕೋದ್ಯಮಿಗಳು ಮತ್ತು ಆರ್ಥಿಕ ತಜ್ಞರ ಸತತ ಸಮಾಲೋಚನೆಗೆ ಒಳಪಟ್ಟು, ಅಂತಿಮ ರೂಪವನ್ನು ಪಡೆದು ಸಂಸತ್ತಿನಲ್ಲಿ 2005ರಲ್ಲಿ ಅನುಮೋದನೆಗೊಂಡು, ಜೂನ್ 23, 2005ರಂದು ರಾಷ್ಟ್ರಪತಿಗಳ ಅಂಕಿತದೊಂದಿಗೆ ಕಾಯಿದೆಯಾಯಿತು. ವಿಶೇಷ ಆರ್ಥಿಕ ವಲಯದ ಕಾಯಿದೆ ಮತ್ತು ನೀತಿಗಳ ಬಗೆಗೆ ಕೇಂದ್ರ ಸರಕಾರವು 2006 ಫೆಬ್ರವರಿ 10ರಂದು ತನ್ನ ಅಂತಿಮ ಅಧಿಸೂಚನೆಯನ್ನು ಹೊರಡಿಸಿತು. ರಫ್ತು ಆಧಾರಿತ ವಲಯಗಳು ಕೈಗಾರಿಕಾ ಸಂಕೀರ್ಣಗಳಾಗಿದ್ದರೆ, ವಿಶೇಷ ಆರ್ಥಿಕ ವಲಯಗಳು ಕೈಗಾರಿಕಾ

ನಗರ ಪ್ರದೇಶಗಳಾಗಿದ್ದು, ವಸತಿ, ರಸ್ತೆ, ಬಂದರು, ದೂರಸಂಪರ್ಕ, ಮನೋರಂಜನಾ ವ್ಯವಸ್ಥೆಗಳು ಮತ್ತು ವಾಣಿಜ್ಯ ಸಂಕೀರ್ಣಗಳನ್ನು ಒಳಗೊಂಡಿದ್ದು ಒಂದು ಆಧುನಿಕ ನಗರ ಹೊಂದಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ವಿಶೇಷ ಆರ್ಥಿಕ ವಲಯ ಕಾಯಿದೆಯು ರಫ್ತು ಚಟುವಟಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸಿ ವಿದೇಶೀ ಹೂಡಿಕೆಯಲ್ಲಿ ಭಾರಿ ಪ್ರಮಾಣದ ಏರಿಕೆಗೆ ಕಾರಣವಾಗುತ್ತದೆಯೆಂದು ನಿರೀಕ್ಷಿಸಲಾಗಿರುತ್ತದೆ. ಭಾರತದಲ್ಲಿನ ಕೈಗಾರಿಕಾ ಚಟುವಟಿಕೆಗಳ ಅಭಿವೃದ್ಧಿಗೆ ಜಾರಿಗೆ ತಂದ ಒಂದು ಅತ್ಯುತ್ತಮ ಕಾಯಿದೆ ಇದೆಂದು ಉಲ್ಲೇಖಿಸಲಾಗಿರುತ್ತದೆ. ಖಾಸಗಿ ಮತ್ತು ಸರಕಾರಿ ಭಾಗೀದಾರರೊಂದಿಗೆ ಜಾಗತಿಕ ಮಟ್ಟದ ಮೂಲಭೂತ ಸೌಲಭ್ಯಗಳು, ಆಂತರಿಕ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರೀ ಹೂಡಿಕೆಗೆ ಕಾರಣವಾಗಿ ಆರ್ಥಿಕಾಭಿವೃದ್ಧಿಗೆ, ಹೊಸ ಉದ್ಯೋಗಗಳ ಸೃಷ್ಟಿಗೆ, ರಫ್ತು ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶವನ್ನು ವಿಶೇಷ ಆರ್ಥಿಕ ವಲಯದ ಹೊಸ ನೀತಿಯು[49]ಹೊಂದಿರುತ್ತದೆ.

ಮೇ 15, 2015ರವರೆಗೆ ಕೇಂದ್ರ ಸರಕಾರವು ರಾಷ್ಟ್ರಾದ್ಯಂತ ಒಟ್ಟು 734 ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗೆ ತನ್ನ ಅನುಮೋದನೆಯನ್ನು ನೀಡಿದ್ದು ಇವುಗಳಲ್ಲಿ ಕರ್ನಾಟಕದ 76 ವಿಶೇಷ ಆರ್ಥಿಕ ವಲಯಗಳು ಒಳಗೊಂಡಿದ್ದು, ವಿವಿಧ ಪ್ರದೇಶಗಳಲ್ಲಿ 18 ವಲಯಗಳು ಕಾರ್ಯಾರಂಭವನ್ನು ಮಾಡಿರುತ್ತವೆ[50]. ಕೇಂದ್ರ ಸರಕಾರದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ನವಂಬರ್ 2007 ರಲ್ಲಿ 'ಮಂಗಳೂರು ವಿಶೇಷ ಆರ್ಥಿಕ ವಲಯ'ದ ಸ್ಥಾಪನೆಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿತು. ಈ ಯೋಜನೆಗೆ ಒಟ್ಟು 3985 ಎಕ್ರೆ ಭೂಸ್ವಾಧೀನದ ಅವಶ್ಯಕತೆ ಇದ್ದು, ಈಗಾಗಲೇ 2379 ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ[51]. ಈ ಭೂಮಿಯಲ್ಲಿ ರಫ್ತು ಆಧಾರಿತ ಬೃಹತ್ ಕೈಗಾರಿಕೆಗಳು ಸ್ಥಾಪನೆಯಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಮಂಗಳೂರು ಗ್ರಾಮಾಂತರ ತಾಲೂಕುಗಳ ವ್ಯಾಪ್ತಿಯಲ್ಲಿರುವ ಪೆರ್ಮುದೆ, ಬಜ್ಪೆ, ಕಳವಾರು, ತೆಂಕ ಎಕ್ಕಾರು, ದೇಲಂತಬೆಟ್ಟು ಮತ್ತು ಕುತ್ತೆತ್ತೂರು ಗ್ರಾಮಗಳ ವ್ಯಾಪ್ತಿಯಲ್ಲಿ ವಿಶೇಷ ಆರ್ಥಿಕ ವಲಯ ಅಸ್ತಿತ್ವಕ್ಕೆ ಬಂದಿರುತ್ತದೆ. ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗೆ ಪ್ರಸ್ತುತ ಯೋಗ್ಯ ಭೂಮಿಗಳು ದೊರಕದೇ ಇರುವ ಕಾರಣಗಳಿಗಾಗಿ ಮತ್ತು ಸರಕಾರದ ಬಳಿ ಬೃಹತ್ ಕೈಗಾರಿಕಾ ಸಂಕೀರ್ಣಗಳ ಸ್ಥಾಪನೆಗಾಗಿ ಸಾಕಷ್ಟು ಪ್ರಮಾಣದಲ್ಲಿ ಭೂಮಿ ಲಭ್ಯವಿಲ್ಲದೇ ಇರುವುದರಿಂದ ಲಕ್ಷಾಂತರ ಎಕ್ರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸುವುದು ಅನಿವಾರ್ಯವಾಗುತ್ತದೆ. ಹಲವಾರು ದಶಕಗಳಿಂದ ಕೃಷಿಯನ್ನೇ ತಮ್ಮ ಜೀವನಾಧಾರವಾಗಿ ನಂಬಿಕೊಂಡು ಬಂದಂತಹ ಲಕ್ಷಾಂತರ ಕೃಷಿಕರ ಭೂಮಿಗಳನ್ನು ವಿಶೇಷ ಆರ್ಥಿಕ ವಲಯಗಳ ಸ್ಥಾಪನೆ ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ಸ್ವಾಧೀನಪಡಿಸುವುದರಿಂದ ಸಹಜವಾಗಿ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ.

1990ರ ನಂತರದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಪ್ರಕ್ರಿಯೆಯಿಂದಾಗಿ ಹೆಚ್ಚು ಬಂಡವಾಳವನ್ನು ತೊಡಗಿಸಿ ಬೃಹತ್ ಕೈಗಾರಿಕೆಗಳು ಮತ್ತು ವಿಶೇಷ ಆರ್ಥಿಕ ವಲಯಗಳನ್ನು

ಸ್ಥಾಪಿಸುವುದರ ಮೂಲಕ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬುದಾಗಿ ಭಾವಿಸಿಕೊಳ್ಳಲಾಗಿದೆ. ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಭೂಮಿ ಮತ್ತು ಇತರ ಮೂಲಸೌಕರ್ಯಗಳು ಅನಿವಾರ್ಯವಾಗುತ್ತದೆ. ಇದರಿಂದಾಗಿ ಬೃಹತ್ ಪ್ರಮಾಣದ ಸರಕಾರಿ ಪ್ರಾಯೋಜಿತ ಸ್ಥಳಾಂತರಗಳು ನಡೆಯುತ್ತಿದೆ. ಆದುದರಿಂದ ಪ್ರಸ್ತುತ ಅಧ್ಯಯನದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಸ್ಥಳಾಂತರ ನಡೆಸುವುದರ ಸಾಧಕ-ಬಾಧಕಗಳು ಮತ್ತು ಪರಿಣಾಮಗಳ ಬಗ್ಗೆ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಿಂದಾಗಿ ಭೂಮಿಯನ್ನು ಕಳೆದುಕೊಂಡ ಜನರ ಅಭಿಪ್ರಾಯಗಳನ್ನು ಸಂಗ್ರಹಿಸಿ ಈ ರೀತಿಯ ಅಭಿವೃದ್ಧಿ ಪ್ರಕ್ರಿಯೆಗಳು ಒಟ್ಟು ಸಮಾಜದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ, ಇಲ್ಲಿನ ಯೋಜನೆಯಿಂದಾಗಿನ ಸಂತ್ರಸ್ತರ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಬಗೆಹರಿಸಲು ಪರಿಹಾರೋಪಾಯಗಳನ್ನು ಕಂಡುಕೊಳ್ಳಬಹುದು ಎಂಬುದರ ಕುರಿತಂತೆ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಮೈಕೆಲ್ ಸೆರ್ನ್ನಾರವರು ತಮ್ಮ ಅಧ್ಯಯನದಲ್ಲಿ ವಿವರಿಸಿರುವಂತೆ ಸಂತ್ರಸ್ತರನ್ನು ಮತ್ತಷ್ಟು ದುರ್ಬಲರನ್ನಾಗಿಸುವ ಅಂತರ್‌ಸಂಬಂಧಿತ ಎಂಟು ಸಮಸ್ಯೆಗಳನ್ನು ಮಾದರಿಯಾಗಿರಿಸಿಕೊಂಡು ಮಂಗಳೂರು ವಿಶೇಷ ಆರ್ಥಿಕ ವಲಯದಿಂದ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರಾಗಿರುವವರಿಗೆ ಹೋಲಿಸಿ ಅವುಗಳ ನೈಜತೆಯನ್ನು ಪ್ರಸ್ತುತ ಅಧ್ಯಯನದಲ್ಲೆ ವಿಶ್ಲೇಷಿಸಲಾಗಿರುತ್ತದೆ.

ಮೈಕೆಲ್ ಸೆರ್ನ್ನಾರವರು ಭೂಸ್ವಾಧೀನದಿಂದ ಸಂತ್ರಸ್ತರಾದವರು ಜಗತ್ತಿನ ಎಲ್ಲಾ ಪ್ರದೇಶಗಳಲ್ಲಿ ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳು ಎಂಬುದಾಗಿ ಕಂಡುಕೊಂಡಿರುವ ಫಲಿತಗಳು ಈ ಕೆಳಗಿನಂತಿವೆ:

- ಭೂರಹಿತರಾಗುವುದು – ಭೂಸ್ವಾಧೀನದ ನಂತರ, ಅದರ ಮೇಲೆ ಜೀವನಾಧಾರಕ್ಕಾಗಿ ನಿಂತಿರುವವರು ಅಸಹಾಯಕರಾಗುತ್ತಾರೆ. ಭೂಮಿಯಲ್ಲಿ ಕೃಷಿಯನ್ನು ನಡೆಸಿ ಬದುಕುತ್ತಿರುವವವರು ಇತರ ಕೌಶಲ್ಯಗಳು ಗೊತ್ತಿಲ್ಲದೆ ಇರುವುದರಿಂದ ಕಷ್ಟ ಅನುಭವಿಸುವ ಪರಿಸ್ಥಿತಿ ಬರುತ್ತದೆ. ತಲತಲಾಂತರದಿಂದ ಕೃಷಿಯನ್ನು ಜೀವನಕ್ಕಾಗಿ ಅವಲಂಬಿಸಿದವರು ಭೂಮಿಯನ್ನು ಕಳೆದುಕೊಂಡು ಅತಂತ್ರರಾಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.
- ಉದ್ಯೋಗ ನಷ್ಟ – ಭೂರಹಿತ ಕೃಷಿ ಕಾರ್ಮಿಕರು ಇತರರ ಭೂಮಿಯಲ್ಲಿ ಕೂಲಿ ಮಾಡಿ ಬದುಕುವುದರಿಂದ, ಹೊಸ ರೀತಿಯ ಉದ್ಯೋಗವನ್ನು ಮಾಡುವುದಕ್ಕೆ ಯಾವುದೇ ರೀತಿಯ ವಿಶೇಷ ಕೌಶಲ್ಯವನ್ನು ಹೊಂದಿಲ್ಲದಿರುವುದರಿಂದ ಅವರ ಜೀವನ ಅಸಹನೀಯವಾಗುತ್ತದೆ. ಹೊಸ ಉದ್ಯೋಗವನ್ನು ಸೃಷ್ಟಿ ಮಾಡುವುದಕ್ಕೆ ಬಂಡವಾಳದ ಅವಶ್ಯಕತೆ ಇರುವುದರಿಂದ ಅದು ಸಾಧ್ಯವಾಗುವುದಿಲ್ಲ. ಕೃಷಿಯನ್ನೇ ತಮ್ಮ ಜೀವನಾಧಾರವಾಗಿ ನಂಬಿಕೊಂಡವರು ತಮ್ಮ ಸಾಂಪ್ರದಾಯಿಕ ಉದ್ಯೋಗವನ್ನು ಕಳೆದುಕೊಂಡು ನಿರುದ್ಯೋಗಿಗಳಾಗುತ್ತಾರೆ.

- ನಿರ್ವಸಿತರಾಗುವುದು – ಜೀವಿಸಲು ಅವಶ್ಯಕವಾದ ಮನೆಯನ್ನು ಕಳೆದುಕೊಳ್ಳುವುದು ಸ್ಥಳಾಂತರ ಪ್ರಕ್ರಿಯೆಗೆ ಒಳಗಾದ ಸಂತ್ರಸ್ತರಲ್ಲಿ, ತಮ್ಮನ್ನು ವ್ಯವಸ್ಥೆಯಿಂದ ಹೊರಗಿಟ್ಟವರು ಎಂಬ ಭಾವನೆ ಬೆಳೆಯುವುದಕ್ಕೆ ಕಾರಣವಾಗುತ್ತದೆ. ತಾವು ಹಿಂದೆ ನೆಲೆಸಿಕೊಂಡು ಬಂದ ಪ್ರದೇಶದಲ್ಲಿ ನಡೆಸುತ್ತಿದ್ದ ಉದ್ಯೋಗ, ಕೌಶಲ್ಯಗಳು ಹೊಸ ಪ್ರದೇಶಗಳಲ್ಲಿ ಅಪ್ರಸ್ತುತವೆನಿಸಿ ಉಪಯೋಗಕ್ಕೆ ಬಾರದಿರುವ ಸಾಧ್ಯತೆ ಇರುತ್ತದೆ. ವ್ಯವಸ್ಥೆಯಿಂದ ಹೊರಗಿಡುವಿಕೆ ಸಂತ್ರಸ್ತರುಗಳ ಸಾಮಾಜಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಕದಡುವ ಸಾಧ್ಯತೆಗಳು ಇರುತ್ತದೆ.
- ಆಹಾರದ ಅಭದ್ರತೆ – ಬಲವಂತದ ಸ್ಥಳಾಂತರಿಸುವಿಕೆಯಿಂದ ಹೊಸ ಅಪರಿಚಿತ ಪ್ರದೇಶದಲ್ಲಿ ಉತ್ತಮ ಪೌಷ್ಟಿಕಾಂಶದ ಆಹಾರ, ನೀರು ಹಾಗೂ ಮೂಲಭೂತ ಸೌಲಭ್ಯಗಳು ಸಂತ್ರಸ್ತರಿಗೆ ಸಿಗದೇ ಅವರಲ್ಲಿ ಅಭದ್ರತೆಯ ಭಾವನೆಗಳು ಬೆಳೆಯುವಂತಾಗುತ್ತದೆ.
- ಅನೈತಿಕತೆ ಮತ್ತು ಅಪರಾಧ ಪ್ರಮಾಣದಲ್ಲಿ ಹೆಚ್ಚಳ – ಜೀವನದಲ್ಲಿ ಅಭದ್ರತೆ ಉಂಟಾದಾಗ, ಸಮಾಜದ ವಿರುದ್ಧ ತಿರುಗಿಬೀಳುವ ಪ್ರವೃತ್ತಿ ಸಂತ್ರಸ್ತ ಕುಟುಂಬದ ಸದಸ್ಯರುಗಳಲ್ಲಿ ಕಾಣಸಿಗುತ್ತವೆ. ಇವುಗಳು ಯೋಜನೆಗಳ ಸಂತ್ರಸ್ತರ ಕುಟುಂಬದ ಸದಸ್ಯರುಗಳನ್ನು ಅನೈತಿಕ ಮತ್ತು ಅಪರಾಧ ಪ್ರಕರಣಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೆಪಿಸುತ್ತವೆ. ಸಾಮೂಹಿಕ ಆಸ್ತಿಯನ್ನು ಉಪಯೋಗಿಸುವುದರಿಂದ ಹೊರಗಿಡಲ್ಪಡುವುದು, ಇಲ್ಲಿಯವರೆಗೆ ಸಾಮೂಹಿಕವಾಗಿ ಉಪಯೋಗಿಸುತ್ತಿದ್ದ ಆರಾಧನಾ ಸ್ಥಳ, ಸ್ಮಶಾನ ಮತ್ತು ಇತರ ಸೌಲಭ್ಯದಿಂದ ವಂಚಿತರಾಗುವುದು, ಹೊಸ ನೆಲೆಗಳಲ್ಲಿ ತಮ್ಮ ಪೂರ್ವನೆಲೆಯಲ್ಲಿ ಸಿಗುತ್ತಿದ್ದಂತಹ ಸಾಮಾನ್ಯ ಸೌಲಭ್ಯಗಳು ದೊರಕದೆ ಇರುವುದು ಅವರುಗಳನ್ನು ಕಾನೂನು ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುತ್ತದೆ.
- ಆರೋಗ್ಯ ಮತ್ತು ಸಾಂಕ್ರಾಮಿಕ ರೋಗಗಳ ಸಮಸ್ಯೆ – ಬಲವಂತದ ಸ್ಥಳಾಂತರ ಸಂತ್ರಸ್ತರಲ್ಲಿ ಸಾಮಾನ್ಯ ಆರೋಗ್ಯದ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಅಪರಿಚಿತವಾದ ಹೊಸ ನೆಲೆಗಳಲ್ಲಿ ವಸತಿ ನಿರ್ಮಿಸಿರುವುದು ಹಾಗೂ ಉದ್ಯೋಗ ನಷ್ಟಗಳಿಂದಾಗಿ ಉಂಟಾದ ಒತ್ತಡಗಳಿಂದ ಸಂತ್ರಸ್ತರ ಆರೋಗ್ಯದಲ್ಲಿ ಏರುಪೇರಾಗುತ್ತದೆ. ಹೊಸ ನೆಲೆಗಳಲ್ಲಿನ ಮೂಲಭೂತ ಸೌಲಭ್ಯಗಳಾದ ಸ್ವಚ್ಛ ಪರಿಸರ, ಶುದ್ಧ ನೀರು, ಒಳಚರಂಡಿ ವ್ಯವಸ್ಥೆ ಹಾಗೂ ಮೂಲಭೂತ ಸೌಕರ್ಯಗಳ ಅಸಮರ್ಪಕ ವ್ಯವಸ್ಥೆಯಿಂದಾಗಿ ಸಾಂಕ್ರಾಮಿಕ ರೋಗಗಳ ಪ್ರಮಾಣದಲ್ಲಿಯೂ ಹೆಚ್ಚಳವಾಗುತ್ತದೆ.
- ಸಾಮಾಜಿಕ ವಿಘಟನೆ – ಸಮಾಜ ನಿರಂತರ ಬದಲಾವಣೆಯನ್ನು ಬಯಸಿ, ಚಲನಶೀಲತೆಯಿಂದ ಕೂಡಿರುತ್ತದೆ. ಆದಾಗ್ಯೂ, ಕೆಲವೊಂದು ನಂಬಿಕೆ, ಪದ್ಧತಿಗಳಲ್ಲಿ ಸ್ಥಾಗಿತ್ಯವನ್ನು ಹೊಂದಿದೆ. ಇಂತಹ ಸಂದರ್ಭದಲ್ಲಿ ಸ್ಥಳಾಂತರ ಪ್ರಾರಂಭವಾದರೆ, ಅದು ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡವುದಲ್ಲದೇ,

ಅದರ ವಿಘಟನೆಗಳಿಗೂ ಕಾರಣವಾಗುತ್ತದೆ. ಪರಿಹಾರದ ರೂಪದಲ್ಲಿ ದೊರಕಿದ ನಗದು ಮೊತ್ತ ಮತ್ತು ಸೌಲಭ್ಯಗಳಿಗೆ ಸಂಬಂಧಿಸಿದಂತೆ ಕುಟುಂಬದ ಸದಸ್ಯರುಗಳಲ್ಲಿ ಸಂಘರ್ಷವೇರ್ಪಟ್ಟು ಕೌಟುಂಬಿಕ ವಿಘಟನೆಗೆ ಕಾರಣವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಒಟ್ಟಾಗಿ ಜೀವಿಸುತ್ತಿದ್ದ ಕುಟುಂಬಗಳಿಗೆ ಬೇರೆ ಬೇರೆ ಪ್ರದೇಶದಲ್ಲಿ ಪುನರ್‌ವಸತಿಯನ್ನು ಕಲ್ಪಿಸುವುದರಿಂದ ಅವರ ಪೂರ್ವನೆಲೆಯಲ್ಲಿದ್ದಂತಹ ಒಗ್ಗಟ್ಟಿಗೆ ಧಕ್ಕೆ ಬಂದು ಮಾನಸಿಕ ಕ್ಷೋಭೆಗಳಿಗೆ ಒಳಗಾಗುವ ಸಾಧ್ಯತೆಯಿರುತ್ತದೆ.

- ಮುಖ್ಯವಾಹಿನಿಯಿಂದ ಹೊರಗಿಡಲ್ಪಡುವುದು – ಆರ್ಥಿಕ ಹಕ್ಕುಗಳಿಂದ ವಂಚಿತರಾದ ಸಂತ್ರಸ್ತರು ಮತ್ತಷ್ಟು ಬಡವರಾಗುವ ಸಾಧ್ಯತೆಯಿರುತ್ತದೆ. ಸಾಮಾಜಿಕ ಮತ್ತು ಮಾನಸಿಕ ಒತ್ತಡಗಳು ಸಂತ್ರಸ್ತರುಗಳ ಸಾಮಾಜಿಕ ಅಂತಸ್ತನ್ನು ಬದಲಾಯಿಸುತ್ತದೆ. ಪುನರ್‌ವಸತಿ ಪ್ರದೇಶದಲ್ಲಿ ನೆಲೆನಿಂತ ಸಂತ್ರಸ್ತರುಗಳು ಸಮಾಜದೊಂದಿಗಿನ ಹಾಗೂ ತಮ್ಮಲ್ಲಿನ ವಿಶ್ವಾಸವನ್ನು ಕಳೆದುಕೊಂಡು, ಶೋಷಣೆಗೆ ಒಳಪಟ್ಟವರು ಎಂಬ ಭಾವನೆ ಬೆಳೆಯುವುದಕ್ಕೆ ಕಾರಣವಾಗುತ್ತದೆ. ತಮಗೆ ಅನ್ಯಾಯವಾಗಿದೆ ಹಾಗೂ ತಾವು ತುಳಿತಕ್ಕೊಳಗಾದವರು ಎಂಬ ಭಾವನೆ ಬೆಳೆಯುವುದಕ್ಕೆ ಕಾರಣವಾಗುತ್ತದೆ.

ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟಂತೆ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಅಧ್ಯಯನಗಳು ಈಗಾಗಲೇ ನಡೆದಿರುತ್ತದೆ. ಸರದಾರ್ ಸರೋವರ ಯೋಜನೆಗೆ ಸಂಬಂಧಪಟ್ಟಂತೆ ಜೀನ್ ಡ್ರೀಸ್ ಮತ್ತು ಮೀರಾ ಸಾಮ್ಸನ್‌ರವರ 'ಅಣೆಕಟ್ಟು ಮತ್ತು ರಾಷ್ಟ್ರ' (1997); ಫೆರ್ನಾಂಡಿಸ್, ವಾಲ್ಟರ್ ಮತ್ತು ಇ.ಜಿ. ತುಕ್ರಾಲ್‌ರವರ 'ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿ' (1989) ಮತ್ತು ಫಿಲಿಪ್ಸ್ ವಿಗಾಸ್‌ರವರ 'ಹಿರಾಕುಡ್ ಅಣೆಕಟ್ಟಿನ ನ್ಯಾಯ; ಮೂವತ್ತು ವರ್ಷಗಳ ನಂತರ' ಹಾಗೂ ಮೈಕೆಲ್ ಸೆರ್ನ್ನಾರವರು ವಿಶ್ವ ಬ್ಯಾಂಕಿನ ಪ್ರಾಯೋಜಕತ್ವದಲ್ಲಿ 1994ರಲ್ಲಿ ಅಧ್ಯಯನ ನಡೆಸಿದಂತಹ 'ಭಾರತಕ್ಕೆ ಸಂಬಂಧಪಟ್ಟಂತೆ ಸ್ಥಳಾಂತರ ಮತ್ತು ಪುನರ್‌ವಸತಿ' ಇವುಗಳು ಪ್ರಮುಖ ಕೃತಿಗಳು. ಅಭಿವೃದ್ಧಿ ಪ್ರೇರಿತ ಸ್ಥಳಾಂತರ ಮತ್ತು ಪುನರ್‌ವಸತಿಯ ಬಗ್ಗೆ ವಿಸ್ತೃತವಾಗಿ ಅಧ್ಯಯನ ಮಾಡಿರುವ ಸಮಾಜಶಾಸ್ತ್ರದ ವಿದ್ವಾಂಸರಾದ ಮೈಕಲ್ ಸೆರ್ನ್ನಾರವರು ತಮ್ಮ ಸಂಶೋಧನಾ ಗ್ರಂಥವಾದ 'ಪುನರ್‌ವಸತಿಗೆ ಆರ್ಥಿಕ ವಿಶ್ಲೇಷಣೆಯ ಅಗತ್ಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಎಂಬ ಕೃತಿಯಲ್ಲಿ 'ಯೋಜನೆಗಳಿಂದ ಸಂತ್ರಸ್ತರಾಗುವ ಜನರನ್ನು ಬಲವಂತವಾಗಿ ಸ್ಥಳಾಂತರಿಸುವುದರಿಂದ ಅವರುಗಳು ಮತ್ತಷ್ಟು ಬಡವರಾಗುತ್ತಾರೆ; ಸಂತ್ರಸ್ತರಿಗೆ ಸರಿಯಾದ ಪ್ರಮಾಣದಲ್ಲಿ ಪರಿಹಾರ ಸಿಗದೇ ಇರುವುದು ಮತ್ತು ಅವರ ಸಬಲೀಕರಣಕ್ಕೆ ಯಾವುದೇ ರೀತಿಯ ನೆರವು ಸಿಗದೇ ಇರುವುದು ಇದಕ್ಕೆ ಮೂಲ ಕಾರಣವಾಗುತ್ತದೆ'[52] ಎಂದು ಪ್ರತಿಪಾದಿಸಿರುತ್ತಾರೆ.

ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟ ಸಾಹಿತ್ಯಗಳನ್ನು ಅವಲೋಕಿಸಿದಾಗ, ಅಭಿವೃದ್ಧಿ ಯೋಜನೆಯಿಂದ ಭಾರತದಲ್ಲಿ ಸಂತ್ರಸ್ತರಾದ ಜನರು ಇಂದು ಕೆಲವು ಸಮಾನ ಸಮಸ್ಯೆಗಳನ್ನು ಎದುರಿಸುತ್ತಿರುವುದು

ಕಂಡುಬರುತ್ತದೆ. ಇದನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ಪರಿಧಿಗೆ ಅನ್ವಯಿಸಿ ವ್ಯವಸ್ಥಿತವಾಗಿ ಅಧ್ಯಯನ ಮಾಡಲಾಗಿರುತ್ತದೆ. ತನ್ನಲ್ಲಿರುವ ವಿಶಿಷ್ಟ ಸಂಪನ್ಮೂಲಗಳಿಂದಾಗಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಅತ್ಯಂತ ಪ್ರಶಸ್ತವಾದ ಪ್ರದೇಶವಾಗಿರುತ್ತವೆ. ಮಂಗಳೂರಿನಲ್ಲಿರುವ ನೈಸರ್ಗಿಕ ಸರ್ವಋತು ಬಂದರಿನಿಂದಾಗಿ ಜಗತ್ತಿನ ಯಾವುದೇ ಭೂಪ್ರದೇಶದೊಂದಿಗೆ ವ್ಯಾಪಾರ ವ್ಯವಹಾರ ಸಾಧ್ಯವಾಗುತ್ತದೆ. ಬಜ್ಪೆಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ವ್ಯವಸ್ಥಿತ ರೈಲ್ವೆ ಸಂಚಾರ ಮಾರ್ಗ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಸಹಾಯದಿಂದ ಕಚ್ಚಾ ಸಾಮಗ್ರಿಗಳು ಹಾಗೂ ಕೈಗಾರಿಕಾ ಉತ್ಪನ್ನಗಳನ್ನು ಜಗತ್ತಿನ ಯಾವುದೇ ಪ್ರದೇಶಕ್ಕೆ ಹೆಚ್ಚು ಕಷ್ಟವಿಲ್ಲದೆ ಸಾಗಾಟ ಮಾಡಲು ಸುಲಭ ಸಾಧ್ಯವಾಗುತ್ತದೆ. ಬೃಹತ್ ಕೈಗಾರಿಕೆಗಳ ಸ್ಥಾಪನೆ ಹಾಗೂ ಕಾರ್ಯಾಚರಣೆಗೆ ಬೇಕಾಗುವಷ್ಟು ನೀರು ಇಲ್ಲಿನ ನದಿಗಳಿಂದ ದೊರಕುತ್ತದೆ. ವಿಶೇಷ ಕೌಶಲ್ಯವನ್ನು ಹೊಂದಿರುವ ವಿಪುಲ ಮಾನವ ಸಂಪನ್ಮೂಲದ ಲಭ್ಯತೆ ಸರಕಾರಿ ಹಾಗೂ ಖಾಸಗಿ ವಲಯಗಳು ಬೃಹತ್ ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು, ದೊಡ್ಡ ಮಟ್ಟದಲ್ಲಿ ಬಂಡವಾಳವನ್ನು ತೊಡಗಿಸಿಕೊಳ್ಳಲು ಪೂರಕ ವಾತಾವರಣಗಳನ್ನು ಈ ಜಿಲ್ಲೆಗಳಲ್ಲಿ ನಿರ್ಮಿಸಿರುತ್ತದೆ.[53] ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಒಟ್ಟು 12.5 ಲಕ್ಷ ಎಕ್ರೆ ಭೂಪ್ರದೇಶವನ್ನು ಹೊಂದಿದ್ದು 1970ರ ದಶಕದ ನಂತರ ಇಲ್ಲಿಯವರೆಗೆ ಸುಮಾರು ಇಪ್ಪತ್ತೈದು ಸಾವಿರ ಎಕ್ರೆಯಷ್ಟು ಫಲವತ್ತಾದ ಭೂಮಿಯನ್ನು ಅಭಿವೃದ್ಧಿ ಪ್ರೇರಿತ ಯೋಜನೆಗಳಿಗೋಸ್ಕರ ಸ್ವಾಧೀನಪಡಿಸಲಾಗಿದ್ದು, ಸುಮಾರು ಹತ್ತು ಸಾವಿರದಷ್ಟು ಕುಟುಂಬಗಳನ್ನು ತಮ್ಮ ಮೂಲನೆಲೆಗಳಿಂದ ಸ್ಥಳಾಂತರಿಸಲಾಗಿರುತ್ತದೆ.[54] ಈ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದಿರುವ ಹೆಚ್ಚಿನ ಕೈಗಾರಿಕೆಗಳು ಮತ್ತು ಜವಾಬ್ದಾರಿಯುತ ಸರಕಾರಗಳು, ಯೋಜನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಪುನರ್‌ವಸತಿಗೆ ಯಾವುದೇ ರೀತಿಯ ಗಂಭೀರವಾದ ಪ್ರಯತ್ನಗಳನ್ನು ಮಾಡದಿರುವುದು ಹಾಗೂ ಆರಂಭಿಸಲ್ಪಡುವ ಕೈಗಾರಿಕೆಗಳಿಗೋಸ್ಕರ ಜನರನ್ನು ಒಂದಕ್ಕಿಂತ ಹೆಚ್ಚು ಬಾರಿ ಸ್ಥಳಾಂತರಿಸಿದ ಉದಾಹರಣೆಗಳು ಕೂಡಾ ಕಂಡುಬರುತ್ತದೆ. ಈ ಎಲ್ಲಾ ಚೌಕಟ್ಟಿನೊಳಗೆ, ಬಲವಂತದ ಸ್ಥಳಾಂತರ ಪ್ರಕ್ರಿಯೆಗೆ ಒಳಗಾಗುವ ಜನರ ಸಮಸ್ಯೆಗಳನ್ನು ಮತ್ತು ಪುನರ್‌ವಸತಿಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

4. ಅಧ್ಯಯನದ ಉದ್ದೇಶಗಳು

ಮೇಲೆ ಚರ್ಚಿಸಿದ ಅಭಿವೃದ್ಧಿ ಮತ್ತು ಸ್ಥಳಾಂತರಕ್ಕೆ ಸಂಬಂಧಪಟ್ಟ ಜಿಜ್ಞಾಸೆಗಳಿಗೆ ಅನುಗುಣವಾಗಿ, ಪ್ರಸ್ತುತ ಅಧ್ಯಯನವು ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತ್ಯಂತರಗಳ ವ್ಯವಸ್ಥಿತ ವಿಶ್ಲೇಷಣೆಗೆ ಆದ್ಯತೆಯನ್ನು ನೀಡಿರುತ್ತದೆ. ಭೂಸ್ವಾಧೀನದಿಂದ ಆದಂತಹ ಪರಿಣಾಮಗಳು, ಭೂಸ್ವಾಧೀನದ ಪರವಾಗಿ

ಅಧಿಕಾರಿಗಳು ನೀಡಿದಂತಹ ಸಮರ್ಥನೆಗಳು ಹಾಗೂ ವಿಶೇಷ ಆರ್ಥಿಕ ವಲಯದ ರಚನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಪುನರ್‌ವಸತಿಯ ಬಗೆಗೆ ನಡೆದಂತಹ ಹೋರಾಟಗಳನ್ನು ಗಮನದಲ್ಲಿರಿಸಿ ಕೆಳಗೆ ವಿವರಿಸಿದ ಪ್ರಮುಖ ಉದ್ದೇಶಗಳನ್ನು ಕೇಂದ್ರೀಕರಿಸಿ ಅಧ್ಯಯನವನ್ನು ನಡೆಸಲಾಗಿರುತ್ತದೆ.

1. ಅಭಿವೃದ್ಧಿ ಮತ್ತು ಸ್ಥಳಾಂತರದ ಚರ್ಚೆಯ ಹಿನ್ನಲೆಯಲ್ಲಿ, ವಿಶೇಷ ಆರ್ಥಿಕ ವಲಯ ಯೋಜನೆಗಳ ಪರಿಕಲ್ಪನಾತ್ಮಕ ವಿಶ್ಲೇಷಣೆಯನ್ನು ನಡೆಸುವುದು.
2. ಮಂಗಳೂರು ವಿಶೇಷ ಆರ್ಥಿಕ ವಲಯದ ನೀತಿ ನಿಯಮಗಳನ್ನು ತಿಳಿದುಕೊಳ್ಳುವುದು ಮತ್ತು ಪುನರ್‌ವಸತಿ ಯೋಜನೆಯನ್ನು ವಿವರಿಸುವುದು.
3. ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಿಂದ ಉಂಟಾಗಿರುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪರಿಣಾಮಗಳನ್ನು ಚರ್ಚಿಸುವುದು.
4. ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯ ಯೋಜನೆ ಮತ್ತು ಜಾರಿಯನ್ನು ಅಧಿಕಾರಿಗಳು, ಸಂತ್ರಸ್ತರು ಮತ್ತು ಹೋರಾಟಗಾರರು ಯಾವ ರೀತಿಯಲ್ಲಿ ಅರ್ಥೈಸಿಕೊಂಡಿರುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದು.
5. ವಿಶೇಷ ಆರ್ಥಿಕ ವಲಯದ ಬಗೆಗಿನ ಕ್ಷೇತ್ರ ಕಾರ್ಯಾಧಾರಿತ ಅಂಶಗಳಿಂದ ಕಂಡು ಬಂದ ಫಲಿತಗಳು ಮತ್ತು ಶಿಫಾರಸ್ಸುಗಳನ್ನು ನೀಡುವುದು.

5. ಅಧ್ಯಯನದ ಮಹತ್ವ

ಭಾರತದ ಸಂಸ್ಕೃತಿ ಮತ್ತು ಸೌಜನ್ಯಯುತ ಬದುಕು ಅಭಿವೃದ್ಧಿ, ಆಧುನೀಕರಣ ಮತ್ತು ಜಾಗತೀಕರಣದ ಹೆಸರಿನಲ್ಲಿ ನಾಶವಾಗುತ್ತಿದ್ದು ಮುಂದೆ ಸ್ಥಳೀಯವಾದ ಅನನ್ಯತೆ, ಅಸ್ಮಿತೆಗಳು ಕಳೆದುಹೋಗುವ ಅಪಾಯವನ್ನು ಎದುರಿಸುತ್ತಿದ್ದೇವೆ. ಪ್ರಸ್ತುತ ಅಧ್ಯಯನವು ಅಭಿವೃದ್ಧಿಯ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಕೈಗಾರಿಕೀಕರಣ ಪ್ರಕ್ರಿಯೆ, ವಿಶೇಷವಾಗಿ ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಯಿಂದಾಗಿ ಉಂಟಾದ ಸಾಧಕ-ಬಾಧಕಗಳ ಕುರಿತಾಗಿ ಬೆಳಕು ಚೆಲ್ಲುತ್ತದೆ. ಇಂದು ಜಾಗತೀಕರಣದ ನೀತಿಯಿಂದಾಗಿ ದೇಶಾದ್ಯಂತ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚು ಒತ್ತು ನೀಡಲಾಗಿದ್ದು, ಕೈಗಾರಿಕಾ ಪ್ರಗತಿಯು ವೇಗ ಪಡೆಯುತ್ತಿರುವ ಹಿನ್ನೆಲೆಯಲ್ಲಿ ಅದು ಈ ದೇಶದ ಸಾಂಸ್ಕೃತಿಕ ಚೌಕಟ್ಟಿಗೆ, ಜನಸಾಮಾನ್ಯರ ಜೀವನಶೈಲಿ, ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಯ ಮೇಲೆ ಎಂತಹ ತೊಂದರೆಗಳನ್ನು ಬೀರಿರುತ್ತದೆ ಎಂಬುದನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ಸಂತ್ರಸ್ತರ ಬವಣೆಗಳನ್ನು ಕೇಂದ್ರೀಕರಿಸಿ ಸವಿವರವಾಗಿ ಚರ್ಚಿಸಿ ದಾಖಲಿಸಲಾಗಿದೆ.

ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ, ಕೈಗಾರಿಕೀಕರಣ ಮತ್ತು ಸ್ಥಳಾಂತರದ ಬಗೆಗೆ ಹೆಚ್ಚಿನ ವ್ಯವಸ್ಥಿತ ಅಧ್ಯಯನಗಳು ನಡೆಯಲ್ಪಟ್ಟಿರುತ್ತದೆ. ಆದರೆ, ತನ್ನಲ್ಲಿರುವ ಅಗಾಧ ಸಂಪನ್ಮೂಲಗಳಿಂದಾಗಿ

ಕೈಗಾರಿಕೆಗಳಿಗೆ ತನ್ನನ್ನು ತೆರೆದುಕೊಳ್ಳುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಳಾಂತರ ತಂದೊಡ್ಡುವ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳ ಬಗ್ಗೆ ಯಾವುದೇ ರೀತಿಯ ವೈಜ್ಞಾನಿಕ ಮತ್ತು ವ್ಯವಸ್ಥಿತ ಅಧ್ಯಯನಗಳು ಆಗದೇ ಇರುವುದರಿಂದ ಪ್ರಸ್ತುತ ಅಧ್ಯಯನವು ಅತ್ಯಂತ ಮಹತ್ವದ್ದೆನಿಸುತ್ತದೆ ಮಾತ್ರವಲ್ಲದೇ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ ಜನರ ಸಂಕಷ್ಟ, ಯೋಜನೆಯು ಅವರುಗಳ ಬದುಕಿನಲ್ಲಿ ತಂದಿರುವ ಬದಲಾವಣೆಗಳನ್ನು ಸಮರ್ಥವಾಗಿ ವಿಶ್ಲೇಷಿಸಲು ಸಾಧ್ಯವಾಗುತ್ತದೆ. ಇಲ್ಲಿಯವರೆಗೆ ಅಭಿವೃದ್ಧಿ ಆಧಾರಿತ ಸ್ಥಳಾಂತರ ಪ್ರಕ್ರಿಯೆಯಲ್ಲಿನ ಸಂತ್ರಸ್ತರುಗಳಿಗೆ ಯಾವ ರೀತಿಯ ಯೋಗ್ಯ ಪರಿಹಾರದ ಪ್ಯಾಕೇಜ್‌ಗಳನ್ನು ನೀಡಬೇಕು ಹಾಗೂ ಅವರುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸಮರ್ಪಕವಾದ ರೀತಿಯಲ್ಲಿ ಹೇಗೆ ಪರಿಹರಿಸಬಹುದು ಎಂಬುದಾಗಿ ಯಾವುದೇ ಅಧ್ಯಯನಗಳು ನಿರ್ದಿಷ್ಟವಾಗಿ ಸ್ಪಷ್ಟಪಡಿಸದೇ ಇರುವುದರಿಂದ ಪ್ರಸ್ತುತ ಅಧ್ಯಯನದಲ್ಲಿ ಅಭಿವೃದ್ಧಿ ಯೋಜನೆಗಳಿಂದಾಗಿ ಸಂತ್ರಸ್ತರಾದವರ ಸಬಲೀಕರಣಕ್ಕೆ ಯಾವ ರೀತಿಯ ಸೂಕ್ತ ಪರಿಹಾರಗಳನ್ನು ಒದಗಿಸಬಹುದು ಎಂಬ ಅಂಶಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಂತಹ ಅಭಿವೃದ್ಧಿ ಆಧಾರಿತ ಸ್ಥಳಾಂತರದ ಚಟುವಟಿಕೆಗಳ ಬಗ್ಗೆ ಈ ಅಧ್ಯಯನವು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದರಿಂದ ಮುಂದೆ ಇಂತಹ ಅಧ್ಯಯನಗಳನ್ನು ನಡೆಸುವ ಸಂಶೋಧಕರಿಗೆ ತಾತ್ವಿಕ ನೆಲೆಗಟ್ಟು ಹಾಗೂ ಮಾರ್ಗದರ್ಶನವನ್ನು ನೀಡುವಂತಹ ಆಕರ ಗ್ರಂಥವಾಗಿ ಪ್ರಸ್ತುತ ಅಧ್ಯಯನವು ಸಹಕಾರಿಯಾಗುತ್ತದೆ.

6. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವನ್ನು ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು 1997ರಲ್ಲಿ ವಿಭಜಿಸಿ, ಉಡುಪಿ ಎಂಬ ಹೊಸ ಜಿಲ್ಲೆಯನ್ನು ಸ್ಥಾಪಿಸಲಾಗಿದೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಬರುತ್ತವೆ. ಕೇರಳದ ಕಾಸರಗೋಡು ಮತ್ತು ಕರ್ನಾಟಕದ ಕರಾವಳಿಯ ಈ ಮೂರೂ ಜಿಲ್ಲೆಗಳು ಮೇಲ್ನೋಟದಲ್ಲಿ ಒಂದೇ ತೆರನಾದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಲಕ್ಷಣಗಳನ್ನು ಹೊಂದಿವೆ. ಜಾಗತೀಕರಣದ ಬಿರುಗಾಳಿಗೆ ಕರ್ನಾಟಕದ ಕರಾವಳಿಯೂ ಹೊರತಾಗಿಲ್ಲ. ಮಂಗಳೂರು ಪಟ್ಟಣವು ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಭಾಗವಾಗಿದ್ದು, ಕರ್ನಾಟಕದ ಪ್ರಮುಖ ಬಂದರು ಪ್ರದೇಶವಾಗಿಯೂ ಗುರುತಿಸಿಕೊಂಡಿದೆ. ಇಲ್ಲಿಯ ಉತ್ತಮ ಗುಣಮಟ್ಟದ ಸಂವಹನ ಮತ್ತು ಸಾಗಾಟ, ಯಥೇಚ್ಛ ನೈಸರ್ಗಿಕ ಸಂಪನ್ಮೂಲಗಳು ಬೃಹತ್ ಕೈಗಾರಿಕೆಗಳನ್ನು ಆಹ್ವಾನಿಸಿವೆ. ಇದರ ಮುಂದುವರಿದ ಭಾಗವಾಗಿ, ವಿಶೇಷ ಆರ್ಥಿಕ ವಲಯವನ್ನು

ಮಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಆದರೆ ಇದರಿಂದ ಮಂಗಳೂರಿನ ಜನತೆ ಅನೇಕ ಸಮಸ್ಯೆಗಳನ್ನು ಅನುಭವಿಸಿರುತ್ತಾರೆ. ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ 1970ರ ದಶಕದಲ್ಲಿ ನವಮಂಗಳೂರು ಬಂದರಿನ ಸ್ಥಾಪನೆಯ ನಂತರದ ಅಭಿವೃದ್ಧಿ ಚಟುವಟಿಕೆಗಳಿಗೋಸ್ಕರ ಹಲವಾರು ಕುಟುಂಬಗಳನ್ನು ಒಂದಕ್ಕಿಂತ ಹೆಚ್ಚು ಸಂದರ್ಭಗಳಲ್ಲಿ ತಮ್ಮ ಮೂಲ ನೆಲೆಗಳಿಂದ ಸ್ಥಳಾಂತರಿಸಿದ ಉದಾಹರಣೆಗಳು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಇಂತಹ ಕುಟುಂಬಗಳ ಸ್ಥಿತಿಗತಿಗಳನ್ನು ಅರಿಯುವ ನಿಟ್ಟಿನಲ್ಲಿ **'ಅಭಿವೃದ್ಧಿ–ಸ್ಥಳಾಂತರ ಮತ್ತು ಪುನರ್‌ವಸತಿ, ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಆರ್ಥಿಕ ವಲಯದ ಒಂದು ಅಧ್ಯಯನ'** ಎಂಬ ಶೀರ್ಷಿಕೆಯಡಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದ 30 ಕಂದಾಯ ಜಿಲ್ಲೆಗಳಲ್ಲಿ ಒಂದಾಗಿದ್ದು, ಮಂಗಳೂರು ನಗರವು ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಒಟ್ಟು 5 ಕಂದಾಯ ತಾಲೂಕುಗಳನ್ನು ಒಳಗೊಂಡಿದ್ದು ಅವುಗಳೆಂದರೆ ಮಂಗಳೂರು, ಪುತ್ತೂರು, ಬೆಳ್ತಂಗಡಿ, ಬಂಟ್ವಾಳ ಮತ್ತು ಸುಳ್ಯ. ಈ ಅಧ್ಯಯನವು ಮಂಗಳೂರು ತಾಲೂಕನ್ನು ಕೇಂದ್ರೀಕರಿಸಿರುವುದರಿಂದ ಮತ್ತು ಮಂಗಳೂರು ವಿಶೇಷ ಆರ್ಥಿಕ ವಲಯದ ಯೋಜನೆ ಇಲ್ಲಿ ಸ್ಥಾಪಿತವಾಗಿರುವುದರಿಂದ, ಮಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳನ್ನು ಕ್ಷೇತ್ರ ಕಾರ್ಯಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಮಂಗಳೂರು ಗ್ರಾಮಾಂತರ ತಾಲೂಕಿನ ಗ್ರಾಮಗಳಾದ ತೋಕೂರು, ಬಾಳ, ಪೆರ್ಮುದೆ, ಕಳವಾರು, ಕುತ್ತೆತ್ತೂರು, ಬಜ್ಪೆ, ತೆಂಕ ಎಕ್ಕಾರು, ಕುಳಾಯಿ ಪ್ರದೇಶಗಳಲ್ಲಿ ಒಟ್ಟು ಎರಡು ಸಾವಿರದ ಮುನ್ನೂರ ಎಪ್ಪತ್ತೊಂಬತ್ತು ಎಕ್ರೆ ಭೂಮಿಯನ್ನು ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿದ್ದು ಒಂದು ಸಾವಿರದ ಆರುನೂರ ಮೂವತ್ತೇಳು ಕುಟುಂಬಗಳು ತಮ್ಮ ಭೂಮಿಯನ್ನು ಕಳೆದುಕೊಂಡಿರುತ್ತಾರೆ. ಸಂತ್ರಸ್ತರ ಪುನರ್‌ವಸತಿಗೋಸ್ಕರ ತೋಕೂರು, ಕುಳಾಯಿ, ಬಜ್ಪೆ, ಪೆರ್ಮುದೆ ಮತ್ತು ಕಳವಾರಿನಲ್ಲಿ ಇನ್ನೂರನಲವತ್ತೈದು ಎಕ್ರೆ ಭೂಪ್ರದೇಶದ ವ್ಯಾಪ್ತಿಯಲ್ಲಿ ಹನ್ನೊಂದು ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಲಾಗಿದ್ದು, ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಸಾವಿರದ ಇನ್ನೂರತೊಂಬತ್ತೈದು ಭೂಸಂತ್ರಸ್ತರಿಗೆ ಪುನರ್‌ವಸತಿ ಕಾಲನಿಗಳಲ್ಲಿ ಮನೆಗಳ ನಿರ್ಮಾಣಕ್ಕೋಸ್ಕರ ಭೂಮಿಯನ್ನು ನೀಡಲಾಗಿರುವುದನ್ನು ಗಮನಿಸಲಾಗಿರುತ್ತದೆ. ಅವುಗಳಲ್ಲಿ ಈಗಾಗಲೇ ಒಂದು ಸಾವಿರ ಮನೆಗಳು ನಿರ್ಮಾಣಗೊಂಡಿದ್ದು ಉಳಿದ ಇನ್ನೂರತೊಂಬತ್ತೈದು ನಿವೇಶನಗಳಲ್ಲಿ ಕೆಲವು ನಿರ್ಮಾಣ ಹಂತದಲ್ಲಿದ್ದು, ಇನ್ನೂ ಕೆಲವು ನಿವೇಶನಗಳಲ್ಲಿ ಯಾವುದೇ ರೀತಿಯ ಮನೆಗಳ ನಿರ್ಮಾಣ ಕಾಮಗಾರಿ ಆರಂಭಗೊಂಡಿರುವುದಿಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲ್ಪಟ್ಟ ಪುನರ್‌ವಸತಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕುಟುಂಬಗಳ ಸದಸ್ಯರನ್ನು 'ಯೋಜನೆಯಿಂದ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರು' ಎಂಬುದಾಗಿ ವ್ಯಾಖ್ಯಾನಿಸಿಕೊಳ್ಳಲಾಗಿರುತ್ತದೆ. ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವ

ಸಂತ್ರಸ್ತರುಗಳನ್ನು ಸಂಭವನೀಯ ಸರಳ ಯಾದೃಚ್ಛಿಕ ವಿಧಾನವನ್ನು ಬಳಸಿಕೊಂಡು ಇಪ್ಪತ್ತೈದು ಶೇಕಡಾ ಮಾಹಿತಿದಾರರಿಂದ ಸಂರಚಿತ ಪ್ರಶ್ನಾವಳಿಗಳನ್ನು ಬಳಸಿಕೊಂಡು ವೈಜ್ಞಾನಿಕವಾಗಿ ಅಧ್ಯಯನವನ್ನು ಮಾಡಲಾಗಿರುತ್ತದೆ. ಸಂದರ್ಶನದ ಮೂಲಕ ಕುಟುಂಬದ ಯಜಮಾನರಿಂದ ಮಾಹಿತಿಯನ್ನು ಪಡೆಯಲು ಗರಿಷ್ಠ ಮಟ್ಟದಲ್ಲಿ ಪ್ರಯತ್ನಿಸಲಾಗಿದ್ದು, ವಿಶೇಷ ಸಂದರ್ಭದಲ್ಲಿ ಕುಟುಂಬದ ಯಜಮಾನನ ಅನುಪಸ್ಥಿತಿಯಲ್ಲಿ ಹಿರಿಯ ಸದಸ್ಯರಿಂದ ಮಾಹಿತಿಯನ್ನು ಕಲೆಹಾಕಲಾಗಿರುತ್ತದೆ. ಈ ಪ್ರೌಢ ಪ್ರಬಂಧಕ್ಕೆ ಸಂಬಂಧಿಸಿದ ಮಾಹಿತಿಗಾಗಿ ಸಂದರ್ಶಿಸಲ್ಪಟ್ಟ ಮಾಹಿತಿದಾರರ ವೈಯಕ್ತಿಕ ಹಿತಾಸಕ್ತಿಗಾಗಿ ಮತ್ತು ಹೆಸರುಗಳ ಗೌಪ್ಯತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಬದಲಾಯಿಸಿ ನೀಡಲಾಗಿದೆ. ಸಂಭವನೀಯ ಸರಳ ಯಾದೃಚ್ಛಿಕ ವಿಧಾನದ ಮೂಲಕ ಸಂದರ್ಶನದಿಂದ ಮಾಹಿತಿಗಳನ್ನು ಸಂಗ್ರಹಿಸಿದರೂ ಸ್ಥಳಾಂತರದಿಂದ ಸಂತ್ರಸ್ತರಾದ ಎಲ್ಲಾ ಪ್ರದೇಶಗಳನ್ನು, ಧರ್ಮ ಹಾಗೂ ಜಾತಿಗೆ ಸೇರಿದ ಜನರನ್ನು ಭೇಟಿ ಮಾಡಿ ನಿಖರವಾದ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಲಾಗಿರುತ್ತದೆ. ನೇರ ಸಂದರ್ಶನದ ಪೂರ್ವದಲ್ಲಿ, ಪ್ರಶ್ನಾವಳಿಯಲ್ಲಿ ನಮೂದಿಸಲ್ಪಟ್ಟ ಪ್ರಶ್ನೆಗಳ ಪ್ರಸ್ತುತತೆಯ ಬಗ್ಗೆ 'ಪ್ರಾಯೋಗಿಕ'ವಾಗಿ ಸಂದರ್ಶನಗಳನ್ನು ಮಾಡಲಾಗಿರುತ್ತದೆ. ಇಂತಹ ಸಂದರ್ಶನಗಳ ಮೂಲಕ ದೊರಕಿದ ಸಲಹೆಗಳನ್ನಾಧರಿಸಿ, ಪ್ರಶ್ನಾವಳಿಯಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ. ಈ ಎಲ್ಲಾ ಸಂದರ್ಶನಗಳನ್ನು ಸಂಶೋಧಕನ ನೆಲೆಯಲ್ಲಿ ಸ್ವಯಂ ಆಗಿ ನಿರ್ವಹಿಸಲಾಗಿರುತ್ತದೆ.

ಪ್ರಾಥಮಿಕ ಮಾಹಿತಿ: ಈ ಅಧ್ಯಯನವು ಬಹುತೇಕ ಕ್ಷೇತ್ರಕಾರ್ಯಾಧಾರಿತ ಅಧ್ಯಯನವಾಗಿದೆ. ಕ್ಷೇತ್ರ ಕಾರ್ಯದಲ್ಲಿ ಗಮನಿಸಬೇಕಾದ ಅಂಶಗಳಿಗೆ ಪೂರಕವಾದ ಮತ್ತು ಅಧ್ಯಯನವು ಒಳಗೊಂಡ ಪ್ರಮುಖ ವಿಷಯಗಳನ್ನು ಆಧರಿಸಿ, ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಗಟ್ಟನ್ನು ಅಭ್ಯಸಿಸಲಾಗಿದೆ. ಈ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯವನ್ನು ಮಂಗಳೂರು ವಿಶೇಷ ಆರ್ಥಿಕ ವಲಯ ಕಾರ್ಯಾಚರಿಸುವ ಮತ್ತು ಇದರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಕೈಗೊಳ್ಳಲಾಗಿದೆ. ಮೂರು ಪ್ರತ್ಯೇಕ ಸಂರಚಿತ ಪ್ರಶ್ನಾವಳಿಗಳ ಮೂಲಕ ಯೋಜನೆಯಿಂದ ಸಂತ್ರಸ್ತರಾದ ಕುಟುಂಬಗಳಿಗೆ ಸಂಬಂಧಪಟ್ಟು, ವಿಶೇಷ ಆರ್ಥಿಕ ವಲಯದ ರಚನೆಯಲ್ಲಿ ತೊಡಗಿಸಿಕೊಂಡಿರುವ ಅಧಿಕಾರಿಗಳಿಂದ ಹಾಗೂ ವಿಶೇಷ ಆರ್ಥಿಕ ವಲಯದ ರಚನೆಯ ವಿರುದ್ಧ ಹೋರಾಟಗಳನ್ನು ಆಯೋಜಿಸಿದ ಸಂಘಟನೆಗಳ ನೇತಾರರಿಂದ ಮಾಹಿತಿಯನ್ನು ಕಲೆಹಾಕಲಾಗಿರುತ್ತದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ನಿರ್ವಸಿತರಾಗಿ ಪುನರ್‌ವಸತಿ ಪ್ರದೇಶದಲ್ಲಿ ವಾಸಿಸುತ್ತಿರುವ ಯೋಜನೆಯ ಸಂತ್ರಸ್ತರು ಹಾಗೂ ಪರಿಹಾರದ ಫಲಾನುಭವಿಗಳನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆಯಲಾಗಿದೆ. ಮಾಹಿತಿ ಸಂಗ್ರಹಣೆಗೆ ನಿರ್ವಸಿತರಾದ ಕುಟುಂಬಗಳ ಸದಸ್ಯರ ನೇರ ಸಂದರ್ಶನವನ್ನು ಹೊರತುಪಡಿಸಿ, ಸ್ಥಳೀಯ ಸಾಮಾಜಿಕ, ಧಾರ್ಮಿಕ, ರಾಜಕೀಯ ಮುಖಂಡರುಗಳನ್ನು ಹಾಗೂ ವಿಶೇಷ ಆರ್ಥಿಕ ವಲಯದ ರಚನೆಯ ವಿರುದ್ಧ ನಡೆದಿರುವ ಚಳುವಳಿಗಳ ನೇತಾರರನ್ನು, ಅಧಿಕಾರಿಗಳನ್ನು

ಸಂದರ್ಶಿಸಿ ಮಾಹಿತಿಯನ್ನು ಕಲೆಹಾಕಲಾಗಿದೆ. ಸಂತ್ರಸ್ತರನ್ನು ಸಂದರ್ಶಿಸಿ, ಗುಂಪು ಚರ್ಚೆ, ಪರಿಶೀಲನೆ, ಅವಲೋಕನ ಹಾಗೂ ಅವರ ಜೊತೆಯಲ್ಲಿ ಸಂಶೋಧಕನು ನೇರವಾಗಿ ಬೆರೆಯುವುದರ ಮೂಲಕ ವಿಶ್ಲೇಷಣಾತ್ಮಕವಾದ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಲಾಗಿದೆ.

ಅನುಷಂಗಿಕ ಮಾಹಿತಿ: ಕೇಂದ್ರ ಮತ್ತು ರಾಜ್ಯ ಸರಕಾರಗಳ ಅಭಿವೃದ್ಧಿ ಹಾಗೂ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸಿದ ಆದೇಶಗಳು, ನೀತಿಗಳು, ಗಜೆಟ್ ಅಧಿಸೂಚನೆಗಳು, ಜನಗಣತಿಯ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕದ ವರದಿಗಳು, ಗಝೆಟಿಯರ್, ವಿಶೇಷ ಆರ್ಥಿಕ ವಲಯದ ಕಾಯಿದೆಗಳನ್ನು ಅಧ್ಯಯನಕ್ಕೆ ಬಳಸಲಾಗಿರುತ್ತದೆ. ಸ್ಥಳಾಂತರ ಮತ್ತು ಪುನರ್‌ವಸತಿ ಮೊದಲಾದ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವಂತಹ ಅಧ್ಯಯನಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಶೋಧನಾ ಗ್ರಂಥಗಳಲ್ಲಿ, ದಿನಪತ್ರಿಕೆಗಳಲ್ಲಿ ಮತ್ತು ಪಾಕ್ಷಿಕಗಳಲ್ಲಿ ಬಂದಂತಹ ಪ್ರಬುದ್ಧ ಪ್ರಬಂಧಗಳಿಂದ ಮಾಹಿತಿಯನ್ನು ಪಡೆಯಲಾಗಿದೆ. ಬುದ್ಧಿಜೀವಿಗಳು, ಚಿಂತಕರು, ಪ್ರಾಜ್ಞರು ಮತ್ತು ಆಸಕ್ತರ ಅಭಿಪ್ರಾಯಗಳನ್ನು ಎರಡನೆಯ ಮಾಹಿತಿಯನ್ನಾಗಿ ಪರಿಗಣಿಸಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು, ವಾಸ್ತವವಾಗಿ ಕೇತ್ರಕಾರ್ಯ ನಡೆಸಿ ಕಲೆಹಾಕಿದ ಮಾಹಿತಿಯೊಂದಿಗೆ ಮುಖಾಮುಖಿಯಾಗಿಸಿ ಚರ್ಚಿಸಲಾಗಿದೆ.

ವಿಶ್ಲೇಷಣೆ: ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಈಗಾಗಲೇ ಪ್ರಸ್ತುತ ಕ್ಷೇತ್ರದಲ್ಲಿ ನಡೆಸಲ್ಪಟ್ಟಿರುವ ಅಧ್ಯಯನಗಳೊಂದಿಗೆ ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿರುತ್ತದೆ. ಸಂಗ್ರಹಿತ ಮಾಹಿತಿಯನ್ನು ಕೋಷ್ಟಕ ಮತ್ತು ರೇಖಾಚಿತ್ರಗಳ ಮೂಲಕ ವಿಶ್ಲೇಷಿಸಲಾಗಿರುತ್ತದೆ. ಈ ವಿವರಣೆಗಳು ಸಂಗ್ರಹಿತ ಮಾಹಿತಿಯ ಕ್ರಮಬದ್ಧ ಮತ್ತು ವಸ್ತುನಿಷ್ಠವಾದ ಅಂಕಿ-ಅಂಶಗಳನ್ನು ಆಧರಿಸಿದ ಮಾಹಿತಿಯಾಗಿದೆ. ಸರಳವಾದ ಮೈಕ್ರೋಸಾಫ್ಟ್ ಎಕ್ಸೆಲ್ ತಂತ್ರಜ್ಞಾನದಲ್ಲಿ ಅಂಕಿ-ಅಂಶಗಳನ್ನು ದಾಖಲೀಕರಿಸಿ, ಕೋಷ್ಟಕಗಳನ್ನು ರಚಿಸಿಕೊಳ್ಳಲಾಗಿದೆ.

7. ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳು

ಆಧುನಿಕರಣವನ್ನು ಅನುಸರಿಸಿಕೊಂಡು ಹೋಗುವ ಧಾವಂತದಲ್ಲಿ, ಅಭಿವೃದ್ಧಿ ಎಂಬ ಪರಿಕಲ್ಪನೆ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿರುವ ಕಾರಣ ಮತ್ತು ಅದರ ಪ್ರಭಾವ ಉಳಿದ ಕ್ಷೇತ್ರಗಳ ಮೇಲೆ ಬೀರುತ್ತಿರುವ ಅಗಾಧ ಪರಿಣಾಮವನ್ನು ಗಮನಿಸದ ಕಾರಣ ಉಂಟಾಗಿರುವ 'ಅಚಾತುರ್ಯ'ಗಳನ್ನು ಪರಿಶೀಲಿಸುವುದು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ, ಈ ಅಧ್ಯಯನದ ವ್ಯಾಪ್ತಿ ಮತ್ತು ಇತಿಮಿತಿಗಳ ಕುರಿತು ಕೆಳಕಂಡ ಟಿಪ್ಪಣಿಗಳನ್ನು ಮಾಡಲಾಗಿದೆ.

- ಅಭಿವೃದ್ಧಿ ಹೆಸರಿನಲ್ಲಿ ಬಂದಂತಹ ವಿಶೇಷ ಆರ್ಥಿಕ ವಲಯದ ಯೋಜನೆಗಳು ಪ್ರಾದೇಶಿಕವಾಗಿ ಕರಾವಳಿ ಜಿಲ್ಲೆಯನ್ನು ಆವರಿಸಿಕೊಂಡಿರುವುದರಿಂದ, ಇದರ ಸಮಸ್ಯೆ ಮತ್ತು ಪರಿಹಾರವನ್ನು ಅರಿತುಕೊಳ್ಳುವಲ್ಲಿ ಕೇರಳದ ಕಾಸರಗೋಡನ್ನೂ ಸೇರಿಸಿದಂತೆ ಕರಾವಳಿಯ ಎಲ್ಲಾ ಜಿಲ್ಲೆಗಳನ್ನು ಗಮನದಲ್ಲಿರಿಸಿಕೊಂಡಿದೆ.
- ಅಧ್ಯಯನದ ಸಂದರ್ಭದಲ್ಲಿ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಿನ್ನಲೆಗಳನ್ನು ತೌಲನಿಕವಾಗಿ ಬಳಸಿಕೊಳ್ಳಲಾಗಿರುತ್ತದೆ.
- ವಿಶೇಷ ಆರ್ಥಿಕ ವಲಯದ ಸ್ಥಾಪನೆಯಿಂದಾಗಿ ಉದ್ಭವಿಸಿದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಪಲ್ಲಟಗಳಂತಹ ಗಂಭೀರ ಸಮಸ್ಯೆಗಳಂತೆ, ಕರಾವಳಿ ಪ್ರದೇಶದ ಧಾರಣಾ ಶಕ್ತಿಯನ್ನು ಅಧ್ಯಯನ ಮಾಡದೇ ಸ್ಥಾಪಿಸಲ್ಪಟ್ಟ ಉಳಿದ ಯೋಜನೆಗಳನ್ನು ಅಧ್ಯಯನ ರೂಪದಲ್ಲಿ ಪರಿಗಣಿಸಲಾಗಿದೆ.
- ಪ್ರಮುಖವಾಗಿ ಮಂಗಳೂರು ವಿಶೇಷ ಆರ್ಥಿಕ ವಲಯ ಅಸ್ತಿತ್ವಕ್ಕೆ ಬಂದಿರುವ ಮಂಗಳೂರು ಮತ್ತು ಮಂಗಳೂರು ಗ್ರಾಮಾಂತರ ತಾಲೂಕುಗಳನ್ನು ಕ್ಷೇತ್ರ ಕಾರ್ಯಕ್ಕೆ ಒಳಪಡಿಸಲಾಗಿದೆ.
- ಜಾಗತೀಕರಣದ ನಂತರದ ಹಂತದಲ್ಲಿ ಹುಟ್ಟಿಕೊಂಡಂತಹ ಅಭಿವೃದ್ಧಿ ಆಧಾರಿತ ಯೋಜನೆಗಳು ಮತ್ತು ಆ ಬಗೆಗಿನ ವಿದ್ವಾಂಸರ ಅಭಿಪ್ರಾಯಗಳನ್ನು ಅಧ್ಯಯನಕ್ಕೆ ಬೇಕಾಗುವ ತಾತ್ವಿಕ ನೆಲೆಗಟ್ಟಿನಲ್ಲಿ ಮಾತ್ರವೇ ಬಳಸಿಕೊಳ್ಳಲಾಗಿದೆ.

8. ಅಧ್ಯಯನದ ವಿಭಾಗೀಕರಣ

ಪ್ರಸ್ತಾವನೆ: ಪ್ರಸ್ತಾವನೆಯು ಅಧ್ಯಯನಕ್ಕೆ ಬೇಕಾದ ಮೂಲಭೂತ ತಳಹದಿ ಮತ್ತು ಅಭಿವೃದ್ಧಿಯ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವ ಉದ್ದೇಶವನ್ನು ಒಳಗೊಂಡಿರುತ್ತದೆ. **'ಅಭಿವೃದ್ಧಿ–ಸ್ಥಳಾಂತರ ಮತ್ತು ಪುನರ್‌ವಸತಿ, ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಆರ್ಥಿಕ ವಲಯದ ಒಂದು ಅಧ್ಯಯನ'** ಸಂಶೋಧನೆಗೆ ಸಂಬಂಧಪಟ್ಟಂತಹ ತಾಂತ್ರಿಕ ವಿವರಗಳು, ಉದ್ದೇಶ, ಸ್ವರೂಪ, ವ್ಯಾಪ್ತಿ, ಅಭಿವೃದ್ಧಿಯ ಬಗೆಗಿನ ವಿವಿಧ ವ್ಯಾಖ್ಯಾನಗಳು, ಭಾರತದಲ್ಲಿ ವಿಶೇಷ ಆರ್ಥಿಕ ವಲಯಗಳು ಹುಟ್ಟಿಕೊಂಡ ಬಗೆ ಹಾಗೂ ಅವುಗಳ ರಚನೆಗೆ ಸಂಬಂಧಪಟ್ಟ ಕಾಯಿದೆ, ಉದ್ದೇಶಗಳನ್ನು ವಿವರಿಸುತ್ತದೆ. ಅಧ್ಯಯನದ ವಿಧಾನ, ಮಾದರಿ ಗಾತ್ರ, ಇತಿಮಿತಿಗಳನ್ನು ಪ್ರಸ್ತಾವನೆ ಒಳಗೊಂಡಿರುತ್ತದೆ.

ಅಧ್ಯಾಯ–1: ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿಗಳಿಗೆ ಸಂಬಂಧಪಟ್ಟ ಸಿದ್ಧಾಂತಗಳು, ಅಭಿವೃದ್ಧಿಯ ಪ್ರಸ್ತುತತೆ, ಅಭಿವೃದ್ಧಿಯಲ್ಲಿ ರಾಜಕೀಯ, ನಾಗರಿಕ ಸಮಾಜ ಮತ್ತು ಸರಕಾರದ ಪಾತ್ರ, ಅಭಿವೃದ್ಧಿ ಯಾವ ರೀತಿ

ಸ್ಥಳಾಂತರಿಸುವಿಕೆಗೆ ಕಾರಣವಾಗುತ್ತದೆ. ಇದರ ಕಷ್ಟ ನಷ್ಟಗಳು ಯಾವುವು ಎಂಬಿತ್ಯಾದಿ ಪ್ರಮುಖ ಅಂಶಗಳನ್ನು ಮತ್ತು ಪ್ರಸ್ತುತ ಕ್ಷೇತ್ರದಲ್ಲಿ ಹಿಂದೆ ಆದಂತಹ ಪ್ರಮುಖ ಅಧ್ಯಯನಗಳ ಸಾಹಿತ್ಯ ಪರಾಮರ್ಶನವನ್ನು ಪ್ರಸ್ತುತ ಅಧ್ಯಯನದ ಸಮಸ್ಯೆಗಳು ಮತ್ತು ಉದ್ದೇಶಗಳನ್ನು ಗಮನದಲ್ಲಿರಿಸಿ ತುಲನಾತ್ಮಕವಾಗಿ ಹಾಗೂ ವಿಮರ್ಶಾತ್ಮಕವಾಗಿ ಪ್ರಥಮ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ–2: ಈ ಅಧ್ಯಾಯವು ಅಧ್ಯಯನ ಕೈಗೊಂಡ ದಕ್ಷಿಣ ಕನ್ನಡ ಜಿಲ್ಲೆಯ ಸ್ಥೂಲ ಪರಿಚಯವನ್ನು ಒಳಗೊಂಡಿರುತ್ತದೆ. ಜಿಲ್ಲೆಯ ಭೂವಿಸ್ತೀರ್ಣ, ಸಾಕ್ಷರತೆ, ಆರೋಗ್ಯ ಮತ್ತು 1990ರ ದಶಕದ ನಂತರ ಕೈಗಾರಿಕಾ ಕ್ಷೇತ್ರದಲ್ಲಿ ಆದಂತಹ ಬೆಳವಣಿಗೆಗಳನ್ನು ಚರ್ಚಿಸಲಾಗಿರುತ್ತದೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗೆ ಮತ್ತು ಭೂಸ್ವಾಧೀನ, ಪುನರ್‌ವಸತಿ ಪ್ಯಾಕೇಜಿನ ಬಗ್ಗೆ ಕರ್ನಾಟಕ ಸರಕಾರ ಕಾಲಕಾಲಕ್ಕೆ ಹೊರಡಿಸಿದ ಆದೇಶಗಳ ಬಗ್ಗೆ ದ್ವಿತೀಯ ಅಧ್ಯಾಯ ವಿವರಣೆಗಳನ್ನು ನೀಡುತ್ತದೆ. ಇದರಿಂದಾಗಿ ಸ್ಥಳಾಂತರದ ನಂತರ ಸಂತ್ರಸ್ತರು ಯಾವ ರೀತಿಯಲ್ಲಿ ತಮ್ಮ ಜೀವನವನ್ನು ನಡೆಸಲು ಸಾಧ್ಯವಾಗಿರುತ್ತದೆಯೆಂದು ತಿಳಿದುಕೊಳ್ಳಬಹುದಾಗಿದೆ.

ಅಧ್ಯಾಯ–3: ಈ ಅಧ್ಯಾಯವು ಕ್ಷೇತ್ರಕಾರ್ಯದ ವಿವರಣೆಯನ್ನು ಒಳಗೊಂಡಿದೆ. ಪ್ರಮುಖವಾಗಿ, ಭಾವನಾತ್ಮಕ ಸಂಬಂಧಗಳ ಶಿಥಿಲಗೊಳ್ಳುವಿಕೆ ಸೇರಿದಂತೆ ಶಿಕ್ಷಣ, ಆರೋಗ್ಯ, ಸಾಮಾಜಿಕ ಹಾಗೂ ಹೊಸ ಪರಿಸರಕ್ಕೆ ಮುಖಾಮುಖಿಯಾಗುವಾಗಿನ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿರುತ್ತದೆ. ನಂಬಿಕೆಗಳ ಪಲ್ಲಟ ಹಾಗೂ ಹೊಸ ನಂಬಿಕೆಗಳ ಸೃಷ್ಟಿಗಳ ಬಗ್ಗೆ ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಭೂಮಾಲಕತ್ವ ಕಳೆದುಕೊಂಡ ಕುಟುಂಬಗಳ ಸ್ಥಿತಿ–ಗತಿ, ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ ಸಂಬಂಧಿಸಿ ಭೂಸ್ವಾಧೀನ ತಂದೊಡ್ಡಿರುವ ಮೂಲಸೌಕರ್ಯಗಳು, ಸ್ಥಳಾಂತರ, ಪುನರ್‌ವಸತಿ, ಹೊಸನೆಲೆಗಳ ನಿರ್ಮಾಣ, ಸ್ಥಳಾಂತರದ ಪರಿಣಾಮದಿಂದ ಪುನರ್‌ವಸತಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರ ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳು ಮತ್ತು ಆದಂತಹ ಬದಲಾವಣೆಗಳನ್ನು ಈ ಅಧ್ಯಾಯವು ವಿವರಿಸುತ್ತದೆ.

ಅಧ್ಯಾಯ–4: ಸ್ಥಳಾಂತರ ಸಂತ್ರಸ್ತರ ಬದುಕಿನಲ್ಲಿ ಸೃಷ್ಟಿಸಿರುವ ಆರ್ಥಿಕ ಅವಾಂತರಗಳು ಮತ್ತು ಸ್ಥಿತ್ಯಂತರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿರುತ್ತದೆ. ಕೃಷಿಕ ಕುಟುಂಬಗಳು ಬೇರೊಂದು ಉದ್ಯೋಗಕ್ಕೆ ಒಗ್ಗಿಸಿಕೊಳ್ಳುವಲ್ಲಿ ಅನುಭವಿಸುವ ತಲ್ಲಣಗಳು, ಭೂಸ್ವಾಧೀನ ತಂದೊಡ್ಡಿರುವ ಮೂಲಸೌಕರ್ಯ ಸಂಬಂಧಿತ ಸಮಸ್ಯೆಗಳು, ತರಬೇತಿ ಮತ್ತು ಉದ್ಯೋಗ ಉಂಟು ಮಾಡಿರುವ ಆರ್ಥಿಕ ತೊಂದರೆಗಳನ್ನು ತುಲನಾತ್ಮಕವಾಗಿ ವಿವರಿಸುತ್ತದೆ.

ಅಧ್ಯಾಯ–5: ಭೂಸ್ವಾಧೀನ, ಸ್ಥಳಾಂತರ ಮತ್ತು ಪುನರ್‌ವಸತಿಯನ್ನು ಸಂತ್ರಸ್ತರು, ಅಧಿಕಾರಿಗಳು ಮತ್ತು ಹೋರಾಟಗಾರರು ಯಾವ ರೀತಿಯಲ್ಲಿ ಅರ್ಥೈಸಿಕೊಂಡಿರುತ್ತಾರೆ ಎಂಬುದನ್ನು ವಿಮರ್ಶಾತ್ಮಕವಾಗಿ

ವಿವರಿಸಲಾಗಿರುತ್ತದೆ. ಅಲ್ಲದೇ, ಪುನರ್‌ವಸತಿ, ಪರಿಹಾರದ ಪ್ಯಾಕೆಜ್‌ಗಳು, ಅವುಗಳ ಸಾಧನೆ ಮತ್ತು ವೈಫಲ್ಯ, ಪುನರ್‌ವಸತಿ ಕಾಲನಿಗಳಲ್ಲಿ ಅರಳಿದ ಹೊಸ ಬದುಕು ಹಾಗೂ ಕಳೆದುಕೊಂಡ ದಿನಗಳಲ್ಲಿದ್ದ ಪರಿಸ್ಥಿತಿಯ ಬಗ್ಗೆ ತೌಲನಿಕವಾಗಿ ವಿಶ್ಲೇಷಣೆಯನ್ನು ಒಳಗೊಂಡಿರುತ್ತದೆ.

ಉಪಸಂಹಾರ: ಉಪಸಂಹಾರವು ಅಧ್ಯಯನಕ್ಕಾಗಿ ಬಳಸಿಕೊಂಡ ತಾತ್ವಿಕ ನೆಲೆಗಟ್ಟು ಮತ್ತು ಕ್ಷೇತ್ರಕಾರ್ಯದಿಂದ ದೊರಕಿದ ಅಂಶಗಳನ್ನು ಕ್ರೋಢೀಕರಿಸಿ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಪ್ರಮುಖ ಫಲಿತಗಳನ್ನು ವಿವರಿಸುತ್ತದೆ. ಇಲ್ಲಿ ದಾಖಲಿಸಲ್ಪಟ್ಟ ಫಲಿತಗಳು ಕ್ಷೇತ್ರ ಅಧ್ಯಯನ ವೇಳೆ ಕಂಡು ಬಂದ ಅಂಶಗಳ ಕ್ರೋಢೀಕರಣವಾಗಿರುತ್ತದೆ. ಕ್ಷೇತ್ರಕಾರ್ಯಕ್ಕೆ ಅನುಗುಣವಾಗಿ ಕಂಡುಕೊಂಡ ಫಲಿತಗಳನ್ನು ಆಧಾರವಾಗಿರಿಸಿಕೊಂಡು ಪುನರ್‌ವಸತಿಯ ಪರಿಣಾಮಗಳನ್ನು ಯಾವ ರೀತಿಯಲ್ಲಿ ಕನಿಷ್ಠ ಮಟ್ಟಕ್ಕೆ ತರಬಹುದು ಎಂಬುವುದರ ಬಗೆಗೆ ಸೀಮಿತ ಸಲಹೆ ಮತ್ತು ಸೂಚನೆಗಳನ್ನು ಒಳಗೊಂಡಿರುತ್ತದೆ.

ಪರಾಮರ್ಶನ ಗ್ರಂಥಗಳು ಮತ್ತು ಕೊನೆ ಟಿಪ್ಪಣಿಗಳು

[1] ಮೈಕೆಲ್ ಸೆರ‍್ನಾ ಎಂ. (1998) ಇನ್‌ವಾಲ್ಯೆಂಟರಿ ರೀಸೆಟ್ಲ್‌ಮೆಂಟ್ ಇನ್ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಪಾಲಿಸಿ ಗೈಡ್ ಲೈನ್ಸ್ ಇನ್ ವರ್ಲ್ಡ್ ಬ್ಯಾಂಕ್ ಫೈನಾನ್ಸ್‌ಡ್ ಪ್ರಾಜೆಕ್ಟ್ಸ್, ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟನ್ ಡಿ.ಸಿ. ಪುಟ 3–14.

[2] ವಿಗಾಸ್ ಫಿಲಿಪ್ (1987) ದ ಹಿರಾಕುಡ್ ಡ್ಯಾಂ, ಜಸ್ಟಿಸ್ ಥರ್ಟಿ ಇಯರ್ಸ್ ಆಫ್ಟರ್, ಮಲ್ಟಿಪಲ್ ಆ್ಯಕ್ಷನ್ ರೀಸರ್ಚ್ ಗ್ರೂಪ್, ನ್ಯೂ ಡೆಲ್ಲಿ. ಪುಟ 68–73.

[3] ಅದೇ. ಪುಟ 69.

[4] ತನೇಜ ಎಂ.ಎಲ್. ಮತ್ತು ಮಯ್ಯರ್ ಆರ್. ಎಂ., (2000) ಎಕನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಎಂಡ್ ಪ್ಲಾನಿಂಗ್, ವಿಶಾಲ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ. ಪುಟ 13, 14.

[5] ಜೀನ್ ಡ್ರೀಜ್, ಮೀರಾ ಸಾಮ್ಸನ್, ಸತ್ಯಜಿತ್ ಸಿಂಗ್ (ಸಂ) (1997), ಡ್ಯಾಮ್ ಎಂಡ್ ದ ನೇಷನ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ. ಪುಟ 9–66.

[6] ಮೈಕೆಲ್ ಸೆರ‍್ನಾ (1999) ದ ಇಕನಾಮಿಕ್ಸ್ ಆಫ್ ಇನ್‌ವಾಲ್ಯೆಂಟರಿ ರಿಸೆಟ್ಲ್‌ಮೆಂಟ್, ಕ್ವಶ್ಚನ್ಸ್ ಎಂಡ್ ಚಾಲೆಂಜಸ್ (ಸಂ), ವರ್ಲ್ಡ್ ಬ್ಯಾಂಕ್ ವಾಷಿಂಗ್‌ಟನ್ ಡಿ.ಸಿ. ಪುಟ 6–247.

[7] ಅದೇ. ಪುಟ 36,37.

[8] ಕ್ಲಾಡ್ ಆಲ್ವರಿಸ್, ರಮೇಶ್ ಬಿಲ್ಲೋರಿ (1998) ಡ್ಯಾಮಿಂಗ್ ದ ನರ್ಮದಾ, ನಟರಾಜ್ ಪಬ್ಲಿಷರ್ಸ್, ಡೆಹ್ರಾಡೂನ್. ಪುಟ 1–58.

[9] ಅದೇ. ಪುಟ 1–58.

[10] ಸಾಯಿನಾಥ ಪಿ., (2004) ಎವರಿ ವನ್ ಲವ್ಸ್ ಎ ಗುಡ್ ಡ್ರೌಟ್, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ. ಪುಟ 3–269.

[11] ಹರಿಮೋಹನ ಮಾಥೂರ್, ಡೇವಿಡ್ ಮರ್ಸಿಡನ್ (2006) ಮೆನೆಜಿಂಗ್ ರೀಸೆಟ್ಲ್‌ಮೆಂಟ್ ಇನ್ ಇಂಡಿಯಾ, ಎಪ್ರೋಚಸ್, ಇಶ್ಯೂಸ್, ಎಕ್ಸ್‌ಪೀರಿಯನ್ಸಸ್, (ಸಂ) ಒರಿಯೆಂಟಲ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ. ಪುಟ 1–22.

[12] ಅದೇ. ಪುಟ 1–22.

[13] ಅದೇ. ಪುಟ 1–22.

[14] ಅದೇ. ಪುಟ 182–196.

[15] ಸಾವಿತ್ರಿ ರಾಮಯ್ಯ (2006) ಇಂಪ್ಯಾಕ್ಟ್ ಆಫ್ ಇನ್‌ವಾಲ್ಯೆಂಟರಿ ರೀಸೆಟ್ಲ್‌ಮೆಂಟ್ ಆನ್ ಲೆವೆಲ್ಸ್ ಆಫ್ ಲೀವಿಂಗ್, ಇನ್ ಹರಿಮೋಹನ್ ಮಾಥೂರ್ಸ್ (ಸಂ) ಮೆನೆಜಿಂಗ್ ರೀಸೆಟ್ಲ್‌ಮೆಂಟ್ ಇನ್ ಇಂಡಿಯಾ, ಎಪ್ರೋಚಸ್ ಎಂಡ್ ಇಸ್ಯೂಸ್, ಎಕ್ಸ್‌ಪಿರಿಯನ್ಸಸ್. ಓರಿಯೆಂಟಲ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ. ಪುಟ 123–141.

[16] ಖಾಸಗಿ ಆಸ್ತಿಗಳನ್ನು ಸಾರ್ವಜನಿಕ ಉದ್ದೇಶಕ್ಕೋಸ್ಕರ ಸರಕಾರಗಳು ಸ್ವಾಧೀನಪಡಿಸುವ ಅಧಿಕಾರವನ್ನು 'ರಾಷ್ಟದ ವಿಶೇಷ ಅಧಿಕಾರ' ಎನ್ನುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಬ್ಲ್ಯಾಕ್ಸ್‌ಲಾ ಡಿಕ್ಷನರಿ (ಆರನೇಯ ಪುನರ್‌ಮುದ್ರಣ). ಪುಟ 523, 1990.

[17] ಗವರ್ನ್‌ಮೆಂಟ್ ಆಫ್ ಇಂಡಿಯಾ (2005) 'ದ ಸ್ಪೆಷಲ್ ಎಕನಾಮಿಕ್ ಝೋನ್ಸ್ ಆ್ಯಕ್ಟ್, ಎವೈಲೇಬಲ್ ಎಟ್‌ಎಚ್‌ಟಿಟಿಪಿ/ಡಬ್ಲ್ಯುಡಬ್ಲ್ಯುಡಬ್ಲ್ಯು.ಎಸ್‌ಇಝಡ್.ಕಾಮ್/ಡಾಕ್ಯುಮೆಂಟ್ಸ್/ಎಸ್‌ಇಝಡ್‌ಆ್ಯಕ್ಟ್.ಪಿ.ಡಿ.ಎಫ್.

[18] 2014ರಲ್ಲಿ ಎನ್.ಡಿ.ಎ ನೇತೃತ್ವದ ಕೇಂದ್ರ ಸರಕಾರ ಆಧ್ಯಾದೇಶದ ಮೂಲಕ ಹೊರಡಿಸಿದ ಭೂಸ್ವಾಧೀನ ಮತ್ತು ಸ್ಥಳಾಂತರಕ್ಕೆ ಸಂಬಂಧಪಟ್ಟಂತೆ ಹೊರಡಿಸಿದ ನೀತಿಯ ವಿವರಣೆ.

[19] ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿಯಿಂದ ಪಡೆದ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಸ್ವಾಧೀನ ಪಡಿಸಿದ ಭೂಮಿಯ ಅಂಕಿ ಅಂಶಗಳು

[20] 1930 ರಲ್ಲಿ ಜಗತ್ತು ಕಂಡ ಆರ್ಥಿಕ ಕುಸಿತ ಮತ್ತು ಬಿಕ್ಕಟ್ಟಿನಿಂದಾಗಿ ಜಾಗತಿಕ ಮಟ್ಟದಲ್ಲಿ ರಾಷ್ಟಗಳ ಪುನರ್‌ನಿರ್ಮಾಣ ಯಾವ ರೀತಿಯಲ್ಲಿ ಆಗಬೇಕು ಎಂಬ ಚರ್ಚೆ ಆರಂಭವಾಯಿತು. ಜಾನ್ ಮೆನಾರ್ಡ್ ಕೀನ್ಸ್, ಜನರಲ್ ಥಿಯರಿ ಆಫ್ ಎಂಪ್ಲಾಯ್‌ಮೆಂಟ್.

[21] ಶ್ರೀವಾಸ್ತವ (1998) (ಸಂ) ದ ಡೆವಲಪ್‌ಮೆಂಟಲ್ ಡಿಬೇಟ್, ಕ್ರಿಟಿಕಲ್ ಪರ್‌ಸ್ಪೆಕ್ಟಿವ್ಸ್, ರಾವತ್ ಪಬ್ಲಿಕೇಷನ್ಸ್, ಜೈಪುರ. ಪುಟ 1–18.

[22] ರಜನಿ ಕೊಠಾರಿ (1998) (ಸಂ) ರೀಥಿಂಕಿಂಗ್ ಡೆವಲಪ್‌ಮೆಂಟ್ : ಇನ್ ಸರ್ಚ್ ಆಫ್ ಹ್ಯೂಮನ್ ಆಲ್ಟರ್‌ನೇಟಿವ್ಸ್, ಅಜಂತ ಪಬ್ಲಿಕೇಶನ್ಸ್, ನ್ಯೂಡೆಲ್ಲಿ. ಪುಟ 4–15.

[23] ಸೇನ್ ಅಮರ್ತ್ಯ ಕೆ., ಜೀನ್ ಡ್ರೀಜ್ (1999) ಒಮ್ನಿ ಬಸ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ. ಪುಟ 39–51.

[24] ಎಲ್ಲಾ ಕ್ಷೇತ್ರದಲ್ಲಿ ಏಕ ಕಾಲದಲ್ಲಿ ಬಂಡವಾಳವನ್ನು ತೊಡಗಿಸಿ ಅಭಿವೃದ್ಧಿಯನ್ನು ಸಾಧಿಸುವುದು. ನಾರ್ಮನ್ ಎಸ್. ಬುಕನಾನ್ (1946), ಡೆಲಿಬರೇಟ್ ಇಂಡಸ್ಟ್ರಿಯಲೈಸೇಷನ್ ಫಾರ್ ಹೈಯರ್ ಇನ್‌ಕಮ್, ಎಕನಾಮಿಕ್ ಜರ್ನಲ್, ಡಿಸಂಬರ್ ವಾಲ್ಯೂಮ್ 56, ಲಂಡನ್. ಪುಟ 53–67.

[25] ನಾರ್ಮನ್ ಎಸ್. ಬುಕನಾನ್ (1946), ಡೆಲಿಬರೇಟ್ ಇಂಡಸ್ಟ್ರಿಯಲೈಸೇಷನ್ ಫಾರ್ ಹೈಯರ್ ಇನ್‌ಕಮ್, ಎಕನಾಮಿಕ್ ಜರ್ನಲ್, ಡಿಸಂಬರ್ ವಾಲ್ಯೂಮ್ 56, ಲಂಡನ್. ಪುಟ 53–67.

[26] ಅದೇ. ಪುಟ 53–67.

[27] ಹಿಗ್ಗಿನ್ಸ್ ಬಿ. (1986), ದ ಡ್ಯುಯಲಿಸ್ಟಿಕ್ ಥಿಯರಿ ಆಫ್ ಅಂಡರ್ ಡೆವಲಪ್‌ಡ್ ಏರಿಯಾಸ್, ಎಕನಾಮಿಕ್ ಡೆವಲಪ್‌ಮೆಂಟ್ ಎಂಡ್ ಕಲ್ಚರಲ್ ಚೇಂಜ್, ವಾಲ್ಯೂಮ್ ನಂ.2, ಜನವರಿ. ಪುಟ 86–89.

[28] ಪೌಲ್ ರೊಸೆನ್‌ಸ್ಟೈನ್ ರೊಡಾನ್ ಎನ್. (1943), ಪ್ರಾಬ್ಲಮ್ಸ್ ಆಫ್ ಇಂಡಸ್ಟ್ರಿಯಲೈಸೇಷನ್ ಆಫ್ ಈಸ್ಟರ್ನ್ ಎಂಡ್ ಸೌತ್ ಈಸ್ಟರ್ನ್ ಯೂರೋಪ್, ಎಕನಾಮಿಕ್ ಜರ್ನಲ್, ವಾಲ್ಯೂಮ್ 55, ಜುಲೈ–ಸೆಪ್ಟೆಂಬರ್, ಪುಟ 202–221.

[29] ಮ್ಯಿಂಟ್ ಎಚ್.ಎಲ್.(1971) ಎಕನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಎಂಡ್ ಪ್ಲಾನಿಂಗ್, ವಿಶಾಲ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ. ಪುಟ 23–69.

[30] ಲೈಬೆನ್‌ಸ್ಟೈನ್ ಹಾರ್ವೆ (1957) ಎಕನಾಮಿಕ್ಸ್ ಬ್ಯಾಕ್‌ವರ್ಡ್‌ನೆಸ್ ಎಂಡ್ ಎಕನಾಮಿಕ್ ಗ್ರೋಥ್, ಸ್ಟಡೀಸ್ ಇನ್ ದ ಥಿಯರಿ ಆಫ್ ಎಕನಾಮಿಕ್ ಡೆವಲಪ್‌ಮೆಂಟ್. ಪುಟ 4–28.

[31] ನೆಲ್ಸನ್ ಆರ್.ಆರ್. (1956) ಎ ಥಿಯರಿ ಆಫ್ ಲೋ ಲೆವೆಲ್ ಇಕ್ವಿಲಿಬ್ರಿಯಮ್ ಟ್ರ್ಯಾಪ್, ಎ.ಇ.ಆರ್, ಡಿಸೆಂಬರ್. ಪುಟ 1–29.

[32] ಲೈಬೆನ್‌ಸ್ಟೈನ್ ಹಾರ್ವೆ (1957) ಎಕನಾಮಿಕ್ ಬ್ಯಾಕ್‌ವರ್ಡ್‌ನೆಸ್ ಎಂಡ್ ಎಕನಾಮಿಕ್ ಗ್ರೋಥ್, ಸ್ಟಡೀಸ್ ಇನ್ ದ ಥಿಯರಿ ಆಫ್ ಎಕನಾಮಿಕ್ ಡೆವಲಪ್‌ಮೆಂಟ್. ಪುಟ 4–28.

[33] ಅದೇ. ಪುಟ 4–28.

[34] ನೆಲ್ಸನ್ ಆರ್.ಆರ್. (1956) ಎ ಥಿಯರಿ ಆಫ್ ಲೋ ಲೆವೆಲ್ ಇಕ್ವಿಲಿಬ್ರಿಯಮ್ ಟ್ರ್ಯಾಪ್, ಎ.ಇ.ಆರ್, ಡಿಸೆಂಬರ್. ಪುಟ 1–29.

[35] ಅದೇ. ಪುಟ 1–29.

[36] ಪೌಲ್ ರೊಸೆನ್‌ಸ್ಟೈನ್ ರೊಡಾನ್ (1943), ಪ್ರಾಬ್ಲಮ್ಸ್ ಆಫ್ ಇಂಡಸ್ಟ್ರಿಯಲೈಸೇಷನ್ ಆಫ್ ಈಸ್ಟರ್ನ್ ಎಂಡ್ ಸೌತ್ ಈಸ್ಟರ್ನ್ ಯೂರೋಪ್, ಎಕಾನಮಿಕ್ ಜರ್ನಲ್, ವಾಲ್ಯೂಮ್ 55, ಸೆಪ್ಟೆಂಬರ್. ಪುಟ 202–221.

[37] ರಗ್ನಾರ್ ನರ್ಕ್ಸ್ (1961) ಪ್ರಾಬ್ಲಮ್ಸ್ ಆಫ್ ಕ್ಯಾಪಿಟಲ್ ಫಾರ್ಮೇಷನ್ ಇನ್ ಅಂಡರ್‌ಡೆವಲಪ್‌ಡ್ ಕಂಟ್ರೀಸ್, ಆಕ್ಸ್‌ಫರ್ಡ್ ಯುನಿವರ್ಸಿಟಿ, ನ್ಯೂಯಾರ್ಕ್.

[38] ಹರ್ಷ್‌ಮೆನ್ ಎ.ಬಿ. (1958) ದ ಸ್ಟ್ರಾಟಜಿ ಆಫ್ ಎಕನಾಮಿಕ್ ಡೆವಲಪ್‌ಮೆಂಟ್, ಯೆಲೆ ಯುನಿವರ್ಸಿಟಿ ಪ್ರೆಸ್, ನ್ಯೂ ಹೆವನ್. ಪುಟ 6–187.

[39] ಪೀಟರ್ಸ್ ನಡರ್‌ವಿನ್ (2001) ಡೆವಲಪ್‌ಮೆಂಟ್ ಥಿಯರಿ ರೀಕನ್‌ಸ್ಟ್ರಕ್ಷನ್ಸ್ ಎಂಡ್ ಡೀಕನ್‌ಸ್ಟ್ರಕ್ಷನ್ಸ್, ವಿಸ್ತಾರ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ. ಪುಟ 52–98.

[40] ಡೆಗ್ ಹೆಮರ್‌ಸ್ಕೋಲ್ಡ್ ಫೌಂಡೇಶನ್, ಅಮೇರಿಕಾ ನೀಡಿದ ಅಭಿವೃದ್ಧಿಯ ವ್ಯಾಖ್ಯಾನದ ವರದಿ (1975)

[41] ಶೂಮಾಕರ್ ಇ.ಎಫ್. (1973) ಸ್ಮಾಲ್ ಈಸ್ ಬ್ಯೂಟಿಫುಲ್, ಬ್ಲಾಂಡ್ ಎಂಡ್ ಬ್ರಿಕ್ಸ್, ಲಂಡನ್. ಪುಟ 143–147.

[42] ಡಾರೆನ್ ಎಕಮೊಗ್ಲು (1980), ಇಂಟ್ರಡಕ್ಷನ್ ಟು ಮಾಡರ್ನ್ ಎಕನಾಮಿಕ್ ಗ್ರೋತ್, ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್ ನ್ಯೂಜೆರ್ಸಿ. ಪುಟ 86–92.

[43] ತನೇಜ ಎಂ.ಎಲ್. ಮತ್ತು ಮಯ್ಯರ್ ಆರ್.ಎಂ. (2000) ಎಕನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಎಂಡ್ ಪ್ಲಾನಿಂಗ್, ವಿಶಾಲ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ. ಪುಟ 4–22.

[44] ಮೇಧಾ ಪಾಟ್ಕರ್ (1989) ದ ಟ್ರಾಜಿಕ್ ಸ್ಟೋರಿ ಆಫ್ ಡಿಸ್‌ಪ್ಲೇಸ್‌ಮೆಂಟ್ : ಎ ಕೇಸ್ ಸ್ಟಡಿ ಆಫ್ ಟ್ರೈಬಲ್ಸ್ ಎಫೆಕ್ಟೆಡ್ ಬೈ ಸರದಾರ್ ಸರೋವರ್ ಪ್ರಾಜೆಕ್ಟ್ ಇನ್ ಎ.ಪಿ. ಫೆರ್ನಾಂಡೀಸ್ (ಸಂ) ರಿಪೋರ್ಟ್ ಆಫ್ ವರ್ಕ್‌ಶಾಪ್ ಆನ್ ರಿಹ್ಯಾಬಿಲಿಟೇಷನ್ ಆಫ್ ಪರ್ಸನ್ಸ್ ಡಿಸ್‌ಪ್ಲೇಸ್‌ಡ್ ಬೈ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಐಸೆಕ್, ಬೆಂಗಳೂರು. ಪುಟ 123–129.

[45] ಗ್ರೆಗರಿ ಪತ್ರಾವೊ, ಮಂಗಳೂರು ವಿಶೇಷ ಆರ್ಥಿಕ ವಲಯದ ಭೂಸ್ವಾಧೀನದ ವಿರುದ್ಧ ಹೋರಾಡಿದ ಕೃಷಿಕನನ್ನು ಬಲವಂತದಿಂದ ಸ್ಥಳಾಂತರ ಮಾಡಿರುವುದು.

[46] ಮೈಕೆಲ್ ಸೆರ್ನ್ನಾ (1998) ಇನ್‌ವಾಲ್ಯೆಂಟರಿ ರೀಸೆಟ್ಲ್‌ಮೆಂಟ್ ಇನ್ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಪಾಲಿಸಿ ಗೈಡ್ ಲೈನ್ಸ್ ಇನ್ ವರ್ಲ್ಡ್ ಬ್ಯಾಂಕ್ ಫೈನಾನ್ಸ್‌ಡ್ ಪ್ರಾಜೆಕ್ಟ್ಸ್, ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟನ್ ಡಿ.ಸಿ. ಪುಟ 211–242.

[47] ನರ್ಮದಾ ನದಿ ನೀರಿನ ಹಂಚಿಕೆಯ ಬಗ್ಗೆ ತೀರ್ಪನ್ನು ನೀಡಿದ ನ್ಯಾಯ ಮಂಡಳಿಯ ತೀರ್ಪಿನ ಉಲ್ಲೇಖ.

[48] ಡಾ. ಚಿಕಾತಿ ಶ್ರೀನೂ (2013), ಚಾಲೆಂಜಸ್ ಎಂಡ್ ಫ್ಯೂಚರ್ ಆಫ್ ಸ್ಪೆಷಲ್ ಎಕನಾಮಿಕ್ ಝೋನ್ಸ್ ಇನ್ ಇಂಡಿಯಾ – ಎ ಪರ್ಸ್‌ಪೆಕ್ಟಿವ್, ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಮಾರ್ಕೆಟಿಂಗ್ ಫಿನಾನ್ಸಿಯಲ್ ಸರ್ವಿಸಸ್ ಎಂಡ್ ಮ್ಯಾನೇಜ್‌ಮೆಂಟ್ ರೀಸರ್ಚ್ ವಾಲ್ಯೂಮ್ 2, ಮಾರ್ಚ್. ಪುಟ 2277–2291.

[49] ಗವರ್ನ್‌ಮೆಂಟ್ ಆಫ್ ಇಂಡಿಯಾ (2005) 'ದ ಸ್ಪೆಷಲ್ ಎಕನಾಮಿಕ್ ಝೋನ್ಸ್ ಆ್ಯಕ್ಟ್, ಎವೈಲೇಬಲ್ ಎಟ್ ಎಚ್‌ಟಿಟಿಪಿ/ಡಬ್ಲ್ಯುಡಬ್ಲ್ಯುಡಬ್ಲ್ಯು.ಎಸ್‌ಇಝಡ್.ಕಾವ್/ಡಾಕ್ಯುಮೆಂಟ್ಸ್/ ಎಸ್‌ಇಝಡ್‌ಆ್ಯಕ್ಟ್.ಪಿ.ಡಿ.ಎಫ್.

[50] ಅದೇ.

[51] ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಚೇರಿಯಿಂದ ವಿಶೇಷ ಆರ್ಥಿಕ ವಲಯದ ಸ್ಥಾಪನೆಗೆ ಸಂಬಂಧಪಟ್ಟಂತೆ ಸ್ವಾಧೀನಪಡಿಸಿದ ಭೂಮಿಯ ಬಗೆಗೆ ಪಡೆದ ಅಂಕಿ ಅಂಶಗಳು.

[52] ಮೈಕೆಲ್ ಸೆರ್ನ್ನಾ (1999) ದ ಇಕನಾಮಿಕ್ಸ್ ಆಫ್ ಇನ್‌ವಾಲ್ಯೆಂಟರಿ ರಿಸೆಟ್ಲ್‌ಮೆಂಟ್, ಕ್ವೆಶ್ಚನ್ಸ್ ಎಂಡ್ ಚಾಲೆಂಜಸ್ (ಸಂ), ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟನ್ ಡಿ.ಸಿ. ಪುಟ 32–34.

[53] ಕೇಶವ ಉಚ್ಚಿಲ (2000) ಶತಮಾನದ ಬೀಸು ನೋಟ ಇನ್ ಪೊಲಿ (ಸಂ) ಮುಕುಂದ ಪ್ರಭು, ದಕ್ಷಿಣಕನ್ನಡ ಜಿಲ್ಲಾಡಳಿತ, ಮಂಗಳೂರು. ಪುಟ 78–87.

[54] ಕೆ.ಐ.ಎ.ಡಿ.ಬಿ., ಮಂಗಳೂರು ಕಛೇರಿಯಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಸ್ವಾಧೀನಪಡಿಸಲಾದ ಭೂಮಿಯ ಬಗೆಗಿನ ಅಂಕಿ ಅಂಶಗಳು. 2012.

ಅಧ್ಯಾಯ–1

ಭಾರತದಲ್ಲಿ ಅಭಿವೃದ್ಧಿ ಮತ್ತು ಸ್ಥಳಾಂತರದ ಬಗೆಗಿನ ಪರಿಕಲ್ಪನಾತ್ಮಕ ವಿವರಣೆ

ಅಧ್ಯಾಯ–1

ಭಾರತದಲ್ಲಿ ಅಭಿವೃದ್ಧಿ ಮತ್ತು ಸ್ಥಳಾಂತರದ ಬಗೆಗಿನ ಪರಿಕಲ್ಪನಾತ್ಮಕ ವಿವರಣೆ

ಆಧುನೀಕರಣ ಮತ್ತು ಜಾಗತೀಕರಣದ ಭಾಗವಾಗಿ ರೂಪುಗೊಂಡ ವಿಶೇಷ ಆರ್ಥಿಕ ವಲಯಗಳು ಮತ್ತು ಅಭಿವೃದ್ಧಿ ಎಂದು ಕರೆಯಲ್ಪಡುವ ಇತರೆ ಯೋಜನೆಗಳನ್ನು ಅರ್ಥೈಸಿಕೊಳ್ಳುವ ಚರ್ಚೆಯನ್ನು ಪ್ರಸ್ತಾವನೆಯಲ್ಲಿ ಮಾಡಲಾಗಿರುತ್ತದೆ ಹಾಗೂ ಅಧ್ಯಯನಕ್ಕೆ ಪೂರಕವಾದ ಮೂಲಭೂತ ಪರಿಕ್ರಮ, ಸಮಸ್ಯೀಕರಣ ಮತ್ತು ಉದ್ದೇಶಗಳು, ಇತಿಮಿತಿಗಳು ಮತ್ತು ವೈಜ್ಞಾನಿಕ ವಿಧಾನಗಳನ್ನು ಸವಿವರವಾಗಿ ಪ್ರಸ್ತಾಪಿಸಲಾಗಿರುತ್ತದೆ. ಅಧ್ಯಯನವು ಸಾಗಿದ ದಾರಿಯನ್ನು ಒಂದು ಚೌಕಟ್ಟಿನೊಳಗೆ ಹಿಡಿದಿಡುವ ಪ್ರಯತ್ನವನ್ನು ಪ್ರಸ್ತಾವನೆಯಲ್ಲಿ ಮಾಡಲಾಗಿರುತ್ತದೆ. ಇದರ ಮುಂದುವರಿದ ಭಾಗವಾಗಿ ವಿಶೇಷ ಆರ್ಥಿಕ ವಲಯಗಳು ಹುಟ್ಟಿಕೊಂಡ ನಂತರದಲ್ಲಿ ಅಲ್ಲಿನ ಸಂತ್ರಸ್ತರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಅರಿತುಕೊಳ್ಳಲು ಒಂದು ತಾತ್ವಿಕ ಮತ್ತು ಸೈದ್ಧಾಂತಿಕ ಚೌಕಟ್ಟಿನ ಅಗತ್ಯತೆಯನ್ನು ಮನಗಂಡು, ಅಧ್ಯಾಯ ಒಂದರಲ್ಲಿ ಅವುಗಳನ್ನು ವಿವರಿಸಲಾಗಿದೆ. ಹಲವು ವಿದ್ವಾಂಸರು ಈಗಾಗಲೇ ನೀಡಿದಂತಹ ಸಾಹಿತ್ಯಗಳನ್ನು ಮತ್ತು ಈ ಕ್ಷೇತ್ರದಲ್ಲಿ ನಡೆದಿರುವ ಹಲವಾರು ಅಧ್ಯಯನಗಳನ್ನು ಅಡಿಪಾಯವಾಗಿರಿಸಿ ಪ್ರಸ್ತುತ ಅಧ್ಯಯನಕ್ಕೆ ತಾತ್ವಿಕ ನೆಲೆಗಟ್ಟನ್ನು ರಚಿಸಿಕೊಳ್ಳಲಾಗಿರುತ್ತದೆ.

1.1 ಸ್ಥಳಾಂತರ ಮತ್ತು ಪುನರ್‌ವಸತಿಯ ಬಗೆಗಿನ ಸಾಹಿತ್ಯ ವಿಮರ್ಶೆ

ವೈಜ್ಞಾನಿಕ ಅಧ್ಯಯನಗಳಲ್ಲಿ ಸಾಹಿತ್ಯ ಪರಾಮರ್ಶನದ ಪ್ರಾಮುಖ್ಯತೆಯನ್ನು ವಿವರಿಸುತ್ತಾ ಜಾನ್ ಡಬ್ಲ್ಯು. ಬೆಸ್ಟ್‌ರವರು (2006) 'ಈಗಾಗಲೇ ಪ್ರಸ್ತುತ ಕ್ಷೇತ್ರದಲ್ಲಿ ಅಧ್ಯಯನವನ್ನು ನಡೆಸಿರುವ ತಜ್ಞರ ಬರವಣಿಗೆಗಳು ಅಧ್ಯಯನದ ಚೌಕಟ್ಟನ್ನು ಮತ್ತಷ್ಟು ಸಾಮೀಪ್ಯಕ್ಕೆ ತಂದು ಫಲಿತಗಳನ್ನು ಹಾಗೂ ಅಧ್ಯಯನದಿಂದ ಹೊರಗಿಡಲ್ಪಟ್ಟ ವಿಷಯಗಳ ಬಗ್ಗೆ ನಿಖರವಾದ ಮಾಹಿತಿಯನ್ನು ನೀಡುತ್ತದೆ. ಪರಿಪೂರ್ಣ ಸಂಶೋಧನೆಗಳು ಈಗಾಗಲೇ ಸ್ಥಾಪಿಸಲ್ಪಟ್ಟ ಜ್ಞಾನದ ಬಗೆಗೆ ತಿಳಿಸಿ ಆದ ಕಾರ್ಯಗಳು ಮತ್ತೊಮ್ಮೆ ಮರುಕಳಿಸದಂತೆ ತಡೆಯುತ್ತದೆ. ಅಧ್ಯಯನ ಸರಿಯಾದ ದಿಕ್ಕಿನಲ್ಲಿ ವ್ಯವಸ್ಥಿತವಾಗಿ ನಡೆಯುವುದಕ್ಕೆ ಮಾರ್ಗದರ್ಶನವನ್ನು ನೀಡುತ್ತದೆ'[1] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆದುದರಿಂದ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಈಗಾಗಲೇ ನಡೆದಂತಹ ಪ್ರಬುದ್ಧ ಅಧ್ಯಯನಗಳು, ಸಂಶೋಧನಾ ಲೇಖನಗಳು, ಸರಕಾರದ ನೀತಿ ನಿರೂಪಣೆಗಳ ಬಗೆಗೆ ಪ್ರಸ್ತುತ ಅಧ್ಯಾಯದಲ್ಲಿ ವಿಮರ್ಶಾತ್ಮಕವಾಗಿ ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಳಾಂತರ ಮತ್ತು ಅದು ತಂದೊಡ್ಡಿರುವ ಮೂಲಭೂತ ಸಮಸ್ಯೆಗಳಿಗೆ ತುಲನಾತ್ಮಕವಾಗಿ ಪ್ರಸ್ತುತ ಅಧ್ಯಯನದ ಉದ್ದೇಶಗಳಿಗೆ ಪೂರಕವಾಗಿ ಚರ್ಚಿಸಲಾಗಿರುತ್ತದೆ.

ಕೈಗಾರಿಕೀಕರಣ ಪ್ರಕ್ರಿಯೆಯು ಒಂದು ರಾಷ್ಟ್ರವು ಅಭಿವೃದ್ಧಿಯನ್ನು ಸಾಧಿಸುತ್ತಿರುವುದರ ದ್ಯೋತಕವಾಗಿರುತ್ತದೆ. ಬೃಹತ್ ಕೈಗಾರಿಕಾ ಸಂಕೀರ್ಣಗಳ ಸ್ಥಾಪನೆ, ಅಣೆಕಟ್ಟುಗಳ ನಿರ್ಮಾಣ, ದೇಶದಾದ್ಯಂತ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆ, ವಿದ್ಯುತ್ ಉತ್ಪಾದಿಸುವ ಸ್ಥಾವರಗಳ ರಚನೆಯು ದೊಡ್ಡ ಪ್ರಮಾಣದಲ್ಲಿ ಸಂತ್ರಸ್ತರ ಸ್ಥಳಾಂತರಕ್ಕೆ ಕಾರಣವಾಗಿರುತ್ತದೆ ಹಾಗೂ ಅವರುಗಳಿಗೆ ಇನ್ನೊಂದು ಪ್ರದೇಶದಲ್ಲಿ ಪುನರ್‌ವಸತಿಯನ್ನು ಕಲ್ಪಿಸುವ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ಭಾರತದಲ್ಲಿ ಮತ್ತು ವಿಶ್ವದಾದ್ಯಂತ ಕೈಗಾರಿಕೆಗಳ ಸ್ಥಾಪನೆಯಿಂದ ಉಂಟಾಗಿರುವ ಸ್ಥಳಾಂತರಕ್ಕಿಂತಲೂ ಹೆಚ್ಚಾಗಿ ಅಣೆಕಟ್ಟುಗಳ ನಿರ್ಮಾಣದಿಂದ ಉದ್ಭವಿಸುವ ಸ್ಥಳಾಂತರ ಮತ್ತು ಪುನರ್‌ವಸತಿಗಳಿಗೆ ಸಂಬಂಧಪಟ್ಟಂತೆ ಅಧ್ಯಯನಗಳು ನಡೆದಿರುವುದನ್ನು ಸಾಹಿತ್ಯ ಪರಾಮರ್ಶನದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ.

ಮ್ಯಾಥ್ಯೂ ಅರೆಪೆರಂಬಿಲ್‌ರವರು (1988) "ಕೈಗಾರಿಕೆಗಳು, ಗಣಿಗಳು ಮತ್ತು ಸ್ಥಳೀಯ ನಿವಾಸಿಗಳು ತಮ್ಮ ಭೂಮಿಗಳನ್ನು ಕಳೆದುಕೊಂಡಿರುವುದು – ಛೋಟಾನಾಗ್ಪುರವನ್ನು ಅನುಲಕ್ಷಿಸಿ" ಎಂಬ ಅಧ್ಯಯನದ ಪ್ರಮುಖ ಉದ್ದೇಶವು ಮಹಾರಾಷ್ಟ್ರದಲ್ಲಿ ಸ್ಥಾಪನೆಯಾದ ಬೃಹತ್ ಕೈಗಾರಿಕೆಗಳ ಔಚಿತ್ಯ ಮತ್ತು ಗಣಿಗಾರಿಕೆಗಳಿಂದ ಛೋಟಾನಾಗ್ಪುರ ಪ್ರದೇಶದ ಸ್ಥಳೀಯ ನಿವಾಸಿಗಳು ಯಾವ ರೀತಿಯಲ್ಲಿ ತಮ್ಮ ಭೂಮಿಯನ್ನು ಕಳೆದುಕೊಂಡು ವಂಚನೆಗೊಳಗಾದರು ಎಂಬುದನ್ನು ವಿವರಿಸುವುದಾಗಿತ್ತು. ಅಧ್ಯಯನದ ಫಲಿತವು ಛೋಟಾನಾಗ್ಪುರ ಪ್ರದೇಶದ ಶ್ರೀಮಂತರುಗಳು ಮತ್ತಷ್ಟು ಹೆಚ್ಚು ಸಿರಿವಂತರಾದ ಬಗ್ಗೆ, ಹಾಗೂ ಅಲ್ಲಿನ ಸ್ಥಳೀಯ ಬಡಜನತೆಯ ಜೀವನ ದಾರಿದ್ರ್ಯಕ್ಕೆ ತಳ್ಳಲ್ಪಟ್ಟಿರುವುದನ್ನು ಬೆಟ್ಟು ಮಾಡಿ ವಿವರಿಸುತ್ತದೆ.[2] ಅಲ್ಲಿನ ಶ್ರೀಮಂತರು ಮತ್ತು ಪ್ರಭಾವಶಾಲಿಗಳು ದುರ್ಬಲರ ಮತ್ತು ದೀನದಲಿತರ ಸಂಪತ್ತನ್ನು ಲೂಟಿಮಾಡಿರುವುದಷ್ಟೇ ಅಲ್ಲದೇ ಅವರುಗಳನ್ನು ನಿಕೃಷ್ಟವಾಗಿ ಕಂಡಿರುವುದನ್ನು ಉಲ್ಲೇಖಿಸಿರುತ್ತದೆ. ಸ್ಥಳೀಯ ಬಡಜನತೆ ಯಾವ ರೀತಿಯಿಂದ ವ್ಯವಸ್ಥಿತವಾಗಿ ಮತ್ತು ಅಸಹಾಯಕರಾಗಿ ತಮ್ಮ ಹೆಸರಿನಲ್ಲಿದ್ದ ಭೂಮಿಯನ್ನು ಕಳೆದುಕೊಂಡರು ಹಾಗೂ ಅಭಿವೃದ್ಧಿಯ ಫಲಗಳನ್ನು ಅನುಭವಿಸುವುದರಿಂದ ಹೊರಗಿಡಲ್ಪಟ್ಟರು ಎಂದು ತಿಳಿಸಿದ ಅಧ್ಯಯನವು ರಾಜಕೀಯ ಸ್ವಾಯತ್ತತೆ, ಸಮುದಾಯದ ಅಭಿವೃದ್ಧಿ ಮತ್ತು ರಾಷ್ಟ್ರೀಯ ಹಿತಾಸಕ್ತಿಯ ಹೆಸರಿನಲ್ಲಿ ಬಡಜನತೆಯ ಒಗ್ಗಟ್ಟು ಯಾವ ರೀತಿಯಲ್ಲಿ ಚೂರುಚೂರಾಯಿತು ಎಂಬುವುದನ್ನು ವಿವರಿಸುತ್ತದೆ.[3] ಅಭಿವೃದ್ಧಿ ಮತ್ತು ಸ್ಥಳಾಂತರದ ಪರಿಕಲ್ಪನೆಯು ಬಡಜನರ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಸಂಪೂರ್ಣವಾಗಿ ಕಸಿದುಕೊಂಡು ದಾರಿದ್ರ್ಯಕ್ಕೆ ತಳ್ಳಿ ಸಂತ್ರಸ್ತರನ್ನು ಮುಖ್ಯವಾಹಿನಿಯಿಂದ ಹೇಗೆ ಹೊರಗಿರಿಸಿತು ಎಂಬುದನ್ನು ಸುದೀರ್ಘವಾಗಿ ವಿವರಿಸುತ್ತದೆ.

ಸಿಂಗ್‌ಬೂಮ್‌ನ ಜಿಂಕ್‌ಪಾನಿನಲ್ಲಿ ಅಸ್ತಿತ್ವಕ್ಕೆ ಬಂದ ಎ.ಸಿ.ಸಿ. ಸಿಮೆಂಟ್ ಉತ್ಪಾದನಾ ಸ್ಥಾವರವು ನೀರು ಮತ್ತು ವಾಯುಮಾಲಿನ್ಯಕ್ಕೆ ಕಾರಣವಾಗಿ ಕೃಷಿ ಭೂಮಿಯನ್ನು ಅನುಪಯುಕ್ತ ಬರಡು ಭೂಮಿಯನ್ನಾಗಿ

ಮಾಡಿತು ಎಂದು ವಿವರಿಸಿದ ಸಂಶೋಧಕರು 'ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರಿಗೆ ನೀಡಿದ ಪರಿಹಾರ ಅಸಮರ್ಪಕ ಹಾಗೂ ಸಾಮಾಜಿಕ ನ್ಯಾಯಗಳಿಗೆ ವಿರುದ್ಧವಾಗಿತ್ತು. ಸಂತ್ರಸ್ತರುಗಳ ಭೂಮಿ ಮತ್ತು ಮನೆಗಳಿಗೆ ಮಾತ್ರ ಪರಿಹಾರವನ್ನು ನೀಡಲಾಯಿತು. ಪರಿಹಾರವಾಗಿ ನಗದು ಹಣವನ್ನು ಮಾತ್ರ ನೀಡಲಾದ ಕಾರಣ ಸ್ಥಳೀಯ ಬಡಜನರಿಗೆ ಅದು ಯಾವುದೇ ಮೌಲ್ಯವನ್ನು ತರಲಿಲ್ಲ. ನಿಕೃಷ್ಟ ನಗದು ಪರಿಹಾರ ದೊರಕಿದ ಕಾರಣ ಹೊಸ ಕೃಷಿಭೂಮಿಗಳನ್ನು ಖರೀದಿಸಲು ಸಾಧ್ಯವಾಗಲಿಲ್ಲ. ಸಾಮಾಜಿಕ ಮತ್ತು ನೈತಿಕ ಮೌಲ್ಯಗಳ ಅಧಃಪತನದಿಂದಾಗಿ ಸಂತ್ರಸ್ತರಲ್ಲಿ ಮದ್ಯಪಾನ, ಆತ್ಮಹತ್ಯೆ, ವೇಶ್ಯಾವಾಟಿಕೆ, ಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವಿಕೆ ಮುಂತಾದ ಸಮಾಜ ವಿದ್ರೋಹೀ ಚಟುವಟಿಕೆಗಳ ಸಂಖ್ಯೆಯಲ್ಲಿ ಭಾರೀ ಪ್ರಮಾಣದ ಹೆಚ್ಚಳವಾಯಿತು'.[4] 'ಸಂತ್ರಸ್ತರುಗಳು ತಮ್ಮ ಸಾಂಸ್ಕೃತಿಕ ಸ್ವಾಯತ್ತತೆಯನ್ನು ಕಳೆದುಕೊಂಡ ಕಾರಣ ಅವರುಗಳ ಸ್ವಅಸ್ತಿತ್ವಕ್ಕೆ ಧಕ್ಕೆ ಬಂದಿತು. ಸರಕಾರಿ ದಾಖಲೆಗಳ ಪ್ರಕಾರ ಹೆಚ್ಚಿನ ಗ್ರಾಮಗಳಲ್ಲಿ ಶಾಲೆಗಳ ಅಸ್ತಿತ್ವವಿದ್ದರೂ ಅವುಗಳು ವಾಸ್ತವಿಕವಾಗಿ ಕಾರ್ಯನಿರ್ವಹಿಸದೇ ಸರಕಾರ ಶಿಕ್ಷಕರಿಗೆ ನೀಡುತ್ತಿದ್ದ ವೇತನಗಳನ್ನು ಅಧಿಕಾರಿಗಳು ತಮ್ಮಲ್ಲಿಯೇ ಹಂಚಿಕೊಳ್ಳುತ್ತಿದ್ದರು'.[5] ಸಂತ್ರಸ್ತರುಗಳಿಗೆ ತಮ್ಮ ಪುನರ್‌ನೆಲೆಗಳಲ್ಲಿ ಯಾವುದೇ ರೀತಿಯ ಮೂಲಭೂತ ಆರೋಗ್ಯ ಸೌಲಭ್ಯಗಳು ದೊರಕುತ್ತಿರಲಿಲ್ಲವೆಂದು ಉಲ್ಲೇಖಿಸಿದ ಸಂಶೋಧಕರು ಇವುಗಳೆಲ್ಲವೂ ರಾಷ್ಟ್ರೀಯ ಹಿತಾಸಕ್ತಿಯನ್ನು ಸಾಧಿಸುವ ಅಭಿವೃದ್ಧಿಯ ಹೆಸರಿನಲ್ಲಿ ನಡೆಯಲ್ಪಟ್ಟಿತ್ತು[6] ಎಂದು ವಿವರಿಸುತ್ತಾರೆ. ಸ್ಥಳಾಂತರ ಮತ್ತು ಅಭಿವೃದ್ಧಿ ಪ್ರೇರಿತ ಚಟುವಟಿಕೆಗಳು ಯಾವ ರೀತಿಯಲ್ಲಿ ವ್ಯವಸ್ಥಿತವಾಗಿ ಸ್ಥಳೀಯ ಬಡಜನರ ಬದುಕನ್ನು ಮತ್ತಷ್ಟು ನಿಕೃಷ್ಟತೆಗೆ ತಳ್ಳಿ ಅವರ ಬದುಕನ್ನು ಅಸಹನೀಯವನ್ನಾಗಿ ಮಾಡುತ್ತದೆ ಎಂಬ ಅಭಿವೃದ್ಧಿಯ ಇನ್ನೊಂದು ಮುಖದ ಬಗೆಗೆ ವಿವರಿಸಿರುತ್ತಾರೆ.

ಒರಿಸ್ಸಾದ ಭುವನೇಶ್ವರ್‌ನಲ್ಲಿ ಸ್ಥಾಪಿಸಲ್ಪಟ್ಟ ನೆಲ್ಕೊ ಮತ್ತು ಕೊಲಬ್ ಮೇಲ್ದಂಡೆ ಯೋಜನೆಯಿಂದ ಸಂತ್ರಸ್ತರಾದವರ ಸ್ಥಳಾಂತರ ಮತ್ತು ಪುನರ್‌ವಸತಿಯ ಬಗ್ಗೆ ಅಧ್ಯಯನವನ್ನು ನಡೆಸಿದ ರೆಡ್ಡಿ ಯು.ಬಿ. (1992) ರವರು ಭಾರತದಲ್ಲಿ ಬೃಹತ್ ಯೋಜನೆಗಳ ಸ್ಥಾಪನೆಯಿಂದ ಸಂತ್ರಸ್ತರಾದ ಜನರ ಬಗ್ಗೆ ಆದಂತಹ ಅಧ್ಯಯನಗಳ ಪರಾಮರ್ಶನವನ್ನು ತಮ್ಮ ಅಧ್ಯಯನದ ಮುಖ್ಯ ಉದ್ದೇಶವೆಂದು ಪರಿಗಣಿಸಿ, ಅವುಗಳು ಜಾರಿಗೆ ತಂದಂತಹ ಪುನರ್‌ವಸತಿ, ಪರಿಹಾರದ ಪ್ಯಾಕೇಜ್‌ಗಳು, ಸಂತ್ರಸ್ತರ ವರ್ತನೆ ಮತ್ತು ಪ್ರತಿಕ್ರಿಯೆಗಳನ್ನು ಹಾಗೂ ತಮ್ಮ ಮನೆಗಳನ್ನು ಕಳೆದುಕೊಂಡು ಪುನರ್‌ವಸತಿ ಕಾಲನಿಗಳಲ್ಲಿ ಬದುಕನ್ನು ಕಟ್ಟಿಕೊಳ್ಳುತ್ತಿರುವವರ ಕಷ್ಟ ಕೋಟಲೆಗಳನ್ನು ತಮ್ಮ ಅಧ್ಯಯನದಲ್ಲಿ ವಿವರಿಸಿರುತ್ತಾರೆ. ನೆಲ್ಕೊ ಮತ್ತು ಕೊಲಬ್ ಮೇಲ್ದಂಡೆ ಯೋಜನೆಯ ರಚನೆಯಿಂದಾಗಿ ಉದ್ಭವಿಸಿದ ನಕಾರಾತ್ಮಕ ಮತ್ತು ಸಕಾರಾತ್ಮಕ ಅಂಶಗಳ ವಿಶ್ಲೇಷಣೆಯನ್ನು ಮಾಡುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ಭೂಮಿಯನ್ನು ಕಳೆದುಕೊಂಡು ನಿರ್ವಸಿತರಾದ ಸ್ಥಳೀಯ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಯೋಜನೆಯ ಜಾರಿಯಿಂದಾಗಿ ಯಾವ ರೀತಿಯಲ್ಲಿ ಪಲ್ಲಟಗೊಂಡವು ಎಂಬುದನ್ನು

ವಿವರಿಸಿರುತ್ತಾರೆ. ರಾಷ್ಟ್ರೀಯ ಅಲ್ಯುಮಿನಿಯಂ ನಿಯಮಿತ (ನೆಲ್ಕೊ) ಇಪ್ಪತ್ತೈದು ಹಳ್ಳಿಗಳಲ್ಲಿ ಜೀವಿಸುತ್ತಿದ್ದ 851 ಕುಟುಂಬಗಳ ಒಟ್ಟು 2993 ಹೆಕ್ಟೇರ್ ಭೂಮಿಯನ್ನು ತನ್ನ ಘಟಕವನ್ನು ಆರಂಭಿಸಲು ಸ್ವಾಧೀನಪಡಿಸಿದರೆ[7], ಕೊಲಬ್ ಮೇಲ್ದಂಡೆ ಯೋಜನೆ ಪೂರ್ಣವಾದಾಗ ನೂರನಲವತ್ತೇಳು ಹಳ್ಳಿಗಳ 8514 ಕುಟುಂಬಗಳಿಗೆ ಸೇರಿದ 32,163 ಹೆಕ್ಟೇರ್ ಭೂಮಿ ಮುಳುಗಡೆಯಾಗಿ[8] ಅವರುಗಳು ನಿರ್ವಸಿತರಾದರು ಎಂಬ ಅಂಶವನ್ನು ಸಂಶೋಧಕರು ತಮ್ಮ ಅಧ್ಯಯನದಲ್ಲಿ ವಿವರಿಸಿರುತ್ತಾರೆ.

ಗ್ರಾಮಾಂತರ ಪ್ರದೇಶಗಳಲ್ಲಿದ್ದ ಸಾಂಪ್ರದಾಯಿಕ ಜನಜೀವನ ಸಂಪೂರ್ಣವಾಗಿ ಶಿಥಿಲಗೊಂಡಿರುವುದು ಮತ್ತು ಸ್ಥಳೀಯ ಬುಡಕಟ್ಟು ಜನರು ಬದಲಾಗಿರುವ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲು ಕಷ್ಟಪಡುತ್ತಿರುವುದನ್ನು[9] ನೆಲ್ಕೊ ಮತ್ತು ಕೊಲಬ್ ಮೇಲ್ದಂಡೆ ಯೋಜನೆಯ ಬಗೆಗಿನ ಅಧ್ಯಯನದ ಫಲಿತವು ವಿವರಿಸುತ್ತದೆ. 'ಪುನರ್‌ವಸತಿ ಪ್ರಕ್ರಿಯೆಯು ಹೊಸ ಆರ್ಥಿಕ ಸಂಪನ್ಮೂಲಗಳನ್ನು ಸೃಷ್ಟಿಸಿ, ಈಗಾಗಲೇ ಅಸ್ತಿತ್ವದಲ್ಲಿದ್ದ ಸಾಂಪ್ರದಾಯಿಕ ವ್ಯವಸ್ಥೆಯನ್ನು ಬದಲಾಯಿಸಿ ಸಂತ್ರಸ್ತರ ಜೀವನಶೈಲಿಯಲ್ಲಿ ಅಮೂಲಾಗ್ರ ಪರಿವರ್ತನೆಯನ್ನು ತಂದಿರುತ್ತದೆ'[10] ಎಂಬುದನ್ನು ಉಲ್ಲೇಖಿಸಿದ ಸಂಶೋಧಕರು ತಮ್ಮ ಅಧ್ಯಯನದ ಶಿಫಾರಸ್ಸಿನಲ್ಲಿ ತಾಂತ್ರಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯಲ್ಲಿ, ಕೃಷಿ ಮತ್ತು ಕೈಗಾರಿಕಾ ಆರ್ಥಿಕತೆಯಲ್ಲಿ ಹಾಗೂ ಗ್ರಾಮಾಂತರ ಮತ್ತು ನಗರಗಳ ಕೈಗಾರಿಕಾ ಜೀವನದ ನಡುವೆ ಸಮತೋಲನವನ್ನು ಸಾಧಿಸಿ ಸಮನ್ವಯತೆಯನ್ನು ಕಾಪಾಡಿಕೊಳ್ಳುವ ಅಗತ್ಯತೆಯಿದೆಯೆಂದು[11] ಪ್ರತಿಪಾದಿಸಿದ್ದಾರೆ. ಈ ಬದಲಾವಣೆಗಳು ಅತ್ಯಂತ ಜಾಗರೂಕವಾಗಿ ಮತ್ತು ನಿಧಾನಗತಿಯಲ್ಲಿ ಜಾರಿಗೆ ತಂದಾಗ ಮಾತ್ರ ಸ್ಥಳೀಯ ಜನರು ಬದಲಾದ ಪರಿಸ್ಥಿತಿಗೆ ಹೊಂದಾಣಿಕೆಯಾಗಲು ಸಾಧ್ಯವಾಗುತ್ತದೆ ಎಂದು ವಿಶ್ಲೇಷಿಸಿದ ಸಂಶೋಧಕರು ದೂರದೃಷ್ಟಿತ್ವದ ಕೊರತೆ ಹಾಗೂ ಸರಿಯಾದ ಪೂರ್ವಯೋಜನೆಗಳನ್ನು ಕೈಗೊಳ್ಳದೇ ಇರುವುದರಿಂದಾಗಿ ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸಲು ಆರಂಭಿಸಿದ ಸಂತ್ರಸ್ತರುಗಳ ಬದುಕು ಯಾತನಾಮಯವಾಗಲು ಕಾರಣವಾಯಿತು[12] ಎಂದಿದ್ದಾರೆ. ಸರಳ ಜೀವನಕ್ಕೆ ಅಗತ್ಯವಾದ ಪರಿಶುದ್ಧ ಕುಡಿಯುವ ನೀರಿನ ಕೊರತೆ ಮತ್ತು ಅಡುಗೆಯನ್ನು ಬೇಯಿಸಲು ಬೇಕಾದಂತಹ ಕಟ್ಟಿಗೆಯ ಕೊರತೆ ಯೋಜನೆಗಳ ಸಂತ್ರಸ್ತರು ಎದುರಿಸುತ್ತಿದ್ದ ಎರಡು ಪ್ರಮುಖ ಸಮಸ್ಯೆಗಳಾಗಿತ್ತು[13] ಎಂಬುದನ್ನು ಸಂಶೋಧಕರು ಒತ್ತಿ ಹೇಳಿರುತ್ತಾರೆ. ಒಂದು ಹಳ್ಳಿಗೆ ಸೇರಿದ ಸಂತ್ರಸ್ತರಿಗೆ ಒಂದೇ ಪ್ರದೇಶದಲ್ಲಿ ಮತ್ತು ಜಾತಿವಾರು ಪುನರ್‌ವಸತಿಗಳನ್ನು ಕಾಲನಿಗಳಲ್ಲಿ ಕಲ್ಪಿಸಿದ ಕಾರಣದಿಂದಾಗಿ ಸ್ಥಳಾಂತರದ ಸಾಮಾಜಿಕ ಮತ್ತು ಮಾನಸಿಕ ಪರಿಣಾಮಗಳನ್ನು ಕನಿಷ್ಠ ಮಟ್ಟಕ್ಕೆ ಸೀಮಿತಗೊಳಿಸಲು ಸಾಧ್ಯವಾಯಿತು. ಈ ರೀತಿಯ ಪುನರ್‌ವಸತಿ ಕಾರ್ಯಕ್ರಮಗಳು ಸಾಮುದಾಯಿಕ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ದೊಡ್ಡ ಮಟ್ಟದಲ್ಲಿ ಸಹಕಾರಿಯಾಯಿತು. ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿರುವ ಆರ್ಥಿಕ ಸ್ವಾವಲಂಬನೆ ಹೊಸ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಕಣ್ಮರೆಯಾಯಿತು. ಸಂತ್ರಸ್ತರುಗಳು ತಮ್ಮ ಎಲ್ಲಾ ಅವಶ್ಯಕತೆಗಳಿಗೆ ಸ್ಥಳೀಯ ಮಾರುಕಟ್ಟೆಯ ಮೇಲೆ ಅವಲಂಬಿತರಾಗುವ ಪರಿಸ್ಥಿತಿ

ನಿರ್ಮಾಣವಾಯಿತು. ಯೋಜನೆಗಳ ಪರಿಣಾಮದ ಬಗೆಗಿನ ವಿಶ್ಲೇಷಣೆಯು ಸಂತ್ರಸ್ತರುಗಳಿಗೆ ಲಾಭವನ್ನು ತರುವುದಕ್ಕಿಂತ ಹೆಚ್ಚಾಗಿ ಹಾನಿಯನ್ನೇ ತಂದಿರುತ್ತದೆ[14] ಎಂಬ ಅಂಶವನ್ನು ವಿವರಿಸಿರುತ್ತಾರೆ.

ತನ್ನ ಕೈಗಾರಿಕೆಗಳಲ್ಲಿ ಕೌಶಲ್ಯವನ್ನು ಹೊಂದಿರುವ ನೌಕರರ ಅವಶ್ಯಕತೆಯಿರುವುದರಿಂದ ನೆಲ್ಕೊ ಕಂಪೆನಿ ಹೆಚ್ಚಿನ ಸಂತ್ರಸ್ತರುಗಳಿಗೆ ಉದ್ಯೋಗವನ್ನು ನೀಡಲು ಅಸಾಧ್ಯವಾದುದು, ನಿರ್ವಸಿತರಿಗೆ ಉದ್ಯೋಗವು ದೊರಕದೇ ಇದ್ದುದು ಅವರುಗಳ ಜೀವನ ಅತಂತ್ರವಾಗಲು ಕಾರಣವಾಯಿತು. ಪರಿಹಾರವಾಗಿ ಕೃಷಿಯೋಗ್ಯವಲ್ಲದ ಬರಡು ಭೂಮಿಯನ್ನು ನೀಡಿದ್ದುದರಿಂದ ಸಂತ್ರಸ್ತರುಗಳಿಗೆ ಕೃಷಿಚಟುವಟಿಕೆಗಳನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಈ ಭೂಮಿಗಳನ್ನು ಕೃಷಿ ಯೋಗ್ಯವನ್ನಾಗಿ ಪರಿವರ್ತಿಸಲು ಅಪಾರ ಹಣಕಾಸಿನ ಅವಶ್ಯಕತೆಯಿತ್ತು. ಪುನರ್‌ವಸತಿ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಟ್ಟಿರುವುದು, ಉತ್ತಮ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸಿರುವುದು ಹಾಗೂ ಸಾಮುದಾಯಿಕ ಸೌಲಭ್ಯಗಳನ್ನು ನೀಡಿರುವುದು ಯೋಜನೆಯ ಸಂತ್ರಸ್ತರುಗಳ ಜೀವನಶೈಲಿಯನ್ನು ಸ್ವಲ್ಪ ಮಟ್ಟದಲ್ಲಿ ಸುಧಾರಿಸಲು ಸಹಕರಿಸಿತು[15] ಎಂದು ಅಭಿಪ್ರಾಯಪಟ್ಟ ಸಂಶೋಧಕರು ಎರಡೂ ಯೋಜನೆಗಳ ಅನುಷ್ಠಾನವು ಆರ್ಥಿಕತೆ ಮತ್ತು ಸಾಮಾಜಿಕ ವ್ಯವಸ್ಥೆಯ ಮೇಲೆ ಗುಣಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳನ್ನು ಬೀರಿದವು ಎಂದು ಉಲ್ಲೇಖಿಸಿರುತ್ತಾರೆ.

ಬಹುಪಯೋಗಿ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ನದಿ ಕಣಿವೆಗಳಲ್ಲಿ ನಡೆದಂತಹ ಅಭಿವೃದ್ಧಿ ಪ್ರೇರಿತ ಅಣೆಕಟ್ಟುಗಳ ಸ್ಥಾಪನೆಯ ಬಗ್ಗೆ ಅಧ್ಯಯನವನ್ನು ಕೈಗೊಂಡಿದ್ದ ವಿದ್ವಾಂಸರಾದ ಇನಾಕ್ಷಿ ಗಂಗೂಲಿಯವರು ತಮ್ಮ ಕಂಡುಕೊಳ್ಳುವಿಕೆಗಳನ್ನು ವಿವರಿಸುತ್ತಾ 'ಕೇರಳದ ಮೌನಕಣಿವೆ, ತೇಹ್ರಿ, ಇಚಾಮಪಳ್ಳಿ, ಸುವರ್ಣಲೇಖಾ, ಕೊಯಿಲ್‌ಕಾರೋ, ಬೋಧ್‌ಘಾಟ್, ಪೂವಲಂ ಯೋಜನೆಗಳು ಅಭಿವೃದ್ಧಿಯ ದ್ಯೋತಕವೆಂದು ಪರಿಗಣಿಸಲ್ಪಟ್ಟಿದ್ದರೂ ಕೂಡಾ ಗೋರಿಗಳ ದೇವಾಲಯವಾಗಿ[16] ಪರಿಣಮಿಸಿ ಜನರಿಗೆ ಮತ್ತು ನಿಸರ್ಗಕ್ಕೆ ತುಂಬಲಾರದಂತಹ ನಷ್ಟವನ್ನು ತಂದಿರುತ್ತದೆ'. ಅಭಿವೃದ್ಧಿಗಾಗಿ ಬೆಲೆ ತೆರಲು ಜನರು ಸಿದ್ಧರಾಗಿಲ್ಲ. ಅಭಿವೃದ್ಧಿಯಿಂದಾಗಿ ಲಾಭವಾಗುವುದು ಯಾರಿಗೆ? ಇದಕ್ಕಾಗಿ ಬೆಲೆತೆರಬೇಕಾದವರು ಯಾರು? ಸಮಾಜದ ಯಾವ ವರ್ಗದ ಜನರು ಅಭಿವೃದ್ಧಿಯ ಲಾಭವನ್ನು ಪಡೆಯುತ್ತಿದ್ದಾರೆ? ಎಂಬ ಪ್ರಶ್ನೆಗಳನ್ನು ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರು ಕೇಳುತ್ತಿದ್ದಾರೆ[17] ಎಂಬ ಮೂಲಭೂತ ಜಿಜ್ಞಾಸೆಗೆ ತಮ್ಮ ಅಧ್ಯಯನದಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿರುತ್ತಾರೆ.

ಆಂಧ್ರಪ್ರದೇಶದ ಮೇಡಕ್ ಜಿಲ್ಲೆಯ ರಾಮಚಂದ್ರಾಪುರಂ ಮತ್ತು ಪಟ್ಟಣಚೇರು ವಿಭಾಗದಲ್ಲಿ ಕೇಂದ್ರ ಸರಕಾರ ಭಾರತ್ ಹೆವಿ ಇಲೆಕ್ಟ್ರಿಕಲ್ಸ್ ನಿಯಮಿತ ಸ್ಥಾವರದ ರಚನೆಗಾಗಿ 2317.40ಹೆಕ್ಟೇರ್ ಭೂಮಿಯನ್ನು ಸ್ವಾಧೀನಪಡಿಸಿತ್ತು.[18] ವಿದ್ವಾಂಸರಾದ ಮುತ್ತಯ್ಯ ಹಾಗೂ ಮಾಥೂರ್ (1975)ರವರು ತಮ್ಮ ಅಧ್ಯಯನವಾದ "ಆಂಧ್ರಪ್ರದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳಾಂತರಗೊಂಡ ಸಂತ್ರಸ್ತರ ಪುನರ್‌ವಸತಿ, ಒಂದು ಸಮಾಜೋ–

ಆರ್ಥಿಕ ಹಾಗೂ ವರ್ತನಾ ಅಧ್ಯಯನ"ದಲ್ಲಿ ಯೋಜನೆಯ ಪರಿಣಾಮಗಳನ್ನು ವಿಶ್ಲೇಷಿಸಿರುತ್ತಾರೆ. ಸ್ಥಳಾಂತರಗೊಂಡ ಸಂತ್ರಸ್ತರುಗಳ ಸಾಮಾಜಿಕ ಮತ್ತು ಆರ್ಥಿಕ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟ ಅಧ್ಯಯನವು ಸಂತ್ರಸ್ತರ ಪ್ರಸ್ತುತ ಉದ್ಯೋಗ ವ್ಯವಸ್ಥೆ ಹಾಗೂ ಯಾವ ರೀತಿಯಿಂದ ಅವರುಗಳು ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ ಎಂಬುದನ್ನು ವಿವರಿಸುತ್ತದೆ. ಸ್ಥಳಾಂತರವು ಸಂತ್ರಸ್ತರಲ್ಲಿ ಜಿಗುಪ್ಸೆ ಮತ್ತು ಅವಮಾನವನ್ನು ತಂದಿರುತ್ತದೆಯೆಂದು[19] ಕಂಡುಕೊಂಡ ಅಧ್ಯಯನವು ಪರಿಹಾರವಾಗಿ ದೊರೆತ ಹಣವನ್ನು ಸಂತ್ರಸ್ತರು ತಮ್ಮ ತಕ್ಷಣದ ಬೇಡಿಕೆಗಳಾದ ವಸತಿ ಹಾಗೂ ಆಹಾರಕ್ಕೋಸ್ಕರ ಖರ್ಚು ಮಾಡಿರುವುದನ್ನು ತಿಳಿಸುತ್ತದೆ. ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಸಂದರ್ಶಿತ 741 ಮಾದರಿ ಗಾತ್ರದಲ್ಲಿ 32.3% ಕೃಷಿಕರು ಹಾಗೂ 10.2% ಕೃಷಿ ಕಾರ್ಮಿಕರಿದ್ದರು. ಸ್ಥಳಾಂತರದ ನಂತರ ಸಂತ್ರಸ್ತರುಗಳ ವೃತ್ತಿಯಲ್ಲಿ ಬದಲಾವಣೆಗಳಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಸಂಖ್ಯೆ 5.4% ಹಾಗೂ ಕೃಷಿ ಕಾರ್ಮಿಕರ ಸಂಖ್ಯೆ 9.7%ಕ್ಕೆ ಇಳಿಕೆಯಾಯಿತು[20] ಎಂದು ತಿಳಿಸಿದ ಸಂಶೋಧಕರು ಸ್ಥಳಾಂತರದ ಪೂರ್ವದಲ್ಲಿ ಕೈಗಾರಿಕಾ ಕಾರ್ಮಿಕರು 30.1% ಇದ್ದದ್ದು, ನಂತರದಲ್ಲಿ 38.2%ಕ್ಕೆ ಏರಿಕೆಯಾಗಿರುವುದನ್ನು ಬೆಟ್ಟು ಮಾಡಿ ತೋರಿಸಿರುತ್ತಾರೆ. ತಮ್ಮ ಮೂಲನೆಲೆಗಳಿಂದ ಸ್ಥಳಾಂತರಿಸಲ್ಪಟ್ಟಿರುವುದರಿಂದ ಆ ನೆಲದೊಂದಿಗೆ ಇದ್ದ ಭಾವನಾತ್ಮಕ ಹಾಗೂ ಸಾಂಸ್ಕೃತಿಕ ಸಂಬಂಧಗಳು ಪತನಗೊಂಡವು. ಗ್ರಾಮದಲ್ಲಿ ಅನಾದಿ ಕಾಲದಿಂದಲೂ ಪೂಜಿಸಿಕೊಂಡು ಬಂದಂತಹ ಆರಾಧನಾ ಸ್ಥಳಗಳು ಹೊಸ ಪ್ರದೇಶಕ್ಕೆ ಸ್ಥಳಾಂತರಗೊಂಡ ಕಾರಣ ಅವುಗಳೊಂದಿಗಿನ ಆಧ್ಯಾತ್ಮಿಕ ನಂಬಿಕೆ ಮತ್ತು ಭಾವನಾತ್ಮಕ ಸಂಬಂಧಗಳಿಗೆ ಧಕ್ಕೆ ಬಂದಿತು. ಆದರೆ ಸ್ಥಳಾಂತರಗೊಂಡ ನಂತರ ಜಾತಿವಾರು ಪುನರ್‌ವಸತಿಯನ್ನು ಕಲ್ಪಿಸಿದುದರಿಂದ ಜಾತಿ ಸಂಬಂಧಗಳಿಗೆ ಯಾವುದೇ ರೀತಿಯ ಧಕ್ಕೆ ಬಂದಿರಲಿಲ್ಲ.[21] ಕೃಷಿ ಚಟುವಟಿಕೆಗಳು ಸಂಪೂರ್ಣವಾಗಿ ನಾಶವಾದುದರಿಂದ ಮೇಲ್‌ಜಾತಿ ಹಾಗೂ ಕೆಳಜಾತಿಗೆ ಸೇರಿದ 'ಜಾಜ್‌ಮನಿ'[22] ವ್ಯವಸ್ಥೆಗೆ ಸಂಬಂಧಪಟ್ಟಂತೆ ಮಹತ್ವದ ಬದಲಾವಣೆಗಳಾದವು ಎಂಬುವುದನ್ನು ಲೇಖಕರು ಉಲ್ಲೇಖಿಸಿರುತ್ತಾರೆ.

ಪರಿಸರ ಮಾಲಿನ್ಯದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅಧ್ಯಯನವನ್ನು ನಡೆಸಿರುವ ವಿದ್ವಾಂಸರು ಹಾಗೂ ಸಾಮಾಜಿಕ ಕಾರ್ಯಕರ್ತೆಯಾಗಿರುವ ವಂದನ ಶಿವರವರು 'ಶತಮಾನಗಳಿಂದ ನೈಸರ್ಗಿಕ ಸಂಪನ್ಮೂಲಗಳಾದ ನೀರು, ಭೂಮಿ ಮತ್ತು ಅರಣ್ಯಗಳನ್ನು ಸಾಮೂಹಿಕವಾಗಿ ಹಳ್ಳಿಗಳ ಜನರು ನಿಯಂತ್ರಿಸಿ ಸಮುದಾಯದ ಒಳಿತಿಗಾಗಿ ಸಹ್ಯ ರೀತಿಯಲ್ಲಿ ಉಪಯೋಗಿಸುತ್ತಿದ್ದರು. ವಸಾಹತುಶಾಹಿ ನೀತಿಯಿಂದಾಗಿ ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಬಗ್ಗೆ ಸಂಘರ್ಷ ಏರ್ಪಟ್ಟು ಅವುಗಳನ್ನು ವಸಾಹತುಶಾಹಿ ರಾಷ್ಟ್ರಗಳು ವಸ್ತುಗಳನ್ನಾಗಿ ತಮ್ಮ ಲಾಭವನ್ನು ಹೆಚ್ಚಿಸುವುದಕ್ಕೆ ಬಲವಂತದಿಂದ ಉಪಯೋಗಿಸುವ ಪ್ರಕ್ರಿಯೆ[23] ಆರಂಭವಾಯಿತು. ಪ್ರಥಮ ಕೈಗಾರಿಕಾ ಕ್ರಾಂತಿಯ ನಂತರ ನೈಸರ್ಗಿಕ ಸಂಪನ್ಮೂಲಗಳು ವಸ್ತುಗಳಾಗಿ

ಬದಲಾವಣೆಯಾದುದನ್ನು, ಯುರೋಪಿನ ಕೈಗಾರಿಕೆಗಳು ದಕ್ಷಿಣ ಏಷ್ಯಾದ ಸಂಪನ್ಮೂಲಗಳನ್ನು ತಮ್ಮ ಲಾಭಕ್ಕಾಗಿ ಬಳಕೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿತು'[24] ಎಂಬುದನ್ನು ಬೊಟ್ಟುಮಾಡಿ ತೋರಿಸುತ್ತಾ, 'ವಸಾಹತುಶಾಹಿ ವ್ಯವಸ್ಥೆಯ ಪತನದ ನಂತರ ಹುಟ್ಟಿಕೊಂಡ ಸ್ವತಂತ್ರ ಸಾರ್ವಭೌಮ ರಾಷ್ಟ್ರಗಳಲ್ಲಿ ಪರಿಸ್ಥಿತಿ ಬದಲಾಗಬಹುದು ಎಂಬ ಆಶಯವಿದ್ದರೂ, ಸಂಪನ್ಮೂಲಗಳ ಬಳಕೆಯು ವಸಾಹತುಶಾಹಿ ವ್ಯವಸ್ಥೆಯಲ್ಲಿದ್ದಂತೆಯೇ ಮುಂದುವರಿಯಿತು'[25] ಎಂದು ವಿಶ್ಲೇಷಿಸಿದ್ದಾರೆ. 'ಅಂತಾರಾಷ್ಟ್ರೀಯ ಮಟ್ಟದ ಬೇಡಿಕೆಗಳ ಈಡೇರಿಕೆಗೆ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿನ ಸಮಾಜದ ಮೇಲ್ವರ್ಗದ ಜನರ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಸಂಪನ್ಮೂಲಗಳ ಬಳಕೆಯ ವ್ಯವಸ್ಥೆಯು ಬದಲಾಯಿತು. ಇದರಿಂದಾಗಿ ಸಮಾಜದ ಬೇರೆ ಬೇರೆ ವರ್ಗದ ಜನರ ಹಿತಾಸಕ್ತಿಗಳ ನಡುವೆ ಸಂಘರ್ಷ ಆರಂಭವಾಗಿ ಸಮಾಜದ ತುಳಿತಕ್ಕೊಳಪಟ್ಟ ಮತ್ತು ಮುಖ್ಯವಾಹಿನಿಯಿಂದ ಹೊರಗಿರಿಸಲ್ಪಟ್ಟಿದ್ದ ಜನರ ಹಿತಾಸಕ್ತಿಗಳಿಗೆ ಧಕ್ಕೆಯುಂಟಾಯಿತು.[26] ಗುಡ್ಡಗಾಡು ಮತ್ತು ಬಡಜನತೆ ನಿಸರ್ಗವನ್ನೇ ತಮ್ಮ ಜೀವನಾಧಾರವಾಗಿ ನಂಬಿಕೊಂಡಿದ್ದರಿಂದ, ಸರಕಾರಗಳ ಬಂಡವಾಳಶಾಹಿ ಪರವಾದ ಉದಾರ ಕೈಗಾರಿಕಾ ನೀತಿಯಿಂದಾಗಿ ಅವರುಗಳ ಬದುಕು ಅಸ್ತವ್ಯಸ್ತವಾಯಿತು'[27] ಎಂದು ವಿವರಿಸುತ್ತಾ, ಸ್ವತಂತ್ರ ಭಾರತದಲ್ಲಿ ಇಂದಿನವರೆಗೆ ನಡೆದ ಆರ್ಥಿಕ ಅಭಿವೃದ್ಧಿ ಯೋಜನೆಗಳು ಜಾರಿಗೆ ಬರುವಾಗ ಯಾವ ರೀತಿಯಲ್ಲಿ ನೈಸರ್ಗಿಕ ಪರಿಸರ ಮತ್ತು ಜನರ ಸಮಸ್ಯೆಗಳಿಗೆ ಕಾರಣವಾಗಿರುತ್ತದೆ ಎಂಬುದನ್ನು ಬೃಹತ್ ಜಲಾಶಯಗಳ ಸ್ಥಾಪನೆಯ ಉದಾಹರಣೆಗಳೊಂದಿಗೆ ವಿವರಿಸಿರುತ್ತಾರೆ.

ಮಾಧವ ಗಾಡ್ಗೀಲ್ ಮತ್ತು ರಾಮಚಂದ್ರ ಗುಹಾರವರು ನರ್ಮದಾ ಮತ್ತು ಸರ್ದಾರ್ ಸರೋವರ್ ಅಣೆಕಟ್ಟು ಯೋಜನೆಗಳು ಯಾವ ರೀತಿಯಲ್ಲಿ ಸಂತ್ರಸ್ತರ ಮೇಲೆ ಪರಿಣಾಮ ಬೀರಿತು ಎಂದು ವಿವರಿಸುತ್ತಾ 'ಅಭಿವೃದ್ಧಿಯ ಹೆಸರಿನಲ್ಲಿ ಪರಿಸರವನ್ನು ಅಸಮತೋಲನಗೊಳಿಸುವುದು ಮತ್ತು ಸಾಮಾನ್ಯ ಜನಜೀವನವನ್ನು ಅಸ್ತವ್ಯಸ್ತಗೊಳಿಸುವುದು ಎಷ್ಟು ಸರಿ?' ಎಂಬ ಮೂಲಭೂತ ಪ್ರಶ್ನೆಗಳನ್ನು ಎತ್ತಿರುತ್ತಾರೆ. ನರ್ಮದಾ ಅಣೆಕಟ್ಟುಗಳ ಪರ ಹಾಗೂ ವಿರೋಧಿ ನಡೆದಂತಹ ಹೋರಾಟಗಳನ್ನು ವಿವರಿಸುತ್ತಾ, ಸಮಕಾಲೀನ ಭಾರತದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಬಗ್ಗೆ ಹುಟ್ಟಿಕೊಂಡ ಸಾಮಾಜಿಕ ಸಂಘರ್ಷಕ್ಕೆ ಇದು ಜ್ವಲಂತ ಉದಾಹರಣೆ ಎಂದು ಉಲ್ಲೇಖಿಸಿ 'ಅಭಿವೃದ್ಧಿ ಯೋಜನೆಗಳಿಂದಾಗಿ ಹೆಚ್ಚು ಹಾನಿಯಾಗಿರುವುದು ಮೀನುಗಾರಿಕೆ ಮುಂತಾದ ಇತರ ಸಾಂಪ್ರದಾಯಿಕ ಉದ್ಯೋಗವನ್ನು ಅವಲಂಬಿಸಿರುವ ಸಮಾಜದ ತಳಸ್ತರದ ಬುಡಕಟ್ಟು ಸಮುದಾಯಕ್ಕೆ'[28] ಎಂದಿರುವ ಲೇಖಕರು 'ಅಭಿವೃದ್ಧಿಯ ಹೆಸರಿನಲ್ಲಿ ಬೃಹತ್ ಯೋಜನೆಗಳ ಸ್ಥಾಪನೆಯಿಂದಾಗಿ ಪರಿಸರವನ್ನು ಸರಿಪಡಿಸದಷ್ಟು ಹಾನಿಗೊಳಿಸಲಾಗಿದೆ'[29] ಎಂದಿದ್ದಾರೆ.

'ಬೃಹತ್ ಕೈಗಾರಿಕಾ ಸಂಕೀರ್ಣಗಳು ನಾಶಪಡಿಸುವುದಕ್ಕಿಂತ ಹೆಚ್ಚಿನ ಸಂಪತ್ತನ್ನು ಸೃಷ್ಟಿಸುತ್ತವೆಯೇ?' ಎಂದು ಪ್ರಶ್ನಿಸಿದ ವಿದ್ವಾಂಸರಾದ ಕ್ಲಾಡ್ ಅಲ್ವರಿಸ್ ಮತ್ತು ರಮೇಶ್ ಬಿಲ್ಲೋರಿಯವರು 'ಬೃಹತ್ ಯೋಜನೆಗಳ

ಸ್ಥಾಪನೆಯ ನಿರ್ಣಯಗಳನ್ನು ಯಾವುದೇ ವೈಜ್ಞಾನಿಕ ಅಧ್ಯಯನದ ಆಧಾರದಲ್ಲಿ ರಚಿಸಿರುವುದಿಲ್ಲ ಅಥವಾ ಅವುಗಳು ಜನರ ಮತ್ತು ನೈಸರ್ಗಿಕ ಪರಿಸರದ ಮೇಲೆ ಬೀರುವ ಪರಿಣಾಮಗಳ ಅಂಶವನ್ನು ಗಮನಿಸುವುದಿಲ್ಲ. ನರ್ಮದಾ ಅಣೆಕಟ್ಟುಗಳ ನಿರ್ಮಾಣದ ತೀರ್ಮಾನ ತೆಗೆಯುವ ಸಂದರ್ಭದಲ್ಲಿ ಸಂತ್ರಸ್ತರು ಮತ್ತು ಪರಿಸರದ ಮೇಲೆ ಈ ಯೋಜನೆಯು ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ ಎಂಬುದಾಗಿ ಪರಿಗಣಿಸಲೇ ಇಲ್ಲ. ಈ ಯೋಜನೆಗಳು ನ್ಯಾಯ ಸಮ್ಮತವೇ? ಅವುಗಳ ಸ್ಥಾಪನೆಯಿಂದ ಸರಕಾರ ಏನನ್ನು ಸಾಧಿಸಲು ಹೊರಟಿವೆ? ಇದು ನೆಹರೂರವರ ಪರಿಕಲ್ಪನೆಯ ಆಧುನಿಕ ದೇವಾಲಯಗಳ ನಿರ್ಮಾಣದ ಇನ್ನೊಂದು ವ್ಯರ್ಥ ಪ್ರಯತ್ನವೇ? ಸ್ವತಂತ್ರ ಭಾರತದ ಅಣೆಕಟ್ಟು ನಿರ್ಮಾಣಗಳ ಯಾವುದೇ ಅನುಭವಗಳನ್ನು ಅಳವಡಿಸಿಕೊಂಡು ಜನರ ಜೀವನದ ಹಾಗೂ ಪರಿಸರದ ಮೇಲೆ ಬೀರಬಹುದಾದ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡು ಮಾಡಿದಂತಹ ತೀರ್ಮಾನವೇ?'[30] ಎಂಬ ಮೂಲಭೂತ ಪ್ರಶ್ನೆಗಳನ್ನು ಸಂಶೋಧಕರು ಎತ್ತುತ್ತಲೇ ಹೋಗುತ್ತಾರೆ.

ಶತಮಾನಗಳಿಂದ ಅರಣ್ಯ ಪ್ರದೇಶಗಳಲ್ಲಿ ಕೃಷಿಚಟುವಟಿಕೆ ನಡೆಸುತ್ತಿರುವ ಗಿರಿಜನರ ಹೆಸರಿನಲ್ಲಿ ಯಾವುದೇ ಭೂಮಿ ಇರುವುದಿಲ್ಲ. ಇದರಿಂದಾಗಿ ಅವರುಗಳಿಗೆ ಯಾವುದೇ ರೀತಿಯ ನ್ಯಾಯಸಮ್ಮತ ಪರಿಹಾರಗಳನ್ನು ನೀಡಿರುವುದಿಲ್ಲ. ಇವರುಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ಅರಣ್ಯದಿಂದ ಸ್ಥಳಾಂತರಿಸುವುದರಿಂದ ಈ ಗುಡ್ಡಗಾಡು ಜನಾಂಗ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಕಷ್ಟವಾಗಿ ನಾಶವಾಗುತ್ತಿದೆ. ಸ್ಥಳಾಂತರ ಈ ಜನಾಂಗದ ಆರ್ಥಿಕ ಹಕ್ಕನ್ನು ಕಸಿದುಕೊಳ್ಳುವುದರ ಜೊತೆಯಲ್ಲಿ ಅವರ ನಂಬಿಕೆ, ಆಚಾರ–ವಿಚಾರಗಳು, ಸಂಸ್ಕೃತಿ, ಹಬ್ಬ, ಹಾಡು–ನೃತ್ಯಗಳು ಮತ್ತು ಜೀವನ ಕ್ರಮದ ಮೇಲೆ ನೇರ ಪರಿಣಾಮವನ್ನು ಬೀರುತ್ತದೆ. ಅಣೆಕಟ್ಟು ನಿರ್ಮಾಣದ ಕಾಮಗಾರಿಯಲ್ಲಿ ಸಂತ್ರಸ್ತರಾದ ಒಂದು ಲಕ್ಷಕ್ಕೂ ಮಿಕ್ಕಿ ನಿರ್ವಸಿತರ ಪುನರ್‌ವಸತಿಗೋಸ್ಕರ ಖರ್ಚು ಮಾಡಿದ ಹಣಕ್ಕೆ ಹೋಲಿಸಿದರೆ ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಂಡ 5000ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಕಾರ್ಮಿಕರಿಗೋಸ್ಕರ ತಾತ್ಕಾಲಿಕ ಉಪಯೋಗಕ್ಕಾಗಿ ನಿರ್ಮಿಸಿದ ಕೇವಾಡಿಯ ಸುಸಜ್ಜಿತ ಬಡಾವಣೆಗಾಗಿ ಗುಜರಾತ್ ಸರಕಾರವು ಮಾಡಿದ ಮೂವತ್ತಮೂರು ಕೋಟಿ ರೂಪಾಯಿಗಳ ಖರ್ಚು ಅಧಿಕವಾಗಿತ್ತೆಂದು[31] ಸಂಶೋಧಕರು ವಿಶ್ಲೇಷಿಸಿದ್ದಾರೆ.

ನವದೆಹಲಿಯ ನಗರ ವ್ಯವಹಾರ ಅಧ್ಯಯನಗಳ ಸಂಸ್ಥೆಯ ವರದಿಯನ್ನು ಉಲ್ಲೇಖಿಸಿದ ಲೇಖಕರು 'ನರ್ಮದಾ ಯೋಜನೆ ಸುಮಾರು ಒಂದು ಮಿಲಿಯ ಜನರನ್ನು ನಿರ್ವಸಿತರನ್ನಾಗಿ ಮಾಡುತ್ತದೆ'. ಜಾಗತಿಕ ಬ್ಯಾಂಕ್‌ನ ಅಭಿಪ್ರಾಯದಂತೆ 'ಈ ಯೋಜನೆ ಪ್ರಪಂಚದಲ್ಲಿಯೇ ಅತ್ಯಂತ ಹೆಚ್ಚಿನ ಜನರನ್ನು ಸಂತ್ರಸ್ತರನ್ನಾಗಿ ಮಾಡಿ ಅವರ ಪುನರ್‌ವಸತಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕಾದ ಯೋಜನೆಯಾಗಿರುತ್ತದೆ. ಈ ಯೋಜನೆಯು ಸಂತ್ರಸ್ತರಾಗುವ ಜನರ ಒಟ್ಟು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಜೀವನಕ್ರಮದ ಮೇಲೆ ಸರಿಪಡಿಸಲಾಗದ ಪ್ರಭಾವ ಬೀರುತ್ತದೆ. ಸ್ಥಳಾಂತರಕ್ಕೆ ಒಳಗಾಗುವ ಹೆಚ್ಚಿನ ಜನರು ಈಗಾಗಲೇ ಅವಗಣನೆಗೆ ಒಳಗಾಗಿ

ಮುಖ್ಯವಾಹಿನಿಯ ಅಭಿವೃದ್ಧಿ ಯೋಜನೆಗಳಿಂದ ಶತಮಾನಗಳಿಂದ ಹೊರಗಿಡಲ್ಪಟ್ಟ ಬುಡಕಟ್ಟು ಜನಾಂಗದವರು. ಈ ರೀತಿಯ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ದೌರ್ಜನ್ಯ ನ್ಯಾಯ ಸಮ್ಮತವೇ?[32] ಎಂದು ಪ್ರಶ್ನಿಸಿದ್ದಾರೆ. 'ತಲೆಮಾರುಗಳಿಂದ ನೆಲೆಸಿಕೊಂಡು ಬಂದ ನೆಲದಿಂದ ಬಲವಂತವಾಗಿ ಸ್ಥಳಾಂತರಿಸಲ್ಪಡುವ ಜನರಿಗೆ ಬೇರೆ ಯಾವುದೇ ಘಟನೆಗಳು ಅದಕ್ಕಿಂತ ಹೆಚ್ಚಿನ ನೋವನ್ನು ತರುವುದಿಲ್ಲ. ಹೊಸ ಪ್ರದೇಶದಲ್ಲಿ ಸಂಪೂರ್ಣವಾಗಿ ಅಪರಿಚಿತರಾಗುವ ಸಂತ್ರಸ್ತರಿಗೆ ಇದಕ್ಕಿಂತ ಇರುಸುಮುರುಸು ಯಾವುದೂ ಇಲ್ಲ, ಇಲ್ಲಿಯವರೆಗೆ ಮಾಡದೆ ಇದ್ದಂತಹ ಹೊಸ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ರಾಷ್ಟ್ರದ ಮತ್ತು ಜನರ ಅಭಿವೃದ್ಧಿ ಮತ್ತು ಸಮೃದ್ಧಿಯ ಆಶ್ವಾಸನೆಯನ್ನು ನೀಡುತ್ತಿರುವ ಬೃಹತ್ ಯೋಜನೆಗಳಿಗೆ ತಮ್ಮ ಭೂಮಿಯನ್ನು ನೀಡುವುದು ಜನರಿಗೆ ಅನಿವಾರ್ಯವಾಗುತ್ತದೆ. ಸಮುದಾಯ, ರಾಷ್ಟ್ರದ ಅಭಿವೃದ್ಧಿಗಾಗಿ ತಲೆಮಾರುಗಳಿಂದ ಬಾಳಿ ಬದುಕಿದ ಭೂಮಿಯನ್ನು ಬಿಟ್ಟುಕೊಡುವ ಸಂತ್ರಸ್ತ ಜನರ ತ್ಯಾಗ ಮಹತ್ವದ್ದಾಗುತ್ತದೆ[33] ಎಂಬ ಅಂಶಗಳನ್ನು ಲೇಖಕರು ವಿವರಿಸಿದ್ದಾರೆ.

ಕಾರ್ವೆ ಮತ್ತು ನಿಂಬಾರ್‌ಕರ್‌ರವರು, 'ಯೋಜನೆಗಳ ಸಂತ್ರಸ್ತರಿಗೆ ಸಾಮಾನ್ಯವಾಗಿ ಪರಿಹಾರದ ರೂಪದಲ್ಲಿ ನಗದು ಹಣವನ್ನು ನೀಡಲಾಗುತ್ತದೆ. ಈ ಹಣವನ್ನು ಸಂತ್ರಸ್ತರು ಅನುತ್ಪಾದಕ ವಸ್ತುಗಳನ್ನು ಖರೀದಿಸುವುದಕ್ಕೋಸ್ಕರ ವ್ಯಯಮಾಡುವುದರಿಂದ ಅವರ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಸರಿಯಾದ ಭವಿಷ್ಯತ್ತಿನ ಯೋಜನೆಗಳು ಇಲ್ಲದೇ ಇರುವುದು, ತಪ್ಪು ಮಾರ್ಗದರ್ಶನ ಹಾಗೂ ಮುಗ್ಧತೆಯು ಸಂತ್ರಸ್ತರ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳ ಮೇಲೆ ನೇರ ಪರಿಣಾಮವನ್ನು ಬೀರುವುದರಿಂದ ಅವರ ಜೀವನಶೈಲಿಯಲ್ಲಿಯೇ ಬದಲಾವಣೆಗಳಾಗುತ್ತದೆ. ಯೋಜನೆಗಳ ನಿರ್ವಸಿತರಿಗೆ ತಮ್ಮ ಮುಂದಿನ ಭವಿಷ್ಯವನ್ನು ವ್ಯವಸ್ಥಿತವಾಗಿ ರೂಪಿಸಲು ಸರಿಯಾದ ಮಾರ್ಗದರ್ಶನದ ಅವಶ್ಯಕತೆಯಿರುತ್ತದೆ'[34] ಎಂದು ಪ್ರತಿಪಾದಿಸಿದ್ದಾರೆ.

ಜೋಷಿ ಬಿ. ಎಲ್.ರವರು ಬಲವಂತದ ಸ್ಥಳಾಂತರ ಮತ್ತು ಪುನರ್‌ವಸತಿಯಲ್ಲಿ ಸ್ಥಳಾಂತರ ಪ್ರಕ್ರಿಯೆಯ ನೇರ ಪರಿಣಾಮಗಳನ್ನು ಚರ್ಚಿಸುತ್ತಾ, 'ಪರಿಹಾರದ ರೂಪದಲ್ಲಿ ಕಡಿಮೆ ಪ್ರಮಾಣದ ನಗದು ಮೊತ್ತವು ಸಣ್ಣ ಹಿಡುವಳಿದಾರರಿಗೆ ಸಿಕ್ಕಿದ್ದರಿಂದ ಉತ್ತಮ ಕೃಷಿಭೂಮಿಯನ್ನು ಖರೀದಿಸಲು ಸಾಧ್ಯವಾಗದೇ ಅವರುಗಳು ಕೃಷಿಕಾರ್ಮಿಕರಾಗಿ ಬದಲಾಗುವಂತೆ ಮಾಡಿತು. ಕುಶಲಕರ್ಮಿಗಳು ತಮ್ಮ ಮೂಲಕಸುಬನ್ನು ತ್ಯಜಿಸಿ, ಇಷ್ಟರವರೆಗೆ ಮಾಡದ ಹೊಸ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತಾಯಿತು. ಒಂದೇ ಪ್ರದೇಶದಲ್ಲಿ ಜಾತಿವಾರು ಪುನರ್‌ವಸತಿ ವ್ಯವಸ್ಥೆಯು ಪ್ರತಿಯೊಂದು ಜಾತಿಗೆ ಸೇರಿದ ಜನರನ್ನು ಮತ್ತಷ್ಟು ಹತ್ತಿರಕ್ಕೆ ತಂದು ಜಾತಿ ಸಂಘಟನೆಗಳು ಬಲಿಷ್ಟವಾಗಿ ಬೆಳೆಯಲು ಕಾರಣವಾಯಿತು. ತಲತಲಾಂತರದಿಂದ ಬಂದ ಸಾಂಪ್ರದಾಯಿಕ ನಾಯಕತ್ವ ಪುನರ್‌ವಸತಿಯ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗದೆ ಇದ್ದುದರಿಂದ ಬಂದಂತಹ ಹೊಸ ನಾಯಕತ್ವ ದೀರ್ಘಾವಧಿಗೆ ಬಾಳುವುದಕ್ಕೆ ವಿಫಲವಾಯಿತು. ಪುನರ್‌ವಸತಿ ವ್ಯವಸ್ಥೆಗಳು ಏರ್ಪಟ್ಟನಂತರ

ಪುನಃ ಸಾಂಪ್ರದಾಯಿಕ ನಾಯಕತ್ವ ನೆಲೆಕಂಡುಕೊಳ್ಳುವುದರಲ್ಲಿ ಸಫಲವಾಯಿತು'[35] ಎಂದು ವಿಶ್ಲೇಷಿಸಿದ್ದಾರೆ. 'ಪರಿಹಾರದ ಹಣದ ವಿತರಣೆ, ಪುನರ್‌ವಸತಿ ನೀಡಲ್ಪಟ್ಟಿರುವ ಪ್ರದೇಶಗಳು, ರಕ್ತ ಸಂಬಂಧಿಗಳ ನಡುವೆ ಪರಿಹಾರದ ಹಣದ ಹಂಚಿಕೆಗಳು ಅವರ ನಡುವೆ ವೈಮನಸ್ಸು ಮೂಡಲು ಕಾರಣವಾಗಿ ಕೌಟುಂಬಿಕ ವಿಘಟನೆಗೆ ಅವಕಾಶ ಮಾಡಿಕೊಟ್ಟಿತು. ಸಂತ್ರಸ್ತರ ಕೈಯಲ್ಲಿ ಹಣ ಸರಾಗವಾಗಿ ಹರಿದಾಡಲು ಆರಂಭವಾದುದರಿಂದ ಕುಡಿತ, ಜೂಜು ಮತ್ತು ವೇಶ್ಯಾವಾಟಿಕೆಗಳಂತಹ ಸಾಮಾಜಿಕ ಅನಿಷ್ಟಗಳ ಪ್ರಮಾಣದಲ್ಲಿ ಹೆಚ್ಚಳವಾಯಿತು. ಒಟ್ಟಿನಲ್ಲಿ ಸ್ಥಳಾಂತರ ಪ್ರಕ್ರಿಯೆಯಿಂದಾಗಿ ಸಾಮಾಜಿಕ ಸಾಮರಸ್ಯ ಹದಗೆಡಲಾರಂಭಿಸಿತು'[36] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಮೈಕೆಲ್ ಸೆರ್ನ್ನಾರವರು 'ಅಭಿವೃದ್ಧಿ ಯೋಜನೆಗಳು ಜನರನ್ನು ಹೆಚ್ಚು ದುರ್ಬಲರನ್ನಾಗಿಸುವ ಮತ್ತು ಬಡವರನ್ನಾಗಿಸುವ ಉದ್ದೇಶವನ್ನು ಹೊಂದಿರುವುದಿಲ್ಲ. ಅಭಿವೃದ್ಧಿಯನ್ನು ಸಾಧಿಸುವ ಗುರಿಯನ್ನು ಇವುಗಳು ಹೊಂದಿದ್ದರೂ, ಸಂತ್ರಸ್ತರನ್ನು ಮತ್ತಷ್ಟು ಬಡವರನ್ನಾಗಿಸುತ್ತದೆ. ಆದುದರಿಂದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಯೋಜನೆಗಳಿಗೋಸ್ಕರ ಜನರನ್ನು ಸ್ಥಳಾಂತರಿಸುವ ಸಂದರ್ಭದಲ್ಲಿ ಅವರು ಯಾಕೆ ಮತ್ತಷ್ಟು ದುರ್ಬಲರಾಗುತ್ತಿದ್ದಾರೆ ಎಂಬ ವಿಷಯಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು'[37] ಎಂದಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸ್ಥಳಾಂತರ ಪ್ರಕ್ರಿಯೆಯಿಂದ ಹೆಚ್ಚು ತೊಂದರೆಯಾಗುತ್ತಿರುವುದು ಬಡಜನರಿಗೆ. ಬಡವರನ್ನು ಮತ್ತಷ್ಟು ಬಡವರನ್ನಾಗಿ ಮಾಡುವುದು ಯಾವತ್ತಿಗೂ ಸ್ವೀಕಾರಾರ್ಹವಲ್ಲ. ಬಡತನ ರೇಖೆಗಿಂತ ಮೇಲಿರುವವರೂ ಬಲವಂತದ ಸ್ಥಳಾಂತರ ಪ್ರಕ್ರಿಯೆಗೆ ಒಳಗಾದಾಗ ಹೆಚ್ಚು ತೊಂದರೆಗಳನ್ನು ಅನುಭವಿಸುತ್ತಾರೆ. ಆದುದರಿಂದ ಸ್ಥಳಾಂತರ ಪ್ರಕ್ರಿಯೆಗೆ ಒಳಗಾಗುವ ಸಂತ್ರಸ್ತರಿಗೆ ಆರ್ಥಿಕ, ತಾಂತ್ರಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಕಾನೂನಿನ ಬಗ್ಗೆ ಮತ್ತಷ್ಟು ಅರಿವು ಮೂಡಿಸುವುದರ ಮೂಲಕ ಅವರು ಹೊಸ ಜೀವನಕ್ರಮವನ್ನು ರೂಪಿಸುವುದಕ್ಕೆ ಅವಕಾಶ ಮಾಡಿಕೊಡುವುದರ ಮೂಲಕ ಅವರ ಅವನತಿಯನ್ನು ತಪ್ಪಿಸಬಹುದು. ಇದಕ್ಕೆ ಉತ್ತಮ ಪುನರ್‌ವಸತಿ ನೀತಿ ಅನಿವಾರ್ಯ'[38] ಎಂದು ಲೇಖಕರು ಸಮರ್ಥಿಸಿಕೊಂಡಿರುತ್ತಾರೆ. 'ಬಲವಂತದ ಸ್ಥಳಾಂತರದಿಂದ ಜನರ ಅವನತಿ ಮತ್ತು ಸಾಮಾಜಿಕ ಅಸ್ತವ್ಯಸ್ತಗಳ ಬಗ್ಗೆ ಪೂರ್ವ ಇತಿಹಾಸ ಹೆಚ್ಚು ಹೇಳುತ್ತಿದೆ. ಭಾರತದಲ್ಲಿ ಇಲ್ಲಿಯವರೆಗೆ ಐದು ದಶಕಗಳಿಂದ ಸ್ಥಳಾಂತರಿಸಲ್ಪಟ್ಟ 75% ಅಂದರೆ ಇಪ್ಪತ್ತು ದಶಲಕ್ಷ ಸಂತ್ರಸ್ತರು ಭೌತಿಕವಾಗಿ ಮಾತ್ರ ಪುನರ್‌ವಸತಿಗೊಳಿಸಲ್ಪಟ್ಟಿದ್ದಾರೆಯೇ ಹೊರತು ಸಾಮಾಜಿಕವಾಗಿ, ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಪುನರ್‌ವಸತಿಯನ್ನು ಹೊಂದಿರುವುದಿಲ್ಲ'[39] ಎಂಬ (ಫೆರ್ನಾಂಡೀಸ್, 1991) ಮಾತನ್ನು ಉಲ್ಲೇಖಿಸಿ, ಸೆರ್ನ್ನಾರವರು ಸ್ಥಳಾಂತರಿಸಲ್ಪಟ್ಟ ಜನರಿಗೆ ಸರಿಯಾದ ಸಾಮಾಜಿಕ ನ್ಯಾಯ ದೊರೆತಾಗ ಮಾತ್ರ ಅದು ಯೋಗ್ಯ ಪರಿಹಾರದ ಪ್ಯಾಕೆಜ್ ಆಗುತ್ತದೆ. ಭೂಮಿಯನ್ನು ಕಳೆದುಕೊಂಡವರಿಗೆ ಹೊಸ ಯೋಗ್ಯ ಭೂಮಿಯನ್ನು ಕೊಡುವುದರ ಮೂಲಕ, ಉದ್ಯೋಗವಿಲ್ಲದವರಿಗೆ ಉದ್ಯೋಗ ದೊರಕಿಸಿಕೊಡುವುದು, ಆಹಾರದ

ಕೊರತೆಯಿದ್ದಲ್ಲಿಗೆ ಪೌಷ್ಠಿಕಾಂಶಯುಕ್ತ ಆಹಾರ ನೀಡುವುದು, ವಸತಿಹೀನರಿಗೆ ವಸತಿ ಕಲ್ಪಿಸುವುದು, ಹೆಚ್ಚಿನ ಅನಾರೋಗ್ಯ ಸಮಸ್ಯೆಯಿರುವಲ್ಲಿ ಉತ್ತಮ ಆರೋಗ್ಯ ವ್ಯವಸ್ಥೆ ಕಲ್ಪಿಸುವುದು, ಸಂತ್ರಸ್ತರನ್ನು ಸಮಾಜದ ಪುನರ್‌ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದು ಅತ್ಯುತ್ತಮ ಪರಿಹಾರದ ಯೋಜನೆಗಳಾಗುತ್ತದೆ ಮತ್ತು ಸಂತ್ರಸ್ತರು ಮತ್ತಷ್ಟು ಬಡವರಾಗದೇ ಸ್ಥಳಾಂತರ ಪ್ರಕ್ರಿಯೆಯ ನಂತರವೂ ಒಂದು ಉತ್ತಮ ಜೀವನ ನಡೆಸುವುದಕ್ಕೆ ಸಹಕಾರಿಯಾಗುತ್ತದೆ'[40] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಸಂಗೀತಾ ಗೋಯಲ್‌ರವರು ಒಂದು ಬಲಿಷ್ಟವಾದ ರಾಷ್ಟ್ರೀಯ ಸ್ಥಳಾಂತರ ಮತ್ತು ಪುನರ್‌ವಸತಿ ನೀತಿಯು ಅತ್ಯಂತ ಅಗತ್ಯವಿದೆ ಎಂಬುದನ್ನು ಹಲವಾರು ಕಾರಣಗಳನ್ನು ಪಟ್ಟಿ ಮಾಡುವುದರ ಮೂಲಕ ಮಂಡಿಸಿದ್ದಾರೆ. 'ಸ್ಥಳಾಂತರದ ಸಂತ್ರಸ್ತರಿಗೆ ಕನಿಷ್ಟ ಉತ್ತಮ ಜೀವನವನ್ನು ನಡೆಸುವುದಕ್ಕೆ ಬೇಕಾಗಿರುವ ಅವಶ್ಯಕತೆಯನ್ನು ಪೂರೈಸಲು ಹಾಗೂ ಅವರನ್ನು ಕಷ್ಟನಷ್ಟಗಳಿಂದ ರಕ್ಷಿಸಲು ಬಲಿಷ್ಟ ರಾಷ್ಟ್ರೀಯ ನೀತಿಯ ಅವಶ್ಯಕತೆಯಿದೆ'[41] ಎಂದ ಲೇಖಕರು 'ತನ್ನದೇ ಆದ ಸ್ಥಳಾಂತರ ಮತ್ತು ಪುನರ್‌ವಸತಿ ನೀತಿಯನ್ನು ರಾಷ್ಟ್ರ ಹೊಂದಿದಾಗ ಅದರ ಹೊಣೆಗಾರಿಕೆ ಹೆಚ್ಚಾಗುತ್ತದೆ, ಸ್ಥಳಾಂತರ ಮತ್ತು ಪುನರ್‌ವಸತಿಯನ್ನು ರಾಷ್ಟ್ರೀಯ ನೀತಿಗಳಿಗೆ ಅನುಗುಣವಾಗಿ ಮಾಡದೇ ಇದ್ದ ಸಂದರ್ಭದಲ್ಲಿ, ಸರಕಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಸಂತ್ರಸ್ತರಿಗೆ ಅವಕಾಶವಾಗುತ್ತದೆ'[42] ಎಂದಿದ್ದಾರೆ. ನಿರ್ದಿಷ್ಟ ಮತ್ತು ನಿಖರವಾದ ಭೂಸ್ವಾಧೀನ ಮತ್ತು ಪುನರ್‌ವಸತಿ ಕಾಯ್ದೆಯ ಬಗ್ಗೆ ಲೇಖಕರು ಚರ್ಚಿಸುತ್ತಾ, 'ಸ್ಥಳಾಂತರವು ಸಂತ್ರಸ್ತರ ಒಟ್ಟು ಬದುಕನ್ನು ಅಸ್ತವ್ಯಸ್ಥಗೊಳಿಸುವುದರಿಂದ ಸಂತ್ರಸ್ತರಿಗೆ ಸೂಕ್ತವಾದ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. 1894ರ ಭೂಸ್ವಾದೀನ ಮತ್ತು ಪುನರ್‌ವಸತಿಯ ಕಾನೂನು ಇಂದಿನ ಪರಿಸ್ಥಿತಿಗೆ ಹೊಂದಿಕೆಯಾಗುತ್ತಿಲ್ಲ. ಪರ್ಯಾಯ ವಿಧಾನವಾಗಿ ಸಂತ್ರಸ್ತ ಜನರು ಮತ್ತು ಸರಕಾರ (ಯೋಜನೆಯ ಪ್ರಾಧಿಕಾರ) ಚರ್ಚಿಸಿ, ಯಾವುದು ಸೂಕ್ತ ಪುನರ್‌ವಸತಿ ಪ್ಯಾಕೇಜ್ ಆಗುತ್ತದೆ ಎಂಬುದಾಗಿ ನಿರ್ಧರಿಸುವುದು ಉತ್ತಮ. ಯೋಜನೆಗಳ ಪ್ರವರ್ತಕರು ಆಸಕ್ತಿವಹಿಸಿದರೆ ಸಂತ್ರಸ್ತರಿಗೆ ಒಂದು ಉತ್ತಮ ಬದುಕನ್ನು ನಡೆಸುವುದಕ್ಕೆ ಯಾವುದು ಅಗತ್ಯವಿದೆ ಎಂಬುದನ್ನು ಅರ್ಥೈಸಿ, ಅದಕ್ಕನುಗುಣವಾಗಿ ಪರಿಹಾರದ ಪ್ರಮಾಣವನ್ನು ನಿರ್ಧರಿಸುವುದು ಹೆಚ್ಚು ಸೂಕ್ತವಾಗುತ್ತದೆ'[43] ಎಂದು ಅಭಿಪ್ರಾಯಟ್ಟಿರುತ್ತಾರೆ.

ಬಾರ್ಬನೆ ಡಿ'ಸೋಜ ಮತ್ತು ದಾಕ್ಷಾಯಿಣಿ ಮದನ್‌ಗೋಪಾಲ್‌ರವರು ಅಭಿವೃದ್ಧಿಗೋಸ್ಕರ ನಡೆಸಲ್ಪಡುವ ಸ್ಥಳಾಂತರ ಪ್ರಕ್ರಿಯೆ ಪ್ರಶ್ನಿಸುವ ಕೆಲವು ಮೌಲ್ಯಗಳನ್ನು ಹಾಗೂ ಸ್ಥಳಾಂತರ ಸೃಷ್ಟಿಸುವ ಅವಾಂತರಗಳು ಮತ್ತು ಅಭಿವೃದ್ಧಿಗೂ ಸ್ಥಳಾಂತರಕ್ಕೂ ಇರುವ ಸಂಬಂಧಗಳನ್ನು ತಮ್ಮ ಗ್ರಂಥದಲ್ಲಿ ವಿಶ್ಲೇಷಿಸಿರುತ್ತಾರೆ. ಅಭಿವೃದ್ಧಿಪ್ರೇರಿತ ಸ್ಥಳಾಂತರ ಪ್ರಕ್ರಿಯೆಯಲ್ಲಿ ಮುಂಬೈನ ಸಮಸ್ಯೆಯನ್ನು ಜಾಗತಿಕ ಚೌಕಟ್ಟಿನಲ್ಲಿ ಅಧ್ಯಯನ ಮಾಡಿದ ಲೇಖಕರು ಏಷ್ಯಾ ಮತ್ತು ಆಫ್ರಿಕಾದ ರಾಷ್ಟ್ರಗಳಲ್ಲಿ ಸ್ಥಳಾಂತರ ಪ್ರಕ್ರಿಯೆ ಸೃಷ್ಟಿಸಿದ ಸಮಸ್ಯೆಗಳನ್ನು ವಿವರಿಸಿರುತ್ತಾರೆ. 'ಸ್ಥಳಾಂತರ ಪ್ರಕ್ರಿಯೆ ಸಂತ್ರಸ್ತರನ್ನು ತಮ್ಮ ಕುಟುಂಬ ಮತ್ತು ಸಮುದಾಯದಿಂದ

ಬೇರ್ಪಡಿಸುತ್ತದೆ. ತಮ್ಮ ಉದ್ಯೋಗ, ಶಿಕ್ಷಣ, ಆರೋಗ್ಯದ ವ್ಯವಸ್ಥೆಯೊಂದಿಗಿರುವ ಸಂಬಂಧವನ್ನು ನಾಶ ಮಾಡುತ್ತದೆ ಮತ್ತು ಸಾಂಪ್ರದಾಯಿಕ ಸಂಪನ್ಮೂಲಗಳನ್ನು ಉಪಯೋಗ ಮಾಡುವುದರಿಂದ ಬೇರ್ಪಡಿಸುತ್ತದೆ'[44] ಎಂದಿರುವ ಲೇಖಕರು ಭಾರತಕ್ಕೆ ಒಂದು ಸಮರ್ಥ ಭೂಸ್ವಾಧೀನ ಮತ್ತು ಪುನರ್‌ವಸತಿಯ ನೀತಿಯ ಅವಶ್ಯಕತೆಯನ್ನು ಒತ್ತಿ ಹೇಳಿರುತ್ತಾರೆ. ಪುನರ್‌ವಸತಿಯ ಬಗ್ಗೆ ಜಾನ್ ರೌಲ್‌ರವರು, 'ಜನರಿಗೆ ಉಪಯುಕ್ತವಾಗದ ಒಂದು ವಿಫಲ ಪುನರ್‌ವಸತಿ ನೀತಿ, ಅವರಿಗೆ ವರಮಾನ ಮತ್ತು ಆದಾಯವನ್ನು ನೀಡದೆ ಹೊಸ ಅಸಮಾನತೆಯನ್ನು ಸೃಷ್ಟಿಸುತ್ತದೆ ಮಾತ್ರವಲ್ಲದೆ, ಅವರು ಅನುಭವಿಸುವ ಸ್ವಾತಂತ್ರ್ಯ ಮತ್ತು ಎಲ್ಲಾ ಅವಕಾಶಗಳನ್ನು ಕಸಿದು ಸಾಮಾಜಿಕ ಗೌರವವನ್ನು ನಾಶಪಡಿಸುತ್ತದೆ'[45] ಎಂಬ ಅಭಿಪ್ರಾಯವನ್ನು ಉಲ್ಲೇಖಿಸಿ ಇಂತಹ ವ್ಯವಸ್ಥೆಯು ಸಂತ್ರಸ್ತರಿಗೆ ಅನ್ಯಾಯ ಮಾಡುತ್ತದೆ ಎಂದಿದ್ದಾರೆ. ಅಭಿವೃದ್ಧಿ ಪ್ರಕ್ರಿಯೆಯಿಂದ ಸ್ಥಳಾಂತರಗೊಂಡ ಮುಂಬೈ ನಗರದ ಸಂತ್ರಸ್ತರ ವೈಜ್ಞಾನಿಕ ಅಧ್ಯಯನವನ್ನು ನಡೆಸಿ, ಅಧ್ಯಯನದ ಫಲಿತಗಳನ್ನು ತಮ್ಮ ಗ್ರಂಥದಲ್ಲಿ ಲೇಖಕರು ವಿವರವಾಗಿ ಚರ್ಚಿಸಿರುತ್ತಾರೆ.

ಸ್ಟಿಂಗ್‌ಮೆನ್ ಮತ್ತು ಅಮ್ಮಂಡೆರವರು ತಮ್ಮ ಗ್ರಂಥದಲ್ಲಿ ದೈಹಿಕ, ಆರ್ಥಿಕ, ಸಾಮಾಜಿಕ, ಮಾನಸಿಕ, ಧಾರ್ಮಿಕ, ರಾಜಕೀಯ, ವೃತ್ತಿಪರ ಸ್ವರೂಪಗಳ ಏಳು ರೀತಿಯ ಸ್ಥಳಾಂತರ ಪ್ರಕ್ರಿಯೆಗಳ ಬಗೆಗೆ ಅಮೂಲಾಗ್ರವಾಗಿ ವಿಶ್ಲೇಷಣೆಯನ್ನು ಮಾಡಿರುತ್ತಾರೆ. 'ಯುದ್ಧಗಳು, ಭೂಕಂಪ, ಬರಗಾಲ, ನೆರೆ ಹಾವಳಿ ಮುಂತಾದವುಗಳು ಸಂತ್ರಸ್ತರ ದೈಹಿಕ ಸ್ಥಳಾಂತರಕ್ಕೆ ಕಾರಣಗಳಾದರೆ, ಕಳಪೆ ಜೀವನಮಟ್ಟ, ಸಾಮಾಜಿಕ ಅಭದ್ರತೆ, ಕೈಗಾರಿಕೀಕರಣ, ನಗರೀಕರಣ ಆರ್ಥಿಕ ಸ್ಥಳಾಂತರಕ್ಕೆ ಕಾರಣವಾಗುತ್ತಿದೆ'[46] ಎಂದಿದ್ದಾರೆ. 'ಕೌಟುಂಬಿಕ ಸಂಘರ್ಷಗಳು, ವೃತ್ತಿ ಮತ್ತು ವಸತಿ ಸಮಸ್ಯೆ, ಮಕ್ಕಳ ಮುಂದಿನ ಭವಿಷ್ಯತ್ತಿನ ಚಿಂತನೆಗಳು ಸಾಮಾಜಿಕ ಸ್ಥಳಾಂತರಕ್ಕೆ ಮೂಲವಾಗುತ್ತದೆ. ವೈಯಕ್ತಿಕ ಸಂಘರ್ಷಗಳು, ಪರಿಸ್ಥಿತಿಗೆ ಹೊಂದಿಕೊಳ್ಳಲಾಗದೇ ಚಡಪಡಿಕೆಗಳು, ಪಲಾಯನವಾದ, ಶಿಕ್ಷೆಯ ಭಯ, ಕೀಳರಿಮೆ ಸ್ಥಳಾಂತರಕ್ಕೆ ಮಾನಸಿಕ ಕಾರಣಗಳಾಗುತ್ತವೆ. ಧಾರ್ಮಿಕ ಅಸಹಿಷ್ಣುತೆ ಮತ್ತು ಸ್ವಾತಂತ್ರ್ಯಕ್ಕೋಸ್ಕರ ಹಂಬಲ, ಧರ್ಮದ ಆಧಾರದಲ್ಲಿ ಜನರನ್ನು ಬೇರ್ಪಡಿಸಿ, ತಾರತಮ್ಯವನ್ನು ಮಾಡಿ ಶೋಷಣೆಗೊಳಪಡಿಸುವುದು ಸ್ಥಳಾಂತರಕ್ಕೆ ಧಾರ್ಮಿಕ ಕಾರಣಗಳಾಗುತ್ತವೆ. ರಾಜಕೀಯ ಮಹತ್ವಾಕಾಂಕ್ಷೆ, ದಬ್ಬಾಳಿಕೆ ಮತ್ತು ದೌರ್ಜನ್ಯ, ಶೋಷಣೆ ಹಾಗೂ ತಾರತಮ್ಯದ ನೀತಿಗಳು ಸ್ಥಳಾಂತರಕ್ಕೆ ರಾಜಕೀಯ ಕಾರಣಗಳಾಗುತ್ತವೆ. ಕಡಿಮೆ ಸಂಬಳ ಹಾಗೂ ಸೌಲಭ್ಯಗಳನ್ನು ನೀಡುವುದು, ಅಸಮರ್ಪಕ ಕೆಲಸದ ವಾತಾವರಣಗಳು ವೃತ್ತಿಪರ ಸ್ಥಳಾಂತರಕ್ಕೆ ಪ್ರಮುಖ ಕಾರಣಗಳು'[47] ಎಂಬುದಾಗಿ ವಿಶ್ಲೇಷಿಸಿರುತ್ತಾರೆ. ಲೇಖಕರು ವಿವರಿಸಿದ ಸ್ಥಳಾಂತರಗಳು ವಲಸೆ ಹೋಗುವುದಕ್ಕಿಂತ ಭಿನ್ನವಾಗಿಲ್ಲದೇ ಇರುವುದರಿಂದ ಇವುಗಳನ್ನು ಸ್ಥಳಾಂತರ ಎಂಬುದಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಮೇಲೆ ವಿವರಿಸಿದ ಹೆಚ್ಚಿನ ಸಂದರ್ಭಗಳಲ್ಲಿ ಜನರಿಗೆ ತಾವು ವಾಸಿಸುತ್ತಿರುವ ಮೂಲ ಪ್ರದೇಶಗಳಿಂದ ಇನ್ನೊಂದೆಡೆಗೆ ಸ್ಥಳಾಂತರಗೊಳ್ಳಲು ಯಾವುದೇ ರೀತಿಯ ಮಹತ್ತರ ಒತ್ತಡಗಳು ಇಲ್ಲದೇ

ಇರುವುದರಿಂದ ಅಭಿವೃದ್ಧಿಪ್ರೇರಿತ ಸ್ಥಳಾಂತರಕ್ಕೂ, ಲೇಖಕರು ವಿವರಿಸಿದ ಇತರ ರೀತಿಯ ಸ್ಥಳಾಂತರಗಳಿಗೂ ಯಾವುದೇ ರೀತಿಯ ಸಂಬಂಧಗಳಿಲ್ಲ ಎಂಬುದನ್ನು ನಾವು ಗಮನಿಸಬಹುದು.

ಬಲವಂತದ ಸ್ಥಳಾಂತರ ಪ್ರಕ್ರಿಯೆಯ ಸಮಸ್ಯೆಗಳನ್ನು ವಿಶ್ಲೇಷಿಸುತ್ತಾ ಕಾಸಾಸ್‌ರವರು, 'ಅಭಿವೃದ್ಧಿ ಪ್ರಕ್ರಿಯೆಗಳಿಂದ ಸಂತ್ರಸ್ತರಾಗಿ ಅಪರಿಚಿತ ಪ್ರದೇಶದಲ್ಲಿ ಪುನರ್‌ವಸತಿಯನ್ನು ಪಡೆದವರು ಮಾತ್ರ ಮಾನಸಿಕ ಒತ್ತಡ ಮತ್ತು ತುಮುಲಗಳನ್ನು ಅನುಭವಿಸುವುದಲ್ಲ, ಪುನರ್‌ವಸತಿ ಪ್ರದೇಶದಲ್ಲಿ ಹಿಂದಿನಿಂದಲೂ ವಾಸಿಸುತ್ತಾ ಬಂದಿರುವ ನಿವಾಸಿಗಳಿಗೂ ಸಂತ್ರಸ್ತರೊಂದಿಗೆ ಯಾವ ರೀತಿಯಲ್ಲಿ ಸಂಬಂಧಗಳನ್ನು ಬೆಳೆಸುವುದು ಎಂಬುದಾಗಿ ಗೊಂದಲಗಳು ಉಂಟಾಗುತ್ತದೆ. ಪುನರ್‌ವಸತಿ ಹೊಂದಿದ ತಕ್ಷಣದಲ್ಲಿ ಸಂತ್ರಸ್ತರಿಗೆ ಮಾನಸಿಕ ಆಘಾತಗಳು ಹಾಗೂ ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗುವ ಸಾಧ್ಯತೆಯಿರುತ್ತದೆ. ಸರಿಯಾದ ರೀತಿಯಲ್ಲಿ ಪುನರ್‌ವಸತಿಯನ್ನು ವ್ಯವಸ್ಥಿತವಾಗಿ ಮಾಡುವುದರಿಂದ ಮಾತ್ರ ಸಂತ್ರಸ್ತರ ಸಮಸ್ಯೆಗಳನ್ನು ನೀಗಿಸಲು ಸಾಧ್ಯ[48] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳನ್ನು ಸಾಧಿಸಲು ಉದ್ದೇಶಿಸುವ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಅಭಿವೃದ್ಧಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಹಾಗೂ ಸಹಾಯ ನೀಡುವ ಹಕ್ಕು ಪ್ರತಿಯೊಬ್ಬರಿಗೂ ಇದೆ ಎಂಬುವುದನ್ನು 1986 ರಲ್ಲಿ ಘೋಷಿಸಿದ 'ಅಭಿವೃದ್ಧಿಯ ಹಕ್ಕುಗಳು' ಎಂಬ ನಿರ್ಣಯದಲ್ಲಿ ಸ್ಪಷ್ಟವಾಗಿ ವಿವರಿಸಿದೆ. ಆದರೂ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸ್ಥಳಾಂತರಿಸಲ್ಪಟ್ಟ ಜನರನ್ನು "ಅಭಿವೃದ್ಧಿಯನ್ನು ಸಾಧಿಸಲು ತ್ಯಾಗ ಮಾಡಿದ ಜನರು" ಎಂಬುವುದಾಗಿ ಪರಿಗಣಿಸಲಾಗುತ್ತದೆ ಎಂಬುವುದಾಗಿ ಕೋರ್ಟ್‌ಲ್ಯಾಂಡ್ ರಾಬಿನ್‌ಸನ್‌ರವರು (2003) ವಿವರಿಸುತ್ತಾ, ಸ್ಥಳಾಂತರದ ಸಂತ್ರಸ್ತರಿಗೆ ಯೋಜನೆಗಳ ನಿರ್ಣಯ ತೆಗೆಯುವ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು. ಗಿರಿಜನರು ಮತ್ತು ಸ್ಥಳೀಯ ಜನರಿಗೆ ತಮ್ಮ ಮೇಲೆ ಪರಿಣಾಮ ಬೀರುವ ಯೋಜನೆಗಳ ರಚನೆ, ಜಾರಿ ಮತ್ತು ವಿಶ್ಲೇಷಣೆಗಳಲ್ಲಿ ಭಾಗವಹಿಸುವ ಅವಕಾಶ ನೀಡಬೇಕು[49] ಎಂಬುದಾಗಿ ಪ್ರತಿಪಾದಿಸಿದ್ದಾರೆ.

ಕೆಲವು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಯೋಜನೆಗಳಿಂದ ಸಂತ್ರಸ್ತರಾಗುವ ಜನರ ಗಮನಕ್ಕೆ ಬರುವುದಕ್ಕೂ ಮೊದಲು ಕ್ರಮವನ್ನು ತೆಗೆದುಕೊಂಡು ಆಗಿರುತ್ತದೆ. ಇದು ಸಂತ್ರಸ್ತ ಜನರು ಹಿಂಸಾತ್ಮಕ ವಿಧಾನಗಳನ್ನು ಅನುಸರಿಸುವುದಕ್ಕೆ ಹೇತುವಾಗುತ್ತದೆ. ಇಂತಹ ಸಮಸ್ಯೆಗಳನ್ನು ತಡೆಗಟ್ಟಲು ಸಂತ್ರಸ್ತರಾಗುವವರ ಸಮಸ್ಯೆಗಳನ್ನು ಮೊದಲೇ ನಿವಾರಿಸುವುದಕ್ಕೆ ಪ್ರಯತ್ನಿಸಬೇಕು. ಮಾನವ ಹಕ್ಕುಗಳ ಜಾಗತಿಕ ಘೋಷಣೆಯಲ್ಲಿ ಎಲ್ಲಾ ಜನರಿಗೂ ಪರಿಹಾರವನ್ನು ಪಡೆಯುವ ಹಕ್ಕಿನ ಬಗ್ಗೆ ಉಲ್ಲೇಖವಿರುತ್ತದೆ[50] ಎಂಬುವುದಾಗಿ ಬಾಲಕೃಷ್ಣನ್ ರಾಜಗೋಪಾಲ್ (2000) ಅಣೆಕಟ್ಟುಗಳ ಜಾಗತಿಕ ಆಯೋಗಕ್ಕೆ ಸಂಬಂಧಪಟ್ಟಂತೆ ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ನರ್ಮದಾ ಸರೋವರ್ ಅಣೆಕಟ್ಟಿನ ಸಂತ್ರಸ್ತರ ಬಗ್ಗೆ ವಿಸ್ತೃತವಾಗಿ ಅಧ್ಯಯನವನ್ನು ನಡೆಸಿರುವ ಜೇನ್ ಡ್ರೇಸ್, ಮೀರಾ ಸ್ಯಾಮ್‌ಸನ್ ಮತ್ತು ಸತ್ಯಜಿತ್ ಸಿಂಗ್‌ರವರು ನರ್ಮದ ಸರೋವರ್ ಅಣೆಕಟ್ಟಿಗೆ ಸಂಬಂಧಿಸಿದ ಯೋಜನೆಗಳು, ಅವು ಜಾರಿಯಾಗುತ್ತಿರುವ ಭೂಪ್ರದೇಶ, ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗುತ್ತಿರುವ ಜನರ ಸಮಸ್ಯೆಗಳು, ವಿಶೇಷವಾಗಿ ಆ ಪ್ರದೇಶದಲ್ಲಿ ವಾಸಿಸುತ್ತಿರುವ ಆದಿವಾಸಿಗಳ ಬವಣೆಗಳು, ನರ್ಮದಾ ಮತ್ತು ಸರ್ದಾರ್ ಸರೋವರ ಅಣೆಕಟ್ಟುಗಳ ಸಂತ್ರಸ್ತರ ಪರವಾಗಿ ಯೋಜನೆಯ ವಿರುದ್ಧ ನಡೆಸಲ್ಪಟ್ಟ ಜನಾಂದೋಲನಗಳ ಬಗ್ಗೆ ವಿವರವಾಗಿ ವಿಶ್ಲೇಷಿಸಿರುತ್ತಾರೆ. ನರ್ಮದಾ ನದಿ ನೀರು ಹಂಚಿಕೆ ವ್ಯಾಜ್ಯ ತೀರ್ಮಾನ ಮಂಡಳಿಯ ಆದೇಶದಂತೆ ನರ್ಮದಾ ನದಿ ಹರಿಯುವ ಮೂರು ರಾಜ್ಯಗಳಾದ ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರಗಳಲ್ಲಿ ಮೂವತ್ತು ದೊಡ್ಡ ಮತ್ತು ನೂರ ಮೂವತ್ತೈದು ಮಧ್ಯಮ ಹಾಗೂ ಮೂರು ಸಾವಿರ ಸಣ್ಣ ಅಣೆಕಟ್ಟುಗಳ ನಿರ್ಮಾಣಕ್ಕೆ ಅನುಮತಿ ನೀಡಿತು. ಈ ಯೋಜನೆಯ ಪ್ರಮುಖ ಗುರಿಯು ಮೂರು ರಾಜ್ಯಗಳ ಐದು ಕೋಟಿ ಜನರಿಗೆ ಕುಡಿಯುವ ನೀರು, ಅರವತ್ತು ಲಕ್ಷ ಹೆಕ್ಟೇರ್ ಜಮೀನುಗಳಿಗೆ ನೀರಾವರಿ ಮತ್ತು ಮಧ್ಯಭಾರತಕ್ಕೆ ವಿದ್ಯುತ್ತನ್ನು ಒದಗಿಸುವ ಉದ್ದೇಶವನ್ನು ಹೊಂದಿತ್ತು. ನರ್ಮದಾ ಆಂದೋಲನವು ತನ್ನ ಸ್ವತಂತ್ರ ಅಧ್ಯಯನದಿಂದ ಹೊರತಂದ ವರದಿಯ ಪ್ರಕಾರ ಅಣೆಕಟ್ಟು ಸರಣಿಯಲ್ಲಿ ಪ್ರಮುಖವಾದ ಸರ್ದಾರ್ ಸರೋವರ ಯೋಜನೆಯೊಂದರಿಂದಾಗಿಯೇ 3,20,000 ಜನರು ತಮ್ಮ ಮೂಲನೆಲೆಗಳಿಂದ ಎತ್ತಂಗಡಿಯಾಗುತ್ತಾರೆ. ಅವರಲ್ಲಿ ಬಹುಪಾಲು ಸಂತ್ರಸ್ತರು ಆದಿವಾಸಿಗಳು[51] ಎಂಬುದಾಗಿ ಈ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಸತ್ಯಜಿತ್‌ಸಿಂಗ್‌ರವರು ಯೋಜನೆಯಿಂದ ಸಂತ್ರಸ್ತರಾಗುತ್ತಿರುವ ಜನರ ಪುನರ್‌ವಸತಿಯ ಬಗ್ಗೆ ವಿವರಿಸುತ್ತ 'ಭೂಸ್ವಾಧೀನ ಕಾಯಿದೆಗಳು ಭಾರತದಲ್ಲಿ ಸಂಕುಚಿತ ದೃಷ್ಟಿಕೋನವನ್ನು ಹೊಂದಿದ್ದು, ಪರಿಹಾರದ ಪ್ಯಾಕೇಜ್‌ಗಳ ಬಗ್ಗೆ ಮಾತ್ರ ವಿವರಿಸುತ್ತದೆಯೇ ಹೊರತು ಸಂತ್ರಸ್ತ ಜನರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಪರಿಸರದ ಹಾಗೂ ಜೀವನಶೈಲಿಯಲ್ಲಿ ಬದಲಾವಣೆಯನ್ನು ತರುವುದರ ಬಗ್ಗೆ ಯಾವುದೇ ಸ್ಪಷ್ಟತೆಯನ್ನು ಹೊಂದಿಲ್ಲ'[52] ಎಂದಿದ್ದಾರೆ. ಈ ದೃಷ್ಟಿಕೋನ ಸಂತ್ರಸ್ತ ಜನರ ವೈಯಕ್ತಿಕ ಪುನರ್‌ವಸತಿಯ ಬಗ್ಗೆ ಮಾತ್ರ ವಿವರಿಸುತ್ತದೆಯೇ ಹೊರತು ಒಟ್ಟು ಹಳ್ಳಿಗಳ ಹಾಗೂ ಸಮುದಾಯದ ಪುನರ್‌ವಸತಿಯ ಬಗ್ಗೆ ಯಾವುದೇ ವಿವರಣೆ ಅದರಲ್ಲಿ ಇಲ್ಲ ಎಂದಿದ್ದಾರೆ. ಯಾವುದು ಯೋಗ್ಯ ಪುನರ್‌ವಸತಿ ಪ್ಯಾಕೇಜ್‌ಗಳಾಗಬಹುದು ಎಂಬುದಾಗಿ ಸತ್ಯಜಿತ್ ಸಿಂಗ್‌ರವರು ವಿಶ್ಲೇಷಿಸುತ್ತಾ, ಪರಿಹಾರದ ರೂಪದಲ್ಲಿ ಹಣವನ್ನು ನೀಡುವುದು ಮತ್ತಷ್ಟು ಹೊಸ ಸಮಸ್ಯೆಗಳನ್ನು ಸೃಷ್ಟಿಸಬಹುದು. ಸಂತ್ರಸ್ತರು ಜೀವನೋಪಾಯಕ್ಕಾಗಿ ಇತರ ವೃತ್ತಿಗಳನ್ನು ಅವಲಂಬಿಸುವುದು ಸುಲಭ ಸಾಧ್ಯವಾಗುವುದಿಲ್ಲ. ಸಂತ್ರಸ್ತರು ವಿದ್ಯಾಭ್ಯಾಸವನ್ನು ಹೊಂದಿಲ್ಲದೆ ಇರುವುದರಿಂದ ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಉದ್ಯೋಗದ ಅವಕಾಶಗಳ ಸಾಧ್ಯತೆಗಳು ತುಂಬಾ ಕಡಿಮೆ ಇರುತ್ತದೆ ಎಂಬುದನ್ನು ವಿವರಿಸಿ

ಯೋಜನೆಗಳ ಪುನರ್‌ವಸತಿ ನೀತಿಗಳು ಸಂತ್ರಸ್ತರು ತಮ್ಮ ಪೂರ್ವಜೀವನದಲ್ಲಿ ನಡೆಸಿದಂತಹ ಜೀವನ ಕ್ರಮಕ್ಕೆ ಹತ್ತಿರವಾಗಿರಬೇಕೇ ಹೊರತು ಯಾವುದೇ ರೀತಿಯ ಅಮೂಲಾಗ್ರ ಬದಲಾವಣೆ ತರುವ ರೂಪದಲ್ಲಿ ಇರಬಾರದು[53] ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ನರ್ಮದಾ ಭೂವ್ಯಾಜ್ಯ ಪರಿಹಾರ ಮಂಡಳಿ ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ನಿರ್ವಸಿತರಿಗೆ ಬರಡು ಭೂಮಿಯನ್ನು ನೀಡಿದ ಗುಜರಾತ್ ಸರಕಾರ, ಕೃಷಿ ಭೂಮಿಯನ್ನು ಕಳೆದುಕೊಂಡ ರೈತರಿಗೆ ಬರಡು ಭೂಮಿಯನ್ನು ಹಾಗೂ ಇತರರಿಗೆ ಯಾವುದೇ ಭೂಮಿಯನ್ನು ನೀಡದೇ ಸಂತ್ರಸ್ತರು ತಮ್ಮ ಮೂಲ ಕೃಷಿ ವೃತ್ತಿಯನ್ನು ಮುಂದುವರಿಸದಂತೆ ಮಾಡಿತು. ಗುಜರಾತ್ ಮತ್ತು ಮಧ್ಯಪ್ರದೇಶದ ಸರಕಾರಗಳು ನಿರ್ವಸಿತರಿಗೆ ಪರಿಹಾರ ರೂಪವಾಗಿ ಭೂಮಿಯ ಬದಲಾಗಿ ಹೊಸ ಭೂಮಿಯನ್ನು ಖರೀದಿಸಲು ನಗದು ಮೊತ್ತವನ್ನು ನೀಡಿತು. ಸರದಾರ್ ಅಣೆಕಟ್ಟು ಪುನರ್‌ವಸತಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ನೇಮಿಸಲ್ಪಟ್ಟ ಜಾಗತಿಕ ಬ್ಯಾಂಕ್‌ನ ಅಧಿಕಾರಿಗಳು, "ಸರಕಾರವು ಭೂಮಿಯ ಬದಲಿಗೆ ನಗದು ಪರಿಹಾರವನ್ನು ನೀಡಿದ ಕ್ರಮವು ನಿರ್ವಸಿತರ ಜೀವನಮಟ್ಟದ ಕುಸಿತಕ್ಕೆ ಮತ್ತು ಜೀವನಕ್ರಮದ ಬದಲಾವಣೆಗೆ ಹೇತುವಾಯಿತು"[54] ಎಂಬ ಉಲ್ಲೇಖಿಸಿದ್ದಾರೆ. ಹಳ್ಳಿಗಳನ್ನು ಹಳ್ಳಿಯ ರೀತಿಯಲ್ಲಿ ಪುನರ್‌ನಿರ್ಮಿಸಬೇಕು ಎಂಬ ನರ್ಮದಾ ಭೂವ್ಯಾಜ್ಯ ಪರಿಹಾರ ಮಂಡಳಿಯ ಆದೇಶವು ಸಂತ್ರಸ್ತರು ಬೇರೆ ಪ್ರದೇಶಗಳಿಗೆ ವಲಸೆ ಹೋದ ಕಾರಣ ಕಾರ್ಯರೂಪಕ್ಕೆ ಬರಲಿಲ್ಲ[55] ಎಂದು ಕ್ಲಾಡ್ ಆಲ್ವರಿಸ್ ಮತ್ತು ರಮೇಶ್ ಬಿಲ್ಲೋರಿಯವರು ತಮ್ಮ ಅಧ್ಯಯನದಲ್ಲಿ ಉಲ್ಲೇಖಿಸಿದ್ದಾರೆ. ಈ ಎಲ್ಲಾ ಕಾರಣಗಳಿಗಾಗಿ ಸಂಶೋಧಕರು ಅಭಿವೃದ್ಧಿ ಯೋಜನೆಗಳನ್ನು ಯಾವ ರೀತಿಯಲ್ಲಿ ಸಮರ್ಥಿಸಬಹುದು? ಅವುಗಳು ಏನನ್ನು ಸಾಧಿಸಲು ಹೊರಟಿವೆ? ಈ ಅಭಿವೃದ್ಧಿ ಯೋಜನೆಗಳು ನಿರ್ವಸಿತರ ಸಮಸ್ಯೆಗಳನ್ನು ಪರಿಹರಿಸಲು ಹಿಂದಿನ ಯೋಜನೆಗಳ ಸಾಧನೆ–ವೈಫಲ್ಯಗಳನ್ನು ಅಳವಡಿಸಿಕೊಳ್ಳುವಲ್ಲಿ ಹೇಗೆ ವಿಫಲವಾದವು? ಪರಿಸರಕ್ಕೆ ಈ ಯೋಜನೆಗಳಿಂದ ಆಗುವ ಹಾನಿಯ ಸ್ವರೂಪ ಏನು? ಯೋಜನೆಗಳ ಜಾರಿಯಿಂದ ಜನರ ಮೇಲೆ ಆಗುವ ಪರಿಣಾಮಗಳು ಅಮಾನವೀಯವೆಂದು[56] ಸಂಶೋಧಕರು ತಮ್ಮ ಗ್ರಂಥದಲ್ಲಿ ವಿಸ್ತಾರವಾಗಿ ಯೋಜನೆಗಳಿಂದ ಆಗುವ ಲಾಭಗಳಿಗಿಂತ ಪರಿಸರದ ಮೇಲೆ ಬೀರುವ ದುಷ್ಪರಿಣಾಮಗಳೇ ಹೆಚ್ಚು ಎಂದು ವಿವರಿಸಿದ್ದಾರೆ.

ನೀರಾವರಿ, ವಿದ್ಯುತ್ ಉತ್ಪಾದನೆ, ಬಹೂಪಯೋಗಿ ದೊಡ್ಡ ಅಣೆಕಟ್ಟುಗಳ ನಿರ್ಮಾಣಗಳು ಇಪ್ಪತ್ತನೇ ಶತಮಾನದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹುಟ್ಟಿಕೊಂಡ ಅಭಿವೃದ್ಧಿಯ ಮಾದರಿಗಳು. ಇವುಗಳು ವ್ಯವಸ್ಥಿತವಾಗಿ ಯೋಜಿಸಲ್ಪಟ್ಟಿದ್ದರೂ ಪರಿಸರಕ್ಕೆ ಮತ್ತು ಸಾಮಾಜಿಕ ವ್ಯವಸ್ಥೆಗೆ, ಇದರಿಂದ ಸ್ಥಳಾಂತರಗೊಳ್ಳುವ ಸಂತ್ರಸ್ತರಿಗೆ ಆಗುವ ಹಾನಿಯ ಬಗ್ಗೆ ಯಾವುದೇ ಪ್ರಾಮುಖ್ಯತೆಯನ್ನು ನೀಡದೇ ಇರುವುದು ಶೋಚನೀಯ[57] ಎಂಬುದಾಗಿ ಸಂಜೀವ ಕಗ್ರಾಮ್‌ರವರು ಉಲ್ಲೇಖಿಸುತ್ತಾ, ಯಾವುದು ಯೋಗ್ಯ ರೀತಿಯ ಅಭಿವೃದ್ಧಿ

ಪ್ರಕ್ರಿಯೆಯಾಗುತ್ತದೆ, ಪರಿಸರದ ರಕ್ಷಣೆ ಮತ್ತು ಮಾನವ ಹಕ್ಕುಗಳ ಬಗ್ಗೆ ಜಾಗತಿಕವಾಗಿ ಒಲವು ವ್ಯಕ್ತವಾಗುತ್ತಿರುವ ಸಂದರ್ಭದಲ್ಲಿ ಯಾವ ರೀತಿ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವ ಯೋಜನೆಯಲ್ಲಿ ಜನರ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂಬುದನ್ನು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ. ಸರಕಾರೇತರ ಸಂಸ್ಥೆಗಳು ತಮಗಿಂತ ಬಲಿಷ್ಠವಾಗಿರುವ ರಾಷ್ಟ್ರೀಯ, ಬಹುರಾಷ್ಟ್ರೀಯ ಮತ್ತು ಜಾಗತಿಕ ಕಂಪೆನಿಗಳ ಅಭಿವೃದ್ಧಿ ಯೋಜನೆಗಳ ಮೇಲೆ ಒತ್ತಡ ತಂದು ಜನಪರವಾಗಿ ಕಾರ್ಯನಿರ್ವಹಿಸುವಂತೆ ಹೇಗೆ ಮಾಡುತ್ತದೆ[58] ಎಂದು ಉಲ್ಲೇಖಿಸಿರುತ್ತಾರೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಿರ್ಮಾಣಗೊಳ್ಳುತ್ತಿದ್ದ ಬೃಹತ್ ಅಣೆಕಟ್ಟುಗಳ ವಿರುದ್ಧದ ಪ್ರತಿಭಟನೆಗಳು ಜಾಗತಿಕ ಮಟ್ಟದಲ್ಲಿ ಪರಿಸರದ ರಕ್ಷಣೆಯ ಬಗ್ಗೆ ಜಾಗೃತಿಯನ್ನು ಮೂಡಿಸಿತು. 1972ರಲ್ಲಿ ಸ್ಟಾಕ್‌ಹೋಮ್‌ನಲ್ಲಿ ನಡೆದ ವಿಶ್ವಸಂಸ್ಥೆ ಪ್ರಾಯೋಜಿಸಿದ್ದ ಅಂತರ್‌ರಾಷ್ಟ್ರೀಯ ಮಟ್ಟದ ಪರಿಸರದ ಜಾಗೃತಿಯ ಬಗೆಗಿನ ಸಮ್ಮೇಳನವು, ಜಾಗತಿಕವಾಗಿ ಅಭಿವೃದ್ಧಿ ಪ್ರಕ್ರಿಯೆಯ ಜಾರಿಯ ಸಂದರ್ಭದಲ್ಲಿ ಅಲ್ಲಿನ ಪರಿಸರ ಹಾಗೂ ಸ್ಥಳೀಯ ನಿವಾಸಿಗಳ ಹಿತಾಸಕ್ತಿಗೆ ಪ್ರಾಮುಖ್ಯತೆ ನೀಡಬೇಕು ಎಂಬ ನಿರ್ಣಯವನ್ನು ಅಂಗೀಕರಿಸಿತು. ಭಾರತದ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸೌಹಾರ್ದಯುತ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು ಪರಿಸರದ ವಿಷಯಗಳ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ ಎಂಬುದಾಗಿ ಸ್ಪಷ್ಟವಾಗಿ ತಿಳಿಸಲಾಗಿತ್ತು. ಅಭಿವೃದ್ಧಿ ಚಟುವಟಿಕೆಗಳು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿರದೆ ಯಾವತ್ತೂ ಜನಪರವಾಗಿರಬೇಕು[59] ಎಂಬುದಾಗಿ ಸಂಜೀವ ಕಗ್ರಾಮ್‌ರವರು ತಮ್ಮ ಸಂಶೋಧನಾ ಗ್ರಂಥದಲ್ಲಿ ವಿವರಿಸಿದ್ದಾರೆ.

ಸುಡಾನಿನ ಅಸ್ವಾನ್ ಅಣೆಕಟ್ಟು ನಿರ್ಮಾಣದಿಂದ ಸಂತ್ರಸ್ತರಾದ ನುಬಿಯಾನ್ ಬುಡಕಟ್ಟು ಜನರು ಹಾಗೂ ಅವರಿಗೋಸ್ಕರ ಪುನರ್‌ವಸತಿಯನ್ನು ಕಲ್ಪಿಸಿದ ಕಾಸ್ಮ ಇಲ್ ಗಿರಾ ಯೋಜನೆಯ ಬಗೆಗೆ ವೈಜ್ಞಾನಿಕ ಅಧ್ಯಯನವನ್ನು ನಡೆಸಿದ ಹುಸೇನ್‌ರವರು, ಪುನರ್‌ವಸತಿಯ ಸಂದರ್ಭದಲ್ಲಿ ಸಂತ್ರಸ್ತರ ಸಾಮಾಜಿಕ ಪದ್ಧತಿಗಳು, ಧಾರ್ಮಿಕ ನಂಬಿಕೆಗಳು, ಜನಾಂಗೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳ ಅವಗಣನೆ ಅವರನ್ನು ಅಸ್ಥಿರರನ್ನಾಗಿ ಮಾಡುತ್ತದೆ[60] ಎಂದಿದ್ದಾರೆ. ಹೊಸ ನೆಲೆಗಳನ್ನು ಹಂಚುವಾಗ ರಕ್ತಸಂಬಂಧಿಗಳ ಅವಗಣನೆ, ಅನೆಡಿಸ್ ಗುಂಪುಗಳ ರಚನೆ (ಕೆಟ್ಟ ಚಟಗಳನ್ನು ಮಾಡುವುದಕ್ಕೋಸ್ಕರ ಹುಟ್ಟಿಕೊಂಡ ಅನಧಿಕೃತ ಸಂಸ್ಥೆಗಳು) ಸಂತ್ರಸ್ತರನ್ನು ಮತ್ತಷ್ಟು ತುಮುಲ ಅನುಭವಿಸುವಂತೆ ಮಾಡಿ, ಪುನರ್‌ವಸತಿ ಕಲ್ಪಿಸಲಾದ ಹೊಸ ವಸತಿಗಳನ್ನು ತ್ಯಜಿಸಿ, ಮುಳುಗಡೆಯಾದ ತಮ್ಮ ಹಿಂದಿನ ಮೂಲನೆಲೆಗಳ ಬಳಿಯಲ್ಲಿನ ತೀರದಲ್ಲಿ ವಾಸಿಸುವಂತೆ ಮಾಡಿತು[61] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿಯ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಿದ ಮನೀಷ್‌ಕುಮಾರ್ ವರ್ಮರವರು ಬಲವಂತದ ಸ್ಥಳಾಂತರವು ಸಂತ್ರಸ್ತರನ್ನು ಸಮುದಾಯದ ಬದುಕಿನಿಂದ ಸಂಪೂರ್ಣವಾಗಿ ಬೇರ್ಪಡಿಸುತ್ತದೆ. ತಮ್ಮ ಬದುಕಿನ ಮೂಲಭೂತ ಆಸರೆಯಾದ ಭೂಮಿ ಮತ್ತು ನೈಸರ್ಗಿಕ

ಸಂಪನ್ಮೂಲಗಳನ್ನು ಪುನರ್‌ವಸತಿಯ ನಂತರ ಬಳಕೆ ಮಾಡದಂತೆ ತಡೆಯುತ್ತದೆ.[62] ಅಭಿವೃದ್ಧಿಯ ಹೆಸರಿನಲ್ಲಿ ಬಲವಂತವಾಗಿ ಸ್ಥಳಾಂತರ ಮಾಡಲ್ಪಟ್ಟ ಸಂದರ್ಭಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ಅಧ್ಯಯನ ಮಾಡಲು ಐದು ಆಯಾಮಗಳಿಗೆ ಪ್ರಾಮುಖ್ಯತೆ ನೀಡಬೇಕು ಎಂದು ಮನಿಷ್‌ಕುಮಾರ್ ವರ್ಮರವರು ಅಭಿಪ್ರಾಯಪಟ್ಟಿರುತ್ತಾರೆ. ಅವುಗಳು ಯಾವುವೆಂದರೆ,

- ಬಲವಂತದ ಸ್ಥಳಾಂತರ ಸಂತ್ರಸ್ತ ಜನರ ಸಾಮಾಜಿಕ ವ್ಯವಸ್ಥೆಯ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರುತ್ತದೆ.
- ಸ್ಥಳಾಂತರದ ನಂತರದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಆದ ಬದಲಾವಣೆಯಿಂದಾಗಿ ಮೌಲ್ಯಗಳು, ಪದ್ಧತಿಗಳು, ನಂಬಿಕೆಗಳು, ಸಂಪ್ರದಾಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಯಾವ ರೀತಿಯಾಗಿ ಬದಲಾವಣೆಯಾಯಿತು.
- ಸ್ಥಳಾಂತರವು ಭೂಮಿ, ಉದ್ಯೋಗ ಮತ್ತು ವಾಸ್ತವ್ಯಕ್ಕೆ ಮನೆ ಇಲ್ಲದಿರುವ ವಾತಾವರಣವನ್ನು ಸೃಷ್ಟಿಸುತ್ತದೆ. ಜನರ ಆರ್ಥಿಕ ಬದಲಾವಣೆಗಳು ಮತ್ತು ಪ್ರಭಾವಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು.
- ಸ್ಥಳಾಂತರ ಕೆಲವು ನಿರ್ದಿಷ್ಟ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಸಾಮಾಜಿಕ ಅವಗಣನೆ, ಆಹಾರದ ಅಭದ್ರತೆ, ಅನೈತಿಕ ಚಟುವಟಿಕೆಗಳಲ್ಲಿ ಹೆಚ್ಚಳ, ಸಾಮೂಹಿಕ ಆಸ್ತಿಯನ್ನು ಉಪಯೋಗಿಸುವುದರಿಂದ ಹೊರಗಿಡಲ್ಪಡುವುದು ಇವುಗಳ ಬಗ್ಗೆ ವಿಶೇಷ ಆದ್ಯತೆ ನೀಡಿ ಅಧ್ಯಯನ ಮಾಡಬೇಕು.
- ಸರಕಾರದ ಪುನರ್‌ವಸತಿ ನೀತಿಗಳು ಎಷ್ಟು ಯೋಗ್ಯವಾಗಿರುತ್ತದೆ, ಸಂತ್ರಸ್ತರ ಸಮಸ್ಯೆಗಳನ್ನು ನಿವಾರಿಸುವುದರಲ್ಲಿ ಯಶಸ್ವಿಯಾಗಿರುತ್ತದೆಯೇ? ಅವುಗಳ ಸಾಧಕ ಬಾಧಕಗಳ ಬಗ್ಗೆ ಹೆಚ್ಚಿನ ಒತ್ತನ್ನು ನೀಡುವುದು.

ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟ ಸಾಹಿತ್ಯವನ್ನು ಅವಲೋಕಿಸಿದ ನಂತರ ಹಿಂದಿನ ಸಂಶೋಧನೆಗಳು ಕೆಲವು ಮೂಲಭೂತ ಪ್ರಶ್ನೆಗಳನ್ನು ನಿರ್ಲಕ್ಷಿಸಿದೆ ಎಂದು ಈ ಕೆಳಗಿನ ಅಭಿಪ್ರಾಯವನ್ನು ನೀಡಬಹುದು.

- ಹೆಚ್ಚಿನ ಅಧ್ಯಯನಗಳು ಕೆಲವು ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದು ವಿಶಾಲ ದೃಷ್ಟಿಕೋನವನ್ನು ಹೊಂದಿಲ್ಲದೇ ಇರುವುದು.
- ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟ ಅಧ್ಯಯನ ಮಾಡಿದ ವಿಧಾನಗಳಲ್ಲಿ ದೋಷವಿದೆ. ಸಮಸ್ಯೆಯ ಅಗಾಧತೆಯನ್ನು ಗಮನಿಸಿದಾಗ ಒಂದೇ ರೀತಿಯ ವಿಧಾನಗಳನ್ನು ಬಳಸುವುದು ಪರಿಣಾಮಕಾರಿಯಾಗುವುದಿಲ್ಲ.

- ನಿರ್ದಿಷ್ಟ ಯೋಜನೆಗಳ ಬಗ್ಗೆ ಅಧ್ಯಯನಗಳು ಯೋಜನೆ ಅಸ್ತಿತ್ವಕ್ಕೆ ಬಂದು ದಶಕಗಳ ನಂತರ ನಡೆಸಲ್ಪಟ್ಟಿರುವುದರಿಂದ ಸಂಶೋಧಕರಿಗೆ ನಿಖರವಾದ ಮಾಹಿತಿಗಳು ದೊರಕದೇ ಇರುವುದು.
- ವಿವಿಧ ಕಾರಣಗಳಿಗಾಗಿ ಸಂತ್ರಸ್ತರು ಅಧ್ಯಯನದ ಸಂದರ್ಭದಲ್ಲಿ ಸೂಕ್ತ ರೀತಿಯಲ್ಲಿ ಸಹಕರಿಸದಿರುವುದು.
- ಸಾಮಾಜಿಕ ಅಂಶಗಳಾದ ಸಂಪ್ರದಾಯ, ಪದ್ಧತಿ, ಮೌಲ್ಯ ಮತ್ತು ನಂಬಿಕೆಗಳು, ಧರ್ಮ, ಮದುವೆ, ಜಾತಿ ವ್ಯವಸ್ಥೆ ಮುಂತಾದವುಗಳು ಸಂತ್ರಸ್ತರ ಬದುಕಿನ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಿರುತ್ತದೆ ಎಂಬುದನ್ನು ಹೆಚ್ಚಿನ ಸಂಶೋಧಕರು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು.

ಅಭಿವೃದ್ಧಿ ಪ್ರೇರಿತ ಬಲವಂತದ ಸ್ಥಳಾಂತರಕ್ಕೆ ಸಂಬಂಧಪಟ್ಟಂತೆ ಲಭ್ಯವಿರುವ ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದ ವಿದ್ವಾಂಸರುಗಳ ಸಾಹಿತ್ಯ ಮತ್ತು ಸಂಶೋಧನೆಗಳ ಫಲಿತಗಳನ್ನು ಗಮನಿಸಿದಾಗ ಯೋಜನೆಗಳ ಸಂತ್ರಸ್ತರ ಬದುಕಿನ ಮೇಲೆ ಸ್ಥಳಾಂತರದಿಂದಾದ ಸರಿಪಡಿಸಲಾಗದಂತಹ ನಕಾರಾತ್ಮಕ ಪರಿಣಾಮಗಳ ಬಗ್ಗೆ ಹೆಚ್ಚಿನ ವಿವರಣೆಗಳನ್ನು ನೀಡಿರುವುದು ಕಂಡುಬರುತ್ತದೆ. ಅಭಿವೃದ್ಧಿ ಚಟುವಟಿಕೆಗಳಿಂದ ರಾಷ್ಟ್ರದ ವರಮಾನ ಹಾಗೂ ಜಾಗತಿಕ ಮಟ್ಟದಲ್ಲಿ ಪ್ರತಿಷ್ಠೆ ಹೆಚ್ಚಾದರೂ ಯೋಜನೆಗಳ ಸಂತ್ರಸ್ತರು ಅನುಭವಿಸುವ ಯಾತನೆಗಳು ಹೆಚ್ಚುತ್ತದೆ ಎಂಬ ಅಭಿಪ್ರಾಯವನ್ನು ಹೆಚ್ಚಿನ ವಿದ್ವಾಂಸರು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಸ್ವಾಧೀನ ಪಡಿಸಿರುವುದು ಸಂತ್ರಸ್ತರ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಿರುತ್ತದೆಯೆಂದು ಪ್ರಸ್ತುತ ಅಧ್ಯಯನದ ಮೂಲಕ ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿರುತ್ತದೆ.

1.2 ಅಭಿವೃದ್ಧಿ ಬಗೆಗಿನ ಸಾಹಿತ್ಯದ ಪರಾಮರ್ಶನ

ವಾಸುದೇವ ರಾವ್ ಅವರು ತಮ್ಮ ಸಂಪಾದಿತ ಗ್ರಂಥದಲ್ಲಿ ಅಮರ್ತ್ಯಸೇನ್‌ರವರ ಅಭಿವೃದ್ಧಿಯ ಬಗೆಗಿನ ಮಾತುಗಳನ್ನು ಉಲ್ಲೇಖಿಸುತ್ತಾ 'ಜನರ ಹಸಿವನ್ನು ನಿವಾರಿಸುವುದರಿಂದ ಮಾತ್ರ ಸರ್ಕಾರ ತನ್ನ ಕರ್ತವ್ಯದಿಂದ ನುಣುಚಿಕೊಳ್ಳುವಂತಿಲ್ಲ. ಇದರಿಂದ ಬಡತನ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ಜೀವಿಸುವ ಜನರ ಅಭಿವೃದ್ಧಿ ಮಾಡಿದಂತಾಗುವುದಿಲ್ಲ. ಜನರಿಗೆ ಉತ್ತಮ ಪೌಷ್ಟಿಕಾಂಶಯುಕ್ತ ಆಹಾರವನ್ನು ಒದಗಿಸಿದರೆ ಮಾತ್ರ ಸಾಲದು, ಬಡಜನತೆ ಉತ್ತಮ ಆರೋಗ್ಯವನ್ನು ಹೊಂದುವ, ಗುಣಾತ್ಮಕ ಶಿಕ್ಷಣವನ್ನು ಪಡೆಯುವ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಹಾಗೂ ಅತ್ಯಾವಶ್ಯಕ ನಾಗರಿಕ ಸೌಲಭ್ಯವನ್ನು ನೀಡಿ ಶೋಷಿತ ವರ್ಗದ ಜನರಿಗೆ ಸಮಾನ ಸಾಮಾಜಿಕ ಅವಕಾಶಗಳನ್ನು ನೀಡುವುದರಿಂದ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ'[63] ಎಂಬ ಮಾತನ್ನು ಪ್ರತಿಪಾದಿಸುತ್ತಾ 'ಇತ್ತೀಚಿನ ದಶಕಗಳಲ್ಲಿ ಕ್ಷೇಮಾಭಿವೃದ್ಧಿ ಹಾಗೂ ಜನರ ಕಲ್ಯಾಣಕ್ಕೆ ಅಭಿವೃದ್ಧಿ ಪ್ರಕ್ರಿಯೆ ಹೆಚ್ಚು ಆದ್ಯತೆಯನ್ನು ನೀಡುತ್ತಿರುವುದರಿಂದ ಅಭಿವೃದ್ಧಿ ಚಟುವಟಿಕೆಗಳಿಗೆ ಮಾನವ ಮುಖವೊಂದಿರಬೇಕು,

ಇದರಿಂದಾಗಿ ಜನತೆಯ ಘನತೆ ಹೆಚ್ಚಾಗುತ್ತದೆ ಹಾಗೂ ಇದು ಇಪ್ಪತ್ತೊಂದನೆಯ ಶತಮಾನದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ'[64] ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ.

ಹೇಮಲತಾ ರಾವ್‌ರವರು ಅಭಿವೃದ್ಧಿ ಪ್ರಕ್ರಿಯೆಗಳ ಬಗ್ಗೆ ಚರ್ಚಿಸುತ್ತಾ,'ಅಭಿವೃದ್ಧಿಯ ಬಗೆಗೆ ಸ್ಪಷ್ಟವಾದ ಹಾಗೂ ಒಮ್ಮತದಿಂದ ಒಪ್ಪಿಕೊಂಡ ಯಾವುದೇ ಒಂದು ನಿಖರವಾದ ವ್ಯಾಖ್ಯಾನ ಇಲ್ಲ; ಅಭಿವೃದ್ಧಿಯೆಂದರೆ ಒಂದು ಹಂತದಲ್ಲಿ ಸೇವೆ ಮತ್ತು ಸರಕುಗಳ ಮುಕ್ತ ಹರಿದಾಟ, ಜನರ ಭೌತಿಕ ಜೀವನಮಟ್ಟವನ್ನು ಹೆಚ್ಚಿಸುವುದು ಎಂದು ತಿಳಿದುಕೊಂಡರೆ, ಇನ್ನೊಂದು ರೀತಿಯಲ್ಲಿ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಂಸ್ಥೆಗಳಲ್ಲಿ ಹಾಗೂ ಜನರ ವರ್ತನೆಯಲ್ಲಿ ಬದಲಾವಣೆಯನ್ನು ತರುವುದು. ನೈಜವಾಗಿ ಈ ಎರಡು ಅಭಿಪ್ರಾಯಗಳ ಮೇಲೆ ಪ್ರಭಾವ ಬೀರುವಂತಹುದು ಅಭಿವೃದ್ಧಿಯ ಮಟ್ಟವನ್ನು ನಿರ್ಧರಿಸುತ್ತದೆ'[65] ಎಂದು ವಿವರಿಸಿದ್ದಾರೆ.

ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅಭಿವೃದ್ಧಿ ಪ್ರಕ್ರಿಯೆಗಳ ಬಗ್ಗೆ ಆಳವಾದ ಸಂಶೋಧನೆಗಳನ್ನು ನಡೆಸಿದ ವಿದ್ವಾಂಸರುಗಳಾದ ರೋಬರ್ಟ್ ಏಶರ್ ಮತ್ತು ಆರ್ಥರ್‌ರವರು ಅಭಿವೃದ್ಧಿಯ ಬಗ್ಗೆ ವಿಶ್ಲೇಷಿಸುತ್ತಾ, 'ಶಿಸ್ತುಬದ್ಧವಾಗಿ ಪೂರ್ವಯೋಜನೆಗಳೊಂದಿಗೆ ತಯಾರಿಸಲ್ಪಟ್ಟ ನೀತಿಗಳು ಮತ್ತು ಯೋಜನೆಗಳು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲು ಹೆಚ್ಚು ಉಪಯುಕ್ತವಾಗುತ್ತದೆ. ಅಭಿವೃದ್ಧಿಯೆಂಬುದು ಬೆಳವಣಿಗೆಯ ಪ್ರಕ್ರಿಯೆಗೆ ಸಮಾನಾಂತರವಾಗಿ ಉಪಯೋಗಿಸಲ್ಪಟ್ಟಿಲ್ಲ. ಅಭಿವೃದ್ಧಿ ಹೊಂದದ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳಲ್ಲಿ ಅಭಿವೃದ್ಧಿಯು ಆರ್ಥಿಕ ಬೆಳವಣಿಗೆಯನ್ನು ಸಾಧಿಸುವ ಗುರಿಯ ಜೊತೆಗೆ ಸಾವಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಯನ್ನು ತರುವಂತಿರಬೇಕು. ಗುಣಾತ್ಮಕ ಬದಲಾವಣೆಯೊಂದಿಗೆ ಪ್ರಮಾಣಾತ್ಮಕವಾಗಿ ಜನರ ಅಭಿವೃದ್ಧಿಯನ್ನು ಸಮಾನಾಂತರವಾಗಿ ಸಾಧಿಸುವಂತಿರಬೇಕು. ಇವೆರಡರ ನಡುವೆ ಪರಸ್ಪರ ಪೂರಕ ಸಂಬಂಧವಿದ್ದರೂ, ಇವುಗಳು ಜೊತೆಯಲ್ಲಿ ಇರದಿದ್ದರೆ ಗುರಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಅಭಿವೃದ್ಧಿಯೆಂದರೆ ಬದಲಾವಣೆ ಮತ್ತು ಬೆಳವಣಿಗೆ. ವಿಶಾಲ ಅರ್ಥದಲ್ಲಿ ಅಭಿವೃದ್ಧಿಯೆಂಬುದು ಆರ್ಥಿಕ ಬೆಳವಣಿಗೆಯನ್ನು ಮೌಲ್ಯಮಾಪನ ಮಾಡುವಂತಹ ಒಂದು ಸಾಮಾಜಿಕ ಪ್ರಕ್ರಿಯೆ'[66] ಎಂದು ವಿವರಿಸುತ್ತಾರೆ.

ಕಾಮೇಶ್ವರ್ ಚೌಧರಿಯವರು ತಮ್ಮ ಸಂಪಾದಿತ ಗ್ರಂಥದಲ್ಲಿ, 'ವ್ಯಕ್ತಿ ಸಾಮರ್ಥ್ಯ ಮತ್ತು ಖಾಸಗಿ ತೊಡಗಿಸಿಕೊಳ್ಳುವಿಕೆಯನ್ನು ಪ್ರೋತ್ಸಾಹಿಸಿ ಒಂದು ಪೂರಕ ರಾಜಕೀಯ, ಅರ್ಥಿಕ ಮತ್ತು ನ್ಯಾಯಯುತವಾದ ಪರಿಸರವನ್ನು ನಿರ್ಮಿಸುವುದಕ್ಕೆ ರಾಷ್ಟ್ರವು ಜವಾಬ್ದಾರಿಯಾಗಿರುತ್ತದೆ' ಎಂಬುದನ್ನು ಉಲ್ಲೇಖಿಸಿ, 'ಬಹುರಾಷ್ಟ್ರೀಯ ಅಭಿವೃದ್ಧಿಯ ಮತ್ತು ಹಣಕಾಸು ಸಂಸ್ಥೆಗಳು ಇಂದು ಒಳ್ಳೆಯ ಆಡಳಿತದ ಅವಶ್ಯಕತೆಯನ್ನು ಪ್ರತಿಪಾದಿಸುತ್ತಾ, ಉತ್ತಮ ಆಡಳಿತವು ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತದೆ. ಆದರೆ ಇಂತಹ ಆಡಳಿತವು ತೃತೀಯ ಜಗತ್ತಿನಲ್ಲಿ ಕಂಡುಬರುತ್ತಿಲ್ಲ ಎಂಬ ವಿಮರ್ಶೆ ಕಂಡುಬರುತ್ತದೆ. ಆದುದರಿಂದ ಇಂದು ಆಡಳಿತದಲ್ಲಿ ಪರಿವರ್ತನೆಯನ್ನು

ತರುವುದು ಅವಶ್ಯಕವಾಗಿದೆ. ಅಭಿವೃದ್ಧಿಯ ಉದ್ದೇಶಗಳನ್ನು ಪೂರೈಸಿಕೊಳ್ಳುವುದಕ್ಕೆ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಗಳು ಅವಶ್ಯಕವಾಗಿದೆ. ಅದು ಆಡಳಿತಕ್ಕೆ ಭದ್ರತೆಯನ್ನು ಹಾಗೂ ಅಭಿವೃದ್ಧಿಯ ಗುರಿಗಳನ್ನು ಸಾಧಿಸಲು ಸಹಕಾರಿಯಾಗುತ್ತದೆ. ಇದರಿಂದಾಗಿ ಜನರ ಅಭಿವೃದ್ಧಿ ಸಾಧ್ಯವಾಗುತ್ತದೆ. ಅಲ್ಲದೇ ಮಾನವ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬಹುದು ಮತ್ತು ನಿರ್ಲಕ್ಷ್ಯಕ್ಕೊಳಗಾದ ಜನರಿಗೆ ನ್ಯಾಯ ಸಿಗುತ್ತದೆ. ಅವರ ಸಬಲೀಕರಣ ಮತ್ತು ಸಹ್ಯ ಅಭಿವೃದ್ಧಿ ಸಾಧ್ಯವಾಗುತ್ತದೆ'[67] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ರಜನಿ ಕೊಥಾರಿಯವರು 'ಬಡತನ ಮತ್ತು ನಿರ್ಲಕ್ಷಿತರ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಪರಿಹರಿಸಲು ವಿಫಲವಾದ ಯಾವುದೇ ರಾಜಕೀಯ ವ್ಯವಸ್ಥೆಯು ದೃಢತೆಯನ್ನು, ಬದ್ಧತೆಯನ್ನು ಮತ್ತು ಗುರಿಗಳನ್ನು ಸಾಧಿಸಿದೆ ಎಂದು ಹೇಳುವುದು ಸಾಧ್ಯವಾಗುವುದಿಲ್ಲ. ರಾಜಕೀಯ ವ್ಯವಸ್ಥೆಯು ಜನರ, ವಿಶೇಷವಾಗಿ ಶೋಷಣೆಗೊಳಪಟ್ಟವರ ಸಮಸ್ಯೆಗಳನ್ನು ಪರಿಹರಿಸುವಂತಿರಬೇಕು. ಇಲ್ಲದಿದ್ದರೆ ಆ ರಾಜಕೀಯ ವ್ಯವಸ್ಥೆಯು ಯಾವುದೇ ರೀತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಿದೆ ಎಂಬುದಾಗಿ ಪರಿಗಣಿಸುವುದಕ್ಕೆ ಸಾಧ್ಯವಾಗುವುದಿಲ್ಲ'[68] ಎಂದು ಅಭಿವೃದ್ಧಿ ಪ್ರಕ್ರಿಯೆಯನ್ನು ವಿಶ್ಲೇಷಿಸಿರುತ್ತಾರೆ.

ಎ.ಪಿ.ಜೆ. ಅಬ್ದುಲ್ ಕಲಾಂ ಮತ್ತು ವೈ.ಎಸ್. ರಾಜನ್‌ರವರು, 'ಯಾವ ಅಂಶವು ಒಂದು ರಾಷ್ಟ್ರವನ್ನು ಅಭಿವೃದ್ಧಿ ಹೊಂದಿದೆ ಎಂಬುವುದಾಗಿ ತೀರ್ಮಾನಿಸುತ್ತದೆ' ಎಂದು ಚರ್ಚಿಸುತ್ತಾ, ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತಾರೆ. 'ರಾಷ್ಟ್ರ ಹೊಂದಿರುವ ಒಟ್ಟು ಸಂಪತ್ತು, ಅಲ್ಲಿನ ಜನರ ಶ್ರೀಮಂತಿಕೆ ಅಥವಾ ಅಂತಾರಾಷ್ಟ್ರೀಯ ಸಮುದಾಯದಲ್ಲಿ ರಾಷ್ಟ್ರವು ಹೊಂದಿರುವ ಸ್ಥಾನಮಾನಗಳು ಒಂದು ರಾಷ್ಟ್ರವು ಅಭಿವೃದ್ಧಿ ಹೊಂದಿದೆ ಎಂದು ತೀರ್ಮಾನಿಸುವ ಪ್ರಮುಖ ಮಾನದಂಡವಾಗಿರುತ್ತದೆ. ಅಲ್ಲದೇ ಜನರ ಜೀವನಕ್ರಮ, ಹೊಂದಿರುವ ಉದ್ಯೋಗ, ಭದ್ರತೆ ಹಾಗೂ ಅವುಗಳು ಜನರಿಗೆ ನೀಡುವ ಸೌಲಭ್ಯಗಳು ಮತ್ತು ಉತ್ತಮ ಆರೋಗ್ಯ ರಾಷ್ಟ್ರದ ಅಭಿವೃದ್ಧಿಯನ್ನು ನಿರ್ಧರಿಸುತ್ತದೆ'[69] ಎಂಬ ತೀರ್ಮಾನವನ್ನು ವ್ಯಕ್ತಪಡಿಸಿರುತ್ತಾರೆ.

ದೇಬರೇ ಇಡೆ ತಮ್ಮ ಸಂಪಾದಿತ ಕೃತಿಯಲ್ಲಿ 'ಅಭಿವೃದ್ಧಿಯ ದೃಷ್ಟಿಕೋನಗಳು ಮತ್ತು ಅವುಗಳನ್ನು ಸಾಧಿಸಲು ವಿವರಿಸಿರುವ ವಿಧಾನಗಳು ಜನಕೇಂದ್ರೀಕೃತ ಎಂಬ ನಂಬಿಕೆಯ ಮೇಲೆ ರಚಿಸಲ್ಪಟ್ಟಿವೆ. ಜನರನ್ನು ಒಳಗೊಳ್ಳುವ ಮತ್ತು ಭಾಗವಹಿಸುವಿಕೆಯ ದೃಷ್ಟಿಕೋನಗಳು ಜನರ ಸಾಮರ್ಥ್ಯ ಮತ್ತು ಮೌಲ್ಯಗಳ ತಳಪಾಯದ ಮೇಲೆ ಬಲವಾಗಿ ನಂಬಿಕೆಯಿರಿಸಿವೆ. ಆದರೆ ಇದು ಜನರ ಬಡತನ, ಅಧಿಕಾರ ಇಲ್ಲದಿರುವಿಕೆ ಮತ್ತು ನಿರ್ಲಕ್ಷ್ಯಕ್ಕೊಳಗಾಗಿರುವುದರಿಂದಾಗಿ ಮಿತಿಗಳಿಗೆ ಒಳಪಟ್ಟಿರುತ್ತದೆ. ಜನರ ಸಂಘರ್ಷಾತ್ಮಕ ಮತ್ತು ಪರಸ್ಪರ ವೈರುಧ್ಯದ ಹಿತಾಸಕ್ತಿಗಳನ್ನು ಪರಿಹರಿಸಲು ಅಭಿವೃದ್ಧಿಯ ದೃಷ್ಟಿಕೋನಗಳು ಪೂರಕವಾಗಿರಬೇಕು. ಅಭಿವೃದ್ಧಿಯ ಯಾವುದೇ ಪರಿಕಲ್ಪನೆಯು ಯಾರಿಗೆ ಹೆಚ್ಚು ಲಾಭವಾಗುತ್ತದೆ ಮತ್ತು ಒಂದು ಗೊತ್ತುಪಡಿಸಿದ ವ್ಯವಸ್ಥೆಯಲ್ಲಿ

ಯಾರ ಅವಶ್ಯಕತೆಗಳಿಗೆ ಹೆಚ್ಚು ಒತ್ತು ನೀಡಬೇಕು ಎಂಬುದರ ಬಗೆಗಿರಬೇಕು. ಯಾವುದೇ ಅಭಿವೃದ್ಧಿಯ ಪ್ರಕ್ರಿಯೆಗಳು ಅದರ ಫಲಾನುಭವಿಗಳಿಗೆ ಸಂಪೂರ್ಣವಾಗಿ ದಕ್ಕುವಂತಾಗಬೇಕು'[70] ಎಂದು ಪ್ರಸ್ತಾಪಿಸಿ ಅಭಿವೃದ್ಧಿ ಜನರ ಕಲ್ಯಾಣವನ್ನು ಸಾಧಿಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು ಎಂದಿದ್ದಾರೆ.

ಅರ್ಥಶಾಸ್ತ್ರದ ವಿದ್ವಾಂಸರಾದ ಜೆನ್ ನೆಡರ್‌ವಿನ್ ಪೀಟರ್‌ಸೇ ತಮ್ಮ ಗ್ರಂಥದಲ್ಲಿ, ಬದಲಿ ಅಭಿವೃದ್ಧಿ ಯೋಜನೆಗಳು ಬದಲಿ ಆಚರಣೆಗಳು ಮತ್ತು ಅಭಿವೃದ್ಧಿಯ ಗುರಿಗಳನ್ನು ಪುನರ್‌ವ್ಯಾಖ್ಯಾನ ಮಾಡುವುದರತ್ತ ಹೆಚ್ಚಿನ ಒಲವು ತೋರುತ್ತಾರೆ. 'ಅಭಿವೃದ್ಧಿಯ ಪ್ರಯತ್ನಗಳು ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಹೆಚ್ಚು ಯಶಸ್ವಿಯಾಗುತ್ತದೆ ಎಂದು ಅವುಗಳನ್ನು ಬಳಕೆಗೆ ತರದಿದ್ದರೂ ಈಗ ಒಪ್ಪಿಕೊಳ್ಳಲಾಗುತ್ತದೆ'[71] ಎಂಬುದಾಗಿ ವಿಶ್ಲೇಷಿಸಿ 'ಅಭಿವೃದ್ಧಿಯೆಂದರೆ ಕೇವಲ ರಾಷ್ಟ್ರದ ಒಟ್ಟು ವರಮಾನವನ್ನು ಹೆಚ್ಚಿಸುವುದು ಮಾತ್ರ ಅಲ್ಲ, ಇರುವ ಮಾನವ ಸಂಪನ್ಮೂಲಗಳ ಸದ್ಬಳಕೆ ಮಾಡುವುದು ಅಭಿವೃದ್ಧಿಯನ್ನು ಅಳತೆ ಮಾಡುವ ಮಾಪನವಾಗಿದೆ' ಎಂದಿರುವ ಲೇಖಕರು 1970ರ ದಶಕದ ನಂತರ ಮುಖ್ಯವಾಹಿನಿಯ ಅಭಿವೃದ್ಧಿಯ ಚಿಂತನೆಯಿಂದ ಬೇಸತ್ತು ಬದಲಿ, ಜನಕೇಂದ್ರಿತ ಅಭಿವೃದ್ಧಿಯ ದೃಷ್ಟಿಕೋನ ಮಹತ್ವವನ್ನು ಪಡೆಯಿತು' ಎಂದು ಉಲ್ಲೇಖಿಸಿರುತ್ತಾರೆ.

ಆರ್.ಕೆ. ಸಪ್ರುರವರು ಶೂಮಾಕರ್‌ರವರ 'ಚಿಕ್ಕದು ಸುಂದರವಾಗಿರುತ್ತದೆ' ಎಂಬ ಮಾತನ್ನು ಉಲ್ಲೇಖಿಸುತ್ತಾ, 'ಇತರ ಎಲ್ಲಾ ಅಭಿವೃದ್ಧಿ ಪ್ರಕ್ರಿಯೆಗಳಿಗಿಂತ ಇದು ಭಿನ್ನವಾಗಿರುತ್ತದೆ, ಯಾಕೆಂದರೆ ಈ ದೃಷ್ಟಿಕೋನ ಕೈಗಾರೀಕಿಕರಣಕ್ಕೆ ಬದಲೀ ವ್ಯವಸ್ಥೆಯನ್ನು ಸೂಚಿಸುತ್ತದೆ. ಅಭಿವೃದ್ಧಿಯ ಈ ವಿಧಾನ ಇಂದಿನ ಬೃಹತ್ ಉತ್ಪಾದನೆಗಳ ಆರ್ಥಿಕತೆಯನ್ನು ವಿಕೇಂದ್ರೀಕರಿಸುತ್ತದೆ. ಇದರಿಂದಾಗಿ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಸ್ಥಳೀಯ ತಾಂತ್ರಿಕತೆಗಳನ್ನು ಉಪಯೋಗಿಸಿ ಚಿಕ್ಕ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಅವಕಾಶ ಒದಗಿಸುತ್ತದೆ. ಇದರಿಂದ ಪರಿಸರಕ್ಕೆ ಮತ್ತು ಜನತೆಗೆ ಹೆಚ್ಚಿನ ತೊಂದರೆಯಾಗುವುದನ್ನು ತಪ್ಪಿಸಬಹುದು'[72] ಎಂದು ಅಭಿಪ್ರಾಯಪಟ್ಟಿರುತ್ತಾರೆ. ಸಾವಿರದ ಒಂಬೈನೂರ ಅರವತ್ತೊಂದರಲ್ಲಿ ಭಾರತ ಸರಕಾರಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ಚಿಕ್ಕ ಕೈಗಾರಿಕಾ ಘಟಕಗಳ ಸ್ಥಾಪನೆಯ ಬಗ್ಗೆ ಸಲಹೆ ನೀಡಲು ಬಂದ ಶೂಮಾಕರ್‌ರವರು 'ಚಿಕ್ಕ ಕೈಗಾರಿಕಾ ಘಟಕಗಳ ಸ್ಥಾಪನೆಯಿಂದಾಗಿ ಪರಿಸರ ಹಾನಿ ಮತ್ತು ಜನರಿಗೆ ತೊಂದರೆಯಾಗುವುದು ತಪ್ಪುತ್ತದೆ. ಹೆಚ್ಚಿನ ಜನರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಲು ಸಾಧ್ಯವಿದೆ. ಎಲ್ಲಾ ಯೋಜನೆಗಳಲ್ಲಿ ಜನರು ಪಾಲ್ಗೊಳ್ಳುವಂತಾಗಬೇಕು' ಎಂದು ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಲೇಖಕರು ಚಿಕ್ಕ ಕೈಗಾರಿಕಾ ಘಟಕಗಳ ಸ್ಥಾಪನೆಯ ಔಚಿತ್ಯವನ್ನು ವಿವರಿಸುತ್ತಾ ಉಲ್ಲೇಖಿಸಿರುತ್ತಾರೆ.

'ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ಆರಂಭಿಸಲ್ಪಡುವ ಯಾವುದೇ ಬೃಹತ್ ಕೈಗಾರಿಕೆಗಳು ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸಿದಾಗ ಮಾತ್ರ ಯಶಸ್ವಿಯಾಗಲು ಸಾಧ್ಯವಾಗುತ್ತದೆ. ಸ್ಥಳೀಯ ಜನರನ್ನು ಅಭಿವೃದ್ಧಿ ಯೋಜನೆಗಳ ತಯಾರಿ ಮತ್ತು ನಿರ್ದೇಶನದಲ್ಲಿ ಭಾಗವಹಿಸಲು

ಅವಕಾಶ ನೀಡಬೇಕು. ಕೈಗಾರಿಕೆಗಳ ಲಾಭದಲ್ಲಿ ಸ್ಥಳೀಯರಿಗೆ ಪಾಲು ನೀಡಬೇಕು. ಇವುಗಳನ್ನು ಸಾಧಿಸಲು ಜನರಿಗೆ ಭೌತಿಕ ಮತ್ತು ತಾಂತ್ರಿಕ ನೆರವು ನೀಡಬೇಕು'[73] ಎಂದು ಪ್ರತಿಪಾದಿಸಿದ ಪಿ. ಹ್ಯಾರಿಸನ್‌ರವರು, ಬೃಹತ್ ಕೈಗಾರಿಕೆಗಳ ಸ್ಥಾಪನೆಯಲ್ಲಿ ಸ್ಥಳೀಯ ಜನರ ಸಹಕಾರ ಮತ್ತು ಸಹಭಾಗಿತ್ವದ ಅವಶ್ಯಕತೆಯನ್ನು ಪೂರೈಸಿದಾಗ ಮಾತ್ರ ಸಾಮಾಜಿಕ ನ್ಯಾಯ ಸಾಧ್ಯವಾಗುತ್ತದೆ ಎಂದಿದ್ದಾರೆ.

ಪೌಲ್ ಗ್ರೀಡಿ ಮತ್ತು ಜೊನಾಥನ್ ಎನ್ಸಾರ್‌ರವರು ತಮ್ಮ ಸಂಪಾದಿತ ಗ್ರಂಥದಲ್ಲಿ 'ಅಭಿವೃದ್ಧಿ ಕೇವಲ ಆರ್ಥಿಕ ಹಕ್ಕುಗಳ ಬೆಳವಣಿಗೆಯನ್ನು ಸಾಧಿಸಲು ಅಥವಾ ರಾಷ್ಟ್ರದ ತಲಾ ವರಮಾನದ ಏರಿಕೆಗೆ ಮಾತ್ರ ಸೀಮಿತವಾಗಿರಬಾರದು. ಜನರ ಗುಣಾತ್ಮಕ ಅಭಿವೃದ್ಧಿಗೆ ಆದ್ಯತೆಯನ್ನು ನೀಡಬೇಕು. ಅಭಿವೃದ್ಧಿಯು ಜನರ ಹಿತಾಸಕ್ತಿಗೆ ಅನುಗುಣವಾಗಿರಬೇಕು ಇಲ್ಲದಿದ್ದರೆ ಅಭಿವೃದ್ಧಿಯ ಹಳಿ ತಪ್ಪುತ್ತದೆ ಅಥವಾ ಅಸಹಜ ಅಭಿವೃದ್ಧಿಯಾಗುತ್ತದೆ'[74] ಎಂಬುದಾಗಿ ವಿಮರ್ಶಿಸಿದ್ದಾರೆ.

ಅರ್ಮತ್ಯಸೇನ್ ಮತ್ತು ಜೀನ್ ಡ್ರೀಸ್‌ರವರು 'ಆರ್ಥಿಕ ಅಭಿವೃದ್ಧಿಯೆಂದರೆ ಸಮಾಜದಲ್ಲಿನ ಜನರ ಅವಕಾಶಗಳನ್ನು ಹೆಚ್ಚಿಸುವುದು ಎಂಬುದಾಗಿ ಪರಿಗಣಿಸಲ್ಪಡಬೇಕು. ಅಭಿವೃದ್ಧಿಯ ಉದ್ದೇಶವು ವಿವಿಧ ಜನರು ಸ್ವಾತಂತ್ರ್ಯವನ್ನು ಪರಿಣಾಮಕಾರಿಯಾಗಿ ಅನುಭವಿಸುವಂತೆ ಮಾಡುವಂತಿರಬೇಕು. ಅಭಿವೃದ್ಧಿಯ ಮೂಲ ಉದ್ದೇಶ ಜನರ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ ಎಂಬುವುದಕ್ಕೆ ಆಧುನಿಕ ಅಭಿವೃದ್ಧಿಯ ಸಾಹಿತ್ಯದಲ್ಲಿ ಪ್ರಾಮುಖ್ಯತೆಯನ್ನು ನೀಡದೇ ಹೆಚ್ಚಿನ ಗಮನವನ್ನು ಒಟ್ಟು ರಾಷ್ಟ್ರದ ಉತ್ಪನ್ನ ಹಾಗೂ ಅದಕ್ಕೆ ಸಂಬಂಧಪಟ್ಟ ಅಂಶಗಳನ್ನು ಹೆಚ್ಚಿಸುವುದು ಆರ್ಥಿಕ ಬೆಳವಣಿಗೆಯೆಂದು ವಿಶ್ಲೇಷಿಸಲಾಗುತ್ತದೆ'[75] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಜಾನ್ ಹ್ಯಾರಿಸ್‌ರವರು 'ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅಭಿವೃದ್ಧಿ ಕುಂಠಿತಗೊಳ್ಳಲು ಸಾಮಾಜಿಕ ಬಂಡವಾಳದ ಕೊರತೆ ಮುಖ್ಯ ಕಾರಣವಾಗಿರುತ್ತದೆ. ಸಾಮಾಜಿಕ ಬಂಡವಾಳದ ಕೊರತೆ ಅಭಿವೃದ್ಧಿಯ ತಪ್ಪಿದ ಕೊಂಡಿಯಾಗಿದ್ದು, ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಸ್ಥಳೀಯ ಸಂಘಟನೆಗಳಿಗೆ ಮತ್ತು ಸ್ವಸಹಾಯ ಗುಂಪುಗಳಿಗೆ ನೀಡಬೇಕು. ಸ್ಥಳೀಯ ಸಂಘಟನೆಗಳನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹೆಚ್ಚು ತೊಡಗಿಸಿಕೊಂಡಾಗ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ'[76] ಎಂದು ವಿಶ್ಲೇಷಿಸಿರುತ್ತಾರೆ.

ಲಾಯ್ಡ್ ರೂಡಾಲ್ಫ್ ಮತ್ತು ಸೂಸಾನ್ ಹೋಬರ್ ರೂಡಾಲ್ಫ್‌ರವರು ಭಾರತದ ಆರ್ಥಿಕ ವ್ಯವಸ್ಥೆಯನ್ನು ಸವಿವರವಾಗಿ ವಿಮರ್ಶಿಸುತ್ತಾ 'ಭಾರತವು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ವಿರೋಧಾಭಾಸಗಳನ್ನು ಹೊಂದಿದ ರಾಷ್ಟ್ರವಾಗಿದ್ದು, ಶ್ರೀಮಂತ ಬಡ ರಾಷ್ಟ್ರವಾಗಿರುತ್ತದೆ'[77] ಎಂದ ಲೇಖಕರು ರಾಜಕೀಯ ಮತ್ತು ಅರ್ಥವ್ಯವಸ್ಥೆಯ ನಡುವಿನ ಸಂಬಂಧವನ್ನು ವಿವರಿಸುವುದರ ಮೂಲಕ ಈ ವಿರೋಧಾಭಾಸಗಳನ್ನು ವಿಮರ್ಶಿಸಲು ಪ್ರಯತ್ನಿಸಿರುತ್ತಾರೆ. ಭಾರತವನ್ನು ಏಷ್ಯಾದ ಇತರ ರಾಷ್ಟ್ರಗಳಿಗೆ ಹೋಲಿಸಿ ತುಲನಾತ್ಮಕವಾಗಿ ಅಧ್ಯಯನ ಮಾಡಿರುವ ಲೇಖಕರು ರಾಷ್ಟ್ರದ ಬಲಿಷ್ಠ ಆರ್ಥಿಕ, ರಾಜಕೀಯ ಮತ್ತು

ಅಂತಾರಾಷ್ಟ್ರೀಯ ಅಂಶಗಳನ್ನು ಪಟ್ಟಿಮಾಡಿ, 'ವರ್ತಮಾನವನ್ನು ಭವಿಷ್ಯತ್ತಿಗೋಸ್ಕರ ತ್ಯಾಗ ಮಾಡಬೇಕು ಎಂಬುದು ಪ್ರಸ್ತುತತೆಯನ್ನು ಕಳೆದುಕೊಂಡಿರುವ ಕಾಲಘಟ್ಟದಲ್ಲಿ ಅಭಿವೃದ್ಧಿಯ ಸಿದ್ಧಾಂತಗಳು ಯಾವುದೇ ವಿಧಾನದ ಮೂಲಕ ಒಟ್ಟು ರಾಷ್ಟ್ರದ ವರಮಾನವನ್ನು ಏರಿಸುವುದೇ ತಮ್ಮ ಗುರಿ ಎಂದು ನಿರ್ಧರಿಸಿ ಕಾರ್ಯಪ್ರವೃತ್ತವಾಗಿರುವಾಗ, ಮುಂದೂಡುವ ಸಿದ್ಧಾಂತಗಳು ಇಂದಿನ ತಲೆಮಾರಿನ ಮುಂದಿನ ಭವಿಷ್ಯತ್ತಿನ ಬಗ್ಗೆ ಹೆಚ್ಚಿನ ಬೆಲೆಯನ್ನು ಕೊಡುವುದರ ಬಗ್ಗೆ ಆದ್ಯತೆ ಕೊಡುವಲ್ಲಿ ವಿಫಲವಾಗಿರುತ್ತದೆ. ಭಾರತದಲ್ಲಿ ಮುಂದೂಡುವ ಅಭಿವೃದ್ಧಿ ಸಿದ್ಧಾಂತಗಳು ಮೂಲಭೂತ ಕೈಗಾರಿಕೆಗಳ ಅಭಿವೃದ್ಧಿ ಮತ್ತು ಆಮದುಗಳ ತಂತ್ರಗಳಿಗೆ ಬದಲಾಗಿ ಅವುಗಳಿಗೆ ಆದ್ಯತೆ ಕೊಟ್ಟು ಸ್ವಾವಲಂಬಿ ಆರ್ಥಿಕ ವ್ಯವಸ್ಥೆಯನ್ನು ಸಾಧಿಸಲು ಅವಕಾಶ ಮಾಡಿಕೊಟ್ಟಿರುತ್ತದೆ'[78] ಎಂದಿದ್ದಾರೆ. 'ಬಡಜನರು ಅಭಿವೃದ್ಧಿ ಪ್ರಕ್ರಿಯೆಗಳಿಂದ ಲಾಭವನ್ನು ಪಡೆದಿಲ್ಲ ಮತ್ತು ಯಾವುದೇ ಕೊಡುಗೆಯನ್ನು ನೀಡುವುದಿಲ್ಲ ಎಂಬುದಾಗಿ ಹೊಸ ಗುರಿಗಳು ಸಾಧಿಸಲ್ಪಡುವ ಸಂದರ್ಭಗಳಲ್ಲಿ ಕಂಡುಕೊಳ್ಳಲಾಗಿದೆ. ಮೂಂದೂಡಲ್ಪಡುವ ಅಭಿವೃದ್ಧಿ ಸಿದ್ಧಾಂತಗಳಿಗೆ ನೇರ ಬಲಿಪಶುಗಳು ಇವರಾಗಿರುತ್ತಾರೆ. ನಲ್ವತ್ತರಿಂದ ಐವತ್ತು ಶೇಕಡಾ ಜನರು ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದಾರೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ. ಬಡವರು ಆಧುನಿಕ ಕೌಶಲ್ಯ, ಸಂಪತ್ತು ಮತ್ತು ಆರೋಗ್ಯವನ್ನು ಹೊಂದಿಲ್ಲದೆ ಇರುವುದರಿಂದ ಆರ್ಥಿಕ ಅಭಿವೃದ್ಧಿಗೆ ಪಾಲುಕೊಡುವುದರಲ್ಲಿ ವಿಫಲರಾಗಿದ್ದಾರೆ. ಮೂಲಭೂತ ಮಾನವ ಅವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲವಾದ ಅಭಿವೃದ್ಧಿ ಪ್ರಕ್ರಿಯೆಗಳು ನಿರುದ್ಯೋಗ ಸಮಸ್ಯೆ ಹೆಚ್ಚುವುದಕ್ಕೆ ಕಾರಣವಾಗಿರುತ್ತದೆ ಎಂಬ ಬಹುಪಕ್ಷೀಯ ಸಂಸ್ಥೆಗಳ ಅಭಿಪ್ರಾಯ ವಿಶ್ವಬ್ಯಾಂಕ್ ತನ್ನ ಅಭಿವೃದ್ಧಿ ದೃಷ್ಟಿಕೋನವನ್ನು ನೀಡಿದ ನಂತರ ಬದಲಾಗಿದೆ'[79] ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಅಭಿವೃದ್ಧಿ ಪ್ರಕ್ರಿಯೆಗಳನ್ನು ವಿಶ್ಲೇಷಿಸಿದ ವಿದ್ವಾಂಸರುಗಳ ಅಭಿಪ್ರಾಯವನ್ನು ಗಮನಿಸಿದಾಗ, ಅಭಿವೃದ್ಧಿಯ ಗುರಿಗಳು ರಾಷ್ಟ್ರದ ಒಟ್ಟು ವರಮಾನದ ಏರಿಕೆಗೆ ಮಾತ್ರ ಗಮನವನ್ನು ನೀಡದೇ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಭಾಗೀದಾರರಾಗುವ ಜನರ ಒಳಿತನ್ನು ಗಮನದಲ್ಲಿಟ್ಟುಕೊಂಡಿರಬೇಕು ಎಂಬ ಆಶಯ ಎದ್ದು ಕಾಣುತ್ತದೆ. ತೃತೀಯ ಜಗತ್ತಿನ ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಲಕ್ಷಾಂತರ ಜನರು ತಮ್ಮ ಮೂಲನೆಲೆಯಿಂದ ಸ್ಥಳಾಂತರಗೊಳ್ಳುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಅಭಿವೃದ್ಧಿಯ ಹೊಸ ದೃಷ್ಟಿಕೋನಗಳು ಜನಕೇಂದ್ರಿತವಾಗಿರಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಿರುವುದು ಸಾಹಿತ್ಯ ಪರಾಮರ್ಶನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿರುತ್ತದೆ.

1.3 ಅಭಿವೃದ್ಧಿ ಮತ್ತು ಸ್ಥಳಾಂತರಕ್ಕೆ ಸಂಬಂಧಪಟ್ಟಂತೆ ಕರ್ನಾಟಕವನ್ನು ಕೇಂದ್ರೀಕರಿಸಿ ನಡೆಸಲಾದ ಸಾಹಿತ್ಯ ಪರಾಮರ್ಶನ:

ಅಭಿವೃದ್ಧಿ ಪ್ರಕ್ರಿಯೆಗಳ ಬಗ್ಗೆ ವೈಜ್ಞಾನಿಕವಾಗಿ ಸಂಶೋಧನೆಗಳನ್ನು ಕೈಗೊಂಡ ವಿದ್ವಾಂಸರಾದ ಎಂ. ಚಂದ್ರ ಪೂಜಾರಿಯವರು 'ಯಾಕೆ ಕರ್ನಾಟಕದಲ್ಲಿ ಮತ್ತೊಂದು ಭೂಸುಧಾರಣೆಯ ಅವಶ್ಯಕತೆಯಿದೆ' ಎಂಬುದರ ಬಗ್ಗೆ ಅಂಕಿಅಂಶಗಳನ್ನು ನೀಡುವುದರ ಮೂಲಕ ವಿವರವಾಗಿ ಚರ್ಚಿಸಿರುತ್ತಾರೆ. 'ಕರ್ನಾಟಕದಲ್ಲಿ ಸುಮಾರು ಅರವತ್ತು ಶೇಕಡಾದಷ್ಟು ಜನರು ತಮ್ಮ ಬದುಕಿಗಾಗಿ ಭೂಮಿಯನ್ನೇ ನಂಬಿಕೊಂಡಿದ್ದಾರೆ. ಒಂದು ಉತ್ತಮ ಬದುಕು ಸಾಧ್ಯವಾಗಬೇಕಾದರೆ, ಎಲ್ಲರಿಗೂ ಮೂರು ಹೊತ್ತಿನ ಊಟಕ್ಕೆ ತೊಂದರೆಯಾಗಬಾರದು, ಅವರವರ ತಲೆಯ ಮೇಲೆ ಅವರದ್ದೇ ಆದ ಸೂರೊಂದು ಬೇಕು, ಮುಂದೆ ಒಳ್ಳೆಯ ಕಾಲ ಬರಬಹುದೆನ್ನುವ ಕನಸು ಕಾಣುವ ವಾಸ್ತವಿಕ ಬದುಕು ಬೇಕು. ಈ ಎಲ್ಲವೂ ಸಾಧ್ಯವಾಗಬೇಕಾದರೆ, ಕನಿಷ್ಠ ಭೂಮಿ ಬೇಕು. ಇಂದೂ ಕೂಡ ನಮ್ಮ ಸಮಾಜದ ಬಹುತೇಕರ ಬದುಕನ್ನು ಸಕಾರಾತ್ಮಕವಾಗಿ ಬದಲಾಯಿಸುವ ಒಂದು ಸಾಧನವಿದ್ದರೆ ಅದು ಭೂಮಿ ಮಾತ್ರ. ಆದರೆ ಇಂತಹ ಪ್ರಮುಖ ಪ್ರಶ್ನೆಯನ್ನು ನಮ್ಮ ಅಭಿವೃದ್ಧಿ ರಾಜಕಾರಣ ಇನ್ನೂ ಕೂಡ ಗಂಭೀರವಾಗಿ ಪರಿಗಣಿಸಿಯೇ ಇಲ್ಲ'[80] ಎಂಬುದನ್ನು ಬೆಟ್ಟು ಮಾಡುತ್ತಾ 'ಭೂಮಿ ಜನಸಾಮಾನ್ಯರ ಅಭಿವೃದ್ಧಿಯಲ್ಲಿ ಪ್ರಮುಖಪಾತ್ರ ವಹಿಸುತ್ತದೆ. ಆದುದರಿಂದ ಇನ್ನೊಂದು ಭೂಸುಧಾರಣೆಯ ಅವಶ್ಯವಿದೆ' ಎಂದು ಪ್ರತಿಪಾದಿಸಿದ್ದಾರೆ. 'ಭೂಮಿ ಇಲ್ಲದವರಿಗೆ ಭೂಮಿಯನ್ನು ಹಂಚುವ ಪ್ರಶ್ನೆ ಸಂಪೂರ್ಣ ತಿರುವುಮುರುವಾಗಿದೆ. ಈಗಾಗಲೇ ಹಂಚಿಕೆಯಾದ ಅಲ್ಪಸ್ವಲ್ಪ ಭೂಮಿಯನ್ನು ರೈತರಿಂದ ಕಿತ್ತುಕೊಂಡು ಉದ್ದಿಮೆದಾರರಿಗೆ ಕೊಡುವುದು, ನಗರವಾಸಿಗಳ ವಸತಿ ಸಮುಚ್ಚಯಗಳ ನಿರ್ಮಾಣಕ್ಕೆ ಕೊಡುವುದು, ವಿಶೇಷ ಆರ್ಥಿಕ ವಲಯ ಮಾಡುವುದು ಇತ್ಯಾದಿಗಳು ಇಂದಿನ ಫ್ಯಾಶನ್ ಆಗಿರುತ್ತದೆ'.[81] ಈ ಎಲ್ಲಾ ಅಂಶಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ, ಭೂಮಿ ಏಕಾಗಿ ಇವತ್ತು ಮಧ್ಯಮ ವರ್ಗದ ಜನರಿಗೆ ಮತ್ತು ರೈತರಿಗೆ ಜರೂರಾಗಿ ಬೇಕಾಗಿದೆ ಎಂದು ಕರ್ನಾಟಕದಲ್ಲಿ ಲಭ್ಯವಿರುವ ಅಂಕಿ ಅಂಶಗಳನ್ನು ನೀಡಿ ವಸ್ತುನಿಷ್ಟವಾಗಿ ಪ್ರಸ್ತುತ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ.

ಸಮುದಾಯ ಮತ್ತು ಸಹಭಾಗಿತ್ವ ಗ್ರಂಥದಲ್ಲಿ ಎಂ.ಚಂದ್ರ ಪೂಜಾರಿಯವರು ಸಹಭಾಗಿತ್ವ ಅಥವಾ ಜನರ ಪಾಲ್ಗೊಳ್ಳುವಿಕೆಯ ಅಭಿವೃದ್ಧಿಯ ಬಗೆಗೆ ಬೆಳಕು ಚೆಲ್ಲಿದ್ದಾರೆ. 'ಜನರ ಬೇಕುಬೇಡಗಳ ಕುರಿತು ಅವರೇ ನಿರ್ಧಾರ ತೆಗೆದುಕೊಂಡು ಅದರ ಪೂರೈಕೆಗೆ ಅಗತ್ಯವಿರುವ ಯೋಜನೆಗಳನ್ನು ಅವರೇ ಮಾಡಿ ಅದನ್ನು ಕಾರ್ಯರೂಪಕ್ಕೆ ತರುವ ಅಭಿವೃದ್ಧಿಯ ಹೊಸ ಪರಿಕಲ್ಪನೆಯೇ ಸಹಭಾಗಿತ್ವ ಅಥವಾ ಜನರ ಪಾಲ್ಗೊಳ್ಳುವಿಕೆಯಿಂದ ಸಾಧ್ಯವಾಗುವ ಅಭಿವೃದ್ಧಿ' ಎನ್ನುತ್ತಾರೆ. 'ಇಂದು ಅಭಿವೃದ್ಧಿ ಮಾಡುವವರು ಅಭಿವೃದ್ಧಿ ಆಗಬೇಕಾದವರ ಪರವಾಗಿ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಇಲ್ಲಿ ಅಭಿವೃದ್ಧಿ ಆಗುವವರು ಒಂದು ಟಾರ್ಗೆಟ್ ಗುಂಪಾಗಿ

ಪರಿಗಣಿಸಲ್ಪಡುತ್ತಾರೆ. ಅವರ ಅವಶ್ಯಕತೆಗಳೇನು ಮತ್ತು ಬೇಡಿಕೆಗಳು ಯಾವುದು ಎಂದು ಕೇಳುವ ಗೋಜಿಗೆ ಯಾರೂ ಹೋಗುವುದಿಲ್ಲ. ಅವುಗಳನ್ನು ಅಭಿವೃದ್ಧಿ ಮಾಡುವವರು ನಿರ್ಧರಿಸಿ, ಯೋಜನೆಗಳನ್ನು ಜಾರಿಗೆ ತರುತ್ತಾರೆ. ಹೆಚ್ಚಿನ ಅಭಿವೃದ್ಧಿಯ ಯೋಜನೆಗಳು ವಿಫಲವಾಗುವುದಕ್ಕೆ ಈ ನಡೆಯೇ ಕಾರಣವಾಗಿರುತ್ತದೆ. ಸಹಭಾಗಿತ್ವದ ತಾತ್ವಿಕತೆಗೆ ಅನುಸಾರವಾಗಿ ನಡೆಯುವ ಅಭಿವೃದ್ಧಿಯಲ್ಲಿ ಈ ಸಮಸ್ಯೆ ಇಲ್ಲ. ಜನರು ತಮ್ಮ ಆದ್ಯತೆಯನ್ನು ತಾವೇ ಗುರುತಿಸುತ್ತಾರೆ ಮತ್ತು ಅವುಗಳ ಈಡೇರಿಕೆಗೆ ಪೂರಕವಾದ ಯೋಜನೆಗಳನ್ನು ಅರ್ಥೈಸಿ ಕಾರ್ಯರೂಪಕ್ಕೆ ತರುವುದು ಅವರ ಸಹಭಾಗಿತ್ವದ ಅಂಗವಾಗಿರುತ್ತದೆ[82] ಎಂದಿರುವ ಲೇಖಕರು ಸಮುದಾಯವಾದ ಮತ್ತು ಪರಿಸರವಾದ ಹೇಗೆ ಸಹಭಾಗಿತ್ವದ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುತ್ತದೆ ಮತ್ತು ಸಾಮಾಜಿಕ ಬಂಡವಾಳದ ಪರಿಕಲ್ಪನೆಯನ್ನು ತಮ್ಮ ಗ್ರಂಥದಲ್ಲಿ ಕೆರೆ ನೀರಾವರಿ ವ್ಯವಸ್ಥೆಯ ಉದಾಹರಣೆಗಳೊಂದಿಗೆ ವಿವರಿಸಿರುತ್ತಾರೆ.

ಡಾ. ಟಿ. ಆರ್. ಚಂದ್ರಶೇಖರರವರು, 'ಒಂದು ದೇಶದ ಒಟ್ಟು ವರಮಾನದ ಏರಿಕೆಯ ವರ್ಧನೆಯು ಇಲ್ಲದಿದ್ದಾಗಲೂ ಸಹ ಜನರ ಬದುಕು ಉತ್ತಮವಾಗಬಹುದು. ಏಕೆಂದರೆ ವರಮಾನವು ಮಾನವರ ಬದುಕನ್ನು ಉತ್ತಮಪಡಿಸಬಲ್ಲ ಅನೇಕ ಸಾಧನಗಳಲ್ಲಿ ಒಂದಾಗಿದೆ. ಅಭಿವೃದ್ಧಿಯನ್ನು ವರಮಾನದ ವರ್ಧನೆಯೆಂದು ನಿರ್ವಚಿಸಿದರೆ, ಆಗ ವರಮಾನ ಕೇಂದ್ರಿತ ಅಭಿವೃದ್ಧಿ ಮೀಮಾಂಸೆಯ ಇತಿಮಿತಿಗಳು ಮನದಟ್ಟಾಗುತ್ತದೆ'[83] ಎಂಬ ಅಮರ್ತ್ಯಸೇನ್‌ರವರ ಅಭಿಪ್ರಾಯವನ್ನು ಉಲ್ಲೇಖಿಸುತ್ತಾ 'ಅಭಿವೃದ್ಧಿ ಇಲ್ಲದೆ ಬೆಳವಣಿಗೆ ಸಾಧ್ಯ, ಬೆಳವಣಿಗೆ ಇಲ್ಲದೆ ಅಭಿವೃದ್ಧಿ ಅಸಾಧ್ಯ' ಎಂಬ ಮಾತನ್ನು ವಿಮರ್ಶಿಸಿ 'ಇರುವುದರ ಸೂಕ್ತ, ಸಮಾನ ವಿತರಣೆಯ ಮೂಲಕ ಸಮಾಜದ ಎಲ್ಲಾ ವರ್ಗ, ವರ್ಣ, ಜಾತಿ, ಲಿಂಗ, ಪ್ರದೇಶಗಳ ನಡುವೆ ಸಮಾನ ವಿತರಣೆಯ ಮುಖಾಂತರ ಜನರ ಜೀವನಮಟ್ಟವನ್ನು ಉತ್ತಮಪಡಿಸುವುದು ಸಾಧ್ಯ. ಒಂದು ದೇಶದಲ್ಲಿ ಜನರ ಬದುಕು ಉತ್ತಮಗೊಳ್ಳಬೇಕಾದರೆ ಆ ದೇಶದ ವರಮಾನ, ಉತ್ಪನ್ನ, ಬಂಡವಾಳಗಳ ಗಾತ್ರ, ಪ್ರಮಾಣದಲ್ಲಿ ವರ್ಧನೆಯಾಗಬೇಕು ಎಂದು ಹಠ ಹಿಡಿಯುವುದು ಸಾಧುವಲ್ಲ. ದೇಶದಲ್ಲಿ ಇರುವ ವರಮಾನ, ಉತ್ಪನ್ನ, ಬಂಡವಾಳಗಳಲ್ಲಿ ಎಲ್ಲರಿಗೂ ಸಮಪಾಲು ದೊರೆಯುವುದರಿಂದ ಜನರ ಬದುಕು ಉತ್ತಮಗೊಳ್ಳಬಹುದು'[84] ಎಂಬ ಅಮರ್ತ್ಯಸೇನ್‌ರವರ ಅಭಿಪ್ರಾಯವನ್ನು ವಿವರಿಸಿದ್ದಾರೆ.

ಮಧುಸೂದನರವರು 'ಅಭಿವೃದ್ಧಿ: ಪಶ್ಚಿಮದ ಮಾದರಿ ಎಷ್ಟು ಸರಿ?' ಎಂಬ ಲೇಖನದಲ್ಲಿ ಆಧುನಿಕ ಅಭಿವೃದ್ಧಿ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆಯನ್ನು ಎತ್ತುತ್ತಾ, 'ಬೃಹತ್ ಉದ್ಯಮಗಳ ಸ್ಥಾಪನೆಯಿಂದಾಗಿ ಸಂತ್ರಸ್ತರು ಭೂಮಿಯನ್ನು ಮಾತ್ರ ಕಳೆದುಕೊಳ್ಳುವುದಲ್ಲ. ಹೊಸ ತಂತ್ರಜ್ಞಾನ ಕಾಲೂರಬೇಕಾದರೆ ಸಂಪೂರ್ಣವಾಗಿ ಪಾರಂಪರಿಕ ತಂತ್ರಜ್ಞಾನ ಮತ್ತು ಮಾನವ ಕೌಶಲ್ಯ ನಾಶವಾಗುತ್ತದೆ. ಹಳೆಯ ತಂತ್ರಜ್ಞಾನವನ್ನು ಕೈಬಿಡುವುದು ಅನಿವಾರ್ಯವಾಗುತ್ತದೆ. ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದ ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ,

ಚಮ್ಮಾರಿಕೆ ಮುಂತಾದ ವೃತ್ತಿಗಳು ಕಣ್ಮರೆಯಾಗುತ್ತವೆ. ಹಳ್ಳಿಯ ಜನರು ತಮ್ಮ ಮೂಲ ಕಸುಬುಗಳನ್ನು ಮಾಡುವುದರಿಂದ ವಂಚಿತರಾಗುತ್ತಾರೆ. ಈ ರೀತಿ ಬೃಹತ್ ಉದ್ದಿಮೆಗಳ ಸ್ಥಾಪನೆಯಿಂದಾಗಿ ಭೂಮಿಯನ್ನು ಕಳೆದುಕೊಳ್ಳುವುದರ ಜತೆಗೆ ತಮ್ಮ ಸಾಂಪ್ರದಾಯಿಕ ಕಸುಬುಗಳಿಂದಲೂ ನಿರ್ವಸಿತರಾಗುತ್ತಾರೆ. ಇದಕ್ಕೆ ಹೆಚ್ಚಿನ ಒತ್ತು ಕೊಡುವುದು ಇಂದಿನ ಅನಿವಾರ್ಯತೆಯಾಗಿದೆ'[85] ಎಂದು ಪ್ರತಿಪಾದಿಸಿದ್ದಾರೆ.

'ಅಣೆಕಟ್ಟು ಮತ್ತು ಬೃಹತ್ ಉದ್ದಿಮೆಗಳ ಸ್ಥಾಪನೆಯಿಂದಾಗಿ ಅನೇಕ ಬುಡಕಟ್ಟು ಜನಾಂಗಗಳು ಸ್ಥಳಾಂತರಗೊಳ್ಳಬೇಕಾಗುತ್ತದೆ. ಅವರ ಜೀವನ ಶೈಲಿ ಬದಲಾಗುತ್ತದೆ. ಬುಡಕಟ್ಟು ಜನರು ಆಧುನಿಕ ವಿಜ್ಞಾನ ಹಾಗೂ ಯಂತ್ರಕಲೆಗಳ ಫಲವನ್ನು ಅನುಭವಿಸದೇ, ಉತ್ತಮ ಆರೋಗ್ಯ ಹಾಗೂ ಗುಣಮಟ್ಟದ ಜೀವನ ಪಡೆದುಕೊಳ್ಳದೆ ಗುಡ್ಡಗಾಡು ಜೀವನವನ್ನು ನಡೆಸುತ್ತಾ ಹೋಗಬೇಕೆಂದು ವಾದಿಸುವುದು ಎಷ್ಟು ಸರಿ? ಬೇರೆ ಪ್ರದೇಶಗಳಿಗೆ ಹೋಗಿ ಹೆಚ್ಚು ಉತ್ತಮ ಬಾಳು ನಡೆಸುವಂತೆ ಉತ್ತೇಜಿಸುವುದು ಒಳಿತಲ್ಲವೇ? ಎಂಬುದಾಗಿ ಅಭಿವೃದ್ಧಿಯನ್ನು ಹಾಗೂ ಬೃಹತ್ ಉದ್ಧಿಮೆಗಳ ಸ್ಥಾಪನೆಯ ಅನಿವಾರ್ಯತೆಯನ್ನು'[86] ಪ್ರತಿಪಾದಿಸುತ್ತಾ ಬಿ.ಎ. ಭವಾನಿಶಂಕರ್‌ರವರು ಕೈಗಾರಿಕೆಗಳ ಸ್ಥಾಪನೆಯಿಂದಾಗಿಯೇ ಮಾತ್ರ ಜನರ ಜೀವನಶೈಲಿ ಬದಲಾಗುತ್ತದೆ. ಆಧುನಿಕ ನಾಗರಿಕತೆಯ ಫಲವನ್ನು ಸಾಮಾನ್ಯ ಜನರು ಅನುಭವಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಕೈಗಾರಿಕಾ ಪರ ವಾದವನ್ನು ತಮ್ಮ 'ಅಭಿವೃದ್ಧಿ ಇನ್ನೊಂದು ಮುಖ' ಲೇಖನದಲ್ಲಿ ಸಮರ್ಥಿಸಿದ್ದಾರೆ.

ನಿ. ಮುರಾರಿ ಬಲ್ಲಾಳ್‌ರವರು ತಮ್ಮ ಸಂಪಾದಕತ್ವದ 'ಯಾರದೋ ಮುಖ ಯಾರದೋ ದೇಹ' ಎಂಬ ಗ್ರಂಥದಲ್ಲಿ 'ಪಾಶ್ಚಾತ್ಯ ರಾಷ್ಟ್ರಗಳ ಮೋಹಕ್ಕೆ ಒಳಗಾಗದಂತಹ ರೀತಿಯಲ್ಲಿ ಒಟ್ಟಾರೆ ಬೃಹತ್ ಉದ್ಯಮೀಕರಣದ ಭಾರತವನ್ನು ದೇವರು ಸಂರಕ್ಷಿಸಲಿ. ಒಂದು ಸಣ್ಣ ದೇಶವಾದ ಇಂಗ್ಲೆಂಡಿನ ಆರ್ಥಿಕ ಸಾಮ್ರಾಜ್ಯಶಾಹಿ ಪ್ರವೃತ್ತಿ ಇಂದು ಇಡೀ ಜಗತ್ತನ್ನು ಒತ್ತೆಯಿಟ್ಟುಕೊಂಡಿದೆ. ಮುನ್ನೂರು ಮಿಲಿಯ ಜನರಿರುವ ಭಾರತವು ಇದೇ ರೀತಿಯ ಸಾಮ್ರಾಜ್ಯಶಾಹಿ ಆರ್ಥಿಕ ಶೋಷಣೆ ಆರಂಭಿಸಿದರೆ ಇದು ಜಗತ್ತನ್ನು ಸಂಪೂರ್ಣ ಸುಲಿದು ನಗ್ನಗೊಳಿಸೀತು'[87] ಎಂಬುದಾಗಿ 1920ರ ದಶಕದಲ್ಲಿ ಉದ್ಯಮೀಕರಣದ ಅಪಾಯದ ಬಗೆಗಿನ ಗಾಂಧೀಜಿಯವರ ಮಾತುಗಳನ್ನು ಉಲ್ಲೇಖಿಸುತ್ತಾ 'ಬಯಕೆಗಳನ್ನು ಅವಶ್ಯಕತೆಗೆ ತಕ್ಕಷ್ಟು ಮಿತಿಗೊಳಿಸುವುದು ಕೈಗಾರಿಕಾಪೂರ್ವ ಸಮಾಜದ ಮೌಲ್ಯವಾಗಿತ್ತು. ಆದರೆ ಇದಕ್ಕೆ ವಿರುದ್ಧವಾಗಿ ಬಯಕೆಗಳನ್ನು ಒಟ್ಟಾರೆ ಪ್ರಚೋದಿಸಿ ಬೆಳೆಸುವುದೇ ಆಧುನಿಕ ನಾಗರಿಕತೆಯ ಲಕ್ಷಣವಾಗಿದೆ. ಮನುಷ್ಯ ತನ್ನ ಆಕ್ರಮಣಕಾರಿ ದುರಾಸೆಗಳನ್ನು ಸಿದ್ಧಿಸಿಕೊಳ್ಳಲು, ತನ್ನ ಪಾಶವಿ ಹಸಿವನ್ನು ತಣಿಸಿಕೊಳ್ಳಲು, ಕಾಲ ಮತ್ತು ದೇಶಗಳನ್ನು ನಾಶಗೊಳಿಸಿ ಈ ಭೂಮಿಯ ಅಂಚಿನವರೆಗೂ ಅಪಾಯಕಾರಿಯಾಗಿ ಮುನ್ನುಗ್ಗುವುದನ್ನು ನಾವಿಂದು ಕಾಣುತ್ತಿದ್ದೇವೆ. ನಾನು ಅರ್ಥೈಸಿಕೊಂಡಂತೆ ಇದೇ ಇಂದಿನ ನಾಗರಿಕತೆಯ ಉದ್ದೇಶವಾಗಿದ್ದರೆ, ನಾನು ಈ ನಾಗರಿಕತೆಯನ್ನು ಪೈಶಾಚಿಕ ನಾಗರಿಕತೆ ಎಂದು ಕರೆಯುತ್ತೇನೆ'[88] ಎಂದು ಗಾಂಧೀಜಿಯವರ ಮಾತುಗಳನ್ನು ಉಲ್ಲೇಖಿಸಿದ ಲೇಖಕರು

ಅಭಿವೃದ್ಧಿಯ ಹೆಸರಿನಲ್ಲಿ ಕುದುರೆಮುಖ ಗಣಿಗಾರಿಕೆ ಪರಿಸರಕ್ಕೆ ಮತ್ತು ಸಂತ್ರಸ್ತ ಜನರಿಗೆ ಮಾಡಿದ ಶೋಷಣೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟಿರುತ್ತಾರೆ.

'ಗಣಿಗಾರಿಕೆ, ಅಣೆಕಟ್ಟು, ಬೃಹತ್ ಕೈಗಾರಿಕಾ ಘಟಕಗಳ ನಿರ್ಮಾಣ ಮುಂತಾದ ಯೋಜನೆಗಳಿಂದ ಆಗುವ ಪರಿಸರ ನಾಶ ಮಾತ್ರವಲ್ಲ, ತಮ್ಮ ಊರು ಮನೆಗಳನ್ನು ಕಳೆದುಕೊಳ್ಳುವ ಜನರ ಬಗ್ಗೆ ನಮ್ಮ ಎಲ್ಲಾ ರಾಜಕೀಯ ಪಕ್ಷಗಳು ನಿರ್ಲಕ್ಷ್ಯದ ಧೋರಣೆ ತಳೆದಿವೆ. ಒಂದು ಅಂದಾಜಿನ ಪ್ರಕಾರ, ಸ್ವಾತಂತ್ರ್ಯಾ ನಂತರದ ಬೃಹತ್ ಅಣೆಕಟ್ಟು ಮತ್ತು ಗಣಿಗಾರಿಕೆಯಿಂದಾಗಿ ದೇಶದಲ್ಲಿ ಸುಮಾರು ಐದುಕೋಟಿ ಜನರು ನೆಲೆ ಕಳೆದುಕೊಂಡಿದ್ದಾರೆ. ಇವರಲ್ಲಿ ಹೆಚ್ಚಿನವರು ಆದಿವಾಸಿಗಳು. ತಮ್ಮ ಪರಂಪರಾಗತ ಕಸುಬು ಬಿಟ್ಟು ಬೇರೆ ಏನೂ ಗೊತ್ತಿಲ್ಲದ ಇವರಿಗೆ ಬಲತ್ಕಾರದ ಸ್ಥಳಾಂತರವೆಂದರೆ ವಸ್ತುಶಃ ಮರಣದಂಡನೆ. ಆದರೆ ಬೃಹತ್ ಯೋಜನೆಗಳ ಪರವಾಗಿ ವಾದ ಮಂಡಿಸುವವರು, 'ಆದಿವಾಸಿಗಳು ಮ್ಯೂಸಿಯಂನಲ್ಲಿ ಇಟ್ಟಿರುವ ಗೊಂಬೆಗಳ ಹಾಗೇ ಇರಬೇಕಾ?' ಎಂದು ಪ್ರಶ್ನಿಸುತ್ತಾರೆ. ಯೋಜನೆಗಳಿಂದ ನೆಲೆ ಕಳೆದುಕೊಂಡ ಅಮಾಯಕ ಜನರಿಗೆ ಮನುಷ್ಯ ಯೋಗ್ಯವಾದ ಯಾವ ಪರಿಹಾರವೂ ದೊರೆತಿಲ್ಲ ಎಂಬ ಸತ್ಯವೂ ಇವರನ್ನು ಭಾದಿಸುತ್ತಿಲ್ಲ. ಈ ಜನರ ಜೀವನ ಕ್ರಮ, ಸಂಸ್ಕೃತಿಗಳು ನಾಶವಾದದ್ದು ಒಂದು ದುರಂತವೆಂದು ಅನಿಸುತ್ತಿಲ್ಲ. ಅಣೆಕಟ್ಟು, ಗಣಿಗಾರಿಕೆ, ಉದ್ದಿಮೆ ಮುಂತಾದವುಗಳಿಂದ ಆದ ಅಭಿವೃದ್ಧಿಯ ಪ್ರಯೋಜನ ದೊರೆತದ್ದು ಯಾವ ವರ್ಗದವರಿಗೆ ಎಂದು ಹೇಳಿಕೊಳ್ಳುವ ವ್ಯವಧಾನವೂ ಇವರಿಗೆ ಇಲ್ಲ. ಇವರ ಕಲ್ಪನೆಯ ಅಭಿವೃದ್ಧಿ ಈ ದೇಶದ ಬಡವರನ್ನು ಇನ್ನಷ್ಟು ಬಡವರನ್ನಾಗಿಸುವಂತಹದ್ದು. ಈ ಅಭಿವೃದ್ಧಿಯ ತರ್ಕವನ್ನು ತಿರಸ್ಕರಿಸದೆ ಕುದುರೆಮುಖ ಗಣಿಗಾರಿಕೆಯ ಅಪಾಯಗಳನ್ನು ನಾವು ಮನಗಾಣಲಾರೆವು'[89] ಎಂಬುದಾಗಿ ಸಂಪಾದಿತ ಗ್ರಂಥದ ಎಲ್ಲಾ ಲೇಖಕರು 'ಯಾರಿಗಾಗಿ ಅಭಿವೃದ್ಧಿ ಮತ್ತು ಯಾರ ತ್ಯಾಗದಿಂದಾಗಿ ಅಭಿವೃದ್ಧಿ' ಎಂಬುದಾಗಿ ಪ್ರಶ್ನಿಸಿರುತ್ತಾರೆ.

ಕೆ. ಮೋಹನಕೃಷ್ಣ ರೈ ತಮ್ಮ 'ಪರಿಸರದ ಚಳುವಳಿಗಳು' ಗ್ರಂಥದಲ್ಲಿ ಪರಿಸರ ನಾಶದಲ್ಲಿ ಬೃಹತ್ ಉದ್ಯಮಗಳು ಯಾವ ರೀತಿಯ ಪಾತ್ರವನ್ನು ವಹಿಸುತ್ತವೆ ಎಂದು ವಿವರಿಸಿದ್ದಾರೆ. 'ಪರಿಸರ ಎಂದರೇನು? ಪರಿಸರವಾದಿಗಳು ಯಾರು? ಪರಿಸರ ಸಂಬಂಧಿ ಚಳುವಳಿಗಳ ಸ್ವರೂಪವೇನು? ಪರಿಸರ ಚಳುವಳಿಯನ್ನು ಸಮಾಜದ ಯಾವ ವರ್ಗ ಪ್ರತಿನಿಧಿಸುತ್ತಿದೆ? ಕೈಗಾರಿಕೀಕರಣದ ಪ್ರಯೋಜನ ಸಮಾಜದ ಯಾವ ವರ್ಗಕ್ಕೆ ಹೋಗುತ್ತದೆ? ಬಂಡವಾಳಶಾಹಿಯ ಪಾತ್ರವೇನು? ಮುಂತಾದ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದಾಗ ಮಾತ್ರ ಪರಿಸರವನ್ನು ಉಳಿಸಿ ಅಭಿವೃದ್ಧಿಯನ್ನು ನಡೆಸುವ ಪ್ರಕ್ರಿಯೆ ಸರಿಯಾದ ದಾರಿಯಲ್ಲಿ ಹೋಗುವ ಸಾಧ್ಯತೆ ಇದೆ'[90] ಎಂದು ವಿಶ್ಲೇಷಿಸಿದ್ದಾರೆ. 'ಇತ್ತೀಚಿಗಿನ ದಶಕಗಳಲ್ಲಿ ಪರಿಸರ ಪ್ರಶ್ನೆ ಬಲಗೊಳ್ಳಲು ಪ್ರಮುಖ ಕಾರಣ ಬಹುದೊಡ್ಡ ಸಂಖ್ಯೆಯ ಜನರ ಬದುಕನ್ನು ಪರಿಗಣನೆಗೆ ತೆಗೆದುಕೊಳ್ಳದೆ ಆಧುನೀಕರಣವನ್ನು ಮುಂದುವರಿಸಿರುವುದು. ಗಣಿಗಾರಿಕೆ, ಅಣೆಕಟ್ಟುಗಳ ನಿರ್ಮಾಣ, ಉದ್ದಿಮೆಗಳ ಸ್ಥಾಪನೆ ಮುಂತಾದ ಉದ್ದೇಶಗಳಿಗೆ ಭೂಮಿಯನ್ನು

ಬಳಸುವ ಸಂದರ್ಭದಲ್ಲಿಯೂ ಆಧುನೀಕರಣ ಮುಗ್ಗರಿಸಿದೆ ಮತ್ತು ಚಳುವಳಿಗಳು ತೀವ್ರ ಸ್ವರೂಪವನ್ನು ಪಡೆಯುವಂತೆ ಮಾಡಿದೆ. ಸಮುದಾಯದ ಸಂಪನ್ಮೂಲಗಳ ಬಳಕೆ ಹಾಗೂ ಅದರ ವಿಲೇವಾರಿಯ ತಾರತಮ್ಯದಿಂದಲೂ ಪರಿಸರದ ಚಳುವಳಿಗಳು ತೀವ್ರಗೊಂಡಿವೆ. ಚಳುವಳಿಗಳು ತೀವ್ರಗೊಂಡಿವೆ ಎಂದರೆ ಉದ್ದೇಶಗಳು ಈಡೇರಿಕೆಯಾಗಿವೆ ಎಂದರ್ಥವಲ್ಲ. ಇದು ಬಹುಸಂಖ್ಯಾತ ಜನವರ್ಗದ ಬದುಕನ್ನು ಸೀಮಿತವರ್ಗ ಬಂಡವಾಳದೊಂದಿಗೆ ನಿರ್ಧರಿಸುವ ಪ್ರಯತ್ನ ಮಾತ್ರ ಆಗಿದೆ. ಇಲ್ಲಿ ಸಮುದಾಯದ ಸಂಪನ್ಮೂಲಗಳು ಬಹುರಾಷ್ಟ್ರೀಯರ ಹಾಗೂ ಸ್ಥಳೀಯ ಶ್ರೀಮಂತ ವರ್ಗದ ಉಪಯೋಗಕ್ಕೆ ಮಾತ್ರ ಸೀಮಿತವಾಗಿದೆ. ಇದು ಪರಿಸರದ ಚಳುವಳಿಗೆ ಖಚಿತವಾದ ಸೈದ್ಧಾಂತಿಕ ತಳಹದಿ ಇಲ್ಲದಿರುವುದನ್ನು ಸೂಚಿಸುತ್ತದೆ'[91] ಎನ್ನುವ ಮೋಹನಕೃಷ್ಣ ಅವರು, 'ಶ್ರೀಮಂತ ಬಂಡವಾಳಶಾಹಿಯ ಪ್ರವೇಶವಾದರೆ ತಾವು ಸ್ಪರ್ಧೆ ನೀಡಲಾರವೇನೋ ಎನ್ನುವ ಭಯದಿಂದ ಸ್ಥಳೀಯ ಶ್ರೀಮಂತ ವರ್ಗ ಹೊಸ ಯೋಜನೆಗಳನ್ನು ವಿರೋಧಿಸಲಾರಂಭಿಸಿತು. ಇದಕ್ಕಾಗಿ ಪರಿಸರ ಚಳುವಳಿಯನ್ನು ನಡೆಸುವ ಅಗತ್ಯವಿತ್ತು' ಎಂಬ ವಾದವನ್ನು ತಮ್ಮ ಪುಸ್ತಕದಲ್ಲಿ ವಿವರಿಸಿದ್ದಾರೆ.

ತಮ್ಮ ಪ್ರದೇಶ ಅಭಿವೃದ್ಧಿಯಾಗಬೇಕು, ಜನರ ಜೀವನಮಟ್ಟ ಸುಧಾರಿಸಬೇಕೆನ್ನುವ ಆಶಯ ಸಹಜ. ಆದರೆ ಅಭಿವೃದ್ಧಿ ಪ್ರಕ್ರಿಯೆಯು ಆ ಪ್ರದೇಶದ ಭೌಗೋಳಿಕ ಪರಿಸ್ಥಿತಿ, ಅಲ್ಲಿ ಈಗಾಗಲೇ ಆಗಿರುವ ಪ್ರಗತಿ ಇತ್ಯಾದಿಗಳ ಮೇಲೆ ಅವಲಂಬಿಸಿರಬೇಕು. ಆದುದರಿಂದ ನಮಗೆ ಯಾವ ರೀತಿಯ ಬೃಹತ್ ಕೈಗಾರಿಕೆಗಳು ಬೇಕು ಎಂಬುದನ್ನು ನಿರ್ಧರಿಸುವಾಗ, ಈಗಾಗಲೇ ನಮ್ಮಲ್ಲಿ ಬೇರೂರಿರುವ ಕೈಗಾರಿಕೆಗಳಿಂದ ಆಗುತ್ತಿರುವ ಸಮಸ್ಯೆಗಳು ಮತ್ತು ಸಮಾಜದ ಅಭಿವೃದ್ಧಿಗೆ ನೀಡಿದ ಕೊಡುಗೆಗಳು, ಅನುಷ್ಠಾನದ ವೇಳೆ ಮತ್ತು ನಂತರ ನಮ್ಮ ದೇಶದ ಕಾನೂನಿನ ಪಾಲನೆ ಎಷ್ಟರ ಮಟ್ಟಿಗೆ ಆಗಿದೆ ಎನ್ನುವುದರ ಬಗ್ಗೆ ಸ್ಪಷ್ಟ ತಿಳುವಳಿಕೆಯ ಅವಶ್ಯಕತೆಯಿರುತ್ತದೆ. ತೊಂಬತ್ತರ ದಶಕದಲ್ಲಿ, ಕರ್ನಾಟಕ ಸರಕಾರ ಕರಾವಳಿ ಜಿಲ್ಲೆಗಳಲ್ಲಿ ಸುಮಾರು ಮೂವತ್ತಾರು ಬೃಹತ್ ಉದ್ದಿಮೆಗಳನ್ನು ಸ್ಥಾಪಿಸುವ ಯೋಜನೆ ಮಾಡಿತು. ಪ್ರಸ್ತಾವಿತ ಉದ್ದಿಮೆಗಳಲ್ಲಿ ಹೆಚ್ಚಿನವು ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯ ಪ್ರಕಟಿಸಿದ ಅತಿ ಮಾಲಿನ್ಯಕಾರಕ ಉದ್ದಿಮೆಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ತೈಲ ಶುದ್ಧೀಕರಣ, ಉಕ್ಕು, ಹಡಗು ಒಡೆಯುವಿಕೆ, ತಾಮ್ರ ಶುದ್ಧೀಕರಣ, ಕೃತಕ ಗೊಬ್ಬರ ಮತ್ತು ರಾಸಾಯನಿಕಗಳ ಉತ್ಪಾದನೆ, ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್‌ಸ್ಥಾವರಗಳು ಆಗಿದ್ದವು.[92] ಆಗ ತೀವ್ರಗೊಂಡ ಚಳುವಳಿಗಳು ಕೈಗಾರಿಕೆಗಳ ಧಾವಂತಕ್ಕೆ ಕಡಿವಾಣ ಹಾಕಿದ್ದರೂ, ಈಗ ಮತ್ತೆ ವಿಶೇಷ ಆರ್ಥಿಕ ವಲಯಗಳು, ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರ ಮೊದಲಾದವುಗಳು ಕರಾವಳಿಯಲ್ಲಿ ನೆಲೆಯೂರುವ ಮಾತು ಕೇಳಿ ಬರುತ್ತಿದೆ ಎಂಬುದಾಗಿ ಉಪೇಂದ್ರ ಹೊಸಬೆಟ್ಟು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಬೃಹತ್ ಕೈಗಾರಿಕೆಗಳು ಕರಾವಳಿಯ ತೀರದಲ್ಲಿ ಕೇಂದ್ರ ಸರಕಾರದ ಪರಿಸರ ಮತ್ತು ಅರಣ್ಯ ಇಲಾಖೆಗಳ ಎಲ್ಲಾ ಕಾನೂನುಗಳನ್ನು ಉಲ್ಲಂಘಿಸಿ ಅಸ್ತಿತ್ವಕ್ಕೆ ಬಂದಿರುತ್ತದೆ. ಇದರಿಂದಾಗಿ ಆ ಪ್ರದೇಶದ ಪರಿಸರ ಸಂಪೂರ್ಣ ನಾಶವಾಗಿದೆಯೇ

ವಿನಹ: ಸಾಮಾನ್ಯ ಜನರಿಗೆ ಯಾವುದೇ ರೀತಿಯಿಂದಲೂ ಪ್ರಯೋಜನವಾಗಿರುವುದಿಲ್ಲ ಎಂಬುದಾಗಿ ಬೆಟ್ಟು ಮಾಡುತ್ತಾರೆ. ತಮ್ಮ ವಾದವನ್ನು ಮುಂದುವರಿಸಿದ ಅವರು, ಕೈಗಾರಿಕೆಗಳ ಪರ ವಾದದಲ್ಲಿ 'ಬೃಹತ್ ಕೈಗಾರಿಕೆಗಳು ಸ್ಥಳೀಯ ಜನರಿಗೆ ಹೆಚ್ಚಿನ ಪ್ರಮಾಣದ ಉದ್ಯೋಗವನ್ನು ಸೃಷ್ಟಿಸುತ್ತವೆ. ಇದರಿಂದಾಗಿ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ ಮತ್ತು ಜನರ ಜೀವನಮಟ್ಟ ಹೆಚ್ಚಾಗುತ್ತದೆ. ಆದರೆ ಇಲ್ಲಿಯ ಎಲ್ಲಾ ನಿರುದ್ಯೋಗಿಗಳಿಗೂ ಉದ್ಯೋಗ ನೀಡಬಹುದಾಗಿದ್ದ, ನೂರಾರು ದೊಡ್ಡ ಪ್ರವಾಣದ ಕೈಗಾರಿಕೆಗಳು ಇಲ್ಲಿನ ಪರಿಸರವಾದಿಗಳಿಂದಾಗಿಯೇ ಬರಲಿಲ್ಲವೆನ್ನುವ ಅಪವಾದ ಸತ್ಯಕ್ಕೆ ಬಹುದೂರ. ಅದರ ಬದಲು ಇಲ್ಲಿ ಅಸ್ತಿತ್ವಕ್ಕೆ ಬಂದ ಕೈಗಾರಿಕೆಗಳು ಎಷ್ಟು ಉದ್ಯೋಗ ಸೃಷ್ಟಿಸಿವೆ, ಅವುಗಳಲ್ಲಿ ಸ್ಥಳೀಯರಿಗೆ ಎಷ್ಟು ಉದ್ಯೋಗ ದೊರಕಿದೆ? ಅದರಲ್ಲಿ ಅರ್ಹತೆಯ ಆಧಾರದ ಮೇಲೆ ಕೆಲಸ ಸಿಕ್ಕವರೆಷ್ಟು?. ಎಮ್.ಆರ್.ಪಿಲ್.ಎಲ್. ನಿಂದ ನಿರ್ವಸಿತರಾದ ಎಲ್ಲಾ ಕುಟುಂಬಗಳ ಒಬ್ಬೊಬ್ಬ ಸದಸ್ಯನಿಗೆ ಕೆಲಸ ಕೊಡಬೇಕೆಂಬ ಸರಕಾರಿ ಆದೇಶವಿದ್ದರೂ, ಸುಮಾರು ಆರುನೂರು ಕುಟುಂಬಗಳಲ್ಲಿ ಇನ್ನೂರಕ್ಕಿಂತಲೂ ಕಡಿಮೆ ಜನರಿಗೆ ಮಾತ್ರ ಉದ್ಯೋಗ ದೊರೆಯಿತು. ಆಧುನಿಕ ತಂತ್ರಜ್ಞಾನ ಬಳಸುವ ಹೆಚ್ಚಿನ ಉದ್ದಿಮೆಗಳಲ್ಲಿ ಕಾಮಗಾರಿಯ ಸಮಯದಲ್ಲಿ ದೊರಕುವ ಕೂಲಿ ಕೆಲಸ, ಗುತ್ತಿಗೆಗಳ ಹೊರತಾಗಿ ಇತರ ಹೆಚ್ಚು ಉದ್ಯೋಗಗಳಿಗೆ ಅವಕಾಶವಿಲ್ಲ'[93] ಎಂದಿರುವ ಅವರು, ಬೃಹತ್ ಕೈಗಾರಿಕೆಗಳಿಂದ ನಿರ್ವಸಿತರಾದ ಜನರಿಗೆ ಮತ್ತು ಆ ಪ್ರದೇಶಗಳಿಗೆ ಅವುಗಳಿಂದ ಯಾವುದೇ ಲಾಭಗಳಿಲ್ಲ. ಆದುದರಿಂದ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಮೊದಲು 1987ರ 'ಪರಿಸರ ಸಂರಕ್ಷಣಾ ಕಾಯ್ದೆ'ಯನ್ವಯ 'ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸಿ, ಕೈಗಾರಿಕೆಗಳ ಸಾಧಕ ಬಾಧಕಗಳನ್ನು ಚರ್ಚಿಸಿ, ನಂತರ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಜನರ ಜೀವನವನ್ನು ಅಸ್ತವ್ಯಸ್ತಗೊಳಿಸುವ ಕೈಗಾರಿಕೆಗಳು ಕರಾವಳಿ ಪ್ರದೇಶಕ್ಕೆ ಬೇಕಾಗಿಲ್ಲ'[94] ಎಂದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿರುತ್ತಾರೆ.

ಅಭಿವೃದ್ಧಿ ಚಟುವಟಿಕೆಗಳ ಅನಾಹುತಗಳು ಗಂಭೀರವಾಗಿ ಕಾಡುವುದು ಮಹಿಳೆಯರನ್ನು. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಮೊದಲು ಕಾಳಿನದಿ ಯೋಜನೆ, ಶರಾವತಿ ಟೇಲ್‌ರೇಸ್ ಯೋಜನೆ, ದಾಂಡೇಲಿ ಕಾಗದ ಕಾರ್ಖಾನೆ, ಸೀಬರ್ಡ್ ನೌಕಾನೆಲೆ ಯೋಜನೆಗಳಿಗೆ ಪಶ್ಚಿಮಘಟ್ಟದ ಸಮೃದ್ಧ ಜೀವವೈವಿಧ್ಯ ಮತ್ತು ಜೀವಸಂಕುಲಗಳು ಬಲಿಯಾಗಿವೆ. ಅನೇಕ ಕುಟುಂಬಗಳು ಇದರಿಂದಾಗಿ ಸಂಕಷ್ಟಕ್ಕೀಡಾಗಿದೆ. ಪರಿಹಾರ ಮತ್ತು ಪುನರ್‌ವಸತಿ ಯೋಜನೆಗಳನ್ನು ಸಮರ್ಪಕವಾಗಿ ಕೈಗೊಳ್ಳದೆ, ಸ್ಥಳೀಯರ ಬದುಕು ದುಸ್ತರವಾಗಿದೆ. ಇದರ ಪರಿಣಾಮ ಈಗಾಗಲೇ ಕಂಡು ಬಂದಿದ್ದು ನಿರುದ್ಯೋಗ, ಬಡತನ, ಆರೋಗ್ಯ ಸಮಸ್ಯೆ, ವೇಶ್ಯಾವಾಟಿಕೆ, ಅಭದ್ರತೆ, ನಾಗರಿಕ ಸೌಲಭ್ಯಗಳ ಕೊರತೆ ಮುಂತಾದವುಗಳು ಸೃಷ್ಟಿಯಾಗಿವೆ. ಇಂತಹ ಪರಿಸರ ಮತ್ತು ಜನವಿರೋಧಿ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಪ್ರತಿಭಟಿಸಿ, ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಶಿವರಾಮ ಕಾರಂತ, ಕುಸುಮಾ ಸೊರಬ ಮುಂತಾದವರ ನೇತೃತ್ವದಲ್ಲಿ ಸಾಕಷ್ಟು ಹೋರಾಟಗಳು ನಡೆದಿವೆ. ಹೀಗಿದ್ದಾಗ್ಯೂ,

ಸರಕಾರ ಬೇಡ್ತಿ, ಅಘನಾಶಿನಿ ಯೋಜನೆ, ನದಿಜೋಡಣೆ, ಇಕೋ ಟೂರಿಸಂನಂತಹ ಕಾರ್ಯಕ್ರಮಗಳಿಗೆ ಹೆಚ್ಚು ಆದ್ಯತೆಯನ್ನು ನೀಡುತ್ತಿದೆ. ಇದರಿಂದಾಗಿ ಜನರ ಸಾಮಾನ್ಯ ಜೀವನಕ್ಕೆ ಮತ್ತು ಪರಿಸರಕ್ಕೆ ತುಂಬಲಾರದಂತಹ ನಷ್ಟವನ್ನು ತರುತ್ತದೆ[95] ಎಂಬುವುದಾಗಿ ವಿದ್ಯಾ ನಾಯಕ್ ಅವರು ಉತ್ತರ ಕನ್ನಡದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಪ್ರಕ್ರಿಯೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ತಮ್ಮ ಗ್ರಂಥವಾದ 'ಪರಿಸರ ಮತ್ತು ಅಭಿವೃದ್ಧಿ'ಯಲ್ಲಿ ಅಭಿವೃದ್ಧಿ ಕುರಿತ ಕೆಲವು ಮೂಲಭೂತ ಪ್ರಶ್ನೆಗಳ ಬಗ್ಗೆ ಚಂದ್ರ ಪೂಜಾರಿಯವರು ಚರ್ಚಿಸುತ್ತಾರೆ. ಲೇಖಕರು ಅಭಿವೃದ್ಧಿ ಪ್ರಕ್ರಿಯೆಯ ಬಗ್ಗೆ ವಿವರಿಸುತ್ತಾ, ನಾವು ಅನುಸರಿಸುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳ ತಾತ್ವಿಕ ಹಿನ್ನೆಲೆಯೇನು? ಯಾವ ಉದ್ದೇಶವನ್ನು ಇಟ್ಟುಕೊಂಡು ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ? ನಾವು ಅಂತರ್ಗತಗೊಳಿಸಲು ಪ್ರಯತ್ನಿಸುವ ಅಭಿವೃದ್ಧಿಯ ಪರಿಕಲ್ಪನೆ ನಮ್ಮದೇ ಪರಿಸರದ ಚಾರಿತ್ರಿಕ ಬೆಳವಣಿಗೆಯೆ? ಅಲ್ಲದಿದ್ದ ಪಕ್ಷದಲ್ಲಿ ಬೇರೆ ಪರಿಸರದಲ್ಲಿ ರೂಪುಗೊಂಡ ಅಭಿವೃದ್ಧಿಯ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುವ ಅನಿವಾರ್ಯತೆ ಏನು? ನಮಗೆ ಬೇಕಾದ ರೀತಿಯಲ್ಲಿ ಅಭಿವೃದ್ಧಿಯನ್ನು ವ್ಯಾಖ್ಯಾನಿಸಿಕೊಳ್ಳಬಹುದೇ? ನಾವು ಅಳವಡಿಸಿಕೊಂಡಿರುವ ಪಶ್ಚಿಮದ ಮಾದರಿಯ ಅಭಿವೃದ್ಧಿಯ ಪರಿಕಲ್ಪನೆ ಎಷ್ಟು ಸರಿ[96] ಎಂದು ಪ್ರಶ್ನಿಸುತ್ತಾರೆ. ಸ್ವಾತಂತ್ರ್ಯನಂತರ ಅಳವಡಿಸಿದ ತಾಂತ್ರಿಕ ಆಧುನೀಕರಣ ನಮ್ಮ ಸಾಂಪ್ರದಾಯಿಕ ಸಮಾಜದ ಮೇಲೆ ಬೀರಿದ ಪರಿಣಾಮದ ಬಗ್ಗೆ ವಿವರಿಸಿದ ಲೇಖಕರು, ಬೃಹತ್ ಉದ್ಯಮಗಳು, ಅಣೆಕಟ್ಟುಗಳು, ಗಣಿಗಾರಿಕೆಗಳು, ರೈಲ್ವೇ ಮಾರ್ಗ ಮುಂತಾದವುಗಳು ಆಧುನಿಕರಣದ ನೆಲೆಗಟ್ಟನ್ನು ಭದ್ರಗೊಳಿಸಿವೆ ಮತ್ತು ನಮ್ಮ ಸಮಾಜದ ಸ್ವಲ್ಪ ಜನರಿಗೆ ನಗರಜೀವನದ ಅವಕಾಶವನ್ನು ಒದಗಿಸಿದೆ ಎಂದು ಅಭಿವೃದ್ಧಿ ಪ್ರಕ್ರಿಯೆಯನ್ನು ಒಂದೆಡೆ ಸಮರ್ಥಿಸಿ, ಇನ್ನೊಂದೆಡೆ ಇಂತಹ ಅಭಿವೃದ್ಧಿ ಪ್ರಕ್ರಿಯೆಗಳಿಂದ ನೆಲೆ ಕಳೆದುಕೊಂಡು ಸಂತ್ರಸ್ತರಾದ ಜನರ ಕಷ್ಟಕೋಟಲೆಗಳ ಬಗೆಗೆ ವಿವರಿಸುತ್ತಾರೆ. ಆಧುನಿಕ ಉದ್ಯಮೀಕರಣ, ಸಾಂಪ್ರದಾಯಿಕ ಕಸುಬುದಾರಿಕೆಯಲ್ಲಿ ತೊಡಗಿಸಿಕೊಂಡಿರುವವರನ್ನು ಬೀದಿಪಾಲು ಮಾಡುತ್ತದೆ. ಅವರು ತಮ್ಮ ಮೂಲ ಕಸುಬುಗಳಿಂದ ಬೇರ್ಪಟ್ಟು, ನಗರ ಪ್ರದೇಶಗಳ ಕೊಳಚೆ ಪ್ರದೇಶಗಳಲ್ಲಿ, ನೆಲೆನಿಂತು ಹೊಟ್ಟೆಪಾಡಿಗಾಗಿ ಅಸಂಘಟಿತ ಕಾರ್ಮಿಕರಾಗುವುದು ಹೇಗೆ ಅನಿವಾರ್ಯವಾಯಿತು[97] ಎಂಬುದನ್ನು ಅರ್ಥವತ್ತಾಗಿ ಬೊಟ್ಟು ಮಾಡಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗಿನ ದಶಕಗಳಲ್ಲಿ ಆಗುತ್ತಿರುವ ಉದ್ಯಮೀಕರಣ ಮತ್ತು ಪರಿಸರವಾದಿ ಚಳವಳಿಗಳನ್ನು ವಿಮರ್ಶಿಸುತ್ತಾ, ಈ ಪ್ರದೇಶಗಳಲ್ಲಿ ಯಾವುದೇ ಬೃಹತ್ ಉದ್ದಿಮೆಗಳು ಬರಬಾರದೆಂಬ ವಾದವನ್ನು ಮುಂದಿಟ್ಟ ಪರಿಸರವಾದಿಗಳ ವಾದ ಈ ಜಿಲ್ಲೆಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ತುಂಬ ಅಸಹಜವಾಗುತ್ತದೆ. ಯಾಕೆಂದರೆ ಅಭಿವೃದ್ಧಿಯ ಸಾಂಪ್ರದಾಯಿಕ ಸಂಕೇತಗಳಾದ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಕಾರ್ಮಿಕರ ಅವಲಂಬನೆ ಮತ್ತು ಅವುಗಳಿಂದ ಬರುವ ಆದಾಯ, ರಸ್ತೆ, ವಿದ್ಯುಚ್ಛಕ್ತಿ ಮತ್ತು

ಇತರ ಆಧುನಿಕ ಸೌಲಭ್ಯಗಳ ಬಳಕೆ ಇವೇ ಮುಂತಾದವುಗಳ ಇರುವಿಕೆಯ ದೃಷ್ಟಿಯಿಂದ, ದಕ್ಷಿಣ ಕನ್ನಡ ಜಿಲ್ಲೆ ಮುಂದುವರಿದ ಜಿಲ್ಲೆ. ತಾಂತ್ರಿಕ ಆಧುನೀಕರಣದ ಬಹುತೇಕ ಸೌಲಭ್ಯಗಳನ್ನು ಅನುಭವಿಸುವ ಒಂದು ಪ್ರದೇಶದ ಜನರು ಆ ಸೌಲಭ್ಯಗಳನ್ನು ಉತ್ಪಾದಿಸುವ ಕೆಲವೊಂದು ಉದ್ದಿಮೆಗಳನ್ನು ತಮ್ಮ ಪ್ರದೇಶದಲ್ಲಿ ಸ್ಥಾಪಿಸುವುದು ಬೇಡ ಎಂದಾಗ ಪರಿಸರ ನಾಶದ ವಾದವನ್ನು ಮುಂದಿಡುತ್ತಾರೆ.[98] 'ಕ್ರೊಜೆಂಟಿಕ್ಸ್ ಬೇಡ' ಎಂಬ ಕೂಗಿನೊಂದಿಗೆ ಆರಂಭವಾದ ಪರಿಸರ ಚಳುವಳಿ ಇಂದು ಯಾವುದೇ ಬೃಹತ್ ಉದ್ದಿಮೆಗಳು ಬೇಡ ಎಂಬ ಹಂತಕ್ಕೆ ತಲುಪಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ 'ವಿದ್ಯುತ್ ಬೇಡ, ಆಧುನಿಕ ವಾಹನ ಸೌಕರ್ಯಗಳು ಬೇಡ' ಎಂಬ ವಿಚಾರಗಳ ಬದಲಿಗೆ ಅವುಗಳನ್ನು ಉತ್ಪಾದಿಸುವ ಘಟಕಗಳ ಸ್ಥಾಪನೆಯ ವಿರುದ್ಧ ಚಳುವಳಿಗಳು ಜಿಲ್ಲೆಯಲ್ಲಿ ತುಂಬಾ ಪ್ರಚಾರ ಪಡೆಯುತ್ತಿವೆ. ಅಂದರೆ ಅನುಭೋಗ ಶೈಲಿಯಲ್ಲಿ ಮೂಲಭೂತ ಪರಿವರ್ತನೆಯ ಪ್ರಶ್ನೆಯನ್ನು ಒಳಗೊಳ್ಳದ ಪರಿಸರವಾದವನ್ನು ಮುಂದಿಡಲಾಗುತ್ತಿದೆ. ಅನುಭೋಗ ಶೈಲಿಯಲ್ಲಿ ಮೂಲಭೂತ ಪರಿವರ್ತನೆ ಇಲ್ಲದ ಕೇವಲ ಉದ್ಯಮೀಕರಣವನ್ನು ವಿರೋಧಿಸುವ ಮೂಲಕ ತಮ್ಮ ಪರಿಸರ ರಕ್ಷಣೆ ಸಾಧ್ಯವಾಗಲಿಕ್ಕಿಲ್ಲ. ಈ ರೀತಿಯ ಪರಿಸರವಾದದಿಂದ ಮತ್ತು ಚಳುವಳಿಯಿಂದ ಹೆಚ್ಚೆಂದರೆ ನಾವು ಪರಿಸರ ಮಾಲಿನ್ಯವನ್ನು ಸ್ಥಳಾಂತರಿಸಬಹುದು ಅಥವಾ ಮುಂದಕ್ಕೆ ಹಾಕಬಹುದೇ ಹೊರತು ಮಾಲಿನ್ಯರಹಿತ ಉತ್ಪಾದನಾ ವ್ಯವಸ್ಥೆಯ ನಿರ್ಮಾಣಕ್ಕೆ ಪ್ರಯತ್ನಿಸಿದಂತಾಗುವುದಿಲ್ಲ[99] ಎಂದಿದ್ದಾರೆ.

ಲೇಖಕರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ ಪ್ರಕಾರ, ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ 1990ರ ದಶಕದ ನಂತರ ಆರಂಭಿಸಲ್ಪಟ್ಟ ಬೃಹತ್ ಕೈಗಾರಿಕೆಗಳ ಪರ ಮತ್ತು ವಿರೋಧ ಅಭಿಪ್ರಾಯಗಳು ಅಲ್ಲಿನ ಜನಾಭಿಪ್ರಾಯವನ್ನು ವಿಶ್ಲೇಷಿಸಿದರೆ ಅತ್ಯಂತ ಸಮಂಜಸವಾಗುತ್ತದೆ ಎಂದಿದ್ದಾರೆ. ಕೈಗಾರಿಕೆಗಳಿಂದ ಪ್ರದೇಶದ ಅಭಿವೃದ್ಧಿಯಾಗುತ್ತದೆ ಎಂಬ ಗ್ರಹಿತವನ್ನು ನಗರವಾಸಿಗಳು ಮತ್ತು ಸಮಾಜದ ಮೇಲ್‌ಸ್ತರದ ಜನರು ಬೆಂಬಲಿಸಿರುವುದನ್ನು ಗಮನಿಸಬಹುದು. ಕೂಲಿ, ಕೃಷಿ ಮತ್ತು ಮೀನುಗಾರಿಕೆಯನ್ನು ಅವಲಂಬಿಸಿದ ಸಮಾಜದ ಕೆಳಸ್ತರದ ಜನರೇ ಕರಾವಳಿ ಪ್ರದೇಶದಲ್ಲಿ ಹೆಚ್ಚಿದ್ದು ಅಲ್ಲಿನ ಬೃಹತ್ ಕೈಗಾರಿಕೆಗಳ ತ್ಯಾಜ್ಯ ಮತ್ತು ಮಲಿನಗಳಿಂದ, ಹಾರು ಬೂದಿಯಿಂದ ಮೀನುಗಾರರ ಮತ್ತು ಕೃಷಿಕರ ಬದುಕು ಅಸಹನೀಯವಾಗಿರುವುದು ಪರಿಸರಪರ ಚಳುವಳಿಗಳಿಗೆ ಕಾರಣವಾಗಿರುವುದನ್ನು ಗಮನಿಸಬಹುದು. ಬಂದಂತಹ ಬೃಹತ್ ಕೈಗಾರಿಕೆಗಳಿಂದ ಸ್ಥಳೀಯ ಸಂತ್ರಸ್ತರಿಗೆ ಯಾವುದೇ ರೀತಿಯ ಹೆಚ್ಚಿನ ಲಾಭವಾಗದೇ ಇರುವುದು ಮತ್ತು ಕೈಗಾರಿಕೆಗಳ ಲಾಭ ಬಂಡವಾಳಶಾಹಿಗಳಿಗೆ ಹಾಗೂ ಮೇಲ್ವರ್ಗದ ಜನರಿಗೆ ಮಾತ್ರ ಸೀಮಿತವಾಗಿರುವುದು ಈ ಜಿಲ್ಲೆಗಳಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ವಿರೋಧ ವ್ಯಕ್ತವಾಗುವುದಕ್ಕೆ ಮುಖ್ಯ ಕಾರಣವಾಗಿರುತ್ತದೆ ಎಂಬ ಫಲಿತವನ್ನು ಸಂಶೋಧಕರು ಕಂಡುಕೊಂಡಿರುವುದನ್ನು ಗಮನಿಸಬಹುದು.

ಚಂದ್ರ ಪೂಜಾರಿಯವರು ತಮ್ಮ ಸಂಶೋಧನಾ ಗ್ರಂಥವಾದ 'ಟ್ರೆಂಡ್ಸ್ ಇನ್ ಎಂಟರ್‌ಪ್ರೆನ್ಯೂರ್‌ಶಿಪ್ ಎಂಡ್ ರೀಜನಲ್ ಡೆವಲಪ್‌ಮೆಂಟ್- ಎ ಸ್ಟಡಿ ವಿದ್ ರೆಫರೆನ್ಸ್ ಟು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್'ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಗೆಗೆ ಹಾಗೂ ಇಲ್ಲಿನ ಜನಜೀವನ, ಮುಖ್ಯ ಕಸುಬು ಹಾಗೂ ಬೆಳವಣಿಗೆಯ ಬಗೆಗೆ ವಿವರವಾದ ಬೆಳಕನ್ನು ಚೆಲ್ಲುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೀಕರಣ ಪ್ರಕ್ರಿಯೆ ಎಂಬುದು ಪ್ರಥಮವಾಗಿ ಬಾಸೆಲ್ ಮಿಷನರೀಸ್‌ಗಳಿಂದ 'ಕ್ಯಾಥಲಿಕ್ ಆಗಿ ಮತಾಂತರಗೊಂಡ ಜನರು ತಮ್ಮ ಸಾಂಪ್ರದಾಯಿಕ ಉದ್ಯೋಗಗಳನ್ನು ಕಳೆದುಕೊಂಡಾಗ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವುದಕ್ಕಾಗಿ ಆರಂಭವಾದ ಪ್ರಕ್ರಿಯೆ'[100] ಎಂದು ಉಲ್ಲೇಖಿಸಿ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಅನುಕರಿಸುವುದರ ಮೂಲಕ ಅಭಿವೃದ್ಧಿ ಹೊಂದದ ರಾಷ್ಟ್ರಗಳು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬ ಅವಲಂಬನಾ ಸಿದ್ಧಾಂತದ ಪ್ರತಿಪಾದಕರ ವಾದವನ್ನು ಲೇಖಕರು ಉಲ್ಲೇಖಿಸುತ್ತಾರೆ. ಪಾಶ್ಚಿಮಾತ್ಯ ಮಾದರಿಯನ್ನು ಅನುಕರಿಸುವುದರಿಂದ ಅಲ್ಪಮಟ್ಟದ ಅಭಿವೃದ್ಧಿ ಸಾಧ್ಯವಾದರೂ, ಇದರಿಂದಾಗಿ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ಸಾಧ್ಯವಾಗುವುದಿಲ್ಲ. ಬಂಡವಾಳಶಾಹಿ ಧೋರಣೆಯು ಅಭಿವೃದ್ಧಿ ಹೊಂದುತ್ತಿರುವ ದೇಶದ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯ ಮೇಲೆ ಬೀರುವ ಪರಿಣಾಮ ಮೊದಲಿನ ವ್ಯವಸ್ಥೆಗಿಂತ ಭಿನ್ನವಾಗಿರುತ್ತದೆ[101] ಎಂಬುದಾಗಿ ಅಭಿಪ್ರಾಯಪಟ್ಟು, 'ಅಭಿವೃದ್ಧಿ ಪ್ರಕ್ರಿಯೆಯಲ್ಲಿ ರಾಷ್ಟ್ರದ ಭಾಗವಹಿಸುವಿಕೆ ಹೊಸ ವಿಚಾರವಲ್ಲ. ದ್ವಿತೀಯ ಮಹಾಯುದ್ಧದ ನಂತರ ಉದಾರೀಕರಣ ನೀತಿಯಿಂದಾಗಿ ಯುರೋಪಿನ ರಾಷ್ಟ್ರಗಳಲ್ಲಿ ಇದು ವೇಗವನ್ನು ಪಡೆಯಿತು. ಇದಕ್ಕೆ ಯುರೋಪಿನ ರಾಷ್ಟ್ರಗಳಿಗೆ ರಷ್ಯಾದ ಕೇಂದ್ರೀಕೃತ ಯೋಜನಾ ವ್ಯವಸ್ಥೆ ಸ್ಫೂರ್ತಿಯಾಗಿತ್ತು. ಆದುದರಿಂದ ಅಭಿವೃದ್ಧಿ ಚಟುವಟಿಕೆಗಳಲ್ಲಿ ರಾಷ್ಟ್ರಗಳ ಸಕ್ರಿಯ ಭಾಗವಹಿಸುವಿಕೆ ಸ್ವೀಕಾರಾರ್ಹ'[102] ಎಂದು ಹೇಳಿದ್ದಾರೆ.

ಮೋಹನ ಕೃಷ್ಣ ರೈ ಅವರು ತಮ್ಮ 'ಪರಿಸರದ ಚಳುವಳಿಗಳು' ಗ್ರಂಥದಲ್ಲಿ ಅಭಿವೃದ್ಧಿ ಯೋಜನೆಗಳು ಅತ್ಯಂತ ಸಂಕೀರ್ಣ ಪ್ರದೇಶವಾದ ಪಶ್ಚಿಮ ಕರಾವಳಿಯಲ್ಲಿ ಯಾವ ರೀತಿಯ ಪರಿಣಾಮವನ್ನು ಬೀರಿರುತ್ತದೆ ಎಂಬುದಾಗಿ ವಿವರಿಸುತ್ತಾರೆ. ಕೊಂಕಣ ರೈಲ್ವೇ ಯೋಜನೆ ಪಶ್ಚಿಮ ಕರಾವಳಿಯ ಸುಮಾರು 4,850 ಹೆಕ್ಟೇರ್ ಭೂಮಿಯನ್ನು ಆವರಿಸಿಕೊಂಡಿದೆ. ಮಹತ್ವಾಕಾಂಕ್ಷೆಯ ಈ ಯೋಜನೆಗಾಗಿ ಸುಮಾರು 44,000 ಕುಟುಂಬಗಳು ತಮ್ಮ ಮನೆಮಾರು ಕಳೆದುಕೊಂಡಿವೆ.[103] ನಿರ್ವಸಿತರಾದ ಜನರಿಗೆ ಪರಿಹಾರ ಸಂಪೂರ್ಣವಾಗಿ ಇನ್ನೂ ದೊರೆತಿಲ್ಲ. ಯೋಜನೆ ಪೂರ್ಣವಾದರೂ ಮೊದಲೇ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಸಿಗಬೇಕಾದ ಹಣ ಮತ್ತು ಉದ್ಯೋಗ ಸಾವಿರಾರು ಕುಟುಂಬಗಳಿಗೆ ಇನ್ನೂ ಸಿಕ್ಕಿಲ್ಲ. ಪರಿಸರವಾದಿ ಸಂಘಟನೆಗಳ ಪ್ರಕಾರ ಕೊಂಕಣ ರೈಲ್ವೇ ಯೋಜನೆ ತನ್ನ ಹಳಿಗಳನ್ನು ಭದ್ರಪಡಿಸಿಕೊಂಡು ಅಲ್ಲಿನ ಜನರ ಬದುಕಿನ ಹಳಿಗಳನ್ನು ಅಸ್ತವ್ಯಸ್ತಗೊಳಿಸಿದೆ. ಕೇರಳ ಹಾಗೂ ತಮಿಳುನಾಡಿನವರಿಗೆ ಹೆಚ್ಚಿನ ಉದ್ಯೋಗಗಳು ದೊರೆತಿವೆ ಎನ್ನುವ

ದೂರೂ ಕೇಳಿಬರುತ್ತಿದೆ. ಕೊಂಕಣ ರೈಲು ಯೋಜನೆಯಿಂದಾಗಿ ಅಪಾರ ಪರಿಸರ ನಾಶವಾಗಿರುವುದಂತೂ ನಿಜ. ಆದರೆ ಇದನ್ನು ದೇಶದ ಅಭಿವೃದ್ಧಿಗಾಗಿ ಆದ ಪರಿವರ್ತನೆ ಎಂಬ ಹೊಸ ಹೆಸರಿನಿಂದ ಕರೆದು, ಸರಕಾರ ಮತ್ತು ಅಧಿಕಾರಿಗಳು ಸಮರ್ಥಿಸಿದ್ದಾರೆ. ಕೊಂಕಣ ರೈಲ್ವೆ ಯೋಜನೆಗೆ ನೀಡಿದಷ್ಟೇ ಪ್ರಾಮುಖ್ಯತೆಯನ್ನು ಅದರಿಂದಾಗಿ ಬರಬಹುದಾದ ಸಮಸ್ಯೆಗಳಿಗೆ ಮೊದಲೇ ನೀಡಿದ್ದರೆ ಇದೊಂದು ಯಶಸ್ವಿ ಯೋಜನೆ ಆಗಿರುತ್ತಿತ್ತು. ಇಲಾಖೆಯ ವರದಿಗಳ ಪ್ರಕಾರ, ಪರಿಹಾರವನ್ನು ನೀಡಲಾಗಿರುತ್ತದೆ ಮತ್ತು ಪುನರ್‌ವಸತಿಯನ್ನು ಕಲ್ಪಿಸಲಾಗಿರುತ್ತದೆ. ಯೋಜನೆಯ ಕಾಮಗಾರಿ ನಡೆದ ಪ್ರದೇಶಗಳಿಗೆ ಭೇಟಿ ನೀಡಿದಾಗ ಸಿಗುವ ಚಿತ್ರಣವೇ ಬೇರೆ. ಈ ಕಾರಣಗಳಿಂದಾಗಿ ಯೋಜನೆ ಪೂರ್ಣಗೊಂಡಿದ್ದರೂ, ಅನೇಕ ವಿಚಾರಗಳಲ್ಲಿ ಇನ್ನೂ ಅಪೂರ್ಣವಾಗಿಯೇ ಉಳಿದಿದೆ. ಯೋಜನೆಯ ಕಾಮಗಾರಿಯನ್ನು ದಾಖಲೆಯ ಸಮಯದಲ್ಲಿ ಪೂರ್ಣಗೊಳಿಸಿದ ಅಧಿಕಾರಿಗಳು ಪರಿಸರ ರಕ್ಷಣೆ ಮತ್ತು ಪುನರ್‌ವಸತಿಗೂ ಅಷ್ಟೆ ಪ್ರಾಮುಖ್ಯತೆಯನ್ನು ನೀಡಿದ್ದರೆ, ಯೋಜನೆ ಹೆಚ್ಚು ಚರ್ಚೆಯ ವಸ್ತುವಾಗುತ್ತಿರಲಿಲ್ಲ[104] ಎಂಬುದಾಗಿ ಮೂಲಭೂತ ಪ್ರಶ್ನೆಗಳನ್ನು ಎತ್ತಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸ್ಥಾಪನೆಯಾದ ಇನ್ನೂರನೇ ವರ್ಷದ ನೆನಪಿಗಾಗಿ ಜಿಲ್ಲಾಡಳಿತ 'ಕೆನರಾ 200' ಎಂಬ ಗ್ರಂಥವನ್ನು ಹೊರತಂದಿರುತ್ತದೆ. ಈ ಗ್ರಂಥದಲ್ಲಿ ಹಲವಾರು ವಿದ್ವಾಂಸರು ದಕ್ಷಿಣ ಕನ್ನಡ ಜಿಲ್ಲೆಯ ಬಗೆಗಿನ ಸಂಶೋಧನಾ ಲೇಖನವನ್ನು ಪ್ರಕಟಿಸಿರುತ್ತಾರೆ. ಫಿಯೂಸ್ ಫಿಡ್ಲೆಸ್ ಪಿಂಟೋ ಅವರು 'ಲ್ಯಾಂಡ್ ಸಿಸ್ಟಮ್ – ಎನ್ ಓವರ್ ವ್ಯೂ' ಲೇಖನದಲ್ಲಿ ಹಿಂದೆ ಈ ಪ್ರದೇಶ ರಾಜರುಗಳ ಆಳ್ವಿಕೆಗೆ ಒಳಪಟ್ಟ ಭೂಪ್ರದೇಶವಾಗಿದ್ದು, ಸಾವಿರದ ಎಂಟುನೂರನೇ ಇಸವಿಗೆ ಬ್ರಿಟೀಷ್ ಆಡಳಿತದ ಭಾಗವಾಗಿ ಮಾರ್ಪಾಟಾಗುತ್ತದೆ. ಈ ಪ್ರದೇಶದಲ್ಲಿ ಅಸ್ತಿತ್ವದಲ್ಲಿದ್ದ ಭೂಮಿಗೆ ಸಂಬಂಧಪಟ್ಟ ಕಾನೂನುಗಳು, ಭೂಮಾಲಿಕರು ಮತ್ತು ಗೇಣಿದಾರರ ನಡುವೆ ಇದ್ದಂತಹ ಸಂಬಂಧಗಳ[105] ಬಗ್ಗೆ ವಿವರಿಸಿರುತ್ತಾರೆ.

ಪ್ರಭಾಕರ ಶಿಶಿಲ ಅವರು ತಮ್ಮ ಲೇಖನ 'ಪ್ರಾಬ್ಲಮ್ಸ್ ಆಫ್ ಇಂಡಸ್ಟ್ರಿಯಲೈಸೇಶನ್'ನಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಭೌಗೋಳಿಕ ಲಕ್ಷಣಗಳು, ಮುಖ್ಯ ಕಸುಬು, ಹರಿಯುವ ನದಿಗಳು, ಇಲ್ಲಿರುವ ಅತ್ಯಮೂಲ್ಯ ಸಸ್ಯ ಸಂಪತ್ತಿನ ಬಗೆಗೆ ಅಂಕಿ ಅಂಶಗಳನ್ನು ಒದಗಿಸಿ, ಈ ಪ್ರದೇಶ ಭೌಗೋಳಿಕ ಹಾಗೂ ಜೈವಿಕವಾಗಿ ಯಾವ ರೀತಿಯಲ್ಲಿ ಕರ್ನಾಟಕದ ಪ್ರಮುಖ ಪ್ರದೇಶಗಳಿಗಿಂತ ಭಿನ್ನವಾಗಿರುತ್ತದೆ ಎಂಬುದನ್ನು ವಿವರಿಸುತ್ತಾರೆ. ಜಿಲ್ಲೆಯ ಸಾಂಪ್ರದಾಯಿಕ ಉದ್ಯೋಗಗಳು ಕೃಷಿ ಮತ್ತು ಮೀನುಗಾರಿಕೆಗೆ ಸಂಬಂಧಪಟ್ಟದ್ದಾಗಿದ್ದು, 1976ರಲ್ಲಿ ನವಮಂಗಳೂರು ಬಂದರಿನ ಉದ್ಘಾಟನೆಯ ನಂತರ ಜಿಲ್ಲೆಯ ಸಾಂಪ್ರದಾಯಿಕ ಕೈಗಾರಿಕೆಗಳು ಕಣ್ಮರೆಯಾಗಲಾರಂಭಿಸಿ, ಬೃಹತ್ ಕೈಗಾರಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿ ಆರಂಭಿಸಲ್ಪಟ್ಟಿತ್ತು[106] ಎಂದು ವಿವರಿಸುತ್ತಾರೆ. ಈ ಪ್ರದೇಶದಲ್ಲಿ ಬೃಹತ್ ಕೈಗಾರಿಕೆಗಳು ಆರಂಭವಾಗಿರುವುದು ಮುಂದೆ ಹಲವಾರು ಸಮಸ್ಯೆಗಳಿಗೆ

ಕಾರಣವಾಗಬಹುದು ಎಂದಿದ್ದಾರೆ. ಅವುಗಳಲ್ಲಿ ಮುಖ್ಯವಾದದ್ದು ಸಮರ್ಪಕ ಸಾರಿಗೆ ವ್ಯವಸ್ಥೆ ಇಲ್ಲದೆ ಇರುವುದು, ನೀರಿನ ಅಭಾವ, ಕೈಗಾರಿಕೆಗಳ ತ್ಯಾಜ್ಯ ವಿಲೇವಾರಿಯ ಸಮಸ್ಯೆ, ಮೀನಿನ ಬರಗಾಲ ಹಾಗೂ ನೀರು ಕಲುಷಿತವಾಗುವ ಅಪಾಯಗಳಿವೆ[107] ಎಂದು ಉಲ್ಲೇಖಿಸಿರುತ್ತಾರೆ. ಬಂದಂತಹ ಬೃಹತ್ ಉದ್ದಿಮೆಗಳು ಸ್ಥಳೀಯರಿಗೆ ನಿರೀಕ್ಷಿತ ಪ್ರಮಾಣದ ಉದ್ಯೋಗವನ್ನು ಸೃಷ್ಟಿಸುವುದರಲ್ಲಿಯೂ ವಿಫಲವಾಗಿರುತ್ತದೆ ಎಂಬ ಅಂಶಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟು ವಿವರಿಸಿರುತ್ತಾರೆ.

ಕೇಶವ ಉಚ್ಚಿಲರವರು 'ಪೊಲಿ' ಗ್ರಂಥದಲ್ಲಿ ಪ್ರಕಟವಾಗಿರುವ ತಮ್ಮ ಲೇಖನದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ, ಕೈಗಾರಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ. 20ನೇ ಶತಮಾನದ ಆರಂಭದಲ್ಲಿ ದಕ್ಷಿಣ ಕನ್ನಡದ ವ್ಯಾಪ್ತಿ ಇಂದಿಗಿಂತ ವಿಸ್ತಾರವಾಗಿತ್ತು ಎಂದಿರುವ ಲೇಖಕರು, 1956ರಲ್ಲಿ ರಾಜ್ಯಗಳ ಪುನರ್-ವಿಂಗಡಣೆಯಾದಾಗ ಕಾಸರಗೋಡು ಕೇರಳಕ್ಕೆ ಸೇರ್ಪಡೆಗೊಂಡಿತು ಹಾಗೂ 1997ರಲ್ಲಿ ಜಿಲ್ಲೆಯೇ ವಿಭಜಿತವಾಗಿ, ಕಾರ್ಕಳ, ಉಡುಪಿ, ಕುಂದಾಪುರಗಳನ್ನೊಳಗೊಂಡ ಉಡುಪಿ ಜಿಲ್ಲೆ ಪ್ರತ್ಯೇಕವಾಗಿ ಉದಯವಾಯಿತು ಎಂದಿದ್ದಾರೆ. ಜಿಲ್ಲೆಯ ಪಾರಂಪರಿಕ ಕಸುಬುಗಳಲ್ಲಿ ಬೇಸಾಯ ಅತ್ಯಂತ ಪ್ರಮುಖವಾದದ್ದು. ಮೀನುಗಾರಿಕೆ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪ್ರಮುಖ ವೃತ್ತಿಯಾಗಿದೆ. ತಾಳೆಯ ಮರದಿಂದ ಹೆಂಡವನ್ನು ಇಳಿಸುವುದು, ನೇಕಾರಿಕೆ, ಬಡಗಿ ಹಾಗೂ ಕಮ್ಮಾರಿಕೆ ಜಿಲ್ಲೆಯಲ್ಲಿ ಹಿಂದೆ ಮಹತ್ವವನ್ನು ಪಡೆದುಕೊಂಡಿದ್ದವು. ಬೆಳ್ಳಿ ಬಂಗಾರಗಳನ್ನು ತಯಾರಿಸುವ ಅಕ್ಕಸಾಲಿಗರ ವೃತ್ತಿಯೂ ಜಿಲ್ಲೆಯಲ್ಲಿ ಹಿಂದಿನಿಂದಲೂ ವೈಶಿಷ್ಟಪೂರ್ಣವಾಗಿ ಬೆಳೆದು ಬಂದಿರುವ ವೃತ್ತಿಯಾಗಿತ್ತು[108] ಎಂದಿದ್ದಾರೆ. ಬಾಸೆಲ್ ಮಿಷನ್ನಿನವರು ದಕ್ಷಿಣ ಕನ್ನಡದ ಜನರಿಗೆ ಉದ್ಯಮಶೀಲತೆಯನ್ನು ಬೆಳೆಸಲು ಕಾರಣವಾದವರು. ಅವರು ಸ್ಥಾಪಿಸಿದ ಕಬ್ಬಿಣದ ಕಾರ್ಖಾನೆ, ಮುದ್ರಣಾಲಯ, ಹಂಚಿನ ಕಾರ್ಖಾನೆ, ಗೇರುಬೀಜದ ಕಾರ್ಖಾನೆ, ಒಳಉಡುಪು ಹಾಗೂ ಕೈಮಗ್ಗದ ಕಾರ್ಖಾನೆ ಸಾವಿರಾರು ಜನರಿಗೆ ನೇರ ಉದ್ಯೋಗವನ್ನು ಕಲ್ಪಿಸಿಕೊಟ್ಟದ್ದು ಮಾತ್ರವಲ್ಲದೆ, ಇಲ್ಲಿನ ತರಬೇತಿಯಿಂದ ಇತರೆಡೆ ಸ್ವಂತ ಉದ್ಯಮಗಳನ್ನು ಸ್ಥಾಪಿಸಿಕೊಳ್ಳಲು ಕಾರಣವಾಯಿತು ಎಂದ ಲೇಖಕರು, ಇಪ್ಪತ್ತೊಂದನೇ ಶತಮಾನದ ದಕ್ಷಿಣ ಕನ್ನಡದ ಚಿತ್ರವನ್ನು ವಿವರಿಸುತ್ತಾ ಶಿಕ್ಷಣ, ವ್ಯಾಪಾರ, ಉದ್ಯಮ, ಸಂಪರ್ಕ ಎಲ್ಲಾ ರಂಗಗಳಲ್ಲಿಯೂ ಜಿಲ್ಲೆ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಬೃಹತ್ ಉದ್ಯಮಗಳು ಜಿಲ್ಲೆಯನ್ನು ಪ್ರವೇಶಿಸಿವೆ ಹಾಗೂ ಪ್ರವೇಶಿಸುವ ಹಂತದಲ್ಲಿದೆ. ದೇಶದ ಪ್ರಮುಖ ಸರ್ವಋತು ಬಂದರುಗಳಲ್ಲೊಂದಾದ ನವಮಂಗಳೂರು ಬಂದರು ನಿರ್ಮಾಣದ ಬೆನ್ನಲ್ಲೇ, ಬೃಹತ್ ಕೈಗಾರಿಕೆಗಳು ಈ ಪ್ರದೇಶದಲ್ಲಿ ನೆಲೆಕಾಣಲು ಆರಂಭವಾಗುತ್ತಿದ್ದಂತೆ, ಅದರಿಂದ ಪರಿಸರದ ಮೇಲಾಗುವ ದುಷ್ಪರಿಣಾಮಗಳನ್ನು ವಿರೋಧಿಸಿ ಪರಿಸರಪರ ಚಳುವಳಿಗಳು ಹುಟ್ಟಿಕೊಂಡಿತು. ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರದ ಮೇಲೆ ಈ ಕೈಗಾರಿಕೆಗಳು ಯಾವ ರೀತಿಯ ಕೆಟ್ಟ ಪರಿಣಾಮವನ್ನು ಬೀರುತ್ತದೆ ಎಂಬ ಭಯವನ್ನು[109] ಸೂಕ್ಷ್ಮವಾಗಿ ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿರುತ್ತಾರೆ.

ರಮೇಶ್ ಮಂಗಲೇಕರ್ ಅವರು ಗೋವಾ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ತಮ್ಮ ಸಂಶೋಧನಾ ಪ್ರಬಂಧವಾದ 'ಅಭಿವೃದ್ಧಿ – ಸ್ಥಳಾಂತರ ಮತ್ತು ಪುನರ್‌ವಸತಿ, ಉತ್ತರ ಕನ್ನಡ ಜಿಲ್ಲೆಯ ಸೀಬರ್ಡ್ ನೌಕಾನೆಲೆಯ ಅಧ್ಯಯನ'ದಲ್ಲಿ ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟ ಹಲವಾರು ಅಂಶಗಳ ಮೇಲೆ ಬೆಳಕು ಚೆಲ್ಲುತ್ತಾರೆ. ಅಭಿವೃದ್ಧಿಯ ಯೋಜನೆಗಳಿಗಾಗಿ ಜನರು ತಮ್ಮ ಭೂಮಿ ಹಾಗೂ ಎಲ್ಲವನ್ನು ತ್ಯಾಗ ಮಾಡಿರುತ್ತಾರೆ. ಆದುದರಿಂದ ಅಭಿವೃದ್ಧಿಯ ಫಲ ಹಾಗೂ ಲಾಭವನ್ನು ಪಡೆಯುವುದು ಸಂತ್ರಸ್ತರ ಪ್ರಮುಖ ಹಕ್ಕಾಗಿರುತ್ತದೆ. ಇಂತಹ ಯೋಜನೆಗಳು ಸಂತ್ರಸ್ತರ ಸೀಮಾಂತೀಕರಣಕ್ಕೆ ಹಾಗೂ ಬವಣೆಗಳಿಗೆ ಕಾರಣವಾಗಬಾರದು ಎಂದು ಪ್ರತಿಪಾದಿಸಿದ ಸಂಶೋಧಕರು, ಸಾಮಾಜಿಕ ವಿಜ್ಞಾನಿಗಳಿಗೆ ಅಭಿವೃದ್ಧಿ ಯೋಜನೆಗಳ ಸಹವರ್ತಿಯಾಗಿರುವ ಭೂಸಂತ್ರಸ್ತರ ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಸ್ಥಿತ್ಯಂತರವನ್ನು ಅಧ್ಯಯನ ಮಾಡುವುದು ದೊಡ್ಡ ಸವಾಲಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಉತ್ತರ ಕನ್ನಡದ ಕರಾವಳಿ ಪ್ರದೇಶದ ಸ್ಥಳೀಯ ಜನರನ್ನು ಸೀಬರ್ಡ್ ನೌಕಾನೆಲೆಯ ಸ್ಥಾಪನೆಗೋಸ್ಕರ ತಮ್ಮ ಭೂಮಿಯಿಂದ ಬೇರ್ಪಡಿಸಿರುವುದು ಹಾಗೂ ಬಲಿಷ್ಠ ನೌಕಾನೆಲೆಯನ್ನು ರಾಷ್ಟ್ರದ ರಕ್ಷಣೆಯ ಕಾರಣದಿಂದ ನಿರ್ಮಿಸಿರುವುದು ವ್ಯೂಹಾತ್ಮಕವಾಗಿ ರಾಷ್ಟ್ರಕ್ಕೆ ಲಾಭ ತಂದಿದ್ದರೂ, ಸ್ಥಳೀಯ ಜನರಿಗೆ ವಿಶೇಷವಾಗಿ ಭೂಸಂತ್ರಸ್ತರಿಗೆ ಭರಿಸಲಾಗದ ನಷ್ಟ ತಂದಿರುತ್ತದೆ.[110] ಅಭಿವೃದ್ಧಿಯ ಪ್ರಯತ್ನ ರಾಷ್ಟ್ರೀಯ ಲಾಭ ಮತ್ತು ಸ್ಥಳೀಯ ಜನರ ನಷ್ಟದ ಬಗೆಗೆ ಒಂದು ಚರ್ಚೆಯನ್ನು ಹುಟ್ಟು ಹಾಕುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಉತ್ತರ ಕನ್ನಡದಲ್ಲಿ ಕರಾವಳಿ ಪ್ರದೇಶ ಸುಮಾರು ಎಪ್ಪತ್ತಾರು ಮೈಲುಗಳುದ್ದಕ್ಕೆ ಚಾಚಿದ್ದು, ಸೀಬರ್ಡ್ ನೌಕಾನೆಲೆಯ ಸ್ಥಾಪನೆಗೋಸ್ಕರ ಕಾರವಾರದಿಂದ ಅಂಕೋಲದವರೆಗಿನ ಮೂವತ್ತೆರಡು ಕಿ.ಮೀ. ಭೂಪ್ರದೇಶವನ್ನು ಸ್ವಾಧೀನಪಡಿಸಲಾಗಿತ್ತು. ಈ ಯೋಜನೆಯಿಂದ ಸುಮಾರು ಹದಿಮೂರು ಗ್ರಾಮಗಳ ಒಟ್ಟು 4,444 ಕುಟುಂಬಗಳು ತಮ್ಮ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿದ್ದು, ಅವರಿಗೆ ಒಂಬತ್ತು ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಲಾಗಿತ್ತು. ಭೂಸ್ವಾಧೀನಕ್ಕಿಂತ ಮೊದಲು ಯಾವುದೇ ಮೂಲಭೂತ ಅವಶ್ಯಕತೆಗಳನ್ನು ಹೊಂದಿರದ ಅಲ್ಲಿನ ನಿವಾಸಿಗಳಿಗೆ, ಪುನರ್‌ವಸತಿ ಕಾಲನಿಗಳಲ್ಲಿ ಉತ್ತಮ ಮಟ್ಟದ ಮೂಲಭೂತ ಸೌಕರ್ಯಗಳಾದ ರಸ್ತೆ, ವಿದ್ಯುತ್, ಸಮುದಾಯಭವನ, ಶಾಲೆ, ಆರೋಗ್ಯ ಕೇಂದ್ರ, ಮಾರುಕಟ್ಟೆ ಪ್ರಾಂಗಣ, ಪೂಜಾಸ್ಥಳಗಳನ್ನು ಒದಗಿಸಲಾಗಿದ್ದರೂ, ಅವುಗಳ ನಿರ್ವಹಣೆ ಸರಿಯಾಗಿರಲಿಲ್ಲ. ಸಂತ್ರಸ್ತರ ಬದುಕು ಸ್ಥಳಾಂತರಕ್ಕಿಂತ ಮೊದಲು ಉತ್ತಮವಾಗಿತ್ತು. ಪೂರ್ವಪರಿಸ್ಥಿತಿಯಲ್ಲಿ ಸಂತ್ರಸ್ತರು ಪರಿಸರಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ಸಾಮಾನ್ಯ ಜನಜೀವನವನ್ನು ನಡೆಸುತ್ತಿದ್ದರು. ಆದರೆ ಹೊಸ ನೆಲೆಗಳಲ್ಲಿ ಜನಜೀವನ ಸ್ವಾಭಾವಿಕವಾಗಿರಲಿಲ್ಲ. ಪುನರ್‌ವಸತಿ ಚಟುವಟಿಕೆಗಳಲ್ಲಿ ತೊಡಗಿಕೊಂಡ ಅಧಿಕಾರಿಗಳು ಸ್ಥಳಾಂತರಿಸಲ್ಪಟ್ಟ ಸಂತ್ರಸ್ತರಿಗೆ ತಮ್ಮ ಹಿಂದಿನ ಜೀವನ

ಶೈಲಿಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ಪೂರಕ ವಾತಾವರಣವನ್ನು ಕಲ್ಪಿಸಲಿಲ್ಲ[111] ಎಂದು ವಿವರಿಸಿರುತ್ತಾರೆ.

ಸ್ಥಳಾಂತರ ಪ್ರಕ್ರಿಯೆ ಪ್ರಮುಖವಾಗಿ ಎರಡು ರೀತಿಯ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಮುಖ್ಯವಾಗಿ ಸಂತ್ರಸ್ತರನ್ನು ತಮ್ಮ ಮೂಲನೆಲೆಯಿಂದ ಮುಂದಿನ ಜೀವನಕ್ಕೋಸ್ಕರ ಅಪರಿಚಿತ ಪ್ರದೇಶಕ್ಕೆ ಸ್ಥಳಾಂತರಿಸುತ್ತದೆ ಹಾಗೂ ಸಾಂಪ್ರದಾಯಿಕ ಉದ್ಯೋಗಗಳಲ್ಲಿ ತೊಡಗಿಸಿಕೊಂಡವರು ವಿಶೇಷವಾಗಿ ಕೃಷಿ ಕಾರ್ಮಿಕರು, ಕುಶಲ ಕರ್ಮಿಗಳು, ಕುಂಬಾರರು ಮತ್ತು ಇತರರನ್ನು ತಾವು ವಾಸಿಸುತ್ತಿದ್ದ ಪ್ರದೇಶದ ಭೂಮಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ವಾಧೀನಪಡಿಸಿಕೊಂಡಾಗ ತಮ್ಮ ಮೂಲವೃತ್ತಿಯನ್ನು ಇನ್ನೊಂದು ಪ್ರದೇಶದಲ್ಲಿ ಮುಂದುವರಿಸಲು ಆಗದೆ ಅತಂತ್ರವಾಗುವ ಪರಿಸ್ಥಿತಿಯನ್ನು ನಿರ್ಮಿಸುತ್ತದೆ.

ಸಾಹಿತ್ಯ ಪರಾಮರ್ಶನವನ್ನು ಮಾಡಿದ ಹೆಚ್ಚಿನ ಅಧ್ಯಯನಗಳು ಖಚಿತಪಡಿಸುವ ಪ್ರಮುಖ ಫಲಿತವೇನೆಂದರೆ ಅಭಿವೃದ್ಧಿ ಪ್ರೇರಿತ ಯೋಜನೆಗಳು ಹೆಚ್ಚು ನಷ್ಟಗಳನ್ನೇ ತಂದಿರುತ್ತದೆ ಹಾಗೂ ಸ್ಥಳೀಯ ಸಂತ್ರಸ್ತರಿಗೆ ತುಂಬಲಾರದಂತಹ ಹಾನಿಯನ್ನು ಉಂಟು ಮಾಡುತ್ತದೆ. ಹೆಚ್ಚಿನ ಅಧ್ಯಯನಗಳು ಅನುಷಂಗಿಕ ಮಾಹಿತಿಯ ಆಧಾರದಲ್ಲಿ ಕೆಲವೇ ಮಾನದಂಡಗಳಿಟ್ಟುಕೊಂಡು ಸಮಸ್ಯೆಗಳ ವಿಶ್ಲೇಷಣೆಯನ್ನು ಮಾಡಿರುವುದು ಕಂಡುಬರುತ್ತದೆ. ಇದರಿಂದಾಗಿ ಹೆಚ್ಚಿನ ಮಾನದಂಡಗಳನ್ನಿಟ್ಟುಕೊಂಡು ಯೋಜನೆಯ ಸಂತ್ರಸ್ತರುಗಳಿಂದ ಸಂಗ್ರಹಿಸಿದ ಪ್ರಾಥಮಿಕ ಮಾಹಿತಿಯನ್ನು ಅವಲಂಬಿಸಿ ವ್ಯವಸ್ಥಿತ ಅಧ್ಯಯನವನ್ನು ಮಾಡುವ ಅನಿವಾರ್ಯತೆ ಇರುತ್ತದೆ. ಈ ಚೌಕಟ್ಟಿನಲ್ಲಿ ಅತ್ಯಂತ ಸಂಕೀರ್ಣ ಪ್ರದೇಶವಾದ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಬೃಹತ್ ಕೈಗಾರಿಕೆಗಳು ಸ್ಥಾಪನೆಯಾಗುತ್ತಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯವನ್ನು ಕೇಂದ್ರೀಕರಿಸಿ ಸಂತ್ರಸ್ತರುಗಳು ಅನುಭವಿಸಿದ ತೊಂದರೆಗಳು ಹಾಗೂ ಲಾಭಗಳನ್ನು ಗಮನದಲ್ಲಿರಿಸಿ, ಇಂದು ಬೃಹತ್ ಕೈಗಾರಿಕೆಗಳ ಆರಂಭದಿಂದಾಗಿ ಉಂಟಾಗುತ್ತಿರುವ ಸಂತ್ರಸ್ತರ ಸಮಸ್ಯೆಗಳಿಗೆ ಅಧಿಕಾರಿಗಳು ಯಾವ ರೀತಿಯಲ್ಲಿ ಸ್ಪಂದಿಸಿರುತ್ತಾರೆ ಎಂಬುದಾಗಿ ವಿವೇಚಿಸುವುದು ಹಾಗೂ ಸಂತ್ರಸ್ತರು ಸಂತೃಪ್ತರಾಗಿದ್ದಾರೆಯೇ ಎಂಬುದನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಸಮಗ್ರವಾಗಿ ವಿಶ್ಲೇಷಿಸಲು ಪ್ರಯತ್ನಿಸಲಾಗಿರುತ್ತದೆ.

1.4 ಅಭಿವೃದ್ಧಿ ಮತ್ತು ಸ್ಥಳಾಂತರದ ಬಗೆಗಿನ ಸೈದ್ಧಾಂತಿಕ ಮತ್ತು ತಾತ್ವಿಕ ಚೌಕಟ್ಟು

ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿ ಎಂಬ ಪ್ರಕ್ರಿಯೆಯು ಜಗತ್ತಿನಾದ್ಯಂತ ಸಮಾಜವಿಜ್ಞಾನಿಗಳ ಗಮನವನ್ನು ಹೆಚ್ಚು ಸೆಳೆದಂತಹ ವಿಷಯ. ಸ್ಥಳಾಂತರ ಮತ್ತು ಪುನರ್‌ವಸತಿಗಳ ಬಗ್ಗೆ ವಿವಿಧ ಆಯಾಮಗಳಿಂದ ವೈಜ್ಞಾನಿಕ ಅಧ್ಯಯನಗಳು ಬಹಳಷ್ಟು ಸಂಖ್ಯೆಯಲ್ಲಿ ನಡೆದಿದ್ದರೂ, ಹೆಚ್ಚಿನ ಅಧ್ಯಯನಗಳ ಫಲಿತಗಳು ಸಮಾನವಾಗಿರುವುದನ್ನು ನಾವು ಕಾಣಬಹುದು. ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟಂತೆ

ಜಗತ್ತಿನಲ್ಲಿ ಇಲ್ಲಿಯವರೆಗೆ ನಡೆಸಲ್ಪಟ್ಟ ಹೆಚ್ಚಿನ ಅಧ್ಯಯನಗಳನ್ನು ಅವಲೋಕಿಸಿದಾಗ ಅವುಗಳನ್ನು ನಾಲ್ಕು ರೀತಿಯಲ್ಲಿ ವರ್ಗೀಕರಿಸಬಹುದು.

- ಸ್ಥಳಾಂತರ ಪ್ರಕ್ರಿಯೆಯ ಮುನ್ನ ಸಂತ್ರಸ್ತರಾಗಲಿರುವ ಜನರ ಮಾನಸಿಕ ತಲ್ಲಣಗಳು ಮತ್ತು ಒತ್ತಡಗಳ ಅಧ್ಯಯನ.
- ಸಂತ್ರಸ್ತರಾಗುವ ಹಿಂದಿನ ಮತ್ತು ನಂತರದ ಜೀವನದ ಬಗೆಗಿನ ಅಧ್ಯಯನ.
- ಅಭಿವೃದ್ಧಿ ಪ್ರಕ್ರಿಯೆಯಿಂದ ನೈಸರ್ಗಿಕ ಪರಿಸರದ ಮೇಲೆ ಆಗುವ ಪರಿಣಾಮಗಳು, ವಿಶೇಷವಾಗಿ ಪರಿಸರವಾದಿಗಳಿಂದ ನಡೆಸಲ್ಪಟ್ಟಿರುವ ಅಧ್ಯಯನಗಳು.
- ಸ್ಥಳಾಂತರ ಮತ್ತು ಪುನರ್‌ವಸತಿಯಿಂದ ಸಂತ್ರಸ್ತ ಜನರ ಮೇಲೆ ಶೀಘ್ರಗತಿಯಲ್ಲಿ ಆದಂತಹ ನೇರ ಪರಿಣಾಮಗಳ ಬಗೆಗಿನ ಅಧ್ಯಯನಗಳು.

ಮೈಕಲ್ ಸೆರ್ನ್ನಾರವರು ಜಾಗತಿಕ ಬ್ಯಾಂಕ್‌ಗೋಸ್ಕರ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ಥಳಾಂತರಗೊಂಡ ಸಂತ್ರಸ್ತರ ಬಗೆಗೆ ವಿಸ್ತಾರವಾಗಿ ಅಧ್ಯಯನ ಮಾಡಿದವರು. ಸಂತ್ರಸ್ತರ ಬಗೆಗಿನ ಯೋಜನೆಗಳನ್ನು ರೂಪಿಸುವ ಸಂದರ್ಭದಲ್ಲಿ ಅಭಿವೃದ್ಧಿ ಪ್ರಕ್ರಿಯೆಯಿಂದ ಸ್ಥಳಾಂತರಿಸಲ್ಪಟ್ಟ ಜನರ ಬಗ್ಗೆ ಇತರ ವಿದ್ವಾಂಸರ ಅಧ್ಯಯನವನ್ನು ತುಲನಾತ್ಮಕವಾಗಿ ವಿಮರ್ಶಿಸಿ ಸಂತ್ರಸ್ತರ ಕೆಲವು ಸಮಾನ ಸಮಸ್ಯೆಗಳ[112] ಬಗ್ಗೆ ಕೆಳಗಿನಂತೆ ಪಟ್ಟಿ ಮಾಡಿರುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳು:

- ಸಂತ್ರಸ್ತರ ತಕ್ಷಣದ ತೆರವುಗೊಳಿಸುವಿಕೆಯಿಂದಾಗಿ ಸಂಘಟಿತ ಮತ್ತು ಅಸಂಘಟಿತ ಸಂಸ್ಥೆಗಳು ಸಂಪೂರ್ಣವಾಗಿ ನಾಶವಾಗುವುದು.
- ಉತ್ಪಾದಕರು ಮತ್ತು ಅವುಗಳ ಗ್ರಾಹಕರ ನಡುವಿನ ವ್ಯಾಪಾರ ಸಂಬಂಧದಲ್ಲಿ ಏರುಪೇರಾಗುವುದು ಮತ್ತು ಸ್ಥಳೀಯ ಕಾರ್ಮಿಕರ ಮಾರುಕಟ್ಟೆಯು ಅಸ್ತವ್ಯಸ್ತವಾಗುವುದು.
- ಸಾಂಪ್ರದಾಯಿಕ ವ್ಯವಸ್ಥೆಯಲ್ಲಿದ್ದಂತಹ ನಿರ್ವಹಣೆಯಲ್ಲಿನ ನಾಯಕತ್ವ ಇಲ್ಲವಾಗುವುದು.
- ಸಂತ್ರಸ್ತರಾಗುವುದಕ್ಕಿಂತ ಮೊದಲಿದ್ದ ವ್ಯವಸ್ಥೆಯಲ್ಲಿ ಜನರು ಉಪಯೋಗಿಸುತ್ತಿದ್ದ ಪೂರ್ವಜರ ಸಮಾಧಿಗಳು, ದೇವಾಲಯಗಳು, ನದಿಗಳು ಮತ್ತು ಪೂಜಿಸಲ್ಪಡುತ್ತಿದ್ದ ಸ್ಥಳಗಳು ಹೊಸ ವ್ಯವಸ್ಥೆಯಲ್ಲಿ ಲಭ್ಯವಾಗದಿರುವುದರಿಂದ ಭಾವನಾತ್ಮಕ ಸಂಬಂಧ ಸಂಪೂರ್ಣವಾಗಿ ನಾಶವಾಗುವುದು.

ಮೇಲಿನ ಎಲ್ಲಾ ಕಾರಣಗಳೂ ಒಟ್ಟಾಗಿ ಸಂತ್ರಸ್ತರು ತಮ್ಮ ಪೂರ್ವಸ್ಥಿತಿಗಿಂತ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮತ್ತಷ್ಟು ದುರ್ಬಲರಾಗುತ್ತಾರೆ. ಇದರಿಂದಾಗಿ ಸಮಾಜದಲ್ಲಿ ಕಡೆಗಣಿಸಲ್ಪಡುತ್ತಾರೆ ಹಾಗೂ ಬಡವರಾಗುತ್ತಾರೆ ಎಂಬುದಾಗಿ ಮೈಕೆಲ್ ಸೆರ್ನ್ನಾರವರು ತಮ್ಮ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳಲ್ಲಿ ಉಲ್ಲೇಖಿಸಿರುತ್ತಾರೆ.

ತಲತಲಾಂತರದಿಂದ ವಾಸವಾಗಿದ್ದ ಪ್ರದೇಶದಿಂದ ಒಂದು ಗುಂಪು ಅಥವಾ ಸಮುದಾಯ ಹೊಸತಾದ ಅಥವಾ ಅಪರಿಚಿತವಾದ ಪ್ರದೇಶಕ್ಕೆ ಬಲವಂತದಿಂದ ಮತ್ತು ನಿರ್ದಿಷ್ಟ ಕಾರಣಗಳಿಗೋಸ್ಕರ ತನ್ನ ಮೂಲನೆಲೆಯಲ್ಲಿ ಬದುಕು ಮುಂದುವರಿಸಲು ಸಾಧ್ಯವಾಗದೆ ವರ್ಗಾವಣೆಯಾಗುವ ಪ್ರಕ್ರಿಯೆಯನ್ನು 'ಸ್ಥಳಾಂತರ' ಎಂದು ವ್ಯಾಖ್ಯಾನಿಸಲಾಗುತ್ತದೆ. ಯಾವುದೇ ರೀತಿಯ ಪೂರ್ವ ಒಪ್ಪಿಗೆಯಿಲ್ಲದೇ ತೊಂದರೆಗೊಳಗಾದ ಜನರನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತಮ್ಮ ವಾಸ್ತವ್ಯ ಬದಲಾಯಿಸುವಂತೆ ಮಾಡುವುದೇ ಸ್ವಯಂಪ್ರೇರಿತವಲ್ಲದ ಪುನರ್‌ವಸತಿ ಎನ್ನಬಹುದು. ಆಕ್ಸ್‌ಫರ್ಡ್ ನಿಘಂಟು ಪುನರ್‌ವಸತಿ ಎಂಬ ಪದವನ್ನು "ಮೂಲಸ್ಥಿತಿಗೆ ಹಿಂತಿರುಗುವುದು" ಎಂಬುದಾಗಿ ವ್ಯಾಖ್ಯಾನಿಸಿರುತ್ತದೆ. ಹಿಂದಿನ ವ್ಯವಸ್ಥೆಯನ್ನು ಪುನರ್‌ಕಲ್ಪಿಸುವುದು, ಸೌಲಭ್ಯಗಳು, ಹಕ್ಕುಗಳು ಮತ್ತು ಅಂತಸ್ತನ್ನು ಪುನರ್‌ಸ್ಥಾಪಿಸುವುದೇ 'ಪುನರ್‌ವಸತಿ' ಎಂಬುದಾಗಿ ಚೇಂಬರ್ಸ್ ನಿಘಂಟು ವ್ಯಾಖ್ಯಾನಿಸಿರುತ್ತದೆ. ಜನರು ಹಿಂದೆ ಬಳಸುತ್ತಿದ್ದ ಸೌಲಭ್ಯಗಳನ್ನು ಹೊಸ ಪ್ರದೇಶದಲ್ಲಿ ಮರುಸ್ಥಾಪಿಸುವ ಪ್ರಕ್ರಿಯೆಯನ್ನು ಪುನರ್‌ವಸತಿ ಎಂಬುದಾಗಿ ಅರ್ಥೈಸಿಕೊಳ್ಳಬಹುದು. ಇಂತಹ ಪ್ರಕ್ರಿಯೆಯನ್ನು ಸಾಮಾನ್ಯವಾಗಿ ಬಲವಂತದ ವಲಸೆ ಎಂದು ಪರಿಗಣಿಸಲಾಗುತ್ತದೆ. ಇದರಿಂದಾಗಿ ಸಾಮಾನ್ಯ ವಲಸೆಗಳಿಗೂ, ಬಲವಂತದ ಸ್ಥಳಾಂತರಕ್ಕೂ ಇರುವ ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿರುತ್ತದೆ. ನಿರ್ದಿಷ್ಟ ಕಾರಣಗಳಿಗೋಸ್ಕರ ಜನರು ಅಥವಾ ಗುಂಪುಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವುದನ್ನು ಸಾಮಾನ್ಯ ವಲಸೆ ಎನ್ನಲಾಗುತ್ತದೆ. ಆದರೆ ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಒಟ್ಟು ಸಮುದಾಯ ಇಷ್ಟವಿಲ್ಲದಿದ್ದರೂ ಅಪರಿಚಿತ ಪ್ರದೇಶಕ್ಕೆ ವರ್ಗಾಯಿಸಲ್ಪಡುವುದೇ ಬಲವಂತದ ಸ್ಥಳಾಂತರ. ಉದ್ಯೋಗಕ್ಕಾಗಿ ಅಥವಾ ಉತ್ತಮ ಬದುಕನ್ನು ನಡೆಸುವುದಕ್ಕೆ, ಸಾಮಾಜಿಕ ಕಾರಣಗಳಿಗೋಸ್ಕರ ಸ್ವಯಂಪ್ರೇರಿತವಾಗಿ ವಲಸೆ ಹೋದಾಗ, ಜನರ ಜೀವನಶೈಲಿಯ ಮೇಲೆ ವಲಸೆಯು ಹೆಚ್ಚಿನ ಪ್ರಭಾವವನ್ನು ಬೀರುವುದಿಲ್ಲ. ಬಲವಂತದಿಂದಾಗಿ ಒಟ್ಟು ಸಮುದಾಯದ ಸ್ಥಳಾಂತರವಾದಾಗ ಅದು ಸ್ಥಳಾಂತರಿಸಲ್ಪಟ್ಟ ಜನರ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಬದುಕಿನ ಮೇಲೆ ಸರಿಪಡಿಸಲಾಗದ ಬದಲಾವಣೆಗಳನ್ನು ತರುತ್ತದೆ. ಇಂದು ಸ್ಥಳಾಂತರ ಪ್ರಕ್ರಿಯೆಗಳು ಅನೇಕ ಪ್ರಮುಖ ಕಾರಣಗಳಿಗಾಗಿ ನಡೆಯುತ್ತಿವೆ. ಇವುಗಳನ್ನು ಸ್ವಾಭಾವಿಕ, ಅಭಿವೃದ್ಧಿ ಪ್ರೇರಿತ ಹಾಗೂ ರಾಜಕೀಯ ಅಸ್ಥಿರತೆಗಳಿಂದಾದ ಸ್ಥಳಾಂತರಗಳು ಎಂದು ವರ್ಗೀಕರಿಸಬಹುದು. ಬರಗಾಲ, ಭೂಕಂಪಗಳು, ನೆರೆ, ಸುನಾಮಿಯ ಪರಿಣಾಮದಿಂದ, ದೊಡ್ಡ ಬೆಂಕಿ ಆಕಸ್ಮಿಕಗಳಿಂದ, ಜ್ವಾಲಾಮುಖಿಗಳ ಸ್ಫೋಟ, ಚಂಡಮಾರುತಗಳಿಂದ ಆದಂತಹ ಸ್ಥಳಾಂತರಗಳನ್ನು ಸ್ವಾಭಾವಿಕ ಸ್ಥಳಾಂತರಗಳು ಎಂದು ತಿಳಿಯಬಹುದು. ಅಭಿವೃದ್ಧಿ ಪ್ರೇರಿತ ಚಟುವಟಿಕೆಗಳಾದ ಬೃಹತ್ ಅಣೆಕಟ್ಟುಗಳ ನಿರ್ಮಾಣ, ಕೈಗಾರಿಕೆಗಳ ಸ್ಥಾಪನೆ, ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ, ರೈಲು ಮಾರ್ಗದ ರಚನೆ, ವಿಮಾನ ನಿಲ್ದಾಣಗಳ ಸ್ಥಾಪನೆ, ನಗರೀಕರಣ, ವಿಶೇಷ ಆರ್ಥಿಕ ವಲಯಗಳ ರಚನೆ, ಗಣಿ ಚಟುವಟಿಕೆಗಳ ವಿಸ್ತರಣೆಗಳು

ಇಂದು ಜಗತ್ತಿನಾದ್ಯಂತ ಕೋಟ್ಯಾಂತರ ಸಂಖ್ಯೆಯಲ್ಲಿ ಜನರ ಬಲವಂತದ ಸ್ಥಳಾಂತರಕ್ಕೆ ಕಾರಣವಾಗುತ್ತಿದೆ. ಇಂತಹ ಸ್ಥಳಾಂತರಗಳನ್ನು ಅಭಿವೃದ್ಧಿ ಪ್ರೇರಿತ ಸ್ಥಳಾಂತರಗಳೆಂದು ಕರೆಯಲಾಗುತ್ತದೆ. ಯುದ್ಧಗಳು, ಅಲ್ಪಸಂಖ್ಯಾತರ ಮೇಲೆ ನಿರ್ದಿಷ್ಟ ರಾಷ್ಟ್ರಗಳಲ್ಲಿ ಆಗುತ್ತಿರುವ ದೌರ್ಜನ್ಯಗಳು, ಶಿಕ್ಷೆಯ ಭಯ, ನಿರ್ದಿಷ್ಟ ಸಮುದಾಯದ ಮೇಲಿನ ಶೋಷಣೆಗಳು ರಾಜಕೀಯ ಸ್ಥಳಾಂತರಕ್ಕೆ ಕಾರಣವಾಗುತ್ತದೆ. ಭಾರತ ಮತ್ತು ಪಾಕಿಸ್ತಾನದ ನಡುವಿನ ಯುದ್ಧದ ಸಂದರ್ಭದಲ್ಲಿ, ಬಾಂಗ್ಲಾದೇಶದ ರಚನೆಯಾದಾಗ, ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಂದಾಗಿ, ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ ನಡೆದ ಸಂದರ್ಭದಲ್ಲಿ, ಲಕ್ಷಾಂತರ ಸಂಖ್ಯೆಯಲ್ಲಿ ಜನರು ಬಲವಂತದಿಂದ ಸ್ಥಳಾಂತರವಾದುದನ್ನು ರಾಜಕೀಯ ಸ್ಥಳಾಂತರ ಎಂಬುದಾಗಿ ಹೇಳಬಹುದು. ಜಗತ್ತಿನಾದ್ಯಂತ ರಾಜಕೀಯ ಕಾರಣಕ್ಕೋಸ್ಕರ ಕೋಟ್ಯಾಂತರ ಸಂಖ್ಯೆಯಲ್ಲಿ ಜನರು ತಮ್ಮ ಮೂಲನೆಲೆಗಳಿಂದ ಅಪರಿಚಿತವಾದ ಹೊಸ ಪ್ರದೇಶಗಳಿಗೆ ಬಲವಂತದಿಂದ ಸ್ಥಳಾಂತರಗೊಂಡಿರುವುದನ್ನು ಗಮನಿಸಬಹುದು.

ಅಭಿವೃದ್ಧಿ ಪ್ರೇರಿತ ಸ್ಥಳಾಂತರ ಮತ್ತು ಪುನರ್‌ವಸತಿ ಪ್ರಕ್ರಿಯೆಗಳು ಸಂತ್ರಸ್ತರು ಮತ್ತು ಸಮುದಾಯದ ಮೇಲೆ ಬೀರುವ ಒತ್ತಡ ಮತ್ತು ಮಾನಸಿಕ ತುಮುಲಗಳ ಸ್ವರೂಪವನ್ನು ಗಮನಿಸಿ, ಅದರ ಗಂಭೀರತೆಯನ್ನು ಮೌಲ್ಯಮಾಪನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮೂಲನೆಲೆಯಿಂದ ಸ್ಥಳಾಂತರವಾಗಬೇಕು ಎಂಬುವುದೇ ಸಂತ್ರಸ್ತರಿಗೆ ಆಘಾತವನ್ನು ನೀಡುತ್ತದೆ. ಸ್ಥಿರಾಸ್ಥಿಗಳನ್ನು ಕಳೆದುಕೊಳ್ಳುವುದು, ವೃತ್ತಿಯಲ್ಲಿ ಮಾರ್ಪಾಟಾಗುವುದು, ಹೊಸ ಪ್ರದೇಶದಲ್ಲಿ ನೆಲೆಯೂರುವ ಬಗೆಗಿನ ಅನಿಶ್ಚಿತತೆ ಹಾಗೂ ತಲತಲಾಂತರದಿಂದ ವಾಸ ಮಾಡಿ, ಬದುಕನ್ನು ನಡೆಸುವುದಕ್ಕೆ ಅನುವು ಮಾಡಿಕೊಟ್ಟ ಭೂಮಿಯಿಂದ ಬಲವಂತವಾಗಿ ಸ್ಥಳಾಂತರಿಸಲ್ಪಡುವುದು ಎಂಬುದು ಸಂತ್ರಸ್ತರು ಒತ್ತಡ ಮತ್ತು ಮಾನಸಿಕವಾಗಿ ಜರ್ಜರಿತವಾಗುವುದಕ್ಕೆ ಕಾರಣವಾಗುತ್ತದೆ. ಈ ಸೈದ್ಧಾಂತಿಕ ಚೌಕಟ್ಟನ್ನು ಮಾನದಂಡವಾಗಿರಿಸಿಕೊಂಡು ಮಂಗಳೂರು ವಿಶೇಷ ಆರ್ಥಿಕ ವಲಯ ಅಸ್ತಿತ್ವಕ್ಕೆ ಬರುತ್ತಿರುವ ಪ್ರದೇಶದಲ್ಲಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಜೀವನಶೈಲಿಯ ಮೇಲೆ ಈ ಮೇಲಿನ ಅಂಶಗಳು ಪ್ರಭಾವ ಬೀರಿರುತ್ತದೆಯೇ ಅಥವಾ ಸಂತ್ರಸ್ತರು ದೊರಕಿದ ಪರಿಹಾರದ ಪ್ಯಾಕೇಜ್‌ಗಳಿಂದಾಗಿ ಸಂತುಷ್ಟರಾಗಿ ಹೊಸ ಬದುಕನ್ನು ಕಟ್ಟಿಕೊಳ್ಳುವುದರಲ್ಲಿ ಯಶಸ್ವಿಯಾಗಿರುತ್ತಾರೆಯೇ ಎಂಬ ಅಂಶವನ್ನು ಪರೀಕ್ಷಿಸುವುದಕ್ಕೆ ಪ್ರಯತ್ನವನ್ನು ಮಾಡಲಾಗಿರುತ್ತದೆ.

1.5 ಅಭಿವೃದ್ಧಿಯ ಫಲಿತಗಳು

ಆರ್ಥಿಕ ಅಭಿವೃದ್ಧಿಯು ಒಂದು ಸಮುದಾಯದ ರಾಜಕೀಯ ಮತ್ತು ಸಾಮಾಜಿಕ ಜನಜೀವನದ ಮೇಲೆ ಗುಣಾತ್ಮಕ ಬದಲಾವಣೆ ಮತ್ತು ಸ್ಥಿರತೆಯನ್ನು ತಂದರೂ, ಅದೇ ಸಮಯದಲ್ಲಿ ಸಾಮಾಜಿಕವಾಗಿ

ಅವಗಣಿಸಲ್ಪಟ್ಟ ಜನ ಸಮುದಾಯದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ತುಂಬಲಾರದ ನಷ್ಟವನ್ನು ತಂದಿಟ್ಟು ಅವನತಿಗೆ ಕಾರಣವಾಗುತ್ತದೆ ಎಂಬುದು ಇಂದು ಒಪ್ಪಿತವಾದ ಅಂಶವಾಗಿರುತ್ತದೆ. ಅಭಿವೃದ್ಧಿಯ ಪ್ರಕ್ರಿಯೆಯಿಂದ ಜನರಿಗೆ ಒಳಿತಾಗುವುದಾದರೂ ಅದರಿಂದ ಹಾನಿಯೂ ಉಂಟಾಗುತ್ತದೆ ಎಂದು ಗುರುತಿಸುವುದು ಪ್ರಮುಖವಾಗುತ್ತದೆ. ವಸಾಹತುಶಾಹಿ ನಂತರದ ಭಾರತದಲ್ಲಿ, ರಾಷ್ಟ್ರದ ಪ್ರಯೋಜಕತ್ವದಲ್ಲಿ ನಡೆದ ಎಲ್ಲಾ ಅಭಿವೃದ್ಧಿ ಚಟುವಟಿಕೆಗಳು ಹೆಚ್ಚು ಲಾಭವನ್ನು ತಂದಿರುವುದು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಿಷ್ಠರಾದ ಜನರಿಗೆ ಎಂಬುದು ನಿಸ್ಸಂದೇಹವಾಗಿ ಸತ್ಯವಾಗಿರುತ್ತದೆ. ಅಭಿವೃದ್ಧಿಯು ಪೂರ್ವಾಗ್ರಹಪೀಡಿತವಾಗಿದ್ದು, ಜಾರಿಗೆ ಬರುವ ಸಂದರ್ಭದಲ್ಲಿ ಅಸಮಾನತೆಗೆ ಕಾರಣವಾಗುತ್ತದೆ. ಹೆಚ್ಚಿನ ಸಂದರ್ಭದಲ್ಲಿ ದಮನಕಾರಿಯಾಗಿ, ಮಾನವೀಯ ಅಂಶಗಳಿಗೆ ಆದ್ಯತೆ ಕೊಡದೆ ಜನರ ಸ್ವಾತಂತ್ರ್ಯ ಮತ್ತು ಅಸ್ತಿತ್ವಕ್ಕೆ ಧಕ್ಕೆ ತಂದಿರುತ್ತದೆ. ಕೆಲವು ಸಂದರ್ಭಗಳಲ್ಲಿ ಕಾನೂನಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಚಟುವಟಿಕೆಗಳಿಗೆ ಮೀಸಲಿಟ್ಟ ಅನುದಾನವನ್ನು ರಾಜಕಾರಣಿಗಳು, ಆಡಳಿತಶಾಹಿವರ್ಗ, ತಂತ್ರಜ್ಞರು ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ದುರುಪಯೋಗ ಮಾಡಿರುವುದನ್ನು ಕಾಣಬಹುದು. ಸ್ಥಾಪಿತ ಹಿತಾಸಕ್ತಿಗಳು ವೈಯಕ್ತಿಕ ಲಾಭಕ್ಕಾಗಿ ಅಭಿವೃದ್ಧಿ ಪ್ರಕ್ರಿಯೆಯನ್ನು ಬಳಸಿಕೊಂಡದ್ದು ಹಾಗೂ ರಾಷ್ಟ್ರವು ಅದನ್ನು ಅನುಮೋದಿಸಿರುವುದನ್ನು ಕಾಣಬಹುದು. ಅಸಂತುಲಿತ ಆರ್ಥಿಕ ಅಭಿವೃದ್ಧಿಯ ಚಟುವಟಿಕೆಗಳು ಸಮಾಜದ ಸ್ವಾಸ್ಥ್ಯವನ್ನು ಹಾಗೂ ಜೀವನಪದ್ಧತಿಯ ಮೇಲೆ ಪರಿಣಾಮ ಬೀರಿ ಅವಗಣನೆಗೆ ಒಳಗಾದ ಜನ ಸಮುದಾಯದ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಸರಿಪಡಿಸಲಾಗದಷ್ಟು ಹಾನಿಯನ್ನು ಮಾಡಿರುತ್ತದೆ. ಈ ಎಲ್ಲಾ ಕಾರಣಗಳಿಗೋಸ್ಕರ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾದ ಹಾಗೂ ಅಷ್ಟೇ ಸಮಸ್ಯೆಗಳಿಗೆ ಕಾರಣವಾಗಿರುವ ಅಭಿವೃದ್ಧಿ ಪ್ರಕ್ರಿಯೆಗಳಿಂದ ಸಂತ್ರಸ್ತರಾದ ಜನರ ಬಗೆಗೆ ಅಧ್ಯಯನ ಮಾಡುವುದು ಹೆಚ್ಚು ಪ್ರಸ್ತುತವಾಗುತ್ತದೆ. ವಿದ್ವಾಂಸರಾದ ಮುನಿರುಲ್ ಹುಸೇನ್‌ರವರು ತಮ್ಮ ಸಂಶೋಧನಾ ಗ್ರಂಥವಾದ 'ಇಂಟರಾಗೇಟಿಂಗ್ ಡೆವಲಪ್‌ಮೆಂಟ್'ನಲ್ಲಿ ತಮ್ಮ ವಾದವನ್ನು ಮಂಡಿಸುತ್ತಾ ಅಭಿವೃದ್ಧಿ ಪ್ರಕ್ರಿಯೆಯಿಂದ ಸಂತ್ರಸ್ತರಾದ ಜನರು ಯಾವ ರೀತಿಯಲ್ಲಿ ಬದುಕನ್ನು ನಡೆಸುತ್ತಿದ್ದಾರೆ? ಅವರು ಸಂತೃಪ್ತರಾಗಿದ್ದಾರೆಯೇ ಅಥವಾ ಅಭಿವೃದ್ಧಿಯ ಫಲವನ್ನು ಕೇವಲ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಬಲಾಢ್ಯವಾಗಿರುವ ಜನರು ಮಾತ್ರ ಅನುಭವಿಸುತ್ತಿದ್ದಾರೆಯೇ? ರಾಷ್ಟ್ರದ ಜನರ ಒಟ್ಟು ಅಭಿವೃದ್ಧಿ ಹಾಗೂ ಕ್ಷೇಮವನ್ನು ಸಾಧಿಸಲು ಜಾರಿಗೆ ತಂದಿರುವ ಬೃಹತ್ ಯೋಜನೆಗಳು ನಿರೀಕ್ಷಿತ ಮಟ್ಟವನ್ನು ಸಾಧಿಸುವುದರಲ್ಲಿ ಸಫಲವಾಗಿರುತ್ತದೆಯೇ?[113] ಇತ್ಯಾದಿಗಳನ್ನು ಸಮಗ್ರ ದೃಷ್ಟಿಕೋನದಿಂದ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿರುತ್ತದೆ.

'ಸ್ಥಳಾಂತರವು ಸಂತ್ರಸ್ತರ ಸಾಮಾಜಿಕ ಜೀವನದ ಮೇಲೆ ನೇರ ಪರಿಣಾಮವನ್ನು ಬೀರುತ್ತದೆ. ಪುನರ್‌ವಸತಿಯ ನಂತರವೂ ಸಂತ್ರಸ್ತರಿಗೆ ತಮ್ಮ ಹಿಂದಿನ ಸಾಮಾಜಿಕ ಸಂಬಂಧಗಳನ್ನು ಮುಂದುವರಿಸಲು

ಸಾಧ್ಯವಾಗುವುದಿಲ್ಲ. ಇತರ ಜಾತಿ ಹಾಗೂ ಪಂಗಡಗಳ ಜನರ ಜೊತೆಯಲ್ಲಿ ಪುನರ್‌ವಸತಿ ಪ್ರದೇಶಗಳಲ್ಲಿ ಹೊಸ ಸಂಬಂಧಗಳು ಬೆಳೆದರೂ, ಹಿಂದೆ ಇದ್ದಂತಹ ಜಾತಿಯ ಹಾಗೂ ಸಂಬಂಧಿಕರ ನಡುವಿನ ಆತ್ಮೀಯ ಸಂಬಂಧಗಳು ಬೆಳೆಯುವುದಿಲ್ಲ. ಸಂಬಂಧಿಗಳ ನಡುವೆ ನಗದು ಪರಿಹಾರದ ಹಂಚಿಕೆಯ ಬಗೆಗಿನ ವೈಮನಸ್ಸುಗಳು ಹೆಚ್ಚಾಗುತ್ತದೆ. ನಗದು ಪರಿಹಾರ ದೊರಕಿದ ಕಾರಣ ಸಂತ್ರಸ್ತರಲ್ಲಿ ಸಾಮಾಜಿಕ ಅನಿಷ್ಟಗಳು ಹೆಚ್ಚಾಗಿ ಅದು ಮಾನಸಿಕ ಒತ್ತಡಗಳಿಗೆ ಕಾರಣವಾಗುತ್ತದೆ. ಸ್ಥಳಾಂತರ ಹಾಗೂ ಪುನರ್‌ವಸತಿ ಸಮಯದಲ್ಲಿ ಹೊಸ ನಾಯಕತ್ವಗಳು ಬೆಳೆಯಬಹುದು ಎಂಬ ನಂಬಿಕೆಗಳು ಹುಸಿಯಾಯಿತು. ಸ್ಥಳಾಂತರದ ಪೂರ್ವದಲ್ಲಿದ್ದ ನಾಯಕತ್ವವೇ ಪುನರ್‌ವಸತಿಯ ನಂತರವೂ ಮುಂದುವರಿದು ಸಂತ್ರಸ್ತರ ಯಾವುದೇ ಬೇಡಿಕೆಗಳು ಈಡೇರದೇ, ಸರಕಾರ ಹಾಗೂ ನಾಯಕತ್ವದ ನಡುವೆ ನಡೆದ ಮಾತುಕತೆಗಳ ವಿವರಗಳು ಬಹಿರಂಗಕ್ಕೆ ಬಾರದೆ ಸಂತ್ರಸ್ತರು ನಾಯಕತ್ವವನ್ನು ಪ್ರಶ್ನಿಸಲಾರಂಭಿಸಿದರು'[114] ಎಂಬುದಾಗಿ ವಿದ್ವಾಂಸರಾದ ಜೋಷಿಯವರು ತಮ್ಮ ಗ್ರಂಥವಾದ 'ಡಿಸ್‌ಪ್ಲೇಸ್‌ಮೆಂಟ್ ಎಂಡ್ ರಿಹೆಬಿಲಿಟೇಶನ್, ಸ್ಟಡಿ ಆಫ್ ಡ್ಯಾಮ್ ಎಫೆಕ್ಟೆಡ್ ರೂರಲ್ ಕಮ್ಯೂನಿಟಿ'ಯಲ್ಲಿ ವಿವರಿಸುತ್ತಾರೆ.

ಈ ಎಲ್ಲಾ ಕಂಡುಕೊಳ್ಳುವಿಕೆಗಳನ್ನು ಗಮನದಲ್ಲಿರಿಸಿ, ಪ್ರಸ್ತುತ ಅಧ್ಯಯನವಾದ 'ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿ: ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಆರ್ಥಿಕ ವಲಯದ ಒಂದು ಅಧ್ಯಯನ'ಕ್ಕೆ ಹಿಂದಿನ ಅಧ್ಯಯನಗಳ ಫಲಿತಗಳು ಎಷ್ಟು ತಾಳೆಯಾಗುತ್ತವೆ ಮತ್ತು ಯಾವೆಲ್ಲಾ ಹೊಸ ಫಲಿತಗಳು ಕಾಣಸಿಗಬಹುದು ಎಂಬ ಅಂಶಕ್ಕೆ ಗಮನವನ್ನು ನೀಡುವುದಕ್ಕಾಗಿ ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟ ಲಭ್ಯವಿರುವ ಸಾಹಿತ್ಯಗಳ ವಿಸ್ತೃತವಾದ ಪರಾಮರ್ಶನವನ್ನು ನಡೆಸಿ ಅಧ್ಯಯನಕ್ಕೆ ಒಂದು ಬಲಿಷ್ಟವಾದ ಸೈದ್ಧಾಂತಿಕ ಚೌಕಟ್ಟನ್ನು ರೂಪಿಸುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿರುತ್ತದೆ.

ಪರಾಮರ್ಶನ ಗ್ರಂಥಗಳು ಮತ್ತು ಕೊನೆ ಟಿಪ್ಪಣಿಗಳು

[1]ಜಾನ್ ಡಬ್ಲ್ಯು. ಬೆಸ್ಟ್ ಎಂಡ್ ಜೇಮ್ಸ್ ವಿ. ಕಾಹ್ನ್, (2006), "ರಿಸರ್ಚ್ ಇನ್ ಎಜ್ಯುಕೇಶನ್", ಪ್ರೆಂಟೈಸ್-ಹಾಲ್ ಆಫ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಪಬ್ಲಿಕೇಷನ್, ನ್ಯೂಡೆಲ್ಲಿ. ಪುಟ1-3.

[2]ಮಾಥ್ಯೂ ಅರೆಪೆರಂಬಿಲ್, (1988), "ಇಂಡಸ್ಟ್ರೀಸ್, ಮೈನ್ಸ್ ಎಂಡ್ ಡಿಸ್‌ಪೊಸೆಶ್ಮನ್ ಆಫ್ ಇನ್‌ಡಿಜೀನಸ್ ಪೀಪಲ್ಸ್: ದ ಕೇಸ್ ಆಫ್ ಛೋಟಾನಾಗ್ಪುರ್". ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 38, ಎಪ್ರಿಲ್-ಜೂನ್. ಪುಟ 231-251.

[3] ಅದೇ. ಪುಟ 231-251.

[4] ಅದೇ. ಪುಟ 231-251.

[5] ಅದೇ. ಪುಟ 231-251.

[6] ಅದೇ. ಪುಟ 231-251.

[7] ರೆಡ್ಡಿ, ಐ.ಯು.ಬಿ., (1992), "ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್", ಮಿತ್ತಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 3-138.

[8] ಅದೇ. ಪುಟ 3-138.

[9] ಅದೇ. ಪುಟ 3-138.

[10] ಅದೇ. ಪುಟ 3-138.

[11] ಅದೇ. ಪುಟ 3-138.

[12] ಅದೇ. ಪುಟ 3-138.

[13] ಅದೇ. ಪುಟ 3-138.

[14] ಅದೇ. ಪುಟ 3-138.

[15] ಅದೇ. ಪುಟ 3-138

[16] ಇನಾಕ್ಷಿ ಗಂಗೂಲಿ ತುಕ್ರಾಲ್, (1988), "ಡ್ಯಾಮ್ಸ್ ಫಾರ್ ಹೂಸ್ ಡೆವಲಪ್‌ಮೆಂಟ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 38, ಎಪ್ರಿಲ್-ಜೂನ್. ಪುಟ 211-230.

[17] ಅದೇ. ಪುಟ 211-230.

[18] ಮುತ್ತಯ್ಯ ಬಿ.ಸಿ. ಮತ್ತು ಮಾಥೂರ್ ಜೆ.ಎಸ್., (1975), "ರೀಹೆಬಿಲಿಟೇಷನ್ ಆಫ್ ಡಿಸ್‌ಪ್ಲೇಸ್ಡ್ ವಿಲೇಜರ್ಸ್, ಎ ಸೋಷಿಯೋ-ಎಕನಾಮಿಕ್ ಎಂಡ್ ಎಟಿಟ್ಯೂಡಿನಲ್ ಸ್ಟಡಿ ಇನ್ ಅನ್ ಎಗ್ರೋ-ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್ ಇನ್ ರೂರಲ್ ಆಂಧ್ರಪ್ರದೇಶ್", ಪಬ್ಲಿಷ್‌ಡ್ ಬೈ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕಮ್ಯೂನಿಟಿ ಡೆವಲಪ್‌ಮೆಂಟ್, ಹೈದರಾಬಾದ್., ಸ್ಪಾನ್‌ಸರ್ಡ್ ಬೈ ಫೋರ್ಡ್ ಫೌಂಡೇಶನ್, ನ್ಯೂಡೆಲ್ಲಿ. ಪುಟ 1-74.

[19] ಅದೇ. ಪುಟ 1-74

[20] ಅದೇ. ಪುಟ 1-74.

[21] ಅದೇ. ಪುಟ 1-74.

[22] ಜಾಜ್‌ಮನಿ ವ್ಯವಸ್ಥೆ – ಮೇಲ್‌ಜಾತಿ ಮತ್ತು ಕೆಳಜಾತಿಗೆ ಸೇರಿದ ಜನರ ನಡುವೆ ಸಂಬಂಧವನ್ನು ಬೆಳೆಸುವುದಕ್ಕೆ ಹಿಂದೆ ಉಪಯೋಗಿಸಲ್ಪಡುತ್ತಿದ್ದ ಸಾಮಾಜಿಕ ಜಾತಿ ವ್ಯವಸ್ಥೆ. ಕೆಳಜಾತಿಗೆ ಸೇರಿದ ಜನರು ಮೇಲ್‌ಜಾತಿಗೆ ಸೇರಿದ ಜನರ ಕೆಲಸಗಳನ್ನು ನಿರ್ವಹಿಸಿ ಪ್ರತಿಫಲವಾಗಿ ದವಸ ಧಾನ್ಯಗಳನ್ನು ಪಡೆಯುತ್ತಿದ್ದಂತಹ ಆರ್ಥಿಕ ವ್ಯವಸ್ಥೆ.

[23] ವಂದನ ಶಿವ, (1993), "ಇಂಪವರಿಷ್‌ಮೆಂಟ್ ಆಫ್ ದ ಎನ್ವಿರಾನ್‌ಮೆಂಟ್: ವುಮೆನ್ ಎಂಡ್ ಚಿಲ್ಡ್ರನ್, ಲಾಸ್ಟ್ ಮೈಸ್", ಮರಿಯಾ ಎಂಡ್ ವಂದನ ಶಿವ (1993), "ಎಕೋಫೆಮಿನಿಸಂ, ಕೈಲ್ ಫಾರ್ ವುಮೆನ್", ನ್ಯೂಡೆಲ್ಲಿ. ಪುಟ 3–198.

[24] ಅದೇ. ಪುಟ 3–198.

[25] ಅದೇ. ಪುಟ 3–198.

[26] ಅದೇ. ಪುಟ 3–198.

[27] ಅದೇ. ಪುಟ 3–198.

[28] ಮಾಧವ ಗಾಡ್ಗಿಳ್, ರಾಮಚಂದ್ರ ಗುಹಾ, (1995), "ಇಕಾಲಜಿ ಎಂಡ್ ಇಕ್ವಿಟಿ", ರೌಟ್‌ಲೆಡ್ಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 24–63.

[29] ಅದೇ. ಪುಟ 24–63.

[30] ಕ್ಲೌಡ್ ಆಲ್ವರಿಸ್, ರಮೇಶ್ ಬಿಲ್ಲೋರಿ, (1998), "ಡ್ಯಾಮಿಂಗ್ ದ ನರ್ಮದಾ", ನಟರಾಜ್ ಪಬ್ಲಿಷರ್ಸ್, ಡೆಹ್ರಾಡೂನ್. ಪುಟ 3–58.

[31] ಅದೇ. ಪುಟ 3–58.

[32] ಅದೇ. ಪುಟ 3–58.

[33] ಅದೇ. ಪುಟ 3–58.

[34] ಕಾರ್ವೆ, ಐರಾವತಿ, ಜೈ ನಿಂಬಾರ್‌ಕರ್, (1969), "ಎ ಸರ್ವೆ ಆಫ್ ದ ಪೀಪಲ್ ಡಿಸ್‌ಪ್ಲೇಸ್‌ಡ್ ಥ್ರೂ ಕೊಯ್ನ ಡ್ಯಾಮ್", ಡೆಕ್ಕನ್ ಕಾಲೇಜ್ ಪೋಸ್ಟ್ ಗ್ರಾಜುವೇಟ್ ರೀಸರ್ಚ್ ಇನ್ಸ್‌ಟಿಟ್ಯೂಟ್, ಪೂನಾ. ಪುಟ 3–39.

[35] ಜೋಷಿ ಬಿ.ಎಲ್., (1982), "ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್", ಪರಿಮಳ ಪ್ರಕಾಶನ, ಔರಂಗಾಬಾದ್. ಪುಟ 182–199.

[36] ಅದೇ. ಪುಟ 182–199.

[37] ಮೈಕೆಲ್ ಸೆರ್ನ್ಯಾ, (1999), "ದ ಇಕನಾಮಿಕ್ಸ್ ಆಫ್ ಇನ್‌ವಾಲ್ಯೆಂಟರಿ ರಿಸೆಟ್ಲ್‌ಮೆಂಟ್, ಕ್ವೆಶ್ಚನ್ಸ್ ಎಂಡ್ ಚಾಲೆಂಜಸ್ (ಸಂ)", ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟನ್ ಡಿ.ಸಿ. ಪುಟ 32–63.

[38] ಅದೇ. ಪುಟ 32–63.

[39] ಅದೇ. ಪುಟ 32–63.

[40] ಅದೇ. ಪುಟ 32–63.

[41] ಸಂಗೀತಾ ಗೋಯಲ್, (1996), "ಎಕನಾಮಿಕ್ ಪರ್‌ಸ್ಪೆಕ್ಟಿವ್ಸ್ ಆನ್ ರೀಸೆಟ್ಲ್‌ಮೆಂಟ್ ಎಂಡ್ ರೀಹೆಬಿಲಿಟೇಷನ್", ಇ.ಪಿ.ಡಬ್ಲ್ಯೂ, ವಾಲ್ಯೂಮ್ 31, ನಂ. 24, ಜೂನ್ 15, 1996. ಪುಟ 1461–1467.

[42] ಅದೇ. ಪುಟ 1461–1467.

[43] ಅದೇ. ಪುಟ 1461–1467.

[44] ಬಾರ್ಬಾನೆ ಡಿ'ಸೋಜ, ದಾಕ್ಷಾಯಿಣಿ ಮದನ್‌ಗೋಪಾಲ್, (2010), "ರೆಸ್‌ಪೊಂಡಿಂಗ್ ಟು ಡೆವಲಪ್‌ಮೆಂಟ್ – ಇನ್‌ಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್", ಪಬ್ಲಿಷ್‌ಡ್ ಬೈ ಬುಕ್ಸ್ ಫಾರ್ ಚೇಂಜ್, ಬೆಂಗಳೂರು. ಪುಟ 7–46.

[45] ಅದೇ. ಪುಟ 7–46.

[46] ಸ್ವಿಂಗ್‌ಮೆನ್, ಅಮ್ಮಂಡೆ, (1973) ಇನ್ ಎಂ.ಪಿ. ಈಸ್ವರ್ಸ್ (ಸಂ.), "ಆಪರೇಟಿಂಗ್ ಎಂಡ್ ಅಪ್ಪರ್", ಸ್ವಿಂಗರ್ ವೆರ್ಲಾಗ್, ನ್ಯೂಯಾರ್ಕ್. ಪುಟ 191–216.

[47] ಅದೇ. ಪುಟ 191–216.

[48] ಕಾಸಾಸ್ ಎಂ., (1980) 'ಎನ್‌ವಿರಾನ್‌ಮೆಂಟ್ ಆ್ಯಸ್ ಕ್ವೆಸ್ಟ್ ಆಫ್ ವಾಟರ್ ರಿಸೋರ್‌ಸಸ್ ಡೆವಲಪ್‌ಮೆಂಟ್' ಇನ್ ಅಸೀತ್ ಕೆ. ಬಿಸ್ವಾಸ್(ಸಂ.), ಎನ್‌ವಿರಾನ್‌ಮೆಂಟಲ್ ಇಂಪ್ಲಿಕೇಶನ್ಸ್ ಆಫ್ ವಾಟರ್ ಡೆವಲಪ್‌ಮೆಂಟ್ ಫಾರ್ ಡೆವಲಪಿಂಗ್ ಕಂಟ್ರೀಸ್, ಆಕ್ಸ್‌ಫರ್ಡ್ ಪೆರ್ಗಾಮನ್ ಪ್ರೆಸ್, ಲಂಡನ್. ಪುಟ 119–132.

[49] ಅದೇ. ಪುಟ 119–132.

[50] ಬಾಲಕೃಷ್ಣನ್ ರಾಜಗೋಪಾಲ್, (2000), "ಡ್ಯಾಮ್ಸ್ ಎಂಡ್ ಡೆವಲಪ್‌ಮೆಂಟ್", ಆರ್ಟಿಕಲ್ ಪಬ್ಲಿಷ್‌ಡ್ ಇನ್ ವರ್ಲ್ಡ್ ಬ್ಯಾಂಕ್ ಫೈನ್ಯಾನ್ಸ್‌ಡ್ ಪ್ರಾಜೆಕ್ಟ್ಸ್, ವಾಷಿಂಗ್ಟನ್ ಡಿ.ಸಿ. ಪುಟ 385–399.

[51] ಜೀನ್ ಡ್ರೀಜ್, ಮೀರಾ ಸಾಮ್ಸನ್, ಸತ್ಯಜಿತ್ ಸಿಂಗ್ (ಸಂ) (1997), ಡ್ಯಾಮ್ ಎಂಡ್ ದ ನೇಷನ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ. ಪುಟ 9–66.

[52] ಅದೇ. ಪುಟ 9–66.

[53] ಅದೇ. ಪುಟ 9–66.

[54] ಅದೇ. ಪುಟ 9–66.

[55] ಅದೇ. ಪುಟ 9–66.

[56] ಅದೇ. ಪುಟ 9–66.

[57] ಸಂಜೀವ್ ಕಗ್ರಾಮ್, (2004), 'ಡ್ಯಾಮ್ಸ್ ಎಂಡ್ ಡೆವಲಪ್‌ಮೆಂಟ್', ಓರಿಯಂಟಲ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ. ಪುಟ 5–248.

[58] ಅದೇ. ಪುಟ 5–248.

[59] ಅದೇ. ಪುಟ 5–248.

[60] ಹುಸೇನ್ ಮುನಿರಲ್, (2008), "ಇಂಟರಾಗೇಟಿಂಗ್ ಡೆವಲಪ್‌ಮೆಂಟ್, ಸ್ಟೇಟ್ ಡಿಸ್‌ಪ್ಲೇಸ್‌ಮೆಂಟ್ ಎಂಡ್ ಪಾಪ್ಯುಲರ್ ರೆಸಿಸ್ಟೆನ್ಸ್ ಇನ್ ನಾರ್ತ್‌ಈಸ್ಟ್ ಇಂಡಿಯಾ", ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 15–42.

[61] ಅದೇ. ಪುಟ 15–42.

[62] ಮನಿಷ್‌ಕುಮಾರ್ ವರ್ಮ, (2004), 'ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಸೆಟ್ಲ್‌ಮೆಂಟ್', ರಾವತ್ ಪಬ್ಲಿಕೇಷನ್, ಜೈಪುರ್ ಎಂಡ್ ನ್ಯೂಡೆಲ್ಲಿ. ಪುಟ 15–259.

[63] ವಾಸುದೇವ ರಾವ್ ಡಿ., (2000), 'ಡೆವಲಪ್‌ಮೆಂಟ್ ವಿದ್ ಹ್ಯೂಮನ್ ಟಚ್', ಅಟ್ಲಾಂಟಿಕ್ ಪಬ್ಲಿಷರ್ಸ್ ಎಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ. ಪುಟ 76–102.

[64] ಅದೇ. ಪುಟ 76–102.

[65] ಹೇಮಲತಾ ರಾವ್, (2001), 'ರೀಜನಲ್ ಡಿಸ್‌ಪ್ಯಾರಿಟಿಸ್ ಎಂಡ್ ಡೆವಲಪ್‌ಮೆಂಟ್ ಇನ್ ಇಂಡಿಯಾ', ಆಷೀಸ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ. ಪುಟ 13–28.

[66] ರಾಬರ್ಟ್ ಎಷರ್ ಎಂಡ್ ಅರ್ಥರ್ ಜೆ. ವೋಫಸ್, (2001), 'ಡೆವಲಪ್‌ಮೆಂಟ್ ಆಫ್ ದ ಎಮರ್ಜಿಂಗ್ ಕಂಟ್ರೀಸ್', ಎನ್ ಎಜೆಂಡಾ ಫಾರ್ ರೀಸರ್ಚ್, ದ ಬ್ರೂಕಿಂಗ್ ಇನ್‌ಸ್ಟಿಟ್ಯೂಶನ್, ವಾಷಿಂಗ್‌ಟನ್ ಡಿ.ಸಿ., ಪುಟ 6–214.

[67] ಕಾಮೇಶ್ವರ ಚೌಧರಿ, (1999), ಗ್ಲೋಬಲೈಸೇಶನ್, ಗವರ್‌ನೆನ್ಸ್ ಎಂಡ್ ಡೆವಲಪ್‌ಮೆಂಟ್ ಇನ್ ಇಂಡಿಯಾ(ಸಂ.), ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 3–18.

[68] ರಜನಿ ಕೊಠಾರಿ, (2000), 'ಪಾಲಿಟಿಕ್ಸ್ ಇನ್ ಇಂಡಿಯಾ', ಓರಿಯಂಟ್ ಬ್ಲ್ಯಾಕ್‌ಸ್ವ್ಯಾನ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ. ಪುಟ 300–364.

[69] ಎ.ಪಿ.ಜೆ. ಅಬ್ದುಲ್ ಕಲಾಂ, ರಾಜನ್ ವೈ.ಎನ್., (1998), 'ಎ ವಿಷನ್ ಫಾರ್ ದ ನ್ಯೂ ಮಿಲೇನಿಯಮ್', ವೈಕಿಂಗ್ ಪೆಂಗ್ವಿನ್ ಬುಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ. ಪುಟ 3–121.

[70] ದೇಬರಾ ಇಡೆ (2006), 'ಡೆವಲಪ್‌ಮೆಂಟ್ ಮೆಥಡ್ಸ್ ಎಂಡ್ ಎಪ್ರೋಚಸ್ – ಕ್ರಿಟಿಕಲ್ ರಿಫ್ಲೆಕ್ಸನ್ಸ್', ರಾವತ್ ಪಬ್ಲಿಕೇಷನ್ಸ್, ಆಗ್ರಾ. ಪುಟ 56–74.

[71] ಜೆನ್ ನೆಡರ್‌ವಿನ್, (1997), 'ಡೆವಲಪ್‌ಮೆಂಟ್ ಥಿಯರಿ – ರೀಕನ್‌ಸ್ಟ್ರಕ್ಷನ್, ಡೀಕನ್‌ಸ್ಟ್ರಕ್ಷನ್', ವಿಸ್ತಾರ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 99–112.

[72] ಆರ್.ಕೆ. ಸಪ್ರು, (2003), 'ಡೆವಲಪ್‌ಮೆಂಟ್ ಎಡ್‌ಮಿನಿಸ್ಟ್ರೇಷನ್', ಸ್ಟರ್ಲಿಂಗ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 41–52.

[73] ಪಿ. ಹ್ಯಾರಿಸನ್, (2003), 'ಥರ್ಡ್ ವರ್ಲ್ಡ್ ಟುಮಾರೋ', ಸ್ಟರ್ಲಿಂಗ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 192–204.

[74] ಪೌಲ್ ಗ್ರೀಡಿ ಪಿ., ಜೋನಾಥನ್ ಎನ್ಸಾರ್, (2005) 'ರೀಇನ್‌ವೆಂಟಿಂಗ್ ಡೆವಲಪ್‌ಮೆಂಟ್, ಟ್ರಾನ್ಸ್‌ಲೇಟಿಂಗ್ ರೈಟ್ಸ್ ಬೇಸ್‌ಡ್ ಎಪ್ರೋಚಸ್, ಝುಡ್ ಬುಕ್ಸ್, ಲಂಡನ್. ಪುಟ 218–232.

[75] ಅಮರ್ತ್ಯ ಸೇನ್, ಜೀನ್ ಡ್ರೀಸ್, (1999), 'ಒಮ್ನಿಬಸ್', ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ. ಪುಟ 380–413.

[76] ಜಾನ್ ಹ್ಯಾರಿಸ್, (2001), 'ಡಿಪೊಲಿಟಿಸೈಝಿಂಗ್ ಡೆವಲಪ್‌ಮೆಂಟ್', ಲೆಫ್ಟ್‌ವರ್ಡ್ ಬುಕ್ಸ್, ನ್ಯೂಡೆಲ್ಲಿ. ಪುಟ 98–112.

[77] ಲಾಯ್ಡ್ ರೂಡಾಲ್ಫ್, ಸೂಸಾನ್ ಹೋಬರ್ ರೂಡಾಲ್ಫ್, (1987), 'ಇನ್‌ಪರ್‌ಸ್ಯೂಟ್ ಆಫ್ ಲಕ್ಷ್ಮಿ – ದ ಪೊಲಿಟಿಕಲ್ ಎಕಾನಮಿ ಆಫ್ ದ ಇಂಡಿಯನ್ ಸ್ಟೇಟ್', ಓರಿಯೆಂಟ್ ಲಾಂಗ್‌ಮೆನ್ ಲಿಮಿಟೆಡ್, ಬಾಂಬೆ. ಪುಟ 26–69.

[78] ಅದೇ. ಪುಟ 26–69.

[79] ಅದೇ. ಪುಟ 26–69.

[80] ಚಂದ್ರ ಪೂಜಾರಿ ಎಂ., (2010), 'ಯಾಕೀಗ ಭೂಮಿ ಪ್ರಶ್ನೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ 29–42.

[81] ಅದೇ. ಪುಟ 29–42.

[82] ಚಂದ್ರ ಪೂಜಾರಿ ಎಂ., (2010), 'ಸಮುದಾಯ ಮತ್ತು ಸಹಭಾಗಿತ್ವ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ 18–34.

[83] ಚಂದ್ರಶೇಖರ ಟಿ.ಆರ್., (1998), 'ಅಮರ್ತ್ಯ ಸೇನ್‌ರ ಅಭಿವೃದ್ಧಿ ಅಧ್ಯಯನಗಳು', ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು. ಪುಟ 3–72.

[84] ಅದೇ. ಪುಟ 3–72.

[85] ಮಧುಸೂದನ, (2005), "ಅಭಿವೃದ್ಧಿ : ಪಶ್ಚಿಮದ ಮಾದರಿ ಎಷ್ಟು ಸರಿ?", ಹೊಸತು ಪತ್ರಿಕೆ, ಫೆಬ್ರವರಿ 15. ಪುಟ 18–26.

[86] ಭವಾನಿ ಶಂಕರ ಬಿ.ಎ., (2000), 'ಅಭಿವೃದ್ಧಿ ಇನ್ನೊಂದು ಮುಖ', ಹೊಸತು ಪತ್ರಿಕೆ, ಜುಲೈ 3.ಪುಟ 32–37.

[87] ನಿ. ಮುರಾರಿ ಬಲ್ಲಾಳ್, (1996), 'ಯಾರದೋ ಮುಖ, ಯಾರದೋ ದೇಹ – ಕುದುರೆಮುಖ', ಗುರುವಾಯನಕೆರೆ ನಾಗರಿಕ ಸೇವಾ ಟ್ರಸ್ಟ್, ಗುರುವಾಯನಕೆರೆ. ಪುಟ 3–26.

[88] ಅದೇ. ಪುಟ 3–26.

[89] ಅದೇ. ಪುಟ 3–26.

[90] ಮೋಹನಕೃಷ್ಣ ರೈ ಕೆ., (1999), 'ಪರಿಸರದ ಚಳುವಳಿಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ 3–54.

[91] ಅದೇ. ಪುಟ 3–54.

[92] ಉಪೇಂದ್ರ ಹೊಸಬೆಟ್ಟು, (2004), 'ಕೈಗಾರಿಕೆಗಳು – ಪರಿಸರ – ಉದ್ಯೋಗ ಅವಕಾಶಗಳು', ಸಬೀಹಾ ಭೂಮಿಗೌಡ (ಸಂ.) 'ನಾವು ಮತ್ತು ನಮ್ಮ ಪರಿಸರ', ಡಾ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ. ಪುಟ 143–153.

[93] ಅದೇ. ಪುಟ 143–153.

[94] ಅದೇ. ಪುಟ 143–153.

[95] ನಾಯಕ್ ವಿದ್ಯಾ, (2004), 'ಪರಿಸರ ಸಂರಕ್ಷಣಾ ಚಳುವಳಿಗಳು ಮತ್ತು ಮಹಿಳೆ', ಸಬೀಹಾ ಭೂಮಿಗೌಡ (ಸಂ.) 'ನಾವು ಮತ್ತು ನಮ್ಮ ಪರಿಸರ', ಡಾ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ. ಪುಟ 91–104.

[96] ಚಂದ್ರ ಪೂಜಾರಿ, (1998), 'ಪರಿಸರ ಮತ್ತು ಅಭಿವೃದ್ಧಿ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ 1–29.

[97] ಅದೇ. ಪುಟ 1–29.

[98] ಅದೇ. ಪುಟ 1–29.

[99] ಅದೇ. ಪುಟ 1–29.

[100] ಚಂದ್ರ ಪೂಜಾರಿ, (1995), 'ಟ್ರೆಂಡ್ಸ್ ಇನ್ ಎಂಟರ್‌ಪ್ರಿನ್ಯೂರ್‌ಷಿಪ್ ಎಂಡ್ ರೀಜನಲ್ ಡೆವಲಪ್‌ಮೆಂಟ್ – ಎ ಸ್ಟಡಿ ವಿಥ್ ರೆಫರೆನ್ಸ್ ಟು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್'. ಎನ್ ಅನ್‌ಪಬ್ಲಿಷ್‌ಡ್ ಥೀಸಿಸ್ ಸಬ್ಮಿಟ್ಟೆಡ್ ಟು ಮ್ಯಾಂಗಲೋರ್ ಯುನಿವರ್ಸಿಟಿ ಫಾರ್ ದ ಅವಾರ್ಡ್ ಆಫ್ ಪಿ.ಎಚ್.ಡಿ. ಡಿಗ್ರಿ. ಪುಟ 51–76.

[101] ಅದೇ. ಪುಟ 51–76.

[102] ಅದೇ. ಪುಟ 51–76.

[103] ಮೋಹನಕೃಷ್ಣ ರೈ ಕೆ., (1999), 'ಪರಿಸರದ ಚಳುವಳಿಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ 3–54.

[104] ಅದೇ. ಪುಟ 3–54.

[105] ಪಿಯೂಸ್ ಫಿಡ್ಲೆಸ್ ಪಿಂಟೋ, (2000), 'ಲ್ಯಾಂಡ್ ಸಿಸ್ಟಮ್ – ಎನ್ ಓವರ್ ವ್ಯೂ', ಇನ್ "ಪೊಲಿ" (ಸಂ) ಬೈ ಮುಕುಂದ ಪ್ರಭು, ದಕ್ಷಿಣ ಕನ್ನಡ ಜಿಲ್ಲಾಡಳಿತ, ಮಂಗಳೂರು. ಪುಟ 94–97.

[106] ಪ್ರಭಾಕರ ಶಿಶಿಲ, (2000), 'ಪ್ರಾಬ್ಲಮ್ಸ್ ಆಫ್ ಇಂಡಸ್ಟ್ರಿಯಲೈಸೇಷನ್', ಇನ್ "ಪೊಲಿ", ಮುಕುಂದ ಪ್ರಭು(ಸಂ)., ದಕ್ಷಿಣ ಕನ್ನಡ ಜಿಲ್ಲಾಡಳಿತ, ಮಂಗಳೂರು. ಪುಟ 106–111.

[107] ಅದೇ. ಪುಟ 106–111.

[108] ಕೇಶವ ಉಚ್ಚಿಲ, (2000), 'ಶತಮಾನದ ಬೀಸುನೋಟ', ಇನ್ "ಪೊಲಿ", ಮುಕುಂದ ಪ್ರಭು (ಸಂ)., ದಕ್ಷಿಣ ಕನ್ನಡ ಜಿಲ್ಲಾಡಳಿತ, ಮಂಗಳೂರು. ಪುಟ 79–87.

[109] ಅದೇ. ಪುಟ 79–87.

[110] ರಮೇಶ್ ಮಂಗಲೇಕರ್, (2009), 'ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಷನ್, ಅನು ಪಬ್ಲಿಷರ್ಸ್, ಮೀರತ್. ಪುಟ 5–219.

[111] ಅದೇ. ಪುಟ 5–219.

[112] ಮೈಕೆಲ್ ಸೆರ್ನ್ಯಾ, (1999) ದ ಇಕನಾಮಿಕ್ಸ್ ಆಫ್ ಇನ್‌ವಾಲ್ಯೆಂಟರಿ ರಿಸೆಟ್ಲ್‌ಮೆಂಟ್, ಕ್ವೆಶ್ಚನ್ಸ್ ಎಂಡ್ ಚಾಲೆಂಜಸ್ (ಸಂ), ವರ್ಲ್ಡ್ ಬ್ಯಾಂಕ್ ವಾಷಿಂಗ್‌ಟನ್ ಡಿ.ಸಿ. ಪುಟ 32–63.

[113] ಹುಸೇನ್ ಮುನಿರಲ್, (2008), 'ಇಂಟರಾಗೇಟಿಂಗ್ ಡೆವಲಪ್‌ಮೆಂಟ್ ಸ್ಟೇಟ್ ಡಿಸ್‌ಪ್ಲೇಸ್‌ಮೆಂಟ್ ಎಂಡ್ ಪಾಪ್ಯುಲರ್ ರೆಸಿಸ್ಟೆನ್ಸ್ ಇನ್ ನಾರ್ತ್‌ಈಸ್ಟ್ ಇಂಡಿಯಾ', ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 15–42.

[114] ಜೋಷಿ ಬಿ.ಎಲ್. (1982) "ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್", ಪರಿಮಳ ಪ್ರಕಾಶನ, ಔರಂಗಾಬಾದ್. ಪುಟ 182–199.

ಅಧ್ಯಾಯ–2


ಅಧ್ಯಯನ ಕ್ಷೇತ್ರದ ಪರಿಚಯ ಮತ್ತು
ಮಂಗಳೂರು ವಿಶೇಷ ಆರ್ಥಿಕ ವಲಯದ

ಭೂಸ್ವಾಧೀನ, ಸ್ಥಳಾಂತರ ಮತ್ತು ಪುನರ್‌ವಸತಿ ನೀತಿಗಳು


ಅಧ್ಯಾಯ–2

ಅಧ್ಯಯನ ಕ್ಷೇತ್ರದ ಪರಿಚಯ ಮತ್ತು ಮಂಗಳೂರು ವಿಶೇಷ ಆರ್ಥಿಕ ವಲಯದ ಭೂಸ್ವಾಧೀನ, ಸ್ಥಳಾಂತರ ಮತ್ತು ಪುನರ್‌ವಸತಿ ನೀತಿಗಳು

ರೇಖಾಚಿತ್ರ–1: ದಕ್ಷಿಣ ಕನ್ನಡ ಜಿಲ್ಲೆಯ ನಕ್ಷೆ



ರೇಖಾಚಿತ್ರ–2: ಮಂಗಳೂರು ವಿಶೇಷ ಆರ್ಥಿಕ ವಲಯ ಜಾರಿಗೆ ಬಂದಿರುವ ಮಂಗಳೂರು ತಾಲೂಕಿನ ನಕ್ಷೆ



ಟಿಪ್ಪಣಿ: ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಲಾದ ಗ್ರಾಮಗಳನ್ನು ಈ ಮೇಲಿನ ನಕಾಶೆಯಲ್ಲಿ ವೃತ್ತಾಕಾರದಲ್ಲಿ ಗುರುತಿಸಲಾಗಿದೆ

ದ್ವಿತೀಯ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ಭೌಗೋಳಿಕ ಅಂಶಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ಇದರಿಂದಾಗಿ ಪ್ರಸ್ತುತ ಅಧ್ಯಯನದ ಸಮಸ್ಯೆಗಳು ಮತ್ತು ಅವುಗಳು ಹುಟ್ಟಿಕೊಂಡ ಪ್ರದೇಶದ ಬಗೆಗಿನ ಸಂಪೂರ್ಣ ಚಿತ್ರಣವನ್ನು ಪಡೆಯಲು ಸಾಧ್ಯವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಾಮಾಜಿಕ ಜನಜೀವನ, ಆಚರಣೆಗಳು, ಸಂಸ್ಕೃತಿ, ಉದ್ಯೋಗ ಮತ್ತು ಭಾಷಾ ವೈವಿಧ್ಯತೆ ಕರ್ನಾಟಕದ ಇತರ ಭಾಗಗಳಿಗಿಂತ ಭಿನ್ನವಾಗಿರುತ್ತದೆ. ಅಭಿವೃದ್ಧಿಯ ಮಾಪನಗಳ ಸೂಚಕಗಳಾದ ಆರೋಗ್ಯ, ವಿದ್ಯಾಭ್ಯಾಸ, ಉದ್ಯೋಗ ಮತ್ತು ಜೀವನಮಟ್ಟವನ್ನು ಗಮನಿಸಿದಾಗ ರಾಜ್ಯದ ಇತರ ಜಿಲ್ಲೆಗಳಿಗಿಂತ ದಕ್ಷಿಣ



ಕನ್ನಡ ಜಿಲ್ಲೆ ಹೆಚ್ಚು ಅಭಿವೃದ್ಧಿಯನ್ನು ಸಾಧಿಸಿರುವಂತಹ ಪ್ರದೇಶ[1] ಎಂಬುದನ್ನು ಗಮನಿಸಬಹುದು. ಜಿಲ್ಲೆಯಾದ್ಯಂತ ಅಭಿವೃದ್ಧಿ ಒಂದೇ ರೀತಿಯಲ್ಲಿ ಆಗಿರದೇ ಜಿಲ್ಲೆಯ ದಕ್ಷಿಣ ಭಾಗಕ್ಕೆ ಹಬ್ಬಿಕೊಂಡಿರುವ ಪ್ರದೇಶಗಳು ಹೆಚ್ಚು ಅಭಿವೃದ್ಧಿಯನ್ನು ಸಾಧಿಸಿದರೆ, ಉತ್ತರಕ್ಕೆ ಚಾಚಿರುವ ಪ್ರದೇಶಗಳು ಅಭಿವೃದ್ಧಿಯ ಮಾಪನಗಳ ಸೂಚ್ಯಂಕಗಳ ಪ್ರಕಾರ ಹಿಂದುಳಿದಿರುವುದನ್ನು ಗಮನಿಸಬಹುದು.

ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಾಕೃತಿಕವಾಗಿ ಕರಾವಳಿ ಪ್ರದೇಶ, ಒಳನಾಡು ಪ್ರದೇಶ ಹಾಗೂ ಪಶ್ಚಿಮಘಟ್ಟಗಳ ಪ್ರದೇಶ ಎಂದು 3 ವಿಭಾಗಗಳಾಗಿ ವಿಂಗಡಿಸಬಹುದು. ಕರಾವಳಿ ಪ್ರದೇಶದಲ್ಲಿ ಸಾರಿಗೆ ಸೌಲಭ್ಯ, ಉದ್ಯೋಗಾವಕಾಶ ಇತ್ಯಾದಿ ಮೂಲಭೂತ ಸೌಕರ್ಯಗಳು ಹೆಚ್ಚಾಗಿರುವುದರಿಂದ ಜನಸಾಂದ್ರತೆ ಹೆಚ್ಚಾಗಿರುತ್ತದೆ. ಇಲ್ಲಿ ಭತ್ತ, ದ್ವಿದಳ ಧಾನ್ಯಗಳು, ಅಡಿಕೆ, ತೆಂಗು ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಮಂಗಳೂರು ತಾಲೂಕು ಕರಾವಳಿ ಪ್ರದೇಶದಲ್ಲಿದೆ. ಒಳನಾಡು ಪ್ರದೇಶವು ಏರುತಗ್ಗುಗಳಿಂದ ತುಂಬಿರುವ ಪ್ರದೇಶವಾಗಿದೆ. ಬಂಟ್ವಾಳ, ಪುತ್ತೂರು ಹಾಗೂ ಬೆಳ್ತಂಗಡಿ ತಾಲೂಕಿನ ಕೆಲ ಭಾಗಗಳು ಈ ಪ್ರದೇಶದಲ್ಲಿರುತ್ತದೆ. ಇಲ್ಲಿ ತೆಂಗು, ಅಡಿಕೆ, ರಬ್ಬರ್ ಇತ್ಯಾದಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಪಶ್ಚಿಮಘಟ್ಟ ಪ್ರದೇಶವು ಕಾಡುಗಳಿಂದ ಆವರಿಸಲ್ಪಟ್ಟು ಸದಾ ಕಾಲವೂ ಹಚ್ಚಹಸುರಾಗಿ ಕಂಗೊಳಿಸುತ್ತಿರುತ್ತದೆ. ಸುಳ್ಯ ಹಾಗೂ ಬೆಳ್ತಂಗಡಿ ತಾಲೂಕಿನ ಹೆಚ್ಚಿನ ಪ್ರದೇಶಗಳು ಈ ಪ್ರದೇಶದಲ್ಲಿವೆ.[2] ಜಿಲ್ಲೆಯಲ್ಲಿನ ಹೆಚ್ಚಿನ ನದಿಗಳು ಪಶ್ಚಿಮಘಟ್ಟಗಳ ತಪ್ಪಲಿನಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಇವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜೀವನದಿಗಳಾದ ನೇತ್ರಾವತಿ, ಕುಮಾರಧಾರಾ, ನಂದಿನಿ, ಪಯಸ್ವಿನಿ, ಫಲ್ಗುಣಿ ಮತ್ತು ಶಾಂಭವಿ ನದಿಗಳು ಪ್ರಮುಖವಾಗಿವೆ.

ಪ್ರಸ್ತುತ ಅಧ್ಯಾಯವನ್ನು ಮೂರು ಭಾಗಗಳಾಗಿ ವಿಂಗಡಿಸಿ ವಿವರಿಸಲಾಗಿದೆ. ಮೊದಲ ಭಾಗ ಜಿಲ್ಲೆಯ ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ಚಾರಿತ್ರಿಕ ಬೆಳವಣಿಗೆಯ ಜೊತೆಯಲ್ಲಿ ಜನಜೀವನ, ಜನಸಂಖ್ಯೆ ಮತ್ತು ಭಾಷೆ, ಇತ್ಯಾದಿ ವಿಷಯಗಳನ್ನು ವಿವರಿಸುತ್ತದೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗೆ ಸಂಬಂಧಪಟ್ಟಂತೆ ಸ್ವಾಧೀನಪಡಿಸಿದ ಭೂಪ್ರದೇಶವನ್ನೊಳಗೊಂಡ ಗ್ರಾಮಗಳು, ಅಲ್ಲಿನ ಆರ್ಥಿಕತೆ, ಮುಖ್ಯ ಕಸುಬು ಹಾಗೂ ಜನಜೀವನದ ಬಗ್ಗೆ ಎರಡನೆಯ ಭಾಗವು ಸಂಕ್ಷಿಪ್ತವಾಗಿ ವಿವರಿಸುತ್ತದೆ. ಮೂರನೆಯ ಭಾಗದಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಯ ಸಂದರ್ಭದಲ್ಲಿ ಕರ್ನಾಟಕ ಸರಕಾರ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ ಜನರಿಗೆ ನೀಡಲು ಉದ್ದೇಶಿಸಿದ್ದ ಪರಿಹಾರದ ಪ್ಯಾಕೇಜ್‌ಗಳ ಬಗ್ಗೆ ವಿವರಣೆ ನೀಡಲಾಗಿದೆ. ಜಿಲ್ಲೆಯಲ್ಲಿನ ಕೈಗಾರಿಕೆಗಳ ಬೆಳವಣಿಗೆಯ ಸಾಧ್ಯತೆಗಳು ಹಾಗೂ 1970ರ ದಶಕದ ನಂತರ 'ಕೈಗಾರಿಕೀಕರಣ ಪ್ರಕ್ರಿಯೆ' ಜಿಲ್ಲೆಯಲ್ಲಿ ಯಾವ ರೀತಿಯಲ್ಲಿ ಬೆಳೆದು ಬಂದು ಜನರ ಜೀವನಶೈಲಿಯ ಮೇಲೆ ಪರಿಣಾಮ ಬೀರಿರುತ್ತದೆ ಎಂಬುದರ ಪಕ್ಷಿನೋಟವನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಭಾಗ–1

ಸಾವಿರದ ಎಂಟುನೂರ ಅರವತ್ತರ ಮೊದಲು ದಕ್ಷಿಣ ಕನ್ನಡ ಜಿಲ್ಲೆಯು ಮದ್ರಾಸ್ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟ ಭೂಪ್ರದೇಶವಾಗಿತ್ತು. ಆಡಳಿತಾತ್ಮಕ ಕಾರಣಗಳಿಗೋಸ್ಕರ ಬ್ರಿಟಿಷ್ ವಸಾಹತುಶಾಹಿ ವ್ಯವಸ್ಥೆ ಈ ಪ್ರದೇಶವನ್ನು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಎಂದು ವಿಭಜಿಸಿ, ದಕ್ಷಿಣ ಕನ್ನಡವನ್ನು ಮದ್ರಾಸ್ ಪ್ರಾಂತ್ಯದ ಮತ್ತು ಉತ್ತರ ಕನ್ನಡವನ್ನು ಬಾಂಬೆ ಪ್ರಾಂತ್ಯದ ಆಡಳಿತ ವ್ಯವಸ್ಥೆಗೆ ಒಳಪಡಿಸಿತು.[3] 1956ರಲ್ಲಿ ಭಾಷಾವಾರು ನೆಲೆಗಳಲ್ಲಿ ರಾಜ್ಯಗಳನ್ನು ಪುನರ್‌ರಚಿಸುವ ಸಂದರ್ಭದಲ್ಲಿ ಕಾಸರಗೋಡು ಪ್ರದೇಶವನ್ನು ಹೊಸತಾಗಿ ರಚಿಸಲಾದ ಕೇರಳ ರಾಜ್ಯಕ್ಕೆ ಸೇರ್ಪಡೆಗೊಳಿಸಿ ದಕ್ಷಿಣ ಕನ್ನಡವನ್ನು ಮೈಸೂರು ಪ್ರಾಂತ್ಯದ ಭಾಗವನ್ನಾಗಿ ಮಾಡಲಾಯಿತು.[4] ಅಗೋಸ್ಟ್ 15, 1997ರಂದು ಆಡಳಿತಾತ್ಮಕ ಕಾರಣಗಳಿಗಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಎರಡು ಕಂದಾಯ ಜಿಲ್ಲೆಗಳನ್ನಾಗಿ ವಿಭಜಿಸಲಾಯಿತು. ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳನ್ನೊಳಗೊಂಡ ಉಡುಪಿ ಜಿಲ್ಲೆಯು ಹೊಸತಾಗಿ ರಚಿಸಲ್ಪಟ್ಟಿತು. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯು ಮಂಗಳೂರು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯ ತಾಲೂಕುಗಳನ್ನೊಳಗೊಂಡಿರುತ್ತದೆ.[5] ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಕ್ಕೆ ಉಡುಪಿ ಜಿಲ್ಲೆ, ದಕ್ಷಿಣದಲ್ಲಿ ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯಿರುತ್ತದೆ. ಪೂರ್ವದಲ್ಲಿ ಪಶ್ಚಿಮಘಟ್ಟ ಪ್ರದೇಶ ಹಾಗೂ ಚಿಕ್ಕಮಗಳೂರು ಜಿಲ್ಲೆಯೊಂದಿಗೆ ಗಡಿಯನ್ನು ಹಂಚಿಕೊಂಡಿದ್ದು, ಪಶ್ಚಿಮದ ಭಾಗದಲ್ಲಿ 60ಕಿ.ಮೀನಷ್ಟು ಕರಾವಳಿ ತೀರವನ್ನು ಹೊಂದಿರುತ್ತದೆ.[6] 4559ಕಿ.ಮೀ. ವ್ಯಾಪ್ತಿಯ ಭೂಪ್ರದೇಶವನ್ನು ದಕ್ಷಿಣ ಕನ್ನಡ ಜಿಲ್ಲೆ ಹೊಂದಿರುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿ ಜಿಲ್ಲೆಯನ್ನು 'ಕೆನರಾ' ಎಂಬುದಾಗಿ ಕರೆಯಲಾಗುತ್ತಿತ್ತು. ವಿಲಿಯಂ ಪಾಯಸ್ ಮತ್ತು ವಿನ್ಸೆಂಟ್ ಮೆಂಡೋನ್ಸಾರವರು ತಮ್ಮ ಗ್ರಂಥವಾದ, 'ದ ಲ್ಯಾಂಡ್ ಕಾಲ್ಡ್ ಸೌತ್ ಕೆನರಾ'ದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಬೆಳೆದುಬಂದ ರೀತಿ, ಇಲ್ಲಿನ ಆಚಾರ–ವಿಚಾರಗಳು, ಸಾಂಸ್ಕೃತಿಕ ಹಿನ್ನೆಲೆ, ಜನರ ಜೀವನಕ್ರಮ ಮತ್ತು ಹಬ್ಬಗಳ ಬಗ್ಗೆ ಕುತೂಹಲಕಾರಿ ಮಾಹಿತಿಯನ್ನು ನೀಡಿರುತ್ತಾರೆ. ಹಿಂದೆ ಕರಾವಳಿ ಪ್ರದೇಶದಲ್ಲಿ ಎರಡು ಜಿಲ್ಲೆಗಳು ಮಾತ್ರ ಅಸ್ತಿತ್ವದಲ್ಲಿದ್ದವು. ಈ ಪ್ರದೇಶವನ್ನು ಒಟ್ಟಾಗಿ 'ಕೆನರಾ' ಎಂಬುದಾಗಿ ಕರೆಯಲಾಗುತ್ತಿತ್ತು. ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ವ್ಯಾಪಾರದ ಕಾರಣಕ್ಕಾಗಿ ಬಂದಂತಹ ಪೋರ್ಚುಗೀಸರು ಈ ಪ್ರದೇಶದಲ್ಲಿ ಜನರ ಆಡುಭಾಷೆ ಕನ್ನಡ ಆಗಿರುವುದನ್ನು ಕಾಣುತ್ತಾರೆ. ಪೋರ್ಚುಗೀಸ್ ಭಾಷೆಯಲ್ಲಿ 'ಡ' ಎಂಬ ಅಕ್ಷರದ ಉಚ್ಛಾರ ಇಲ್ಲದೇ ಇದ್ದುದರಿಂದ ಅವರು ಈ ಪ್ರದೇಶಗಳನ್ನು 'ಕೆನರಾ' ಎಂಬುದಾಗಿ ಕರೆಯಲು ಆರಂಭಿಸಿದರು ಎಂದು ಉಲ್ಲೇಖಿಸಿರುತ್ತಾರೆ.

ಕರಾವಳಿ ಕರ್ನಾಟಕದ ಇತಿಹಾಸದಲ್ಲಿ 1799ರ ವರ್ಷ ಅತ್ಯಂತ ಮಹತ್ವವನ್ನು ಪಡೆದಿರುತ್ತದೆ. ಜೂನ್ 22, 1799ರಲ್ಲಿ ಕರಾವಳಿ ಪ್ರದೇಶದ ಆಡಳಿತದ ನಿಯಂತ್ರಣವನ್ನು ಹೊಂದಿದ್ದ ಟಿಪ್ಪು ಸುಲ್ತಾನ್‌ನನ್ನು ಮೈಸೂರು ಕದನದ ಮೂಲಕ ಸೋಲಿಸಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಪ್ರದೇಶವನ್ನೊಳಗೊಂಡ ಆಡಳಿತವನ್ನು ಬ್ರಿಟೀಷರು ತಮ್ಮ ತೆಕ್ಕೆಗೆ ತೆಗೆದುಕೊಂಡರು.[7] ಇದರೊಂದಿಗೆ ಕರಾವಳಿ ಪ್ರದೇಶದಲ್ಲಿ ವಿಧ್ಯುಕ್ತವಾಗಿ ಬ್ರಿಟೀಷರ ವಸಾಹತುಶಾಹಿ ಆಡಳಿತ ವ್ಯವಸ್ಥೆ ಆರಂಭವಾಯಿತು. ಕೆನರಾ ಪ್ರದೇಶವನ್ನು ಸ್ವಾಧೀನಪಡಿಸುವುದರೊಂದಿಗೆ ಬ್ರಿಟಿಷ್ ಆಡಳಿತ ವ್ಯವಸ್ಥೆಗೆ, ಮದ್ರಾಸಿನಿಂದ ಬಾಂಬೆ ಪ್ರಾಂತ್ಯದವರೆಗಿನ ವ್ಯೂಹಾತ್ಮಕವಾಗಿ ಅತ್ಯಂತ ಪ್ರಾಮುಖ್ಯತೆಯನ್ನು ಒಳಗೊಂಡ ಕರಾವಳಿ ಭೂಪ್ರದೇಶಗಳು ದೊರಕಿತು. ವ್ಯಾಪಾರದ ದೃಷ್ಟಿಯಿಂದ ಬ್ರಿಟೀಷರಿಗೆ ದಕ್ಷಿಣ ಕನ್ನಡದ ಸ್ವಾಧೀನ ಪ್ರಮುಖ ಲಾಭವನ್ನು ತಂದಿತ್ತು. 'ವ್ಯಾಪಾರವು ಬೆಳವಣಿಗೆಯ ಪ್ರಮುಖ ಯಂತ್ರವಾಗಿರುತ್ತದೆ' ಎಂಬ ಅರ್ಥಶಾಸ್ತ್ರದ ಸಾಂಪ್ರದಾಯಿಕ ಜನಪ್ರಿಯ ಘೋಷಣೆಯು ಬ್ರಿಟೀಷ್ ವಸಾಹತುಶಾಹಿ ವ್ಯವಸ್ಥೆಯ ಅರಿವಿಗೆ 1799ರಲ್ಲಿಯೇ ಬಂದಿತ್ತು. ಆದರೆ ಹಲವಾರು ಕಾರಣಗಳಿಂದಾಗಿ ವ್ಯಾಪಾರವು ಕರಾವಳಿ ಕರ್ನಾಟಕದ ಅಭಿವೃದ್ಧಿಗೆ ಕಾರಣವಾಗದೆ ಇಂಗ್ಲೆಂಡಿನ ಅಭಿವೃದ್ಧಿಗೆ ಪೂರಕವಾಗಿ ಪರಿಣಮಿಸಿದ್ದು[8] ಚರಿತ್ರೆಯನ್ನು ಗಮನಿಸಿದಾಗ ಕಂಡುಬರುತ್ತದೆ.

ಕೆನರಾ ಪ್ರದೇಶದ ಪ್ರಥಮ ಕಲೆಕ್ಟರ್ ಆಗಿದ್ದಂತಹ ಸರ್. ಥಾಮಸ್ ಮುನ್ರೋರವರು ತಮ್ಮ ದೂರದೃಷ್ಟಿತ್ವ, ಮುತ್ಸದ್ಧಿತನ ಹಾಗೂ ನಾಯಕತ್ವ ಗುಣಗಳಿಗಾಗಿ ಪ್ರಸಿದ್ಧಿ ಪಡೆದವರು. 1800ನೇ ಇಸವಿಯಲ್ಲಿ ಮದ್ರಾಸ್‌ನ ಕಂದಾಯ ಇಲಾಖೆಗೆ ಬರೆದ ಎರಡು ಪತ್ರದಲ್ಲಿ ತಮ್ಮ ವಸಾಹತುಶಾಹಿ ಧೋರಣೆಯನ್ನು ಪ್ರದರ್ಶಿಸುತ್ತಾ, ಕೆನರಾ ಪ್ರದೇಶವು ಯಾವತ್ತಿಗೂ ಒಂದು ಉತ್ಪಾದನಾ ಚಟುವಟಿಕೆಗಳಿಗೆ ಪೂರಕವಾದ ಪ್ರದೇಶವಾಗಿರುವುದಿಲ್ಲವೆಂದು ಉಲ್ಲೇಖಿಸುತ್ತಾ, 'ಕೆನರಾ ಪ್ರದೇಶವು ಪ್ರಾಯಶಃ ಉತ್ಪಾದನೆಗೆ ಪೂರಕವಾದ ಪ್ರದೇಶವಾಗಿರುವುದಿಲ್ಲ. ಕೈಗಾರಿಕೆಗಳ ಬೆಳವಣಿಗೆಗೆ ಸಹಕಾರಿಯಾದ ಯಾವುದೇ ಕಚ್ಚಾ ಸಾಮಾಗ್ರಿಗಳನ್ನು ಅದು ಉತ್ಪಾದಿಸುವುದಿಲ್ಲ. ಈ ಭಾಗದಲ್ಲಿ ವರ್ಷದ ಹೆಚ್ಚಿನ ತಿಂಗಳು ಭಾರೀ ಪ್ರಮಾಣದಲ್ಲಿ ಮಳೆಯಾಗುವ ಕಾರಣ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗೆ ಶುಭ್ರ ಆಕಾಶ, ತೆರೆದ ಬಯಲು ಪ್ರದೇಶದ ಅವಶ್ಯಕತೆ ಹೆಚ್ಚಿರುವ ಕಾರಣದಿಂದಾಗಿ ಈ ಪ್ರದೇಶವು ಯಾವತ್ತಿಗೂ ಕೈಗಾರಿಕೆಗಳ ಬೆಳವಣಿಗೆಗೆ ಪೂರಕ ವಾತಾವರಣವನ್ನು ಹೊಂದಿರುವುದಿಲ್ಲ'[9] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಗಮನಿಸಬೇಕಾದ ಅಂಶವಾಗಿರುತ್ತದೆ.

ಕೆನರಾ ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಯ ಸಾಧ್ಯತೆಯನ್ನು ಸಾಕಾರಗೊಳಿಸುವಲ್ಲಿ ತಮ್ಮ ವಿಲಕ್ಷಣ ಹಠಮಾರಿ ಧೋರಣೆಯನ್ನು ಮುನ್ರೋರವರು ಪ್ರತಿಪಾದಿಸಿರುತ್ತಾರೆ. ಕೈಗಾರಿಕೆಗಳ ಸ್ಥಾಪನೆಗೆ ಇರುವ ಅಡೆತಡೆಗಳನ್ನು ಒಪ್ಪಿಕೊಂಡ ಮುನ್ರೋರವರು, 'ಕೈಗಾರಿಕೆಗಳ ಅಭಿವೃದ್ಧಿಗೆ ತಡೆಯೊಡ್ಡುವ ಅಂಶಗಳೇ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಯ ಅಭಿವೃದ್ಧಿಗೆ ಪೂರಕ ವಾತಾವರಣವನ್ನು ಸೃಷ್ಟಿಸುತ್ತದೆ'[10] ಎಂಬ ಅಭಿಪ್ರಾಯವನ್ನು

ವ್ಯಕ್ತಪಡಿಸಿರುತ್ತಾರೆ. 1894ರಲ್ಲಿ ಜಿ. ಸ್ಟಾಟೋಕ್‌ರವರು ದಕ್ಷಿಣ ಕನ್ನಡ ಪ್ರದೇಶದ ವಿವರಣೆಗಳನ್ನೊಳಗೊಂಡ ಮದ್ರಾಸ್ ಪ್ರಾಂತ್ಯದ ಮ್ಯಾನ್ಯುವೆಲ್‌ನ ಪ್ರಥಮ ಸಂಪುಟದಲ್ಲಿ ದಕ್ಷಿಣ ಕನ್ನಡ ಪ್ರದೇಶದಲ್ಲಿ ಕೈಗಾರಿಕಾ ಬೆಳವಣಿಗೆಗಳನ್ನು ದಮನಿಸುವ ವಸಾಹತುಶಾಹಿ ವ್ಯವಸ್ಥೆಯ ಧೋರಣೆಯನ್ನು ಪ್ರಬಲವಾಗಿ ಸಮರ್ಥಿಸಿಕೊಂಡಿರುತ್ತಾರೆ.[11] ಈ ರೀತಿಯಲ್ಲಿ ಕೈಗಾರಿಕೆಗೆ ಯೋಗ್ಯವಲ್ಲದ ಭೂಪ್ರದೇಶವೆಂದು ಒಪ್ಪಿಕೊಳ್ಳಲಾದ ಪ್ರದೇಶದಲ್ಲಿ 1970ರ ದಶಕದ ನಂತರ ಕೈಗಾರಿಕಾ ಚಟುವಟಿಕೆಗಳು ಆರಂಭಗೊಂಡು ಆ ಬಳಿಕ ಕರ್ನಾಟಕ ರಾಜ್ಯದಲ್ಲಿಯೇ ಕೈಗಾರಿಕಾ ಕ್ಷೇತ್ರದಲ್ಲಿ ಎರಡನೆಯ ಸ್ಥಾನ ದಕ್ಷಿಣ ಕನ್ನಡ ಜಿಲ್ಲೆಯದಾಗಿರುತ್ತದೆ.

ಸ್ವಾತಂತ್ರ್ಯ ನಂತರದಲ್ಲಿ ರಾಜ್ಯಗಳನ್ನು ಭಾಷಾವಾರು ನೆಲೆಗಳಾಗಿ ಪುನರ್‌ವಿಂಗಡಿಸುವುದಕ್ಕಿಂತ ಪೂರ್ವದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಜನಸಂಖ್ಯೆ 17,48,991 ಆಗಿತ್ತು. ಇದರಲ್ಲಿ ಪುರುಷರ ಸಂಖ್ಯೆ 8,41,009 ಹಾಗೂ ಮಹಿಳೆಯರ ಸಂಖ್ಯೆ 9,07,982 ಇದ್ದುದು ಕಾಣಸಿಗುತ್ತದೆ.[12] ಹಿಂದಿನಿಂದಲೂ ಜನಸಂಖ್ಯೆಯ ಲಿಂಗಾನುಪಾತವನ್ನು ಗಮನಿಸಿದಾಗ ಜಿಲ್ಲೆಯಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣ ಹೆಚ್ಚಿರುವುದನ್ನು ಗಮನಿಸಬಹುದು. 1991ರ ಜನಗಣತಿಗೆ ಅನುಗುಣವಾಗಿ ಜಿಲ್ಲೆಯನ್ನು ಉಡುಪಿ ಹಾಗೂ ದಕ್ಷಿಣ ಕನ್ನಡ ಎಂಬುದಾಗಿ ಅಧಿಕೃತವಾಗಿ ವಿಭಜಿಸುವುದಕ್ಕಿಂತ ಮೊದಲಿನ ಒಟ್ಟು ಜನಸಂಖ್ಯೆ 19,31,670 ಆಗಿದ್ದು ಇದರಲ್ಲಿ 9,25,369 ಪುರುಷರು ಹಾಗೂ 10,06,301 ಮಹಿಳೆಯರಾಗಿದ್ದರು[13]. 2011ರ ಜನಗಣತಿಯ ಪ್ರಕಾರ, ದಕ್ಷಿಣ ಕನ್ನಡ ಜಿಲ್ಲೆಯು ಒಟ್ಟು 20,89,649 ಜನಸಂಖ್ಯೆಯನ್ನು ಹೊಂದಿದ್ದು, 4,861 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ಇವರಲ್ಲಿ ಪುರುಷರ ಸಂಖ್ಯೆ ಒಟ್ಟು 10,34,714 ಮತ್ತು ಮಹಿಳೆಯರ ಸಂಖ್ಯೆ ಒಟ್ಟು 10,54,935 ಆಗಿದೆ. 2001ರಲ್ಲಿ ಜಿಲ್ಲೆಯ ಒಟ್ಟು ಜನಸಂಖ್ಯೆ 18,97,730 ಆಗಿತ್ತು. ಅವರಲ್ಲಿ 9,38,434 ಪುರುಷರು ಮತ್ತು 9,59,296 ಮಹಿಳೆಯರಾಗಿದ್ದರು. ಇದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದವರ ಸಂಖ್ಯೆ ಹೆಚ್ಚಾಗಿತ್ತು. ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರ ಪ್ರಮಾಣ 11,68,428 ಆಗಿದ್ದರೆ, ನಗರ ಪ್ರದೇಶಗಳಲ್ಲಿ 7,29,302 ಜನರು ವಾಸಿಸುತ್ತಿದ್ದುದು ಕಂಡುಬರುತ್ತದೆ.[14] 2001ರ ಒಟ್ಟು ಜನಸಂಖ್ಯೆಕ್ಕಿಂತ, 2011ರಲ್ಲಿ ಶೇ 10.11ರಷ್ಟು ಏರಿಕೆ ಆಗಿದೆ. ಆದರೆ ಈ ಪ್ರಮಾಣ 1991–2001ರ ನಡುವೆ ಶೇ.14.59ರಷ್ಟಿತ್ತು. 2011ರಲ್ಲಿ ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ. 88.13 ಆಗಿದ್ದರೆ, 2001ರಲ್ಲಿ ಈ ಪ್ರಮಾಣ ಶೇ. 83.35ರಷ್ಟಿತ್ತು. 2011ರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇ. 93.13 ಆಗಿದ್ದರೆ, ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. 84.13ರಷ್ಟಿದೆ. 2001ರಲ್ಲಿ ಈ ಪ್ರಮಾಣವು, ಪುರುಷರು ಶೇ. 89.70 ಮತ್ತು ಮಹಿಳೆಯರು ಶೇ. 77.21 ಆಗಿತ್ತು. 2011ರಲ್ಲಿ, ಜಿಲ್ಲೆಯ ಒಟ್ಟು ಸಾಕ್ಷರತೆಯ ಸಂಖ್ಯೆ 16,66,232 ಆಗಿದೆ. ಇವರಲ್ಲಿ 8,64,019 ಪುರುಷರು ಮತ್ತು 8,02,304 ಮಹಿಳೆಯರು ಸೇರಿದ್ದಾರೆ. 2001ರಲ್ಲಿ ಒಟ್ಟು ಸಾಕ್ಷರತೆಯ ಸಂಖ್ಯೆ 13,91,738 ಆಗಿತ್ತು.[15] ಜಿಲ್ಲೆಯ ಸಾಕ್ಷರತೆಯ ಮಟ್ಟ, ರಾಷ್ಟ್ರೀಯ ಸಾಕ್ಷರತೆಯ ಮಟ್ಟಕ್ಕಿಂತ ಹೆಚ್ಚಿದ್ದು, ವೃತ್ತಿಪರ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಿದ್ದು,

ದೇಶ ವಿದೇಶಗಳ ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ಉನ್ನತ ವ್ಯಾಸಂಗದಲ್ಲಿ ತೊಡಗಿರುತ್ತಾರೆ. 2011ರ ಜನಗಣತಿಯ ಪ್ರಕಾರ, ಜಿಲ್ಲೆಯು, 1000 ಪುರುಷರಿಗೆ 1,020 ಮಹಿಳೆಯರ ಲಿಂಗಾನುಪಾತವನ್ನು ಹೊಂದಿದೆ. 2001ರಲ್ಲಿ ಈ ಪ್ರಮಾಣವು 1,022 ಆಗಿತ್ತು. 2011ರ ಪ್ರಕಾರ ಭಾರತದ ಸರಾಸರಿ ಲಿಂಗಾನುಪಾತವು 940 ಆಗಿದೆ. ಅಂತೆಯೇ ಜಿಲ್ಲೆಯ ಮಕ್ಕಳ ಲಿಂಗಾನುಪಾತವು 1000 ಹುಡುಗರಿಗೆ 947 ಹುಡುಗಿಯರ ಪ್ರಮಾಣವಿದೆ. 2001ರಲ್ಲಿ 1000 ಹುಡುಗರಿಗೆ 952 ಹುಡುಗಿಯರ ಪ್ರಮಾಣವಿತ್ತು.[16] ದಕ್ಷಿಣಕನ್ನಡ ಜಿಲ್ಲೆಯಲ್ಲಿ ಶೇಕಡಾ 60ರಷ್ಟು ಜನರು ಕೃಷಿಯನ್ನು ತಮ್ಮ ಜೀವನ ನಿರ್ವಹಣೆಗಾಗಿ ಹಿಂದೆ ಅವಲಂಬಿಸಿದ್ದರು. ಇಲ್ಲಿ ಬೆಳೆಯುತ್ತಿದ್ದ ಅಕ್ಕಿ, ತೆಂಗು, ಅಡಿಕೆ, ಗೇರು ಮುಂತಾದ ಕೃಷಿ ಉತ್ಪನ್ನಗಳು, ಹೇರಳವಾಗಿ ಸಿಗುವ ಮೀನುಗಳು ಇಲ್ಲಿಯ ಆರ್ಥಿಕತೆಯ ಬುನಾದಿ. ಮಾನವ ವಿಕಾಸ ಸೂಚ್ಯಂಕದಲ್ಲಿ ಕರಾವಳಿ ಜಿಲ್ಲೆಗಳು ರಾಜ್ಯದ ಇತರ ಜಿಲ್ಲೆಗಳಿಗಿಂತ ಮೇಲ್ಮಟ್ಟದಲ್ಲಿವೆ.

ಜನಸಂಖ್ಯೆಯಲ್ಲಿ 78% ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದು, 12% ಮುಸ್ಲಿಮರು, 8% ಕ್ರೈಸ್ತಧರ್ಮದವರು, 1%ದಷ್ಟು ಜನರು ಜೈನರಾಗಿದ್ದು, 1% ಇತರ ಧರ್ಮವನ್ನು ಅನುಸರಿಸುವವರಾಗಿದ್ದಾರೆ.[17] ಕನ್ನಡ, ತುಳು, ಕೊಂಕಣಿ ಮತ್ತು ಬ್ಯಾರಿ ಭಾಷೆಗಳು ಇಲ್ಲಿನ ಜನರ ಪ್ರಮುಖ ಭಾಷೆಗಳಾಗಿವೆ. ಅತ್ಯುತ್ತಮ ರೈಲ್ವೆ, ರಸ್ತೆ, ವಿಮಾನ ಸಾರಿಗೆ ವ್ಯವಸ್ಥೆ ಮತ್ತು ನವಮಂಗಳೂರು ಬಂದರನ್ನು ಜಿಲ್ಲೆ ಹೊಂದಿದ್ದು, ಇದು ಇಲ್ಲಿನ ಜನರ ಜೀವನಮಟ್ಟವನ್ನು ಉತ್ತಮಗೊಳಿಸಿದೆ ಹಾಗೂ ಬೃಹತ್ ಕೈಗಾರಿಕೆಗಳು ತಮ್ಮ ನೆಲೆಯನ್ನು ಇಲ್ಲಿ ಕಂಡುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುತ್ತದೆ.

ಇತಿಹಾಸಕಾರರು, ಸಮಾಜಶಾಸ್ತ್ರದ ವಿದ್ವಾಂಸರು, ಭೌಗೋಳಿಕ ಹಾಗೂ ಆರ್ಥಿಕ ತಜ್ಞರುಗಳು ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯಗಳ ಬಗ್ಗೆ ಸಮಗ್ರವಾಗಿ ಅಧ್ಯಯನಗಳನ್ನು ನಡೆಸಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ತುಳುನಾಡು, ತುಳುವ[18] (ತುಳು ಭಾಷೆಯನ್ನಾಡುವ ಜನರನ್ನೊಳಗೊಂಡಿರುವ ಭೂಪ್ರದೇಶ) ಇತ್ಯಾದಿ ವಿವಿಧ ಹೆಸರುಗಳಲ್ಲಿ ಕರೆಯಲಾಗುತ್ತದೆ. ಪ್ರಾದೇಶಿಕವಾಗಿ ಹೆಚ್ಚಿನ ಜನರು ಸಂವಹನಕ್ಕಾಗಿ ತುಳು ಭಾಷೆ ಉಪಯೋಗಿಸುವುದನ್ನು ಕಾಣಬಹುದು. ಜನಸಾಂದ್ರತೆಯ ಪ್ರಮಾಣವು ಜಿಲ್ಲೆಯಲ್ಲಿ ಅತೀ ಹೆಚ್ಚಾಗಿದ್ದು ಒಂದು ಕಿ.ಮೀ. ವ್ಯಾಪ್ತಿಯಲ್ಲಿ 457 ಜನರು ವಾಸಿಸುತ್ತಿದ್ದರು. ಈ ಅಂಕಿಅಂಶಗಳನ್ನು ಕರ್ನಾಟಕ ರಾಜ್ಯದ ಇತರ ಪ್ರದೇಶಗಳಿಗೆ ಹೋಲಿಸಿದರೆ ಜನಸಾಂದ್ರತೆಯ ಪ್ರಮಾಣ 2001ರ ಜನಗಣತಿಯ ಪ್ರಕಾರ 276 ಆಗಿರುತ್ತದೆ.[19] ಜನಸಂಖ್ಯೆಯ ಸಾಂದ್ರತೆಗೆ ಹೋಲಿಸಿದರೆ ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕದಲ್ಲಿ ಬೆಂಗಳೂರು ನಗರ ಜಿಲ್ಲೆಯ ನಂತರದ ಅಂದರೆ ಎರಡನೇ ಸ್ಥಾನದಲ್ಲಿದೆ. ರಾಜ್ಯ ಜನಗಣತಿ ಇಲಾಖೆಯ ಮಾಹಿತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯು ಜನಸಾಂದ್ರತೆಯ ಪ್ರಮಾಣದಲ್ಲಿ 2001 ಮತ್ತು 2011ರ ಜನಗಣತಿಯ ಪ್ರಕಾರ ದ್ವಿತೀಯ ಸ್ಥಾನದಲ್ಲಿದೆಯೆಂಬುದನ್ನು ತಿಳಿಸುತ್ತದೆ.[20] ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಮೂರನೇ ಸ್ಥಾನದಲ್ಲಿರುತ್ತದೆ.

ಕೋಷ್ಟಕ–2.1: ಕರ್ನಾಟಕದ ಕರಾವಳಿ ಜಿಲ್ಲೆಗಳ ಸಾಮಾನ್ಯ ವಿವರಗಳು

ವಿವರಗಳು	ಕರ್ನಾಟಕ ರಾಜ್ಯ	ದಕ್ಷಿಣ ಕನ್ನಡ	ಉಡುಪಿ
ಜನಸಂಖ್ಯೆ	6,11,30,709	20,89,649	11,77,708
ವಿಸ್ತೀರ್ಣ (ಚ.ಕಿ.ಮೀ.ಗಳಲ್ಲಿ)	1,91,791	4,559	3,575
ಜನಸಾಂದ್ರತೆ (ಪ್ರತಿ ಕಿ.ಮೀ.ಗೆ)	319	457	287
ಸಾಕ್ಷರತೆಯ ಮಟ್ಟ	75.60%	88.13%	86.29%
ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಪಡೆದಿರುವವರ ರ‍್ಯಾಂಕ್	07(ರಾಜ್ಯಗಳಲ್ಲಿ)	02(ಜಿಲ್ಲೆಗಳಲ್ಲಿ)	03(ಜಿಲ್ಲೆಗಳಲ್ಲಿ)
ತಲಾ ವರಮಾನ	36,954	47,151	39,307
ಒಟ್ಟು ಆದಾಯ (ಲಕ್ಷಗಳಲ್ಲಿ)	2,11,66,253	9,69,984	4,73,922
ಜನಸಂಖ್ಯೆಗೆ ಅನುಗುಣವಾಗಿರುವ ಕಾರ್ಮಿಕರ ಪ್ರಮಾಣ	44.30%	50.00%	44.00%

(ಮೂಲ ಆಧಾರ – ಕೇಂದ್ರ ಸರಕಾರ ಜನಗಣತಿ – 2011 ಮತ್ತು ಕರ್ನಾಟಕ ಸರಕಾರ – 2010)

ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಅಭಿವೃದ್ಧಿಯನ್ನು ಗಮನಿಸಿದಾಗ 1970ರ ದಶಕ ಜಿಲ್ಲೆಯಲ್ಲಿ ಪರಸ್ಪರ ಎರಡು ವಿರೋಧಾಭಾಸದ ದೃಶ್ಯಗಳು ಕಂಡುಬಂದಿದ್ದನ್ನು ಗಮನಿಸಬಹುದು. ಅವುಗಳೆಂದರೆ, ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದಿದ್ದ ಜಿಲ್ಲೆ 1974ರ ನಂತರ ನವಮಂಗಳೂರು ಬಂದರಿನ ಉದ್ಘಾಟನೆಯೊಂದಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಸಾಧಿಸಲು ಆರಂಭಿಸಿತು ಆದರೆ, ಅಲ್ಲಿಯವರೆಗೆ ಕೃಷಿ ಪ್ರಧಾನವಾಗಿದ್ದ ವ್ಯವಸ್ಥೆಯಲ್ಲಿ ಕೃಷಿ ಚಟುವಟಿಕೆಗಳು ಕ್ಷೀಣಿಸಲು ಆರಂಭವಾದ ಚಿತ್ರಣ ಜಿಲ್ಲೆಯಲ್ಲಿ ದೊರಕುತ್ತದೆ. ಆ ಸಂದರ್ಭದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಕೈಗಾರಿಕೆಗಳು ಕಾರ್ಯಾರಂಭವನ್ನು ಮಾಡಿರುವುದು ಕಂಡುಬಂದಿರುತ್ತದೆ. ಕರ್ನಾಟಕ ಸರಕಾರದ ಯೋಜನಾ ಇಲಾಖೆ 1960–61ರಿಂದ 1970–71ರ ಅವಧಿಯಲ್ಲಿ ಅಭಿವೃದ್ಧಿಯ ಪ್ರಮುಖ ಮಾಪನಗಳಾದ ಕೃಷಿ, ಕೈಗಾರಿಕೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಳನ್ನು ಪರಿಗಣಿಸಿ ರಾಜ್ಯದ ಎಲ್ಲಾ ಜಿಲ್ಲೆಗಳ ಅಭಿವೃದ್ಧಿ ಚಟುವಟಿಕೆಗಳು ಮತ್ತು ಪ್ರಗತಿಯ ವಿಶ್ಲೇಷಣೆಯನ್ನು ಮಾಡಿತ್ತು. ಯೋಜನಾ ಇಲಾಖೆ ಮಾಡಿದ ವರ್ಗೀಕರಣಕ್ಕೆ ಅನುಗುಣವಾಗಿ ಕೈಗಾರಿಕಾ ಅಭಿವೃದ್ಧಿಯನ್ನು ಸಾಧಿಸಿರುವ ಮೈಸೂರು ಜಿಲ್ಲೆಯಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯೂ ಕೈಗಾರಿಕಾ ಕ್ಷೇತ್ರದಲ್ಲಿ ಮುಂದುವರಿದಿರುತ್ತದೆ ಆದರೆ ಕೃಷಿ ಚಟುವಟಿಕೆಗಳಲ್ಲಿ ಧಾರವಾಡ ಜಿಲ್ಲೆಯಷ್ಟು ಪ್ರಗತಿಯನ್ನು ಸಾಧಿಸಿಲ್ಲ[21] ಎಂಬ ವರದಿಯನ್ನು ನೀಡಿತು. ಮುನ್ರೋರವರ ಕಲ್ಪನೆಯಂತೆ ಕೈಗಾರಿಕೆಗಳ ಬೆಳವಣಿಗೆಗೆ ಸಾಧ್ಯತೆ ಇಲ್ಲದ ಪ್ರದೇಶದಲ್ಲಿ 1970ರ ದಶಕದ ಬಳಿಕ ಕೈಗಾರಿಕೆಗಳು ಆರಂಭವಾಗಿ ಪ್ರಗತಿ ಸಾಧಿಸಿರುವುದನ್ನು ಕಾಣಬಹುದು.

ಜಿಲ್ಲೆಯ ಒಟ್ಟು ವಾರ್ಷಿಕ ಆದಾಯ ಮತ್ತು ತಲಾ ವರಮಾನವು 2003–04ರಲ್ಲಿ ರೂ.7,75,981 ಮತ್ತು ರೂ.39,564 ಆಗಿರುತ್ತದೆ. ಗರಿಷ್ಠ ವಾರ್ಷಿಕ ಆದಾಯ ಮತ್ತು ತಲಾ ವರಮಾನದ ಲೆಕ್ಕಾಚಾರದಲ್ಲಿ ಬೆಂಗಳೂರು ನಗರ ಜಿಲ್ಲೆಯ ನಂತರದ ಸ್ಥಾನವನ್ನು ದಕ್ಷಿಣ ಕನ್ನಡ ಜಿಲ್ಲೆಯು ಪಡೆದಿರುತ್ತದೆ. ಕೃಷಿ ಕ್ಷೇತ್ರದ ಅವಲಂಬನೆಯಿಂದ ಹೊರಬಂದು ಇತರ ಕ್ಷೇತ್ರಗಳಲ್ಲಿ ವಿಶೇಷವಾಗಿ ಕೈಗಾರಿಕೆಗಳ ಸ್ಥಾಪನೆಯ ಚಟುವಟಿಕೆಗಳು ಆರಂಭವಾದ ನಂತರ ಜಿಲ್ಲೆಯ ತಲಾ ವರಮಾನವು ಏರಿಕೆಯಾಗಲು ಕಾರಣವಾಗಿರುತ್ತದೆ.[22] ಮಾನವ ಅಭಿವೃದ್ಧಿ ಸೂಚ್ಯಂಕಗಳಿಗೆ ಸಂಬಂಧಪಟ್ಟಂತೆ ಜಿಲ್ಲೆಯು ರಾಜ್ಯದಲ್ಲಿ ದ್ವಿತೀಯ ಸ್ಥಾನವನ್ನು ಹೊಂದಿದ್ದು ಮೌಲ್ಯವು 0.722 ಆಗಿರುತ್ತದೆ.[23] ರಾಜ್ಯ ಸರಕಾರ ನೇಮಿಸಿದ ಪ್ರಾದೇಶಿಕ ಅಸಮತೋಲನದ ಅಧ್ಯಯನಕ್ಕೆ ಸಂಬಂಧಪಟ್ಟಂತಹ ಉನ್ನತ ಅಧಿಕಾರದ ಸಮಿತಿಯ ವರದಿಯು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ ಜಿಲ್ಲೆಯಲ್ಲಿ 15.40% ಆಗಿರುತ್ತದೆಯೆಂದು ತಿಳಿಸುತ್ತದೆ. ಮಂಗಳೂರು ತಾಲೂಕಿನಲ್ಲಿ 8% ಕುಟುಂಬಗಳು ಬಡತನ ರೇಖೆಗಿಂತ ಕೆಳಗಿರುತ್ತದೆಯೆಂದು[24] ತಿಳಿಸಿರುತ್ತದೆ.

ಕೃಷಿ ಕ್ಷೇತ್ರದಲ್ಲಿ ವಾಣಿಜ್ಯೀಕರಣವನ್ನು ಸಾಧಿಸಿದ ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡವು ಪ್ರಮುಖವಾಗಿರುತ್ತದೆ. 1980–81ರವರೆಗೆ ಭತ್ತದ ಬೆಳೆಯನ್ನು ಇಲ್ಲಿನ ಕೃಷಿಕರು ಹೆಚ್ಚಾಗಿ ಬೆಳೆಯುತ್ತಿದ್ದರು. 60%ದಷ್ಟು ಜನರು ಗ್ರಾಮಾಂತರ ಪ್ರದೇಶದಲ್ಲಿ ತಮ್ಮ ಜೀವನಕ್ಕಾಗಿ 1970ರ ಮೊದಲು ಕೃಷಿ ಚಟುವಟಿಕೆಗಳನ್ನೇ ನೆಚ್ಚಿಕೊಂಡಿದ್ದರು. ನಂತರದಲ್ಲಿ ಕೃಷಿ ಚಟುವಟಿಕೆಗಳು ವಾಣಿಜ್ಯೀಕರಣಗೊಂಡು ಮಾರುಕಟ್ಟೆಯಲ್ಲಿ ಹೆಚ್ಚು ಮೌಲ್ಯವನ್ನು ತರುವ ಅಡಿಕೆ, ಕೋಕೊ, ರಬ್ಬರ್, ವೆನಿಲ್ಲಾ ಬೆಳೆಯನ್ನು ಬೆಳೆಸುವುದಕ್ಕೆ ಇಲ್ಲಿನ ಕೃಷಿಕರು ಹೆಚ್ಚಿನ ಒಲವನ್ನು ತೋರಿರುವುದನ್ನು ಗಮನಿಸಬಹುದು. 2010–11ರಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತಿದ್ದ ಭೂಮಿಗಳಲ್ಲಿ 35% ಮಾತ್ರ ಭತ್ತದ ಬೆಳೆಯನ್ನು ಬೆಳೆಯುತ್ತಿದ್ದರೆ, 1980–81ರ ಮಾಹಿತಿಯ ಪ್ರಕಾರ ಒಟ್ಟು 55% ಕೃಷಿ ಭೂಮಿಯಲ್ಲಿ ರೈತರು ಭತ್ತದ ಬೆಳೆ ತೆಗೆಯುತ್ತಿದ್ದುದು ಕಾಣಸಿಗುತ್ತದೆ.[25] 2013–14ರಲ್ಲಿ ಪಡೆದ ಮಾಹಿತಿಗಳು ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳಿಗೆ ಉಪಯೋಗಿಸಲ್ಪಡುತ್ತಿರುವ ಭೂಮಿಗಳಲ್ಲಿ 27% ಭಾಗದಲ್ಲಿ ಮಾತ್ರ ಭತ್ತವನ್ನು ಬೆಳೆಯಲಾಗುತ್ತಿದೆಯೆಂಬ ಮಾಹಿತಿಯನ್ನು ನೀಡುತ್ತದೆ.[26] ಸ್ವಾತಂತ್ರ್ಯ ನಂತರ 1960ರ ದಶಕದಲ್ಲಿ 60%ಕ್ಕಿಂತಲೂ ಹೆಚ್ಚಿನ ಭೂಮಿಯಲ್ಲಿ ಭತ್ತವನ್ನು ಬೆಳೆಯುತ್ತಿರುವ ಪ್ರದೇಶದಲ್ಲಿ ಇಂದು ಕೇವಲ 27% ಭೂಮಿಯಲ್ಲಿ ಮಾತ್ರ ಭತ್ತದ ಬೆಳೆ ತೆಗೆಯಲಾಗುತ್ತಿದೆಯೆಂಬ ಅಂಶವು ಪ್ರಮುಖವಾಗಿ ಎರಡು ವಿಚಾರಗಳನ್ನು ಸ್ಪಷ್ಟಪಡಿಸುತ್ತದೆ. ಪ್ರಥಮವಾಗಿ ಕೃಷಿಕರು ಹೆಚ್ಚು ಲಾಭವನ್ನು ತರುವ ವಾಣಿಜ್ಯ ಬೆಳೆಗಳಿಗೆ ಪ್ರಾಶಸ್ತ್ಯ ನೀಡಿರುವುದು ಕಾರಣವಾದರೆ, ಕೈಗಾರಿಕೆಗಳ ಸ್ಥಾಪನೆ, ನಗರಗಳ ವಿಸ್ತರಣೆ, ರಿಯಲ್ ಎಸ್ಟೇಟ್ ಉದ್ಯಮಗಳು ಬೆಳೆದಿರುವುದು ಕೃಷಿ ಚಟುವಟಿಕೆಯು ಕುಂಠಿತಗೊಳ್ಳಲು ಕಾರಣವಾಗಿರುತ್ತದೆಯೆಂಬುದನ್ನು ತಿಳಿಸುತ್ತದೆ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಜಿಲ್ಲೆ ಅದ್ವಿತೀಯ ಸಾಧನೆಯನ್ನು ಮಾಡಿರುತ್ತದೆ. 19ನೇ ಶತಮಾನದಲ್ಲಿ ಬಾಸೆಲ್ ಮಿಷನರೀಸ್‌ನವರು ಸ್ಥಳೀಯರಿಗೆ ಉದಾರವಾದಿ ಇಂಗ್ಲೀಷ್ ಶಿಕ್ಷಣವನ್ನು ನೀಡುವುದಕ್ಕಾಗಿ ಪ್ರಥಮವಾಗಿ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಅಲ್ಲದೇ ಇತರ ಧರ್ಮಗಳಿಂದ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಜನರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಹಂಚಿನ ಕಾರ್ಖಾನೆ, ಮುದ್ರಣಾಲಯ, ಇತ್ಯಾದಿ ಕೈಗಾರಿಕೆಗಳನ್ನೂ ಸ್ಥಾಪಿಸಿ ಕೈಗಾರಿಕೀಕರಣ ಪ್ರಕ್ರಿಯೆಗೆ ಚಾಲನೆ ನೀಡಿದರು.[27] ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯು ಶೈಕ್ಷಣಿಕ ಕ್ಷೇತ್ರದಲ್ಲಿ ಅಸಾಧಾರಣವಾದ ಸಾಧನೆಯನ್ನು ಮಾಡಿ ಜಗತ್ತಿನ ನಕಾಶೆಯಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿರುತ್ತದೆ. ದೇಶ ವಿದೇಶಗಳ ಸಾವಿರಾರು ವಿದ್ಯಾರ್ಥಿಗಳು ಜಿಲ್ಲೆಯಲ್ಲಿ ತಮ್ಮ ಅಧ್ಯಯನವನ್ನು ಮುಂದುವರಿಸಿರುತ್ತಾರೆ. ರಾಷ್ಟ್ರದಲ್ಲಿಯೇ ಪ್ರಸಿದ್ಧಿಯನ್ನು ಪಡೆದಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್.ಐ.ಟಿ.ಕೆ)ಯ ಕ್ಯಾಂಪಸ್ ಪ್ರಸ್ತುತ ಅಧ್ಯಯನ ಕೈಗೊಂಡಿರುವ ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾವರದಿಂದ ಸುಮಾರು ಹತ್ತು ಕಿ.ಮೀ. ದೂರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ ಹನ್ನೆರಡು ವೈದ್ಯಕೀಯ, ಐದು ದಂತ ವೈದ್ಯಕೀಯ, ಹದಿನೆಂಟು ಇಂಜಿನಿಯರಿಂಗ್, ಒಂದುನೂರ ನಲವತ್ತೆಂಟು ಪದವಿ ಮತ್ತು ವೃತ್ತಿಪರ ಶಿಕ್ಷಣದ ಕಾಲೇಜುಗಳು ಕಾರ್ಯನಿರ್ವಹಿಸುತ್ತಿರುವುದು[28] ಜಿಲ್ಲೆಯಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಲಾದ ಮಹತ್ವವನ್ನು ಸಾರುತ್ತದೆ. ಆರೋಗ್ಯ ಕ್ಷೇತ್ರದಲ್ಲಿಯೂ ಜಿಲ್ಲೆ ಹೆಸರುವಾಸಿಯಾಗಿದ್ದು, ಸರಕಾರಿ ಮತ್ತು ಖಾಸಗಿ ಕ್ಷೇತ್ರದ ಆಸ್ಪತ್ರೆಗಳು ಸ್ಥಳೀಯರಿಗೆ ಆರೋಗ್ಯ ಸೌಲಭ್ಯಗಳನ್ನು ನೀಡುವುದರೊಂದಿಗೆ, ಕರ್ನಾಟಕದ ಇತರ ಜಿಲ್ಲೆಗಳ ಮತ್ತು ಕೇರಳದ ಜನರಿಗೂ ಉತ್ತಮ ಹೊರರೋಗಿ ಆರೋಗ್ಯ ಚಿಕಿತ್ಸೆಯ ಸೌಲಭ್ಯಗಳನ್ನು ಒದಗಿಸಿರುತ್ತದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು 'ಬ್ಯಾಂಕ್‌ಗಳ ತವರೂರು' ಎಂಬುದಾಗಿ ಕರೆಯಲಾಗುತ್ತದೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಜಿಲ್ಲೆಯು ಅದ್ಭುತ ಸಾಧನೆಯನ್ನು ಮಾಡಿದ್ದು ರಾಷ್ಟ್ರದ ಆರ್ಥಿಕತೆಯ ಅಭಿವೃದ್ಧಿಗೆ ಪೂರಕ ವಾತಾವರಣವನ್ನು ಸೃಷ್ಟಿಸಿದ ಇಪ್ಪತ್ತೇಳು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕೆನರಾ, ಸಿಂಡಿಕೇಟ್, ಕಾರ್ಪೋರೇಶನ್ ಮತ್ತು ವಿಜಯಾ ಬ್ಯಾಂಕ್‌ಗಳ ಹುಟ್ಟು ಮತ್ತು ಬೆಳವಣಿಗೆಯಾದದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂದು ಹೇಳಬಹುದು. ಖಾಸಗಿ ಬ್ಯಾಂಕಿಂಗ್ ಸೇವಾ ಕ್ಷೇತ್ರದಲ್ಲಿ ಪ್ರಸಿದ್ಧವಾಗಿ ರಾಷ್ಟ್ರಾದ್ಯಂತ ಸುಮಾರು 700ಕ್ಕಿಂತಲೂ ಹೆಚ್ಚು ಶಾಖೆಗಳನ್ನು ಒಳಗೊಂಡ ಕರ್ನಾಟಕ ಬ್ಯಾಂಕ್ ಹುಟ್ಟಿಕೊಂಡದ್ದು ಮಂಗಳೂರು ನಗರದಲ್ಲಿ. ರಾಷ್ಟ್ರೀಕೃತ ಬ್ಯಾಂಕ್‌ಗಳ 430 ಶಾಖೆಗಳು, ಪ್ರಾದೇಶಿಕ ಗ್ರಾಮಾಂತರ ಬ್ಯಾಂಕ್‌ಗಳ 25 ಶಾಖೆಗಳು ಮತ್ತು ಖಾಸಗಿ ಬ್ಯಾಂಕಿಂಗ್ ಸೇವಾ ಕ್ಷೇತ್ರದ 47 ಶಾಖೆಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು,[29] ಜಿಲ್ಲೆಯ ಆರ್ಥಿಕ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಿರುತ್ತದೆ. ಇವುಗಳಿಗೆ ಪೂರಕವಾಗಿ ಜಿಲ್ಲಾ ಸಹಕಾರಿ ಬ್ಯಾಂಕಿನ 43, ಭೂಅಭಿವೃದ್ಧಿ ಬ್ಯಾಂಕಿನ 5 ಮತ್ತು 114 ಪತ್ತಿನ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದೆ.[30] ಜಿಲ್ಲೆಯು ಹೊಟೇಲ್ ಉದ್ಯಮಕ್ಕೂ ಹೆಸರುವಾಸಿಯಾಗಿದ್ದು ಇಲ್ಲಿನ ಜನರು ಖ್ಯಾತಿ ಪಡೆದಿರುವಂತಹ ಹೊಟೇಲುಗಳನ್ನು

ಮುಂಬೈ, ಪೂನಾ ಮತ್ತು ರಾಷ್ಟ್ರಾದ್ಯಂತ ಸ್ಥಾಪಿಸಿ ಜಿಲ್ಲೆಗೆ ಹೆಸರನ್ನು ತಂದಿರುತ್ತಾರೆ. ವಿದೇಶಗಳಲ್ಲಿ ವಿಶೇಷವಾಗಿ ಕೊಲ್ಲಿ ರಾಷ್ಟ್ರಗಳಲ್ಲಿ ಜಿಲ್ಲೆಯ ಲಕ್ಷಾಂತರ ಮಂದಿ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದು ಜಿಲ್ಲೆಯ ತಲಾ ವರಮಾನ ಮತ್ತು ಆರ್ಥಿಕಾಭಿವೃದ್ಧಿಗೆ ಮಹತ್ತರ ಕೊಡುಗೆಗಳನ್ನು ನೀಡಿರುತ್ತಾರೆ.

ಜಿಲ್ಲೆಯು ಸಾಂಪ್ರದಾಯಿಕ ಮತ್ತು ಆಧುನಿಕ ನಾಗರಿಕತೆಯ ಸಮ್ಮಿಶ್ರಣವಾಗಿದ್ದು ಇಲ್ಲಿನ ಜನರು ಹಿಂದಿನಿಂದ ನಾಗಾರಾಧನೆ, ಭೂತಾರಾಧನೆಯಂತಹ ಸಾಂಪ್ರದಾಯಿಕ ಆರಾಧನಾ ಶೈಲಿಯನ್ನು ಭಕ್ತಿಪೂರ್ವಕವಾಗಿ ನಡೆಸಿಕೊಂಡು ಹಾಗೂ ಪ್ರಾಕೃತಿಕ ಸಂಪತ್ತನ್ನು ಉಳಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಜಿಲ್ಲೆಯ ಸಾಮಾಜಿಕ ಇತಿಹಾಸವನ್ನು ಗಮನಿಸಿದಾಗ ಬಿಲ್ಲವರು, ಬಂಟರು, ಮೊಗವೀರ ಸಮುದಾಯಕ್ಕೆ ಸೇರಿದ ಜನರ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ. ಕೃಷಿಯು ಈ ಪ್ರದೇಶದ ಬಹುಮುಖ್ಯ ಆರ್ಥಿಕ ಚಟುವಟಿಕೆಯಾಗಿತ್ತು. ಇಲ್ಲಿಯ ಬಹುಸಂಖ್ಯಾತ ವರ್ಗ ಅಂದರೆ ಅಂದಾಜು 6,76,250 ಮಂದಿ ಕೃಷಿ ಕ್ಷೇತ್ರದ ಮೇಲೆ ಅವಲಂಬಿತರಾಗಿದ್ದರು. ಈ ವರ್ಗದಲ್ಲಿ ಜಮೀನ್ದಾರರು, ಒಕ್ಕಲುತನ ಮಾಡುವವರು ಮತ್ತು ಕೃಷಿ ಕಾರ್ಮಿಕರಿದ್ದರು. ಕೃಷಿ ಮಾಡುವ ಮತ್ತು ಮಾಡದ ಭೂಮಾಲೀಕರ ಸಂಖ್ಯೆ ಸುಮಾರು 1,71,000 ಇತ್ತು. 4,50,098 ಮಂದಿ ಒಕ್ಕಲುತನ ಮಾಡುವವರು ಮತ್ತು ಕೃಷಿ ಕಾರ್ಮಿಕರಿದ್ದರು.[31] ಇವರುಗಳಲ್ಲಿ ಬ್ರಾಹ್ಮಣರು, ಬಂಟರು ಹಾಗೂ ಜೈನರಲ್ಲಿ ಬಹುತೇಕರು ಭೂಮಿ ಹೊಂದಿದ್ದರು.[32] ಈ ಕಾರಣದಿಂದಾಗಿ ಬಹಳ ಪ್ರಭಾವಶಾಲಿಗಳಾಗಿ ಇತರ ಸಮುದಾಯದವರನ್ನು ತಮ್ಮ ಹಿಡಿತದಲ್ಲಿ ಇರಿಸಿಕೊಂಡಿದ್ದರು. ಬಿಲ್ಲವರು ಹಿಂದೆ ಹಾಗೂ ಇಂದಿಗೂ ಹೆಚ್ಚಿನ ಸಂಖ್ಯೆಯಲ್ಲಿದ್ದು ಜಿಲ್ಲೆಯ ಉತ್ತರ ಭಾಗದಲ್ಲಿ ಅವರನ್ನು 'ಹಳೆಪೈಕರು' ಎಂದು ಕರೆಯಲಾಗುತ್ತದೆ. ಈ ಸಮುದಾಯದಲ್ಲಿ ಹೆಚ್ಚಿನವರು ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ, ವಸಾಹತುಶಾಹಿ ಮತ್ತು ಸ್ಥಳೀಯ ಇತಿಹಾಸಕಾರರು ಅವರ ಸಾಂಪ್ರದಾಯಿಕ ಉದ್ಯೋಗ ಕೃಷಿ, ತಾಳೆಯ ಮತ್ತು ತೆಂಗಿನ ಮರಗಳಿಂದ ಶೇಂದಿ ತೆಗೆಯುವುದಾಗಿತ್ತು[33] ಎಂದು ಉಲ್ಲೇಖಿಸಿರುತ್ತಾರೆ. ಒಟ್ಟು ಜನಸಂಖ್ಯೆಯಲ್ಲಿ ಎರಡನೇಯವರಾಗಿರುವ ಪರಿಶಿಷ್ಟ ಜಾತಿಗೆ ಸೇರಿದ ಜನರು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ಜಿಲ್ಲೆಯಲ್ಲಿ ಸಾಂಪ್ರದಾಯಿಕ ತುಳು ಭಾಷೆಯನ್ನಾಡುವ ಇನ್ನೊಂದು ಪ್ರಮುಖ ಸಮುದಾಯ ಮೊಗವೀರರು. ದಕ್ಷಿಣ ಭಾಗದಲ್ಲಿ ವಾಸವಿರುವ ಮೊಗವೀರ ಜನಾಂಗದವರು 'ಅಳಿಯ ಸಂತಾನ' ವ್ಯವಸ್ಥೆಯನ್ನು ಮೊದಲಿನಿಂದಲೂ ಅನುಸರಿಸಿಕೊಂಡು ಬರುತ್ತಿದ್ದು, ಉತ್ತರ ಭಾಗದಲ್ಲಿ ವಾಸ್ತವ್ಯವಿರುವವರು 'ಮಕ್ಕಳ ಸಂತಾನ' ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದಾರೆ.[34] ಜಿಲ್ಲೆಯಲ್ಲಿ ವ್ಯಾಪಿಸಿರುವ ಅರವತ್ತು ಕಿ.ಮೀ.ನಷ್ಟು ಸಮುದ್ರದಲ್ಲಿ ಮತ್ತು ಕರಾವಳಿ ಜಿಲ್ಲೆಯ ಜೀವನದಿಗಳಾದ ನೇತ್ರಾವತಿ, ಫಲ್ಗುಣಿ, ಕುಮಾರಧಾರ ಮತ್ತು ಶಾಂಭವಿಯಲ್ಲಿ ಒಳನಾಡು ಮೀನುಗಾರಿಕೆಯನ್ನು ತಮ್ಮ ಮುಖ್ಯ ಕಸುಬನ್ನಾಗಿ ಮಾಡಿಕೊಂಡಿರುತ್ತಾರೆ. ಅಂಕಿಅಂಶಗಳ ಪ್ರಕಾರ ಸುಮಾರು ಒಂದು ಲಕ್ಷದಷ್ಟು ಜನರು ಜಿಲ್ಲೆಯಲ್ಲಿ ಮೀನುಗಾರಿಕಾ ಚಟುವಟಿಕೆಗಳಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದರೆ,

ಸುಮಾರು ಎರಡು ಲಕ್ಷದಷ್ಟು ಮಂದಿ ಪರೋಕ್ಷವಾಗಿ ಮೀನು ಮಾರಾಟ ಮತ್ತು ಇತರ ಸಂಬಂಧಿ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುತ್ತಾರೆ[35]. ಜಿಲ್ಲೆಯಲ್ಲಿರುವ ಮತ್ತೊಂದು ಪ್ರಮುಖ ಸಮುದಾಯ ಬಂಟರು. ಇವರು ಮೂಲತಃ ಭೂಮಾಲೀಕರಾಗಿದ್ದು, ಕೃಷಿ ಚಟುವಟಿಕೆಗಳಲ್ಲಿ ಗೇಣಿದಾರರು ಮತ್ತು ಹಿಂದುಳಿದ ಜಾತಿ, ವರ್ಗಗಳ ಜನರನ್ನು ಬಳಸಿಕೊಂಡು ಕೃಷಿ ಚಟುವಟಿಕೆಗಳ ಉಸ್ತುವಾರಿಯನ್ನು ಹಿಂದೆ ನಡೆಸಿಕೊಂಡು ಬಂದಿದ್ದವರು. 1974ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವರಾಜ್ ಅರಸುರವರು ಜಾರಿಗೆ ತಂದ ಭೂಸುಧಾರಣಾ ಕಾಯಿದೆಗೆ ಅನುಗುಣವಾಗಿ "ಉಳುವವನೇ ಹೊಲದೊಡೆಯ" ಎಂಬ ಕಾನೂನು ಜಾರಿಗೆ ಬಂದ ನಂತರ ಜಿಲ್ಲೆಯ ಭೂಹಂಚಿಕೆ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆಗಳಾಗಿ ಹಿಂದೆ ಭೂಮಿಯ ಒಡೆಯರಾಗಿದ್ದ ಬ್ರಾಹ್ಮಣರು, ಬಂಟರು ಮತ್ತು ಜೈನರು ತಮ್ಮ ಕೃಷಿ ಭೂಮಿಯನ್ನು ಹಿಂದುಳಿದ ಜಾತಿ ಮತ್ತು ವರ್ಗದ ಜನರಿಗೆ ಬಿಟ್ಟುಕೊಡುವ ಪ್ರಮೇಯ ಬಂದೊದಗಿತು. ಇದರಿಂದಾಗಿ ಜಿಲ್ಲೆಯಲ್ಲಿ ದೊಡ್ಡ ಭೂಹಿಡುವಳಿದಾರರ ಸಂಖ್ಯೆಯಲ್ಲಿ ಭಾರೀ ಪ್ರಮಾಣದ ಕಡಿತವಾಗಿ ಸಮಾಜದ ಇತರ ಹಿಂದುಳಿದ ಜಾತಿಗಳಿಗೆ ಸೇರಿದ ಜನರಿಗೂ ಭೂಮಿ ದೊರಕುವಂತಾಯಿತು.[36] ಬ್ರಾಹ್ಮಣ ಹಾಗೂ ಜೈನ ಸಮುದಾಯಗಳಿಗೆ ಸೇರಿರುವ ಜನರು ಜಿಲ್ಲೆಯಲ್ಲಿ ವಾಸವಾಗಿರುತ್ತಾರೆ. ಸಮಾಜದಲ್ಲಿರುವ ಹೆಚ್ಚಿನ ಸಂಖ್ಯೆಯ ಜನರು ಹಿಂದುಳಿದ ಜಾತಿ ಮತ್ತು ಪಂಗಡಗಳಿಗೆ ಸೇರಿದವರಾಗಿರುತ್ತಾರೆ.

ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ರಾಷ್ಟ್ರೀಯತಾವಾದವು ಜಿಲ್ಲೆಯ ಜನರಲ್ಲಿ ಜಾಗೃತಗೊಂಡು ಆಧುನಿಕ, ಸಾಮಾಜಿಕ ಮತ್ತು ಆರ್ಥಿಕ ಮನೋಭಾವನೆ ಜಿಲ್ಲೆಯಲ್ಲಿ ಹುಟ್ಟಿಕೊಂಡಿತು. ದೇಶದ ಎಲ್ಲೆಡೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. 1931ರ ಆಗೋಸ್ಟ್ ತಿಂಗಳಿನಲ್ಲಿ ಮಹಾತ್ಮ ಗಾಂಧೀಜಿಯವರು ಮಂಗಳೂರು ಮತ್ತು ಉಡುಪಿ ನಗರಗಳಿಗೆ ಆಗಮಿಸಿ ಜಿಲ್ಲೆಯ ಜನರು ಸಕ್ರಿಯವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗುವಂತೆ ಪ್ರೇರೇಪಿಸಿದರು. ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡವರಲ್ಲಿ ಕಾರ್ನಾಡು ಸದಾಶಿವರಾಯರು, ಎಂ. ಉಮೇಶ್ ರಾಯರು, ಹಿರಿಯಡ್ಕ ರಾಮರಾಯರು, ಎಂ.ಡಿ. ಅಧಿಕಾರಿ, ಎಸ್.ಎನ್.ಹೊಳ್ಳ, ನಾರಾಯಣ ಕಿಲ್ಲೆ, ಅಮ್ಮೆಂಬಳ ಬಾಳಪ್ಪ, ಕೆ.ಕೆ.ಶೆಟ್ಟಿ ಮೊದಲಾದವರು ಪ್ರಮುಖರು. ಕುದ್ಮಲ್ ರಂಗರಾಯರು ದಲಿತರ ಉದ್ಧಾರ ಮತ್ತು ಅವರುಗಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಅರಿವು ಮೂಡಿಸುವ ಕಾರ್ಯವನ್ನು ಕೈಗೊಂಡಿದ್ದರು. ದೇಶ ಸ್ವತಂತ್ರವಾದ ಬಳಿಕ ಜಿಲ್ಲೆಯ ರಾಜಕೀಯ ನಾಯಕತ್ವಕ್ಕೆ ಹೆಸರುಕೊಟ್ಟು ಪ್ರಸಿದ್ಧರಾದವರು ಹಲವು ಮಂದಿ. ಅವರಲ್ಲಿ ಎ.ಬಿ.ಶೆಟ್ಟಿ, ಕೆ.ಆರ್.ಕಾರಂತ, ವೈಕುಂಠ ಬಾಳಿಗಾ, ಶ್ರೀನಿವಾಸ ಮಲ್ಯ, ಕೃಷ್ಣ ಶೆಟ್ಟಿ, ಶಾಂತಾರಾಮ್ ಪೈ, ಕೆ.ಕೆ.ಶೆಟ್ಟಿ ಮುಖ್ಯರಾಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿ ಕಾರ್ಯನಿರ್ವಹಿಸಿದವರಲ್ಲಿ ಟಿ.ಎ.ಪೈ, ಜನಾರ್ದನ ಪೂಜಾರಿ, ಧನಂಜಯ ಕುಮಾರ್,

ವೀರಪ್ಪ ಮೊಯ್ಲಿ, ಡಿ.ವಿ.ಸದಾನಂದ ಗೌಡರು ಪ್ರಮುಖರು. ರಾಜ್ಯದ ಮುಖ್ಯಮಂತ್ರಿಗಳಾಗಿ ಎಂ. ವೀರಪ್ಪ ಮೊಯ್ಲಿ ಮತ್ತು ಡಿ.ವಿ. ಸದಾನಂದ ಗೌಡರು ನಾಯಕತ್ವದ ಹೊಣೆ ಹೊತ್ತಿರುತ್ತಾರೆ.

ಇಪ್ಪತ್ತನೆಯ ಶತಮಾನದಲ್ಲಿ ದೊಡ್ಡ ಸಂಖ್ಯೆಯ ಸಾಮಾಜಿಕ ಮತ್ತು ಧಾರ್ಮಿಕ ಚಳುವಳಿಗಳಿಗೆ ಜಿಲ್ಲೆಯು ಸಾಕ್ಷಿಯಾಗಿರುತ್ತದೆ. ಬ್ರಹ್ಮ ಸಮಾಜ, ಥಿಯೋಸೊಫಿಕಲ್ ಸೊಸೈಟಿ, ದಲಿತ ಚಳುವಳಿ, ಶಾಲೆ ಮತ್ತು ಕಾಲೇಜುಗಳು, ಆಸ್ಪತ್ರೆಗಳು ಮತ್ತು ಬ್ಯಾಂಕ್‌ಗಳು ಜಿಲ್ಲೆಯಲ್ಲಿ 19ನೇ ಮತ್ತು 20ನೇ ಶತಮಾನದಲ್ಲಿ ಆರಂಭವಾಗಿ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಮಹತ್ತರವಾದ ಕೊಡುಗೆಗಳನ್ನು ನೀಡಿರುತ್ತದೆ. ಗೇರುಬೀಜ ಸಂಸ್ಕರಣೆ, ಬೀಡಿ ಉದ್ಯಮ, ಕಾಳು ಮೆಣಸಿನ ಸಂಸ್ಕರಣಾ ಘಟಕಗಳು ಜಿಲ್ಲೆಯಲ್ಲಿನ ಕೆಳ ಮತ್ತು ಮಧ್ಯಮ ವರ್ಗದ ಜನರಿಗೆ ಸಾವಿರಾರು ಉದ್ಯೋಗಾವಕಾಶಗಳನ್ನು ಸೃಷ್ಟಿಸಿವೆ. ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಸಹಕಾರಿ ಚಟುವಟಿಕೆಗಳು ಆರಂಭವಾಗಿ ಮಧ್ಯಮ ಮತ್ತು ಬಡ ಜನರಿಗೆ ಆರ್ಥಿಕ ಸಬಲೀಕರಣಕ್ಕೆ ಕಾರಣವಾಗಿರುತ್ತದೆ. ಇಂತಹ ಬೆಳವಣಿಗೆಗಳು ಜಿಲ್ಲೆಯ ಎಲ್ಲಾ ಜನರ ಅಭಿವೃದ್ಧಿಗೆ ಸಕಾರಾತ್ಮಕ ಪರಿಣಾಮ ಬೀರದಿದ್ದರೂ ಹೆಚ್ಚಿನವರಿಗೆ ಲಾಭವಾಗಿರುವುದನ್ನು ಗಮನಿಸಲಾಗಿದೆ. ಕೃಷಿ ಕಾರ್ಮಿಕರು, ಮೀನುಗಾರರು, ಶೇಂದಿ ತೆಗೆಯುವವರು, ಕುಂಬಾರರು ಮುಂತಾದ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ, ಜನಾಂಗಕ್ಕೆ ಸೇರಿದ ಜನರಿಗೆ ಇದರಿಂದ ಪ್ರಯೋಜನವಾಗಿ ಅವರ ಆರ್ಥಿಕ ಸಬಲೀಕರಣಕ್ಕೆ ಮತ್ತು ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಪರೋಕ್ಷವಾಗಿ ಪ್ರಯೋಜನವಾಗಿರುತ್ತದೆಯೆಂದು[37] ಹೇಳಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಹೀಗೆ ಬೆಳೆದುಬಂದು ಆರ್ಥಿಕವಾಗಿ ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸ್ವಾಧೀನ ಮತ್ತು ಸ್ಥಳಾಂತರಕ್ಕೆ ಸಂಬಂಧಪಟ್ಟಂತೆ ದೀರ್ಘವಾದ ಇತಿಹಾಸವಿದೆ. ಜಿಲ್ಲೆಯ ಕೇಂದ್ರ ಸ್ಥಾನವಾಗಿರುವ ಮಂಗಳೂರು ನಗರ ಹಿಂದಿನಿಂದಲೂ ಸಮುದ್ರ ವ್ಯಾಪಾರಕ್ಕೆ ಹೆಸರುವಾಸಿಯಾಗಿರುತ್ತದೆ. ವಸಾಹತುಶಾಹಿ ವ್ಯವಸ್ಥೆ ಮತ್ತು ಸ್ವಾತಂತ್ರ್ಯ ಪೂರ್ವದಲ್ಲಿ ಜಿಲ್ಲೆಯಲ್ಲಿ ಕೈಗಾರಿಕೀಕರಣ ಪ್ರಕ್ರಿಯೆ ವೇಗವನ್ನು ಪಡೆದಿರುವುದಿಲ್ಲದಿದ್ದನ್ನು ನೋಡಬಹುದು. ಸ್ವಾತಂತ್ರ್ಯದ ನಂತರ ಬ್ರಿಟೀಷರು ಕಡೆಗಣಿಸಿದ ಮೂಲಭೂತ ಸೌಕರ್ಯಗಳ ರಚನೆ ಮತ್ತು ಕೈಗಾರಿಕೀಕರಣ ಪ್ರಕ್ರಿಯೆ ಜಿಲ್ಲೆಯಲ್ಲಿ ಆರಂಭವಾಯಿತು. ಸಾವಿರದ ಒಂಬೈನೂರ ಎಪ್ಪತ್ತನಾಲ್ಕರಲ್ಲಿ ನವಮಂಗಳೂರು ಬಂದರಿನ ಉದ್ಘಾಟನೆಯು ಜಿಲ್ಲೆಯಲ್ಲಿನ ಕೈಗಾರಿಕಾ ಕ್ಷೇತ್ರದ ಅವಕಾಶ ಮತ್ತು ಅಭಿವೃದ್ಧಿಗೆ ಹೆಚ್ಚಿನ ಇಂಬು ನೀಡಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ವಿಫುಲ ಅವಕಾಶ ಇದ್ದುದರಿಂದ ಹಲವಾರು ಬೃಹತ್ ಕೈಗಾರಿಕೆಗಳು ಆರಂಭಿಸಲ್ಪಟ್ಟಿದೆ ಹಾಗೂ ಸ್ಥಾಪನೆಯಾಗುವ ಹಂತದಲ್ಲಿದೆ. 1981ರಲ್ಲಿ ಮಂಗಳೂರು ರಸಗೊಬ್ಬರ ಕಾರ್ಖಾನೆಯ ಸ್ಥಾಪನೆಯಾಗಿ ಕೈಗಾರಿಕೆಗಳ ಅಭಿವೃದ್ಧಿಗೆ ಮುನ್ನುಡಿಯನ್ನು ಬರೆಯಿತು. 1994–95ರಲ್ಲಿ ರಾಷ್ಟ್ರೀಯ ಇಂಧನ ಮತ್ತು ನೈಸರ್ಗಿಕ ಅನಿಲ ನಿಗಮದ ಪ್ರಾಯೋಜಕತ್ವದಲ್ಲಿ

ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಸಂಸ್ಥೆ ಆರಂಭವಾಯಿತು. ಈ ಯೋಜನೆಗಾಗಿ ಒಂಬೈನೂರ ಮೂವತ್ತು ಕುಟುಂಬಗಳಿಗೆ ಸೇರಿದ ಸಾವಿರದ ಎಂಟುನೂರ ಐವತ್ತು ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಯಿತು.[38] ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರಿಗಾಗಿ ಸುರತ್ಕಲ್ ಸಮೀಪದ ಕೃಷ್ಣಾಪುರ, ಚೇಳ್ಯಾರುಪದವಿನಲ್ಲಿ ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಲಾಯಿತು. ನಂತರದಲ್ಲಿ ಬಿ.ಎ.ಎಸ್.ಎಫ್ ಘಟಕದ ಸ್ಥಾಪನೆಗಾಗಿ ಕೃಷಿಭೂಮಿಯನ್ನು ಸ್ವಾಧೀನಪಡಿಸಲಾಯಿತು. ನಾಗಾರ್ಜುನ ವಿದ್ಯುತ್ ಸ್ಥಾವರದ ರಚನೆಗಾಗಿ ಸ್ವಾಧೀನಪಡಿಸಲಾದ ಭೂಮಿಯಲ್ಲಿ ಇದುವರೆಗೆ ಘಟಕ ಸ್ಥಾಪನೆಯಾಗಿಲ್ಲ ಹಾಗೂ ಭೂಮಿಯ ಡಿನೋಟಿಫಿಕೇಶನ್ ಕೂಡಾ ಆಗಿರುವುದಿಲ್ಲ. 1998ರಲ್ಲಿ ಬಜ್ಪೆ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣವನ್ನಾಗಿ ಮೇಲ್ದರ್ಜೆಗೆ ಏರಿಸುವುದಕ್ಕಾಗಿ ಮಂಗಳೂರು ತಾಲೂಕಿನ ಮರವೂರು, ಅದ್ಯಪಾಡಿ, ಕೆಂಜಾರು ಗ್ರಾಮಗಳ ಮುನ್ನೂರು ಕುಟುಂಬಗಳಿಗೆ ಸೇರಿದ ಆರುನೂರ ಐವತ್ತು ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಲಾಗಿತ್ತು.[39] ಸಂತ್ರಸ್ತರಿಗಾಗಿ ಸಮೀಪದ ಕೊಳಂಬೆ ಗ್ರಾಮದ ಸೌಹಾರ್ದನಗರದಲ್ಲಿ ಪುನರ್‌ವಸತಿ ಕಾಲನಿಯನ್ನು ನಿರ್ಮಿಸಲಾಯಿತು.

ಸುಮಾರು 35 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಆಯಿಲ್ ಎಂಡ್ ನ್ಯಾಚುರಲ್ ಗ್ಯಾಸ್ ಕಾರ್ಪೊರೇಶನ್ ಪ್ರಾಯೋಜಕತ್ವದಲ್ಲಿ ರಫ್ತು ಆಧಾರಿತ ಬಹುಉತ್ಪನ್ನ ವಿಶೇಷ ಆರ್ಥಿಕ ವಲಯ ಜಿಲ್ಲೆಯ ಮಂಗಳೂರು ತಾಲೂಕಿನ ತೋಕೂರು, ಕಳವಾರು, ಪೆರ್ಮುದೆ, ಬಾಳ, ಬಜ್ಪೆ, ತೆಂಕ ಎಕ್ಕಾರು ಹಾಗೂ ಕುತ್ತೆತ್ತೂರು ಗ್ರಾಮಗಳಲ್ಲಿ ಅಸ್ತಿತ್ವಕ್ಕೆ ಬರುತ್ತಿದೆ. ಇದಕ್ಕಾಗಿ ಈಗಾಗಲೇ ಎರಡು ಸಾವಿರದ ಮುನ್ನೂರು ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಲಾಗಿದ್ದು, ಸುಮಾರು 1637 ಕುಟುಂಬಗಳು ತಮ್ಮ ಮೂಲ ನೆಲೆಯಿಂದ ಸ್ಥಳಾಂತರಿಸಲ್ಪಟ್ಟಿದ್ದಾರೆ.[40] ನವಮಂಗಳೂರು ಬಂದರು, ಮಂಗಳೂರು ರಸಗೊಬ್ಬರ ಕಾರ್ಖಾನೆ, ಬಜ್ಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಎಂ.ಆರ್.ಪಿ.ಎಲ್., ಸುಜ್ಲಾನ್, ನಾಗಾರ್ಜುನ ಪವರ್ ಕಾರ್ಪೊರೇಷನ್, ಇನ್ಫೋಸಿಸ್, ಕೊಂಕಣ ರೈಲ್ವೆ, ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ರಚನೆ ಇತ್ಯಾದಿ ಅಭಿವೃದ್ಧಿ ಚಟುವಟಿಕೆಗಳಿಗೋಸ್ಕರ ಇಂದಿನವರೆಗೆ ಸುಮಾರು ಮೂವತ್ತು ಸಾವಿರ ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಹೆಚ್ಚಿನ ಭೂಮಿಯನ್ನು ಮೇಲಿನ ಕೈಗಾರಿಕೆಗಳಿಗೋಸ್ಕರ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಸುಮಾರು ಹತ್ತು ಸಾವಿರ ಕುಟುಂಬಗಳಲ್ಲಿನ ನಲ್ವತ್ತು ಸಾವಿರಕ್ಕೂ ಹೆಚ್ಚಿನ ಜನರು ಈ ಯೋಜನೆಗಳಿಂದ ತಮ್ಮ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುತ್ತಾರೆ. ಈ ಕೈಗಾರಿಕೆಗಳು ಸಾವಿರಾರು ಕೋಟಿ ರೂಪಾಯಿಗಳನ್ನು ಬಂಡವಾಳವಾಗಿ ತೊಡಗಿಸಿಕೊಂಡಿವೆ. ಮಂಗಳೂರು ಕೆಮಿಕಲ್ಸ್ ಎಂಡ್ ಫರ್ಟಿಲೈಸರ್ಸ್, ಕುದುರೆಮುಖ ಐಯರ್ನ್ ಓರ್ ಕಂಪೆನಿ, ಬಿ.ಎ.ಎಸ್.ಎಫ್, ಇ.ಎಲ್.ಎಫ್ ಗ್ಯಾಸ್, ಭಾರತಿ ಶಿಪ್‌ಯಾರ್ಡ್ ಲಿಮಿಟೆಡ್ ಇವುಗಳಲ್ಲಿ ಮುಖ್ಯವಾದವುಗಳು. ಮಾಹಿತಿ ತಂತ್ರಜ್ಞಾನ ಮತ್ತು ಹೊರಗುತ್ತಿಗೆ ಕಂಪೆನಿಗಳು ಜಿಲ್ಲೆಯಲ್ಲಿ ತಮ್ಮ

ನೆಲೆಯನ್ನು ಸ್ಥಾಪಿಸಲಾರಂಭಿಸಿದೆ. ಇನ್ಫೋಸಿಸ್, ಲೇಸರ್‌ಸೋಫ್ಟ್, ಇನ್ಫೋ ಸಿಸ್ಟಮ್ಸ್, ಎಂಫಸಿಸ್, ಹಿಂದೂಜಾ ಗ್ಲೋಬಲ್ ಸೊಲ್ಯೂಷನ್ಸ್ ಇವುಗಳಲ್ಲಿ ಪ್ರಮುಖವಾದವುಗಳು. ವಿಪ್ರೋ ಕಂಪನಿ ಶೀಘ್ರದಲ್ಲಿ ಮಂಗಳೂರಿನಲ್ಲಿ ತನ್ನ ಉದ್ಯಮವನ್ನು ಸ್ಥಾಪಿಸುವ ಹಂತದಲ್ಲಿದೆ. ಮೂರು ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳು ನಿರ್ಮಾಣ ಹಂತದಲ್ಲಿದ್ದು, ಮಂಗಳೂರು ತಾಲೂಕಿನ ಗಂಜೀಮಠದಲ್ಲಿ ರಫ್ತು ಆಧಾರಿತ ಕೈಗಾರಿಕಾ ಘಟಕ, ಮಂಗಳೂರು ವಿಶ್ವವಿದ್ಯಾನಿಲಯ ಸಮೀಪದ ಮುಡಿಪು ಹಾಗೂ ಬಂಟ್ವಾಳದ ತುಂಬೆ ಗ್ರಾಮದಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ವಿಶೇಷ ಆರ್ಥಿಕ ವಲಯಗಳು ರಚಿಸಲ್ಪಡುತ್ತಿವೆ. ಮೂಡುಬಿದ್ರೆ ಸಮೀಪದ ನಿಡ್ಡೋಡಿಯಲ್ಲಿ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಕಲ್ಲಿದ್ದಲು ಆಧಾರಿತ ಉಷ್ಣವಿದ್ಯುತ್ ಸ್ಥಾವರ ಸ್ಥಾಪನೆಯಾಗುವ ಮಾತುಗಳು ಸರಕಾರಿ ವಲಯದಿಂದ ಕೇಳಿಬರುತ್ತಿದೆ. ಇದಕ್ಕಾಗಿ ಅಲ್ಲಿನ ಕೃಷಿಕರು 'ಕೃಷಿ ಸಂರಕ್ಷಣಾ ಸಮಿತಿ'ಯನ್ನು ರಚಿಸಿಕೊಂಡು ಯೋಜನೆಯ ಭೂಸ್ವಾಧೀನವನ್ನು ಸಂಘಟಿತವಾಗಿ ವಿರೋಧಿಸಲು ಆರಂಭಿಸಿದ್ದಾರೆ.

ಮಂಗಳೂರು ವಿಶೇಷ ಆರ್ಥಿಕ ವಲಯವು ತೋಕೂರು, ಕಳವಾರು, ಕುತ್ತೆತ್ತೂರು, ತೆಂಕ ಎಕ್ಕಾರು, ಪೆರ್ಮುದೆ, ಬಾಳ, ಬಜ್ಪೆ ಗ್ರಾಮಗಳಲ್ಲಿ ಅಸ್ತಿತ್ವಕ್ಕೆ ಬಂದಿದೆ. ಈ ಗ್ರಾಮಗಳ ಸಮೀಪದಲ್ಲಿ ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಲಾಗಿದ್ದು, ಸುಮಾರು ಒಂದುಸಾವಿರ ಕುಟುಂಬಗಳಿಗೆ ಪುನರ್‌ವಸತಿಯನ್ನು ಕಲ್ಪಿಸಲಾಗಿದೆಯೆಂದು ಮಾಹಿತಿಗಳು ತಿಳಿಸುತ್ತದೆ. ವಿಶೇಷ ಆರ್ಥಿಕ ವಲಯ ಪ್ರಾಧಿಕಾರದ ಅಧಿಕಾರಿಗಳ ಪ್ರಕಾರ, ಸುಮಾರು ಮುನ್ನೂರುಕೋಟಿ ರೂಪಾಯಿಗಳನ್ನು ಪುನರ್‌ವಸತಿ ಮತ್ತು ಪರಿಹಾರವನ್ನು ನೀಡುವುದಕ್ಕೋಸ್ಕರ ವ್ಯಯಿಸಲಾಗಿರುತ್ತದೆ.[41] ಇತರ ಎಲ್ಲಾ ಅಭಿವೃದ್ಧಿ ಯೋಜನೆಗಳಿಂದ ನಿರ್ವಸಿತರಾದವರಿಗೆ ನೀಡಲಾದ ಪರಿಹಾರಗಳಿಗೆ ಹೋಲಿಸಿದರೆ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರಿಗೆ ಅತ್ಯುತ್ತಮ ಪರಿಹಾರದ ಪ್ಯಾಕೇಜ್‌ಗಳನ್ನು ನೀಡಲಾಗಿರುತ್ತದೆ. ಅವರ ಸಮಸ್ಯೆಗಳಿಗೆ ತತ್‌ಕ್ಷಣ ಪ್ರತಿಕ್ರಿಯಿಸಲಾಗಿರುತ್ತದೆ ಹಾಗೂ ಇದರ ಉಸ್ತುವಾರಿಗೋಸ್ಕರ ಸಮಾಜಸೇವೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಆರು ಜನರು ಕಾರ್ಯನಿರ್ವಹಿಸುತ್ತಿದ್ದಾರೆ. ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಈಗಾಗಲೇ ಎಂ.ಆರ್.ಪಿ.ಎಲ್ ಮೂರನೇ ಹಂತ, ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್, ಜೆಬಿಟಿ ಇಂಡಸ್ಟ್ರೀಸ್ ಹಾಗೂ ಕಾರ್ಡಿಲೇಟ್ ಕೈಗಾರಿಕೆಗಳು ಕಾರ್ಯಾರಂಭಿಸಿದ್ದು, ಸುಮರು 472 ಜನ ಭೂಸಂತ್ರಸ್ತರಿಗೆ ಈಗಾಗಲೇ ಉದ್ಯೋಗಾವಕಾಶವನ್ನು ನೀಡಿರುತ್ತದೆ.[42] ಸ್ವಾಧೀನಪಡಿಸಿಕೊಂಡ 2379 ಎಕ್ರೆ ಭೂಮಿಯ 600 ಎಕ್ರೆ ಪ್ರದೇಶದಲ್ಲಿ ಪರಿಸರ ಸಮತೋಲನವನ್ನು ಕಾಪಾಡಲು ಹಸಿರುಬೆಲ್ಟ್ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ. ಸುಮಾರು ಒಂದುಸಾವಿರ ಎಕ್ರೆ ಭೂಮಿಯನ್ನು ಪ್ರಮುಖ ಕೈಗಾರಿಕೆಗಳ ನಿರ್ಮಾಣಕ್ಕೆ ಸಮತಟ್ಟುಪಡಿಸಿ, ಈಗಾಗಲೇ ಹಸ್ತಾಂತರಿಸಿದ್ದು, ನಾಲ್ಕುನೂರು ಎಕ್ರೆಗಳನ್ನು ಸಮತಟ್ಟುಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಂತ್ರಸ್ತರ ಸ್ಥಳಾಂತರ ಮತ್ತು ಪುನರ್‌ವಸತಿ

ಸಮಿತಿ ಕಾರ್ಯನಿರ್ವಹಿಸುತ್ತಿದ್ದು, ಯೋಜನೆಯಿಂದಾಗಿ ಭೂಮಿಯನ್ನು ಕಳೆದುಕೊಂಡ ಮೂವತ್ತು ಸಂತ್ರಸ್ತರು ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬಜ್ಪೆ, ಕಳವಾರು, ಪೆರ್ಮುದೆ ಸಂಯುಕ್ತ ಹಿತರಕ್ಷಣಾ ವೇದಿಕೆ ಸಂತ್ರಸ್ತರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ನಿವಾರಿಸಲು ಒತ್ತಡ ಗುಂಪಾಗಿ ಕಾರ್ಯನಿರ್ವಹಿಸುತ್ತಿದೆ.

ಜಿಲ್ಲೆಯಲ್ಲಿ ನಡೆಯುತ್ತಿರುವ ಕೈಗಾರಿಕೀಕರಣ ಪ್ರಕ್ರಿಯೆಯನ್ನು ಗಮನದಲ್ಲಿರಿಸಿ, ಮಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಂಡಿರುವ ಸುಮಾರು ಎರಡು ಸಾವಿರದ ಮುನ್ನೂರ ಎಪ್ಪತ್ತೊಂಬತ್ತು ಎಕ್ರೆ ಭೂಮಿಯ ಸ್ವಾಧೀನವು ತಂದೊಡ್ಡಿರುವ ಮೂಲಸೌಕರ್ಯಗಳ ಕೊರತೆ, ಸ್ಥಳಾಂತರ ಸಂತ್ರಸ್ತರ ಮೇಲೆ ಬೀರಿದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಮತ್ತು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡುವುದು ಪ್ರಸ್ತುತ ಸಂಶೋಧನೆಯ ಮೂಲ ಉದ್ದೇಶವಾಗಿರುತ್ತದೆ. ವಿಶೇಷ ಆರ್ಥಿಕ ವಲಯ ಅಸ್ತಿತ್ವಕ್ಕೆ ಬಂದಿರುವ ಮಂಗಳೂರು ಮತ್ತು ಮಂಗಳೂರು ಗ್ರಾಮಾಂತರ ತಾಲೂಕುಗಳಾದ ಬಜ್ಪೆ, ಪೆರ್ಮುದೆ, ಕಳವಾರು, ಬಾಳ, ತೋಕೂರು, ಕುತ್ತೆತ್ತೂರು ಮತ್ತು ತೆಂಕ ಎಕ್ಕಾರು ಗ್ರಾಮಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿರುತ್ತದೆ.

ಭಾಗ–2

ಕೈಗಾರಿಕೆಗಳ ಅಭಿವೃದ್ಧಿಗೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳು ಹೆಚ್ಚಾಗಿ ಲಭ್ಯವಿರುವ ಮಂಗಳೂರು ತಾಲೂಕಿನಲ್ಲಿಯೇ ಹೆಚ್ಚಿನ ಕೈಗಾರಿಕಾ ಘಟಕಗಳು ಸ್ಥಾಪಿಸಲ್ಪಟ್ಟಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ 18,009 ಚಿಕ್ಕ ಕೈಗಾರಿಕಾ ಘಟಕಗಳು, 22 ಬೃಹತ್ ಕೈಗಾರಿಕಾ ಸಂಕೀರ್ಣಗಳು ಕಾರ್ಯನಿರ್ವಹಿಸುತ್ತಿದ್ದು[43] ಹೆಚ್ಚಿನ ಬೃಹತ್ ಕೈಗಾರಿಕೆಗಳು ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ನವಮಂಗಳೂರು ಬಂದರು, ಬಜ್ಪೆ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಸಮೀಪದಲ್ಲಿರುವ ಪ್ರದೇಶಗಳಲ್ಲಿಯೇ ಈ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತದೆ. ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಜನರು ಒಂದಕ್ಕಿಂತ ಹೆಚ್ಚು ಬಾರಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುವ ದೃಷ್ಟಾಂತಗಳು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿದೆ. ಬೃಹತ್ ಕೈಗಾರಿಕಾ ಘಟಕಗಳು ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿಯೇ ಸ್ಥಾಪಿಸಲ್ಪಡುವುದಕ್ಕೆ ಮುಖ್ಯ ಕಾರಣ ಆ ಪ್ರದೇಶಗಳಲ್ಲಿರುವ ವ್ಯವಸ್ಥಿತ ಮೂಲಭೂತ ಸೌಕರ್ಯಗಳಾಗಿರುತ್ತವೆ. ಪ್ರಸ್ತುತ ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿದ ಗ್ರಾಮಗಳು, ಅಲ್ಲಿನ ಜನಜೀವನ, ವೈಶಿಷ್ಟ್ಯಗಳ

ಬಗ್ಗೆ ಭಾಗ ಎರಡರಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿರುತ್ತದೆ. ಇದರಿಂದಾಗಿ ಅಧ್ಯಯನ ಕೈಗೊಂಡ ಪ್ರದೇಶದ ಬಗ್ಗೆ ಒಂದು ಪಕ್ಷಿನೋಟ ದೊರಕುತ್ತದೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶವಾಗಿರುವ ನಾಲ್ಕು ಗ್ರಾಮ ಪಂಚಾಯತ್ ವ್ಯಾಪ್ತಿಯ 2300 ಎಕ್ರೆ ಭೂಮಿ ಸ್ವಾಧೀನಪಡಿಸಲ್ಪಟ್ಟು, 1637 ಕುಟುಂಬಗಳು ತಮ್ಮ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುತ್ತಾರೆ.

ಕೋಷ್ಟಕ-2.2: ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಲಾದ ಗ್ರಾಮಗಳ ಸ್ವಾಧೀನಪೂರ್ವ ಹಾಗೂ ನಂತರದ ಸಾಮಾನ್ಯ ವಿವರಗಳು

ಕ್ರ ಸಂ		ಪೆರ್ಮುದೆ		ಕುತ್ತೆತ್ತೂರು		ಬಾಳ		ಕಳವಾರು		ಬಜ್ಪೆ		62 ತೋಕೂರು	
		2001	2011	2001	2011	2001	2011	2001	2011	2001	2011	2001	2011
1	ಜನಸಂಖ್ಯೆ	3233	2242	2675	3791	2924	2637	1881	1115	8033	9706	6167	7433
2	ಕುಟುಂಬಗಳ ಸಂಖ್ಯೆ	652	492	657	1030	840	663	366	233	1578	1976	1080	1396
3	ಸಾಕ್ಷರತಾ ಪ್ರಮಾಣ (%)		81.8		83.5		91		91.5		87.6		87.6
4	ಒಟ್ಟು ವಿಸ್ತೀರ್ಣ (ಹೆಕ್ಟೇರ್‌ನಲ್ಲಿ)	742		717		567		330		882		532	
5	ಕೃಷಿ ಜಮೀನು (ಹೆಕ್ಟೇರ್‌ನಲ್ಲಿ)	280	100	182	88	330	80	110	03	175	35	165	98
6	ವ್ಯವಸಾಯಗಾರರ ಸಂಖ್ಯೆ	129	122	140	88	18	00	66	01	142	38	96	12
7	ಪರಿಶಿಷ್ಟ ಜಾತಿ	18	00	126	156	53	34	34	17	275	303	155	214
8	ಪರಿಶಿಷ್ಟ ಪಂಗಡ	67	28	37	34	52	04	04	01	82	107	16	00

(ಮೂಲ: ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ – ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ದಕ್ಷಿಣ ಕನ್ನಡ, ಮಂಗಳೂರು ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಂದ ಪಡೆದ ಮಾಹಿತಿ)

ಕೋಷ್ಟಕ ಸಂಖ್ಯೆ 2.2 ಭೂಸ್ವಾಧೀನಪಡಿಸಲ್ಪಟ್ಟ ಗ್ರಾಮಗಳ ಸಾಮಾನ್ಯ ವಿವರಗಳನ್ನು ನೀಡುತ್ತದೆ. ಎಲ್ಲಾ ಗ್ರಾಮಗಳು ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿದ್ದು ಅಲ್ಲಿನ ಜನರು ಕೃಷಿ ಚಟುವಟಿಕೆಗಳಲ್ಲಿ ಹಿಂದೆ ಸಕ್ರಿಯವಾಗಿ ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು. ಪೆರ್ಮುದೆ ಗ್ರಾಮ ಪಂಚಾಯತ್ ಮಂಗಳೂರು ನಗರದಿಂದ ಸುಮಾರು ಇಪ್ಪತ್ತನಾಲ್ಕು ಕಿ.ಮೀ. ದೂರದಲ್ಲಿದ್ದು, ಬಜ್ಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಪೆರ್ಮುದೆ ಗ್ರಾಮಕ್ಕೆ ಐದು ಕಿ.ಮೀ. ಅಂತರದಲ್ಲಿದೆ. 492 ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ಕುಟುಂಬಗಳಿದ್ದು,[44] ಗ್ರಾಮದಲ್ಲಿ ಜನರ ನಡುವೆ ಸೌಹಾರ್ದಯುತ ಸಂಬಂಧವಿರುವುದು ಕಂಡುಬರುತ್ತದೆ. ಪೆರ್ಮುದೆ ಗ್ರಾಮ ಪಂಚಾಯತ್ ಕುತ್ತೆತ್ತೂರು ಮತ್ತು ಪೆರ್ಮುದೆ ಗ್ರಾಮಗಳನ್ನು ಒಳಗೊಂಡಿರುತ್ತದೆ. ಎರಡೂ ಗ್ರಾಮಗಳ ಒಟ್ಟು ವಿಸ್ತೀರ್ಣ 1458.96 ಹೆಕ್ಟೇರ್ ಆಗಿದ್ದು, 2001ರ ಜನಗಣತಿಯ ಪ್ರಕಾರ ಪೆರ್ಮುದೆ ಗ್ರಾಮದ ಜನಸಂಖ್ಯೆ 3233 ಆಗಿದ್ದು, ಅದರಲ್ಲಿ 1554 ಗಂಡಸರು ಮತ್ತು 1679

ಹೆಂಗಸರಾಗಿರುತ್ತಾರೆ. 2005ರ ಭೂಸ್ವಾಧೀನಕ್ಕಿಂತ ಪೂರ್ವದಲ್ಲಿ ಪೆರ್ಮುದೆ ಗ್ರಾಮದಲ್ಲಿ 652 ಕುಟುಂಬಗಳು ವಾಸವಾಗಿದ್ದವು. ಗ್ರಾಮದ ಸಾಕ್ಷರತಾ ಪ್ರಮಾಣವು 81.8% ಆಗಿರುತ್ತದೆ.[45] 2005ನೇ ಇಸವಿಯಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಸ್ವಾಧೀನ ಪ್ರಕ್ರಿಯೆ ಗ್ರಾಮದಲ್ಲಿ ಆರಂಭವಾಗಿದ್ದು, 2014ರಲ್ಲಿನ ಮಾಹಿತಿಗಳಿಗೆ ಅನುಗುಣವಾಗಿ ಗ್ರಾಮದಲ್ಲಿ 492 ಕುಟುಂಬಗಳಿದ್ದು ಸುಮಾರು 160 ಕುಟುಂಬಗಳಿಗೆ ಸೇರಿದ ಭೂಮಿಯನ್ನು ಯೋಜನೆಗಾಗಿ ಸ್ವಾಧೀನಪಡಿಸಲಾಗಿರುತ್ತದೆ. ಪೆರ್ಮುದೆ ಹಾಗೂ ಕುತ್ತೆತ್ತೂರು ಗ್ರಾಮಗಳಲ್ಲಿ ಜನರಿಗೆ ಭೂಸ್ವಾಧೀನ ಪ್ರಕ್ರಿಯೆ ಹೊಸ ವಿಷಯವಾಗಿರುವುದಿಲ್ಲ. 1984ರಲ್ಲಿ ಎಂ.ಆರ್.ಪಿ.ಎಲ್‌ನ ಸ್ಥಾಪನೆಗಾಗಿ ಈ ಎರಡೂ ಗ್ರಾಮಗಳ ನೂರು ಎಕ್ರೆಯಷ್ಟು ಭೂಮಿಯನ್ನು ಸ್ವಾಧೀನಪಡಿಸಲಾಗಿರುತ್ತದೆ. ಕುತ್ತೆತ್ತೂರು ಗ್ರಾಮದ ಜನಸಂಖ್ಯೆ 2001ರ ಜನಗಣತಿಯನ್ನು ಗಮನಿಸಿದಾಗ 2675 ಆಗಿದ್ದು, 2014ರಲ್ಲಿ ಇದರ ಪ್ರಮಾಣ 3791ಕ್ಕೆ ಏರಿಕೆಯಾಗಿರುತ್ತದೆ. 2005ಕ್ಕಿಂತ ಹಿಂದೆ ಗ್ರಾಮದಲ್ಲಿ 657 ಕುಟುಂಬಗಳು ನೆಲೆಸಿರುವುದು ಕಂಡುಬಂದಿದ್ದು ಪ್ರಸ್ತುತ ಈ ಗ್ರಾಮದಲ್ಲಿರುವ ಕುಟುಂಬಗಳ ಸಂಖ್ಯೆ 1030ಕ್ಕೆ ಏರಿಕೆಯಾಗಿರುತ್ತದೆ.[46] ಪೆರ್ಮುದೆ ಮತ್ತು ಕುತ್ತೆತ್ತೂರು ಪ್ರದೇಶಗಳಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ಪುನರ್‌ವಸತಿ ಕಾಲನಿಗಳು ರಚಿಸಲ್ಪಟ್ಟಿರುವುದು ಕುಟುಂಬಗಳ ಸಂಖ್ಯೆಯಲ್ಲಿ ಹೆಚ್ಚಳವಾಗುವುದಕ್ಕೆ ಕಾರಣವಾಗಿರುತ್ತದೆ. ಕುತ್ತೆತ್ತೂರು ಗ್ರಾಮದಲ್ಲಿ ಸಾಕ್ಷರತೆಯ ಪ್ರಮಾಣ 83.5% ಆಗಿರುತ್ತದೆ. 2005ಕ್ಕಿಂತ ಪೂರ್ವದಲ್ಲಿ ಪೆರ್ಮುದೆ ಗ್ರಾಮದಲ್ಲಿ 129 ಕೃಷಿಕರು 280 ಹೆಕ್ಟೇರ್ ಭೂಪ್ರದೇಶದಲ್ಲಿ ಸಕ್ರಿಯವಾಗಿ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆ, 2014ರಲ್ಲಿ ಪಡೆದ ಮಾಹಿತಿಯ ಪ್ರಕಾರ 122 ಕೃಷಿಕರು ಸುಮಾರು 100 ಹೆಕ್ಟೇರ್ ಭೂಪ್ರದೇಶದಲ್ಲಿ ಕೃಷಿ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಕುತ್ತೆತ್ತೂರು ಗ್ರಾಮದಲ್ಲಿ ಭೂಸ್ವಾಧೀನಕ್ಕಿಂತ ಹಿಂದೆ 182 ಹೆಕ್ಟೇರ್ ಭೂಪ್ರದೇಶಗಳಲ್ಲಿ 140 ಕೃಷಿಕರು ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದರೆ, 2014ರಲ್ಲಿ ಗ್ರಾಮ ಪಂಚಾಯತ್‌ನಿಂದ ಪಡೆದ ಮಾಹಿತಿಗಳು 88 ಹೆಕ್ಟೇರ್ ಭೂಮಿಯಲ್ಲಿ 68 ಕೃಷಿಕರು ಕೃಷಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದನ್ನು ವಿವರಿಸುತ್ತದೆ. 1984ರಲ್ಲಿ ಕೇಂದ್ರ ಸರಕಾರದ ಅಧೀನದಲ್ಲಿರುವ ತೈಲ ಮತ್ತು ನೈಸರ್ಗಿಕ ಅನಿಲ ನಿಗಮ ಪ್ರಾಯೋಜಿತ ಎಂ.ಆರ್.ಪಿ.ಎಲ್. ಘಟಕದ ಸ್ಥಾಪನೆಗಾಗಿ ಈ ಮೇಲೆ ತಿಳಿಸಲಾದ ಗ್ರಾಮಗಳ ನೂರು ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಲಾಗಿತ್ತು.[47] 2005ರಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಗ್ರಾಮದ ಹೆಚ್ಚಿನ ಭೂಮಿಯನ್ನು ಸ್ವಾಧೀನಪಡಿಸಲಾಗಿರುತ್ತದೆ. ಈ ಗ್ರಾಮಗಳಲ್ಲಿರುವ ಕೆಲವು ಕುಟುಂಬಗಳ ಭೂಮಿಯನ್ನು 1984ರಲ್ಲಿ ಎಂ.ಆರ್.ಪಿ.ಎಲ್ ಮತ್ತು 2005ರಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ಎರಡೂ ಸಂದರ್ಭಗಳಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಇದರಿಂದಾಗಿ ಕರಾವಳಿ ಪ್ರದೇಶದಲ್ಲಿ ಜನರು ಒಂದಕ್ಕಿಂತ ಹೆಚ್ಚು ಬಾರಿ ಕೈಗಾರಿಕೆಗಳ ಸ್ಥಾಪನೆಗಾಗಿ ಭೂಮಿಯನ್ನು ಕಳೆದುಕೊಂಡಿರುತ್ತಾರೆ ಎಂಬ ಆಘಾತಕಾರಿ

ಅಂಶ ಕಾಣಸಿಗುವುದು ಮಾತ್ರವಲ್ಲದೇ ಕೃಷಿ ಭೂಮಿಯನ್ನೇ ಹೆಚ್ಚಾಗಿ ಸ್ವಾಧೀನಪಡಿಸಲಾಗಿರುವುದು ಕಂಡುಬರುತ್ತದೆ.

ಬಾಳ ಗ್ರಾಮ ಪಂಚಾಯತ್ ಮಂಗಳೂರು ನಗರದಿಂದ ಸುಮಾರು ಇಪ್ಪತ್ತೈದು ಕಿ.ಮೀ. ದೂರದಲ್ಲಿದ್ದು, ಬಾಳ ಹಾಗೂ ಕಳವಾರು ಎಂಬ ಎರಡು ಗ್ರಾಮಗಳು ಈ ಪಂಚಾಯತ್‌ನ ವ್ಯಾಪ್ತಿಗೆ ಬರುತ್ತದೆ. ಬಾಳ ಗ್ರಾಮದ ವಿಸ್ತೀರ್ಣ 567.21 ಹೆಕ್ಟೇರ್ ಮತ್ತು ಕಳವಾರು ಗ್ರಾಮದ ಒಟ್ಟು ವಿಸ್ತೀರ್ಣ 330.35 ಹೆಕ್ಟೇರ್ ಆಗಿರುತ್ತದೆ.[48] ಕಳವಾರು ಗ್ರಾಮದಲ್ಲಿ ಸುಮಾರು ಒಂದು ಸಾವಿರ ವರ್ಷಗಳಷ್ಟು ಹಿಂದೆ ಸ್ಥಾಪಿಸಲ್ಪಟ್ಟ ಶ್ರೀ ಬೆಂಕಿನಾಥೇಶ್ವರ ದೇವಸ್ಥಾನವಿದ್ದು, ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಧರ್ಮಕ್ಕೆ ಸೇರಿದ ಜನರು ಇಲ್ಲಿ ಪ್ರಾರ್ಥನೆ ಹಾಗೂ ಜಾತ್ರೆಯ ಸಂದರ್ಭದಲ್ಲಿ ಒಟ್ಟು ಸೇರುತ್ತಿದ್ದು ಕೋಮುಸೌಹಾರ್ದಕ್ಕೆ ಹೆಸರುವಾಸಿಯಾಗಿರುತ್ತದೆ. ಬಾಳ ಗ್ರಾಮದ ಮಂಗಳಪೇಟೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಪ್ರಾರ್ಥನಾ ಮಂದಿರವಿದ್ದು, ಸದ್ರಿ ಮಂದಿರದಲ್ಲಿ ಮುಸ್ಲಿಂ ಬಾಂಧವರು ಹಲವಾರು ವರ್ಷಗಳಿಂದ ಪ್ರಾರ್ಥನೆಯನ್ನು ಹಾಗೂ ಸರ್ವಧರ್ಮ ಸಮನ್ವಯ ಸಭೆಗಳನ್ನು ನಡೆಸುತ್ತಾ ಇತರ ಸಮುದಾಯದ ಜನರೊಂದಿಗೆ ಹೊಂದಾಣಿಕೆಯಿಂದ ಬದುಕುತ್ತಿರುವುದು ಕಂಡುಬರುತ್ತದೆ. ಬಾಳ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಎಂ.ಆರ್.ಪಿ.ಎಲ್., ಎಚ್.ಪಿ.ಸಿ.ಎಲ್., ಬಿ.ಎ.ಎಸ್.ಎಫ್. ಹಾಗೂ ಭಾರತ್ ಬ್ಯಾರೆಲ್ ಎಂಬ ಬೃಹತ್ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿದ್ದು ಇದರ ಜೊತೆಯಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಸ್ವಾಧೀನ ಪ್ರಕ್ರಿಯೆಯು ನಡೆದು ಕೈಗಾರಿಕೆಗಳು ಸ್ಥಾಪನೆಯಾಗುವ ಹಂತದಲ್ಲಿದೆ. 2005ರ ಮೊದಲು ಬಾಳ ಗ್ರಾಮದಲ್ಲಿ 840 ಕುಟುಂಬಗಳಿಗೆ ಸೇರಿದ 2924 ಜನರು ವಾಸಿಸುತ್ತಿದ್ದು, 2014ರಲ್ಲಿ ವಾಸವಿದ್ದ ಕುಟುಂಬಗಳ ಸಂಖ್ಯೆ 663ಕ್ಕೆ ಇಳಿದು ಪ್ರಸ್ತುತ ಜನಸಂಖ್ಯೆ 2637 ಆಗಿರುತ್ತದೆ. ಇದರಲ್ಲಿ 1324 ಗಂಡಸರಾಗಿದ್ದರೆ, ಹೆಂಗಸರ ಸಂಖ್ಯೆ 1313 ಆಗಿರುತ್ತದೆ. ಗ್ರಾಮದಲ್ಲಿನ ಜನರ ಸಾಕ್ಷರತಾ ಪ್ರಮಾಣ 83.4% ಇದ್ದು, 1984ರ ಹಿಂದೆ ಗ್ರಾಮದ ಜನರ ಮುಖ್ಯ ಕಸುಬು ಕೃಷಿ ಚಟುವಟಿಕೆಯಾಗಿದ್ದು, 2005ರಲ್ಲಿ 66 ಕೃಷಿಕರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ, ಈಗ ಕೇವಲ ಮೂವರು ಮಾತ್ರ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.[49] ಇದಕ್ಕೆ ಬಾಳ ಗ್ರಾಮದ ವ್ಯಾಪ್ತಿಯಲ್ಲಿ ಕೈಗಾರಿಕೆಗಳ ಸ್ಥಾಪನೆಗೋಸ್ಕರ ಭೂಮಿ ಸ್ವಾಧೀನಪಡಿಸಲ್ಪಟ್ಟಿರುವುದು ಮುಖ್ಯ ಕಾರಣವಾಗಿರುತ್ತದೆ. ಕಳವಾರು ಗ್ರಾಮದ 330.35 ಹೆಕ್ಟೇರ್ ಭೂಪ್ರದೇಶದಲ್ಲಿ 1990ರ ದಶಕದಲ್ಲಿ ನೂರ ಹತ್ತು ಹೆಕ್ಟೇರ್ ಭೂಪ್ರದೇಶದಲ್ಲಿ ಭತ್ತದ ವ್ಯವಸಾಯ, ತೆಂಗು ಮತ್ತು ತೋಟಗಾರಿಕಾ ಚಟುವಟಿಕೆಗಳು ಸಕ್ರಿಯವಾಗಿ ನಡೆಸಲ್ಪಡುತ್ತಿತ್ತು. ಕಳವಾರು ಗ್ರಾಮವು ಪ್ರಾಚೀನತೆಯೊಂದಿಗೆ ಆಧುನಿಕತೆಯ ಲಕ್ಷಣಗಳನ್ನು ಮೈಗೂಡಿಸಿಕೊಂಡು ಕೈಗಾರಿಕೆಗಳ ಸ್ಥಾಪನೆಯೊಂದಿಗೆ ಜನರ ಆರ್ಥಿಕ ಸ್ಥಿತಿಯಲ್ಲಿ ಏರಿಕೆ ಕಂಡಿದ್ದರೂ, ಕೈಗಾರಿಕೆಗಳು ಹೊರಚೆಲ್ಲುವ ತ್ಯಾಜ್ಯಗಳಿಂದಾಗಿ ಪರಿಸರ ಮಾಲಿನ್ಯಕ್ಕೆ ಒಳಗಾಗಿರುವುದು ಕಂಡುಬರುತ್ತದೆ.

ಬಜ್ಪೆ ಗ್ರಾಮ ಪಂಚಾಯತ್ ಮಂಗಳೂರು ನಗರದಿಂದ ಹತ್ತೊಂಬತ್ತು ಕಿ.ಮೀ. ಅಂತರದಲ್ಲಿದೆ. ಗ್ರಾಮವು 722.70 ಹೆಕ್ಟೇರ್ ವಿಸ್ತಾರಕ್ಕೆ ಚಾಚಿಕೊಂಡಿರುತ್ತದೆ. ಕರ್ನಾಟಕ ರಾಜ್ಯದ ಎರಡನೆಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಬಜ್ಪೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ರಚಿಸಲ್ಪಟ್ಟಿರುವುದು ಗ್ರಾಮದ ಹೆಗ್ಗಳಿಕೆಯಾಗಿರುತ್ತದೆ. 1998ರಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಯೋಜನೆಗಾಗಿ ರಾಜ್ಯ ಸರಕಾರವು ಮರವೂರು, ಆದ್ಯಪಾಡಿ ಹಾಗೂ ಕೆಂಜಾರು ಗ್ರಾಮಗಳಲ್ಲಿ ಭೂಸ್ವಾಧೀನಪಡಿಸಿ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಿಸಿರುತ್ತದೆ. ಇಲ್ಲಿನ ವಿಮಾನ ನಿಲ್ದಾಣದಿಂದ ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ವಿಮಾನ ಸಂಚಾರವನ್ನು ಆರಂಭಿಸಲಾಗಿರುತ್ತದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಹಾಗೂ ಕೇರಳ ರಾಜ್ಯದಿಂದ ಕೊಲ್ಲಿ ರಾಷ್ಟ್ರಗಳಿಗೆ ಪ್ರಯಾಣ ಕೈಗೊಳ್ಳಲು ಇಚ್ಛಿಸುವ ಬಹುತೇಕ ಜನರು ಬಜ್ಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಅವಲಂಬಿಸಿರುತ್ತಾರೆ. 2011ರ ಜನಗಣತಿಯ ಪ್ರಕಾರ ಗ್ರಾಮದಲ್ಲಿ ಜನಸಂಖ್ಯೆಯ ಪ್ರಮಾಣ 9706 ಆಗಿರುತ್ತದೆ. ಇದರಲ್ಲಿ ಗಂಡಸರ ಸಂಖ್ಯೆ 5179 ಆಗಿದ್ದರೆ, ಹೆಂಗಸರ ಸಂಖ್ಯೆ 4527 ಆಗಿರುತ್ತದೆ. ಸಾಕ್ಷರತೆಯ ಪ್ರಮಾಣ 88.2%ರಷ್ಟಿರುತ್ತದೆ.[50] 2005ರ ಮೊದಲು 178 ಹೆಕ್ಟೇರ್ ಭೂಪ್ರದೇಶದಲ್ಲಿ 142 ಕೃಷಿಕರು ಕೃಷಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೆ, ಪ್ರಸ್ತುತ ಕೃಷಿ ಭೂಮಿಯ ವಿಸ್ತೀರ್ಣದಲ್ಲಿ ಭಾರೀ ಇಳಿಕೆ ಕಂಡುಬಂದಿದ್ದು ಮೂವತ್ತೆಂಟು ಕೃಷಿಕರು ಮಾತ್ರ ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಇದಕ್ಕೆ ಬಜ್ಪೆ ಗ್ರಾಮ ಪಂಚಾಯತ್ ನಗರೀಕರಣ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ತನ್ನನ್ನು ಒಡ್ಡಿಕೊಂಡಿರುವುದು ಪ್ರಮುಖ ಕಾರಣವಾಗಿರುತ್ತದೆ. 2005ಕ್ಕೂ ಹಿಂದಿನ ಮಾಹಿತಿಯ ಪ್ರಕಾರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 1578 ಕುಟುಂಬಗಳು ವಾಸವಾಗಿದ್ದು, 2014ರಲ್ಲಿ ಬಜ್ಪೆ ಗ್ರಾಮ ಪಂಚಾಯತ್‌ನಿಂದ ಪಡೆದ ಮಾಹಿತಿಗಳು ಅಲ್ಲಿ ವಾಸಿಸುವ ಕುಟುಂಬಗಳ ಸಂಖ್ಯೆ 1976ಕ್ಕೆ ಏರಿಕೆಯಾಗಿರುವುದನ್ನು ತಿಳಿಸುತ್ತದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳು ವೇಗವನ್ನು ಪಡೆದಿರುವ ಕಾರಣ ಉತ್ತರ ಭಾರತದ, ವಿಶೇಷವಾಗಿ ಬಿಹಾರ ಮತ್ತು ಪಶ್ಚಿಮ ಬಂಗಾಳದ ಕಾರ್ಮಿಕರು ಆ ಪ್ರದೇಶದಲ್ಲಿ ವಾಸಿಸುತ್ತಿರುವುದು ಕಂಡುಬಂದಿರುತ್ತದೆ. ಜನರು ವ್ಯಾಪಾರ, ವೃತ್ತಿಪರ ಮತ್ತು ಕೃಷಿ ಚಟುವಟಿಕೆಗಳನ್ನು ತಮ್ಮ ಜೀವನಾಧಾರಕ್ಕಾಗಿ ಅವಲಂಬಿಸಿರುತ್ತಾರೆ. ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿ ಒಂದು ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲ್ಪಟ್ಟಿದ್ದು, ನೆರೆಯ ರಾಜ್ಯದ ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣವನ್ನು ಮುಂದುವರೆಸಿರುತ್ತಾರೆ. ನಗರೀಕರಣ ಪ್ರಕ್ರಿಯೆಗೆ ಗ್ರಾಮ ಪಂಚಾಯತ್ ತನ್ನನ್ನು ಒಡ್ಡಿಕೊಂಡಿದ್ದು ವೇಗವಾಗಿ ಬೆಳೆಯುತ್ತಿರುವುದನ್ನು ಗಮನಿಸಲಾಗಿರುತ್ತದೆ.

ತೋಕೂರು ಗ್ರಾಮ ಮಂಗಳೂರು ನಗರದಿಂದ ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿದ್ದು 2005ರ ಮೊದಲು 1080 ಕುಟುಂಬಗಳು ವಾಸ ಮಾಡುತ್ತಿದ್ದು ಜನಸಂಖ್ಯೆ 6167 ಆಗಿತ್ತು. ಇದರಲ್ಲಿ 3150 ಗಂಡಸರು ಹಾಗೂ 3017 ಹೆಂಗಸರಿದ್ದರು. 2014ರಲ್ಲಿ ಗ್ರಾಮವು 1396 ಕುಟುಂಬಗಳನ್ನು ಹೊಂದಿರುತ್ತದೆ.

ಜನಸಂಖ್ಯೆಯ 7433ಕ್ಕೆ ಏರಿಕೆಯಾಗಿದ್ದು, ಅದರಲ್ಲಿ 4074 ಗಂಡಸರು ಹಾಗೂ ಹೆಂಗಸರ ಸಂಖ್ಯೆ 3359 ಆಗಿರುತ್ತದೆ. ಗ್ರಾಮದ ಪ್ರಸ್ತುತ ಸಾಕ್ಷರತಾ ಪ್ರಮಾಣವು 87.6% ಆಗಿರುತ್ತದೆ.[51] ಗ್ರಾಮವು 531.70 ಹೆಕ್ಟೇರ್ ಭೂಪ್ರದೇಶವನ್ನು ಒಳಗೊಂಡಿರುತ್ತದೆ. ವಿಶೇಷ ಆರ್ಥಿಕ ವಲಯ ಮತ್ತು ಕೈಗಾರಿಕೆಗಳ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಲ್ಪಡುವ ಮೊದಲು 165 ಹೆಕ್ಟೇರ್ ಭೂಪ್ರದೇಶದಲ್ಲಿ ಜನರು ಕೃಷಿ ಚಟುವಟಿಕೆಯನ್ನು ವಿಶೇಷವಾಗಿ ಭತ್ತದ ಬೆಳೆಯನ್ನು ಬೆಳೆಯುತ್ತಿದ್ದರು. ಗ್ರಾಮದಲ್ಲಿನ ಮಹಿಳೆಯರು ಬೀಡಿ ಕಟ್ಟುವುದನ್ನು ತಮ್ಮ ಕಾಯಕವನ್ನಾಗಿ ಮಾಡಿಕೊಂಡು ಕುಟುಂಬ ನಿರ್ವಹಣೆಗೋಸ್ಕರ ಆದಾಯವನ್ನು ಸಂಪಾದಿಸುತ್ತಿದ್ದರು. ಹಿಂದೆ 96 ಜನರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದರೆ, ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ಕೃಷಿ ಭೂಮಿ ಸ್ವಾಧೀನಪಡಿಸಲ್ಪಟ್ಟಿರುವುದರಿಂದ 2014ರಲ್ಲಿ ಪಡೆದ ಅಂಕಿಅಂಶಗಳ ಪ್ರಕಾರ ಗ್ರಾಮದ 12 ಕುಟುಂಬಗಳು ಮಾತ್ರ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ,[52] ಗ್ರಾಮದ ಹೆಚ್ಚಿನ ಜನರು ಭೂಸ್ವಾಧೀನದ ನಂತರ ಕೈಗಾರಿಕೆಗಳ ಸ್ಥಾಪನೆಗಾಗಿ ನಡೆಯುತ್ತಿರುವ ಕಾಮಗಾರಿಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡುಬಂದಿರುತ್ತದೆ.

ವಿಶೇಷ ಆರ್ಥಿಕ ವಲಯದ ಸ್ಥಾಪನೆಗೋಸ್ಕರ ಭೂಸ್ವಾಧೀನಪಡಿಸಲ್ಪಟ್ಟ ಮಂಗಳೂರು ಗ್ರಾಮಾಂತರ ತಾಲೂಕಿನ ಇನ್ನೊಂದು ಚಿಕ್ಕ ಗ್ರಾಮ ದೇಲಂತಬೆಟ್ಟು. ಈ ಗ್ರಾಮ 320 ಹೆಕ್ಟೇರ್ ಭೂವಿಸ್ತೀರ್ಣವನ್ನು ಹೊಂದಿದ್ದು ಹಿಂದೆ 98 ಹೆಕ್ಟೇರ್ ಭೂಪ್ರದೇಶದಲ್ಲಿ ಕೃಷಿ ಚಟುವಟಿಕೆಗಳು ಸಕ್ರಿಯವಾಗಿ ನಡೆಸಲ್ಪಡುತ್ತಿತ್ತು. ಗ್ರಾಮದ 368.48 ಎಕ್ರೆ ಭೂಪ್ರದೇಶವನ್ನು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಸ್ವಾಧೀನಪಡಿಸುವ ಅಧಿಸೂಚನೆಯನ್ನು ಹೊರಡಿಸಿ ಸ್ವಾಧೀನಪಡಿಸಲಾಗಿರುತ್ತದೆ. 2001ರ ಜನಗಣತಿಯ ಅನುಸಾರವಾಗಿ ಗ್ರಾಮದಲ್ಲಿ 699 ಗಂಡಸರು ಮತ್ತು 752 ಹೆಂಗಸರ ಸಮೇತ ಒಟ್ಟು 1451 ಜನಸಂಖ್ಯೆಯನ್ನು ಹೊಂದಿದ್ದು 283 ಕುಟುಂಬಗಳು ವಾಸಿಸುತ್ತಿರುವುದನ್ನು[53] ತಿಳಿಸುತ್ತದೆ. 2014ರ ಅಂಕಿಅಂಶಗಳು ಗ್ರಾಮದಲ್ಲಿ ಒಟ್ಟು 314 ಕುಟುಂಬಗಳು ವಾಸವಾಗಿದ್ದು, ಒಟ್ಟು ಜನಸಂಖ್ಯೆ 1464 ಎಂಬ ಮಾಹಿತಿಯನ್ನು ತಿಳಿಸುತ್ತದೆ. ಇದರಲ್ಲಿ 702 ಗಂಡಸರು ಮತ್ತು 762 ಹೆಂಗಸರು. ಗ್ರಾಮದಲ್ಲಿನ ಸಾಕ್ಷರತಾ ಮಟ್ಟ 2014ರಲ್ಲಿ 79.5% ಇರುವುದು ಅಂಕಿಅಂಶಗಳಲ್ಲಿ ಕಾಣಸಿಗುತ್ತದೆ.[54] 2001ರ ಅಂಕಿಅಂಶಗಳ ಪ್ರಕಾರ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 85 ಹಾಗೂ ಪರಿಶಿಷ್ಟ ಪಂಗಡದ 10 ಜನರು ವಾಸಿಸುತ್ತಿದ್ದರೆಂಬ ಮಾಹಿತಿ ಕಂಡುಬಂದರೆ, 2011ರ ಜನಗಣತಿಯ ಅಂಕಿ ಅಂಶಗಳು ಪ್ರಸ್ತುತ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಹತ್ತು ಜನರು ವಾಸಿಸುತ್ತಿದ್ದು, ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರು ಗ್ರಾಮದಲ್ಲಿ ವಾಸವಾಗಿಲ್ಲದಿರುವುದನ್ನು ತೋರಿಸುತ್ತದೆ. ಪ್ರಸ್ತುತ ಗ್ರಾಮದ ಸುತ್ತಲೂ ಬೃಹತ್ ಕೈಗಾರಿಕಾ ಸಂಕೀರ್ಣಗಳು ಬೆಳೆದು ಬಂದಿದ್ದು, ಸುತ್ತಲಿನ ಪರಿಸರ ಮಲಿನಗೊಂಡಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ.

ಯೋಜನೆಗಾಗಿ ಮಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಾಧೀನಪಡಿಸಲ್ಪಟ್ಟ ಗ್ರಾಮಗಳ ವಿವರಗಳನ್ನು ಗಮನಿಸಿದಾಗ 1990ರ ದಶಕದಲ್ಲಿ ಅಲ್ಲಿನ ಗ್ರಾಮಸ್ಥರುಗಳು ಕೃಷಿ ಚಟುವಟಿಕೆಗಳನ್ನು ತಮ್ಮ ಜೀವನಾಧಾರವಾಗಿ ಅವಲಂಬಿಸಿಕೊಂಡಿದ್ದುದು ಕಂಡುಬರುತ್ತದೆ. ಭತ್ತ, ತೆಂಗು ಮತ್ತು ತರಕಾರಿಗಳು ಅಲ್ಲಿನ ಪ್ರಮುಖ ಬೆಳೆಯಾಗಿದ್ದು, ಭೂಸ್ವಾಧೀನದ ನಂತರ ಕೃಷಿ ಭೂಮಿಗಳು ಕೈತಪ್ಪಿ ಗ್ರಾಮಗಳ ಹೆಚ್ಚಿನ ನಿವಾಸಿಗಳು ಕಾರ್ಮಿಕರಾಗಿ ಬದಲಾಗಿರುತ್ತಾರೆ. ಎಲ್ಲಾ ಗ್ರಾಮಗಳಲ್ಲಿಯೂ ಸಾಕ್ಷರತೆಯ ಪ್ರಮಾಣ 80%ಕ್ಕಿಂತ ಹೆಚ್ಚಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ. ಪ್ರಸ್ತುತ ಯೋಜನೆಗೆ ಒಳಪಟ್ಟ ಗ್ರಾಮಗಳ ವಿವರಗಳನ್ನು ಗಮನಿಸಿದಾಗ ಹಿಂದುಳಿದ ಜಾತಿ, ವರ್ಗ, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಜನರ ಭೂಮಿಯನ್ನೇ ಹೆಚ್ಚಾಗಿ ಸ್ವಾಧೀನಪಡಿಸಿರುವುದು ಕಂಡುಬರುತ್ತದೆ. ಅಲ್ಲಿ ಆರಂಭಗೊಂಡಿರುವ ಕೈಗಾರಿಕಾ ಸಂಕೀರ್ಣಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗಿ, ವಿಶೇಷವಾಗಿ ಅವುಗಳು ಹೊರಬಿಡುತ್ತಿರುವ ತ್ಯಾಜ್ಯದಿಂದಾಗಿ ಅಲ್ಲಿ ವಾಸಿಸುತ್ತಿರುವ ಜನರ ಜೀವನ ಅಸಹನೀಯವಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದ ಪ್ರಮುಖ ಅಂಶವಾಗಿರುತ್ತದೆ.

ಭಾಗ–3

ಭೂಸ್ವಾಧೀನಪಡಿಸಿದ ಸಂದರ್ಭದಲ್ಲಿ ಎರಡು ರೀತಿಯ ಪರಿಹಾರಗಳನ್ನು ಸಂತ್ರಸ್ತರಿಗೆ ಒದಗಿಸಬೇಕು ಎಂಬುದಾಗಿ ಸರಕಾರದ ಪುನರ್‌ವಸತಿ ನೀತಿಯ ಕುರಿತಾದ ಆದೇಶ ವಿವರಿಸುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ–1966ರ ಅಡಿಯಲ್ಲಿ ಸಂತ್ರಸ್ತರು ಹೊಂದಿದ್ದ ಭೂಮಿಗೆ ಅನುಗುಣವಾಗಿ ಸೂಕ್ತ ನಗದು ಪರಿಹಾರವನ್ನು ನೀಡಬೇಕು.[55] ಎರಡನೆಯದಾಗಿ, ಅವರು ಹೊಂದಿದ್ದ ಭೂವಿಸ್ತೀರ್ಣವನ್ನು ಅವಲಂಬಿಸಿ ಪುನರ್‌ವಸತಿ ಪ್ರದೇಶದಲ್ಲಿ ನೆಲೆನಿಲ್ಲಲು ವಿಶೇಷ ಅನುದಾನ, ಉದ್ಯೋಗ ಮತ್ತು ಕಾಲನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆ.

ನಗದು ಪರಿಹಾರದ ಮೊತ್ತವನ್ನು ನಿರ್ಧರಿಸುವುದಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭೂಸ್ವಾಧೀನಾಧಿಕಾರಿಗಳು ಮತ್ತು ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರನ್ನೊಳಗೊಂಡ ಸಲಹಾ ಸಮಿತಿಯೊಂದನ್ನು ರಚಿಸಲಾಗಿತ್ತು. ಆರಂಭದಲ್ಲಿ ಎಕ್ರೆಯೊಂದಕ್ಕೆ ರೂಪಾಯಿ 2 ಲಕ್ಷದಿಂದ 2.5 ಲಕ್ಷದವರೆಗೆ ನಗದು ಪರಿಹಾರವನ್ನು ನೀಡಲಾಗುವುದೆಂದು ಸಮಿತಿ ನಿರ್ಧರಿಸಿತ್ತು. ಸಂತ್ರಸ್ತರ ಪ್ರತಿಭಟನೆಗೆ ಅನುಗುಣವಾಗಿ ಸ್ವಾಧೀನಪಡಿಸಲ್ಪಡುವ ಪ್ರದೇಶಗಳ ಮೌಲ್ಯ ಎಕ್ರೆಯೊಂದಕ್ಕೆ ರೂಪಾಯಿ 5 ಲಕ್ಷವಿರುತ್ತದೆಯೆಂಬುದನ್ನು ಪರಿಗಣಿಸಿ ಪ್ರತಿ ಎಕ್ರೆಗೆ ಅಷ್ಟೇ ನಗದು ಪರಿಹಾರವನ್ನು ನೀಡಲಾಗುವುದೆಂದು ಸಮಿತಿ ತನ್ನ ನಿರ್ಣಯವನ್ನು ಬದಲಾಯಿಸಿತು. ಕಳವಾರು ಪ್ರದೇಶದಲ್ಲಿ ಒಂದು ಎಕ್ರೆ ಭೂಮಿ 15 ಲಕ್ಷ ರೂಪಾಯಿಗಳಿಗೆ ಮಾರಾಟವಾಗುತ್ತಿದೆಯೆಂಬ

ಉದಾಹರಣೆಯನ್ನು ಸಂತ್ರಸ್ತರು ಸಮಿತಿಯ ಗಮನಕ್ಕೆ ತಂದು, ಮನವಿಯನ್ನು ಸಲ್ಲಿಸಿ ಒತ್ತಡವನ್ನು ಹಾಕಿದ ಕಾರಣದಿಂದಾಗಿ ಏಕಪಕ್ಷೀಯವಾಗಿ ಸಂತ್ರಸ್ತರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳದೇ ಎಕ್ರೆಗೆ ರೂಪಾಯಿ 7.5 ಲಕ್ಷ ನೀಡಲಾಗುವುದೆಂದು ಘೋಷಿಸಿತು. ಸಂತ್ರಸ್ತರು ಸೂಕ್ತ ಪರಿಹಾರವನ್ನು ಪಡೆಯುವುದಕ್ಕೋಸ್ಕರ ರಚಿಸಿದ 'ಸಂತ್ರಸ್ತರ ಹಿತರಕ್ಷಣಾ ಸಮಿತಿ' ಪ್ರಾಧಿಕಾರದ ಈ ನಿರ್ಣಯವನ್ನು ಸಾರಾಸಗಟಾಗಿ ತಿರಸ್ಕರಿಸಿ ಪ್ರತಿಭಟನೆಯನ್ನು ಮುಂದುವರೆಸಿತು. ಇದರಿಂದಾಗಿ ಸಮಿತಿಯು ಅಂತಿಮವಾಗಿ ಕೃಷಿ ಭೂಮಿಗೆ ರೂಪಾಯಿ 8.5 ಲಕ್ಷ ಹಾಗೂ ಕೃಷಿಯೇತರ ಭೂಮಿಗೆ ರೂಪಾಯಿ 8 ಲಕ್ಷವನ್ನು ಪರಿಹಾರವಾಗಿ ನೀಡಲಾಗುವುದೆಂದು ತೀರ್ಮಾನಿಸಿತು.[56] ಈ ಆದೇಶಕ್ಕೆ ಅನುಗುಣವಾಗಿ ಸಂತ್ರಸ್ತರುಗಳಿಗೆ ಪರಿಹಾರದ ನಗದು ಹಣವನ್ನು ನೀಡಲಾಗಿರುತ್ತದೆ.

ಕರ್ನಾಟಕ ಸರಕಾರ ತನ್ನ ಮೂರು ಅಧಿಸೂಚನೆಗಳ ಮೂಲಕ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗುವವರ ಪುನರ್‌ವಸತಿಯ ಬಗ್ಗೆ ದೀರ್ಘವಾಗಿ ವಿವರಿಸುತ್ತದೆ. ಸರ್ಕಾರಿ ಆದೇಶ ಸಂಖ್ಯೆ ಆರ್.ಡಿ 309, ಆರ್.ಇ.ಎಚ್ 2006, ಬೆಂಗಳೂರು, ದಿನಾಂಕ 20.06.2007, ಆರ್.ಡಿ 83, ಆರ್.ಇ.ಎಚ್ 2009, ಬೆಂಗಳೂರು, ದಿನಾಂಕ 16.06.2010 ಮತ್ತು ಆರ್.ಡಿ 116, ಆರ್.ಇ.ಎಚ್ 2011, ಬೆಂಗಳೂರು, ದಿನಾಂಕ 02.12.2011ರ ಆದೇಶಗಳು ಪುನರ್‌ವಸತಿ ನೀತಿಗಳ ಬಗ್ಗೆ ಉಲ್ಲೇಖಿಸಿರುತ್ತದೆ. ಪುನರ್‌ನಿರ್ಮಾಣ ಮತ್ತು ಪುನರ್‌ವಸತಿಯನ್ನು ವಿವರಿಸುವ ಮೊದಲು **'ಸಂತ್ರಸ್ತರು'** ಯಾರಾಗುತ್ತಾರೆ ಎಂಬುದಾಗಿ ಸರಕಾರದ ಆದೇಶ ಕೆಳಗಿನ ವಿವರಣೆಯನ್ನು ನೀಡಿರುತ್ತದೆ.

ಯೋಜನಾ ಸಂತ್ರಸ್ತ ವ್ಯಕ್ತಿ ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಳ್ಳಲು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28 (1)ರ ಅಡಿಯಲ್ಲಿ ಅಧಿಸೂಚನೆ ಹೊರಡಿಸುವುದಕ್ಕೆ ಕನಿಷ್ಟ ಒಂದು ವರ್ಷಕ್ಕೂ ಹಿಂದಿನಿಂದ ಯೋಜನಾ ಪ್ರದೇಶದಲ್ಲಿ ವಾಸಿಸುತ್ತಿದ್ದ, ವ್ಯವಸಾಯ ಮಾಡುತ್ತಿದ್ದ ಅಥವಾ ವ್ಯಾಪಾರ, ವೃತ್ತಿ, ದುಡಿಮೆ ಮಾಡುತ್ತಿದ್ದು, ಭೂಸ್ವಾಧೀನದಿಂದ ತನ್ನ ವಾಸಸ್ಥಳ ಅಥವಾ ವೃತ್ತಿಯಿಂದ ನಿರ್ವಸಿತರಾಗುವ ವ್ಯಕ್ತಿ, ಕೃಷಿ ಭೂಮಿಯನ್ನು ಗುತ್ತಿಗೆ ನೀಡಿದ್ದು ಮತ್ತು ಅದನ್ನೇ ಅವಲಂಬಿಸಿರುವ ವ್ಯಕ್ತಿಯನ್ನು ಯೋಜನೆಯ ಸಂತ್ರಸ್ತ ವ್ಯಕ್ತಿ ಎಂದು ಪರಿಗಣಿಸಲಾಗುವುದು. ಭೂಸ್ವಾಧೀನಪಡಿಸಲಾಗುವ ಜಮೀನಿನಲ್ಲಿ ವಾಸವಾಗಿಲ್ಲದೆ ಇರುವ ಹಾಗೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿರದೇ ಇರುವ ಭೂಮಾಲಿಕರು ಯಾವುದೇ ಪುನರ್‌ವಸತಿ, ಪುನರ್‌ನಿರ್ಮಾಣ ಸೌಲಭ್ಯಗಳಿಗೆ ಅರ್ಹರಾಗಿರುವುದಿಲ್ಲ,[57] ಆದರೆ ಅವರಿಗೆ ಜಮೀನು ಕಟ್ಟಡಗಳ ಮೌಲ್ಯವನ್ನು ಮಾತ್ರ ನೀಡಲಾಗುವುದು.

ಯೋಜನಾ ಸಂತ್ರಸ್ತ ಕುಟುಂಬ: ಯೋಜನೆಯ ರಚನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28 (1)ರ ಅಡಿಯಲ್ಲಿ ಯಾವುದೇ ಅಧಿಸೂಚನೆ ಹೊರಡಿಸುವುದಕ್ಕೆ ಪೂರ್ವದಲ್ಲಿ ಕನಿಷ್ಟ

ಒಂದು ವರ್ಷ ಹಿಂದಿನಿಂದ ಯೋಜನಾ ಪ್ರದೇಶದಲ್ಲಿ ವಾಸಿಸುತ್ತಿದ್ದ ವಯಸ್ಕ ಸಂತ್ರಸ್ತ ವ್ಯಕ್ತಿ ಹಾಗೂ ಒಂದೇ ಮನೆಯಲ್ಲಿ ಅವರ ಜತೆಯಲ್ಲಿ ವಾಸಿಸುತ್ತಿರುವ ಅವನ ಅಥವಾ ಅವಳ ಪತಿ/ಪತ್ನಿ, ಅಪ್ರಾಪ್ತ ಗಂಡು ಮಕ್ಕಳು, ಮದುವೆಯಾಗದ ಹೆಣ್ಣು ಮಕ್ಕಳು, ತಂದೆ/ತಾಯಿ ಹಾಗೂ ಕುಟುಂಬದ ಇತರ ಅವಲಂಬಿತರು.[58]

ಅತಿಕ್ರಮಣಕಾರ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28 (1)ರ ಅನ್ವಯ ಅಧಿಸೂಚನೆ ಹೊರಡಿಸಿದ ದಿನಾಂಕದಂದು ಇದ್ದಂತೆ ಸರ್ಕಾರಿ ಅಥವಾ ಅರಣ್ಯ ಜಮೀನಿನಲ್ಲಿ ವಾಸ್ತವ್ಯವಿದ್ದು ಅದನ್ನು ಅಭಿವೃದ್ಧಿ ಪಡಿಸಿರಬೇಕು, ಅತಿಕ್ರಮಣಕಾರನನ್ನು ತೆರವುಗೊಳಿಸುವಾಗ, ಸರ್ಕಾರಿ ಭೂಮಿಯನ್ನು ಅಭಿವೃದ್ಧಿಪಡಿಸಿದ್ದಕ್ಕಾಗಿ ಅನುಕಂಪ ಧನವನ್ನು ನೀಡಬೇಕು ಹಾಗೂ ಅತಿಕ್ರಮಣಕಾರರು ಯಾವುದೇ ಪರಿಹಾರ, ಪುನರ್‌ವಸತಿಯನ್ನು ಪಡೆಯಲು ಅರ್ಹರಾಗಿರುವುದಿಲ್ಲ.[59]

ಕೃಷಿ ಕಾರ್ಮಿಕ: 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯಿದೆಯ ಕಲಂ 28 (1)ರ ಅಡಿಯಲ್ಲಿ ಯಾವುದೇ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಪೂರ್ವದಲ್ಲಿ ಕನಿಷ್ಟ ಮೂರು ವರ್ಷಗಳಿಂದ ಯೋಜನಾ ಪ್ರದೇಶದಲ್ಲಿ ವಾಸಿಸುತ್ತಿದ್ದು ಜಮೀನು ಹೊಂದಿಲ್ಲದ ವಯಸ್ಕ ಸಂತ್ರಸ್ತ ವ್ಯಕ್ತಿ. ಅಂತಹ ಸಂತ್ರಸ್ತ ವ್ಯಕ್ತಿ ಕಾರ್ಮಿಕನಾಗಿದ್ದು ಯೋಜನೆಯಿಂದ ತನ್ನ ಜೀವನಾಧಾರವನ್ನು ಕಳೆದುಕೊಂಡಿರುವವರಾಗಿರಬೇಕು.[60]

ಭೂಮಿ ಹೊಂದಿಲ್ಲದ ಸಂತ್ರಸ್ತ ವ್ಯಕ್ತಿ ಅಥವಾ ಕುಟುಂಬ – ಯೋಜನಾ ಪ್ರದೇಶದಲ್ಲಿ ಯಾವುದೇ ಸ್ವಂತ ಭೂಮಿಯನ್ನು ಹೊಂದಿಲ್ಲದ ವ್ಯಕ್ತಿ ಅಥವಾ ಕುಟುಂಬ.[61]

ಪಹಣಿ ಹೊಂದಿರುವ ವ್ಯಕ್ತಿ ಎಂದರೆ ಪಹಣಿಯಲ್ಲಿ ಜಮೀನಿನ ಮಾಲಕನೆಂದು ಹೆಸರು ನಮೂದಾಗಿರುವ ಯೋಜನಾ ಸಂತ್ರಸ್ತ ವ್ಯಕ್ತಿ.[62]

ಅವಿಭಕ್ತ ಆಸ್ತಿಯ ಸಹಭಾಗಿ ಅಥವಾ ಪಾಲುದಾರ: ಯಾವುದೇ ಅಧಿಸೂಚನೆಯನ್ನು ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966 ಕಲಂ 28 (1)ರ ಅಡಿಯಲ್ಲಿ ಇದ್ದಂತೆ ಕುಟುಂಬದ ಇಬ್ಬರು ವಯಸ್ಕ ಗಂಡು ಮಕ್ಕಳು, ಒಂದೇ ಮನೆಯಲ್ಲಿ ವಾಸವಾಗಿರುವ ಹಾಗೂ ಯೋಜನಾ ಸಂತ್ರಸ್ತ ಕುಟುಂಬದಲ್ಲಿ ಅವಲಂಬಿತರಾಗಿರುವ 35 ವರ್ಷ ಮೀರಿದ ಅವಿವಾಹಿತ ಹೆಣ್ಣು ಮಕ್ಕಳು, ವಿಧವಾ ಹೆಣ್ಣು ಮಕ್ಕಳು ಹಾಗೂ ವಿಧವೆ ಸೊಸೆ.[63]

ಕ್ರಮಬದ್ಧವಾದ ಮನೆಗಳನ್ನು ಹೊಂದಿರುವವರು: ಪಂಚಾಯತ್ ಕಛೇರಿಗಳಿಂದ ಮನೆಸಂಖ್ಯೆಯನ್ನು ನೀಡಲಾಗಿರುವ ಹಾಗೂ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ಕಲಂ 28 (1)ರ ಅಡಿಯಲ್ಲಿ ಅಧಿಸೂಚನೆ ಹೊರಡಿಸುವುದಕ್ಕೆ ಪೂರ್ವದಲ್ಲಿ ಕನಿಷ್ಟ ಒಂದು ವರ್ಷದ ಅವಧಿಗೆ ಮನೆ ತೆರಿಗೆಯನ್ನು ಪಾವತಿಸಿರುವುದಕ್ಕೆ ದಾಖಲೆಯನ್ನು ಹೊಂದಿರುವ ಯೋಜನೆಯ ಸಂತ್ರಸ್ತ ವ್ಯಕ್ತಿ.[64]

ಕೃಷಿ ಜಮೀನನ್ನು ಕಳೆದುಕೊಂಡವರಿಗೆ ಪುನರ್‌ವಸತಿಯ ವಿಶೇಷ ಅನುದಾನ: ಯೋಜನೆಗಾಗಿ ಒಂದು ಎಕ್ರೆಯವರೆಗೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿದರೆ 60,000 ರೂಪಾಯಿ, ಒಂದರಿಂದ ಮೂರು

ಎಕ್ರೆಯವರೆಗೆ ಎಕ್ರೆಗೆ 75,000 ರೂಪಾಯಿಯಂತೆ, ಮೂರರಿಂದ ಐದು ಎಕ್ರೆಯವರೆಗೆ ಎಕ್ರೆಯೊಂದಕ್ಕೆ 90,000 ರೂಪಾಯಿಯಂತೆ ಹಾಗೂ ಐದು ಎಕ್ರೆಗಿಂತ ಮೇಲ್ಪಟ್ಟು ಕೃಷಿ ಜಮೀನನ್ನು ಸ್ವಾಧೀನಪಡಿಸಿದರೆ ಎಕ್ರೆಗೆ ಒಂದು ಲಕ್ಷದಂತೆ ಮೌಲ್ಯಮಾಪನವನ್ನು ಮಾಡಿ ಪುನರ್‌ವಸತಿ ಅನುದಾನವನ್ನು ಏಕ ಅಥವಾ ಒಂದೇ ಆರ್.ಟಿ.ಸಿ. ಹೋಲ್ಡರ್‌ಗಳನ್ನು ಗಣನೆಗೆ ತೆಗೆದುಕೊಂಡು ಒಂದೇ ಕುಟುಂಬವೆಂದು ಪರಿಗಣಿಸಿ ಪಾವತಿಸಲಾಗುವುದು. ಭೂಮಿ ಹೊಂದಿಲ್ಲದ ಯೋಜನಾ ಸಂತ್ರಸ್ತ ಕುಟುಂಬಗಳಿಗೆ ರೂಪಾಯಿ 30,000 ಸಾವಿರವನ್ನು ಒಂದೇ ಕಂತಿನಲ್ಲಿ ಒಂದು ಕುಟುಂಬವೆಂದು ಆರ್ಥಿಕ ಸಹಾಯವನ್ನಾಗಿ ಪಾವತಿಸಲಾಗುವುದು ಎಂಬುದಾಗಿ **ಸರಕಾರಿ ಆದೇಶ ಸಂಖ್ಯೆ ಕಂ.ಇ 309, ಆರ್.ಇ.ಎಚ್ 2006, ಬೆಂಗಳೂರು. ದಿನಾಂಕ 20–06–2007** ವಿವರಿಸುತ್ತದೆ.

ಭೂಸ್ವಾಧೀನದಿಂದ ಮನೆಯನ್ನು ಕಳೆದುಕೊಂಡಿರುವ ಹಾಗೂ ಕಳೆದುಕೊಳ್ಳಲಿರುವ ಕುಟುಂಬಗಳಿಗೆ ಪುನರ್‌ವಸತಿ ಕಾಲನಿಗಳಲ್ಲಿ ಉಚಿತ ಮನೆ ನಿವೇಶನವನ್ನು ಒದಗಿಸಬೇಕು. ಸ್ವಾಧೀನಪಡಿಸಲಾಗುವ ಭೂಮಿ ಒಬ್ಬ ಸಂತ್ರಸ್ತನ ಹೆಸರಿನಲ್ಲಿದ್ದರೆ 60X90ರ ನಿವೇಶನ, ಸಂತ್ರಸ್ತ ಕುಟುಂಬದ ಇಬ್ಬರು ವಯಸ್ಕ ಗಂಡು ಮಕ್ಕಳು ಅಥವಾ ಸಹೋದರರಿಗೆ 40X60ರ ನಿವೇಶನವನ್ನು ನೀಡತಕ್ಕದ್ದು. ಕರ್ನಾಟಕ ಸರಕಾರದ ಆದೇಶ ಸಂಖ್ಯೆ ಆರ್.ಡಿ 83, ಆರ್.ಇ.ಹೆಚ್ 2009, ಬೆಂಗಳೂರು, ದಿನಾಂಕ 16.06.2010ರ ಪುನರ್‌ವಸತಿ ಸಮಿತಿಯ ತಿದ್ದುಪಡಿಗೆ ಅನುಗುಣವಾಗಿ ಏಕ ಆರ್.ಟಿ.ಸಿ. ಹೋಲ್ಡರ್, ಜಂಟಿ ಆರ್.ಟಿ.ಸಿ.ದಾರರು ಮತ್ತು ಇತರೇ ಮನೆ ಹೊಂದಿದವರು ಎಂಬ ವರ್ಗೀಕರಣವನ್ನು ಪರಿಗಣಿಸದೆ ಒಂದೇ ಮನೆಯಲ್ಲಿ ವಾಸವಿರುವ ಸಂತ್ರಸ್ತ ಕುಟುಂಬದ 35 ವರ್ಷ ಮೀರಿದ ಅವಿವಾಹಿತ ಹೆಣ್ಣು ಮಕ್ಕಳು, ಅವಲಂಬಿತ ವಿಧವೆ ಹೆಣ್ಣು ಮಗಳು ಮತ್ತು ವಿಧವೆ ಸೊಸೆ ಇವರುಗಳಿಗೂ 30X40ರ ನಿವೇಶನ ನೀಡಬೇಕು. ಅಳಿಯ ಸಂತತಿ ಇದ್ದಲ್ಲಿ ವಿಧವೆಯ ಸೋದರಿಯ ಮಗಳು ಮತ್ತು ವಿಧವೆಯಾದ ಸೊಸೆ ಇವರಿಗೂ 30X40ರ ನಿವೇಶನವನ್ನು ನೀಡಬೇಕು[65] ಎಂದು ಸ್ಪಷ್ಟಪಡಿಸಿದೆ.

ಫಲಾನುಭವಿಗಳು ನಿವೇಶನದ ಬದಲಿಗೆ ಅನುದಾನವನ್ನು ನೀಡುವಂತೆ ಕೋರಿದ ಪಕ್ಷದಲ್ಲಿ 60X90ರ ಅಳತೆಯ ನಿವೇಶನದಾರರಿಗೆ ರೂಪಾಯಿ 2 ಲಕ್ಷ, 40X60ರ ನಿವೇಶನಕ್ಕೆ 1.50 ಲಕ್ಷ ಹಾಗೂ 30X40 ಅಳತೆಯ ಸೈಟಿಗೆ ರೂಪಾಯಿ ಒಂದು ಲಕ್ಷವನ್ನು ನಗದು ರೂಪದ ಏಕಗಂಟಲ್ಲಿ ನೀಡಬೇಕು. ಯೋಜನಾ ಸಂತ್ರಸ್ತ ಕುಟುಂಬಗಳು ತಮ್ಮ ಮೂಲನೆಲೆಯಿಂದ ತಮ್ಮ ಜಾನುವಾರು, ಅಳಿದುಳಿದ ಗೃಹೋಪಯೋಗಿ ವಸ್ತುಗಳು ಮತ್ತು ಇತರೆ ಸಾಮಾನು ಸರಂಜಾಮುಗಳೊಂದಿಗೆ ಪುನರ್‌ವಸತಿ ಕಾಲನಿಗಳಲ್ಲಿ ನೆಲೆಗೊಳ್ಳಲು ಯೋಜನಾ ಪ್ರಾಧಿಕಾರವು ಪ್ರತಿ ಕುಟುಂಬಕ್ಕೆ ರೂಪಾಯಿ 10,000ಗಳನ್ನು ಸಾಗಾಣಿಕೆ ಅನುದಾನವನ್ನಾಗಿ ನೀಡಬೇಕು. ಸಂತ್ರಸ್ತ ಕುಟುಂಬಗಳು ಹಾಲಿ ಇರುವ ವಾಸಸ್ಥಾನವನ್ನು ತೆರವುಗೊಳಿಸಿ ಪ್ರಾಧಿಕಾರದ ಸುಪರ್ದಿಗೆ ನೀಡಿದ ನಂತರ ಪ್ರತಿ ಕುಟುಂಬಕ್ಕೆ ರೂಪಾಯಿ 20,000ದಂತೆ ಒಂದು ಬಾರಿಯ ನಿರ್ವಹಣಾ ಅನುದಾನವನ್ನು

ನೀಡಬೇಕು. ಪುನರ್‌ವಸತಿ ಪ್ರದೇಶದಲ್ಲಿ ಸಂತ್ರಸ್ತರು ಮನೆಗಳನ್ನು ನಿರ್ಮಾಣ ಮಾಡಲು ರೂಪಾಯಿ 75,000ಗಳ ಅನುದಾನವನ್ನು ಒದಗಿಸಬೇಕು. ಯೋಜನಾ ಪ್ರಾಧಿಕಾರ ಸಂತ್ರಸ್ತ ಕುಟುಂಬಗಳಿಗೆ ಮಂಗಳೂರು ವಿಶೇಷ ಆರ್ಥಿಕ ವಲಯದ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿಯೇ ಮನೆ ನಿವೇಶನವನ್ನು ಮಂಜೂರು ಮಾಡಬೇಕೆಂದು[66] ಸರ್ಕಾರಿ ಆದೇಶ ವಿವರಿಸುತ್ತದೆ.

ಧಾರ್ಮಿಕ ಸ್ಥಳಗಳ ಪುನರ್‌ನಿರ್ಮಾಣ

ಭೂಸ್ವಾಧೀನಪಡಿಸುವಾಗ ಸಂತ್ರಸ್ತ ಜನರು ತಲತಲಾಂತರದಿಂದ ಪೂಜಿಸಿಕೊಂಡು ಬಂದಂತಹ ಶ್ರದ್ಧಾಭಕ್ತಿಯ ಕೇಂದ್ರಗಳು, ದೈವಸ್ಥಾನಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೂಜಿಸಿಕೊಂಡು ಬಂದಂತಹ ನಾಗಸನ್ನಿಧಿಗಳಿಗೂ ತೊಂದರೆಗಳಾಗುತ್ತದೆ. ಕರ್ನಾಟಕ ಸರಕಾರದ ಆದೇಶ ಸಂಖ್ಯೆ ಆರ್.ಡಿ 309, ಆರ್.ಇ.ಹೆಚ್ 2006, ಬೆಂಗಳೂರು, ದಿನಾಂಕ 20.06.2007 ಮತ್ತು ದಿನಾಂಕ 16.06.2010ರ ಆದೇಶ ಆರ್.ಡಿ 83, ಆರ್.ಇ.ಹೆಚ್ 2009ರ ಪ್ರಕಾರ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಮೇಲೆ ವಿವರಿಸಿದಂತಹ ಪೂಜಾಸ್ಥಳಗಳು ಸ್ಥಳಾಂತರಗೊಳಿಸಲ್ಪಡುವಂತಹ ಸಂದರ್ಭಗಳು ಬಂದರೆ ಯಾವ ರೀತಿಯ ಪುನರ್‌ನಿರ್ಮಾಣ ಮತ್ತು ಪರಿಹಾರಗಳನ್ನು ನೀಡಬಹುದು ಎಂಬುದಾಗಿ ವಿವರಿಸುತ್ತದೆ.

ಧಾರ್ಮಿಕ ಕೇಂದ್ರ ಮತ್ತು ಮಂದಿರಗಳನ್ನು ಪುನರ್‌ವಸತಿ ಪ್ರದೇಶಗಳಲ್ಲಿ ನಿರ್ಮಿಸುವಾಗ ಸ್ಥಳಾಂತರದ ಪೂರ್ವದಲ್ಲಿ ಇದ್ದ ನಿವೇಶನದ ವಿಸ್ತೀರ್ಣದ ಒಂದೂವರೆ ಪಟ್ಟಷ್ಟು ಭೂಪ್ರದೇಶವನ್ನು ಹಾಗೂ ನಿರ್ಮಾಣ ವೆಚ್ಚವನ್ನು ಸಂಬಂಧಪಟ್ಟ ಸಮಿತಿ, ಟ್ರಸ್ಟ್ ಅಥವಾ ಮಂಡಳಿಗೆ ನೀಡಬೇಕು. ಪುನರ್‌ವಸತಿ ಸಮಿತಿಯು ತನ್ನ ನಿರ್ಣಯದಲ್ಲಿ ವಿಗ್ರಹ/ಪ್ರತಿಮೆಗಳನ್ನು ಸ್ಥಳಾಂತರಿಸಿ ಪುನರ್‌ಸ್ಥಾಪಿಸಲು ತಗಲುವ ವೆಚ್ಚವನ್ನು ಪ್ರತ್ಯೇಕವಾಗಿ ನೀಡಬೇಕು ಎಂದು ವಿವರಿಸಿದೆ. ಯೋಜನಾ ಪ್ರದೇಶದಲ್ಲಿ ಇದ್ದಂತಹ ಸಂತ್ರಸ್ತ ಕುಟುಂಬದ ಭೂತ/ದೈವಸ್ಥಾನಗಳನ್ನು ತಮ್ಮ ಮುಂದಿನ ವಾಸಸ್ಥಳಕ್ಕೆ ಸ್ಥಳಾಂತರಿಸಲು ಪ್ರತಿ ಕುಟುಂಬಕ್ಕೆ ರೂಪಾಯಿ 10,000ಗಳ ವಿಶೇಷ ಅನುದಾನವನ್ನು ನೀಡಬೇಕು. ಸಂತ್ರಸ್ತ ಕುಟುಂಬಗಳು ತಮ್ಮ ಹಿಂದಿನ ನೆಲೆಗಳಲ್ಲಿ ನಾಗಬನವನ್ನು ಹೊಂದಿದ್ದ ಸಂದರ್ಭದಲ್ಲಿ ಅಂತಹ ಸಂತ್ರಸ್ತ ಕುಟುಂಬಗಳಿಗೆ ಹೊಸ ಪ್ರದೇಶದಲ್ಲಿ ನಾಗಬನವನ್ನು ನಿರ್ಮಿಸಲು ಮತ್ತು ಪುನರ್‌ಪ್ರತಿಷ್ಠಾಪನೆ ಮಾಡುವ ಸಲುವಾಗಿ ಪ್ರತಿ ಕುಟುಂಬಕ್ಕೆ 20,000 ರೂಪಾಯಿಗಳ ವಿಶೇಷ ಅನುದಾನವನ್ನು ನೀಡಬೇಕು. ಸ್ಥಳಾಂತರದ ಪೂರ್ವದಲ್ಲಿ ಯಾವುದಾದರೂ ಕುಟುಂಬದ ಭೂತ/ದೈವಸ್ಥಾನಗಳಿಗೆ ಮನೆಯ ಹೊರಗಡೆ ಪ್ರತ್ಯೇಕ ಕಟ್ಟಡವಿದ್ದರೆ ಅದರ ವಿಸ್ತೀರ್ಣದ ಒಂದೂವರೆ ಪಟ್ಟು ಜಾಗವನ್ನು ಪುನರ್‌ವಸತಿ ನೀತಿಗನುಗುಣವಾಗಿ ನೀಡಲಾಗುವ ನಿವೇಶನದ ಜೊತೆಯಲ್ಲಿಯೇ ನೀಡಬೇಕು[67] ಎಂಬುದಾಗಿ ಸರಕಾರಿ ಆದೇಶ ಸ್ಪಷ್ಟಪಡಿಸಿದೆ.

ಉದ್ಯೋಗ ಸೌಲಭ್ಯ

ಮಂಗಳೂರು ವಿಶೇಷ ಆರ್ಥಿಕ ವಲಯ ನಿಯಮಿತ ಹಾಗೂ ಸ್ಥಾಪನೆಯಾಗುವಂತಹ ಕೈಗಾರಿಕೆಗಳಲ್ಲಿ ಖಾಲಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆರಿಸುವಾಗ ಆದ್ಯತೆಯ ಮೇಲೆ ಅರ್ಹ ವಿದ್ಯಾರ್ಹತೆ ಹೊಂದಿರುವ ಯೋಜನಾ ಸಂತ್ರಸ್ತ ಕುಟುಂಬದ ಇಚ್ಛೆಯುಳ್ಳ ಒಬ್ಬ ಸದಸ್ಯನಿಗೆ ಉದ್ಯೋಗವನ್ನು, ವಿದ್ಯಾರ್ಹತೆ ಹೊಂದಿಲ್ಲದ ಸಂತ್ರಸ್ತರಾಗಿದ್ದ ಪಕ್ಷದಲ್ಲಿ ಅಂಥವರಿಗೆ ತರಬೇತಿಯನ್ನು ನೀಡಿ ಉದ್ಯೋಗವನ್ನು ನೀಡಬೇಕೆಂದು ಕರ್ನಾಟಕ ಸರಕಾರದ ಪುನರ್‌ವಸತಿ ನೀತಿಯ ಕುರಿತಾದ ಆದೇಶ[68] ಉಲ್ಲೇಖಿಸಿರುತ್ತದೆ. ಸಂತ್ರಸ್ತ ಕುಟುಂಬದವರು ಮೇಲೆ ತಿಳಿಸಿದ ಯಾವುದೇ ಅವಕಾಶಗಳನ್ನು ಪಡೆಯಲು ಇಚ್ಛಿಸದಿದ್ದಲ್ಲಿ ಅವರಿಗೆ ಒಂದು ಬಾರಿಯ ಪರಿಹಾರವೆಂದು ನಿರ್ದಿಷ್ಟ ಮೊತ್ತವನ್ನು ನೀಡಲಾಗುವುದು ಎಂದು ವಿವರಿಸಿದೆ. ಇದಕ್ಕಾಗಿ ಯೋಜನೆಯ ಸಂತ್ರಸ್ತರನ್ನು ಮೂರು ರೀತಿಯಲ್ಲಿ ವರ್ಗೀಕರಿಸಲಾಗಿದೆ.

ಕೋಷ್ಟಕ–2.3: ಉದ್ಯೋಗದ ಬದಲಾಗಿ ಒಂದು ಬಾರಿಯ ನಗದು ಪರಿಹಾರ ಹಾಗೂ ಎಕ್ಸ್‌ಗ್ರೇಷಿಯಾ

	ಯೋಜನೆಯ ಸಂತ್ರಸ್ತ ಪ್ರಥಮ ಕುಟುಂಬ	ಯೋಜನೆಯ ಸಂತ್ರಸ್ತ ದ್ವಿತೀಯ ಕುಟುಂಬ	ಯೋಜನೆಯ ಸಂತ್ರಸ್ತ ತೃತೀಯ ಕುಟುಂಬ
ಸ್ನಾತಕೋತ್ತರ ಪದವೀಧರರು, ಡಿಪ್ಲೊಮಾ, ಕೆ.ಪಿ.ಟಿ.ಯಲ್ಲಿ ತರಬೇತಿ ಪಡೆದ ಯೋಜನೆಯ ಸಂತ್ರಸ್ತ ಕುಟುಂಬದ ಸದಸ್ಯ	ರೂ.7.00 ಲಕ್ಷ (3.50+3.50)	ರೂ.3.00 ಲಕ್ಷ (0.50+2.50)	ರೂ.2.00 ಲಕ್ಷ
ಪದವಿ ಪೂರ್ವ, ಎಸ್.ಎಸ್.ಎಲ್.ಸಿ., ಪ್ರೌಢ ಶಿಕ್ಷಣ	ರೂ.6.00 ಲಕ್ಷ (3.50+2.50)	ರೂ.1.50 ಲಕ್ಷ (0.50+1.00)	ರೂ.1.00 ಲಕ್ಷ

(ಕರ್ನಾಟಕ ಸರಕಾರದ ಪುನರ್‌ವಸತಿಯ ಬಗೆಗಿನ ಆದೇಶ ಸಂಖ್ಯೆ ಆರ್.ಡಿ.116, ಆರ್.ಇ.ಎಚ್ 2011, ಬೆಂಗಳೂರು, ದಿನಾಂಕ 02–12–2011)

ಯೋಜನೆಯ ಸಂತ್ರಸ್ತ ಪ್ರಥಮ ಕುಟುಂಬ – ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966 ಕಲಂ 28 (1)ರ ಪ್ರಕಾರ ಭೂಸ್ವಾಧೀನ ಆದೇಶ ಹೊರಡಿಸಿದ ದಿನಾಂಕದಿಂದ ಕನಿಷ್ಠ ಒಂದು ವರ್ಷದ ಪೂರ್ವದಲ್ಲಿ ಭೂಸ್ವಾಧೀನ ಪ್ರದೇಶದಲ್ಲಿ ವಾಸಿಸುತ್ತಿದ್ದ ಯೋಜನೆಯ ಸಂತ್ರಸ್ತರು.

ಯೋಜನೆಯ ಸಂತ್ರಸ್ತ ದ್ವಿತೀಯ ಕುಟುಂಬ – ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966 ಕಲಂ 28 (1) ರ ಪ್ರಕಾರ ಭೂಸ್ವಾಧೀನ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಪೂರ್ವದಲ್ಲಿ ಒಂದು ವರ್ಷಕ್ಕಿಂತ ಕಡಿಮೆ ಅವಧಿ ಯೋಜನಾ ಪ್ರದೇಶದಲ್ಲಿ ವಾಸಿಸುತ್ತಿದ್ದ ಸಂತ್ರಸ್ತರು.

ಯೋಜನೆಯ ಸಂತ್ರಸ್ತ ತೃತೀಯ ಕುಟುಂಬ – ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966 ಕಲಂ 28 (1) ರ ಪ್ರಕಾರ ಭೂಸ್ವಾಧೀನ ಅಧಿಸೂಚನೆಯ ನಂತರ ಯೋಜನಾ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಿ ವಾಸಿಸುತ್ತಿರುವವರು.

ಉದ್ಯೋಗಾವಕಾಶವನ್ನು ಆದ್ಯತೆಯ ಮೇರೆಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಯೋಜನಾ ಸಂತ್ರಸ್ತ ಕುಟುಂಬಗಳಿಗೆ ನೀಡಲಾಗುವುದೆಂದು ಸರಕಾರಿ ಆದೇಶ ವಿವರಿಸಿದೆ.

ಕರ್ನಾಟಕ ಸರಕಾರದ ಆದೇಶ ಸಂಖ್ಯೆ ಆರ್.ಡಿ 16, ಆರ್.ಇ.ಎಚ್ 2011, ತಾ. 02–12–2011 ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಸ್ವಾಧೀನಕ್ಕೊಳಗಾದ ಸಂತ್ರಸ್ತರಿಗೆ ಸ್ವಾಧೀನಪಡಿಸಿದ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬರುತ್ತಿರುವ ಕೈಗಾರಿಕೆಗಳು ಯಾವ ರೀತಿಯಲ್ಲಿ ಉದ್ಯೋಗವನ್ನು ನೀಡಬೇಕೆಂದು ಸ್ಪಷ್ಟವಾಗಿ ವಿವರಿಸಿದೆ.

ಕೋಷ್ಟಕ–2.4: ಸರಕಾರದ ಆದೇಶ ಸಂಖ್ಯೆ ಆರ್.ಡಿ.116, ಆರ್.ಇ.ಎಚ್ 2011, ಬೆಂಗಳೂರು, ದಿನಾಂಕ 02–12–2011ರ ಪ್ರಕಾರ ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಸಂತ್ರಸ್ತರಿಗೆ ಮೀಸಲಿಡಬೇಕಾದ ಉದ್ಯೋಗಾವಕಾಶಗಳ ವಿವರ

ಕೈಗಾರಿಕೆಗಳು	ನೀಡಲ್ಪಟ್ಟ ಭೂಮಿ (ಎಕ್ರೆ)	ಉದ್ಯೋಗವನ್ನು ನೀಡುವುದಕ್ಕಾಗಿ ಪರಿಗಣಿಸಲ್ಪಟ್ಟ ಭೂಮಿ	ನೀಡಬೇಕಾಗಿರುವ ಉದ್ಯೋಗದ ಪ್ರಮಾಣ	25–3–2011ರವರೆಗೆ ನೀಡಿದ ಒಟ್ಟು ಉದ್ಯೋಗಾವಕಾಶಗಳು	ಮುಂದೆ ನೀಡಬೇಕಾಗಿರುವ ಉದ್ಯೋಗಿಗಳ ಸಂಖ್ಯೆ
1	2	3	4	5	6 (4–5)
ಎಂ.ಆರ್.ಪಿ.ಎಲ್.	268	268	183	86	97
ಒ.ಎಮ್.ಪಿ.ಎಲ್.	442	442	302	3	299
ಐ.ಎಸ್.ಪಿ.ಆರ್.ಎಲ್.	85	85	58	0	58
ಎಮ್.ಎಸ್.ಇ.ಝಡ್. (ಎಲ್.)	1522	760**	520*	4	516
ಒಟ್ಟು	2317	1555	1063	93	970

** ಮಂಗಳೂರು ವಿಶೇಷ ಆರ್ಥಿಕ ವಲಯದಲ್ಲಿ ಮುಂದೆ ಬರಲಿರುವ ಕೈಗಾರಿಕೆಗಳು ನೀಡಬೇಕಾದ ಉದ್ಯೋಗಾವಕಾಶಗಳು*

*** ಹಸಿರು ವಲಯ ಮತ್ತು ಸಂತ್ರಸ್ತರಿಗೆ ನೀಡಿದ ಎಲ್ಲರೂ ಬಳಸಬಹುದಾದ ಸಾಮಾನ್ಯ ಪ್ರದೇಶ*

ಉದ್ಯೋಗ ಒದಗಿಸಲು ಕೊಡಲಾಗಿರುವ ಕಾಲಾವಕಾಶ:

1. **ಎಂ.ಆರ್.ಪಿ.ಎಲ್.** – ಸರ್ಕಾರದ ಆದೇಶದ ದಿನಾಂಕದಿಂದ ಮೂರು ತಿಂಗಳ ಒಳಗೆ.
2. **ಒ.ಎಮ್.ಪಿ.ಎಲ್.** – 143 ಅಭ್ಯರ್ಥಿಗಳಿಗೆ ಪ್ರಸ್ತುತ ಆದೇಶದ ದಿನಾಂಕದಿಂದ ಹದಿನೆಂಟು ತಿಂಗಳುಗಳ ಒಳಗೆ ಬಾಕಿ ಉಳಿದಿರುವ 156 ಅಭ್ಯರ್ಥಿಗಳಿಗೆ ಪ್ರಸ್ತುತ ಸರಕಾರಿ ಆದೇಶದ ದಿನಾಂಕದಿಂದ ಮೂರು ವರ್ಷದ ಅವಧಿಯ ಒಳಗಡೆ ನೇಮಕಾತಿ ಪ್ರಕ್ರಿಯೆಗಳನ್ನು ಪೂರೈಸಬೇಕು.

3. **ಐ.ಎಸ್.ಪಿ.ಆರ್.ಎಲ್.** – ಕರ್ನಾಟಕ ಸರಕಾರದ ಆದೇಶ ಸಂಖ್ಯೆ ಆರ್.ಡಿ 116, ಆರ್.ಇ.ಎಚ್ 2011, ಬೆಂಗಳೂರು ದಿನಾಂಕ 02 ಡಿಸೆಂಬರ್ 2011ರ ಆದೇಶ ಹೊರಡಿಸಿದ ದಿನದಿಂದ ಹದಿನೆಂಟು ತಿಂಗಳುಗಳ ಒಳಗೆ ಯೋಜನೆಗಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುವವರಲ್ಲಿ ನಿಗದಿತ ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವ ಹದಿನಾಲ್ಕು ಸಂತ್ರಸ್ತರಿಗೆ ಉದ್ಯೋಗವನ್ನು ನೀಡಿ ಉಳಿದ ನಲವತ್ತನಾಲ್ಕು ಸಂತ್ರಸ್ತರಿಗೆ ಐ.ಎಸ್.ಪಿ.ಆರ್.ಎಲ್. ಅಥವಾ ಮಂಗಳೂರು ವಿಶೇಷ ಆರ್ಥಿಕ ವಲಯದಲ್ಲಿ ಅಸ್ತಿತ್ವಕ್ಕೆ ಬರುವ ಕೈಗಾರಿಕಾ ಘಟಕಗಳಲ್ಲಿ ಜುಲೈ 2014ರ ಒಳಗಡೆ ಉದ್ಯೋಗವನ್ನು ಕಲ್ಪಿಸಬೇಕು.

4. **ಎಮ್.ಎಸ್.ಇ.ಝಡ್.ಎಲ್.** – ಮಂಗಳೂರು ವಿಶೇಷ ಆರ್ಥಿಕ ವಲಯದಲ್ಲಿ ಅಸ್ತಿತ್ವಕ್ಕೆ ಬರಲಿರುವ ಇತರ ಕೈಗಾರಿಕಾ ಘಟಕಗಳಲ್ಲಿ ಜುಲೈ 2014ರ ಒಳಗಡೆ ಉಳಿದ 516 ಅಭ್ಯರ್ಥಿಗಳಿಗೆ ಉದ್ಯೋಗವನ್ನು ನೀಡುವ ವ್ಯವಸ್ಥೆಯನ್ನು ಮಾಡಬೇಕು ಎಂದು ದಿನಾಂಕ 02–12–2011ರಂದು ಕರ್ನಾಟಕ ಸರಕಾರ ಹೊರಡಿಸಿದ ಪುನರ್‌ನಿರ್ಮಾಣ ಮತ್ತು ಪುನರ್‌ವಸತಿ ನೀತಿಯ ಕುರಿತಾದ ಆದೇಶವು ಸ್ಪಷ್ಟವಾಗಿ ಉಲ್ಲೇಖಿಸಿದೆ.

ಉಲ್ಲೇಖಿತ ಕೈಗಾರಿಕೆಗಳಲ್ಲಿ ಉದ್ಯೋಗವನ್ನು ಸಂತ್ರಸ್ತರಿಗೆ ನೀಡುವವರೆಗೆ ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ಸಂತ್ರಸ್ತ ಕುಟುಂಬದ ಸದಸ್ಯರಿಗೆ ನೀಡಿದ ತರಬೇತಿಗೆ ಅನುಗುಣವಾಗಿ ಎಂ.ಆರ್.ಪಿ.ಎಲ್. ಅಥವಾ ಒ.ಎಮ್.ಪಿ.ಎಲ್.ನ ಘಟಕಗಳಲ್ಲಿನ ಕಾಮಗಾರಿಗಳನ್ನು ನಡೆಸುತ್ತಿರುವ ಗುತ್ತಿಗೆದಾರರ ಅಧೀನದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಉದ್ಯೋಗವನ್ನು ಕಲ್ಪಿಸಿ ಅವರುಗಳಿಗೆ ಖಾಯಂ ಉದ್ಯೋಗ ದೊರಕುವವರೆಗೆ ಮಾಹೆಯಾನ ಹತ್ತು ಸಾವಿರ ರೂಪಾಯಿಗಳನ್ನು ಸ್ಟೈಪೆಂಡ್ ಆಗಿ ನೀಡಬೇಕು ಎಂದು ವಿವರಿಸಿದೆ.

ಕೋಷ್ಟಕ–2.5: ಮೇ 2015ರವರೆಗೆ ಕೈಗಾರಿಕಾ ಘಟಕಗಳಲ್ಲಿ ನೀಡಿದ ಉದ್ಯೋಗಾವಕಾಶದ ಅಂಕಿ ಅಂಶ

ಕೈಗಾರಿಕೆಗಳು	ನೀಡಲ್ಪಟ್ಟ ಭೂಮಿ (ಎಕ್ರೆ)	ಉದ್ಯೋಗವನ್ನು ನೀಡುವುದಕ್ಕಾಗಿ ಪರಿಗಣಿಸಲ್ಪಟ್ಟ ಭೂಮಿ	ನೀಡಬೇಕಾಗಿರುವ ಉದ್ಯೋಗದ ಪ್ರಮಾಣ	11–5–2015ರವರೆಗೆ ನೀಡಿದ ಒಟ್ಟು ಉದ್ಯೋಗಾವಕಾಶಗಳು	ಮುಂದೆ ನೀಡಬೇಕಾಗಿರುವ ಉದ್ಯೋಗಗಳ ಸಂಖ್ಯೆ
1	2	3	4	5	6 (4–5)
ಎಂ.ಆರ್.ಪಿ.ಎಲ್.	268	268	183	183	00
ಒ.ಎಮ್.ಪಿ.ಎಲ್.	442	442	302	221	81
ಐ.ಎಸ್.ಪಿ.ಆರ್.ಎಲ್.	85	85	58	14	44
ಎಮ್.ಎಸ್.ಇ.ಝಡ್. (ಎಲ್.)	1522	760**	520*	68	452
ಒಟ್ಟು	2317	1555	1063	486	577

ಮೂಲ: ಜಿಲ್ಲಾಧಿಕಾರಿಗಳ ಕಚೇರಿಯಿಂದ ಪಡೆದ ಅಂಕಿ ಅಂಶ, ದ. ಕ. ಜಿಲ್ಲೆ

ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಸಂತ್ರಸ್ತರಿಗೆ ಉದ್ಯೋಗ ನೀಡುವ ನೀತಿಯಂತೆ ಮೇ 2015ರವರೆಗೆ ಮೇಲೆ ವಿವರಿಸಿದ ಕೋಷ್ಟಕದಂತೆ ಉದ್ಯೋಗವನ್ನು ಕಲ್ಪಿಸಲಾಗಿರುತ್ತದೆ[69] ಎಂಬ ಅಂಶವನ್ನು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಛೇರಿ ಹಾಗೂ ಮಂಗಳೂರು ವಿಶೇಷ ಆರ್ಥಿಕ ವಲಯದ ಕಛೇರಿಯಿಂದ ಪಡೆದ ಮಾಹಿತಿಗಳು ತಿಳಿಸುತ್ತದೆ. ಸರಕಾರದ ಆದೇಶವು ನೀಡಬೇಕಾದ ಒಟ್ಟು 1063 ಉದ್ಯೋಗಾವಕಾಶಗಳನ್ನು ಜುಲೈ 2014ರೊಳಗಡೆ ಒದಗಿಸಬೇಕೆಂದು ಸ್ಪಷ್ಟಪಡಿಸಿದ್ದರೂ 2015ರ ಮೇ ತಿಂಗಳಲ್ಲಿ ಪಡೆದ ಅಂಕಿಅಂಶಗಳು ಕೇವಲ 486 ಉದ್ಯೋಗಾವಕಾಶಗಳನ್ನು ನೀಡಿದ್ದು ಕಂಡುಬಂದಿರುತ್ತದೆ. ಉಳಿದ 577 ಉದ್ಯೋಗಗಳನ್ನು ನೀಡುವುದರ ಕುರಿತು ವಿಚಾರಿಸಿದಾಗ, ಶೀಘ್ರದಲ್ಲಿಯೇ ಅರ್ಹ ಸಂತ್ರಸ್ತರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗುತ್ತದೆ ಎಂಬ ಮಾಹಿತಿಯನ್ನು ಪ್ರಾಧಿಕಾರದ ಅಧಿಕಾರಿಗಳು ನೀಡಿರುತ್ತಾರೆ.

ಸಂತ್ರಸ್ತರಿಗೆ ನಿರ್ವಹಣಾ ವೆಚ್ಚ

ಉದ್ಯೋಗದ ನಿರೀಕ್ಷೆಯಲ್ಲಿರುವ ಹಾಗೂ ಯಾವುದೇ ತಾತ್ಕಾಲಿಕ ಹುದ್ದೆಗಳನ್ನು ನೀಡದಿರುವ ಯೋಜನೆಯ ಸಂತ್ರಸ್ತ ಕುಟುಂಬದ ಸದಸ್ಯರಿಗೆ ಖಾಯಂ ಉದ್ಯೋಗವನ್ನು ಆ ಪ್ರದೇಶದಲ್ಲಿ ಬರಲಿರುವ ಕೈಗಾರಿಕೆಗಳಲ್ಲಿ ದೊರಕುವವರೆಗೆ ಮಾಹೆಯಾನ ನಿರ್ವಹಣಾ ವೆಚ್ಚವನ್ನು ನೀಡಬೇಕು.[70] ಮಂಗಳೂರು ವಿಶೇಷ ಆರ್ಥಿಕ ವಲಯದ ಪ್ರಾಧಿಕಾರ ಸಂತ್ರಸ್ತರಿಗೆ ಕೌಶಲ್ಯ ತರಬೇತಿ ಹಾಗೂ ಉದ್ಯೋಗವನ್ನು ಕಲ್ಪಿಸುವುದಕ್ಕೆ ಒಪ್ಪಿಕೊಂಡಿರುವ ಅಭ್ಯರ್ಥಿಗಳಿಗೆ ಮಾತ್ರ ನಿರ್ವಹಣ ವೆಚ್ಚವನ್ನು ನೀಡಲು ಬದ್ಧವಾಗಿರುತ್ತದೆ. ಉದ್ಯೋಗಾಕಾಂಕ್ಷಿಗಳಿಗೆ ಮಂಗಳೂರು ವಿಶೇಷ ಆರ್ಥಿಕ ವಲಯದ ಪರಿಮಿತಿಯೊಳಗೆ ಸ್ಥಾಪನೆಗೊಳ್ಳುವ ಕೈಗಾರಿಕೆಗಳಲ್ಲಿ ಉದ್ಯೋಗವನ್ನು ಪಡೆಯುವುದಕ್ಕೆ ಎರಡು ಅವಕಾಶಗಳನ್ನು ನೀಡಲಾಗುವುದು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಯೋಜನೆಯ ಸಂತ್ರಸ್ತರಿಗೆ ಉದ್ಯೋಗವನ್ನು ನೀಡುವ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಬೇಕು. ಉದ್ಯೋಗಿಗಳ ಆಯ್ಕೆಯ ಮಾನದಂಡಗಳನ್ನು ನಿರ್ಧರಿಸುವ ಮತ್ತು ಪ್ರಸ್ತುತ ಭೂಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳು ನಿಗದಿತ ಸಮಯದ ಒಳಗಡೆ ಸಂತ್ರಸ್ತರಿಗೆ ಉದ್ಯೋಗವನ್ನು ಒದಗಿಸುವಂತೆ ಮೇಲ್ವಿಚಾರಣೆಯನ್ನು ಮಾಡುವ ಅಧಿಕಾರವನ್ನು ಹೊಂದಿದ್ದಾರೆ ಎಂದು ಕರ್ನಾಟಕ ಸರಕಾರ 2011ರಲ್ಲಿ ಹೊರಡಿಸಿದ ಆರ್.ಡಿ 116, ಆರ್.ಇ.ಎಚ್ 2011ರ ಆದೇಶ ಸ್ಪಷ್ಟವಾಗಿ ವಿವರಿಸಿದೆ. ಮಂಗಳೂರು ವಿಶೇಷ ಆರ್ಥಿಕ ವಲಯಕ್ಕಾಗಿ ಭೂಸ್ವಾಧೀನಪಡಿಸಿದ ಪ್ರದೇಶದಲ್ಲಿಯೇ ಮನೆಗಳನ್ನು ನಿರ್ಮಿಸುವುದಕ್ಕಾಗಿ ಸಂತ್ರಸ್ತರಿಗೆ ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಿಕೊಡಬೇಕು. ಸಂತ್ರಸ್ತ ಜನರು ಉತ್ತಮ ಜೀವನವನ್ನು ನಡೆಸುವುದಕ್ಕೆ ಸಹಕಾರಿಯಾಗುವಂತೆ ಸಮುದಾಯ ಭವನ, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಬಾಲವಾಡಿ/ಅಂಗನವಾಡಿ ಕೇಂದ್ರ, ಅವಶ್ಯಕತೆಗಳಿಗೆ ತಕ್ಕಂತೆ ಶಾಲೆ, ಡಾಂಬರೀಕೃತ ರಸ್ತೆ, ಒಳಚರಂಡಿ ವ್ಯವಸ್ಥೆ,

ಬೀದಿದೀಪಗಳು, ಸ್ಮಶಾನ/ಚಿತಾಗಾರ, ಅಂಚೆ ಕಛೇರಿ, ಬ್ಯಾಂಕಿಂಗ್ ಸೌಲಭ್ಯ, ನ್ಯಾಯಬೆಲೆ ಅಂಗಡಿಗಳು, ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಅವುಗಳ ವ್ಯವಸ್ಥಿತ ನಿರ್ವಹಣೆಗೆ ಕ್ರಮಗಳನ್ನು ತೆಗೆದುಕೊಳ್ಳಬೇಕು[71] ಎಂಬುದಾಗಿ ಮಂಗಳೂರು ವಿಶೇಷ ಆರ್ಥಿಕ ವಲಯದ ಭೂಸಂತ್ರಸ್ತರ ಪುನರ್‌ನಿರ್ಮಾಣ ಮತ್ತು ಪುನರ್‌ವಸತಿಯ ಬಗೆಗಿನ ಕರ್ನಾಟಕ ಸರಕಾರದ ಆದೇಶ ತಿಳಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯು ಎಲ್ಲಾ ರೀತಿಯಿಂದಲೂ ಕೈಗಾರಿಕೆಗಳ ಅಭಿವೃದ್ಧಿಗೆ ವಿಪುಲ ಅವಕಾಶಗಳನ್ನು ಸೃಷ್ಟಿಸಿರುವುದನ್ನು ಜಿಲ್ಲೆಯ ವೈಶಿಷ್ಟ್ಯವನ್ನು ಗಮನಿಸಿದಾಗ ತಿಳಿದುಬರುತ್ತದೆ. ಇಲ್ಲಿ ದೊರಕುವ ಶಿಕ್ಷಿತ ಮಾನವ ಸಂಪನ್ಮೂಲ, ಹೇರಳವಾಗಿ ದೊರಕುವ ನೀರು ಮತ್ತು ಮೂಲಭೂತ ಸೌಕರ್ಯಗಳು ಜಿಲ್ಲೆಯನ್ನು ಕೈಗಾರಿಕಾ ಕ್ಷೇತ್ರದ ಹೆಬ್ಬಾಗಿಲನ್ನಾಗಿ ಮಾಡಿರುತ್ತದೆ. ಅಭಿವೃದ್ಧಿಯ ಮಾನದಂಡಗಳಲ್ಲಿ ಜಿಲ್ಲೆಯ ಉತ್ತರ ದಿಕ್ಕಿಗೆ ಹಮ್ಮಿಕೊಂಡಿರುವ ಪ್ರದೇಶಗಳಾದ ಸುಳ್ಯ, ಬೆಳ್ತಂಗಡಿ ತಾಲುಕುಗಳಲ್ಲಿ ಯಾವುದೇ ಬೃಹತ್ ಕೈಗಾರಿಕೆಗಳು ತಮ್ಮ ನೆಲೆಯನ್ನು ಕಂಡುಕೊಂಡಿರುವುದಿಲ್ಲ. ಇದಕ್ಕೆ ಆ ಪ್ರದೇಶದಲ್ಲಿನ ಮೂಲಭೂತ ಸೌಲಭ್ಯಗಳ ಕೊರತೆಯೇ ಪ್ರಮುಖ ಕಾರಣವಾಗಿರುತ್ತದೆ. ನವಮಂಗಳೂರು ಬಂದರು, ಬಜ್ಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ರಾಷ್ಟ್ರೀಯ ಹೆದ್ದಾರಿಗಳು, ಇತ್ಯಾದಿ ದೇಶದ ಇತರ ರಾಜ್ಯಗಳೊಂದಿಗೆ ಹಾಗೂ ಇತರ ರಾಷ್ಟ್ರಗಳೊಂದಿಗೆ ಸಂಪರ್ಕವನ್ನು ಸಾಧಿಸಲು ಇರುವಂತಹ ಸಂಪರ್ಕ ಸಾಧನಗಳು ದಕ್ಷಿಣಕ್ಕೆ ಚಾಚಿರುವ ಪ್ರದೇಶಗಳಲ್ಲಿ ಲಭ್ಯವಿರುವುದರಿಂದಾಗಿ ಈ ಪ್ರದೇಶಗಳಲ್ಲಿ ಕೈಗಾರಿಕೆಗಳು ಅಧಿಕ ಸಂಖ್ಯೆಯಲ್ಲಿ ಸ್ಥಾಪನೆಯಾಗುವುದಕ್ಕೆ ಪ್ರಮುಖ ಕಾರಣವಾಗಿರುತ್ತದೆ. ಇದರಿಂದಾಗಿಯೇ ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ಕೈಗಾರಿಕಾ ಸಂಕೀರ್ಣಗಳು ಸ್ಥಾಪಿಸಲ್ಪಡುತ್ತಿವೆ. ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬರುತ್ತಿರುವ ಮಂಗಳೂರು ವಿಶೇಷ ಆರ್ಥಿಕ ವಲಯದಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರಿಗೆ ರಾಷ್ಟ್ರೀಯ ಪುನರ್‌ವಸತಿ ನೀತಿ ಹಾಗೂ ಕರ್ನಾಟಕ ಸರಕಾರ ಹೊರಡಿಸಿದ ಆದೇಶಗಳಿಗೆ ಅನುಗುಣವಾಗಿ ನಗದು ಪರಿಹಾರ ಮತ್ತು ಪುನರ್‌ವಸತಿ ವ್ಯವಸ್ಥೆಗಳನ್ನು ಯಾವ ರೀತಿಯಲ್ಲಿ ಕಲ್ಪಿಸಲಾಗಿರುತ್ತದೆ ಎಂಬುದಾಗಿ ಪ್ರಸ್ತುತ ಅಧ್ಯಾಯವು ವಿವರಿಸಿರುತ್ತದೆ. ಸರಕಾರದ ಪುನರ್‌ವಸತಿ ನೀತಿಗಳು ಅತ್ಯುತ್ತಮವಾಗಿದ್ದು, ಸಂತ್ರಸ್ತರ ಮುಂದಿನ ಜೀವನವನ್ನು ಗಮನದಲ್ಲಿರಿಸಿ ಮಾಡಿದಂತಹ ನಿರ್ಣಯಗಳಾಗಿರುತ್ತವೆಯೆಂದು ಪುನರ್‌ವಸತಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಂತಹ ಅಧಿಕಾರಿಗಳು ತಿಳಿಸಿರುತ್ತಾರೆ. ಮುಂದಿನ ಅಧ್ಯಾಯಗಳು ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಗಳ ವಿವರಣೆ ಹಾಗೂ ವಿಶ್ಲೇಷಣೆಗಳನ್ನು ಒಳಗೊಂಡಿದ್ದು, ಪುನರ್‌ವಸತಿ ನೀತಿ ಮತ್ತು ಅದರ ಅನುಷ್ಠಾನವು ಸಂತ್ರಸ್ತರುಗಳಿಗೆ ಹೊಸ ನೆಲೆಗಳಲ್ಲಿ ಯಾವ ರೀತಿಯಲ್ಲಿ ಜೀವನವನ್ನು ಕಟ್ಟಿಕೊಡುವುದರಲ್ಲಿ ಸಹಕಾರಿಯಾಗಿರುತ್ತದೆ ಎಂಬುದನ್ನು ವಿವರಿಸುತ್ತದೆ. ಪುನರ್‌ವಸತಿ ನೀತಿಯ ಅನುಷ್ಠಾನ ಮತ್ತು ಅದರ ಯಶಸ್ಸು, ವೈಫಲ್ಯತೆಗಳ ಬಗ್ಗೆ ವಿವರವಾಗಿ ಚರ್ಚಿಸುತ್ತದೆ.

ಪರಾಮರ್ಶನ ಗ್ರಂಥಗಳು ಮತ್ತು ಕೊನೆ ಟಿಪ್ಪಣಿಗಳು:

[1] ಗವರ್ನ್‌ಮೆಂಟ್ ಆಫ್ ಕರ್ನಾಟಕ, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಕರ್ನಾಟಕ, 1999, ಬೆಂಗಳೂರು. ಡಿಪಾರ್ಟ್‌ಮೆಂಟ್ ಆಫ್ ಪ್ಲಾನಿಂಗ್ ಆ್ಯಂಡ್ ಸ್ಟ್ಯಾಟಿಸ್ಟಿಕ್ಸ್, 1999 ಮತ್ತು ಗವರ್ನ್‌ಮೆಂಟ್ ಆಫ್ ಕರ್ನಾಟಕ, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಕರ್ನಾಟಕ, 2005. ಫೈನಲ್ ರಿಪೋರ್ಟ್ ಆಫ್ ಹೈಪವರ್ ಕಮಿಟಿ ಫಾರ್ ರೀಡ್ರೆಸ್ಸಲ್ ಆಫ್ ರೀಜನಲ್ ಇಂಬ್ಯಾಲನ್ಸಸ್, ಬೆಂಗಳೂರು, 2002.

[2] ಪ್ರಾಕೃತಿಕವಾಗಿ ದಕ್ಷಿಣ ಕನ್ನಡ ಜಿಲ್ಲೆ ಹೊಂದಿರುವ ವೈಶಿಷ್ಟ್ಯಗಳನ್ನು ಗಮನಿಸಿ ಮೂರು ಭಾಗಗಳಾಗಿ ವಿಂಗಡಿಸಬಹುದು. ಕರಾವಳಿ, ಒಳನಾಡು, ಪಶ್ಚಿಮ ಘಟ್ಟ ಪ್ರದೇಶಗಳು. ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಎಟ್ ಎ ಗ್ಲ್ಯಾನ್ಸ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ದಕ್ಷಿಣ ಕನ್ನಡ, ಮಂಗಳೂರು, 2014.

[3] ಇಂಪೀರಿಯಲ್ ಗಝೆಟಿಯರ್ ಆಫ್ ಇಂಡಿಯಾ, ಸೌತ್ ಕೆನರಾ, 1908. ಪುಟ 357.

[4] ಸೌತ್ ಕೆನರಾ ಡಿಸ್ಟ್ರಿಕ್ಟ್ ಗಝೆಟಿಯರ್, ಕರ್ನಾಟಕ ಸರಕಾರ, 1973. ಪುಟ 212.

[5] ಎಸ್.ಎ.ಗಿಲಾನಿ (ಸಂ.), ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಗಝೆಟಿಯರ್, ಗವರ್ನ್‌ಮೆಂಟ್ ಆಫ್ ಕರ್ನಾಟಕ, ಕಾವೇರಿ ಭವನ, ಬೆಂಗಳೂರು. ಪುಟ 5.

[6] ಅದೇ. ಪುಟ 7.

[7] ಹಿಂದೆ ಕೆನರಾ ಪ್ರದೇಶವು ವಿಜಯನಗರ ವಂಶದ ಅರಸರ ಆಡಳಿತಕ್ಕೆ ಒಳಪಟ್ಟಿತ್ತು. 1763ರಲ್ಲಿ ಹೈದರಾಲಿಯು ಮೈಸೂರು ಪ್ರಾಂತ್ಯಕ್ಕೆ ಈ ಪ್ರದೇಶವನ್ನು ಸೇರಿಸಿದನು. ಆ ಬಳಿಕ ಆತನ ಮಗನಾದ ಟಿಪ್ಪು ಸುಲ್ತಾನನು ಈ ಪ್ರದೇಶಗಳ ಆಡಳಿತಗಾರನಾಗಿದ್ದು, 1799ರ ಮೈಸೂರು ಕದನದ ಬಳಿಕ ಇದು ಬ್ರಿಟೀಷ್ ಸಾಮ್ರಾಜ್ಯದ ಒಂದು ಅಂಗವಾಯಿತು.

[8] ಜಿ.ವಿ.ಜೋಷಿ ಮತ್ತು ಸುಧೀರ್‌ರಾಜ್‌ರವರು ತಮ್ಮ ಗ್ರಂಥವಾದ 'ಡೆವಲಪ್‌ಮೆಂಟ್ ಪಾಸಿಬಿಲಿಟೀಸ್ ಇನ್ ಕೋಸ್ಟಲ್ ಕರ್ನಾಟಕ'ದಲ್ಲಿ ಸರ್ ಥಾಮಸ್ ಮುನ್ರೋರವರು ಮದ್ರಾಸಿನ ಕಂದಾಯ ಇಲಾಖೆಗೆ ಜಿಲ್ಲೆಯ ಅಭಿವೃದ್ಧಿ ಸಾಧ್ಯತೆಗಳ ಕುರಿತಾಗಿ ಬರೆದ ಎರಡು ಪತ್ರಗಳ ಬಗ್ಗೆ ಉಲ್ಲೇಖಿಸಿರುತ್ತಾರೆ. ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಕೋಸ್ಟಲ್ ಕರ್ನಾಟಕ, ಜಸ್ಟಿಸ್ ಕೆ.ಎಸ್.ಹೆಗ್ಡೆ ಇನ್ಸ್ಟಿಟ್ಯೂಟ್ ಆಫ್ ಮೆನೇಜ್‌ಮೆಂಟ್, 2009. ಪುಟ 29–32.

[9] ಅದೇ. ಪುಟ 29–32.

[10] ಅದೇ. ಪುಟ 29–32.

[11] ಸ್ಟಾಟೋಕ್ ಜೆ. 'ಮದ್ರಾಸ್ ಡಿಸ್ಟ್ರಿಕ್ಟ್ ಮಾನ್ಯುವಲ್ ಫಾರ್ ಸೌತ್ ಕೆನರಾ', ಮದ್ರಾಸ್, 1894. ಪುಟ 68–73.

[12] ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ, ಗವರ್ನ್‌ಮೆಂಟ್ ಪ್ರೆಸ್. ಪುಟ 378.

[13] ಅದೇ. ಪುಟ 378

[14] ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ–ಅಂಶಗಳ ನೋಟ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ದಕ್ಷಿಣ ಕನ್ನಡ, ಮಂಗಳೂರು, ಪುಟ 200. ಜನಗಣತಿ 2011.

[15] ಅದೇ. ಪುಟ 11–23.

[16] ಅದೇ. ಪುಟ 11–23.

[17] ಅದೇ. ಪುಟ 11–23.

[18] ಎಸ್.ಎ.ಗಿಲಾನಿ (ಸಂ.), ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಗಝೆಟಿಯರ್, ಗವರ್ನ್‌ಮೆಂಟ್ ಆಫ್ ಕರ್ನಾಟಕ, ಕಾವೇರಿ ಭವನ, ಬೆಂಗಳೂರು. ಪುಟ 5.

[19] ಸೌತ್ ಕೆನರಾ ಡಿಸ್ಟ್ರಿಕ್ಟ್ ಗಝೆಟಿಯರ್, 2004. ಪುಟ 124–133.

[20] 2001 ಮತ್ತು 2011ರ ಜನಗಣತಿಯ ವರದಿ, ಗವರ್ನ್‌ಮೆಂಟ್ ಆಫ್ ಇಂಡಿಯಾ

[21] 1971ರಲ್ಲಿ ಯೋಜನಾ ಇಲಾಖೆಯು ಕರ್ನಾಟಕ ಸರಕಾರಕ್ಕೆ ಜಿಲ್ಲೆಗಳ ಅಭಿವೃದ್ಧಿಯ ವಿಶ್ಲೇಷಣೆಯನ್ನು ಮಾಡಿ ಸಲ್ಲಿಸಿರುವ ವರದಿ.

[22] ಗವರ್ನ್‌ಮೆಂಟ್ ಆಫ್ ಕರ್ನಾಟಕ, ಸ್ಟೇಟ್ ಡೊಮೆಸ್ಟಿಕ್ ಪ್ರೊಡಕ್ಟ್, ಕರ್ನಾಟಕ, ಬೆಂಗಳೂರು, ಡೈರೆಕ್ಟರೇಟ್ ಆಫ್ ಎಕನಾಮಿಕ್ಸ್ ಎಂಡ್ ಸ್ಟೆಟಿಸ್ಟಿಕ್ಸ್, 2004–2005. ಪುಟ 7.

[23] ಗವರ್ನ್‌ಮೆಂಟ್ ಆಫ್ ಕರ್ನಾಟಕ, ಕರ್ನಾಟಕ ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಬೆಂಗಳೂರು. ಪುಟ 423–437. ಪ್ಲ್ಯಾನಿಂಗ್ ಎಂಡ್ ಸ್ಟೆಟಿಸ್ಟಿಕ್ಸ್ ಡಿಪಾರ್ಟ್‌ಮೆಂಟ್, 2005, ಬೆಂಗಳೂರು.

[24] ಪ್ರಾದೇಶಿಕ ಅಸಮತೋಲನಕ್ಕೆ ಸಂಬಂಧಪಟ್ಟ ಉನ್ನತ ಅಧಿಕಾರದ ಸಮಿತಿಯ ವರದಿ, ಉಲ್ಲೇಖ ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ–ಅಂಶಗಳ ನೋಟ, 2013–14, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಕರ್ನಾಟಕ ಸರಕಾರ, ಮಂಗಳೂರು.

[25] ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಎಟ್ ಎ ಗ್ಲ್ಯಾನ್ಸ್, 2010–11, ಡಿಸ್ಟ್ರಿಕ್ಟ್ ಎಡ್ಮಿನಿಸ್ಟ್ರೇಶನ್, ಮಂಗಳೂರು.

[26] ಅದೇ.

[27] ಕೇಶವ ಉಚ್ಚಿಲ, (2000), 'ಶತಮಾನದ ಬೀಸುನೋಟ' ಇನ್ 'ಪೊಲಿ' ಮುಕುಂದ ಪ್ರಭು(ಸಂ.), ದಕ್ಷಿಣ ಕನ್ನಡ ಜಿಲ್ಲಾಡಳಿತ, ಮಂಗಳೂರು. ಪುಟ 79–87

[28] ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ–ಅಂಶಗಳ ನೋಟ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಮಂಗಳೂರು, ದಕ್ಷಿಣ ಕನ್ನಡ, 2013–14. ಪುಟ 94–98.

[29] ಅದೇ. ಪುಟ 68–73.

[30] ಅದೇ. ಪುಟ 68–73.

[31] ಹೆರಾಲ್ಡ್ ಸ್ಟುವರ್ಟ್, ಮೆಡ್ರಾಸ್ ಡಿಸ್ಟ್ರಿಕ್ಟ್ ಮಾನ್ಯುವಲ್. ಪುಟ 14–25, 128. ಚಂದ್ರ ಪೂಜಾರಿ ಎಂ.ರವರ 'ಕರಾವಳಿ ಕರ್ನಾಟಕದ ಕೋಮುವಾದ'ದಲ್ಲಿನ ಉಲ್ಲೇಖ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.

[32] ಅದೇ.

[33] ಗುರುರಾಜ್ ಭಟ್ (1975), 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್', ಪಬ್ಲಿಷ್ಡ್ ಬೈ ಗುರುರಾಜ್ ಭಟ್, ಮಣಿಪಾಲ್ ಪವರ್ ಪ್ರೆಸ್, ಮಣಿಪಾಲ್. ಪುಟ 224–228.

[34] ಅದೇ. ಪುಟ 224–228.

[35] ಕೇಶವ ಉಚ್ಚಿಲ, (2000), 'ಶತಮಾನದ ಬೀಸುನೋಟ' ಇನ್ 'ಪೊಲಿ' ಮುಕುಂದ ಪ್ರಭು(ಸಂ.), ದಕ್ಷಿಣ ಕನ್ನಡ ಜಿಲ್ಲಾಡಳಿತ, ಮಂಗಳೂರು. ಪುಟ 79–87.

[36] ಅದೇ. ಪುಟ 79–87.

[37] ಅದೇ. ಪುಟ 79–87.

[38] ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಮಂಗಳೂರಿನ ಕಛೇರಿಯಿಂದ ಪಡೆದ ಅಂಕಿ–ಅಂಶಗಳು.

[39] ಅದೇ.

[40] ಮಂಗಳೂರು ವಿಶೇಷ ಆರ್ಥಿಕ ವಲಯದ ಕಛೇರಿಯಿಂದ ಪಡೆದ ಅಂಕಿ–ಅಂಶಗಳು, ಜಿಲ್ಲಾಧಿಕಾರಿ ಕಛೇರಿ, ಮಂಗಳೂರು.

[41] ಅದೇ.

[42] ಅದೇ.

[43] ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ–ಅಂಶಗಳ ನೋಟ(2014). ಪುಟ 59–67.

[44] ಪೆರ್ಮುದೆ ಗ್ರಾಮ ಪಂಚಾಯತ್ ಕಛೇರಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸಂಖ್ಯಾ ಸಂಗ್ರಹಣಾಧಿಕಾರಿ ಕಛೇರಿಯಿಂದ ಪಡೆದ ಮಾಹಿತಿ.

[45] ಅದೇ.

[46] ಅದೇ.

[47] ಅದೇ.

[48] ಬಾಳ ಗ್ರಾಮ ಪಂಚಾಯತ್ ಕಛೇರಿ ಮತ್ತು ಅಂತರ್ಜಾಲದಲ್ಲಿ ನೀಡಲಾದ ಗ್ರಾಮದ ವಿವರಣೆಗಳಿಂದ ಆರಿಸಲಾಗಿರುವ ಮಾಹಿತಿಗಳು.

[49] ಬಾಳ ಗ್ರಾಮ ಪಂಚಾಯತ್‌ನಿಂದ ಪಡೆದ ಮಾಹಿತಿ.

[50] ಕೇಂದ್ರ ಸರಕಾರದ 2011ರ ಜನಗಣತಿಯ ಮಾಹಿತಿಯ ಆಧಾರ.

[51] ತೋಕೂರು ಗ್ರಾಮ ಪಂಚಾಯತ್‌ನಿಂದ ಪಡೆದ ವಿವರಗಳು.

[52] ಅದೇ.

[53] ಕೇಂದ್ರ ಸರಕಾರದ 2011ರ ಜನಗಣತಿಯ ಮಾಹಿತಿಯ ಆಧಾರ.

[54] ದೇಲಂತಬೆಟ್ಟು ಗ್ರಾಮ ಪಂಚಾಯತ್‌ನಿಂದ ಪಡೆದ ವಿವರಗಳು.

[55] ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ, 1966, ಭೂಸ್ವಾಧೀನ ಮತ್ತು ಪರಿಹಾರದ ಬಗೆಗೆ ವಿವರಿಸುತ್ತದೆ.

[56] ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ, ಮಂಗಳೂರು ವಿಶೇಷ ಆರ್ಥಿಕ ವಲಯ ಪ್ರಾಧಿಕಾರದ ಕಛೇರಿ ಹಾಗೂ ಭೂಸಂತ್ರಸ್ತರಿಂದ ಪಡೆದ ಮಾಹಿತಿಗಳನ್ನು ಆಧರಿಸಿ.

[57] ಮಂಗಳೂರು ವಿಶೇಷ ಆಥಿಕ ವಲಯ ಸ್ಥಾಪನೆಗೆ ಸಂಬಂಧಪಟ್ಟಂತೆ ಕರ್ನಾಟಕ ಸರಕಾರ ಹೊರಡಿಸಿದ ಆದೇಶ ಸಂಖ್ಯೆ ಕಂ.ಇ.309, ಆರ್.ಇ.ಎಚ್. 2006, ಬೆಂಗಳೂರು, ದಿನಾಂಕ 20–06–2007. ಪುಟ ಸಂಖ್ಯೆ02.

[58] ಅದೇ. ಪುಟ 02.

[59] ಅದೇ. ಪುಟ 03.

[60] ಅದೇ. ಪುಟ 03.

[61] ಅದೇ. ಪುಟ 03.

[62] ಅದೇ. ಪುಟ 03.

[63] ಅದೇ. ಪುಟ 03.

[64] ಅದೇ. ಪುಟ 03.

[65] ಅದೇ. ಪುಟ 03.

[66] ಅದೇ. ಪುಟ 11

[67] ಅದೇ. ಪುಟ 11.

[68] ಮಂಗಳೂರು ವಿಶೇಷ ಆರ್ಥಿಕ ವಲಯದ ಸಂತ್ರಸ್ತರ ಪುನರ್ವಸತಿಗೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯ ಸರಕಾರದ ಆದೇಶ ಸಂಖ್ಯೆ ಆರ್.ಡಿ.116, ಆರ್.ಇ.ಎಚ್. 2011, ಬೆಂಗಳೂರು, ತಾ. 02–12–2011.

[69] ಅದೇ.

[70] ಅದೇ.

[71] ಮಂಗಳೂರು ವಿಶೇಷ ಆಥಿಕ ವಲಯ ಸ್ಥಾಪನೆಗೆ ಸಂಬಂಧಪಟ್ಟಂತೆ ಕರ್ನಾಟಕ ಸರಕಾರ ಹೊರಡಿಸಿದ ಆದೇಶ ಸಂಖ್ಯೆ ಕಂ.ಇ.309, ಆರ್.ಇ.ಎಚ್. 2006, ಬೆಂಗಳೂರು, ದಿನಾಂಕ 20–06–2007. ಪುಟ ಸಂಖ್ಯೆ10.

ಅಧ್ಯಾಯ – 3

ಸ್ಥಳಾಂತರಗೊಂಡ ಸಂತ್ರಸ್ತರ ಕ್ಷೇತ್ರಕಾರ್ಯಾಧಾರಿತ ವಿಶ್ಲೇಷಣೆ, ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳು

ಅಧ್ಯಾಯ – 3

ಸ್ಥಳಾಂತರಗೊಂಡ ಸಂತ್ರಸ್ತರ ಕ್ಷೇತ್ರಕಾರ್ಯಾಧಾರಿತ ವಿಶ್ಲೇಷಣೆ, ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳು

1990ರ ದಶಕದಲ್ಲಿ ಜಾರಿಗೆ ಬಂದ ಖಾಸಗೀಕರಣ, ಜಾಗತೀಕರಣ ಮತ್ತು ಉದಾರೀಕರಣ ನೀತಿಗಳಿಂದಾಗಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಒತ್ತು ಕೊಟ್ಟು ಅಭಿವೃದ್ಧಿ ಪ್ರೇರಿತ ಯೋಜನೆಗಳ ಸ್ಥಾಪನೆಗಾಗಿ ಭಾರತದಾದ್ಯಂತ ಲಕ್ಷಾಂತರ ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಯೋಜನೆಯು ಸಂತ್ರಸ್ತರ ಬದುಕಿಗೆ ತುಂಬಲಾಗದಂತಹ ಹಾನಿಯನ್ನು ತಂದಿರುವುದನ್ನು ಕಾಣಬಹುದು. ಬಲವಂತದ ಭೂಸ್ವಾಧೀನ ಹಾಗೂ ಸ್ವಯಂಪ್ರೇರಿತವಲ್ಲದ ಸ್ಥಳಾಂತರ ಸಂತ್ರಸ್ತರ ಆರೋಗ್ಯ ಮತ್ತು ಜೀವನಶೈಲಿಯ ಮೇಲೆ ಪರಿಣಾಮವನ್ನು ಬೀರಿ ಪ್ರತಿಭಟನೆ ಹಾಗೂ ಚಳುವಳಿಗಳು ಆರಂಭವಾಗಿರುವುದನ್ನು ಗಮನಿಸಬಹುದು. ನರ್ಮದಾ ಸರೋವರ ಅಣೆಕಟ್ಟು ಸ್ಥಾಪನೆಗಾಗಿ ಭೂಸ್ವಾಧೀನದ ವಿರುದ್ಧ ಆರಂಭವಾಗಿದ್ದ ಪರಿಸರವಾದಿ ಮೇಧಾ ಪಾಟ್ಕರ್ ನಾಯಕತ್ವದಲ್ಲಿ ನಡೆದ ನರ್ಮದಾ ಬಚಾವೊ ಆಂದೋಲನವು[1] ಭಾರತದಲ್ಲಿ ಅಭಿವೃದ್ಧಿ ಪ್ರೇರಿತ ಭೂಸ್ವಾಧೀನ ಮತ್ತು ಸ್ಥಳಾಂತರ ಪ್ರಕ್ರಿಯೆಯ ವಿರುದ್ಧ ಹೋರಾಟಕ್ಕೆ ಮುನ್ನುಡಿಯನ್ನು ಬರೆಯಿತು. ಜಾಗತೀಕರಣ ಮತ್ತು ಉದಾರೀಕರಣ ನೀತಿಯಿಂದಾಗಿ ಎಲ್ಲಾ ರಾಷ್ಟ್ರಗಳಲ್ಲೂ ಬೃಹತ್ ಕೈಗಾರಿಕೆಗಳ ಸ್ಥಾಪನೆಯ ಪ್ರಕ್ರಿಯೆಯು ಕೋಟ್ಯಾಂತರ ಜನರ ಸ್ಥಳಾಂತರಕ್ಕೆ ಜಾಗತಿಕ ಮಟ್ಟದಲ್ಲಿ ಕಾರಣವಾಗಿರುತ್ತದೆ. ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಸ್ಥಳಾಂತರಗೊಂಡ ಸಂತ್ರಸ್ತರ ಜೀವನಶೈಲಿಯ ಬಗ್ಗೆ ಹೆಚ್ಚು ಅಧ್ಯಯನಗಳು ಇಲ್ಲಿಯವರೆಗೆ ಆಗದೇ ಇದ್ದು, ಬಲವಂತದ ಸ್ಥಳಾಂತರ ಸಂತ್ರಸ್ತರನ್ನು ಮತ್ತಷ್ಟು ಬಡವರನ್ನಾಗಿ ಮಾಡಿರುತ್ತದೆ.[2] (ವಸುದಾ ಧಗಮಾವರ್, 2003) ಎಂಬ ಅಭಿಪ್ರಾಯವಿದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಪ್ರತಿಭಟನೆಗಳು ಮತ್ತು ಹೋರಾಟಗಳು ನಡೆದಿದ್ದರೂ 1970ರ ದಶಕದ ನಂತರ ನವಮಂಗಳೂರು ಬಂದರಿನ ಉದ್ಘಾಟನೆಯೊಂದಿಗೆ ಬೃಹತ್ ಕೈಗಾರಿಕೆಗಳ ಸ್ಥಾಪನೆಗಳು ಆರಂಭವಾಯಿತು. ಮಂಗಳೂರು ರಸಗೊಬ್ಬರ ಕಾರ್ಖಾನೆ, ಎಂ.ಆರ್.ಪಿ.ಎಲ್., ಬಿ.ಎ.ಎಸ್.ಎಫ್., ಸುಜ್ಲಾನ್, ಉಡುಪಿ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರ, ಮಂಗಳೂರು ವಿಶೇಷ ಆರ್ಥಿಕ ವಲಯ, ಹೆದ್ದಾರಿಗಳ ವಿಸ್ತರಣೆ ಹಾಗೂ ಸಾಫ್ಟ್‌ವೇರ್ ಪಾರ್ಕ್‌ಗಳ ರಚನೆಗೋಸ್ಕರ ಈಗಾಗಲೇ ಇಪ್ಪತ್ತೈದು ಸಾವಿರ ಎಕ್ರೆಗಿಂತಲೂ ಹೆಚ್ಚು ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಇತರ ಪ್ರಾಧಿಕಾರಗಳು ಸ್ವಾಧೀನಪಡಿಸಿದ್ದು ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಸೇರಿದ ನಲವತ್ತು ಸಾವಿರಕ್ಕಿಂತ ಹೆಚ್ಚಿನ ಜನರು ಸಂತ್ರಸ್ತರಾಗಿರುತ್ತಾರೆ.[3] 2005ರ ನಂತರ ಭಾರತದಾದ್ಯಂತ ವಿಶೇಷ ಆರ್ಥಿಕ ವಲಯಗಳ ರಚನೆಗೋಸ್ಕರ ಭೂಸ್ವಾಧೀನ ಪ್ರಕ್ರಿಯೆಯು ವಿಧ್ಯುಕ್ತವಾಗಿ ಆರಂಭಗೊಂಡಿದ್ದು ಪ್ರಸ್ತುತ ದೇಶದಾದ್ಯಂತ 734

ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗೆ ಕೇಂದ್ರ ಸರಕಾರ ಅನುಮೋದನೆಯನ್ನು ನೀಡಿರುತ್ತದೆ. ಇವುಗಳಲ್ಲಿ ಕರ್ನಾಟಕದ 76 ವಿಶೇಷ ಆರ್ಥಿಕ ವಲಯಗಳು ಒಳಗೊಂಡಿದ್ದು 18 ವಲಯಗಳು ಈಗಾಗಲೇ ಕಾರ್ಯಾರಂಭವನ್ನು ಮಾಡಿರುತ್ತವೆ.[4] ಸರಕಾರದ ಹೊಸ ಆರ್ಥಿಕ ನೀತಿಯ ಅನ್ವಯ ದೇಶದಾದ್ಯಂತ ವಿಶೇಷ ಆರ್ಥಿಕ ವಲಯಗಳ ರಚನೆಯ ಯೋಜನೆಗಳಿಗೆ ಜನರು ತಮ್ಮ ಆಕ್ರೋಶವನ್ನು ತೀವ್ರವಾಗಿ ವ್ಯಕ್ತಪಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಗಳೂರು ಗ್ರಾಮಾಂತರ ತಾಲೂಕಿನ ಪ್ರದೇಶಗಳಲ್ಲಿ ಕರ್ನಾಟಕ ಸರಕಾರದ 2007ರ ಅಧಿಸೂಚನೆಗೆ ಅನುಗುಣವಾಗಿ ಜಾರಿಗೆ ಬರುತ್ತಿರುವ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯ ಸಂಬಂಧವಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಯೋಜನೆಗಾಗಿ ಮಂಗಳೂರು ತಾಲೂಕಿನ ಗ್ರಾಮಗಳಾದ ತೋಕೂರು, ಬಾಳ, ಪೆರ್ಮುದೆ, ಕಳವಾರು, ಕುತ್ತೆತ್ತೂರು, ತೆಂಕ ಎಕ್ಕಾರು, ಬಜ್ಪೆ ಮತ್ತು ಕುಳಾಯಿ ಪ್ರದೇಶಗಳಲ್ಲಿ ಈಗಾಗಲೇ ಒಟ್ಟು ಎರಡು ಸಾವಿರದ ಮುನ್ನೂರ ಎಪ್ಪತ್ತೊಂಬತ್ತು ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಲಾಗಿದ್ದು ಒಂದು ಸಾವಿರದ ಆರುನೂರ ಮೂವತ್ತೇಳು ಕುಟುಂಬಗಳು ತಮ್ಮ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುತ್ತಾರೆ.[5] ಯೋಜನೆಯ ಅನುಷ್ಠಾನ ಯಾವ ರೀತಿಯಲ್ಲಿ ಸಂತ್ರಸ್ತರ ಜೀವನಶೈಲಿ, ಉದ್ಯೋಗ, ಪರಿಸರ, ಆರೋಗ್ಯ, ಆರ್ಥಿಕತೆ ಮತ್ತು ಶಿಕ್ಷಣದ ಮೇಲೆ ಪ್ರಭಾವ ಬೀರಿರುತ್ತದೆ ಎಂಬುದನ್ನು ಅರಿತುಕೊಳ್ಳುವುದು ಹಾಗೂ ದಾಖಲಾತಿಯನ್ನು ಮಾಡುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಸ್ಥಳಾಂತರದ ನಂತರ ಯೋಜನೆಯ ಸಂತ್ರಸ್ತರ ಜೀವನಶೈಲಿಯಲ್ಲಿ ಆದಂತಹ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಸಂಬಂಧಿ ಗುಣಾತ್ಮಕ ಪರಿವರ್ತನೆಗಳನ್ನು, ಭೂಸ್ವಾಧೀನ ಹಾಗೂ ಪುನರ್‌ವಸತಿಯನ್ನು ಸಂತ್ರಸ್ತರು ಯಾವ ರೀತಿಯಲ್ಲಿ ಪರಿಭಾವಿಸಿಕೊಂಡಿದ್ದಾರೆ ಎಂಬುವುದಕ್ಕೆ ಅಧ್ಯಯನವು ಹೆಚ್ಚಿನ ಗಮನವನ್ನು ನೀಡಿರುತ್ತದೆ.

ಸಮಾಜಶಾಸ್ತ್ರದ ಪ್ರಸಿದ್ಧ ವಿದ್ವಾಂಸರಾದ ಹಾಗೂ ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಪ್ರೇರಿತ ಸ್ಥಳಾಂತರದ ಬಗ್ಗೆ ಸಾಕಷ್ಟು ಅಧ್ಯಯನಗಳನ್ನು ಕೈಗೊಂಡಿರುವ ಮೈಕಲ್ ಸೆರ್ನ್ನಾರವರು ಸ್ಥಳಾಂತರ ಪ್ರಕ್ರಿಯೆಯು ಸಂತ್ರಸ್ತರನ್ನು ಮತ್ತಷ್ಟು ಬಲಹೀನರನ್ನಾಗಿಸುವ ಮಾದರಿಯ[6] ಬಗ್ಗೆ ಪ್ರತಿಪಾದಿಸಿದ ಸೈದ್ಧಾಂತಿಕ ತಳಹದಿಯ ಮೇಲೆ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಬಲವಂತದಿಂದ ತಮ್ಮ ಭೂಮಿಯಿಂದ ಸ್ಥಳಾಂತರಗೊಳಿಸಲ್ಪಟ್ಟ ಜನರು ಪರಸ್ಪರ ಸಂಬಂಧವಿರುವ ಎಂಟು ಸಂಭವನೀಯ ಹಾಗೂ ಅವರ ಬದುಕಿಗೆ ಮಾರಕವಾಗುವ ಸಂಕಷ್ಟಗಳಿಗೆ ಈಡಾಗುವ ಸಾಧ್ಯತೆ ಇರುತ್ತದೆ[7] ಎಂಬ ಸೆರ್ನ್ನಾರವರ ಕಂಡುಕೊಳ್ಳುವಿಕೆಗೆ ಅನುಗುಣವಾಗಿ ಅಧ್ಯಯನವನ್ನು ನಡೆಸಲಾಗಿದೆ. ಭೂಮಿಯನ್ನು ಕಳೆದುಕೊಂಡ ಇನ್ನೂರೈವತ್ತು ಸಂತ್ರಸ್ತ ಕುಟುಂಬಗಳಿಂದ ಸರಳ ಯಾದೃಚ್ಛಿಕ ಮಾದರಿಯನ್ನು ಉಪಯೋಗಿಸಿ ಸಂರಚಿತ ಪ್ರಶ್ನಾವಳಿ, ಗುಂಪು ಚರ್ಚೆ, ಅವಲೋಕನ ಮತ್ತು ಸಂದರ್ಶನದ ಮೂಲಕ ವೈಜ್ಞಾನಿಕ ವಿಧಾನಗಳನ್ನನುಸರಿಸಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಕಲೆ ಹಾಕಿದ ಮಾಹಿತಿಯನ್ನು

ಗಣಕಯಂತ್ರದ ಸಹಾಯದಿಂದ ವಿಶ್ಲೇಷಣೆಯನ್ನು ಮಾಡಲಾಗಿದ್ದು, ಕ್ಷೇತ್ರಕಾರ್ಯದ ಮೂಲಕ ದೊರೆತ ಅಂಕಿ ಅಂಶಗಳನ್ನು ಯಥಾವತ್ತಾಗಿ ಕೋಷ್ಟಕ ಮತ್ತು ರೇಖಾಚಿತ್ರದ ಸಹಿತ ವಿವರಣೆಯೊಂದಿಗೆ ಈ ಕೆಳಗೆ ವಿವರಿಸಲಾಗಿದೆ.

ಸಂದರ್ಶನದ ಮೂಲಕ ಕುಟುಂಬದ ಯಜಮಾನರಿಂದ ಮಾಹಿತಿಯನ್ನು ಪಡೆಯಲು ಗರಿಷ್ಠ ಮಟ್ಟದಲ್ಲಿ ಪ್ರಯತ್ನಿಸಲಾಗಿದ್ದು, ವಿಶೇಷ ಸಂದರ್ಭದಲ್ಲಿ ಕುಟುಂಬದ ಯಜಮಾನನ ಅನುಪಸ್ಥಿತಿಯಲ್ಲಿ ಮನೆಯ ಹಿರಿಯ ಸದಸ್ಯರಿಂದ ಮಾಹಿತಿಗಳನ್ನು ಕಲೆ ಹಾಕಲಾಗಿರುತ್ತದೆ. ಯಾದೃಚ್ಛಿಕ ವಿಧಾನದ ಮೂಲಕ ಸಂದರ್ಶನದಿಂದ ಮಾಹಿತಿಯನ್ನು ಸಂಗ್ರಹಿಸಿದರೂ ಸ್ಥಳಾಂತರದಿಂದ ಸಂತ್ರಸ್ತರಾದ ಎಲ್ಲಾ ಪ್ರದೇಶಗಳನ್ನು, ಧರ್ಮ, ಜಾತಿ, ವರ್ಗಗಳಿಗೆ ಸೇರಿದ ಜನರನ್ನು ಭೇಟಿ ಮಾಡಿ ನಿಖರವಾದ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಲಾಗಿದೆ. ಅಧ್ಯಯನಕ್ಕೆ ಒಳಪಡಿಸಿದ ಪ್ರದೇಶ ಮತ್ತು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ ಪ್ರದೇಶಗಳಲ್ಲಿ ಆರಿಸಿಕೊಂಡ ನಮೂನೆಗಳ ವಿವರಗಳು ಈ ಕೆಳಗಿನಂತಿದೆ.

ಕೋಷ್ಟಕ–3.1: ಅಧ್ಯಯನದ ಸ್ಥಳ ಮತ್ತು ಆರಿಸಲ್ಪಟ್ಟ ಮಾದರಿ ನಮೂನೆ

ಕ್ರ.ಸಂ	ಅಧ್ಯಯನ ಪ್ರದೇಶದ ಹೆಸರು	ಸಂದರ್ಶಿತ ಸಂತ್ರಸ್ತರು		ಒಟ್ಟು ಮನೆಗಳ ಸಂಖ್ಯೆ
		ಸಂಖ್ಯೆ	ಶೇಕಡಾ	
1	ಕಳವಾರು ಎಸ್.ಇ.ಝಡ್ ಕಾಲನಿ	15	6.00	60
2	62ನೇ ತೋಕೂರು ಎಸ್.ಇ.ಝಡ್ ಕಾಲನಿ, ಜೋಕಟ್ಟೆ	20	8.00	80
3	ಕಳವಾರು ಎಸ್.ಇ.ಝಡ್ ಕಾಲನಿ, ಬಾಳಗ್ರಾಮ	25	10.00	100
4	ಕೆಂಜಾರು ಎಸ್.ಇ.ಝಡ್ ಕಾಲನಿ, ಬಜ್ಪೆ	55	22.00	220
5	ಎಸ್.ಇ.ಝಡ್ ಕಾಲನಿ, ಪೆರ್ಮುದೆ	18	7.20	72
6	ಸಿದ್ಧಾರ್ಥನಗರ ಎಸ್.ಇ.ಝಡ್ ಕಾಲನಿ, ಮಳವೂರು	31	12.40	124
7	ಎಸ್.ಇ.ಝಡ್ ಕಾಲನಿ, ಕುಳಾಯಿ	11	4.40	44
8	ಕೋಡಿಕೆರೆ ಎಸ್.ಇ.ಝಡ್ ಕಾಲನಿ, ಮಂಗಳೂರು	75	30.00	300
ಒಟ್ಟು		**250**	**100**	**1000**

ಕೋಷ್ಟಕ 3.2 ಮಾಹಿತಿದಾರರ ಲಿಂಗ, ವಯಸ್ಸು, ಧರ್ಮ, ಜಾತಿ, ಶಿಕ್ಷಣ ಮತ್ತು ಉದ್ಯೋಗಾಧಾರಿತ ವಿವರಗಳು

ಕೋಷ್ಟಕ 3.2.1 ಮಾಹಿತಿದಾರರ ಲಿಂಗಾಧಾರಿತ ವಿವರ

ಕ್ರ. ಸಂ.	ಲಿಂಗ	ಸಂಖ್ಯೆ	ಶೇಕಡಾ
1.	ಗಂಡು	163	65
2.	ಹೆಣ್ಣು	87	35
	ಒಟ್ಟು	**250**	**100**

ಕೋಷ್ಟಕ 3.2.2 ಮಾಹಿತಿದಾರರ ವಯಸ್ಸಾಧಾರಿತ ವಿವರ

ಕ್ರಸಂ	ವಯಸ್ಸು	ಸಂಖ್ಯೆ	ಶೇಕಡಾ
1	18–25	33	13
2	26–35	45	18
3	36–45	63	25
4	46–55	51	20
5	56–65	35	14
6	66–75	22	9.5
7	76–85	1	0.5
	ಒಟ್ಟು	**250**	**100**

ಕೋಷ್ಟಕ 3.2.3 ಮಾಹಿತಿದಾರರ ಧರ್ಮಾಧಾರಿತ ವಿವರ

ಕ್ರಸಂ	ಧರ್ಮ	ಸಂಖ್ಯೆ	ಶೇಕಡಾ
1	ಹಿಂದು	232	95.5
2	ಮುಸ್ಲಿಂ	14	3.5
3	ಕ್ರೈಸ್ತ	4	1
4	ಇತರ	0	0
	ಒಟ್ಟು	**250**	**100**

ಕೋಷ್ಟಕ 3.2.4 ಮಾಹಿತಿದಾರರ ಜಾತಿ ಆಧಾರಿತ ವಿವರ

ಕ್ರಸಂ	ಜಾತಿ	ಸಂಖ್ಯೆ	ಶೇಕಡಾ
1	ಬ್ರಾಹ್ಮಣ	10	4
2	ಬಂಟ	32	12.8
3	ಬಿಲ್ಲವ	106	42.4
4	ಗಾಣಿಗ	2	0.8
5	ಪ. ಜಾತಿ	43	17.2
6	ಪ.ಪಂಗಡ	3	1.2
7	ಇತರೆ (ಇತರೆ: ಮೂಲ್ಯ, ದೇವಾಡಿಗ, ಕೊಠಾರಿ, ಶೆಟ್ಟಿಗಾರ್, ವಿಶ್ವಕರ್ಮ, ಮ್ಯೊಲಿ, ಲಿಂಗಾಯಿತ, ಮಡಿವಾಳ, ಭಂಡಾರಿ, ಕೊರಗ, ಗೌಡ, ಸೆಟ್ಟಿಗಾರ್, ಒಕ್ಕಲಿಗ, ಮುಸ್ಲಿಂ, ಕ್ರಿಶ್ಚಿಯನ್)	54	21.6
	ಒಟ್ಟು	**250**	**100**

ಕೋಷ್ಟಕ 3.2.5 ಮಾಹಿತಿದಾರರ ಶಿಕ್ಷಣ ಆಧಾರಿತ ವಿವರ

ಕ್ರಸಂ	ಶಿಕ್ಷಣ	ಸಂಖ್ಯೆ	ಶೇಕಡಾ
1	ಅನಕ್ಷರಸ್ಥರು	43	18
2	1–4ರವರೆಗೆ	70	28
3	5–8ರವರೆಗೆ	73	29
4	8–10ವರೆಗೆ	31	12
5	ಪಿ ಯು ಸಿ	13	5
6	ಪದವಿ	14	6
7	ವೃತ್ತಿಪರ	6	2
	ಒಟ್ಟು	**250**	**100**

ಕೋಷ್ಟಕ 3.2.6 ಮಾಹಿತಿದಾರರ ಉದ್ಯೋಗಾಧಾರಿತ ವಿವರ

ಕ್ರಸಂ	ಮುಖ್ಯ ಕಸುಬು	ಸಂಖ್ಯೆ	ಶೇಕಡಾ
1	ಕೃಷಿ	13	5
2	ಕೂಲಿ ಮತ್ತು ಮೀನುಗಾರಿಕೆ	84	34
3	ಖಾಸಗಿ	30	12
4	ಸರಕಾರಿ	4	2
5	ಸ್ವ–ಉದ್ಯೋಗ	1	0
6	ವ್ಯಾಪಾರ	6	2
7	ಸೇವಾ ವಲಯ	3	1
8	ಇತರೆ (ಗೃಹಿಣಿ, ನಿರುದ್ಯೋಗ, ನಿವೃತ್ತ)	109	44
	ಒಟ್ಟು	**250**	**100**

3.2.1 ಮಾಹಿತಿದಾರರ ಲಿಂಗಾಧಾರಿತ ವಿವರ

ಅಧ್ಯಯನಕ್ಕಾಗಿ ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವ ಇನ್ನೂರೈವತ್ತು ಕುಟುಂಬದ ಯಜಮಾನರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು, 163 (65%) ಕುಟುಂಬಗಳಲ್ಲಿ ಗಂಡಸು ಕುಟುಂಬದ ಮುಖ್ಯಸ್ಥನಾಗಿದ್ದು, 87 (35%) ಕುಟುಂಬಗಳಿಗೆ ಹೆಣ್ಣು ಯಜಮಾನಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯು ಪಿತೃಪ್ರಧಾನವಾಗಿದ್ದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಪುರುಷರೇ ಕುಟುಂಬದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುವ ವ್ಯವಸ್ಥೆ ಮುಂದುವರಿದಿದೆ ಎಂಬುದಾಗಿ ಸಂಗ್ರಹಿಸಿದ ಮಾಹಿತಿಗಳು ರುಜುವಾತುಪಡಿಸಿವೆ.

3.2.2 ಮಾಹಿತಿದಾರರ ವಯಸ್ಸಾಧಾರಿತ ವಿವರ

ಸಂದರ್ಶಿತರಲ್ಲಿ ಶೇಕಡಾ 63%ರಷ್ಟು ಅಂದರೆ 159 ಮಾಹಿತಿದಾರರು 26 ರಿಂದ 55ರ ನಡುವಿನ ವಯೋಮಾನದವರಾಗಿದ್ದು, ಸಂದರ್ಶಿಸಲ್ಪಟ್ಟ ಹೆಚ್ಚಿನ ಕುಟುಂಬಗಳ ಮುಖ್ಯಸ್ಥರು ಮಧ್ಯವಯಸ್ಕರಾಗಿರುವುದು ಕಂಡುಬರುತ್ತದೆ. ಮೂವತ್ತಮೂರು (25%) ಕುಟುಂಬಗಳ ಮುಖ್ಯಸ್ಥರು ಹದಿನೆಂಟರಿಂದ ಇಪ್ಪತ್ತೈದರ ವಯೋಮಿತಿಯ ನಡುವಿನವರಾಗಿರುತ್ತಾರೆ. ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಪರಿಗಣಿಸಿದಾಗ, ಚಿಕ್ಕ ವಯೋಮಾನದವರು ಹಿರಿಯರನ್ನು ಅವಲಂಬಿಸಿರುವುದು, ಪ್ರಬುದ್ಧರಾದ ನಂತರ ಸ್ವತಂತ್ರವಾಗಿ ತಮ್ಮ ಕುಟುಂಬವನ್ನು ನಡೆಸಿಕೊಂಡು ಹೋಗುವುದನ್ನು ತೋರಿಸುತ್ತದೆ. ಮೂವತ್ತೈದು ಕುಟುಂಬಗಳ ಯಜಮಾನರುಗಳಾಗಿ 56 ರಿಂದ 65 ವರ್ಷಗಳ ನಡುವಿನ ಹಿರಿಯರು ಕಾರ್ಯನಿರ್ವಹಿಸುವುದು ಗಮನಿಸಲಾಗಿರುತ್ತದೆ. ಇಪ್ಪತ್ತೆರಡು (9%) ಕುಟುಂಬಗಳ ಜವಾಬ್ದಾರಿಯನ್ನು ನಿರ್ವಹಿಸುವವರು ಅರವತ್ತಾರರಿಂದ ಎಪ್ಪತ್ತೈದರ ನಡುವಿನ ವಯೋಮಾನದವರಾಗಿದ್ದು, ಎಪ್ಪತ್ತಾರರಿಂದ ಎಂಬತ್ತೈದರ ನಡುವಿನ ಒಬ್ಬರು ಕುಟುಂಬದ ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ಕಂಡುಬಂದಿರುತ್ತದೆ. ಈ ವಿವರಗಳು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮಧ್ಯವಯಸ್ಕರೇ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುವ ಪ್ರಕ್ರಿಯೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂದರ್ಶಿಸಲ್ಪಟ್ಟ ಎಲ್ಲಾ ಸಮುದಾಯಗಳಲಿಯ್ಯೂ ಅಸ್ತಿತ್ವದಲ್ಲಿರುವುದು ಕಂಡುಬಂದಿರುತ್ತದೆ.

3.2.3 ಮಾಹಿತಿದಾರರ ಧರ್ಮಾಧಾರಿತ ವಿವರ

ಧರ್ಮ ಮತ್ತು ಜಾತಿಯು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಧಾನ ಪಾತ್ರ ವಹಿಸುವ ಎರಡು ಪ್ರಮುಖ ನಿರ್ಧಾರಕ ಅಂಶಗಳಾಗಿವೆ. ಈ ಎರಡು ಅಂಶಗಳು ಜನರ ಚಟುವಟಿಕೆ ಮತ್ತು ಜೀವನ ನಿರ್ವಹಣೆಗೆ ನಿರ್ವಹಿಸುವ ವೃತ್ತಿಯ ಮೇಲೆ ಯಾವುದೇ ಪರಿಣಾಮ ಬೀರದೇ ಇದ್ದರೂ, ಧರ್ಮ ಮತ್ತು ಜಾತಿಯ ಅಂಶಗಳು ಮಾಹಿತಿದಾರರ ಗ್ರಹಿಕೆಯ ಮೇಲೆ ಯಾವುದಾದರೂ ಪ್ರಭಾವ ಮತ್ತು ಪರಿಣಾಮಗಳನ್ನು

ಬೀರಿರುತ್ತದೆಯೇ ಎಂಬುದನ್ನು ಅರಿಯುವುದಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. 3.2.3 ಕೋಷ್ಟಕದಲ್ಲಿನ ಮಾಹಿತಿಯ ಪ್ರಕಾರ ಸಂದರ್ಶಿತರಲ್ಲಿ ಬಹುಸಂಖ್ಯೆಯ 232 (92%) ಸಂತ್ರಸ್ತರು ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದು, ಮುಸ್ಲಿಂ ಸಮುದಾಯಕ್ಕೆ ಸೇರಿದ ಹದಿನಾಲ್ಕು (6%) ಮತ್ತು ಕ್ರಿಶ್ಚಿಯನ್ ಪಂಗಡಕ್ಕೆ ಸೇರಿದ ನಾಲ್ಕು (2%) ಸಂತ್ರಸ್ತರು ಒಳಗೊಂಡಿದ್ದಾರೆ. ಅಭಿವೃದ್ಧಿಪ್ರೇರಿತ ಭೂಸ್ವಾಧೀನ ಮತ್ತು ಸ್ಥಳಾಂತರ ಪ್ರಕ್ರಿಯೆಗಳಿಗೆ ಒಳಗಾಗಿ ಸಂತ್ರಸ್ತರಾದವರಲ್ಲಿ ಕರಾವಳಿ ಜಿಲ್ಲೆಯ ಮೂರು ಪ್ರಮುಖ ಧರ್ಮಗಳನ್ನು ಅನುಸರಿಸುವ ಜನರು ಒಳಗೊಂಡಿದ್ದಾರೆ ಎಂದು ಕ್ಷೇತ್ರಕಾರ್ಯದಿಂದ ಪಡೆದ ಅಂಕಿಅಂಶಗಳು ವಿವರಿಸುತ್ತವೆ.

3.2.4 ಮಾಹಿತಿದಾರರ ಜಾತಿ ಆಧಾರಿತ ವಿವರ

ಸಂತ್ರಸ್ತರಿಂದ ಮಾಹಿತಿಯನ್ನು ಹೆಚ್ಚು ಸ್ಪಷ್ಟವಾಗಿ ಹಾಗೂ ವಸ್ತುನಿಷ್ಠ ರೀತಿಯಲ್ಲಿ ಪಡೆಯುವುದಕ್ಕೋಸ್ಕರ ಪುನರ್‌ವಸತಿ ಪ್ರದೇಶದಲ್ಲಿರುವ ಎಲ್ಲಾ ಪ್ರಮುಖ ಜಾತಿಗಳಿಗೆ ಸೇರಿದ ಜನರಿಂದ ಸಮಪ್ರಮಾಣದಲ್ಲಿ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಲಾಗಿರುತ್ತದೆ. ಭಾರತೀಯ ಜಾತಿ ಶ್ರೇಣಿಯಲ್ಲಿ ಬರುವ ಹಾಗೂ ಸಂದರ್ಶನಕ್ಕೆ ಒಳಪಡಿಸಿದ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಸ್ತರಗಳಿಗೆ ಸೇರಿದ ಜನರನ್ನು ಸಂದರ್ಶನಕ್ಕೋಸ್ಕರ ಆಯ್ಕೆ ಮಾಡಲಾಗಿತ್ತು. ಭೂಸ್ವಾಧೀನ ಪಡಿಸಿದ ಪ್ರದೇಶದಲ್ಲಿ ಬ್ರಾಹ್ಮಣ ಮತ್ತು ಲಿಂಗಾಯಿತ ಜಾತಿಗೆ ಸೇರಿದ ಜನರು ಕಡಿಮೆ ಪ್ರಮಾಣದಲ್ಲಿದ್ದು, ಹಿಂದುಳಿದ ಜಾತಿ, ಪಂಗಡ ಹಾಗೂ ಪರಿಶಿಷ್ಟ ಜಾತಿ, ಪಂಗಡಕ್ಕೆ ಸೇರಿದವರ ಭೂಮಿಯೇ ಹೆಚ್ಚು ಸ್ವಾಧೀನ ಪಡಿಸಲ್ಪಟ್ಟದ್ದು ಕಂಡುಬರುತ್ತದೆ. ಮಾಹಿತಿ ಸಂಗ್ರಹಿಸಿದ ಒಟ್ಟು ಇನ್ನೂರೈವತ್ತು ಸಂತ್ರಸ್ತ ಕುಟುಂಬಗಳಲ್ಲಿ ಬ್ರಾಹ್ಮಣರು 10(4%), ಗಾಣಿಗ 2(0.8%), ಪ.ಜಾತಿ 43(17.2%), ಪ.ಪಂಗಡ 3 (1.2%), ಇತರೆ (ಮೂಲ್ಯ, ದೇವಾಡಿಗ, ಕೊಟ್ಟಾರಿ, ಶೆಟ್ಟಿಗಾರ್, ಮ್ಯೊಲಿ, ವಿಶ್ವಕರ್ಮ, ಮಡಿವಾಳ, ಭಂಡಾರಿ, ಕೊರಗರು, ಒಕ್ಕಲಿಗರು, ಲಿಂಗಾಯಿತರು, ಮುಸ್ಲಿಂ, ಕ್ರಿಶ್ಚಿಯನ್ನರು) 54 (21.6%) ಆಗಿರುತ್ತಾರೆ. ಸ್ಥಳಾಂತರಿಸಲ್ಪಟ್ಟ ಪ್ರದೇಶದಲ್ಲಿ ಅಲ್ಪ ಪ್ರಮಾಣದಲ್ಲಿರುವ ಜಾತಿಗೆ ಸೇರಿದ ಜನರ ಮಾದರಿಯನ್ನು ಇತರರು ಎಂಬ ವಿಭಾಗದಲ್ಲಿ ತೆಗೆಯಲಾಗಿರುತ್ತದೆ. ಹೆಚ್ಚಾಗಿ ಹಿಂದುಳಿದ ಜಾತಿ, ಪಂಗಡಗಳಿಗೆ ಸೇರಿದ ಜನರ ಭೂಮಿಯನ್ನೇ ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾವರದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಅಭಿವೃದ್ಧಿ ಪ್ರೇರಿತ ಸ್ಥಳಾಂತರ ಪ್ರಕ್ರಿಯೆಗಳಿಗೆ ಬಲಿಪಶುಗಳಾಗಿ ಅತ್ಯಂತ ತೊಂದರೆಗೀಡಾಗುವವರಲ್ಲಿ ಸಮಾಜದ ಹಿಂದುಳಿದ ಜಾತಿ, ಪಂಗಡಗಳು, ಬುಡಕಟ್ಟು ಜನಾಂಗಗಳಿಗೆ ಸೇರಿದ ಜನರೇ ಹೆಚ್ಚು[8] (ಪರಶುರಾಮನ್, 1995) ಎಂಬುದಾಗಿ ಪ್ರಮುಖ ಅಧ್ಯಯನಗಳು ಬೆಟ್ಟು ಮಾಡಿ ತೋರಿಸುತ್ತವೆ. ಪ್ರಸ್ತುತ ಅಧ್ಯಯನದಲ್ಲಿಯೂ ಸ್ಥಳಾಂತರ ಪ್ರಕ್ರಿಯೆಗಳಿಗೆ ಒಳಗಾಗಿ ಭೂಮಿಯನ್ನು ಕಳೆದುಕೊಂಡಿರುವ ಹೆಚ್ಚಿನ ಸಂಖ್ಯೆಯ ಸಂತ್ರಸ್ತರು

ಸಮಾಜದಲ್ಲಿ ಶತಮಾನಗಳಿಂದ ಶೋಷಣೆಗೊಳಪಟ್ಟು ತುಳಿತಕ್ಕೊಳಗಾದ ಕೆಳಜಾತಿ ಮತ್ತು ವರ್ಗವೆಂದು ಕರೆಯಿಸಿಕೊಂಡವರೇ ಅಧಿಕವಾಗಿರುವುದನ್ನು ಗಮನಿಸಲಾಗಿರುತ್ತದೆ.

3.2.5 ಮಾಹಿತಿದಾರರ ಶಿಕ್ಷಣ ಆಧಾರಿತ ವಿವರ

ಶಿಕ್ಷಣ ಅಭಿವೃದ್ಧಿಯ ಪ್ರಮುಖ ಮಾಪನಗಳಲ್ಲಿ ಒಂದು ಎಂಬುದಾಗಿ ಪರಿಗಣಿಸಲ್ಪಟ್ಟಿದೆ. ಬೃಹತ್ ಯೋಜನೆಗಳ ಪ್ರಾಯೋಜಕರು ಸಂತ್ರಸ್ತರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಮುಖ ಆದ್ಯತೆಯನ್ನು ನೀಡಲಾಗುತ್ತದೆಯೆಂದು ಸಾಮಾನ್ಯವಾಗಿ ಘೋಷಿಸುತ್ತಾರೆ. ಸಂದರ್ಶಿತರಲ್ಲಿ ನಲ್ವತ್ತಮೂರು (17%) ಮಾಹಿತಿದಾರರು ಸಂಪೂರ್ಣ ಅನಕ್ಷರಸ್ಥರಾಗಿದ್ದು, ನೂರನಲವತ್ತಮೂರು (57%) ಮಾಹಿತಿದಾರರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಪಡೆದವರಾಗಿರುತ್ತಾರೆ. ನಲ್ವತ್ತನಾಲ್ಕು (18%) ಮಾಹಿತಿದಾರರು ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣವನ್ನು ಹೊಂದಿದವರಾಗಿರುತ್ತಾರೆ. ಪದವಿ ಮತ್ತು ವೃತ್ತಿಪರ ಶಿಕ್ಷಣವನ್ನು ಪಡೆದ ಸಂತ್ರಸ್ತರ ಸಂಖ್ಯೆ 20 (8%) ಮಾತ್ರ ಆಗಿರುತ್ತದೆ. ಸಂಪೂರ್ಣವಾಗಿ ಅನಕ್ಷರಸ್ಥರಾದವರಿಗೆ ತಮ್ಮ ಹೆಸರುಗಳನ್ನು ಬರೆಯುವುದೇ ಕಷ್ಟಕರವಾಗಿರುವುದನ್ನು ಸಂದರ್ಶನದ ಸಂದರ್ಭದಲ್ಲಿ ಕಂಡುಬಂದಿದ್ದು, ಭೂಸ್ವಾಧೀನ ಹಾಗೂ ಪುನರ್‌ವಸತಿಗೆ ಸಂಬಂಧಪಟ್ಟ ಜಟಿಲ ಕಾನೂನು, ನೀತಿಗಳನ್ನು ಅನಕ್ಷರಸ್ಥ ಸಂತ್ರಸ್ತರು ಯಾವ ರೀತಿಯಲ್ಲಿ ಅರ್ಥೈಸಿಕೊಂಡಿರುತ್ತಾರೆ ಎಂಬುವುದೇ ಸೋಜಿಗವೆನಿಸುತ್ತದೆ. ಯೋಜನೆಯ ಜಾರಿಯಿಂದಾಗಿ ಭೂಮಿಯನ್ನು ಕಳೆದುಕೊಂಡ ಹೆಚ್ಚಿನ ಕುಟುಂಬದ ಮುಖ್ಯಸ್ಥರು ಕಡಿಮೆ ವಿದ್ಯಾಭ್ಯಾಸವನ್ನು ಹೊಂದಿದವರು ಹಾಗೂ ಅನಕ್ಷರಸ್ಥರು ಎಂಬುದಾಗಿ ಪಡೆದ ಮಾಹಿತಿಯಿಂದ ನಿಖರವಾಗಿ ಹೇಳಬಹುದು.

3.2.6 ಮಾಹಿತಿದಾರರ ಉದ್ಯೋಗಾಧಾರಿತ ವಿವರ

ಮಾಹಿತಿದಾರರ ವೃತ್ತಿಯ ಬಗೆಗಿನ ವಿವರಗಳನ್ನು 3.2.6ರ ಕೋಷ್ಟಕದಲ್ಲಿ ವಿವರಿಸಲಾಗಿದೆ. ಸಂಗ್ರಹಿಸಿದ ವಿವರಗಳು ಹೆಚ್ಚಿನ ಸಂಖ್ಯೆಯ ಎಪ್ಪತ್ತೊಂದು (29%) ಸಂತ್ರಸ್ತರು ಕೃಷಿ ಕಾರ್ಮಿಕರಾಗಿ ಮತ್ತು ಕೂಲಿ ವೃತ್ತಿಯನ್ನು ತಮ್ಮ ಜೀವನಾಧಾರಕ್ಕಾಗಿ ನಂಬಿಕೊಂಡಿದ್ದವರು ಎಂದು ಸ್ಪಷ್ಟಪಡಿಸುತ್ತದೆ. ಕೃಷಿ ಚಟುವಟಿಕೆಗಳಲ್ಲಿ ಹದಿಮೂರು (5%) ಸಂತ್ರಸ್ತರು ತಮ್ಮನ್ನು ತೊಡಗಿಸಿಕೊಂಡಿದ್ದರೆ, ಹದಿಮೂರು (5%) ಮಾಹಿತಿದಾರರು ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಗೃಹಿಣಿಯರು, ನಿರುದ್ಯೋಗಿಗಳು ಮತ್ತು ನಿವೃತ್ತರಾದಂತಹ 109 (44%) ಮಾಹಿತಿದಾರರು ಕೂಡಾ ಸಮೀಕ್ಷೆಯಲ್ಲಿ ಭಾಗಿಯಾಗಿದ್ದು, ಖಾಸಗಿ, ಸರಕಾರಿ ಮತ್ತು ಸ್ವಉದ್ಯೋಗವನ್ನು ಮಾಡುತ್ತಿರುವವರು ನಲ್ವತ್ತನಾಲ್ಕು (17%) ಸಂದರ್ಶಿತರಾಗಿರುತ್ತಾರೆ. ಸಂಗ್ರಹಿಸಿದ ಮಾಹಿತಿಯ ಪ್ರಕಾರ ಹೆಚ್ಚಿನ ಸಂಖ್ಯೆಯ ಸಂತ್ರಸ್ತರು ಕೃಷಿಯೇತರ ಚಟುವಟಿಕೆ, ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಮಿಕರಾಗಿ ದುಡಿಯುವ ಸಮಾಜದ ಶ್ರಮಿಕ ಜನವರ್ಗವಾಗಿರುವುದನ್ನು ಗಮನಿಸಬಹುದು.

ಕೋಷ್ಟಕ-3.3: ಮಾಹಿತಿದಾರರ ವೈಯಕ್ತಿಕ ಮಾಸಿಕ ವರಮಾನ

ಕ್ರ. ಸಂ.	ವೈಯಕ್ತಿಕ ಮಾಸಿಕ ವರಮಾನ	ಸಂಖ್ಯೆ	ಶೇಕಡಾ
1	5000–10,000	114	45
2	10,000–15,000	12	5
3	15,000–20,000	2	1
4	20,000–25,000	1	0.5
5	25,000–30,000	2	1
6	30,000–50,000	3	1.5
7	50,000ಕ್ಕಿಂತ ಹೆಚ್ಚು	2	1
8	ಇತರೆ (5000ಕ್ಕಿಂತ ಕಡಿಮೆ)	114	45
ಒಟ್ಟು		**250**	**100**

ಸಂತ್ರಸ್ತರ ಮಾಸಿಕ ವರಮಾನದ (ಪ್ರಾಥಮಿಕ ಮೂಲಗಳಿಂದ) ವಿವರಗಳನ್ನು 3.3ರ ಕೋಷ್ಟಕದಲ್ಲಿ ವಿವರಿಸಲಾಗಿರುತ್ತದೆ. ಕೋಷ್ಟಕದಲ್ಲಿರುವಂತೆ ಬಹುಸಂಖ್ಯೆಯ 114 (45%) ಸಂತ್ರಸ್ತರ ತಲಾ ಮಾಸಿಕ ವರಮಾನ ರೂಪಾಯಿ ಐದುಸಾವಿರದಿಂದ ಹತ್ತುಸಾವಿರದ ನಡುವೆ ಇದೆ ಎಂಬ ಅಂಶ ತಿಳಿದು ಬರುತ್ತದೆ. ಹತ್ತು ಸಾವಿರದಿಂದ ಹದಿನೈದುಸಾವಿರ ರೂಪಾಯಿಗಳನ್ನು 12 (5%) ಮಾಹಿತಿದಾರರು ಪಡೆಯುತ್ತಿದ್ದು, ಹದಿನೈದರಿಂದ ಐವತ್ತು ಸಾವಿರದವರೆಗಿನ ವರಮಾನವನ್ನು ಹೊಂದಿರುವವರ ಸಂಖ್ಯೆ ಕೇವಲ 10 (5%) ಎಂಬ ಅಂಶವನ್ನು ಬಹಿರಂಗಪಡಿಸುತ್ತದೆ. ರೂಪಾಯಿ ಐದು ಸಾವಿರದ ಒಳಗೆ ಮಾಸಿಕ ವರಮಾನವನ್ನು ಹೊಂದಿದವರ ಸಂಖ್ಯೆ 114 (45%)ರಷ್ಟಿದ್ದು ಇದು ಎಲ್ಲಾ ವರ್ಗಗಳಿಗಿಂತ ಹೆಚ್ಚಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ಹೆಚ್ಚು ಸಂಕಷ್ಟಕ್ಕೊಳಗಾದವರು ಕನಿಷ್ಟ ವರಮಾನವನ್ನು ಹೊಂದಿ ಒಂದು ಉತ್ತಮ ಜೀವನವನ್ನು ನಡೆಸುವುದರಿಂದ ವಂಚಿತರಾಗಿರುವ ಸಮಾಜದ ಶೋಷಿತ ವರ್ಗವಾಗಿರುವ ಶ್ರಮಜೀವಿಗಳು ಮತ್ತು ಬುಡಕಟ್ಟು ಜನಾಂಗಕ್ಕೆ ಸೇರಿದವರು[9] ಎಂಬುದಾಗಿ ಇತರ ಅಧ್ಯಯನಗಳಲ್ಲಿ ಕಂಡುಕೊಂಡಂತಹ ಫಲಿತಗಳನ್ನು ಪ್ರಸ್ತುತ ಅಧ್ಯಯನದಲ್ಲಿಯೂ ಗಮನಿಸಬಹುದು.

ಸಂತ್ರಸ್ತರ ವರಮಾನವನ್ನು ಪರಿಗಣನೆಗೆ ತೆಗೆದುಕೊಂಡಾಗ ಬಹುಸಂಖ್ಯೆಯ 90% ಮಾಹಿತಿದಾರರು ಮಾಸಿಕ ಹತ್ತುಸಾವಿರ ರೂಪಾಯಿಗಿಂತ ಕಡಿಮೆ ವರಮಾನವನ್ನು ಹೊಂದಿರುವುದು ಕಂಡು ಬರುತ್ತದೆ. ತಮ್ಮ ಭೂಮಿ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ನಂತರ ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರ ವರಮಾನವು ಪೂರ್ವದ ಸ್ಥಿತಿಗಿಂತ ಕಡಿಮೆಯಾಗಿರುವುದನ್ನು ಗಮನಿಸಲಾಗಿದೆ. ಕೃಷಿಕರು ಕಾರ್ಮಿಕರಾಗಿ ಬದಲಾಗಿರುವುದನ್ನು ಕಂಡುಕೊಂಡ ಇತರ ಅಧ್ಯಯನಗಳನ್ನು ನಡೆಸಿದ ಫೆರ್ನಾಂಡೀಸ್ (2006), ಮನೀಷ್‌ಕುಮಾರ್ ವರ್ಮ (2004), ಪರಶುರಾಮನ್ (1995) ರವರುಗಳಂತೆ ಪ್ರಸ್ತುತ ಅಧ್ಯಯನದಲ್ಲಿಯೂ

ಸಂತ್ರಸ್ತರ ಮಾಸಿಕ ವರಮಾನ ಮತ್ತು ಜೀವನಶೈಲಿಯಲ್ಲಿ ಸ್ಥಳಾಂತರದಿಂದ ಮಹತ್ತರ ಏರುಪೇರುಗಳಾಗಿರುವುದನ್ನು ಗಮನಿಸಲಾಗಿದೆ. ಸಂತ್ರಸ್ತರ ವರಮಾನದಲ್ಲಿ 50%ದಷ್ಟು ಇಳಿಕೆಯಾಗಿರುವುದು, ಉದ್ಯೋಗವನ್ನು ಕಳೆದುಕೊಂಡಿರುವುದು ಮತ್ತು ಬಡತನ ರೇಖೆಗಿಂತ ಕೆಳಗೆ ಜಾರಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿರುತ್ತದೆ.

ಕೋಷ್ಟಕ–3.4: ಮಾಹಿತಿದಾರರ ಕುಟುಂಬದ ಸದಸ್ಯರ ಸಂಖ್ಯೆ

ಕ್ರಸಂ	ವೈಯಕ್ತಿಕ ಲಿಂಗ	ಸಂಖ್ಯೆ	ಶೇಕಡಾ
1	ಗಂಡು	571	50.1
2	ಹೆಣ್ಣು	568	49.9
ಒಟ್ಟು		**1139**	**100**

ಸಂದರ್ಶಿತ ಕುಟುಂಬಗಳಲ್ಲಿ ಕೋಷ್ಟಕ ಸಂಖ್ಯೆ 3.4ರ ಮಾಹಿತಿಗನುಗುಣವಾಗಿ 571 (50.15%) ಗಂಡಸರಿದ್ದು, ಹೆಂಗಸರ ಸಂಖ್ಯೆ 568 (49.9%) ಆಗಿರುತ್ತದೆ. ಈ ಕಂಡುಕೊಳ್ಳುವಿಕೆಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಗಸರ ಸಂಖ್ಯೆಗಿಂತ ಗಂಡಸರ ಅನುಪಾತ ಹೆಚ್ಚಾಗಿರುವುದನ್ನು ತೋರಿಸುತ್ತದೆ.

ಕೋಷ್ಟಕ–3.5: ಮಾಹಿತಿದಾರರ ಕುಟುಂಬದ ರಚನೆ

ಕ್ರಸಂ	ಕುಟುಂಬ ರಚನೆ	ಸಂಖ್ಯೆ	ಶೇಕಡಾ
1	ವಿಭಕ್ತ	222	89
2	ಅವಿಭಕ್ತ	28	11
ಒಟ್ಟು		**250**	**100**

ಮಾಹಿತಿದಾರರ ಕೌಟುಂಬಿಕ ವಿವರಗಳನ್ನು 3.5ರ ಕೋಷ್ಟಕದಲ್ಲಿ ವಿವರಿಸಲಾಗಿದೆ. ಸಂದರ್ಶಿತ 250 ಕುಟುಂಬಗಳಲ್ಲಿ 222 (89%) ವಿಭಕ್ತ ಕುಟುಂಬಗಳಾಗಿದ್ದರೆ, 28 (11%) ಅವಿಭಕ್ತ ಕುಟುಂಬಗಳಾಗಿರುತ್ತದೆ. ಹೆಚ್ಚಿನ ಕುಟುಂಬಗಳು ಭೂಸ್ವಾಧೀನಕ್ಕಿಂತ ಮೊದಲು ಅವಿಭಕ್ತ ಕುಟುಂಬಗಳಾಗಿದ್ದು ಪರಿಹಾರದ ಮೊತ್ತದಲ್ಲಿನ ಹಂಚಿಕೆಯ ವಿವಾದ, ಉದ್ಯೋಗಕ್ಕಾಗಿ ಊರಿನಿಂದ ಬೇರೆ ಪ್ರದೇಶಕ್ಕೆ ಹೋಗುವ ಅನಿವಾರ್ಯತೆ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನಗರಗಳಿಗೆ ವಲಸೆ ಹೋಗುವ ಪ್ರಕ್ರಿಯೆಯಿಂದಾಗಿ ಕೌಟುಂಬಿಕ ವಿಘಟನೆಗಳಿಗೆ ಕಾರಣವಾಯಿತು ಎಂಬುದಾಗಿ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿರುತ್ತದೆ.

ಕೋಷ್ಟಕ–3.6: ಸ್ಥಳಾಂತರದ ಪೂರ್ವದಲ್ಲಿ ಮತ್ತು ನಂತರ ಮನೆಯಲ್ಲಿರುವ ಸೌಕರ್ಯಗಳು: ಮಾಹಿತಿದಾರರ ವಸತಿ ಮತ್ತು ಇತರ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದ ಮಾಹಿತಿ

ಕ್ರ ಸಂ	ಮೂಲಭೂತ ಸೌಲಭ್ಯಗಳು	ಸ್ಥಳಾಂತರಕ್ಕೆ ಮೊದಲು				ಸ್ಥಳಾಂತರದ ನಂತರ			
		ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.	ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.
1	ಸ್ವಂತ ಮನೆ	242	96.8	8	3.2	250	100	0	0
2	ಮಣ್ಣಿನ ಮನೆ	154	61.6	96	38.4	62	24.8	188	75.2
3	ಕಾಂಕ್ರೀಟ್ ಮನೆ	46	18.4	204	81.6	152	60.8	98	39.2
4	ಹೆಂಚು ಮತ್ತು ಇತರೆ	48	19.2	202	80.8	46	18.4	206	82.4
5	ಶೌಚಾಲಯ ವ್ಯವಸ್ಥೆ	184	73.6	66	26.4	242	96.8	8	3.2
6	ಬಾವಿ	140	56	110	44	18	7.2	232	92.8
7	ಕೊಳವೆ ಬಾವಿ	12	4.8	238	95.2	48	19.2	202	80.8
8	ನಳ್ಳಿ ನೀರು	82	32.8	186	74.4	233	93.2	17	6.8
9	ವಿದ್ಯುತ್	203	81.2	47	18.8	241	96.4	9	3.6
10	ಬಡತನ ರೇಖೆಗೆ ಒಳಪಟ್ಟವರು	185	74	65	26	154	61.6	96	38.4
11	ಅಡುಗೆ ಅನಿಲ	87	34.8	163	65.2	151	60.4	99	39.6
12	ದೂರವಾಣಿ	132	52.8	118	47.2	203	81.2	47	18.8
13	ವಾಷಿಂಗ್‌ಮೆಷಿನ್	45	18	206	82.4	50	20	200	80
14	ಗ್ರೈಂಡರ್	75	30	175	70	110	44	140	56
15	ಇನ್ವರ್ಟರ್	8	3.2	242	96.8	10	4	240	96
16	ಕಂಪ್ಯೂಟರ್	10	4	240	96	15	6	235	94
17	ದ್ವಿಚಕ್ರ ವಾಹನ	26	10.4	224	89.6	60	24	190	76
18	ಕಾರು	2	0.8	248	99.2	14	5.6	236	94.4

ವಾಸಿಸುವ ಮನೆ ಹಾಗೂ ಅಲ್ಲಿರುವ ಸೌಕರ್ಯಗಳು ಯಜಮಾನನ ಮತ್ತು ಕುಟುಂಬದ ಸದಸ್ಯರುಗಳ ಸಂಪತ್ತು, ಪ್ರತಿಷ್ಠೆಯನ್ನು ಸಾಮಾನ್ಯವಾಗಿ ತಿಳಿಸುತ್ತದೆ. ಮಾಹಿತಿದಾರರ ಆರ್ಥಿಕ ಅಂತಸ್ತು ಮತ್ತು ಸ್ಥಿತಿಗತಿಗಳನ್ನು ಅರಿತುಕೊಳ್ಳುವುದಕ್ಕಾಗಿ ಸಂದರ್ಶಿತ ಎಲ್ಲಾ ಸಂತ್ರಸ್ತ ಕುಟುಂಬಗಳಿಗೆ ಅವರುಗಳ ಮನೆಯಲ್ಲಿರುವ ಸೌಕರ್ಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಬಹು ಆಯ್ಕೆಯ ಪ್ರಶ್ನೆಗಳನ್ನು ಕೇಳಲಾಗಿತ್ತು.

ಸ್ಥಳಾಂತರಕ್ಕಿಂತ ಮೊದಲಿನ ತಮ್ಮ ಪೂರ್ವನೆಲೆಯಲ್ಲಿ ಇನ್ನೂರಮೂರು (81.2%) ಮಾಹಿತಿದಾರರು ವಿದ್ಯುತ್ ಸಂಪರ್ಕವನ್ನು ಹೊಂದಿದ್ದರೆ ಸ್ಥಳಾಂತರದ ನಂತರ ಪುನರ್‌ವಸತಿ ಹಾಗೂ ಇತರ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಿರುವ ಇನ್ನೂರನಲವತ್ತೊಂದು (96.4%) ಸಂತ್ರಸ್ತರು ವಿದ್ಯುಚ್ಛಕ್ತಿಯನ್ನು ಹೊಂದಲು ಶಕ್ತರಾಗಿರುತ್ತಾರೆ. ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಎಂಬತ್ತೆರಡು (32.8%) ಮಾಹಿತಿದಾರರು ಸ್ಥಳೀಯ ಸಂಸ್ಥೆಗಳು ಒದಗಿಸಿದ ನಳ್ಳಿ ನೀರಿನ ಸಂಪರ್ಕವನ್ನು ಹೊಂದಿದ್ದರೆ ಸ್ಥಳಾಂತರದ ನಂತರ ಇದರ ಸಂಖ್ಯೆ ಇನ್ನೂರ ಮೂವತ್ತಮೂರಕ್ಕೆ (93.2%) ಏರಿರುತ್ತದೆ. ಅಡುಗೆ ಅನಿಲ ಸಂಪರ್ಕವನ್ನು ಪೂರ್ವದಲ್ಲಿ ಎಂಬತ್ತೇಳು (34.8%) ಮನೆಗಳಲ್ಲಿ ಹೊಂದಿದ್ದರೆ ಸ್ಥಳಾಂತರದ ನಂತರ ಇದರ ಸಂಖ್ಯೆ ನೂರೈವತ್ತೊಂದಕ್ಕೆ (60.4%) ಏರಿಕೆಯಾಗಿರುತ್ತದೆ. ಹಿಂದೆ ನೂರೆಂಬತ್ತನಾಲ್ಕು (79.4%) ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆಗಳಿದ್ದರೆ ನಂತರದಲ್ಲಿ ಇನ್ನೂರನಲವತ್ತೆರಡು (96.8%) ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿರುವುದು ಕಂಡು ಬರುತ್ತದೆ.

ಸ್ಥಿರ ದೂರವಾಣಿ ಸಂಪರ್ಕವನ್ನು ಪೂರ್ವದಲ್ಲಿ ನೂರಮೂವತ್ತೆರಡು (52.8%) ಮಾಹಿತಿದಾರರು ಹೊಂದಿದ್ದರೆ ನಂತರದಲ್ಲಿ ಇನ್ನೂರಮೂರಕ್ಕೆ (81.2%) ಹೆಚ್ಚಳವಾಗಿರುತ್ತದೆ. ಗ್ರೈಂಡರ್‌ಗಳನ್ನು ಪೂರ್ವದಲ್ಲಿ ಎಪ್ಪತ್ತೈದು (30%) ಮನೆಗಳಲ್ಲಿ ಹೊಂದಿದ್ದರೆ ಪುನರ್‌ವಸತಿಯ ನಂತರ ನೂರಹತ್ತಕ್ಕೆ (44%) ಏರಿಕೆಯಾಗಿರುತ್ತದೆ. ಇಪ್ಪತ್ತಾರು (10.4%) ಸಂತ್ರಸ್ತರುಗಳು ಸ್ಥಳಾಂತರಕ್ಕಿಂತ ಪೂರ್ವದಲ್ಲಿ ದ್ವಿಚಕ್ರ ವಾಹನವನ್ನು ಹೊಂದಿದ್ದರೆ ಪರಿಹಾರದ ಮೊತ್ತವನ್ನು ಪಡೆದ ನಂತರ ಅವುಗಳನ್ನು ಹೊಂದಿದವರ ಸಂಖ್ಯೆ ಅರವತ್ತಕ್ಕೆ (24%) ಏರಿರುತ್ತದೆ. ಪೂರ್ವದಲ್ಲಿ ಸಂತ್ರಸ್ತರ ಪೈಕಿ ನೂರ ಐವತ್ತನಾಲ್ಕು ಕುಟುಂಬಗಳು ವಾಸಕ್ಕಾಗಿ ಮಣ್ಣಿನಲ್ಲಿ ನಿರ್ಮಾಣಗೊಂಡ ಮನೆಗಳನ್ನು ಆಶ್ರಯಿಸಿದರೆ ಸ್ಥಳಾಂತರದ ನಂತರ ಮನೆಗಳ ಸ್ವರೂಪದಲ್ಲಿ ಅಮೂಲಾಗ್ರ ಬದಲಾವಣೆಗಳಾಗಿರುತ್ತದೆ.

ಸ್ಥಳಾಂತರದ ನಂತರ ಪುನರ್‌ವಸತಿ ಕಾಲನಿಗಳಲ್ಲಿ ಬದುಕು ಕಟ್ಟುತ್ತಿರುವ ಸಂತ್ರಸ್ತರಲ್ಲಿ ಹೆಚ್ಚಿನವರು ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಆರ್.ಸಿ.ಸಿ. ಮೇಲ್ಹಾವಣಿಯ ಮನೆಗಳನ್ನು ನಿರ್ಮಿಸಿದ್ದು ಪೂರ್ವದಲ್ಲಿ 18.4% ಸಂತ್ರಸ್ತರು ಕಾಂಕ್ರೀಟಿನಿಂದ ರಚಿಸಿದ ತಾರಸಿಯ ಮನೆಗಳಲ್ಲಿ ವಾಸಿಸುತ್ತಿದ್ದರೆ ಇದರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿ 60.8%ಕ್ಕೆ ಏರಿರುವುದು ಕಂಡು ಬರುತ್ತದೆ. ಸ್ಥಳಾಂತರದ ನಂತರ ಅರವತ್ತೆರಡು (24.8%) ಕುಟುಂಬಗಳು ಮಣ್ಣಿನ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಜನರು ಸಾಮಾನ್ಯವಾಗಿ ದೈನಂದಿನ ಬಳಕೆಯ ನೀರಿಗಾಗಿ ತಮ್ಮ ಮನೆಯ ಆವರಣದಲ್ಲಿರುವ ಬಾವಿಯನ್ನು ಆಶ್ರಯಿಸಿರುತ್ತಾರೆ. ಸ್ಥಳಾಂತರಕ್ಕಿಂತ ಮೊದಲು ನೂರನಲವತ್ತು (56%) ಮಾಹಿತಿದಾರರು ನೀರಿಗಾಗಿ ಬಾವಿಯನ್ನು ಆಶ್ರಯಿಸಿದ್ದು ಸ್ಥಳಾಂತರದ ನಂತರ ಬಾವಿಯನ್ನು ಆಶ್ರಯಿಸಿದವರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಕಡಿತವಾಗಿರುತ್ತದೆ. ಪ್ರಸ್ತುತ ಪುನರ್‌ವಸತಿ ಕಾಲನಿಗಳಲ್ಲಿ ಹದಿನೆಂಟು (7.2%) ಮಾಹಿತಿದಾರರು ನೀರಿಗಾಗಿ ಬಾವಿಯನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಸಂತ್ರಸ್ತರು ತಮಗೆ ದೊರೆತ ಪರಿಹಾರದ ನಗದು ಮೊತ್ತವನ್ನು ಮನೆಗಳ ನಿರ್ಮಾಣ ಮತ್ತು ತಮ್ಮ ಮನೆಗಳಲ್ಲಿ ಐಷಾರಾಮದ ವಸ್ತುಗಳನ್ನು ಖರೀದಿಸಲು ಖರ್ಚು ಮಾಡಿದ್ದಾರೆ ಎಂಬುವುದನ್ನು ಕಾಣಬಹುದು. ಪಿ. ಸಾಯಿನಾಥ್‌ರವರ ಕಂಡುಕೊಳ್ಳುವಿಕೆಯಂತೆ ಬೃಹತ್ ಯೋಜನೆಗಳ ಸಂತ್ರಸ್ತರು ತಮ್ಮ ಭೂಮಿಗೆ ಪರ್ಯಾಯವಾಗಿ ಪರಿಹಾರದ ರೂಪದಲ್ಲಿ ನಗದು ಹಣವನ್ನು ಪಡೆದುಕೊಂಡಾಗ ಅದನ್ನು ಅವರುಗಳು ಐಷಾರಾಮದ ಜೀವನವನ್ನು ನಡೆಸುವುದಕ್ಕೆ ವ್ಯಯಿಸುತ್ತಾರೆ ಮತ್ತು ಪರಿಹಾರದ ಹಣ ಯಾವುದೇ ಗುಣಾತ್ಮಕ ಅಭಿವೃದ್ಧಿ ಚಟುವಟಿಕೆಗಳಿಗೆ ಖರ್ಚು ಮಾಡುವುದಿಲ್ಲ. ಇದರಿಂದಾಗಿ ಸಂತ್ರಸ್ತರ ಹೆಂಡತಿ ಮಕ್ಕಳಿಗೆ ಬದುಕು ದುಸ್ತರವಾಗುತ್ತದೆ. ಭೂಮಿ ಇದ್ದಾಗ ಅದರಿಂದ ಕೃಷಿ ಚಟುವಟಿಕೆಗಳನ್ನು ನಡೆಸಲು ಆಗುತ್ತದೆ. ಆದರೆ ಭೂಮಿಯೇ ಇಲ್ಲವಾದಾಗ ಸಂತ್ರಸ್ತರ ಕುಟುಂಬದ ಸದಸ್ಯರ ಬದುಕು ದುರಂತದಲ್ಲಿ ಮುಕ್ತಾಯವಾಗುತ್ತದೆ[10] ಎಂಬುವುದು ಮಂಗಳೂರು

ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಮಿಯನ್ನು ಕಳೆದುಕೊಂಡು ನಿರ್ವಸಿತರಾಗಿ ಪುನರ್‌ವಸತಿ ಪ್ರದೇಶದಲ್ಲಿ ವಾಸಿಸುತ್ತಿರುವ ಕುಟುಂಬಗಳಲ್ಲಿಯೂ ಕಂಡುಬಂದಿರುವುದನ್ನು ಗಮನಿಸಬಹುದು.

ಸ್ಥಳಾಂತರ ಮತ್ತು ಆರೋಗ್ಯ

ಕೋಷ್ಟಕ-3.7: ಮಾಹಿತಿದಾರರ ಆರೋಗ್ಯ ಸೌಲಭ್ಯಕ್ಕೆ ಸಂಬಂಧಿಸಿದ ಮಾಹಿತಿ

ಕ್ರ ಸಂ	ಮೂಲಭೂತ ಸೌಲಭ್ಯಗಳು	ಸ್ಥಳಾಂತರದ ಮೊದಲು				ಸ್ಥಳಾಂತರದ ನಂತರ			
		ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.	ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.
1	ವೈದ್ಯರ ಲಭ್ಯತೆ	143	57.2	107	42.8	192	76.8	58	23.2
2	ಸಾಂಪ್ರದಾಯಿಕ ಮದ್ದು	60	24	190	76	14	5.6	236	94.4
3	ಅಲೋಪತಿ	228	91.2	22	8.8	190	76	60	24
4	ಆಯುರ್ವೇದಿಕ್	45	18	205	82	43	17.2	207	82.8
ಕೋಷ್ಟಕ 3.7.1 ಸಾಮಾನ್ಯ ರೋಗದ ವಿವರ									
ಕ್ರ ಸಂ	ಮೂಲಭೂತ ಸೌಲಭ್ಯಗಳು	ಸ್ಥಳಾಂತರದ ಮೊದಲು				ಸ್ಥಳಾಂತರದ ನಂತರ			
		ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.	ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.
1	ಜ್ವರ	243	97.2	7	2.8	237	94.8	13	5.2
2	ನೆಗಡಿ	234	93.6	16	6.4	226	90.4	24	9.6
3	ಕೆಮ್ಮು	78	31.2	172	68.8	100	40	150	60
4	ಹೊಟ್ಟೆ ನೋವು	6	2.4	244	97.6	12	4.8	238	95.2
5	ಅತಿಸಾರ	1	0.4	249	99.6	2	0.8	248	99.2
6	ಇತರೆ (ಅಲರ್ಜಿ, ಅಸ್ತಮಾ)	2	0.8	248	99.2	13	5.2	237	94.8
ಕೋಷ್ಟಕ 3.7.2 ಮಾಸಿಕ ಆರೋಗ್ಯಕ್ಕೆ ವ್ಯಯಿಸುವ ಖರ್ಚು									
1	300 ರೂ	50	20	200	80	13	5.2	237	94.8
2	300ಕ್ಕಿಂತ ಹೆಚ್ಚು	104	41.6	146	58.4	174	69.6	76	30.4
ಕೋಷ್ಟಕ 3.7.3 ವೈದ್ಯರ ಲಭ್ಯತೆ									
1	ಮನೆ ಸಮೀಪ	108	43.2	142	56.8	77	30.8	173	69.2
2	ತುಂಬಾ ದೂರ	164	65.6	86	34.4	168	67.2	82	32.8
3	ಸಕಾಲದಲ್ಲಿ ಚಿಕಿತ್ಸೆ ಲಭ್ಯ	200	80	50	20	240	96	10	4
ಕೋಷ್ಟಕ 3.7.4 ಲಭ್ಯವಿದ್ದ ಆರೋಗ್ಯ ಕೇಂದ್ರಗಳು									
1	ಪ್ರಾಥಮಿಕ ಆರೋಗ್ಯ ಕೇಂದ್ರ	86	34.4	164	65.6	112	44.8	138	55.2
2	ಖಾಸಗಿ ವೈದರು	125	50	125	50	156	62.4	94	37.6
3	ಸಾಂಪ್ರದಾಯಿಕ ಪದ್ಧತಿ	10	4	240	96	10	4	240	96

ಕೋಷ್ಟಕ–3.8: ಸ್ಥಳಾಂತರದ ನಂತರ ಆರೋಗ್ಯ ಸಮಸ್ಯೆ ತೀವ್ರಗೊಂಡಿದೆಯೇ?

ಕ್ರಸಂ	ಉತ್ತರ	ಸಂಖ್ಯೆ	ಶೇಕಡಾ
1	ಹೌದು	210	84
2	ಇಲ್ಲ	40	16
ಒಟ್ಟು		**250**	**100**
ಹೌದಾದರೆ, ಕಾರಣಗಳು?			
1	ಮಾನಸಿಕ ಒತ್ತಡ+ಆಸ್ಪತ್ರೆಗಳ ಸೌಲಭ್ಯದ ಕೊರತೆ+ ಹಣಕಾಸಿನ ಕೊರತೆ+ಕೌಟುಂಬಿಕ ನಿರ್ಲಕ್ಷತೆ+ಉತ್ತಮ ಆಹಾರದ ಅಲಭ್ಯತೆ+ಪರಿಸರ ಬದಲಾವಣೆ	72	29
2	ಹೊಸ ಪ್ರದೇಶಕ್ಕೆ ಹೊಂದಿಕೊಳ್ಳಲು ಸಾಧ್ಯವಾಗದೇ ಇರುವುದು+ಸಾಮಾಜಿಕ ಅಭದ್ರತೆ	70	28
3	ಸಾಮಾಜಿಕ ಅಭದ್ರತೆ+ಉದ್ಯೋಗ ನಷ್ಟ	68	27
ಒಟ್ಟು		**210**	**84**

ಕೋಷ್ಟಕ ಸಂಖ್ಯೆ 3.8ರ ಪ್ರಕಾರ ಸ್ಥಳಾಂತರದ ನಂತರ ಆರೋಗ್ಯ ಸಮಸ್ಯೆ ತೀವ್ರಗೊಂಡಿರುತ್ತದೆಯೇ ಎಂಬ ಪ್ರಶ್ನೆಗೆ ಇನ್ನೂರಹತ್ತು (84%) ಸಂತ್ರಸ್ತರು ಹೌದು ಎಂದು ಉತ್ತರಿಸಿದರೆ ನಲವತ್ತು (16%) ಸಂತ್ರಸ್ತರು ಇಲ್ಲ ಎಂದು ಉತ್ತರಿಸುತ್ತಾರೆ. ಆಸ್ಪತ್ರೆಗಳ ಸೌಲಭ್ಯದ ಕೊರತೆ, ಸ್ಥಳಾಂತರದಿಂದಾದ ಮಾನಸಿಕ ಒತ್ತಡಗಳು, ಹಣಕಾಸಿನ ಕೊರತೆ, ಕೌಟುಂಬಿಕ ನಿರ್ಲಕ್ಷತೆ, ಪೌಷ್ಟಿಕಾಂಶಯುಕ್ತ ಆಹಾರದ ಅಲಭ್ಯತೆ, ಪರಿಸರದ ಬದಲಾವಣೆ, ಸಾಮಾಜಿಕ ಅಭದ್ರತೆ, ಉದ್ಯೋಗದ ನಷ್ಟದಿಂದಾಗಿ ಆದಂತಹ ಮಾನಸಿಕ ಏರುಪೇರುಗಳು ಹಾಗೂ ಹೊಸ ಅಪರಿಚಿತ ಪ್ರದೇಶಕ್ಕೆ ಹೊಂದಿಕೊಳ್ಳಲು ಸಾಧ್ಯವಾಗದೇ ಇರುವುದು ಆರೋಗ್ಯದ ಸಮಸ್ಯೆ ಹೆಚ್ಚಳವಾಗಲು ಕಾರಣವಾಗಿವೆ ಎಂದು 84% ಮಾಹಿತಿದಾರರು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಭೂಸ್ವಾಧೀನಕ್ಕಿಂತ ಮೊದಲು ಮಾಸಿಕ ಮುನ್ನೂರು ರೂಪಾಯಿಯಷ್ಟನ್ನು ಆರೋಗ್ಯಕ್ಕಾಗಿ ವ್ಯಯಿಸುತ್ತಿದ್ದ 104 (41.6%) ಸಂತ್ರಸ್ತರು ಪುನರ್‌ವಸತಿಯ ನಂತರ 174 (69.6%) ಹೆಚ್ಚಳವಾಗಿ ಮಾಸಿಕ ಮುನ್ನೂರು ರೂಪಾಯಿಗಳಿಗಿಂತಲೂ ಹೆಚ್ಚು ಖರ್ಚು ಮಾಡುವ ಪರಿಸ್ಥಿತಿ ಹುಟ್ಟಿಕೊಂಡಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಭೂಸ್ವಾಧೀನಕ್ಕಿಂತ ಮೊದಲು ನೂರಎಂಟು (43.2%) ಮಾಹಿತಿದಾರರು ಮನೆಗಳ ಸಮೀಪದಲ್ಲಿಯೇ ಚಿಕಿತ್ಸೆಗೆ ವೈದ್ಯರು ಲಭ್ಯವಿದ್ದರೆಂದು ತಿಳಿಸಿದರೆ ಪುನರ್‌ವಸತಿ ಕಾಲನಿಗಳಲ್ಲಿ ಅಗತ್ಯದ ಸಂದರ್ಭದಲ್ಲಿ ವೈದ್ಯರ ಲಭ್ಯತೆ ಇತ್ತು ಎಂಬ ಮಾತನ್ನು 77 (30.8%) ಸಂತ್ರಸ್ತರು ತಮ್ಮ ಅನಿಸಿಕೆಗಳಲ್ಲಿ ತಿಳಿಸಿರುತ್ತಾರೆ.

ಸಂಗ್ರಹಿತ ಮಾಹಿತಿಗಳು ಬಲವಂತದ ಸ್ಥಳಾಂತರ ಮತ್ತು ಪುನರ್‌ವಸತಿ ಸಂತ್ರಸ್ತರ ಆರೋಗ್ಯದ ಮೇಲೆ ಸರಿಪಡಿಸಲಾಗದಷ್ಟು ಹಾನಿಗೈದಿರುವುದನ್ನು ತಿಳಿಸುತ್ತದೆ. 84% ಮಾಹಿತಿದಾರರ ಅಭಿಪ್ರಾಯದಂತೆ

ಸ್ಥಳಾಂತರ ಆರೋಗ್ಯದ ಮೇಲೆ ಹೆಚ್ಚಿನ ಪರಿಣಾಮವನ್ನು ತಂದಿರುತ್ತದೆ ಎಂದು ತಿಳಿಸಿದ್ದು ಇದಕ್ಕೆ ತಲತಲಾಂತರದಿಂದ ವಾಸಿಸುತ್ತಿದ್ದ ಭೂಮಿಯಿಂದ ಏಕಾಏಕಿ ಅಪರಿಚಿತವಾದ ಇನ್ನೊಂದು ಪ್ರದೇಶಕ್ಕೆ ವಾಸ್ತವ್ಯವನ್ನು ಬದಲಿಸಿರುವುದು ಮತ್ತು ಹೊಸ ಪ್ರದೇಶದಲ್ಲಿ ಹಿಂದಿನಂತೆ ಹೊಂದಾಣಿಕೆ ಸಾಧ್ಯವಾಗದಿರುವುದು, ಅಲ್ಲಿರುವ ಸೀಮಿತ ಸೌಲಭ್ಯಗಳಿಂದ ತೃಪ್ತಿಯಾಗದೇ ಇರುವುದು, ಮಾನಸಿಕ ಒತ್ತಡಕ್ಕೆ ಗುರಿಯಾಗಿರುವುದು, ಯಾವುದೇ ಸ್ಥಿರ ಉದ್ಯೋಗವಿಲ್ಲದೆ ಹಣಕಾಸಿನ ಅಡಚಣೆಯಾಗಿರುವುದು, ಆಹಾರದ ಅಲಭ್ಯತೆಗಳು ಕಾರಣವಾಗಿರುತ್ತದೆಯೆಂಬ ಆಘಾತಕಾರಿ ಮಾಹಿತಿಗಳನ್ನು ನೀಡಿದ್ದು, ಸಾಮಾಜಿಕ ಅಭದ್ರತೆಯೂ ಕೂಡಾ ಆರೋಗ್ಯದಲ್ಲಿನ ಏರುಪೇರಿಗೆ ಗಣನೀಯ ಪ್ರಭಾವ ಬೀರುತ್ತದೆ ಎಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿರುತ್ತಾರೆ.

ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಹಾಗೂ ಉಡುಪಿ ಜಿಲ್ಲೆಯ ಪಡುಬಿದ್ರಿ ಮತ್ತು ನಂದಿಕೂರಿನಲ್ಲಿ ಅಸ್ತಿತ್ವಕ್ಕೆ ಬಂದಿರುವ ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರದ ಘಟಕಗಳು ಪರಿಸರದಲ್ಲಿ ಹೊರಬಿಡುತ್ತಿರುವ ತ್ಯಾಜ್ಯ ವಸ್ತುಗಳು, ಹಾರುಬೂದಿ ಮತ್ತು ರಾಸಾಯನಿಕ ವಸ್ತುಗಳು ಪರಿಸರಕ್ಕೆ ನೇರವಾಗಿ ಸೇರುವುದರಿಂದ ಅದಕ್ಕೆ ಸಮೀಪದಲ್ಲಿ ವಾಸಿಸುತ್ತಿರುವ ಉಡುಪಿ ಜಿಲ್ಲೆಯ ಪಡುಬಿದ್ರಿ ಗ್ರಾಮಾಂತರ ಪ್ರದೇಶದ ಪರಿಸರ, ಮಂಗಳೂರು ಪೆಟ್ರೋ ಕೆಮಿಕಲ್ಸ್ ಅಸ್ತಿತ್ವಕ್ಕೆ ಬಂದಿರುವ ಪ್ರದೇಶದ ಸಮೀಪದ ಕೃಷ್ಣಾಪುರ, ಕಾಟಿಪಳ್ಳ, ಚೇಳ್ಯಾರುಪದವು, ಜೋಕಟ್ಟೆ ಪರಿಸರದಲ್ಲಿ ಮಾಲಿನ್ಯವಾಗಿರುವಂತೆ ಮುಂದೆ ಪುನರ್‌ವಸತಿ ಪ್ರದೇಶದ ಸಮೀಪದಲ್ಲಿಯೇ ಅಸ್ತಿತ್ವಕ್ಕೆ ಬರಲಿರುವ ಬೃಹತ್ ಕೈಗಾರಿಕೆಗಳಿಂದ ಹೊರಬರುವ ತ್ಯಾಜ್ಯ ವಸ್ತುಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗಿ ತಮ್ಮ ಆರೋಗ್ಯದ ಮೇಲೆ ಸರಿಪಡಿಸಲಾಗದ ಪ್ರಭಾವ ಬೀರುವ ಸಾಧ್ಯತೆಗಳು ಇವೆ ಎಂಬುದಾಗಿ ತಮ್ಮ ಭೀತಿಯನ್ನು ಸಂದರ್ಶಿತರು ಅನೌಪಚಾರಿಕವಾಗಿ ಮಾತನಾಡುವಾಗ ವ್ಯಕ್ತಪಡಿಸಿರುತ್ತಾರೆ. ಸ್ಥಳಾಂತರವು ಬಾಧಿತರ ಮಾನಸಿಕ ಒತ್ತಡಕ್ಕೆ ಕಾರಣವಾಗಿ ಅವರಲ್ಲಿ ಅಸುರಕ್ಷತೆಯ ಭಾವನೆ, ಹೊಸ ಪ್ರದೇಶದಲ್ಲಿ ಆಧುನಿಕ ಸೌಲಭ್ಯವನ್ನೊಳಗೊಂಡಿರುವ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೂ ಸ್ಥಳಾಂತರದ ಪೂರ್ವದಲ್ಲಿ ನಡೆಸುತ್ತಿದ್ದ ಪ್ರಶಾಂತ, ಸರಳ ಜೀವನಗಳು ನೆನಪಾಗಿ ಹೊಸ ಪ್ರದೇಶಕ್ಕೆ ಹೊಂದಿಕೊಳ್ಳಲು ಕಷ್ಟವಾಗಿ ಮಾನಸಿಕ ಕ್ಲೇಶಗಳಿಗೆ ಒಳಗಾಗಿ ಸಂತ್ರಸ್ತರ ಆರೋಗ್ಯ ಸಮಸ್ಯೆಯಲ್ಲಿ ಹೆಚ್ಚಳವಾಗಿರುವುದು ಕಂಡು ಬಂದಿರುತ್ತದೆ.

ಸ್ಥಳಾಂತರದ ಪೂರ್ವದಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಮಾಸಿಕ ಮುನ್ನೂರು ರೂಪಾಯಿಗಿಂತಲೂ ಹೆಚ್ಚು ಖರ್ಚು ಮಾಡುತ್ತಿದ್ದ ಕೇವಲ ನೂರನಾಲ್ಕು ಕುಟುಂಬಗಳು ಕಂಡುಬಂದರೆ, ಪುನರ್‌ವಸತಿ ಪ್ರದೇಶದಲ್ಲಿ ನೆಲೆನಿಂತ ಮೇಲೆ ಆರೋಗ್ಯಕ್ಕಾಗಿ ತಿಂಗಳಿಗೆ ಮುನ್ನೂರು ರೂಪಾಯಿಗಿಂತ ಹೆಚ್ಚು ಖರ್ಚು ಮಾಡುವ ಕುಟುಂಬಗಳ ಸಂಖ್ಯೆ 174ಕ್ಕೆ ಏರಿಕೆಯಾಗಿರುವುದು ಪುನರ್‌ವಸತಿ ಪ್ರದೇಶದಲ್ಲಿ ಸಂತ್ರಸ್ತರ ಆರೋಗ್ಯ ಸ್ಥಿತಿಯಲ್ಲಿ ಏರುಪೇರುಗಳಾಗಿರುವುದನ್ನು ಸೂಚಿಸುತ್ತದೆ. ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಿಸಿದ ಹೆಚ್ಚಿನ ಅಧ್ಯಯನಗಳು (ಮನಿಷ್‌ಕುಮಾರ್ ವರ್ಮ, 2004; ಜಾನಕಿ ರಾವ್, 2012; ಪರಶುರಾಮನ್, 1999) ಸ್ಥಳಾಂತರದ

ನಂತರ ಬೃಹತ್ ಯೋಜನೆಗಳಿಗಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಆರೋಗ್ಯ ಹೊಸ ಪ್ರದೇಶದಲ್ಲಿ ಏರುಪೇರಾಗಿರುವುದನ್ನು ವಿವರಿಸುತ್ತದೆ. ಸಂತ್ರಸ್ತರಿಗಾಗಿ ನಿರ್ಮಿಸಲ್ಪಟ್ಟಿರುವ ಪುನರ್‌ವಸತಿ ಕಾಲನಿಗಳಲ್ಲಿ ಮೂಲಭೂತ ಅವಶ್ಯಕತೆಗಳು ಅಲಭ್ಯವಾಗಿರುವುದು ವಿಶೇಷವಾಗಿ ಶೌಚಾಲಯಗಳ ಕೊರತೆ, ಅಸಮರ್ಪಕ ಒಳಚರಂಡಿ ವ್ಯವಸ್ಥೆ, ನೀರು, ಪರಿಶುದ್ಧ ಗಾಳಿಯ ಅಲಭ್ಯತೆ ಮತ್ತು ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಮರ್ಪಕ ವ್ಯವಸ್ಥೆ ಇಲ್ಲದಿರುವುದು[11] ಮುಖ್ಯ ಕಾರಣವೆಂದು ಉಲ್ಲೇಖಿಸಿರುವ ಸಾವಿತ್ರಿ ರಾಮಯ್ಯನವರು ಮೇಲೆ ವಿವರಿಸಿದ ಕಾರಣಗಳು ಸ್ಥಳಾಂತರದಿಂದ ಮಾನಸಿಕ ಆಘಾತಕ್ಕೆ ಒಳಗಾಗಿರುವ ಸಂತ್ರಸ್ತರುಗಳಲ್ಲಿ ಆರೋಗ್ಯ ಸಮಸ್ಯೆಗಳಲ್ಲಿ ಹೆಚ್ಚಳವಾಗಲು ಕಾರಣವಾಗುತ್ತದೆಯೆಂದು ತಿಳಿಸಿರುತ್ತಾರೆ. ಸ್ಥಳಾಂತರದಿಂದ ಸಂತ್ರಸ್ತರ ಆರೋಗ್ಯ ಮತ್ತು ಪೌಷ್ಟಿಕಾಂಶಗಳ ಲಭ್ಯತೆಯ ಬಗ್ಗೆ ಹೆಚ್ಚಿನ ಅಧ್ಯಯನಗಳು ಆಗಿಲ್ಲವೆಂದು ತಿಳಿಸಿದ ಸಂಶೋಧಕರು ಈ ಅಂಶಗಳಿಗೆ ಪ್ರಾಮುಖ್ಯತೆಯನ್ನು ನೀಡಿ 1994–95ರಲ್ಲಿ ಆರು ರಾಜ್ಯಗಳಲ್ಲಿ ಹರಡಿಕೊಂಡಿದ್ದ ಎಂಟು ಅಭಿವೃದ್ಧಿ ಯೋಜನೆಗಳ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನವನ್ನು ನಡೆಸಿ ಸ್ಥಳಾಂತರಕ್ಕೂ ಯೋಜನೆಯ ಸಂತ್ರಸ್ತರುಗಳ ಆರೋಗ್ಯಕ್ಕೂ ನಡುವೆ ಇರುವ ನೇರ ಸಂಬಂಧವನ್ನು ವಿಶ್ಲೇಷಿಸುತ್ತಾರೆ. ಇವರ ಕಂಡುಕೊಳ್ಳುವಿಕೆಯಂತೆ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಮಿಯನ್ನು ಕಳೆದುಕೊಂಡು ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರು ಆಘಾತದಿಂದ ಮತ್ತು ಸೌಲಭ್ಯಗಳ ಅಲಭ್ಯತೆ, ಮುಂದಿನ ಜೀವನದ ಬಗೆಗಿನ ಅನಿಶ್ಚಿತತೆ, ತೊಳಲಾಟದಿಂದ ಆರೋಗ್ಯ ಸಮಸ್ಯೆಯಲ್ಲಿ ಹೆಚ್ಚಳವಾಗಿರುವುದನ್ನು ಗಮನಿಸಬಹುದು. ಇದರಿಂದಾಗಿ ಸ್ಥಳಾಂತರ ಸಂತ್ರಸ್ತರ ಆರೋಗ್ಯದ ಮೇಲೆ ಸರಿಪಡಿಸಲಾಗದ ಪರಿಣಾಮ ಬೀರುತ್ತದೆಯೆಂದು ಸ್ಪಷ್ಟವಾಗಿ ಹೇಳಬಹುದು. ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಮಿಯನ್ನು ಕಳೆದುಕೊಂಡು ಪುನರ್‌ವಸತಿ ಪ್ರದೇಶದಲ್ಲಿ ವಾಸಿಸುತ್ತಿರುವ ಯೋಜನೆಯ ಬಲಿಪಶುಗಳ ಆರೋಗ್ಯದಲ್ಲಿಯೂ ಮಹತ್ತರ ಬದಲಾವಣೆಗಳಾಗಿರುವುದು ಕಂಡುಬಂದಿರುತ್ತದೆ.

ಕೋಷ್ಟಕ–3.9: ಸ್ಥಳಾಂತರದ ನಂತರದ ಚಿಕಿತ್ಸೆ ಉತ್ತಮವಿತ್ತೇ?

ಕ್ರ.ಸಂ	ಉತ್ತರ	ಸಂಖ್ಯೆ	ಶೇಕಡಾ
1	ಹೌದು	84	34
2	ಇಲ್ಲ	166	66
	ಒಟ್ಟು	**250**	**100**
ಹೌದಾದರೆ ಕಾರಣಗಳು?			
1	ಆಧುನಿಕ ವೈದ್ಯ ಪದ್ಧತಿಯ ಲಭ್ಯತೆ + ಶೀಘ್ರ ಚಿಕಿತ್ಸೆ + ಆಧುನಿಕ ಸೌಲಭ್ಯಗಳ ಲಭ್ಯತೆ + ಆ್ಯಂಬುಲೆನ್ಸ್ + ಪ್ರಥಮ ಚಿಕಿತ್ಸೆ ಲಭ್ಯತೆ	44	18
2	ಆಧುನಿಕ ವೈದ್ಯ ಪದ್ಧತಿಯ ಲಭ್ಯತೆ + ಆಧುನಿಕ ಸೌಲಭ್ಯಗಳ ಲಭ್ಯತೆ	40	16
	ಒಟ್ಟು	**84**	**34**
ಇಲ್ಲವಾದರೆ, ಕಾರಣಗಳು?			
ಹೆಚ್ಚಿನ ಖರ್ಚು + ಪುನರ್‌ವಸತಿ ಪ್ರದೇಶದಿಂದ ದೂರ + ಸಾಂಪ್ರದಾಯಿಕ ಚಿಕಿತ್ಸೆಯ ಅಲಭ್ಯತೆ + ಸಮೀಪದಲ್ಲಿ ತಜ್ಞ ವೈದ್ಯರು ದೊರಕದೇ ಇರುವುದು		166	66
	ಒಟ್ಟು	**166**	**66**

ಕೋಷ್ಟಕ 3.9ರ ಪ್ರಕಾರ ನೂರಅರುವತ್ತಾರು (66%) ಸಂತ್ರಸ್ತರು ಸ್ಥಳಾಂತರದ ನಂತರ ಸಿಗುತ್ತಿದ್ದ ವೈದ್ಯಕೀಯ ಚಿಕಿತ್ಸೆ ಉತ್ತಮವಾಗಿರಲಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಎಂಬತ್ತನಾಲ್ಕು(34%) ಶೇಕಡಾ ಮಾಹಿತಿದಾರರು ಪುನರ್‌ವಸತಿ ಕಾಲನಿಗಳ ಸಮೀಪದಲ್ಲಿ ಸಿಗುತ್ತಿದ್ದ ಆಧುನಿಕ ವೈದ್ಯಕೀಯ ವ್ಯವಸ್ಥೆ, ಪ್ರಥಮ ಚಿಕಿತ್ಸೆಯ ಲಭ್ಯತೆ, ಶೀಘ್ರವಾಗಿ ಸಿಗುತ್ತಿದ್ದಂತಹ ಚಿಕಿತ್ಸೆ, ಆಂಬುಲೆನ್ಸ್‌ಗಳ ಲಭ್ಯತೆ, ಆಧುನಿಕ ಸಾರಿಗೆ ವ್ಯವಸ್ಥೆಯಿಂದಾಗಿ ಗುಣಮಟ್ಟದ ಚಿಕಿತ್ಸೆ ಪುನರ್‌ವಸತಿಯ ನಂತರದಲ್ಲಿ ಸಂತ್ರಸ್ತರಿಗೆ ಲಭ್ಯವಾಗುತ್ತಿತ್ತು ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ. 166(66%) ಮಾಹಿತಿದಾರರು ಪುನರ್‌ವಸತಿಯ ನಂತರದ ಚಿಕಿತ್ಸೆ ಉತ್ತಮವಾಗಿರಲಿಲ್ಲವೆಂದು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿ, ಇವುಗಳಿಗೆ ಪುನರ್‌ವಸತಿ ಪ್ರದೇಶಗಳಿಂದ ಆರೋಗ್ಯ ಕೇಂದ್ರಗಳಿಗೆ ಇದ್ದಂತಹ ದೂರ, ಸಾಂಪ್ರದಾಯಿಕ ಚಿಕಿತ್ಸೆಯ ಅಲಭ್ಯತೆ, ಚಿಕಿತ್ಸೆಯ ವೆಚ್ಚದಲ್ಲಿನ ಹೆಚ್ಚಳ ಹಾಗೂ ತಜ್ಞ ವೈದ್ಯರುಗಳ ಅಲಭ್ಯತೆ ಇದ್ದುದೇ ಕಾರಣ ಎಂದಿದ್ದಾರೆ.

ಸ್ಥಳಾಂತರ ಮತ್ತು ಸಂತೃಪ್ತಿ

ಕೋಷ್ಟಕ–3.10: ಸ್ಥಳಾಂತರ ಸಂತೋಷವನ್ನು ತಂದಿರುತ್ತದೆಯೇ?

ಕ್ರ.ಸಂ	ಉತ್ತರ	ಸಂಖ್ಯೆ	ಶೇಕಡಾ
1	ಹೌದು	32	13
2	ಇಲ್ಲ	218	87
	ಒಟ್ಟು	**250**	**100**
ಹೌದಾದರೆ ಕಾರಣಗಳು?			
1	ಉತ್ತಮ ಉದ್ಯೋಗದ ಲಭ್ಯತೆ + ಉತ್ತಮ ಪರಿಹಾರ + ಆಧುನಿಕ ಸೌಲಭ್ಯಗಳ ಅವಕಾಶ	2	1
2	ಆಧುನಿಕ ಸೌಲಭ್ಯಗಳ ಅವಕಾಶ +ಉತ್ತಮ ಸಾರಿಗೆ ಸಂಪರ್ಕಗಳ ಲಭ್ಯತೆ+ಉತ್ತಮ ಶಿಕ್ಷಣದ ಲಭ್ಯತೆ	20	8
3	ಸ್ವಲ್ಪ ಮಟ್ಟಿಗೆ	10	4
	ಒಟ್ಟು	**32**	**13**
ಇಲ್ಲವಾದರೆ ಕಾರಣಗಳು?			
1	ಉದ್ಯೋಗದ ನಷ್ಟ+ಅಸಮರ್ಪಕ ಪರಿಹಾರ+ಕಳಪೆ ಜೀವನಮಟ್ಟ	132	53
2	ಉದ್ಯೋಗದ ನಷ್ಟ+ಸೌಲಭ್ಯಗಳ ಅಲಭ್ಯತೆ	32	13
3	ಸಾರಿಗೆ ಸಂಪರ್ಕದ ಕೊರತೆ+ಶಿಕ್ಷಣ ಮಟ್ಟ ಉತ್ತಮವಾಗಿಲ್ಲ	54	22
	ಒಟ್ಟು	**218**	**87**

ಸ್ಥಳಾಂತರ ಪ್ರಕ್ರಿಯೆ ಹಾಗೂ ಹೊಸ ಪ್ರದೇಶದಲ್ಲಿ ಖಾಯಂ ಆಗಿ ನೆಲೆಯಾದ ನಂತರ ಸ್ಥಳಾಂತರ ಪ್ರಕ್ರಿಯೆ, ಪುನರ್‌ವಸತಿ ಕಾಲನಿಗಳಲ್ಲಿನ ಹೊಸ ಜೀವನ ಸಂತ್ರಸ್ತರಿಗೆ ಸಂತೋಷವನ್ನು ತಂದಿದೆಯೇ? ತಂದಿದ್ದರೆ ಯಾವ ರೀತಿಯಲ್ಲಿ ಎಂಬ ಅಂಶಕ್ಕೆ ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಇನ್ನೂರೈವತ್ತು ಮಾಹಿತಿದಾರರಲ್ಲಿ ಈ ಬಗ್ಗೆ ಪ್ರಶ್ನಾವಳಿಗಳ ಮೂಲಕ ಕೂಲಂಕುಷವಾಗಿ ಪರಿಶೀಲಿಸಿದಾಗ ಇನ್ನೂರಹದಿನೆಂಟು (87%) ಸಂತ್ರಸ್ತರು ಸ್ಥಳಾಂತರ ಹಾಗೂ ಹೊಸ ನೆಲೆಯಲ್ಲಿನ ಬದುಕು ಯಾವುದೇ ರೀತಿಯ ಸಂತೋಷವನ್ನು ತರಲಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಭೂಸ್ವಾಧೀನಕ್ಕಿಂತ ಮೊದಲು ಜೀವನೋಪಾಯಕ್ಕಾಗಿ ಮಾಡುತ್ತಿದ್ದ ಉದ್ಯೋಗದ ನಷ್ಟ, ಸರಿಯಾದ ರೀತಿಯಲ್ಲಿ ಪರಿಹಾರವನ್ನು ನೀಡದೆ ಇರುವುದು, ಹೊಸ ನೆಲೆಗಳಲ್ಲಿನ ಕಳಪೆ ವ್ಯವಸ್ಥೆಗಳು ಭೂಸ್ವಾಧೀನಕ್ಕಿಂತ ಮೊದಲು ನಮ್ಮಲ್ಲಿದ್ದ ಸಂತಸದ ಜೀವನ ಹಾಗೂ ಸಂತೃಪ್ತಿಯನ್ನು ಸಂಪೂರ್ಣವಾಗಿ ಕಸಿದುಕೊಂಡಿತು ಎಂಬುದಾಗಿ ನೂರಮೂವತ್ತೆರಡು (53%) ಮಾಹಿತಿದಾರರು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಸೌಲಭ್ಯಗಳ ಕೊರತೆ, ಉದ್ಯೋಗದ ನಷ್ಟದಿಂದಾಗಿ ತೊಂದರೆಯಾಯಿತು ಎಂಬುವುದು ಮೂವತ್ತೆರಡು (13%) ಮಾಹಿತಿದಾರರ ಉತ್ತರವಾಗಿತ್ತು. ಹೊಸನೆಲೆಗಳಲ್ಲಿ ಸಮರ್ಪಕ ಸಾರಿಗೆ ಸಂಪರ್ಕದ ಕೊರತೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಮೀಪದಲ್ಲಿ ಶೈಕ್ಷಣಿಕ ಸಂಸ್ಥೆಗಳು ಇಲ್ಲದೇ ಇರುವುದರಿಂದ

ಸ್ಥಳಾಂತರವು ಸಂತೋಷವನ್ನು ತರಲಿಲ್ಲ ಎಂಬ ತಮ್ಮ ಅಳಲನ್ನು ಐವತ್ತನಾಲ್ಕು (22%) ಸಂತ್ರಸ್ತರು ತೋಡಿಕೊಂಡಿರುತ್ತಾರೆ.

ಸ್ಥಳಾಂತರದ ನಂತರ ದೊರಕಿದ ಉತ್ತಮ ಉದ್ಯೋಗ, ಕ್ಲಪ್ತ ಸಮಯದಲ್ಲಿ ಯೋಗ್ಯವಾದ ಪರಿಹಾರ ದೊರಕಿರುವುದು, ಪುನರ್‌ವಸತಿ ಪ್ರದೇಶದಲ್ಲಿ ನೀಡಿದಂತಹ ಉತ್ತಮ ಗುಣಮಟ್ಟದ ಮೂಲಭೂತ ಸೌಲಭ್ಯಗಳು ನಮ್ಮ ಭೂಮಿ ಸ್ವಾಧೀನಕ್ಕೊಳಗಾದುದರ ಚಿಂತೆಯನ್ನು ನಿವಾರಿಸಿ ಪುನರ್‌ವಸತಿ ಕಾಲನಿಗಳಲ್ಲಿ ಹೊಸ ಬದುಕನ್ನು ನಡೆಸಲು ಸಂತೋಷವನ್ನು ನೀಡಿತು ಎಂದು ಇಬ್ಬರು (1%) ಮಾಹಿತಿದಾರರು ಅಭಿಪ್ರಾಯಪಟ್ಟಿರುತ್ತಾರೆ. ಹೊಸನೆಲೆಗಳಲ್ಲಿ ಆಧುನಿಕ ಸೌಲಭ್ಯಗಳ ಲಭ್ಯತೆ, ಉತ್ತಮ ಸಾರಿಗೆ ಸಂಪರ್ಕ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣದ ಅವಕಾಶ ಸಂತೋಷವನ್ನು ಹೆಚ್ಚಿಸಿತು ಎಂದು ಇಪ್ಪತ್ತು (8%) ಕುಟುಂಬದ ಯಜಮಾನರು ಅಭಿಪ್ರಾಯಪಟ್ಟರೆ ಹೊಸ ಪ್ರದೇಶದಲ್ಲಿನ ವಾಸ್ತವ್ಯ ಸ್ವಲ್ಪ ಮಟ್ಟಿಗೆ ಸಂತಸವನ್ನು ತಂದಿರುತ್ತದೆ ಎಂದು ಹತ್ತು (4%) ಮಾಹಿತಿದಾರರು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಸ್ತ್ರೀಯರು, ಮಕ್ಕಳು ಮತ್ತು ಸ್ಥಳಾಂತರ

ಕೋಷ್ಟಕ–3.11: ಸ್ತ್ರೀಯರು ಮತ್ತು ಮಕ್ಕಳ ಆರೋಗ್ಯದ ಮೇಲೆ ಸ್ಥಳಾಂತರದ ಪರಿಣಾಮ

ಕ್ರಸಂ	ಉತ್ತರ	ಸಂಖ್ಯೆ	ಶೇಕಡಾ
1	ಬೀರಿರುತ್ತದೆ	194	78
2	ಬೀರಿರುವುದಿಲ್ಲ	56	22
	ಒಟ್ಟು	**250**	**100**
ಬೀರಿದ್ದರೆ ಕಾರಣಗಳು			
1	ಮಾನಸಿಕ ಒತ್ತಡ+ಹೊಸ ಪರಿಸರಕ್ಕೆ ಹೊಂದಾಣಿಕೆ ಕಷ್ಟವಾಗಿರುತ್ತದೆ+ಹೊಸ ಜವಾಬ್ದಾರಿಗಳ ಹೇರಿಕೆ	148	59
2	ಹೊಸ ಪರಿಸರಕ್ಕೆ ಹೊಂದಾಣಿಕೆ ಕಷ್ಟವಾಗಿರುತ್ತದೆ + ಹೊಸ ಜವಾಬ್ದಾರಿಗಳ ಹೇರಿಕೆ + ನೆರೆಮನೆಯವರೊಡನೆ ಉತ್ತಮ ಸಂಬಂಧವಿಲ್ಲ	46	18
	ಒಟ್ಟು	**194**	**78**
ಬೀರಿಲ್ಲವಾದರೆ ಕಾರಣಗಳು			
1	ಯಾವುದೇ ರೀತಿಯ ಒತ್ತಡ ಇಲ್ಲ + ನೆರೆಮನೆಯವರೊಡನೆ ಉತ್ತಮ ಸಂಬಂಧ	33	13
2	ಆಧುನಿಕ ಸೌಲಭ್ಯಗಳ ಲಭ್ಯತೆ + ಯಾವುದೇ ರೀತಿಯ ಒತ್ತಡ ಇಲ್ಲ	23	9
	ಒಟ್ಟು	**56**	**22**

ಕೃಷಿ ಪ್ರಧಾನ ಸಮಾಜದಲ್ಲಿ ಭೂಮಿ ಮತ್ತು ಮನೆವಾರ್ತೆಗಳಿಗೆ ಸಂಬಂಧಪಟ್ಟಂತೆ ಮಹಿಳೆಯರು ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ತಮ್ಮ ಮನೆಯಲ್ಲಿರುವ ಜಾನುವಾರುಗಳ ಆರೈಕೆಯನ್ನು ಮಾಡುವುದು, ಅಡುಗೆ ಮಾಡುವುದಕ್ಕಾಗಿ ಕಟ್ಟಿಗೆಗಳನ್ನು ಸಂಗ್ರಹಿಸುವುದು, ಕೃಷಿ ಕಾರ್ಯಗಳಲ್ಲಿ ನೆರವಾಗುವುದು ಹಾಗೂ ಮನೆ ನಿರ್ವಹಣೆಗೆ ಸಂಬಂಧಿತ ಇತರ ಕೆಲಸಗಳನ್ನು ಮಹಿಳೆಯರು ನಿರ್ವಹಿಸುತ್ತಾರೆ. ಆದರೆ ಬದಲಾದ ಹೊಸ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಕೃಷಿ ಭೂಮಿಗಳೂ ಕೈಗಾರಿಕೆಗಳ ನಿರ್ಮಾಣಕ್ಕಾಗಿ

ಸ್ವಾಧೀನಗೊಂಡು ಗ್ರಾಮಗಳ ವ್ಯವಸ್ಥೆಯಲ್ಲಿ ಬದಲಾವಣೆಗಳಾದಾಗ ಅವುಗಳಿಗೆ ನೇರವಾಗಿ ಬಲಿಪಶುಗಳಾಗುವುದು ಮಹಿಳೆಯರು. ತಮ್ಮ ಸಾಂಪ್ರದಾಯಿಕ ಕಾರ್ಯ ಮತ್ತು ಹೊಸ ವ್ಯವಸ್ಥೆಯಲ್ಲಿ ಯಾವುದೇ ಕೆಲಸ ಮತ್ತು ಜವಾಬ್ದಾರಿಗಳಿಲ್ಲದೆ ಕಂಗೆಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಸ್ಥಳಾಂತರ ಪ್ರಕ್ರಿಯೆ ಕುಟುಂಬದಲ್ಲಿನ ಮಹಿಳೆಯರು ಮತ್ತು ಮಕ್ಕಳ ಮೇಲೆ ಸಾಮಾನ್ಯವಾಗಿ ಪ್ರಭಾವವನ್ನು ಬೀರುತ್ತದೆ. ಯೋಜನೆಗಾಗಿ ಭೂಮಿಯನ್ನು ಸ್ವಾಧೀನಪಡಿಸುವ ಸಂದರ್ಭದಲ್ಲಿ ಇತರ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದಿರುವ ಅಭಿವೃದ್ಧಿ ಯೋಜನೆಗಳಂತೆ ಇಲ್ಲಿನ ಮಹಿಳೆಯರು ಮತ್ತು ಮಕ್ಕಳ ಆರೋಗ್ಯದ ಮೇಲೆ ಯಾವ ರೀತಿಯ ಪ್ರಭಾವ ಬೀರಿರುತ್ತದೆ ಎಂಬುವುದನ್ನು ಪರಿಶೀಲಿಸಿದಾಗ, ಪ್ರಭಾವ ಬೀರಿರುತ್ತದೆ ಎಂಬುದಾಗಿ 194 (78%) ಸಂತ್ರಸ್ತರ ಅಭಿಪ್ರಾಯಪಟ್ಟರೆ ಯಾವುದೇ ರೀತಿಯ ಪರಿಣಾಮ ಬೀರಿರುವುದಿಲ್ಲ ಎಂದು 56 (22%) ಜನರ ಅಭಿಪ್ರಾಯವಾಗಿತ್ತು. ಸ್ಥಳಾಂತರ ಪ್ರಕ್ರಿಯೆಯಿಂದಾದ ಮಾನಸಿಕ ಒತ್ತಡ, ಅದರಿಂದಾಗಿ ಹೇರಲ್ಪಟ್ಟ ಹೊಸ ಜವಾಬ್ದಾರಿಗಳು ಮತ್ತು ಅಪರಿಚಿತ ಹೊಸ ಪ್ರದೇಶಕ್ಕೆ ಹೊಂದಾಣಿಕೆಯಾಗಲು ಕಷ್ಟಕರವಾಗಿರುವುದು ಮಕ್ಕಳ ಮತ್ತು ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರಿರುತ್ತದೆ ಎಂದು ನೂರನಲವತ್ತೆಂಟು (59%) ಮಾಹಿತಿದಾರರು ಅನಿಸಿಕೆಯನ್ನು ವ್ಯಕ್ತಪಡಿಸಿದ್ದರೆ, ನಲವತ್ತಾರು (18%) ಮಾಹಿತಿದಾರರು ಭೂಸ್ವಾಧೀನಕ್ಕಿಂತ ಮೊದಲು ನೆರೆಹೊರೆಯವರೊಂದಿಗೆ ಇದ್ದ ಸಂಬಂಧಗಳು, ಪುನರ್‌ವಸತಿ ಪ್ರದೇಶದಲ್ಲಿ ಅಪರಿಚಿತರು ನೆರೆಹೊರೆಯವರಾಗಿ ಬಂದಿರುವುದು, ಹೊಸತಾದ ಜವಾಬ್ದಾರಿಗಳು ಹೊಸ ಪ್ರದೇಶದಲ್ಲಿ ಬಲವಂತವಾಗಿ ಹೇರಲ್ಪಟ್ಟಿರುವುದು ಹಾಗೂ ಅಪರಿಚಿತ ಪ್ರದೇಶಕ್ಕೆ ಹೊಂದಿಕೊಳ್ಳಲು ಕಷ್ಟವಾಗಿರುವುದು ಕುಟುಂಬದ ಮಹಿಳೆಯರು ಮತ್ತು ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರಿ ಮಾನಸಿಕ ತುಮುಲಕ್ಕೆ ಕಾರಣವಾಗಿರುತ್ತದೆ ಎಂದು ತಮ್ಮ ದುಗುಡವನ್ನು ವ್ಯಕ್ತಪಡಿಸಿರುತ್ತಾರೆ. ಮೂವತ್ತಮೂರು (13%) ಸಂದರ್ಶಿತರು ಸ್ಥಳಾಂತರವು ಯಾವುದೇ ರೀತಿಯ ಒತ್ತಡ ತಂದಿಲ್ಲ, ನೆರೆಹೊರೆಯವರೊಡನೆ ಹಿಂದಿನಂತೆ ಉತ್ತಮ ಸಂಬಂಧ ಹೊಂದಲು ಸಾಧ್ಯವಾಯಿತು ಎಂದರೆ, ಇಪ್ಪತ್ತಮೂರು (9%) ಮಾಹಿತಿದಾರರು ಪುನರ್‌ವಸತಿ ಕೇಂದ್ರಗಳಲ್ಲಿ ನೀಡಲ್ಪಟ್ಟ ಆಧುನಿಕ ಸೌಲಭ್ಯಗಳು ಹಾಗೂ ಯಾವುದೇ ರೀತಿಯಲ್ಲಿ ದೈನಂದಿನ ಜೀವನ ಕ್ರಮದಲ್ಲಿ ವ್ಯತ್ಯಾಸಗಳು ಉಂಟಾಗದೇ ಇರುವುದರಿಂದ ಸಹಜವಾಗಿ ಯಾವುದೇ ಮಾನಸಿಕ ಒತ್ತಡ, ಕ್ಲೇಶಗಳಿಗೆ ಕಾರಣವಾಗಿಲ್ಲ ಎಂದು ವಿವರಿಸಿರುತ್ತಾರೆ.

ಸ್ಥಳಾಂತರ ಪ್ರಕ್ರಿಯೆಗಳಿಗೆ ಒಳಗಾದ ಮಹಿಳೆಯರ ಬವಣೆಗಳನ್ನು ವಿವರಿಸುತ್ತಾ ತುಕ್ರಾಲ್‌ರವರು ಒಂದು ನೆಲೆಯಿಂದ ಬೇರ್ಪಟ್ಟು ಹೊಸ ಪ್ರದೇಶದಲ್ಲಿ ಪುನರ್‌ನೆಲೆಯನ್ನು ಕಲ್ಪಿಸುವುದನ್ನು ಅತ್ಯಂತ ಜಾಗರೂಕತೆಯಿಂದ ಕಾರ್ಯರೂಪಕ್ಕೆ ತರಬೇಕು. ಮಹಿಳೆಯರು ಪುರುಷರ ಮೇಲೆ ಹೆಚ್ಚು ಅವಲಂಬಿತರಾಗಿರುವುದರಿಂದ ಸಾಮುದಾಯಿಕ ಚೌಕಟ್ಟಿನಲ್ಲಿ ಬದಲಾವಣೆಗಳಾದಾಗ ಅದು ಮಹಿಳೆಯರ

ಬದುಕಿನ ಮೇಲೆ ಅಭದ್ರತೆ ಮತ್ತು ಗಂಭೀರವಾದ ಸಮಸ್ಯೆಗಳನ್ನು ಸೃಷ್ಟಿಸುವ ಸಾಧ್ಯತೆಗಳಿರುತ್ತದೆ. ಮಹಿಳೆಯರಿಗೆ ಕಟ್ಟಿಗೆ, ನೀರು ಮತ್ತು ಆಹಾರದ ಸಂಗ್ರಹ ಕೇವಲ ಆರ್ಥಿಕ ಚಟುವಟಿಕೆಗಳು ಮಾತ್ರ ಆಗಿರುವುದಿಲ್ಲ, ಅವುಗಳಿಗೆ ಸಾಮಾಜಿಕ ಪ್ರಸ್ತುತತೆಗಳಿದ್ದು, ಸಮಾಜೀಕರಣಕ್ಕೆ, ವಿಷಯಗಳನ್ನು ಹಂಚುವುದಕ್ಕೆ ಅನೌಪಚಾರಿಕ ವೇದಿಕೆಗಳನ್ನು ಒದಗಿಸುತ್ತದೆ.[12] ಇಂತಹ ಚಟುವಟಿಕೆಗಳಿಗೆ ಅವಕಾಶಗಳೇ ಇಲ್ಲದಿದ್ದರೆ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಬದಲಾವಣೆಗಳಾಗುತ್ತದೆ. ಕ್ಲಾಡ್ ಅಲ್ವರಿಸ್‌ರವರ ಕಂಡುಕೊಳ್ಳುವಿಕೆಯಂತೆ, ನರ್ಮದಾ ಅಣೆಕಟ್ಟು ರಚನೆಯ ಪ್ರದೇಶದಲ್ಲಿ ವಾಸಿಸುತ್ತಿದ್ದ ಮಹಿಳೆಯರಿಗೆ ಅವರ ಹೆಣ್ಣು ಮಕ್ಕಳ ಮದುವೆಯು ದೊಡ್ಡ ಸಮಸ್ಯೆಯಾಗಿತ್ತು. ಒಟ್ಟಾಗಿ ವಾಸಿಸುತ್ತಿದ್ದ ಕುಟುಂಬಗಳು ಮುಂದೆ ಭೇಟಿಯಾಗಲು ಅವಕಾಶಗಳು ಬಾರದೇ ಇರಬಹುದು ಎಂದು ಚಿಂತಿತರಾಗಿದ್ದರು. ಹೊರಗಿನವರೊಂದಿಗೆ ವಿವಾಹ ಸಂಬಂಧವನ್ನು ಬೆಳೆಸುವುದಕ್ಕೂ ವಿರೋಧ ವ್ಯಕ್ತಪಡಿಸುತ್ತಿದ್ದರು.[13] ಬಲವಂತದ ಸ್ಥಳಾಂತರದಿಂದಾಗಿ ತಮ್ಮ ಮೂಲ ನೆಲೆಯಿಂದ ಬೇರ್ಪಟ್ಟಿದ್ದು ಒಂದು ರೀತಿಯ ಶಾಪ ಎಂಬುದಾಗಿ ಸಂತ್ರಸ್ತ ಕುಟುಂಬಗಳು ಪರಿಗಣಿಸಿದ್ದವು[14] (ಮನಿಷ್‌ಕುಮಾರ್ ವರ್ಮ, 2004) ಎಂಬ ಫಲಿತಗಳನ್ನು ಹಿಂದಿನ ಅಧ್ಯಯನಗಳು ವ್ಯಕ್ತಪಡಿಸಿರುವುದನ್ನು ಕಾಣಬಹುದು.

ಪ್ರಸ್ತುತ ಯೋಜನೆಗಾಗಿ ಮಾಡಿದಂತಹ ಭೂಸ್ವಾಧೀನ ಮಕ್ಕಳು ಮತ್ತು ಮಹಿಳೆಯರ ಜೀವನಶೈಲಿಯ ಮೇಲೆ ಸರಿಪಡಿಸಲಾಗದಂತಹ ಪ್ರಭಾವ ಬೀರಿರುತ್ತದೆ ಎಂದು ಹೆಚ್ಚಿನ ಮಾಹಿತಿದಾರರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಸ್ಥಳಾಂತರದಿಂದಾದ ಮಾನಸಿಕ ಒತ್ತಡ, ಅದರಿಂದ ಹೇರಲ್ಪಟ್ಟ ಹೊಸ ಜವಾಬ್ದಾರಿಗಳು ಮತ್ತು ಅಪರಿಚಿತ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳಾದ ಮಾರುಕಟ್ಟೆಯ ಅಲಭ್ಯತೆ, ಎಲ್ಲಾ ಸಾಮಗ್ರಿಗಳಿಗೂ ದೂರದ ಸುರತ್ಕಲ್ ಅಥವಾ ಮಂಗಳೂರು ನಗರಕ್ಕೆ ಅವಲಂಬಿತವಾಗಿರುವುದು ಸಮಸ್ಯೆಗಳನ್ನು ಹೆಚ್ಚಿಸಿವೆಯೆಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತಾರೆ. ಕೋಡಿಕೆರೆ ಪುನರ್‌ವಸತಿ ಕಾಲನಿಯಲ್ಲಿ ವಾಸಿಸುತ್ತಿರುವ ಯಶೋಧಾ (ಹೆಸರು ಬದಲಾಯಿಸಲಾಗಿದೆ) ಎಂಬ 56 ವರ್ಷದ ಮಹಿಳೆ ಹಿಂದೆ ನಮ್ಮ ಪೂರ್ವನೆಲೆಯಾದ ಕುಳಾಯಿಯಲ್ಲಿ ಮನೆಕೆಲಸವೆಲ್ಲ ಮುಗಿದ ನಂತರ ಸಂಜೆ 4 ರಿಂದ 7ರವರೆಗೆ ನೆರೆಹೊರೆಯ ಮಹಿಳೆಯರು ಒಟ್ಟು ಸೇರಿ ನಮ್ಮ ಸಮಸ್ಯೆಗಳು ಮತ್ತು ಇತರ ವಿಷಯಗಳ ಬಗ್ಗೆ ಲೋಕಾಭಿರಾಮವಾಗಿ ಚರ್ಚಿಸುತ್ತಿದ್ದೆವು. ಪ್ರಸ್ತುತ ಕೋಡಿಕೆರೆ ಕಾಲನಿಯಲ್ಲಿ ಅಪರಿಚಿತರು ನಮ್ಮ ನೆರೆಹೊರೆಯವರಾಗಿ ಬಂದಿರುವುದರಿಂದ ಅದು ಸಾಧ್ಯವಾಗುತ್ತಿಲ್ಲ. ನಮ್ಮ ಮನೆಗಳಲ್ಲಿ ಯಾವುದಾದರೂ ಅಡುಗೆಗೆ ಬಳಸುವ ವಸ್ತುಗಳ ಕೊರತೆಯಾದಾಗ, ಸಣ್ಣ ಮೊತ್ತದ ಸಾಲದ ಅವಶ್ಯಕತೆಯಿದ್ದಾಗ ನೆರೆಮನೆಯವರಿಂದ ತರುತ್ತಿದ್ದೆವು, ನೆರೆಹೊರೆಯವರ ಕೌಟುಂಬಿಕ ಕಾರ್ಯಕ್ರಮಗಳ ಸಿದ್ಧತೆ ಹಾಗೂ ಸಂಭ್ರಮಗಳಲ್ಲಿ ಒಂದೇ ಮನೆಯವರಂತೆ ಬೆರೆಯುತ್ತಿದ್ದೆವು. ಆದರೆ ಬದಲಾದ ಪರಿಸರದಿಂದ ಹಿಂದೆ ಇದ್ದಂತಹ ಆತ್ಮೀಯ ಪರಿಸರ ಹೊಸ ಪ್ರದೇಶದಲ್ಲಿ ಸಾಧ್ಯವಾಗುತ್ತಿಲ್ಲ. ಇದು ನಮ್ಮ ಮಾನಸಿಕ ಒತ್ತಡಗಳಿಗೆ ಮತ್ತು ಕ್ಲೇಶಗಳಿಗೆ ಕಾರಣವಾಗಿರುತ್ತದೆಯೆಂದು ನೇರವಾಗಿ ತಮ್ಮ ಆಕ್ರೋಶವನ್ನು

ವ್ಯಕ್ತಪಡಿಸಿರುವುದು ಸ್ಥಳಾಂತರ ಮಹಿಳೆಯರ ಬದುಕಿನ ಮೇಲೆ ಯಾವ ರೀತಿಯ ಪರಿಣಾಮ ಬೀರಿರುತ್ತದೆಯೆಂದು ತಿಳಿಸುತ್ತದೆ. ಮಕ್ಕಳು ಪೂರ್ವನೆಲೆಯಲ್ಲಿ ನೆರೆಹೊರೆಯ ಇತರ ಮಕ್ಕಳ ಜೊತೆಯಲ್ಲಿ ಒಟ್ಟಾಗಿ ಆಟವಾಡುತ್ತಿದ್ದರು. ಪರೀಕ್ಷೆಯ ಸಂದರ್ಭಗಳಲ್ಲಿ ಜೊತೆ ಸೇರಿ ತಯಾರಿಯನ್ನು ನಡೆಸುತ್ತಿದ್ದರು. ಸ್ಥಳಾಂತರದ ನಂತರ ಹೊಸ ಪ್ರದೇಶಕ್ಕೆ ಬಂದುದರಿಂದ ಮತ್ತು ಪುನರ್‌ವಸತಿ ಕಾಲನಿಗಳಲ್ಲಿ ಹಿಂದೆ ಒಟ್ಟಾಗಿ ಒಂದೇ ಗ್ರಾಮದಲ್ಲಿ ವಾಸಿಸುತ್ತಿದ್ದ ಸಂತ್ರಸ್ತರಿಗೆ ಒಟ್ಟಾಗಿ ಒಂದೇ ಪ್ರದೇಶದಲ್ಲಿ ಮನೆ, ನಿವೇಶನಗಳನ್ನು ನೀಡದೇ ಇರುವುದರಿಂದ, ಬೇರೆ ಗ್ರಾಮಗಳಲ್ಲಿ ವಾಸಿಸುತ್ತಿದ್ದ ಸಂತ್ರಸ್ತ ಕುಟುಂಬಗಳು ನೆರೆಹೊರೆಯವರಾಗಿ ಬಂದಿದ್ದರಿಂದ ಮಕ್ಕಳ ನಡುವೆಯೂ ಹಿಂದಿನ ಪ್ರದೇಶದಲ್ಲಿದ್ದಂತಹ ಆತ್ಮೀಯ ಭಾವನೆಗಳು ಬರದೇ ಇದ್ದು ಅವರುಗಳು ಕುಗ್ಗಿ ಹೋಗಿರುವುದು ಕಂಡು ಬಂದಿರುತ್ತದೆ. ಪುನರ್‌ವಸತಿ ಮತ್ತು ಪರಿಹಾರಕ್ಕೆ ಸಂಬಂಧಪಟ್ಟ ನೀತಿ ಪ್ರತಿ ಪುನರ್‌ವಸತಿ ಪ್ರದೇಶದಲ್ಲಿ ಮಕ್ಕಳಿಗೆ ಆಟವಾಡುವ ಕ್ರೀಡಾಂಗಣವನ್ನು ನಿರ್ಮಿಸಬೇಕು ಎಂದು ಹೇಳಿದ್ದರೂ, ಆಟದ ಮೈದಾನಗಳು ರಚಿಸಲ್ಪಡದೇ ಇರುವುದು ಮಕ್ಕಳು ಮತ್ತು ಯುವಜನರು ಹೊಸ ನೆಲೆಗಳಲ್ಲಿ ಇತರ ಸಮಾನ ವಯಸ್ಕರೊಂದಿಗೆ ಆತ್ಮೀಯತೆಯನ್ನು ಬೆಳೆಸಲು ಅವಕಾಶವನ್ನು ಒದಗಿಸಲಿಲ್ಲವೆಂಬ ಅಭಿಪ್ರಾಯವನ್ನು ಹೆಚ್ಚಿನ ಸಂದರ್ಶಿತ ಮಾಹಿತಿದಾರರು ವ್ಯಕ್ತಪಡಿಸಿರುತ್ತಾರೆ.

ಸ್ಥಳಾಂತರ ಮತ್ತು ಶಿಕ್ಷಣ

ಕೋಷ್ಟಕ–3.12: ಸ್ಥಳಾಂತರವು ಶಿಕ್ಷಣದ ಮೇಲೆ ಪ್ರಭಾವ ಬೀರಿರುತ್ತದೆಯೇ?

ಕ್ರಸಂ	ಉತ್ತರ	ಸಂಖ್ಯೆ	ಶೇಕಡಾ
1	ಪ್ರಭಾವ ಬೀರಿರುತ್ತದೆ	5	2
2	ಪ್ರಭಾವ ಬೀರಿರುವುದಿಲ್ಲ	245	98
	ಒಟ್ಟು	**250**	**100**
ಹೌದಾದರೆ, ಯಾರ ಶಿಕ್ಷಣದ ಮೇಲೆ?			
1	ಗಂಡು	3	1
2	ಹೆಣ್ಣು	2	1
	ಒಟ್ಟು	**5**	**2**

ಸ್ಥಳಾಂತರದಿಂದಾಗಿ ಸಂತ್ರಸ್ತರ ಕುಟುಂಬದ ಸದಸ್ಯರ ಶಿಕ್ಷಣದ ಮೇಲೆ ಯಾವುದಾದರೂ ಪರಿಣಾಮಗಳಾಗಿವೆಯೇ ಎಂಬ ಅಂಶವನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದ್ದು, ಸಂದರ್ಶಿತ 250 ಮಾಹಿತಿದಾರರಲ್ಲಿ ಈ ಬಗ್ಗೆ ಪ್ರಶ್ನಿಸಿದಾಗ 98% ಸಂತ್ರಸ್ತರು ಸ್ಥಳಾಂತರ ಮಕ್ಕಳ ಮತ್ತು ಅವಲಂಬಿತರ ಶಿಕ್ಷಣದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರಿರುವುದಿಲ್ಲವೆಂದು ತಿಳಿಸಿದರೆ, ಐದು (2%) ಮಾಹಿತಿದಾರರು ಸ್ಥಳಾಂತರ ಮಕ್ಕಳ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುವುದಕ್ಕೆ ಕಾರಣವಾಗಿರುತ್ತದೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ವಿಷಯವನ್ನು ಕೂಲಂಕುಷವಾಗಿ ವಿಮರ್ಶಿಸಿದಾಗ ಶಿಕ್ಷಣವನ್ನು ಮೊಟಕುಗೊಳಿಸಿದ 5% ಮಾಹಿತಿದಾರರು ತಮ್ಮ ವೈಯಕ್ತಿಕ ಕಾರಣಗಳಿಗಾಗಿ ವಿಶೇಷವಾಗಿ ಹೆಣ್ಣು ಮಕ್ಕಳ ಮದುವೆಗಾಗಿ

ವಿದ್ಯಾಭ್ಯಾಸವನ್ನು ಅರ್ಧಕ್ಕೇ ಮೊಟಕುಗೊಳಿಸಿರುವುದು ಕಂಡು ಬಂದಿರುತ್ತದೆ. 2011ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಶಿಕ್ಷಣವನ್ನು ಪಡೆದಿರುವ ಒಟ್ಟು ಜನಸಂಖ್ಯೆ 75.60% ಆಗಿರುತ್ತದೆ. ಇದರಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಾಕ್ಷರತೆಯ ಮಟ್ಟ ಅನುಕ್ರಮವಾಗಿ 88.62% ಮತ್ತು 86.29% ಆಗಿದ್ದು,[15] ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಹಿಂದಿನಿಂದಲೂ ಗುಣಮಟ್ಟದ ಶೈಕ್ಷಣಿಕ ದಾಖಲೆಯನ್ನು ರಾಜ್ಯದಲ್ಲಿ ಹೊಂದಿದೆ. ಯಾವುದೇ ಸಮಸ್ಯೆಗಳು ಬಂದರೂ ಪೋಷಕರು ತಮ್ಮ ಮಕ್ಕಳ ಮತ್ತು ಅವಲಂಬಿತರ ಶಿಕ್ಷಣಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುವುದು ಈ ಜಿಲ್ಲೆಗಳ ಜನರ ಹೆಗ್ಗಳಿಕೆಯಾಗಿರುತ್ತದೆ. ಇದೇ ಕಾರಣದಿಂದಾಗಿ ಸ್ಥಳಾಂತರವು ಸಂತ್ರಸ್ತ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ರೀತಿಯ ಹೆಚ್ಚಿನ ಪರಿಣಾಮವನ್ನು ಬೀರಿರುವುದಿಲ್ಲ. ಸುರತ್ಕಲ್‌ನ ಆಸುಪಾಸಿನಲ್ಲಿರುವ ಶಿಕ್ಷಣ ಸಂಸ್ಥೆಗಳು ಮತ್ತು ಉನ್ನತ ಶಿಕ್ಷಣಕ್ಕಾಗಿ ಮಂಗಳೂರು ನಗರದ ವಿದ್ಯಾಲಯಗಳಲ್ಲಿ ಸಂತ್ರಸ್ತರ ಅವಲಂಬಿತರು ತಮ್ಮ ಶಿಕ್ಷಣವನ್ನು ಮುಂದುವರಿಸಲು ಅವಕಾಶವಿರುತ್ತದೆ. ಪುನರ್‌ವಸತಿ ಪ್ರದೇಶದಲ್ಲಿ ಲಭ್ಯವಿರುವ ಖಾಸಗಿ ಸಾರಿಗೆ ಸಂಪರ್ಕ ಮತ್ತು ಭೂಮಿ ಸ್ವಾಧೀನಪಡಿಸಿದಾಗ ದೊರಕಿದ ನಗದು ಪರಿಹಾರವನ್ನು ಯೋಜನೆಯ ಸಂತ್ರಸ್ತರು ತಮ್ಮ ಅವಲಂಬಿತರ ಶಿಕ್ಷಣಕ್ಕಾಗಿ ಖರ್ಚು ಮಾಡಿರುವುದು ಕಂಡು ಬಂದಿರುತ್ತದೆ.

ಮಧ್ಯಪ್ರದೇಶದ ಸಿಂಗ್ರೋಲಿ ಕಲ್ಲಿದ್ದಲು ವಿದ್ಯುತ್ ಸ್ಥಾವರದ ನಿರ್ವಸಿತರ ಬಗ್ಗೆ ಅಧ್ಯಯನವನ್ನು ಮಾಡಿದಂತಹ ಮನಿಷ್‌ಕುಮಾರ್ ವರ್ಮರವರು ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರು ತಮ್ಮ ಮುಂದಿನ ಜೀವನವನ್ನು ನಡೆಸಲು ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಧಾವಂತದಲ್ಲಿ ತಮ್ಮ ಮಕ್ಕಳ ಮತ್ತು ಅವಲಂಬಿತರ ಸಾಮಾಜೀಕರಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೆ ಇದ್ದದ್ದು ಅಲ್ಲಿನ ಯುವಜನತೆ ಮದ್ಯಪಾನ, ಜೂಜಾಟ, ತಂಬಾಕು ಸೇವನೆ, ಕಳ್ಳತನ, ವೇಶ್ಯಾವಾಟಿಕೆ ಮುಂತಾದ ಸಾಮಾಜಿಕ ವಿದ್ರೋಹಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿತು. ಇದಕ್ಕೆ ಮುಖ್ಯ ಕಾರಣ ಸಂತ್ರಸ್ತರ ಅವಲಂಬಿತರಿಗೆ ಪುನರ್‌ವಸತಿ ಪ್ರದೇಶಗಳಲ್ಲಿ ಯೋಗ್ಯ ಶಿಕ್ಷಣವನ್ನು ಪಡೆಯಲು ಅವಕಾಶಗಳ ಲಭ್ಯತೆಯ ಕೊರತೆಯಿದ್ದವು[16] ಎಂದು ಉಲ್ಲೇಖಿಸುತ್ತಾ ಸಂತ್ರಸ್ತ ಕುಟುಂಬಗಳ ಮಕ್ಕಳು ಭೂಸ್ವಾಧೀನ ಪಡಿಸಿದ ಪ್ರದೇಶದಲ್ಲಿ ಹಲವಾರು ಯೋಜನೆಗಳು ಅಸ್ತಿತ್ವಕ್ಕೆ ಬಂದು ನಗರದ ಸಂಸ್ಕೃತಿ ತಳವೂರಲು ಪ್ರಾರಂಭಗೊಂಡ ನಂತರದಲ್ಲಿ ಅಪರಾಧ ಪ್ರಕರಣಗಳಲ್ಲಿ ತೊಡಗಿಸಿಕೊಳ್ಳಲು ಮತ್ತು ಮೋಸಗಾರರಾಗಿ ಕಾನೂನು ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸಲು ಕಾರಣವಾಯಿತು"[17] ಎಂಬ ಫಲಿತವನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಸ್ವಾಧೀನಪಡಿಸಿದ ಸಂತ್ರಸ್ತರ ಜೀವನಶೈಲಿಯನ್ನು ಅಧ್ಯಯನ ಮಾಡಿದಾಗ ಕೂಡಾ ಕಂಡುಬಂದಿರುವುದು ಗಮನಿಸಬೇಕಾದ ಅಂಶವಾಗಿರುತ್ತದೆ.

ಭೂಸ್ವಾಧೀನ ಮತ್ತು ಕೌಟುಂಬಿಕ ವಿಘಟನೆಗಳು

ಭಾರತದಲ್ಲಿ ಸಾಂಪ್ರದಾಯಿಕ ಕೌಟುಂಬಿಕ ವ್ಯವಸ್ಥೆಯು ಪಿತೃಪ್ರಧಾನವಾಗಿದ್ದು ಸಾಮಾನ್ಯವಾಗಿ ಹಿಂದೆ ಅವಿಭಕ್ತ ಕುಟುಂಬ ವ್ಯವಸ್ಥೆ ಹೆಚ್ಚಾಗಿ ಅಸ್ತಿತ್ವದಲ್ಲಿದ್ದುದನ್ನು ಸಮಾಜಶಾಸ್ತ್ರೀಯ ಅಧ್ಯಯನಗಳು ಕಂಡುಕೊಂಡಿವೆ. ಕೈಗಾರಿಕೀಕರಣ ಅವಿಭಕ್ತ ಕೌಟುಂಬಿಕ ವ್ಯವಸ್ಥೆಯ ಮೇಲೆ ಪರಿಣಾಮವನ್ನು ಬೀರಿ ಕುಟುಂಬಗಳ ವಿಘಟನೆಗೆ ಕಾರಣವಾಗಿರುತ್ತದೆಯೆಂದು ಸ್ಥಳಾಂತರಕ್ಕೆ ಸಂಬಂಧಿಸಿದ ಹೆಚ್ಚಿನ ಅಧ್ಯಯನಗಳು ವಿವರಿಸಿರುತ್ತವೆ.

ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಹೊಂದಿರುವ ಭೂಮಿ ಅವರುಗಳನ್ನು ಒಗ್ಗಟ್ಟಿನಲ್ಲಿರುವಂತೆ ಮಾಡುತ್ತದೆ. ಹೊಟ್ಟೆಪಾಡಿಗಾಗಿ ನಂಬಿಕೊಂಡು ಬಂದಿರುವ ಭೂಮಿ ವಿವಿಧ ಕಾರಣಗಳಿಗಾಗಿ ಕೈಬಿಟ್ಟು ಹೋದಾಗ ಕೌಟುಂಬಿಕ ಸಂಘರ್ಷ ಮತ್ತು ವಿಘಟನೆಗಳಿಗೆ ಕಾರಣವಾಗುತ್ತದೆ. ಕುಟುಂಬಗಳ ವಿಭಜನೆಯು ಸ್ವಾಭಾವಿಕ ಪ್ರಕ್ರಿಯೆಯಾಗಿದ್ದು ಕೈಗಾರಿಕೀಕರಣ ಕುಟುಂಬಗಳ ವಿಘಟನೆಯ ವೇಗವನ್ನು ಹೆಚ್ಚಿಸುತ್ತದೆ. ಕೈಗಾರಿಕೆಗಳ ಸ್ಥಾಪನೆಗಾಗಿ ಭೂಮಿಯನ್ನು ಸ್ವಾಧೀನಪಡಿಸುವಾಗ ಸಂತ್ರಸ್ತರಿಗೆ ನೀಡಲಾಗುವ ನಗದು ಪರಿಹಾರ ಮತ್ತು ಉದ್ಯೋಗಾವಕಾಶಗಳು ಕುಟುಂಬಗಳ ವಿಘಟನೆಗೆ ಮತ್ತು ಸಂಘರ್ಷಗಳಿಗೆ ಕಾರಣವಾಗಿ ವಿಭಕ್ತ ಕುಟುಂಬಗಳಾಗಿ ಬದಲಾಗುವುದಕ್ಕೆ ಹೇತುವಾಗುತ್ತದೆ[18] (ವಸುದಾ ಧಗಮಾವರ್, 2003). ಭೂಸ್ವಾಧೀನದ ಸಂದರ್ಭದಲ್ಲಿ ಎರಡು ಪ್ರಮುಖ ಕಾರಣಗಳಿಗೋಸ್ಕರ ಕೌಟುಂಬಿಕ ಘರ್ಷಣೆಗಳು ನಡೆಯಲ್ಪಟ್ಟವು. ಪ್ರಥಮವಾಗಿ ಯಾರ ಹೆಸರಿನಲ್ಲಿ ಅಧಿಕೃತವಾಗಿ ಭೂಮಿಯ ದಾಖಲೆಗಳು ಇರುತ್ತದೆಯೋ ಅವರಿಗೆ ನೇರವಾಗಿ ಪರಿಹಾರದ ಸೌಲಭ್ಯಗಳು ನೀಡಲಾಗುತ್ತಿದ್ದುದರಿಂದ ಭೂದಾಖಲೆಗಳಲ್ಲಿ ಅಧಿಕೃತವಾಗಿ ಹೆಸರು ಸೇರ್ಪಡೆಗೊಳಿಸಲು ಕುಟುಂಬದ ಸದಸ್ಯರಲ್ಲಿ ಜಗಳಗಳು ಆರಂಭವಾಯಿತು. ಈ ಸಮಸ್ಯೆ ಪರಿಹಾರವಾದ ನಂತರ ಪರಿಹಾರದ ಮೊತ್ತದ ಹಂಚಿಕೆಯ ಬಗ್ಗೆ ಸಂಘರ್ಷಗಳು ಆರಂಭವಾಯಿತು.[19] ಸ್ಥಳಾಂತರ ಮತ್ತು ಪುನರ್‌ವಸತಿಯ ಬಗ್ಗೆ ನಡೆಯಲ್ಪಟ್ಟ ಹೆಚ್ಚಿನ ಅಧ್ಯಯನಗಳು ಕೌಟುಂಬಿಕ ಘರ್ಷಣೆಗಳ ಬಗ್ಗೆ ಉಲ್ಲೇಖ ಮಾಡಿರುತ್ತದೆ. ಮನಿಷ್‌ಕುಮಾರ್ ವರ್ಮಾ (2004) ರವರು ಅಧ್ಯಯನ ಮಾಡಿದ ಎಸ್.ಟಿ.ಪಿ.ಸಿ. ಕಲ್ಲಿದ್ದಲು ವಿದ್ಯುತ್ ಸ್ಥಾವರ (ಸಿಂಗ್ರೋಲಿ, ಮಧ್ಯಪ್ರದೇಶ)ದ ಸಮೀಕ್ಷೆಗೆ ಒಳಪಡಿಸಿದ ಇನ್ನೂರೈವತ್ತು ಕುಟುಂಬಗಳಲ್ಲಿ 83(33.2%) ಕುಟುಂಬಗಳು ಪರಿಹಾರದ ಸಮರ್ಪಕ ವಿತರಣೆಗಾಗಿ ಕುಟುಂಬದ ಸದಸ್ಯರಲ್ಲಿ ಮನಸ್ತಾಪ ಏರ್ಪಟ್ಟಿದೆ[20] ಎಂದು ಒಪ್ಪಿಕೊಂಡಿರುವುದನ್ನು ತಿಳಿಸುತ್ತದೆ. ಜಾನಕೀರಾವ್ (2012) ಆಂಧ್ರಪ್ರದೇಶದ ವಿಶಾಖಪಟ್ಟಣಂ ಜಿಲ್ಲೆಯಲ್ಲಿ ಅಸ್ತಿತ್ವಕ್ಕೆ ಬಂದ ಸಿಂಹಾದ್ರಿ ಕಲ್ಲಿದ್ದಲು ವಿದ್ಯುತ್ ಸ್ಥಾವರದ ಭೂಸಂತ್ರಸ್ತರ ಅಧ್ಯಯನದಲ್ಲಿ ಪರಿಹಾರದ ಸೌಲಭ್ಯಗಳ ಸೂಕ್ತ ಹಂಚಿಕೆ ರಕ್ತ ಸಂಬಂಧಿಕರಲ್ಲಿ ಭಿನ್ನಾಭಿಪ್ರಾಯ ಮತ್ತು ಕೌಟುಂಬಿಕ ವಿಘಟನೆಗೆ ಕಾರಣವಾಗಿರುತ್ತದೆ ಎಂಬ ಅಂಶವನ್ನು ಬೆಟ್ಟು ಮಾಡಿರುತ್ತಾರೆ. ಜಾನಕೀರಾವ್‌ರವರು ತಮ್ಮ ಅಧ್ಯಯನದಲ್ಲಿ ಸಮೀಕ್ಷೆಗೊಳಪಡಿಸಿದ ನೂರೈವತ್ತಾರು

ಕುಟುಂಬಗಳಲ್ಲಿ ತೊಂಬತ್ತಮೂರು (59.6%) ಕುಟುಂಬಗಳ ನಡುವೆ ಪರಿಹಾರದ ಪ್ಯಾಕೇಜಿನ ಅಸಮರ್ಪಕ ಹಂಚಿಕೆ ಕೌಟುಂಬಿಕ ಸಂಘರ್ಷಗಳಿಗೆ ಕಾರಣವಾಗಿರುತ್ತದೆ[21] ಎಂಬುದನ್ನು ವಿವರಿಸಿರುತ್ತಾರೆ.

ಕೋಷ್ಟಕ–3.13: ಭೂಸ್ವಾಧೀನದಿಂದ ಕೌಟುಂಬಿಕ ವಿಘಟನೆಗಳಾಗಿರುತ್ತದೆಯೇ?

ಕ್ರ.ಸಂ	ಉತ್ತರ	ಸಂಖ್ಯೆ	ಶೇಕಡಾ
1	ಹೌದು	127	51
2	ಇಲ್ಲ	123	49
	ಒಟ್ಟು	250	100
ಹೌದಾದರೆ, ಕಾರಣಗಳು			
1	ಪರಿಹಾರದ ಹಣದಲ್ಲಿನ ಹಂಚಿಕೆಯ ಭಿನ್ನಾಭಿಪ್ರಾಯ + ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೇರೆಡೆಗೆ ಹೋಗುವ ಅನಿವಾರ್ಯತೆ + ಪುನರ್ವಸತಿ ಕಾಲನಿಯಲ್ಲಿ ವಸತಿಯ ಅಲಭ್ಯತೆ + ಉದ್ಯೋಗ ನಷ್ಟ	43	17
2	ಪರಿಹಾರದ ಹಣದಲ್ಲಿನ ಹಂಚಿಕೆಯ ಭಿನ್ನಾಭಿಪ್ರಾಯ + ಅವಗಣನೆ	84	34
	ಒಟ್ಟು	127	51

ಮೇಲಿನ ಅಧ್ಯಯನಗಳ ಫಲಿತಗಳನ್ನು ಪ್ರಸ್ತುತ ಯೋಜನೆಯ ಸಂತ್ರಸ್ತರ ಕುಟುಂಬಗಳಿಗೂ ತಾಳೆಯಾಗುತ್ತವೆಯೇ? ಎಂದು ತುಲನಾತ್ಮಕವಾಗಿ ಅಧ್ಯಯನ ನಡೆಸಲಾಗಿರುತ್ತದೆ. ಯೋಜನೆಗಳು ತನ್ನೊಂದಿಗೆ ತರುವ ನಗರೀಕರಣ ಪ್ರಕ್ರಿಯೆ ಮತ್ತು ಸಂತ್ರಸ್ತರ ಪುನರ್‌ವಸತಿ ಪ್ಯಾಕೇಜ್‌ಗಳು ಬೇರೆ ಬೇರೆ ರೀತಿ ಮತ್ತು ಹಂತಗಳಲ್ಲಿ ಕೌಟುಂಬಿಕ ವಿಘಟನೆಗಳಿಗೆ ಕಾರಣವಾಗುತ್ತದೆ. ಸಂದರ್ಶಿತ ಇನ್ನೂರೈವತ್ತು ಮಾದರಿ ಗಾತ್ರದಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಸ್ವಾಧೀನವಾಗುವ ಪೂರ್ವದಲ್ಲಿ 89% ವಿಭಕ್ತ ಹಾಗೂ 11% ಅವಿಭಕ್ತ ಕುಟುಂಬಗಳಾಗಿದ್ದವು. ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಅಧಿಸೂಚನೆ ಹೊರಡಿಸಲ್ಪಟ್ಟ ಸಂದರ್ಭದಲ್ಲಿ ಪರಿಹಾರದ ಹಣದ ಹಂಚಿಕೆಗೆ ಸಂಬಂಧಪಟ್ಟಂತೆ ಘರ್ಷಣೆಗಳು ಆರಂಭವಾಯಿತು. ಸಂದರ್ಶಿತ 51% ಮಾಹಿತಿದಾರರು ಭೂಸ್ವಾಧೀನದ ನಂತರದಲ್ಲಿ ನೀಡಿದ ಪರಿಹಾರಗಳು ರಕ್ತ ಸಂಬಂಧಿಕರಲ್ಲಿ ವಿಶೇಷವಾಗಿ ಅಣ್ಣ ತಮ್ಮಂದಿರು ಮತ್ತು ತಂದೆ ಮಕ್ಕಳ ನಡುವೆ ಪರಿಹಾರದ ಹಣದ ಹಂಚಿಕೆಗೆ ಸಂಬಂಧಪಟ್ಟಂತೆ ಘರ್ಷಣೆಗಳಿಗೆ ಕಾರಣವಾಗಿ ಒಟ್ಟಾಗಿ ವಾಸಿಸುತ್ತಿದ್ದ ಕುಟುಂಬದ ಸದಸ್ಯರ ನಡುವೆ ವೈಮನಸ್ಸಿಗೆ ಕಾರಣವಾಯಿತು. ಈ ಘರ್ಷಣೆಗಳು ಹಿಂದೆ ಇದ್ದಂತಹ ಸೌಹಾರ್ದಯುತ ಸಂಬಂಧಗಳನ್ನು ಅಳಿಸಿ ಹಾಕಿ ರಕ್ತಸಂಬಂಧಿಗಳನ್ನು ದಾಯಾದಿಗಳನ್ನಾಗಿ ಮಾಡಿತು ಎಂದು ತಿಳಿಸಿದ್ದು, ಪುನರ್‌ವಸತಿ ನೀತಿಯಂತೆ ಸಂತ್ರಸ್ತ ಕುಟುಂಬಗಳಿಗೊಂದು ಉದ್ಯೋಗವೆಂಬ ಪರಿಹಾರದ ನೀತಿ ಕುಟುಂಬದ ಸದಸ್ಯರೊಳಗೆ ಸಂಘರ್ಷಕ್ಕೆ ಕಾರಣವಾಗಿರುವುದು ಕಂಡುಬಂದಿರುತ್ತದೆ.

ಭೂಮಿಯ ಮಾಲಕತ್ವದ ದಾಖಲೆಗಳಿಗೆ ಸಂಬಂಧಪಟ್ಟಂತೆ, ಪರಿಹಾರದ ಹಣದ ಹಂಚಿಕೆಯ ಬಗೆಗಿನ ಭಿನ್ನಾಭಿಪ್ರಾಯಗಳು, ಮಕ್ಕಳ ಮತ್ತು ಆಶ್ರಿತರ ವಿದ್ಯಾಭ್ಯಾಸಕ್ಕಾಗಿ ಬೇರೆ ಕಡೆಗೆ ಹೋಗುವ ಅನಿವಾರ್ಯತೆ,

ಉದ್ಯೋಗ ನಷ್ಟ ಮತ್ತು ಪುನರ್‌ವಸತಿ ಕಾಲನಿಗಳಲ್ಲಿ ವಸತಿಯ ಅಲಭ್ಯತೆಯಿಂದಾಗಿ ಬೇರೆ ಪ್ರದೇಶಕ್ಕೆ ಹೋಗುವ ಪ್ರಮೇಯ ಸೃಷ್ಟಿಯಾಯಿತು ಎಂಬುವುದು ನಲ್ವತ್ತಮೂರು (17%) ಸಂತ್ರಸ್ತರ ಅಭಿಪ್ರಾಯವಾಗಿತ್ತು. ಪರಿಹಾರದ ಹಣದಲ್ಲಿನ ಹಂಚಿಕೆಯ ಭಿನ್ನಾಭಿಪ್ರಾಯ ಹಾಗೂ ಕುಟುಂಬದ ಸದಸ್ಯರಿಂದ ಅವಗಣನೆಗೆ ಒಳಗಾಗಿ ಬೇರೆ ಪ್ರದೇಶಕ್ಕೆ ವಸತಿಯನ್ನು ಬದಲಾಯಿಸಬೇಕಾಯಿತು ಎಂಬುದಾಗಿ ಎಂಬತ್ತನಾಲ್ಕು 34%) ಸಂತ್ರಸ್ತರು ವಿವರಿಸಿದರು.

ಪರಿಹಾರ ಮತ್ತು ಪುನರ್‌ವಸತಿ ನೀತಿಯಿಂದಾಗಿ ಉದ್ಯೋಗವನ್ನು ಪಡೆದುಕೊಂಡ ಸಂತ್ರಸ್ತ ಕುಟುಂಬದ ಹೆಣ್ಣುಮಕ್ಕಳು ನಂತರದಲ್ಲಿ ಮದುವೆಯಾಗಿ ತಮ್ಮ ವೃದ್ಧ ತಂದೆ ತಾಯಿಯರನ್ನು ಪುನರ್‌ವಸತಿ ಕಾಲನಿಗಳಲ್ಲಿ ಬಿಟ್ಟು ಹೋಗಿರುವುದು, ಇದರಿಂದಾಗಿ ಪೋಷಕರು ತಮ್ಮ ದಿನನಿತ್ಯದ ಖರ್ಚು ವೆಚ್ಚಗಳಿಗೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಪರಿಹಾರದ ರೂಪದಲ್ಲಿ ಉದ್ಯೋಗವನ್ನು ಪಡೆದುಕೊಂಡ ಯುವಕರು ಪ್ರತ್ಯೇಕವಾಗಿ ವಾಸಿಸುತ್ತಿದ್ದು ತಮ್ಮ ಪೋಷಕರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಉದಾಹರಣೆಗಳು ಯೋಜನೆಯ ಸಂತ್ರಸ್ತರ ಕುಟುಂಬಗಳಲ್ಲಿ ಕಂಡುಬರುತ್ತಿದೆಯೆಂದು ಮಂಗಳೂರು ವಿಶೇಷ ಆರ್ಥಿಕ ವಲಯದಿಂದಾಗಿ ಭೂಮಿಯನ್ನು ಕಳೆದುಕೊಂಡು ಕುಳಾಯಿ ಕೋಡಿಕೆರೆಯ ಪುನರ್‌ವಸತಿ ಕಾಲನಿಯಲ್ಲಿ ವಾಸಿಸುತ್ತಿರುವ ಪುರುಷೋತ್ತಮ ಪೂಜಾರಿಯವರು (ಹೆಸರು ಬದಲಾಯಿಸಲಾಗಿದೆ) ತಿಳಿಸಿ, ಯೋಜನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ ಕುಟುಂಬಗಳ ಒಬ್ಬ ಸದಸ್ಯರಿಗೆ ಸ್ಥಾಪನೆಗೊಂಡ ಕೈಗಾರಿಕೆಗಳಲ್ಲಿ ಉದ್ಯೋಗ ನೀಡುವ ವ್ಯವಸ್ಥೆಯನ್ನೇ ಪ್ರಶ್ನಿಸಿರುತ್ತಾರೆ. ಸಂತ್ರಸ್ತ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡಿದ ತಕ್ಷಣದಲ್ಲಿ ಸಂತ್ರಸ್ತ ಕುಟುಂಬದ ಆರ್ಥಿಕ ಸ್ವಾವಲಂಬನೆ, ಸಬಲೀಕರಣ ಸಾಧ್ಯವಾಗುವುದಿಲ್ಲ. ಬದಲಾಗಿ ಮತ್ತಷ್ಟು ಸಾಮಾಜಿಕ ಸಮಸ್ಯೆಗಳು ಹುಟ್ಟಿಕೊಳ್ಳುವ ಸಾಧ್ಯತೆಗಳಿರುತ್ತದೆ. ಇದರಿಂದಾಗಿ ಕೌಟುಂಬಿಕ ಸಂಘರ್ಷಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿ ರಕ್ತಸಂಬಂಧಿಗಳು ದಾಯಾದಿಗಳಂತೆ ವರ್ತಿಸುವುದಕ್ಕೆ ಕಾರಣವಾಗುತ್ತಿದೆಯೆಂಬ ಇತರ ಅಧ್ಯಯನಗಳ ಫಲಿತಗಳನ್ನು ಪ್ರಸ್ತುತ ಅಧ್ಯಯನಕ್ಕೆ ತುಲನೆ ಮಾಡಿದಾಗ ಯಾವುದೇ ಪ್ರದೇಶದಲ್ಲಿಯೂ ಜಾತಿ, ಮತ ಮತ್ತು ಅಂತಸ್ತುಗಳ ಭೇದಭಾವವಿಲ್ಲದೇ ಪರಿಹಾರದ ಹಣದ ಹಂಚಿಕೆಗಾಗಿ ಕುಟುಂಬದ ಸದಸ್ಯರಲ್ಲಿ ಘರ್ಷಣೆಯಾಗುವುದು ಸಾಮಾನ್ಯ ಅಂಶವಾಗಿರುತ್ತದೆ ಎಂಬ ಕಂಡುಕೊಳ್ಳುವಿಕೆಯು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿಯೂ ಸಂತ್ರಸ್ತರ ಕುಟುಂಬಗಳಲ್ಲಿ ವೈಮನಸ್ಸು, ಘರ್ಷಣೆಗೆ ಕಾರಣವಾಗಿರುವುದು ಅಧ್ಯಯನದ ಪ್ರಮುಖ ಫಲಿತಗಳಲ್ಲಿ ಒಂದಾಗಿರುತ್ತದೆ.

ಪುನರ್‌ವಸತಿ ಮತ್ತು ಮೂಲಭೂತ ಸೌಲಭ್ಯಗಳ ಲಭ್ಯತೆ

ಕೋಷ್ಟಕ–3.14: ಪುನರ್‌ವಸತಿ ಪ್ರದೇಶದಲ್ಲಿ ದೊರಕುವ ಸೌಲಭ್ಯಗಳ ಬಗ್ಗೆ ನಿಮಗೆ ತೃಪ್ತಿ ಇದೆಯೇ?

ಕ್ರ.ಸಂ	ಉತ್ತರ	ಸಂ್ಯ	ಶೇ.
1	ಇದೆ	20	8
2	ಇಲ್ಲ	220	88
3	ಸ್ವಲ್ಪ ಮಟ್ಟಿಗೆ	10	4
	ಒಟ್ಟು	**250**	**100**
ಇಲ್ಲವಾದರೆ, ಕಾರಣಗಳು			
1	ಸೌಲಭ್ಯಗಳು ದೂರ ಇದೆ + ಹೆಚ್ಚಿನ ಖರ್ಚು + ಮಾನವ ಸಂಪನ್ಮೂಲಗಳ ಲಭ್ಯತೆ ಇಲ್ಲ + ಮೂಲಭೂತ ಸೌಲಭ್ಯಗಳ ಅಲಭ್ಯತೆ (ನೀರು, ವಿದ್ಯುತ್, ಆಸ್ಪತ್ರೆ, ಮಾರುಕಟ್ಟೆ)	180	72
2	ಮಾನವ ಸಂಪನ್ಮೂಲಗಳ ಲಭ್ಯತೆ ಇಲ್ಲ + ಸಾರಿಗೆ ವ್ಯವಸ್ಥೆ ಸಮರ್ಪಕವಾಗಿಲ್ಲ	40	16
	ಒಟ್ಟು	**220**	**88**

ಸಂತ್ರಸ್ತರ ಸ್ಥಿತಿ ಭೂಸ್ವಾಧೀನವಾದ ನಂತರ ಹೆಚ್ಚು ಹದಗೆಡುತ್ತಾ ಹೋಗುತ್ತಿರುವುದರ ಕಾರಣಗಳ ಬಗೆಗೆ ಅಧ್ಯಯನವು ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುತ್ತದೆ. ಪುನರ್‌ವಸತಿ ಕಾಲನಿಗಳಲ್ಲಿ ನೀಡಿದ ಸೌಲಭ್ಯಗಳು ಇತರ ಎಲ್ಲಾ ಅಭಿವೃದ್ಧಿ ಯೋಜನೆಗಳ ಭೂಸಂತ್ರಸ್ತರಿಗಿಂತ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಸಂತ್ರಸ್ತರಿಗೆ ನೀಡಿದ ಸೌಲಭ್ಯಗಳು ಅತ್ಯುತ್ತಮವಾಗಿರುತ್ತದೆ ಎಂದು ಯೋಜನೆಯ ಪ್ರವರ್ತಕರು ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಈ ಸೌಲಭ್ಯಗಳು ಪುನರ್‌ವಸತಿ ಪ್ರದೇಶದಲ್ಲಿ ವಾಸಿಸುತ್ತಿರುವ ಸಂತ್ರಸ್ತರ ಜೀವನ ಮಟ್ಟವನ್ನು ಸುಧಾರಿಸಿದೆಯೇ ಹಾಗೂ ಇವುಗಳ ಸಂತ್ರಸ್ತರಿಗೆ ತೃಪ್ತಿ ನೀಡಿರುತ್ತದೆಯೇ ಎಂಬುದರ ಬಗ್ಗೆ ಅಧ್ಯಯನವನ್ನು ನಡೆಸಿದಾಗ ತೃಪ್ತಿ ತಂದಿರುತ್ತದೆ ಎಂದು ಇಪ್ಪತ್ತು (8%) ಮಾಹಿತಿದಾರರು ಪ್ರತಿಕ್ರಿಯಿಸಿದರೆ, ತೃಪ್ತಿ ತಂದಿರುವುದಿಲ್ಲ ಎಂಬ ಮಾತನ್ನು ಇನ್ನೂರಇಪ್ಪತ್ತು (88%) ಸಂದರ್ಶಿತರು ವ್ಯಕ್ತಪಡಿಸಿ, ಸ್ವಲ್ಪ ಮಟ್ಟಿಗೆ ತೃಪ್ತಿಯನ್ನು ತಂದಿರುತ್ತದೆ ಎಂಬುದಾಗಿ ಹತ್ತು (4%) ಮಾಹಿತಿದಾರರು ಪ್ರತಿಕ್ರಿಯೆ ವ್ಯಕ್ತಪಡಿಸಿರುತ್ತಾರೆ. ಪುನರ್‌ವಸತಿ ಪ್ರದೇಶಗಳಲ್ಲಿ ಆಧುನಿಕ ಮೂಲಭೂತ ಸೌಲಭ್ಯಗಳಾದ ವಿದ್ಯುತ್, ನೀರು, ಒಳಚರಂಡಿ, ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸಮರ್ಪಕ ವ್ಯವಸ್ಥೆ ಇಲ್ಲದಿರುವುದು, ಮಾನವ ಸಂಪನ್ಮೂಲಗಳು ದೊರಕದೆ ಇರುವುದು, ನಗರದಿಂದ ದೂರ ಇರುವ ಕಾರಣ ಹಾಗೂ ಜೀವನಾವಶ್ಯಕ ವಸ್ತುಗಳಿಗಾಗಿ ದೂರದ ಸುರತ್ಕಲ್ ಅಥವಾ ಮಂಗಳೂರು ನಗರಕ್ಕೆ ಹೋಗಿ ಬರಬೇಕಾಗಿರುವುದರಿಂದ ಹೆಚ್ಚಿನ ಖರ್ಚನ್ನು ತರುತ್ತಿರುವುದರಿಂದಾಗಿ ಸೌಲಭ್ಯಗಳ ಬಗ್ಗೆ ತೃಪ್ತಿ ಇಲ್ಲ ಎಂದು ನೂರಎಂಬತ್ತು (72%) ಸಂತ್ರಸ್ತರು ಪ್ರತಿಕ್ರಿಯಿಸಿದರೆ ಸಾರಿಗೆ ವ್ಯವಸ್ಥೆ ಸಮರ್ಪಕವಾಗಿಲ್ಲದೆ ಇರುವುದು ಹಾಗೂ ಅಗತ್ಯದ ಕಾರ್ಯಗಳನ್ನು ನಿರ್ವಹಿಸಲು ಮಾನವ ಸಂಪನ್ಮೂಲಗಳ ಲಭ್ಯತೆ ಇಲ್ಲದೆ ಇರುವುದು ಅತೃಪ್ತಿಗೆ ಕಾರಣವಾಗಿರುತ್ತದೆ ಎಂದು ನಲವತ್ತು (16%) ಜನರು ಪ್ರತಿಕ್ರಿಯಿಸಿರುತ್ತಾರೆ.

ಸ್ಥಳಾಂತರ ಮತ್ತು ಧಾರ್ಮಿಕ ಆಚರಣೆಗಳು

ಕೋಷ್ಟಕ–3.15: ಸ್ಥಳಾಂತರ ನಿಮ್ಮ ಧಾರ್ಮಿಕ ಆಚರಣೆಗಳ ಮೇಲೆ ಪ್ರಭಾವ ಬೀರಿದೆಯೇ?

ಕ್ರಸಂ	ಉತ್ತರ	ಸಂಖ್ಯೆ	ಶೇಕಡಾ
1	ಪ್ರಭಾವ ಬೀರಿರುತ್ತದೆ	200	80
2	ಪ್ರಭಾವ ಬೀರಿರುವುದಿಲ್ಲ	50	20
	ಒಟ್ಟು	250	100
ಹೌದಾದರೆ, ಕಾರಣಗಳು			
1	ಪ್ರಾರ್ಥನಾ ಮಂದಿರಗಳು ನಾಶಮಾಡಲ್ಪಟ್ಟಿವೆ	8	3
2	ಪುನರ್ವಸತಿ ಪ್ರದೇಶಗಳಿಗೆ ಸ್ಥಳಾಂತರಿಸಲ್ಪಟ್ಟಿರುತ್ತದೆ	175	70
3	ಹೊಸ ಪ್ರದೇಶದಲ್ಲಿ ಸಾಮೂಹಿಕ ಧಾರ್ಮಿಕ ಆಚರಣೆಗಳಿಗೆ ಅವಕಾಶವಿಲ್ಲ	17	7
	ಒಟ್ಟು	200	80

ಧಾರ್ಮಿಕ ಚಟುವಟಿಕೆಗಳು ಜನರ ಜೀವನ ಕ್ರಮದ ಮೇಲೆ ಪ್ರಮುಖ ಪರಿಣಾಮಗಳನ್ನು ಬೀರುತ್ತದೆ. ಸ್ಥಳಾಂತರ ಪ್ರಕ್ರಿಯೆಯಿಂದ ಜನರು ಹಿಂದಿನಿಂದ ನಂಬಿಕೊಂಡು ಬಂದ ಹಾಗೂ ಆರಾಧಿಸುತ್ತಿದ್ದ ದೈವ, ದೇವಸ್ಥಾನಗಳು ಹೊಸ ಪ್ರದೇಶಗಳಿಗೆ ಸ್ಥಳಾಂತರಿಸಲ್ಪಡುತ್ತದೆ. ಸ್ಥಳಾಂತರ ಜನರ ಧಾರ್ಮಿಕ ನಂಬಿಕೆಗಳ ಮೇಲೆ ಪ್ರಭಾವ ಮತ್ತು ಪರಿಣಾಮವನ್ನು ಯಾವ ರೀತಿಯಲ್ಲಿ ಬೀರಿರುತ್ತದೆ ಎಂಬುವುದನ್ನು ಅಧ್ಯಯನದ ಸಂದರ್ಭದಲ್ಲಿ ಜನರನ್ನು ಪ್ರಶ್ನಿಸುವ ಮೂಲಕ, ಅವರ ಜತೆಯಲ್ಲಿ ಸಂಶೋಧಕನು ನೇರವಾಗಿ ಬೆರೆಯುವುದರ ಮೂಲಕ ಹಾಗೂ ವೈಜ್ಞಾನಿಕವಾಗಿ ವೀಕ್ಷಣೆಯನ್ನು ಮಾಡುವುದರ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸಲಾಗಿರುತ್ತದೆ. ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ ಇನ್ನೂರು (80%) ಸಂತ್ರಸ್ತರು ಸ್ಥಳಾಂತರ ನಮ್ಮ ಧಾರ್ಮಿಕ ನಂಬಿಕೆ ಹಾಗೂ ಆಚರಣೆಗಳ ಮೇಲೆ ಪ್ರಭಾವ ಬೀರಿದೆ ಎಂದು ಅಭಿಪ್ರಾಯಪಟ್ಟರೆ ಯಾವುದೇ ಪರಿಣಾಮವಾಗಿಲ್ಲ ಎಂಬುದಾಗಿ ಐವತ್ತು (20%) ಸಂತ್ರಸ್ತರು ಪ್ರತಿಕ್ರಿಯಿಸಿರುತ್ತಾರೆ. ಧಾರ್ಮಿಕ ಕ್ಷೇತ್ರಗಳು ಪುನರ್‌ವಸತಿ ಪ್ರದೇಶಗಳಿಗೆ ಸ್ಥಳಾಂತರಿಸಲ್ಪಟ್ಟರೂ ಹಿಂದಿನ ರೀತಿಯಲ್ಲಿ ಭಕ್ತಿಯಿಂದ ಆಚರಣೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ನೂರಎಪ್ಪತ್ತೈದು ಸಂತ್ರಸ್ತರು ಅಭಿಪ್ರಾಯಪಟ್ಟರೆ, ಹೊಸ ಪ್ರದೇಶದಲ್ಲಿ ಸಾಮೂಹಿಕ ಆಚರಣೆಗಳನ್ನು ನಡೆಸುವುದಕ್ಕೆ ಸಾಕಷ್ಟು ಸ್ಥಳಾವಕಾಶ ಮತ್ತು ವ್ಯವಸ್ಥೆಗಳು ಇಲ್ಲದ್ದರಿಂದ ಸಾಧ್ಯವಾಗುತ್ತಿಲ್ಲ ಎಂದು ಹದಿನೇಳು ಸಂತ್ರಸ್ತರು ಬೇಸರ ವ್ಯಕ್ತಪಡಿಸಿದರೆ, ಪೂಜಾ ಮತ್ತು ಪ್ರಾರ್ಥನಾ ಮಂದಿರಗಳು ನಾಶ ಮಾಡಲ್ಪಟ್ಟ ಕಾರಣಗಳಿಂದಾಗಿ ಧಾರ್ಮಿಕ ಆಚರಣೆಗಳು ಸಾಧ್ಯವಾಗುತ್ತಿಲ್ಲ ಎಂದು ಎಂಟು (3%) ಜನರು ತಿಳಿಸಿರುತ್ತಾರೆ.

ಕೋಷ್ಟಕ–3.16: ಸ್ಥಳಾಂತರವು ಮಹಿಳೆಯರ ಬದುಕಿನ ಮೇಲೆ ಪ್ರಭಾವ ಬೀರಿರುತ್ತದೆಯೇ?

ಕ್ರ.ಸಂ	ಉತ್ತರ	ಸಂಖ್ಯೆ	ಶೇಕಡಾ
1	ಹೌದು	169	68
2	ಇಲ್ಲ	81	32
	ಒಟ್ಟು	**250**	**100**
ಹೌದಾದರೆ, ಕಾರಣಗಳು			
1	ನಿರ್ಲಕ್ಷ್ಯಕ್ಕೆ ಒಳಗಾಗಿರುವುದು + ಉದ್ಯೋಗಕ್ಕೆ ಸೇರ್ಪಡೆಯಾಗುವ ಅನಿವಾರ್ಯತೆ + ಆರೋಗ್ಯದ ಸಮಸ್ಯೆಯ ಹೆಚ್ಚಳ + ಖಿನ್ನತೆಗೆ ಒಳಗಾಗಿರುವುದು	70	28
2	ಸ್ವಸಹಾಯ ಗುಂಪುಗಳ ರಚನೆ + ಸ್ವ ಉದ್ಯೋಗದ ಆರಂಭ + ಆರ್ಥಿಕ ಸಬಲೀಕರಣ ಸಾಧ್ಯವಾಗಿದೆ	50	20
3	ಆರೋಗ್ಯ ಸಮಸ್ಯೆಯ ಹೆಚ್ಚಳ + ನೆರೆಹೊರೆಯ ಸಂಬಂಧಕ್ಕೆ ಧಕ್ಕೆ + ಶೋಷಣೆಗೆ ಗುರಿಯಾಗಿರುವುದು	49	20
	ಒಟ್ಟು	**169**	**68**

ಕೃಷಿ ಭೂಮಿಗಳು ಕೈಗಾರಿಕೆಗಳ ಸ್ಥಾಪನೆಗೋಸ್ಕರ ಸ್ವಾಧೀನಕ್ಕೊಳಗಾದಾಗ ಮತ್ತು ಗ್ರಾಮೀಣ ಪರಿಸರ ನಾಶವಾದಾಗ ಮಹಿಳೆ ತನ್ನ ಸಾಂಪ್ರದಾಯಿಕ ಉದ್ಯೋಗವನ್ನು ಕಳೆದುಕೊಳ್ಳುತ್ತಾಳೆ. ಕುಟುಂಬದ ಮಹಿಳಾ ಸದಸ್ಯರು ಸ್ವಾವಲಂಬಿಗಳಾಗಿ ಬದುಕುತ್ತಿದ್ದವರು ಹೊಸ ಪರಿಸರದಲ್ಲಿ ಯಾವುದೇ ಉದ್ಯೋಗವಿಲ್ಲದೆ ಪುರುಷರಿಗೆ ಅವಲಂಬಿತರಾಗಿ ಬಾಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ನಿಟ್ಟಿನಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಸ್ವಾಧೀನಪಡಿಸಿದ ಸಂದರ್ಭದಲ್ಲಿ ಅದು ಯಾವ ರೀತಿಯಲ್ಲಿ ಮಹಿಳೆಯರ ಬದುಕಿನ ಮೇಲೆ ಪ್ರಭಾವ ಬೀರಿತು ಎಂದು ಅಧ್ಯಯನದ ಸಂದರ್ಭದಲ್ಲಿ ಅವಲೋಕಿಸಿದಾಗ ಜೀವನದ ಮೇಲೆ ಪ್ರಭಾವ ಬೀರಿದೆ ಎಂದು ನೂರಅರವತ್ತೊಂಬತ್ತು (68%) ಮಾಹಿತಿದಾರರು ಅಭಿಪ್ರಾಯ ವ್ಯಕ್ತಪಡಿಸಿದರೆ ಸ್ಥಳಾಂತರದಿಂದಾಗಿ ಯಾವುದೇ ಬದಲಾವಣೆಗಳಾಗಲಿಲ್ಲ ಎಂದು ಎಂಬತ್ತೊಂದು (32%) ಸಂತ್ರಸ್ತರು ಅಭಿಪ್ರಾಯಪಟ್ಟಿರುತ್ತಾರೆ. ಎಪ್ಪತ್ತು (28%) ಸಂತ್ರಸ್ತರ ಪ್ರಕಾರ ಸ್ಥಳಾಂತರದಿಂದ ಮಹಿಳೆ ತನ್ನ ಸಾಂಪ್ರದಾಯಿಕ ಪಾತ್ರವನ್ನು ಕಳೆದುಕೊಂಡು ನಗರ ಪ್ರದೇಶದಲ್ಲಿ ತನ್ನ ಕುಟುಂಬದ ಸದಸ್ಯರಿಂದಲೇ ನಿರ್ಲಕ್ಷಕ್ಕೊಳಗಾಗಬೇಕಾಯಿತು. ಕುಟುಂಬದ ಪುರುಷ ಸದಸ್ಯ ಸ್ಥಳಾಂತರದಿಂದ ಉದ್ಯೋಗವನ್ನು ಕಳೆದುಕೊಂಡ ಸಂದರ್ಭದಲ್ಲಿ ಮಹಿಳೆ ಉದ್ಯೋಗಕ್ಕೆ ಸೇರ್ಪಡೆಯಾಗಿ ಕೌಟುಂಬಿಕ ಜವಾಬ್ದಾರಿಯನ್ನು ಹೊರುವ ಒತ್ತಡ, ಪರಿಸರ ಬದಲಾವಣೆ ಹಾಗೂ ಹೆಚ್ಚುತ್ತಿರುವ ಜವಾಬ್ದಾರಿಯಿಂದಾಗಿ ಆರೋಗ್ಯದ ಸಮಸ್ಯೆಯೂ ಹೆಚ್ಚಾಗಿ ಖಿನ್ನತೆಗೆ ಒಳಗಾಗುವ ಸಂದರ್ಭ ಬಲವಂತವಾಗಿ ನಿರ್ಮಾಣವಾಯಿತು ಎಂದು ತಮ್ಮ ಆಕ್ರೋಶವನ್ನು

ವ್ಯಕ್ತಪಡಿಸಿದರು. ಆರೋಗ್ಯ ಸಮಸ್ಯೆಯಲ್ಲಿ ಹೆಚ್ಚಳ, ನೆರೆಹೊರೆಯ ಸಂಬಂಧಕ್ಕೆ ಧಕ್ಕೆ ಬಂದು ಮಹಿಳೆಯರ ಶೋಷಣೆಯ ಪ್ರಮಾಣದಲ್ಲಿ ಹೆಚ್ಚಳವಾಯಿತು ಎಂಬ ಮಾತನ್ನು ನಲವತ್ತೊಂಬತ್ತು (20%) ಸಂತ್ರಸ್ತರು ವ್ಯಕ್ತಪಡಿಸಿರುತ್ತಾರೆ.

ಸ್ಥಳಾಂತರದ ಪರಿಣಾಮವಾಗಿ ಪುನರ್‌ವಸತಿ ಪ್ರದೇಶಗಳಲ್ಲಿ ಮಹಿಳೆಯರ ಸಕಾರಾತ್ಮಕ ಬೆಳವಣಿಗೆಗೂ ಇದು ಕಾರಣವಾಯಿತು ಎಂದು ಐವತ್ತು (20%) ಮಾಹಿತಿದಾರರು ಅಭಿಪ್ರಾಯ ವ್ಯಕ್ತಪಡಿಸಿ ಬದಲಾದ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವುದಕ್ಕೋಸ್ಕರ ಮಹಿಳೆಯರು ಸ್ವಸಹಾಯ ಗುಂಪುಗಳನ್ನು ರಚಿಸಿ, ಪುನರ್‌ವಸತಿ ಕಾಲನಿಗಳಲ್ಲಿ ಸ್ವಉದ್ಯೋಗವನ್ನು ಆರಂಭಿಸಿ ತನ್ನ ಕುಟುಂಬದ ಅಗತ್ಯಗಳನ್ನು ಪೂರೈಸಲು ಸಹಕಾರ ನೀಡಲಾರಂಭಿಸಿದರು. ಇದರಿಂದಾಗಿ ಮಹಿಳೆಯರ ಆರ್ಥಿಕ ಸಬಲೀಕರಣ ಸಾಧ್ಯವಾಯಿತು ಎಂದಿದ್ದಾರೆ. ಪುನರ್‌ವಸತಿ ಪ್ರದೇಶಗಳಲ್ಲಿ ಸಂಚರಿಸಿದಾಗ ಮಹಿಳೆಯರು ಚಿಕ್ಕ ಅಂಗಡಿ, ಹೊಲಿಗೆ ಮತ್ತು ಇತರ ಚಿಕ್ಕ ಪುಟ್ಟ ವ್ಯವಹಾರಗಳನ್ನು ನಡೆಸಿ ಸಂಪಾದನೆಯಲ್ಲಿ ತೊಡಗಿರುವುದನ್ನು ಗಮನಿಸಲಾಗಿರುತ್ತದೆ.

ಸ್ಥಳಾಂತರ ಮತ್ತು ಹೊಸ ನೆಲೆಯಲ್ಲಿ ಬದುಕನ್ನು ಪುನರ್‌ನಿರ್ಮಿಸುವುದು ವಿಶೇಷವಾಗಿ ಮಹಿಳೆಯರಿಗೆ ಮಾನಸಿಕ ವೇದನೆ ಮತ್ತು ಭಾವನಾತ್ಮಕ ಒತ್ತಡವನ್ನು ಸೃಷ್ಟಿ ಮಾಡುತ್ತದೆ. ಹೊಸ ಪ್ರದೇಶದಲ್ಲಿ ಕುಟುಂಬದ ಪುರುಷ ಸದಸ್ಯರು ಉದ್ಯೋಗ ಹಾಗೂ ಇತರ ಕಾರಣಗಳಿಗೋಸ್ಕರ ಹೆಚ್ಚು ಸಮಯ ಮನೆಯಿಂದ ಹೊರಗೆ ಇರುವುದರಿಂದ ಮಹಿಳೆಯರಿಗೆ ಅಪರಿಚಿತ ಪ್ರದೇಶದಲ್ಲಿ ಹೊಂದಾಣಿಕೆಯನ್ನು ಮಾಡುವುದು ಸಹಜವಾಗಿ ದೊಡ್ಡ ಸಮಸ್ಯೆಯಾಗುತ್ತದೆ. ತುಕ್ರಾಲ್‌ರವರ ಪ್ರಕಾರ ಆರೋಗ್ಯ, ಶುಚಿತ್ವ ಮತ್ತು ಶೌಚಾಲಯಗಳ ಅವ್ಯವಸ್ಥೆ ಸ್ಥಳಾಂತರಗೊಂಡ ಮಹಿಳೆಯರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಯಾಗಿರುತ್ತದೆ[22] ಎಂದಿದ್ದಾರೆ. ವಿಶೇಷವಾಗಿ ಈ ಸಮಸ್ಯೆ ಮಹಿಳೆಯರಿಗೆ ಹೆಚ್ಚು ಸಂಬಂಧಪಟ್ಟದಾದುದರಿಂದ ಯಾವುದೇ ರೀತಿಯ ಪ್ರಮುಖ ಪ್ರಾಶಸ್ತ್ಯ ಇದಕ್ಕೆ ಸಿಗುವುದಿಲ್ಲ. ಸಿಂಗ್ರೋಲಿಯಲ್ಲಿ ಮಹಿಳೆಯರು ಹಿಂದೆ ಶೌಚಾಲಯಕ್ಕಾಗಿ ಅರಣ್ಯ ಪ್ರದೇಶವನ್ನು ಬಳಸುತ್ತಿದ್ದರೆ ಪುನರ್‌ವಸತಿ ಪ್ರದೇಶದಲ್ಲಿ ಇದಕ್ಕೆ ಯಾವುದೇ ರೀತಿಯ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗಿರಲಿಲ್ಲ.[23] ಎನ್‌ಟಿಪಿಸಿಯ ಪುನರ್‌ವಸತಿ ಕಾಲನಿಯಾದ ಮಧ್ಯಪ್ರದೇಶದ ಕೊಹಾಡಿಯಾದಲ್ಲಿ ಶೌಚಾಲಯ ವ್ಯವಸ್ಥೆಯೇ ಪ್ರಮುಖ ಸಮಸ್ಯೆಯಾಗಿತ್ತು.[24] ಮಹಿಳೆಯರಿಗೆ ಪ್ರತಿದಿನ ಇದು ಇರುಸುಮುರುಸನ್ನು ತಂದಿತ್ತು. ಕೃಷಿಭೂಮಿಯನ್ನು ಪರ್ಯಾಯವಾಗಿ ಪಡೆಯದೇ ಇದ್ದುದರಿಂದ ಶೌಚಾಲಯ ವ್ಯವಸ್ಥೆಯಾಗಲಿ, ಅರಣ್ಯಪ್ರದೇಶಗಳಾಗಲಿ, ಬಯಲು ಭೂಮಿಯಾಗಲಿ ಸಿಗದೇ ಇದ್ದುದು ಮಹಿಳೆಯರು ಮಾನಸಿಕವಾಗಿ ಒತ್ತಡವನ್ನು ಅನುಭವಿಸಿ ಕುಗ್ಗಲು ಕಾರಣವಾಯಿತು. ಈ ರೀತಿಯ ಅವ್ಯವಸ್ಥೆ ಮಹಿಳೆಯರ ದೈಹಿಕ, ಮಾನಸಿಕ ಮತ್ತು ಲೈಂಗಿಕ ಶೋಷಣೆಗೆ ಅವಕಾಶ ಮಾಡಿಕೊಟ್ಟು, ಮತ್ತಷ್ಟು ಶೋಷಿತರಾಗುವಂತೆ ಮಾಡಿತು[25] (ತುಕ್ರಾಲ್)

ಎಂದು ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ. ಸಂತ್ರಸ್ತರಾದ ನಲವತ್ತೊಂಬತ್ತು (20%) ಮಾಹಿತಿದಾರರು ಸ್ಥಳಾಂತರವು ಮಹಿಳೆಯರ ಆರೋಗ್ಯ ಸಮಸ್ಯೆಯ ಮೇಲೆ ಪ್ರಭಾವವನ್ನು ಬೀರಿದೆ ಎಂದಿದ್ದಾರೆ. ತುಕ್ರಾಲ್‌ರವರ ಕಂಡುಕೊಳ್ಳುವಿಕೆಯನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರಿಗೆ ಹೋಲಿಸಿ ವಿಶ್ಲೇಷಿಸಿದಾಗ ಮಹಿಳೆಯರು ಮಾನಸಿಕವಾಗಿ ಕುಗ್ಗಿ ಅಪರಿಚಿತ ಪ್ರದೇಶದಲ್ಲಿ ಎಲ್ಲಾ ರೀತಿಯ ಶೋಷಣೆಗೆ ಗುರಿಯಾಗಿರುತ್ತಾರೆ ಎಂದು ಅಧ್ಯಯನವು ಕಂಡುಕೊಂಡಿದೆ. ಸ್ಥಳಾಂತರದಿಂದಾಗಿ ಹೊಸ ಪ್ರದೇಶದಲ್ಲಿ ತಮ್ಮ ಮೂಲನೆಲೆಯಲ್ಲಿದ್ದಾಗ ನೆರೆಮನೆಯವರೊಂದಿಗೆ ಇದ್ದಂತಹ ಸಂಬಂಧ ಬೆಳೆಸಲು ಕಷ್ಟವಾಗಿರುವುದು ಮಾನಸಿಕ ಕ್ಷೋಭೆಗೆ ಕಾರಣವಾಗಿ ಸ್ಥಳಾಂತರಗೊಂಡ ಮಹಿಳೆಯರ ಆರೋಗ್ಯ ಸಮಸ್ಯೆಯಲ್ಲಿ ಹೆಚ್ಚಳವಾಗಿರುವುದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿರುತ್ತದೆ.

ಭೂಸ್ವಾಧೀನ ಮತ್ತು ಸಾಮಾನ್ಯ ಜನಜೀವನ

ಕೋಷ್ಟಕ–3.17: ಭೂಸ್ವಾಧೀನ ಸಾಮಾನ್ಯ ಜನಜೀವನದ ಮೇಲೆ ಪರಿಣಾಮ ಬೀರಿರುತ್ತದೆಯೇ?

ಕ್ರ.ಸಂ	ಉತ್ತರ	ಸಂಖ್ಯೆ	ಶೇಕಡಾ
1	ಹೌದು	150	60
2	ಇಲ್ಲ	100	40
	ಒಟ್ಟು	**250**	**100**
ಹೌದಾದರೆ, ಕಾರಣಗಳು			
1	ಅಭದ್ರತೆ + ಕೌಟುಂಬಿಕ ವಾತಾವರಣದಲ್ಲಿ ಬದಲಾವಣೆ + ಮಾನಸಿಕ ತುಮುಲದ ಹೆಚ್ಚಳ	71	28
2	ಅಸ್ತಿತ್ವಕ್ಕೆ ಧಕ್ಕೆ + ಮಾನಸಿಕ ತುಮುಲದ ಹೆಚ್ಚಳ + ಕೆಟ್ಟ ಚಟಗಳ ಹೆಚ್ಚಳ	33	14
3	ಕೆಟ್ಟ ಚಟಗಳ ಹೆಚ್ಚಳ + ಆಹಾರದ ಅಲಭ್ಯತೆ	46	18
	ಒಟ್ಟು	**150**	**60**

ಮಹಿಳೆಯರು, ಮಕ್ಕಳು ಮತ್ತು ಹಿರಿಯರನ್ನು ಯೋಗ್ಯ ರೀತಿಯಲ್ಲಿ ನೋಡಿಕೊಳ್ಳುವುದು ಸಮುದಾಯದ ಮತ್ತು ಸಮಾಜದ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಮಕ್ಕಳು ಮುಂದಿನ ತಲೆಮಾರಿನ ಭವಿಷ್ಯವಾಗಿದ್ದರೆ, ಹಿರಿಯರು ಹಳೆಯ ಸಂಪ್ರದಾಯವನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಪ್ರಮುಖ ಕೊಂಡಿಯಾಗಿರುತ್ತಾರೆ. ಬಲವಂತದ ಸ್ಥಳಾಂತರ ಪ್ರಕ್ರಿಯೆ ಈ ಎಲ್ಲಾ ಮೌಲ್ಯಗಳನ್ನು ಸಂಪೂರ್ಣವಾಗಿ ಸಾರಾಸಗಟಾಗಿ ತಿರಸ್ಕರಿಸಿ ಹಿರಿಯರು ಮತ್ತು ಮಕ್ಕಳ ಸಂಪೂರ್ಣ ಸ್ವಾತಂತ್ರ್ಯವನ್ನು ಕಿತ್ತು ಹಾಕುತ್ತದೆ. ಪುನರ್‌ವಸತಿ ಪ್ರದೇಶದ ನಗರ ಪರಿಸರಕ್ಕೆ ಹೊಂದಾಣಿಕೆಯಾಗುವುದು ಇವರುಗಳಿಗೆ ಕಷ್ಟಕರವಾಗುತ್ತದೆ. ಹೊಸ ಪ್ರದೇಶಕ್ಕೆ ಸ್ಥಳಾಂತರವಾಗುವುದು ಹಿರಿಯರಿಗೆ ಮನಸ್ಸಿಲ್ಲದಿದ್ದರೂ ಯೋಜನೆಯ ಜಾರಿಯಲ್ಲಿನ ಅಧಿಕಾರಿಗಳು ಬಲವಂತವಾಗಿ ಅವರನ್ನು ಹೊಸ ಪ್ರದೇಶಕ್ಕೆ ಸ್ಥಳಾಂತರಿಸುವುದು ಮಾನಸಿಕ ಕ್ಷೋಭೆಗೆ ಕಾರಣವಾಗುತ್ತದೆ.

ಸಂದರ್ಶನದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಮೇಲಿನ ವಿವರಣೆಗಳಿಗೆ ಅನುಗುಣವಾಗಿ ಪರಿಶೀಲಿಸಲಾಗಿದೆ. ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಗ್ರಾಮಾಂತರ ತಾಲೂಕಿನ ಗ್ರಾಮಗಳಲ್ಲಿ ಭೂಸ್ವಾಧೀನಪಡಿಸಲು ಆರಂಭಿಸಿದಾಗ ಅದು ಜನರ ಸಾಮಾನ್ಯ ಜೀವನದ ಮೇಲೆ ಯಾವ ರೀತಿಯಲ್ಲಿ ಪರಿಣಾಮ ಬೀರಿತು ಎಂಬ ಅಂಶಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಅಭಿವೃದ್ಧಿ ಕಾರ್ಯಗಳಿಗೋಸ್ಕರ ಭೂಸ್ವಾಧೀನಪಡಿಸಿದಾಗ ಜನರ ಜೀವನದ ಮೇಲೆ ನಕಾರಾತ್ಮಕ ಪರಿಣಾಮ ಬೀರಿ ಸಂತ್ರಸ್ತರ ಬದುಕು ಅಸಹನೀಯವಾಗುತ್ತದೆ[26] ಮತ್ತು ಹಿಂದಿನ ಜೀವನಕ್ರಮವನ್ನು ನಡೆಸುವುದಕ್ಕೆ ಪುನರ್‌ವಸತಿ ಪ್ರದೇಶಗಳಲ್ಲಿ ಸಾಧ್ಯವಾಗುವುದಿಲ್ಲ ಎಂಬುದಾಗಿ ಜಗತ್ತಿನಾದ್ಯಂತ ವಿಶೇಷವಾಗಿ ಭಾರತದಲ್ಲಿ ಸ್ಥಳಾಂತರದ ಬಗ್ಗೆ ಅಧ್ಯಯನವನ್ನು ಕೈಗೊಂಡ ಹೆಚ್ಚಿನ ಸಂಶೋಧಕರು ತಮ್ಮ ಅಧ್ಯಯನದಲ್ಲಿ ಕಂಡುಕೊಂಡಿದ್ದಾರೆ. ಸಂದರ್ಶಿತ ಇನ್ನೂರೈವತ್ತು ಮಾಹಿತಿದಾರರಲ್ಲಿ ನೂರೈವತ್ತು (60%) ಭೂಸಂತ್ರಸ್ತರು ಸ್ಥಳಾಂತರ ಸಾಮಾನ್ಯ ಜೀವನವನ್ನು ನಡೆಸುವುದರ ಮೇಲೆ ಸರಿಪಡಿಸಲಾಗದ ಪ್ರಭಾವ ಬೀರಿದೆ ಎಂದು ಅಭಿಪ್ರಾಯಪಟ್ಟರೆ, ಭೂಸ್ವಾಧೀನ ಮತ್ತು ಹೊಸ ಪ್ರದೇಶದಲ್ಲಿ ನೆಲೆಸುವುದು ಜೀವನದ ಮೇಲೆ ಯಾವುದೇ ಪರಿಣಾಮವನ್ನು ಬೀರಿಲ್ಲ ಎಂಬುದಾಗಿ ನೂರು (40%) ಮಾಹಿತಿದಾರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಬಲವಂತದ ಭೂಸ್ವಾಧೀನ ಕೌಟುಂಬಿಕ ವಾತಾವರಣದಲ್ಲಿ ಸರಿಪಡಿಸಲಾಗದ ಬದಲಾವಣೆಯನ್ನು ತಂದಿರುವುದರಿಂದ, ಹೊಸ ಪ್ರದೇಶದಲ್ಲಿ ಹೊಂದಾಣಿಕೆ ಸಾಧ್ಯವಾಗದೇ ಮಾನಸಿಕ ತುಮುಲದಲ್ಲಿ ಹೆಚ್ಚಳವಾಗಿ ಅಭದ್ರತೆಯ ವಾತಾವರಣ ನಿರ್ಮಾಣವಾಯಿತು ಎಂದು ಎಪ್ಪತ್ತೊಂದು (28%) ಸಂತ್ರಸ್ತರು ತಮ್ಮ ದುಗುಡವನ್ನು ವ್ಯಕ್ತಪಡಿಸಿರುತ್ತಾರೆ.

ಸ್ಥಳಾಂತರ ಮತ್ತು ಬದಲಾದ ಜೀವನಕ್ರಮ

ಕೋಷ್ಟಕ-3.18: ಹೊಸ ಪ್ರದೇಶದಲ್ಲಿ ಹಿಂದಿನ ಜೀವನ ಕ್ರಮ ಮುಂದುವರಿಸಲು ಸಾಧ್ಯವಾಗಿರುತ್ತದೆಯೇ?

ಕ್ರಸಂ	ಉತ್ತರ	ಸಂಖ್ಯೆ	ಶೇಕಡಾ
1	ಹೌದು	10	4
2	ಇಲ್ಲ	240	96
	ಒಟ್ಟು	**250**	**100**
ಇಲ್ಲವಾದರೆ, ಕಾರಣಗಳು			
1	ಕೆಲಸ ಕಳೆದುಕೊಂಡಿರುವುದು + ಸೌಲಭ್ಯಗಳ ಅಲಭ್ಯತೆ + ಕೌಟುಂಬಿಕ ವಿಘಟನೆ	140	56
2	ಕೌಟುಂಬಿಕ ವಿಘಟನೆ + ಸಂಬಂಧಗಳಲ್ಲಿ ಬದಲಾವಣೆ	100	40
	ಒಟ್ಟು	**240**	**96**

ಸಂತ್ರಸ್ತರಿಗೆ ಮನೆ ಕಟ್ಟಿಕೊಳ್ಳಲು ನಿವೇಶನಗಳನ್ನು ಮತ್ತು ಉದ್ಯೋಗವನ್ನು ನೀಡುವುದರ ಮೂಲಕ ಪುನರ್‌ವಸತಿಯನ್ನು ಸಮರ್ಥವಾಗಿ ಕಲ್ಪಿಸುತ್ತೇವೆ ಎಂಬುದು ಸರಿಯಲ್ಲ. ಅವರುಗಳ ಸಾಮಾಜಿಕ, ಸಾಂಸ್ಕೃತಿಕ

ಧಾರ್ಮಿಕ ಮತ್ತು ಮಾನಸಿಕ ಅವಶ್ಯಕತೆಗಳಿಗೆ ಮತ್ತು ಅವುಗಳನ್ನು ಪೂರೈಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗುತ್ತದೆಯೆಂದು[27] ಫೆರ್ನಾಂಡೀಸ್ ಮತ್ತು ಆಸಿಫ್‌ರವರು (1997) ತಮ್ಮ ಅಧ್ಯಯನದಲ್ಲಿ ವಿವರಿಸುತ್ತಾರೆ. ನರ್ಮದಾ ಭೂವ್ಯಾಜ್ಯ ಪರಿಹಾರ ಮಂಡಳಿ ಹಾಗೂ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಸರದಾರ್ ಸರೋವರ್ ಅಣೆಕಟ್ಟು ನಿರ್ಮಾಣಕ್ಕಾಗಿ ಭೂಮಿಯನ್ನು ಕಳೆದುಕೊಂಡ ರೈತರಿಗೆ ಬರಡು ಭೂಮಿಯನ್ನು ನೀಡಿದ ಸರಕಾರ ಸಂತ್ರಸ್ತರು ತಮ್ಮ ಮೂಲ ಕೃಷಿ ವೃತ್ತಿಯನ್ನು ಮುಂದುವರಿಸದಂತೆ ಮಾಡಿತು. ಜಾಗತಿಕ ಬ್ಯಾಂಕಿನ ಸರದಾರ್ ಅಣೆಕಟ್ಟು ಪುನರ್‌ವಸತಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ನೇಮಿಸಲ್ಪಟ್ಟ ಅಧಿಕಾರಿಗಳ ಪ್ರಕಾರ "ಈ ಕ್ರಮ ನಿರ್ವಸಿತರಾದ ಜನರ ಜೀವನ ಮಟ್ಟದ ಕುಸಿತಕ್ಕೆ ಮತ್ತು ಬದಲಾವಣೆಗಳಿಗೆ ಹೇತುವಾಯಿತು"[28] ಎಂಬ ಕ್ಲಾಡ್ ಅಲ್ವರಿಸ್ ಮತ್ತು ರಮೇಶ್ ಬಿಲ್ಲೋರಿಯವರ ಕಂಡುಕೊಳ್ಳುವಿಕೆಯಂತೆ ಸಂತ್ರಸ್ತರ ಉದ್ಯೋಗ ಮತ್ತು ಪರಿಸರದಲ್ಲಿ ಬದಲಾವಣೆಗಳಾದಾಗ ಹಿಂದಿನ ಜೀವನಕ್ರಮವನ್ನು ಹೊಸ ಪ್ರದೇಶದಲ್ಲಿ ಕಟ್ಟಿಕೊಳ್ಳಲು ಕಷ್ಟವಾಗುತ್ತದೆ ಎಂಬ ಪರಿಕಲ್ಪನೆಯನ್ನು ಪ್ರಸ್ತುತ ಯೋಜನೆಯ ಸಂತ್ರಸ್ತರುಗಳಿಗೆ ಹೋಲಿಸಿ ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಪ್ರಯತ್ನಿಸಲಾಗಿರುತ್ತದೆ.

ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಮಿಯನ್ನು ಕಳೆದುಕೊಂಡು ನಿರ್ವಸಿತರಾಗುವ ಯೋಜನೆಯ ಸಂತ್ರಸ್ತರ ಸ್ಥಳಾಂತರ ಮತ್ತು ಪುನರ್‌ವಸತಿಯನ್ನು ಸಮರ್ಪಕವಾಗಿ ಮಾಡುವುದಕ್ಕೋಸ್ಕರ 2007ರಲ್ಲಿ ಕರ್ನಾಟಕ ಸರಕಾರ ಆಕರ್ಷಕವಾದ ಪುನರ್‌ವಸತಿ ನೀತಿಯನ್ನು ಪ್ರಕಟಿಸಿತು. ಯೋಜನೆಯ ಸಂತ್ರಸ್ತರಿಗೆ ಮಂಗಳೂರಿನ ಗ್ರಾಮಾಂತರ ತಾಲೂಕಿನಲ್ಲಿ ಹನ್ನೊಂದು ವ್ಯವಸ್ಥಿತ ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಿ ವ್ಯವಸ್ಥಿತ ಉತ್ತಮ ಜೀವನವನ್ನು ನಡೆಸುವುದಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಕಲ್ಪಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿತು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪುನರ್‌ವಸತಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಸಂತ್ರಸ್ತರಿಂದ ಅಭಿಪ್ರಾಯವನ್ನು ಸಂಗ್ರಹಿಸಲು ಆದ್ಯತೆಯನ್ನು ನೀಡಲಾಗಿರುತ್ತದೆ. ಹೊಸ ಪ್ರದೇಶದಲ್ಲಿ ವಿಶೇಷವಾಗಿ ಪುನರ್‌ವಸತಿ ಕಾಲನಿಗಳಲ್ಲಿ ತಮ್ಮ ಭೂಮಿಯನ್ನು ಸ್ವಾಧೀನಪಡಿಸುವ ಪೂರ್ವದಲ್ಲಿ ಹೊಂದಿದಂತಹ ಜೀವನ ಕ್ರಮವನ್ನು ಮುಂದುವರಿಸಲು ಸಾಧ್ಯವಾಗಿರುತ್ತದೆಯೇ ಎಂಬುದಾಗಿ ಪ್ರಶ್ನಿಸಿದಾಗ ಇನ್ನೂರನಲವತ್ತು (96%) ಸಂತ್ರಸ್ತರು ಇದು ಸಾಧ್ಯವಾಗಲಿಲ್ಲ ಎಂದು ತಿಳಿಸಿದರೆ, ಸಾಧ್ಯವಾಗಿರುತ್ತದೆ ಎಂದು ಹತ್ತು (4%) ಮಾಹಿತಿದಾರರು ಉತ್ತರಿಸಿರುತ್ತಾರೆ. ಯಾಕೆ ಹಿಂದಿನ ರೀತಿಯ ಜೀವನವನ್ನು ಹೊಸ ಪ್ರದೇಶದಲ್ಲಿ ನಡೆಸಲು ಆಗಲಿಲ್ಲ ಎಂಬುವುದಕ್ಕೆ ಕೆಲಸ ಕಳೆದುಕೊಂಡಿರುವುದು ಹಾಗೂ ಹೊಸ ನೆಲೆಯಲ್ಲಿ ಹಿಂದಿನ ಉದ್ಯೋಗವನ್ನು ಮುಂದುವರಿಸಲು ಅವಕಾಶವಿಲ್ಲದೇ ಇರುವುದು, ಪುನರ್‌ವಸತಿ ಕಾಲನಿಗಳಲ್ಲಿ ಮೂಲಭೂತ ವ್ಯವಸ್ಥೆಗಳಾದ ನೀರು, ಒಳಚರಂಡಿ, ರಸ್ತೆ, ಸಾರಿಗೆ ಸಂಪರ್ಕಗಳ ಅವ್ಯವಸ್ಥೆಗಳು, ಹೊಸ ಪರಿಸರಕ್ಕೆ ಒಮ್ಮಿಂದೊಮ್ಮೆಲೆ ಒಗ್ಗಿಕೊಳ್ಳಲು ಕಷ್ಟವಾಗಿರುವುದು, ಭೂಸ್ವಾಧೀನದಿಂದಾಗಿ ಪರಿಹಾರದ ಹಣದ

ಹಂಚಿಕೆಯ ಬಗ್ಗೆ ಕುಟುಂಬದ ಸದಸ್ಯರ ನಡುವೆ ಉಂಟಾದಂತಹ ಕೌಟುಂಬಿಕ ಸಂಘರ್ಷಗಳು ಮತ್ತು ಹಿಂದಿನ ಉದ್ಯೋಗವನ್ನು ಮುಂದುವರಿಸಲು ಆದಂತಹ ಸೌಲಭ್ಯಗಳ ಕೊರತೆ ಇದಕ್ಕೆ ಕಾರಣವಾಯಿತೆಂದು ನೂರನಲವತ್ತು ಸಂತ್ರಸ್ತರು (56%) ಅಭಿಪ್ರಾಯ ಪಟ್ಟರೆ, ಸಂಬಂಧಗಳಲ್ಲಿ ಆದಂತಹ ಬಿರುಕು, ಕೌಟುಂಬಿಕ ವಿಘಟನೆಯಿಂದಾಗಿ ಹಿಂದಿನ ಜೀವನ ಶೈಲಿಯನ್ನು ಹೊಸ ಪ್ರದೇಶದಲ್ಲಿ ಮುಂದುವರಿಸಲು ಸಾಧ್ಯವಾಗಲಿಲ್ಲವೆಂದು ನೂರು (40%) ಸಂತ್ರಸ್ತರು ಸ್ಪಷ್ಟವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ರಾಜಕೀಯ ಪರಿಣಾಮಗಳು

ಭೂಮಿ ಜನರ ಬದುಕಿನ ಅವಿಭಾಜ್ಯ ಅಂಗ. ತಮ್ಮ ಮನೆ, ನೆಲ, ಜಲ ಪರಿಸರಿದೊಂದಿಗೆ ಅಲ್ಲಿನ ವಾಸಿಗಳಿಗೆ ಬಿಡಿಸಲಾಗದ ಭಾವನಾತ್ಮಕವಾದ ಆತ್ಮೀಯ ಸಂಬಂಧವೊಂದಿರುತ್ತದೆ. ತಮ್ಮ ಜೀವನ ನಿರ್ವಹಣೆಗೋಸ್ಕರ ಭೂಮಿಯನ್ನು ಅವಲಂಬಿಸಿರುವ ಕೋಟ್ಯಾಂತರ ಕುಟುಂಬಗಳನ್ನು ಭಾರತದಲ್ಲಿ ಕಾಣಬಹುದು. ಕೃಷಿಭೂಮಿಯನ್ನು ದೇವರೆಂದು ಗೌರವಿಸುವ, ಪೂಜಿಸುವ ಪದ್ಧತಿ ಇತರ ಪ್ರದೇಶಗಳಲ್ಲಿದ್ದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಇದೆ. ಬೃಹತ್ ಕೈಗಾರಿಕೆಗಳ ಸಮುಚ್ಚಯದ ನಿರ್ಮಾಣಕ್ಕೆ ದೊಡ್ಡ ಪ್ರಮಾಣದಲ್ಲಿ ಭೂಮಿಯ ಅವಶ್ಯಕತೆ ಇರುತ್ತದೆ. ಸಾಕಷ್ಟು ಸರಕಾರಿ ಭೂಮಿಗಳು ಲಭ್ಯವಿಲ್ಲದ ಕಾರಣ ಖಾಸಗಿ ಭೂಮಿಗಳನ್ನು ಅಭಿವೃದ್ಧಿ ಚಟುವಟಿಕೆಗಳಿಗೆ ಸ್ವಾಧೀನಪಡಿಸುವುದು ಅನಿವಾರ್ಯವಾಗುತ್ತದೆ. ಈ ಸಂದರ್ಭದಲ್ಲಿ ಪ್ರತಿಭಟನೆ, ಹೋರಾಟಗಳು, ಬಲಪ್ರಯೋಗ, ಆಮಿಷಗಳನ್ನು ಒಡ್ಡುವುದು ಭೂಸ್ವಾಧೀನ ಮತ್ತು ಸ್ಥಳಾಂತರ ಪ್ರಕ್ರಿಯೆಗಳಲ್ಲಿ ಸರ್ವೇಸಾಮಾನ್ಯವಾಗಿರುತ್ತದೆ. ಪ್ರಸ್ತುತ ವಿಭಾಗ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸಂತ್ರಸ್ತರು ಎದುರಿಸಿದ ಸಮಸ್ಯೆಗಳು, ಪರದಾಟ, ಅಸಹಾಯಕತೆ, ಬಲಪ್ರಯೋಗ, ಹೋರಾಟ, ಪ್ರತಿಭಟನೆಗಳ ಬಗೆಗೆ ವಿವರಿಸುತ್ತದೆ.

ಯಾವುದೇ ಯೋಜನೆಗಾಗಿ ಭೂಸ್ವಾಧೀನಪಡಿಸುವ ಸಂದರ್ಭದಲ್ಲಿ ಸಂಕಷ್ಟಗಳಿಗೀಡಾಗುವ ಜನರು ತಮ್ಮ ಆಘಾತ, ಆಕ್ರೋಶಗಳನ್ನು ವ್ಯಕ್ತಪಡಿಸುವುದು ಸ್ವಾಭಾವಿಕವಾಗಿ ಸಂಘರ್ಷಾತ್ಮಕ ವಾತಾವರಣವನ್ನು ಸೃಷ್ಟಿಸುತ್ತದೆ. ಯೋಜನೆಗಳನ್ನು ಜಾರಿಗೆ ತರುವ ಪ್ರಾಧಿಕಾರ ತನ್ನ ಪಾರದರ್ಶಕತೆಯ ಕೊರತೆ ಮತ್ತು ಸಂತ್ರಸ್ತರು ಎದುರಿಸುತ್ತಿರುವ ಸಮಸ್ಯೆಗಳನ್ನು ಆಲಿಸದೆ ಉಡಾಫೆಯಾಗಿ ವರ್ತಿಸುವುದರಿಂದ ತಿಕ್ಕಾಟದ ವೇಗ ಹೆಚ್ಚಾಗುತ್ತದೆ. ಸಂತ್ರಸ್ತರುಗಳಿಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿ ಅವುಗಳು ಹೊರ ಜಗತ್ತಿಗೆ ಅರಿವಿಗೆ ಬಾರದ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸಂತ್ರಸ್ತರ ಅತೃಪ್ತಿಗಳು ಸಾಮೂಹಿಕ ಪ್ರತಿಭಟನೆಗಳಿಗೂ ಕಾರಣವಾಗುತ್ತದೆ. ಪ್ರಮುಖವಾಗಿ ಯೋಜನೆಗಳ ವಿರುದ್ಧ ಪ್ರತಿಭಟನೆ, ಹೋರಾಟಗಳು ಆರಂಭವಾಗಿ ಹಿಂಸಾತ್ಮಕ ರೂಪಕ್ಕೂ ತಿರುಗುತ್ತದೆ. ಪ್ರಸ್ತುತ ಯೋಜನೆಯ ಸಂತ್ರಸ್ತರೊಂದಿಗಿನ ಗುಂಪು ಚರ್ಚೆಯ ಸಂದರ್ಭದಲ್ಲಿ ತಮಗಾದ ಅತೃಪ್ತಿ ಹಾಗೂ ಅಸಮಾಧಾನಗಳ ಬಗ್ಗೆ ಬಹಿರಂಗವಾಗಿ ತಮ್ಮ

ಅನಿಸಿಕೆಗಳನ್ನು ವ್ಯಕ್ತಪಡಿಸಿ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಸಾಮಾಜಿಕ ನ್ಯಾಯವನ್ನು ಪಡೆಯುವುದಕ್ಕೋಸ್ಕರ ಭೂಸ್ವಾಧೀನ ಪ್ರಾಧಿಕಾರದ ವಿರುದ್ಧ ನಡೆಸಲ್ಪಟ್ಟ ಹೋರಾಟಗಳು ಹಲವಾರು ಸಂದರ್ಭಗಳಲ್ಲಿ ಕಾನೂನು ಮತ್ತು ಶಿಸ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಮೀರಿ ಹಿಂಸಾತ್ಮಕವಾಗಿ ಪ್ರತಿಭಟನೆಗಳಿಗೆ ತಿರುಗಿದ್ದಾಗಿ ತಿಳಿಸಿರುತ್ತಾರೆ.

ಭೂಸ್ವಾಧೀನಪಡಿಸುವಂತಹ ಸಂದರ್ಭದಲ್ಲಿ ಸಂತ್ರಸ್ತರುಗಳು ಅನುಭವಿಸುತ್ತಿರುವ ಸಂವಿಧಾನಾತ್ಮಕ ಹಕ್ಕುಗಳಿಗೆ ಯಾವುದೇ ರೀತಿಯಲ್ಲಿ ಧಕ್ಕೆ ಬಂದಿರುತ್ತದೆಯೇ ಎಂಬ ಅಂಶಗಳನ್ನು ಅಧ್ಯಯನದ ಸಂದರ್ಭದಲ್ಲಿ ಸೂಕ್ಷ್ಮವಾಗಿ ಗಮನಿಸಲಾಗಿತ್ತು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂತ್ರಸ್ತರು ಮತ್ತು ಅವರುಗಳ ಪರವಾಗಿ ಹೋರಾಟಗಳನ್ನು ಸಂಘಟಿಸಿದ ನಾಯಕರು, ಸಾರ್ವಜನಿಕರು, ಪತ್ರಕರ್ತರು ಮತ್ತು ಸಮಾಜದ ಗಣ್ಯರ ಜೊತೆಯಲ್ಲಿ ಮಾತುಕತೆಯನ್ನು ನಡೆಸಿದಾಗ ಬಲವಂತದ ಭೂಸ್ವಾಧೀನವು ಸಂತ್ರಸ್ತರು ಸಂವಿಧಾನದತ್ತವಾಗಿ ಅನುಭವಿಸುತ್ತಿದ್ದ ಹಕ್ಕುಗಳಿಗೆ ಧಕ್ಕೆ ತಂದಿರುತ್ತದೆಯೇ ಎಂಬುದಾಗಿ ಅರಿಯಲು ಪ್ರಯತ್ನಿಸಲಾಗಿರುತ್ತದೆ. ಧಕ್ಕೆ ತಂದಿದ್ದರೆ ಯಾವ ರೀತಿಯ ಪರಿಣಾಮವನ್ನು ಬೀರಿರುತ್ತದೆ ಎಂಬುದರ ಬಗೆಗಿನ ವಿವರಣೆ ಮತ್ತು ವಿಶ್ಲೇಷಣೆಯನ್ನು ಪ್ರಸ್ತುತ ವಿಭಾಗದಲ್ಲಿ ನೀಡಲಾಗಿರುತ್ತದೆ.

ಸಂತ್ರಸ್ತರಲ್ಲಿ ಭೂಸ್ವಾಧೀನ ಕಾಯಿದೆಯ ಬಗೆಗಿನ ಅರಿವು

ಕೋಷ್ಟಕ–3.19: ಭೂಸ್ವಾಧೀನ ಕಾನೂನಿನ ಬಗೆಗೆ ನಿಮಗೆ ಅರಿವಿತ್ತೇ?

ಕ್ರ.ಸಂ.	ಕಾನೂನಿನ ಅರಿವು	ಸಂಖ್ಯೆ	ಶೇಕಡಾ
1	ಹೌದು, ಇತ್ತು.	15	6
2	ಇಲ್ಲ	235	94
ಒಟ್ಟು		**250**	**100**

ಬೃಹತ್ ಉದ್ಯಮಗಳನ್ನು ನಿರ್ದಿಷ್ಟ ಪ್ರದೇಶದಲ್ಲಿ ಸ್ಥಾಪಿಸುವಾಗ ಅಲ್ಲಿರುವ ಭೂಮಿಯನ್ನು ಸ್ವಾಧೀನಪಡಿಸುವುದು, ಸಂತ್ರಸ್ತರಿಗೆ ಬೇರೆ ಪ್ರದೇಶಗಳಲ್ಲಿ ನೆಲೆಗಳನ್ನು ಕಲ್ಪಿಸುವುದು ಹಾಗೂ ಪರಿಹಾರವನ್ನು ನೀಡುವುದು ಸಾಮಾನ್ಯ ಅಂಶ. ಸಾವಿರದ ಒಂಬೈನೂರಎಪ್ಪತ್ತರ ನಂತರ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆಗಳು ಆರಂಭವಾಯಿತು. ಮಂಗಳೂರು ಗ್ರಾಮಾಂತರ ತಾಲೂಕಿನ ಕೆಲವು ಕುಟುಂಬಗಳ ಭೂಮಿಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಕೈಗಾರಿಕೆಗಳ ಸ್ಥಾಪನೆಯ ಉದ್ದೇಶಗಳಿಗಾಗಿ ಒಂದಕ್ಕಿಂತ ಹೆಚ್ಚು ಬಾರಿ ಸ್ವಾಧೀನಪಡಿಸಿದ ಅಘಾತಕಾರಿ ಅಂಶಗಳು ಕಂಡುಬಂದಿರುತ್ತವೆ.[29] ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಿದೆ. ಈ

ಅಂಶಗಳನ್ನು ಗಮನದಲ್ಲಿರಿಸಿ ಯೋಜನೆಯ ಸಂತ್ರಸ್ತರಿಗೆ ನಮ್ಮ ದೇಶದ ಭೂಸ್ವಾಧೀನ ನೀತಿ, ನಿಯಮಗಳ ಬಗ್ಗೆ ಇರುವ ತಿಳುವಳಿಕೆಯನ್ನು ಅರಿಯುವುದಕ್ಕಾಗಿ ಅವರಲ್ಲಿ ಭೂಸ್ವಾಧೀನ ಕಾನೂನಿನ ಬಗ್ಗೆ ಅರಿವಿದೆಯೇ ಎಂದು ಪ್ರಶ್ನಿಸಿದಾಗ ಇನ್ನೂರಮೂವತ್ತೈದು (94%) ಸಂತ್ರಸ್ತರುಗಳಿಗೆ ಭೂಸ್ವಾಧೀನ ಕಾನೂನಿನ ಬಗ್ಗೆ ಅರಿವಿಲ್ಲದಿರುವುದು ಮತ್ತು ಹದಿನೈದು (6%) ಮಾಹಿತಿದಾರರು ಮಾತ್ರ ಇವುಗಳ ಬಗ್ಗೆ ಗೊತ್ತಿದೆ ಎಂಬುದಾಗಿ ತಿಳಿಸಿರುವುದು ಸಾಕ್ಷರತೆಯ ಪ್ರಮಾಣ ಹೆಚ್ಚಿರುವ ಮತ್ತು ಬುದ್ಧಿವಂತರ ಜಿಲ್ಲೆ ಎಂದು ಕರೆಸಿಕೊಳ್ಳುವ ದಕ್ಷಿಣ ಕನ್ನಡದಲ್ಲಿಯೂ ಪ್ರಚಲಿತ ವಿದ್ಯಮಾನಗಳ ಬಗೆಗೆ ಜನರಿಗೆ ಅರಿವಿಲ್ಲದಿರುವುದನ್ನು ಸೂಚಿಸುತ್ತದೆ.

ಕೋಷ್ಟಕ–3.20: ಭೂಸ್ವಾಧೀನ ಪ್ರಕ್ರಿಯೆ ತಿಳಿದ ಬಗ್ಗೆ

ಕ್ರಸಂ	ಹೇಗೆ ಗೊತ್ತಾಯಿತು	ಸಂಖ್ಯೆ	ಶೇಕಡಾ
1	ಪತ್ರಿಕೆಗಳಿಂದ+ಅಧಿಕಾರಿಗಳಿಂದ+ನೆರೆಹೊರೆಯವರಿಂದ+ರಾಜಕೀಯ ಮುಖಂಡರಿಂದ	220	88
2	ಸಂಘಟನೆಗಳಿಂದ+ದೂರದರ್ಶನದ ಮೂಲಕ	21	8
3	ಮಧ್ಯವರ್ತಿಗಳಿಂದ+ಮಕ್ಕಳಿಂದ+ದೂರದರ್ಶನದ ಮೂಲಕ	4	2
4	ಗೊತ್ತಿಲ್ಲ	5	2
	ಒಟ್ಟು	**250**	**100**

ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗೆ ಸಂಬಂಧಪಟ್ಟಂತೆ ಭೂಮಿಯನ್ನು ಸ್ವಾಧೀನಪಡಿಸುವ ಪ್ರಕ್ರಿಯೆಯ ಬಗ್ಗೆ ಸಂತ್ರಸ್ತರಿಗೆ ಹೇಗೆ ತಿಳಿಯಿತು ಎಂಬುದಾಗಿ ಪ್ರಶ್ನಿಸಿದಾಗ ಇನ್ನೂರಇಪ್ಪತ್ತು (80%) ಸಂತ್ರಸ್ತರು ಪತ್ರಿಕೆಗಳಲ್ಲಿ ಪ್ರಾಧಿಕಾರ ನೀಡಿದ ಜಾಹೀರಾತು, ಸರಕಾರಿ ಅಧಿಕಾರಿಗಳು, ರಾಜಕೀಯ ಮುಖಂಡರು ಮತ್ತು ನೆರೆಹೊರೆಯವರ ಮೂಲಕ ಭೂಮಿಯನ್ನು ಸ್ವಾಧೀನಪಡಿಸಲಾಗುತ್ತದೆಯೆಂದು ತಿಳಿದುಬಂತು ಎಂದು ತಿಳಿಸಿದರೆ, ಸಾಮಾಜಿಕ ಸಂಘಟನೆಗಳು ಮತ್ತು ದೂರದರ್ಶನಗಳ ಮೂಲಕ ಇದರ ಬಗ್ಗೆ ತಿಳಿದುಬಂತು ಎಂಬುದಾಗಿ ಇಪ್ಪತ್ತೊಂದು (8%) ಮಾಹಿತಿದಾರರು ತಿಳಿಸಿರುತ್ತಾರೆ. ಮಧ್ಯವರ್ತಿಗಳ ಮೂಲಕ, ಮನೆಯಲ್ಲಿರುವ ಪ್ರಾಯಕ್ಕೆ ಬಂದ ಮಕ್ಕಳು ಮತ್ತು ದೂರದರ್ಶನದ ವಾರ್ತೆಗಳ ಮೂಲಕ ಇದರ ಬಗ್ಗೆ ತಿಳಿಯಿತು ಎಂದು ನಾಲ್ಕು (2%) ಸಂತ್ರಸ್ತರು ಉತ್ತರಿಸಿದ್ದು, ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳು ಲಿಖಿತವಾಗಿ ತಿಳಿಸಿದಾಗ ಗಮನಕ್ಕೆ ಬಂತು ಎಂದು ಐದು (2%) ಮಾಹಿತಿದಾರರು ತಿಳಿಸಿರುತ್ತಾರೆ.

ಕೋಷ್ಟಕ–3.21: ಭೂಸ್ವಾಧೀನಪಡಿಸಲಾಗುತ್ತದೆ ಎಂದಾಗ ನಿಮ್ಮ ಅನಿಸಿಕೆ ಹೇಗಿತ್ತು?

ಕ್ರ.ಸಂ.	ಭೂಸ್ವಾಧೀನದ ಬಗ್ಗೆ ಅನಿಸಿಕೆ	ಸಂಖ್ಯೆ	ಶೇಕಡಾ
1	ಅಭಿವೃದ್ಧಿಗೆ ಇದು ಅನಿವಾರ್ಯ+ಪರಿಹಾರ ದೊರೆಯಬಹುದೆಂಬ ಸಂತೋಷ	132	53
2	ಕೃಷಿ ಚಟುವಟಿಕೆಗಳು ಕೈತಪ್ಪಬಹುದೆಂಬ ಭೀತಿ+ಭವಿಷ್ಯದ ಬಗ್ಗೆ ಅಭದ್ರತೆ+ಪರಿಸರ ಅಸಮತೋಲನದ ಭೀತಿ	118	47
	ಒಟ್ಟು	**250**	**100**

ತಲತಲಾಂತರದಿಂದ ತಾವು ನೆಲೆಸಿಕೊಂಡು ಬಂದಿರುವ ಮತ್ತು ಅಲ್ಲಿನ ನೆಲ, ಜಲ, ಪರಿಸರದ ಬಗ್ಗೆ ಅವಿನಾಭಾವ ಸಂಬಂಧವನ್ನು ಹೊಂದಿರುವ ಸಂತ್ರಸ್ತರಲ್ಲಿ ತಮ್ಮ ಭೂಮಿಯನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಸ್ವಾಧೀನಪಡಿಸಲಾಗುತ್ತದೆ ಎಂದು ತಿಳಿದು ಬಂದಾಗ ಅವರ ಪ್ರಥಮ ಪ್ರತಿಕ್ರಿಯೆ ಏನಾಗಿತ್ತು ಎಂದು ಪ್ರಶ್ನಿಸಿದಾಗ ನೂರ ಮೂವತ್ತೆರಡು (53%) ಮಾಹಿತಿದಾರರು ಅಭಿವೃದ್ಧಿ ಚಟುವಟಿಕೆಗಳಿಗೆ ಇದು ಅನಿವಾರ್ಯ ಹಾಗೂ ದೊರಕುವ ಪರಿಹಾರದ ಮೊತ್ತದಲ್ಲಿ ಹೊಸ ಪ್ರದೇಶದಲ್ಲಿ ಇನ್ನೂ ಉತ್ತಮ ಬದುಕನ್ನು ನಡೆಸಬಹುದು, ಮಕ್ಕಳಿಗೆ ಉನ್ನತ ಶಿಕ್ಷಣವನ್ನು ನೀಡಬಹುದು ಎಂದು ಸಂತೋಷವನ್ನು ವ್ಯಕ್ತಪಡಿಸಿದರೆ, ನೂರಹದಿನೆಂಟು (47%) ಮಾಹಿತಿದಾರರು ಪಾರಂಪರಿಕವಾಗಿ ನಡೆಸಿಕೊಂಡು ಬಂದಿರುವ ಕೃಷಿ ಚಟುವಟಿಕೆಗಳು ಕೈ ತಪ್ಪಿ ಅತಂತ್ರ ಸ್ಥಿತಿ ನಿರ್ಮಾಣವಾಗಿ ಭವಿಷ್ಯದ ಬಗ್ಗೆ ಅಭದ್ರತೆಯ ಭಾವನೆಗಳನ್ನು, ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಅವುಗಳು ವಿಸರ್ಜಿಸುವ ವಿಷತ್ಯಾಜ್ಯಗಳಿಂದಾಗಿ ಕೃಷಿ ಚಟುವಟಿಕೆಗಳನ್ನು ಉಳಿದ ಭೂಮಿಯಲ್ಲಿ ನಡೆಸಲು ಅಸಾಧ್ಯವಾಗಿ ಪರಿಸರದಲ್ಲಿ ಅಸಮತೋಲನದ ವಾತಾವರಣ ನಿರ್ಮಾಣವಾಗಬಹುದು ಎಂಬ ಆತಂಕವನ್ನು ತೋರ್ಪಡಿಸಿರುವುದನ್ನು 3.21ರ ಕೋಷ್ಟಕವು ವಿವರಿಸುತ್ತದೆ.

ಕೋಷ್ಟಕ–3.22: ಭೂಸ್ವಾಧೀನಕ್ಕೆ ಮುನ್ನ ಅಧಿಕಾರಿಗಳು ನಿಮ್ಮಲ್ಲಿ ಅರಿವು ಮೂಡಿಸುವ ಸಭೆಯನ್ನು ನಡೆಸಿರುತ್ತಾರೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	88	35
2	ಇಲ್ಲ	162	65
	ಒಟ್ಟು	**250**	**100**
ಹೌದಾದರೆ, ಯಾವ ರೀತಿ?			
1	ಪರಿಹಾರದ ವಿತರಣೆ ಬಗ್ಗೆ + ಪುನರ್‌ವಸತಿ ವ್ಯವಸ್ಥೆ ಬಗ್ಗೆ	86	34
2	ಮೂಲ ಸೌಲಭ್ಯಗಳ ಬಗ್ಗೆ	2	1
	ಒಟ್ಟು	**88**	**35**

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದ ಅಧಿಕಾರಿಗಳು ಸಂತ್ರಸ್ತರ ಸಮಸ್ಯೆಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸಿದರು ಎಂಬ ಅಂಶಗಳನ್ನು 3.22ರ ಕೋಷ್ಟಕದಲ್ಲಿ ವಿವರಿಸಲಾಗಿದೆ. ಅಧಿಕಾರಿಗಳು ಸಂತ್ರಸ್ತರಲ್ಲಿ ಅರಿವು ಮೂಡಿಸುವ, ಅವರ ಪುನರ್‌ವಸತಿ ಮತ್ತು ಸಬಲೀಕರಣಕ್ಕೆ ಸಂಬಂಧಪಟ್ಟಂತೆ ಸಭೆಗಳನ್ನು ನಡೆಸಿರುತ್ತಾರಾ ಎಂಬುದನ್ನು ಸಂತ್ರಸ್ತರಲ್ಲಿ ಪ್ರಶ್ನಿಸಲಾಗಿ ಯಾವುದೇ ರೀತಿಯಲ್ಲಿ ಸ್ಥಳಾಂತರ ಮತ್ತು ಪುನರ್‌ವಸತಿಯ ಬಗ್ಗೆ ತಿಳಿಸುವ ಸಭೆಗಳನ್ನು ಭೂಸಂತ್ರಸ್ತರಿಗಾಗಿ ಅವರ ಪ್ರದೇಶದಲ್ಲಿ ಹಮ್ಮಿಕೊಳ್ಳಲಾಗಿರಲಿಲ್ಲವೆಂದು ನೂರಲರವತ್ತೆರಡು (65%) ಮಾಹಿತಿದಾರರು ತಿಳಿಸಿದರೆ, ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಿಸಿದಂತೆ ಸಭೆಗಳನ್ನು

ಅಧಿಕಾರಿಗಳು ಸಂತ್ರಸ್ತರಿಗಾಗಿ ನಡೆಸಿದ್ದರು ಎಂದು ಎಂಬತ್ತೆಂಟು (35%) ಸಂದರ್ಶಿತರು ತಿಳಿಸಿರುತ್ತಾರೆ. ಪರಿಹಾರದ ರೂಪದಲ್ಲಿ ಸಂತ್ರಸ್ತರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮತ್ತು ಸ್ಥಳಾಂತರದ ನಂತರದ ಪುನರ್‌ವಸತಿಯ ಬಗ್ಗೆ ಸಭೆಗಳಲ್ಲಿ ಮಾಹಿತಿ ನೀಡಲಾಗಿರುತ್ತದೆಂದು ಎಂಬತ್ತಾರು (34%) ಮಾಹಿತಿದಾರರು ತಿಳಿಸಿದರೆ, ಸ್ಥಳಾಂತರದ ನಂತರ ನೀಡಲ್ಪಡುವ ಮೂಲಸೌಲಭ್ಯಗಳ ಬಗ್ಗೆ ಸಭೆಗಳಲ್ಲಿ ತಿಳಿಸಲಾಯಿತು ಎಂದು ಇಬ್ಬರು (1%) ಸಂತ್ರಸ್ತರು ತಿಳಿಸಿರುತ್ತಾರೆ.

ಕೋಷ್ಟಕ–3.23: ಭೂಸ್ವಾಧಿನಕ್ಕೋಸ್ಕರ ನಿಮ್ಮ ಮೇಲೆ ಒತ್ತಡ ಹೇರಲಾಗಿತ್ತೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	54	21.5
2	ಇಲ್ಲ	194	78
3	ಗೊತ್ತಿಲ್ಲ	2	0.5
	ಒಟ್ಟು	250	100
ಇದ್ದರೆ, ಹೇಗೆ			
1	ಪೋಲೀಸರ ಮೂಲಕ ಒತ್ತಡ ಹೇರಿದ್ದು + ಭೂಸ್ವಾಧೀನಾಧಿಕಾರಿಗಳಿಂದ ಒತ್ತಡ + ಪುನರ್ವಸತಿ ಸರಿಯಾಗಿ ಕಲ್ಪಿಸುವುದಿಲ್ಲ ಎಂಬ ಒತ್ತಡ	42	17
2	ಪುನರ್ವಸತಿ ಸರಿಯಾಗಿ ಕಲ್ಪಿಸುವುದಿಲ್ಲ ಎಂಬ ಒತ್ತಡ + ಪರಿಹಾರ ಸರಿಯಾಗಿ ನೀಡುವುದಿಲ್ಲ ಎಂದು ಹೆದರಿಸಿರುವುದು	12	5
	ಒಟ್ಟು	54	22

ಭೂಸ್ವಾಧೀನಕ್ಕೋಸ್ಕರ ಸಂಬಂಧಪಟ್ಟ ಪ್ರಾಧಿಕಾರ ಯಾವುದಾದರೂ ರೀತಿಯ ಒತ್ತಡವನ್ನು ಹೇರಿತ್ತೇ ಎಂಬುದರ ಬಗೆಗಿನ ವಿವರಣೆಯನ್ನು ಕೋಷ್ಟಕ ಸಂಖ್ಯೆ 3.23 ವಿವರಿಸುತ್ತದೆ. ಭೂಮಿಯನ್ನು ಸ್ವಾಧೀನ ಪಡಿಸುವುದಕ್ಕಾಗಿ ಒತ್ತಡ ಹೇರಲಾಗಿತ್ತೇ ಎಂಬ ಪ್ರಶ್ನೆಗೆ ಇಲ್ಲವೆಂದು ನೂರತೊಂಬತ್ತನಾಲ್ಕು (78%) ಸಂತ್ರಸ್ತರು ಉತ್ತರಿಸಿದರೆ, ಐವತ್ತನಾಲ್ಕು (22%) ಮಾಹಿತಿದಾರರು ಹೌದು ಎಂಬುದಾಗಿ, ಇಬ್ಬರು (1%) ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಪೋಲೀಸರನ್ನು ಮತ್ತು ಸ್ಥಳೀಯ ಗೂಂಡಾಗಳನ್ನು ಬಳಸಿ ದೈಹಿಕ ಹಲ್ಲೆ, ಮಾನಸಿಕ ಕಿರುಕುಳ ನೀಡುವುದರ ಮೂಲಕ ಭೂಸ್ವಾಧೀನ ಪ್ರಾಧಿಕಾರದ ಅಧಿಕಾರಿಗಳು ನೇರವಾಗಿ ಒತ್ತಡವನ್ನು ಹೇರಿ ಸ್ವಯಂಪ್ರೇರಿತರಾಗಿ ಭೂಮಿಯನ್ನು ನೀಡದೇ ಇದ್ದರೆ ಬಲವಂತದ ಮೂಲಕ ವಶಪಡಿಸಿ ನಂತರ ಸರಿಯಾದ ರೀತಿಯಲ್ಲಿ ಪರಿಹಾರ ಹಾಗೂ ಪುನರ್‌ವಸತಿಯನ್ನು ಕಲ್ಪಿಸಲಾಗುವುದಿಲ್ಲ[30] ಎಂದು ಬೆದರಿಕೆಯನ್ನು ಒಡ್ಡಿ ಅಧಿಕಾರಿಗಳು ನಮ್ಮ ಭೂಮಿಯನ್ನು ಬಲವಂತದಿಂದ ಸ್ವಾಧೀನಪಡಿಸಿರುತ್ತಾರೆ ಎಂದು ಐವತ್ತನಾಲ್ಕು (22%) ಸಂತ್ರಸ್ತರು ಆರೋಪಿಸಿದರೆ, ಪರಿಹಾರ ಸರಿಯಾಗಿ ನೀಡುವುದಿಲ್ಲ ಮತ್ತು ಸ್ಥಳಾಂತರದ ನಂತರದಲ್ಲಿ ಸಮರ್ಪಕ ಪುನರ್‌ವಸತಿಯನ್ನು ಕಲ್ಪಿಸಲಾಗುವುದಿಲ್ಲ ಎಂದು ಬೆದರಿಕೆಯೊಡ್ಡಲಾಗಿತ್ತೆಂದು ಹನ್ನೆರಡು(5%) ಸಂತ್ರಸ್ತರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿರುತ್ತಾರೆ.

ಭೂಮಿಯನ್ನು ಸ್ವಯಂಪ್ರೇರಿತರಾಗಿ ನೀಡದಿದ್ದಲ್ಲಿ ಬಲವಂತದ ಮೂಲಕ ಸ್ವಾಧೀನಪಡಿಸಲಾಗುವುದು ಹಾಗೂ ನಿಮಗೆ ನ್ಯಾಯಯುತವಾಗಿ ಸಿಗಬೇಕಾಗಿರುವ ಪರಿಹಾರಕ್ಕಾಗಿ ಸತಾಯಿಸಲಾಗುವುದು, ಪುನರ್‌ವಸತಿ ಕಾಲನಿಗಳಲ್ಲಿ ಉತ್ತಮ ನಿವೇಶನಗಳನ್ನು ನೀಡಲಾಗುವುದಿಲ್ಲವೆಂದು ಬೆದರಿಕೆಯೊಡ್ಡಿ ನಮ್ಮನ್ನು ಸ್ಥಳಾಂತರಿಸಲಾಯಿತು ಎಂದು ತಮ್ಮ ಅಳಲನ್ನು ತೆರೆದಿಟ್ಟ ಸಂತ್ರಸ್ತರು ಇದರಿಂದಾಗಿ ಭೂಸ್ವಾಧೀನ ಪಡಿಸಲಾಗುವ ಪ್ರದೇಶದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿ ನಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸುವುದಕ್ಕೆ ಧಕ್ಕೆ ಬಂದಿತ್ತು ಎಂಬ ಅಭಿಪ್ರಾಯ ಮತ್ತು ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ. ಬಜ್ಪೆ ಸಮೀಪದ ಕುಡುಬಿಪದವಿನಲ್ಲಿ ಬಲವಂತವಾಗಿ ಪೋಲೀಸ್ ಹಾಗೂ ಸ್ಥಳೀಯ ಗೂಂಡಾಶಕ್ತಿಯನ್ನು ಬಳಸುವುದರ ಮೂಲಕ ಹಲವಾರು ವರ್ಷಗಳಿಂದ ಅಲ್ಲಿ ವಾಸಿಸುತ್ತಿದ್ದ ಪರಿಶಿಷ್ಟ ವರ್ಗಕ್ಕೆ ಸೇರಿದ ಕುಟುಂಬಗಳನ್ನು ಯೋಜನೆಗಾಗಿ ಭೂಮಿಯನ್ನು ಕಳೆದುಕೊಂಡ ಪ್ರಭಾವಿ ಜಾತಿಗೆ ಸೇರಿದ ಸಂತ್ರಸ್ತರುಗಳಿಗೆ ಕಾಲನಿಯನ್ನು ನಿರ್ಮಿಸುವುದಕ್ಕೆ ಸ್ವಾಧೀನಪಡಿಸಿರುವುದು ಸ್ಥಳಾಂತರ ಮತ್ತು ಪುನರ್‌ವಸತಿ ಪ್ರಕ್ರಿಯೆ ಸಹಜ ನ್ಯಾಯಕ್ಕನುಗುಣವಾಗಿ ನಡೆದಿಲ್ಲ[31] ಎಂಬುವುದನ್ನು ತಿಳಿಸುತ್ತದೆ.

ಕಳವಾರು ಚಂದ್ರಹಾಸ ನಗರದಲ್ಲಿ 14.27 ಎಕ್ರೆ ಕೃಷಿ ಭೂಮಿಯನ್ನು ಹೊಂದಿದ್ದ ವಿಕ್ಟರ್ ಡಿ'ಸೋಜಾರವರ (ಹೆಸರು ಬದಲಾಯಿಸಲಾಗಿದೆ) ಭೂಸ್ವಾಧೀನ ಪ್ರಕರಣ ಬಲವಂತದಿಂದಾಗಿಯೇ ನಡೆಸಲ್ಪಟ್ಟಿದ್ದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕರ್ನಾಟಕದ ಹೆಚ್ಚಿನ ಸಮೂಹ ಮಾಧ್ಯಮಗಳಲ್ಲಿ ಚರ್ಚಿಸಲ್ಪಟ್ಟ ವಿಷಯವಾಗಿರುತ್ತದೆ. ಬಲವಂತದಿಂದ ವಿಕ್ಟರ್ ಡಿ'ಸೋಜಾರವರ ಮನೆ ಹಾಗೂ ದನದ ಕೊಟ್ಟಿಗೆಯನ್ನು ಧ್ವಂಸ ಮಾಡಿದ ಭೂಸ್ವಾಧೀನ ಪ್ರಾಧಿಕಾರದ ಅಧಿಕಾರಿಗಳು ಮತ್ತು ಪೋಲೀಸರ ವಿರುದ್ಧ ಮಂಗಳೂರಿನ ಜಿಲ್ಲಾಧಿಕಾರಿಗಳ ಕಚೇರಿ ಎದುರು ಆಮರಣಾಂತ ಉಪವಾಸ ನಡೆಸಿದ ಇವರು ನಾಶಪಡಿಸಿದ ಮನೆಯ ಸಮೀಪದಲ್ಲಿಯೇ ತಾತ್ಕಾಲಿಕ ಶೆಡ್‌ಅನ್ನು ನಿರ್ಮಿಸಿ ವಾಸಿಸುತ್ತಿದ್ದಾರೆ.

ವಿಕ್ಟರ್ ಡಿ'ಸೋಜಾರವರು ಹೇಳಿದಂತೆ ಹಿಂದೆ 75 ಸೆಂಟ್ಸ್ ಮಾತ್ರ ಕೃಷಿ ಜಾಗ ಇದ್ದು ನಮ್ಮ ತಂದೆಯವರು ಹೇಳಿದಂತೆ ಅವರ ಹಿರಿಯರು 14 ಎಕ್ರೆ ಕೃಷಿ ಭೂಮಿಯನ್ನು ಖರೀದಿಸಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದರು. ನಮ್ಮ ಕುಟುಂಬದ ಹಿರಿಯರು 350 ವರ್ಷಗಳ ಹಿಂದೆಯೇ ನಾವು ವಾಸಿಸುತ್ತಿದ್ದ ಮನೆಯನ್ನು ಕಟ್ಟಿಸಿದ್ದರು. ಕಳವಾರಿನಲ್ಲಿರುವ ಪೇಜಾವರ ಚರ್ಚ್ ತನ್ನ 325ನೇ ವರ್ಷಾಚರಣೆಯನ್ನು 2007ರಲ್ಲಿ ಮಾಡಿದ್ದು, ಅದಕ್ಕಿಂತ ಮೊದಲು ಪ್ರಸ್ತುತ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕಾಗಿ ಸ್ವಾಧೀನಪಡಿಸಿದ ನಮ್ಮ ಮನೆಯಲ್ಲಿಯೇ ಆದಿತ್ಯವಾರದ ಸಾರ್ವಜನಿಕ ಪ್ರಾರ್ಥನೆಯನ್ನು ಕಳವಾರಿನ ಕ್ರಿಶ್ಚಿಯನ್ ಕುಟುಂಬಕ್ಕೆ ಸೇರಿದವರು ನೆರವೇರಿಸುವ ಪರಂಪರೆಯಿತ್ತು. ಭೂಸ್ವಾಧೀನಾಧಿಕಾರಿಗಳು ನಮ್ಮ ಕುಟುಂಬದವರ ಯಾವುದೇ ಭಾವನಾತ್ಮಕ ಅಂಶಗಳಿಗೆ

ಪ್ರಾಮುಖ್ಯತೆ ನೀಡದೆ ನಮ್ಮೆದುರೇ ನಮ್ಮ ವಾಸ್ತವ್ಯದ ಮನೆಯನ್ನು ಸಂಪೂರ್ಣವಾಗಿ ಕೆಡವಿ ಹಾಗೂ ನಮ್ಮ ಕೃಷಿ ಭೂಮಿಯಲ್ಲಿ ಬೆಳೆದ ಅಡಿಕೆಯ ಮರಗಳನ್ನು ಜೆ.ಸಿ.ಬಿ.ಯನ್ನು ಬಳಸಿ ಸಂಪೂರ್ಣವಾಗಿ ನಾಶಪಡಿಸಿ ನಮ್ಮನ್ನು ನಿರ್ವಸಿತರನ್ನಾಗಿ ಮಾಡಿರುವುದು ಸರಿಪಡಿಸಲಾಗದ ಮಾನಸಿಕ ಕ್ಲೇಶಕ್ಕೆ ಎಡೆಮಾಡಿಕೊಟ್ಟಿರುತ್ತದೆ[32] ಎಂಬ ಅಭಿಪ್ರಾಯ ಭೂಸ್ವಾಧೀನ ಪ್ರಕ್ರಿಯೆ ಯಾವ ರೀತಿಯಲ್ಲಿ ಬಲಪ್ರಯೋಗದ ಮೂಲಕ ನಡೆಸಲ್ಪಟ್ಟಿತು ಎಂಬುದಕ್ಕೆ ಸ್ಪಷ್ಟ ಸಾಕ್ಷಿಯಾಗಿರುವುದು ಕಂಡು ಬರುತ್ತದೆ.

ಬಜ್ಪೆ ಸಮೀಪದ ತೆಂಕ ಎಕ್ಕಾರಿನ ನಿವಾಸಿಯಾಗಿರುವ ಜರೀನಾರವರ (ಹೆಸರು ಬದಲಾಯಿಸಲಾಗಿದೆ) ಮನೆಸಂಖ್ಯೆ 190/5 ಅವರ ವಾಸದ ಮನೆಯನ್ನು ಕೆ.ಐ.ಎ.ಡಿ.ಬಿ. ಕಾಯ್ದೆಯ ಸೆಕ್ಷನ್ 28(3)ಕ್ಕೆ ಅನುಗುಣವಾಗಿ ಯಾವುದೇ ಸೂಚನೆಗಳನ್ನು ನೀಡದೆ ಸ್ವಾಧೀನಪಡಿಸಲಾಗಿರುತ್ತದೆ. ಭೂಸ್ವಾಧೀನದ ಬಗ್ಗೆ ತಿಳಿದು ಬಂದ ನಂತರ ಕೆ.ಐ.ಎ.ಡಿ.ಬಿಯವರು ಕರೆದ ಸಭೆಯಲ್ಲಿ ಜರೀನಾರವರು ತಮ್ಮ ಭೂಮಿಯ ಸ್ವಾಧೀನದ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿರುತ್ತಾರೆ. ಆದರೂ ಸಭೆಯಲ್ಲಿ ತಮ್ಮ ಆಕ್ಷೇಪವನ್ನು ಸಲ್ಲಿಸಿರುವುದಕ್ಕೆ ಸಭೆಯ ಕಲಾಪದಲ್ಲಿ ಯಾವುದೇ ದಾಖಲಾತಿಗಳನ್ನು ಮಾಡದೇ ಇದ್ದು ಬಲವಂತವಾಗಿ ಅವರ ವಾಸದ ಮನೆಯನ್ನು ಭೂಸ್ವಾಧೀನ ಪ್ರಾಧಿಕಾರ ಸ್ವಾಧೀನಪಡಿಸಿತು. ಮನೆಯಲ್ಲಿದ್ದ ಹಿರಿಯರ ಆರೋಗ್ಯದ ಸಮಸ್ಯೆಯಿಂದಾಗಿ ತಕ್ಷಣದಲ್ಲಿ ಬೇರೆ ಪ್ರದೇಶಕ್ಕೆ ವಾಸ್ತವ್ಯವನ್ನು ಬದಲಿಸಲು ಸಾಧ್ಯವಾಗಿಲ್ಲದೆ ಇರುವುದರಿಂದ ಸ್ವಾಧೀನಪಡಿಸಿದ ಮನೆಯಲ್ಲಿಯೇ ವಾಸಿಸುವುದು ಅನಿವಾರ್ಯವಾಯಿತು. ಮನೆಯ ಆಸುಪಾಸಿನಲ್ಲಿ ವಿಶೇಷ ಆರ್ಥಿಕ ವಲಯದ ನಿರ್ಮಾಣ ಕಾಮಗಾರಿ ಆರಂಭಗೊಂಡು ಬಂಡೆಗಳನ್ನು ಒಡೆಯಲು ಸ್ಫೋಟಕಗಳನ್ನು ಬಳಸಿದ್ದರಿಂದ ಉಂಟಾದ ಶಬ್ದ ಮಾಲಿನ್ಯದಿಂದಾಗಿ ಮನೆಯ ಗೋಡೆಗಳಲ್ಲಿ ಬಿರುಕು ಮೂಡಿ ಅಲ್ಲಿ ವಾಸಿಸುವುದೇ ಕಷ್ಟಕರವಾಗಿ ಮನೆಯನ್ನು ತೆರವುಗೊಳಿಸುವ ಅನಿವಾರ್ಯತೆ ಸೃಷ್ಟಿಯಾಯಿತು[33] ಎಂಬಿತ್ಯಾದಿ ಅಸಹಾಯಕ ಮಾತುಗಳು ಸಂತ್ರಸ್ತರುಗಳು ಅನುಭವಿಸುತ್ತಿದ್ದ ಹಕ್ಕು ಮತ್ತು ಸ್ವಾತಂತ್ರ್ಯಗಳ ಸ್ಪಷ್ಟ ಉಲ್ಲಂಘನೆಯಾಗಿರುವುದಕ್ಕೆ ನಿದರ್ಶನಗಳಾಗಿರುತ್ತದೆ. ಮಾಹಿತಿದಾರರಲ್ಲಿ ಭೂಸ್ವಾಧೀನಕ್ಕಾಗಿ ಪ್ರಾಧಿಕಾರ ಒತ್ತಡ ಹೇರಿತ್ತೇ ಎಂಬುವುದನ್ನು ಪ್ರಶ್ನಿಸಿದಾಗ ಹೌದು ಎಂದು ಉತ್ತರಿಸಿದ 54 ಮಾಹಿತಿದಾರರಲ್ಲಿ 42 ಸಂತ್ರಸ್ತರು ಇದರಿಂದಾಗಿ ಪರಿಸರದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿರುವುದು ಮಾತ್ರವಲ್ಲದೇ ನಮ್ಮ ಹಕ್ಕುಗಳ ಉಲ್ಲಂಘನೆಯಾಗಿ ಸ್ವತಂತ್ರವಾಗಿ ವ್ಯವಹರಿಸುವುದಕ್ಕೆ ಅಡ್ಡಿಯಾಯಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಸ್ಥಳಾಂತರ ಮತ್ತು ವ್ಯಕ್ತಿ ಸ್ವಾತಂತ್ರ್ಯ

ಕೋಷ್ಟಕ–3.24: ಸ್ಥಳಾಂತರದಿಂದಾಗಿ ನಿಮ್ಮ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿರುತ್ತದೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	42	17
2	ಇಲ್ಲ	208	83
	ಒಟ್ಟು	**250**	**100**
ಆಗಿದ್ದರೆ ಯಾವ ರೀತಿ?			
1	ಭಯದ ವಾತವರಣ ಸೃಷ್ಟಿ + ಅಭಿಪ್ರಾಯವನ್ನು ಸ್ವತಂತ್ರವಾಗಿ ವ್ಯಕ್ತಪಡಿಸುವುದಕ್ಕೆ ಧಕ್ಕೆ + ಬಲವಂತದಿಂದ ಒಪ್ಪುವಂತೆ ಮಾಡಿರುವುದು	34	14
2	ಬಲವಂತದಿಂದ ಒಪ್ಪುವಂತೆ ಮಾಡಿರುವುದು + ಹಲ್ಲೆ ಮಾಡಿರುವುದು	8	3
	ಒಟ್ಟು	**42**	**17**

ಭೂಸ್ವಾಧೀನಕ್ಕಾಗಿ ಬೇರೆ ಬೇರೆ ತಂತ್ರಗಳನ್ನು ಬಳಸಿ ಯೋಜನೆಯ ಸಂತ್ರಸ್ತರ ಮೇಲೆ ಒತ್ತಡವನ್ನು ಹೇರಿರುವುದು ಅವರುಗಳ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿರುತ್ತದೆಯೇ ಎಂಬ ಅಂಶವನ್ನು 3.24ರ ಕೋಷ್ಟಕವು ವಿವರಿಸುತ್ತದೆ. ಇನ್ನೂರಎಂಟು (83%) ಮಾಹಿತಿದಾರರು ಈ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಿದರೆ ನಲವತ್ತೆರಡು ಮಾಹಿತಿದಾರರು (17%) ಹೌದು ಎಂದು ಉತ್ತರಿಸಿರುತ್ತಾರೆ. ಭೂಸ್ವಾಧೀನಕ್ಕಾಗಿ ಒತ್ತಡವನ್ನು ಹೇರಿರುವುದರಿಂದ ಭಯದ ವಾತಾವರಣ ಸೃಷ್ಟಿಯಾಗಿದ್ದು, ನಮ್ಮ ಅಭಿಪ್ರಾಯವನ್ನು ಮುಕ್ತವಾಗಿ, ನಿರ್ಭೀತಿಯಿಂದ ವ್ಯಕ್ತಪಡಿಸಲಾಗದ ವ್ಯವಸ್ಥೆ ನಿರ್ಮಾಣವಾಗಿರುವುದಲ್ಲದೇ ಬಲಪ್ರಯೋಗಿಸಿ, ನಮ್ಮ ಇಚ್ಛೆಯನ್ನು ಸಂಪೂರ್ಣವಾಗಿ ಕಡೆಗಣಿಸಿ ಭೂಸ್ವಾಧೀನ ಮಾಡಲಾಗಿರುತ್ತದೆಯೆಂದು ಮೂವತ್ತನಾಲ್ಕು (14%) ಸಂತ್ರಸ್ತರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಭೂಸ್ವಾಧೀನಕ್ಕೆ ಒಪ್ಪದಿರುವುದಕ್ಕೆ ದೈಹಿಕವಾಗಿ ಹಲ್ಲೆ ಮಾಡಿ, ಸುಳ್ಳು ಆರೋಪ ಮತ್ತು ನಕಲಿ ಪೋಲೀಸ್ ದಾವೆಗಳನ್ನು ಹೇರಿ ಒಪ್ಪುವಂತೆ ಮಾಡಲಾಗಿದೆ ಎಂದು ಎಂಟು (3%) ಮಾಹಿತಿದಾರರು ತಮ್ಮ ಅಳಲು, ಆಕ್ರೋಶ ಮತ್ತು ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ.

ಅಧಿಕಾರಿಗಳಿಂದ ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದನೆ

ಕೋಷ್ಟಕ–3.25: ಅಧಿಕಾರಿಗಳು ನಿಮ್ಮ ಸಮಸ್ಯೆಗೆ ಸ್ಪಂದಿಸಿರುತ್ತಾರೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	18	7
2	ಇಲ್ಲ	232	93
	ಒಟ್ಟು	**250**	**100**
ಸ್ಪಂದಿಸಿದರೆ ಯಾವ ರೀತಿ?			
1	ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ + ನಿವೇಶನಗಳ ಆಯ್ಕೆಯಲ್ಲಿ + ತ್ವರಿತಪರಿಹಾರಕ್ಕಾಗಿ	14	6
2	ತ್ವರಿತಪರಿಹಾರಕ್ಕಾಗಿ	4	2
	ಒಟ್ಟು	**18**	**7**

ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ಅಧಿಕಾರಿಗಳು ಸಂತ್ರಸ್ತರ ಸಮಸ್ಯೆಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸುತ್ತಿದ್ದರು ಎಂಬುದರ ಬಗ್ಗೆ ಕೋಷ್ಟಕ ಸಂಖ್ಯೆ 3.25ರಲ್ಲಿ ಉಲ್ಲೇಖಿಸಲಾಗಿರುತ್ತದೆ. ತಮ್ಮ ಸಮಸ್ಯೆಗಳಿಗೆ ತಕ್ಷಣದಲ್ಲಿ ಪ್ರತಿಕ್ರಿಯಿಸಿ ಪರಿಹರಿಸಿದರೆಂದು ಹದಿನೆಂಟು (7%) ಸಂದರ್ಶಿತರು ತಿಳಿಸಿದರೆ, ಯಾವ ರೀತಿಯಲ್ಲಿಯೂ ಅಧಿಕಾರಿಗಳು ನಮ್ಮ ಸಮಸ್ಯೆಗಳಿಗೆ ಸ್ಪಂದಿಸಿರಲಿಲ್ಲವೆಂದು ಬಹುಸಂಖ್ಯೆಯ ಇನ್ನೂರಮೂವತ್ತೆರಡು (93%) ಸಂತ್ರಸ್ತರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಪುನರ್‌ವಸತಿ ಪ್ರದೇಶದಲ್ಲಿ ನಿವೇಶನಗಳ ಆಯ್ಕೆಯಲ್ಲಿ, ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ, ತ್ವರಿತವಾಗಿ ಪರಿಹಾರವನ್ನು ಪಡೆಯುವಲ್ಲಿ ಅಧಿಕಾರಿಗಳು ಸಹಕರಿಸಿದರೆಂದು ಹದಿನಾಲ್ಕು (6%) ಮಾಹಿತಿದಾರರು ತಿಳಿಸಿದ್ದು, ಪರಿಹಾರವನ್ನು ಪಡೆಯುವಲ್ಲಿ ಅಧಿಕಾರಿಗಳು ಸಹಾಯವನ್ನು ಮಾಡಿರುತ್ತಾರೆಂದು ನಾಲ್ಕು (2%) ಸಂತ್ರಸ್ತರು ತಿಳಿಸಿರುತ್ತಾರೆ.

ಕೋಷ್ಟಕ–3.26: ಪುನರ್‌ವಸತಿಯನ್ನು ಕಲ್ಪಿಸುವಾಗ ನಿಮ್ಮ ಅಭಿಪ್ರಾಯವನ್ನು ಯಾವ ಸಂದರ್ಭಗಳಲ್ಲಿ ಕೇಳಿರುತ್ತಾರೆ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಪುನರ್‌ವಸತಿ ಪ್ರದೇಶಗಳ ಆಯ್ಕೆಯ ಬಗ್ಗೆ	17	7
2	ಪುನರ್‌ವಸತಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರ ಬಗ್ಗೆ + ನೀತಿ ರೂಪಣೆಯಲ್ಲಿ ಭಾಗವಹಿಸುವಿಕೆ	233	93
ಒಟ್ಟು		**250**	**100**

ಪುನರ್‌ವಸತಿ ಪ್ರದೇಶದಲ್ಲಿ ನಿವೇಶನಗಳನ್ನು ವಿತರಿಸುವಾಗ, ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಸಂದರ್ಭದಲ್ಲಿ ಮತ್ತು ನೀತಿ ರೂಪಣೆಯಲ್ಲಿ ಭಾಗವಹಿಸಲು ಅಧಿಕಾರಿಗಳು ಅವಕಾಶವನ್ನು ಮಾಡಿಕೊಟ್ಟಿರುತ್ತಾರೆಂದು ಇನ್ನೂರ ಮೂವತ್ತಮೂರು (93%) ಸಂತ್ರಸ್ತರು ತಿಳಿಸಿದರೆ, ಪುನರ್‌ವಸತಿ ಪ್ರದೇಶಗಳಲ್ಲಿ ನಿವೇಶನಗಳ ಆಯ್ಕೆಯ ಸಂದರ್ಭದಲ್ಲಿ ಮಾತ್ರ ಅಧಿಕಾರಿಗಳು ನಮ್ಮ ಅಭಿಪ್ರಾಯವನ್ನು ಕೇಳಿರುತ್ತಾರೆಂದು ಹದಿನೇಳು (7%) ಮಾಹಿತಿದಾರರು ತಿಳಿಸಿರುತ್ತಾರೆ.

ಸಂತ್ರಸ್ತರು ಭೂಸ್ವಾಧೀನವನ್ನು ವಿರೋಧಿಸಿ ರಚಿಸಿದ್ದ ಸಂಘಟನೆಗಳು

ಕೋಷ್ಟಕ–3.27(1): ನೀವು ಯಾವುದಾದರೂ ಸಂಘಟನೆಯನ್ನು ರಚಿಸಿರುತ್ತೀರಾ?

ಕ್ರಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	30	12
2	ಇಲ್ಲ	220	88
	ಒಟ್ಟು	250	100
ಹೌದಾದರೆ, ಅದರ ಉದ್ದೇಶ			
1	ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕಾಗಿ	10	4
2	ಭೂಮಿ ಉಳಿಸಲು ಹೋರಾಟ ಸಂಘಟಿಸುವುದಕ್ಕಾಗಿ	6	2
3	ಸಮಸ್ಯೆಗಳಿಗೆ ಪರಿಹಾರ ಒದಗಿಸುವುದಕ್ಕಾಗಿ	7	3
4	ಉತ್ತಮ ಪುನರ್‌ವಸತಿ ವ್ಯವಸ್ಥೆಗಾಗಿ	5	2
5	ಯೋಗ್ಯ ಪರಿಹಾರವನ್ನು ಪಡೆಯುವುದಕ್ಕಾಗಿ	2	1
	ಒಟ್ಟು	30	12

ಭೂಸಂತ್ರಸ್ತರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು, ಭೂಸ್ವಾಧೀನ ಪ್ರಾಧಿಕಾರ ಮತ್ತು ಸರಕಾರದ ಮೇಲೆ ಒತ್ತಡವನ್ನು ಹೇರುವುದಕ್ಕಾಗಿ ಯಾವುದಾದರೂ ಸಂಘಟನೆಗಳನ್ನು ರಚಿಸಿಕೊಂಡಿದ್ದರೇ ಎಂಬುದರ ವಿವರಣೆಯನ್ನು 3.27.1ರ ಕೋಷ್ಟಕ ವಿವರಿಸುತ್ತದೆ. ಸಂಘಟನೆಗಳನ್ನು ರಚಿಸಿರಲಿಲ್ಲವೆಂದು ಇನ್ನೂರ ಇಪ್ಪತ್ತು (88%) ಸಂತ್ರಸ್ತರು ತಿಳಿಸಿದರೆ, ರಚಿಸಿದ್ದೆವು ಎಂದು ಮೂವತ್ತು (12%) ಮಾಹಿತಿದಾರರು ತಿಳಿಸಿರುತ್ತಾರೆ. ಸಂಘಟನೆಯ ಉದ್ದೇಶಗಳ ಬಗ್ಗೆ ಕೇಳಿದಾಗ ಹತ್ತು ಸಂದರ್ಶಿತರು ಸಂತ್ರಸ್ತರ ಸಮಸ್ಯೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದಕ್ಕಾಗಿ ಎಂದರೆ, ಭೂಮಿಯನ್ನು ಸ್ವಾಧೀನಪಡಿಸದೇ ಉಳಿಸಿಕೊಳ್ಳುವುದಕ್ಕಾಗಿ ಸಂಘಟನೆಯನ್ನು ರಚಿಸಲಾಗಿತ್ತು ಎಂದು ಆರು (2%) ಸಂದರ್ಶನಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ. ಭೂಸಂತ್ರಸ್ತರು ಎದುರಿಸುವ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಲು ಪ್ರಯತ್ನಿಸುವುದಕ್ಕಾಗಿ ಅವುಗಳನ್ನು ರಚಿಸಲಾತ್ತೆಂದು ಏಳು (3%) ಮಾಹಿತಿದಾರರು ತಿಳಿಸಿರುತ್ತಾರೆ. ಪುನರ್‌ವಸತಿ ಕಾಲನಿಗಳಲ್ಲಿ ಉತ್ತಮ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಆಗ್ರಹಿಸುವುದಕ್ಕೋಸ್ಕರ ಎಂದು ಐದು (2%) ಮತ್ತು ಯೋಗ್ಯ ಪರಿಹಾರವನ್ನು ಪಡೆಯುವುದಕ್ಕಾಗಿಯೆಂದು ಇಬ್ಬರು ಮಾಹಿತಿದಾರರು ಉತ್ತರಿಸಿರುತ್ತಾರೆ.

ಕೋಷ್ಟಕ–3.27(2): ಯಾವ ವಿಷಯಕ್ಕೆ ಸಂಘಟನೆ ಹೆಚ್ಚಿನ ಆದ್ಯತೆ ನೀಡಿರುತ್ತದೆ?

ಕ್ರಸಂ.	ಉತ್ತರ	ಸಂಖ್ಯೆ	ಶೇಕಡಾ
1.	ಸರಿಯಾದ ಪರಿಹಾರಗಳು ದೊರಕುವಂತೆ ಮಾಡುವುದು + ಹೋರಾಟದ ರೂಪುರೇಷೆಯನ್ನು ನಿರ್ಧರಿಸುವುದು + ಪುನರ್‌ವಸತಿ ಕಾಲನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರ ಬಗ್ಗೆ	29	97
2.	ಪುನರ್‌ವಸತಿ ಕಾಲನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರ ಬಗ್ಗೆ + ಸಮಸ್ಯೆಗಳಿಗೆ ಪ್ರಚಾರ ನೀಡುವುದಕ್ಕೆ	1	03
	ಒಟ್ಟು	**30**	**100**

ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರಿಗೆ ಪರಿಹಾರಗಳನ್ನು ಕ್ಲಪ್ತ ಸಮಯಕ್ಕೆ ಸರಿಯಾದ ರೀತಿಯಲ್ಲಿ ದೊರಕುವಂತೆ ಮಾಡುವುದು, ಹೋರಾಟಗಳ ರೂಪುರೇಷೆಯನ್ನು ನಿರ್ಧರಿಸುವುದು ಮತ್ತು ಪುನರ್‌ವಸತಿ ಕಾಲನಿಗಳಲ್ಲಿ ಮೂಲಭೂತ ವ್ಯವಸ್ಥೆಗಳನ್ನು ಸರಿಯಾಗಿ ಕಲ್ಪಿಸುವುದಕ್ಕೆ ಒತ್ತಡ ಹೇರುವುದು ಸಂಘಟನೆಯ ಆದ್ಯತೆಯೆಂದು ಇಪ್ಪತ್ತೊಂಬತ್ತು (97%) ಮಾಹಿತಿದಾರರು ತಿಳಿಸಿದರೆ, ಒಬ್ಬರು ಮಾತ್ರ ಸಂಘಟನೆಯ ಉದ್ದೇಶ ಭೂಸಂತ್ರಸ್ತರ ಸಮಸ್ಯೆಗಳಿಗೆ ಪ್ರಚಾರಕೊಡುವುದು, ಪುನರ್‌ವಸತಿ ಕಾಲನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ಒತ್ತಡ ಹೇರುವುದು ಎಂದು ಹೇಳಿರುವುದನ್ನು 3.27.2 ರ ಕೋಷ್ಟಕವು ವಿವರಿಸುತ್ತದೆ.

ಸಂತ್ರಸ್ತರು ಮತ್ತು ಸ್ಥಳೀಯ ಸಂಘಟನೆಗಳು

ಕೋಷ್ಟಕ–3.28(1) ನೀವು ಯಾವುದಾದರೂ ಸ್ಥಳೀಯ ಸಮಾಜ ಸೇವಾ ಸಂಘಟನೆಗಳಲ್ಲಿ ಸದಸ್ಯರಾಗಿರುತ್ತೀರಾ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	81	32
2	ಇಲ್ಲ	169	68
	ಒಟ್ಟು	**250**	**100**
ಹೌದಾದರೆ, ಯಾವ ರೀತಿಯ ಸಮಾಜಸೇವಾ ಸಂಘಟನೆಗಳಲ್ಲಿ			
1	ಯುವಕ / ಯುವತಿ ಮಂಡಲಗಳು + ಭಜನಾ ಮಂಡಳಿಗಳು + ಸ್ವಸಹಾಯ ಗುಂಪುಗಳು + ಇತರ ಸಮಾಜ ಸೇವಾ ಸಂಸ್ಥೆಗಳು	66	26
2	ಯುವಕ / ಯುವತಿ ಮಂಡಲಗಳು + ಸ್ವಸಹಾಯ ಗುಂಪುಗಳು	15	06
	ಒಟ್ಟು	**81**	**32**

ಸಮಾಜ ಸೇವಾ ಸಂಘಟನೆಗಳಲ್ಲಿ ಸದಸ್ಯತ್ವ ಜನರಲ್ಲಿ ಸಮಾಜೀಕರಣ ಪ್ರಕ್ರಿಯೆಗೆ ಅವಕಾಶ ಮಾಡಿಕೊಡುತ್ತದೆ. ಸ್ಥಳಾಂತರದ ಪೂರ್ವದಲ್ಲಿ ಸಂತ್ರಸ್ತರುಗಳು ಯಾವುದಾದರೂ ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೇ? ಎಂದು ಪ್ರಶ್ನಿಸಿದಾಗ 81(32%) ಮಾಹಿತಿದಾರರು ಹೌದು ಎಂದು ಉತ್ತರಿಸಿದರೆ, ಬಹುಸಂಖ್ಯೆಯ 169(68%) ಸಂತ್ರಸ್ತರು ಇಲ್ಲ ಎಂದು ಉತ್ತರಿಸಿರುತ್ತಾರೆ. ಹೌದು ಎಂದು ಉತ್ತರಿಸಿದ 81(32%) ಸಂದರ್ಶಿತರಲ್ಲಿ 66(26%) ಯುವಕ/ಯುವತಿ ಮಂಡಳಿಗಳಲ್ಲಿ, ಸ್ವಸಹಾಯ ಗುಂಪುಗಳು, ಭಜನಾ ಮಂಡಳಿಗಳೂ ಹಾಗೂ ಸ್ಥಳೀಯ ಇತರ ಸಮಾಜ ಸೇವಾ ಸಂಘಟನೆಗಳಲ್ಲಿ ಸದಸ್ಯರಾಗಿದ್ದೆವು ಎಂದು ಉತ್ತರಿಸಿರುತ್ತಾರೆ. ಹದಿನೈದು (6%) ಮಾಹಿತಿದಾರರು ಸ್ವಸಹಾಯ ಗುಂಪು ಹಾಗೂ ಯುವಕ / ಯುವತಿ ಮಂಡಳಿಗಳಲ್ಲಿ ಸದಸ್ಯರಾಗಿ ತೊಡಗಿಸಿಕೊಂಡಿದ್ದೆವು ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ.

ಕೋಷ್ಟಕ–3.28(2) ನೀವು ಅದರಲ್ಲಿ ಪದಾಧಿಕಾರಿಗಳು ಆಗಿದ್ದೀರಾ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	25	31
2	ಇಲ್ಲ	56	69
	ಒಟ್ಟು	**81**	**100**
ಹೌದಾದರೆ, ಸಂಘಟನೆಗಳಲ್ಲಿ ನಿಮ್ಮ ಭಾಗವಹಿಸುವಿಕೆ ಯಾವ ರೀತಿಯಲ್ಲಿದೆ?			
1	ಸಾಧಾರಣ	3	4
2	ಉತ್ತಮ	50	61
3	ಅತ್ಯುತ್ತಮ	25	31
4	ಇಲ್ಲ	3	4
	ಒಟ್ಟು	**81**	**100**

ಸ್ಥಳೀಯ ಸಂಘಟನೆಗಳಲ್ಲಿ ನೀವು ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿರುತ್ತೀರಾ ಎಂಬ ಪ್ರಶ್ನೆಗೆ ಇಪ್ಪತ್ತೈದು (31%) ಮಾಹಿತಿದಾರರು ಹೌದು ಎಂದು ಉತ್ತರಿಸಿದರೆ ಐವತ್ತಾರು (69%) ಸಂದರ್ಶಿತರು ಇಲ್ಲ ಎಂದಿದ್ದಾರೆ. ಸಂಘಟನೆಯ ಚಟುವಟಿಕೆಗಳಲ್ಲಿ ಯಾವ ರೀತಿಯಲ್ಲಿ ನೀವು ಭಾಗವಹಿಸುತ್ತಿದ್ದೀರಾ ಎಂಬುದಕ್ಕೆ ಉತ್ತಮ ರೀತಿಯಲ್ಲಿ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೇವೆ ಎಂದು ಐವತ್ತು ಮಾಹಿತಿದಾರರು (61%) ಅಭಿಪ್ರಾಯ ವ್ಯಕ್ತಪಡಿಸಿದರೆ, ಇಪ್ಪತ್ತೈದು (31%) ಸಂತ್ರಸ್ತರು ಅತ್ಯುತ್ತಮ ರೀತಿಯಲ್ಲಿ ಭಾಗವಹಿಸುತ್ತಿದ್ದೆವು ಎಂದಿರುತ್ತಾರೆ. ಭಾಗವಹಿಸುವಿಕೆಯ ಮಟ್ಟ ಸಾಧಾರಣ ರೀತಿಯಲ್ಲಿತ್ತು ಎಂದು ಮೂವರು (4%) ಅಭಿಪ್ರಾಯ ತಿಳಿಸಿದರೆ, ಉಳಿದ ಮೂವರು (4%) ಚಟುವಟಿಕೆಗಳಲ್ಲಿ ಯಾವುದೇ ರೀತಿಯಲ್ಲಿ ಭಾಗವಹಿಸುತ್ತಿರಲಿಲ್ಲ ಎಂದಿದ್ದಾರೆ.

ಕೋಷ್ಟಕ–3.28(3) ಸಂಘಟನೆಗಳು ನಿಮ್ಮ ಸಮಸ್ಯೆಗಳ ಬಗ್ಗೆ ಯಾವತ್ತಾದರೂ ಚರ್ಚಿಸಿವೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	28	35
2	ಇಲ್ಲ	53	65
	ಒಟ್ಟು	**81**	**100**
ಹೌದಾದರೆ, ಸಂಘಟನೆಗಳಲ್ಲಿ ಯಾವ ವಿಷಯವನ್ನು ಚರ್ಚಿಸಲಾಗಿತ್ತು			
1	ಅಧಿಕಾರಿಗಳ ಮೇಲೆ ಒತ್ತಡ ಹೇರುವುದು + ಪ್ರತಿಭಟನೆ ನಡೆಸುವುದು + ರಾಜಕೀಯ ಪಕ್ಷಗಳ ಮೇಲೆ ಒತ್ತಡ ಹೇರುವುದು	25	31.25
2	ಪತ್ರಿಕೆಗಳಲ್ಲಿ ಪ್ರಚಾರ	3	3.75
	ಒಟ್ಟು	**28**	**35**

ಯೋಜನೆಯ ಸಂತ್ರಸ್ತರ ಸಮಸ್ಯೆಗಳನ್ನು ಸ್ವಯಂಸೇವಾ ಸಂಘಟನೆಗಳು ಯಾವ ರೀತಿಯಲ್ಲಿ ಪ್ರತಿನಿಧಿಸುತ್ತಿದ್ದವು ಎಂಬುದರ ವಿವರಣೆಯನ್ನು 3.28 (3) ರ ಕೋಷ್ಟಕದಲ್ಲಿ ವಿವರಿಸಲಾಗಿರುತ್ತದೆ. ಸಂಘಟನೆಗಳು ನಿಮ್ಮ ಸಮಸ್ಯೆಗಳ ಬಗ್ಗೆ ಯಾವತ್ತಾದರೂ ಚರ್ಚಿಸಿದ್ದವೇ ಎಂಬ ಪ್ರಶ್ನೆಗೆ ಇಲ್ಲ ಎಂದು ಐವತ್ತಮೂರು (65%)

ಮಾಹಿತಿದಾರರು ಅಭಿಪ್ರಾಯಪಟ್ಟರೆ ಇಪ್ಪತ್ತೆಂಟು ಸಂತ್ರಸ್ತರು (35%) ಹೌದು ಎಂದು ಉತ್ತರಿಸಿರುತ್ತಾರೆ. ಪುನರ್‌ವಸತಿ ಪ್ರದೇಶಗಳಲ್ಲಿ ಉತ್ತಮ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸುವುದಕ್ಕೋಸ್ಕರ ಅಧಿಕಾರಿಗಳು ಮತ್ತು ರಾಜಕೀಯ ಪಕ್ಷಗಳ ನಾಯಕರ ಮೇಲೆ ಒತ್ತಡವನ್ನು ಹೇರುವುದಕ್ಕಾಗಿ, ಶೀಘ್ರವಾಗಿ ಪರಿಹಾರವನ್ನು ಸಂತ್ರಸ್ತರಿಗೆ ದೊರಕುವಂತೆ ಮಾಡಲು ಪ್ರತಿಭಟನೆಯನ್ನು ಹಮ್ಮಿಕೊಳ್ಳುವುದಕ್ಕಾಗಿ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಗಳನ್ನು ಸಲ್ಲಿಸಿ ಒತ್ತಡ ಹೇರುವ ಕಾರ್ಯಗಳನ್ನು ಸಂಘಟನೆಗಳು ಮಾಡುತ್ತಿದ್ದವೆಂದು ಇಪ್ಪತ್ತೈದು (31.25%) ಮಾಹಿತಿದಾರರು ತಿಳಿಸಿದ್ದು, ಸಮಸ್ಯೆಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಚಾರವನ್ನು ನೀಡುವುದಕ್ಕೆ ಸಂಘಟನೆಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಿದ್ದವು ಎಂದು ಮೂವರು (3.75%) ಮಾಹಿತಿದಾರರು ತಿಳಿಸಿರುತ್ತಾರೆ.

ಸ್ಥಳೀಯ ಆಡಳಿತ ಸಂಸ್ಥೆಗಳು ಮತ್ತು ಸಂತ್ರಸ್ತರು

ಕೋಷ್ಟಕ–3.29: ಸ್ಥಳೀಯ ಆಡಳಿತ ಸಂಸ್ಥೆಗಳು ನಿಮ್ಮ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆಯನ್ನು ಕೊಡುತ್ತಿದ್ದವೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	59	24
2	ಇಲ್ಲ	191	76
	ಒಟ್ಟು	**250**	**100**
ಇಲ್ಲ ಎಂದಾದರೆ ಕಾರಣಗಳು			
1	ಸ್ಥಳೀಯ ಆಡಳಿತಕ್ಕೆ ಆಸಕ್ತಿ ಇಲ್ಲದೆ ಇರುವುದು	150	60
2	ಜವಾಬ್ದಾರಿ ಇಲ್ಲದೆ ಇರುವುದು	25	10
3	ಜನರ ಬಗ್ಗೆ ಕಾಳಜಿ ಇಲ್ಲದೇ ಇರುವುದು	16	6
	ಒಟ್ಟು	**191**	**76**

ಸ್ಥಳೀಯ ಆಡಳಿತ ಸಂಸ್ಥೆಗಳು ಯೋಜನೆಯ ಸಂತ್ರಸ್ತರ ಸಮಸ್ಯೆಗಳನ್ನು ಪರಿಹರಿಸಲು ಆದ್ಯತೆಯನ್ನು ನೀಡಿರುತ್ತವೆಯೇ ಎಂಬ ಪ್ರಶ್ನೆಗೆ ಹೌದು ಎಂದು ಐವತ್ತೊಂಬತ್ತು (24%) ಸಂತ್ರಸ್ತರು ಅಭಿಪ್ರಾಯಪಟ್ಟರೆ, ಇಲ್ಲವೆಂದು ನೂರತೊಂಬತ್ತೊಂದು (76%) ಮಾಹಿತಿದಾರರು ಉತ್ತರಿಸಿರುತ್ತಾರೆ. ಸ್ಥಳೀಯಾಡಳಿತಕ್ಕೆ ಯೋಜನೆಯ ಸಂತ್ರಸ್ತರ ಸಮಸ್ಯೆಗಳನ್ನು ಬಗೆಹರಿಸಲು ಆಸಕ್ತಿ ಇಲ್ಲದೇ ಇರುವುದು ಇದಕ್ಕೆ ಕಾರಣವೆಂದು ನೂರಐವತ್ತು ಮಾಹಿತಿದಾರರು (60%) ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದರೆ, ಇಪ್ಪತ್ತೈದು (10%) ಸಂತ್ರಸ್ತರು ಸ್ಥಳೀಯ ಆಡಳಿತವು ಸಂತ್ರಸ್ತರುಗಳ ಸಮಸ್ಯೆಗಳಿಗೆ ಸ್ಪಂದಿಸದೇ ಬೇಜವಾಬ್ದಾರಿಯುತವಾಗಿ ವರ್ತಿಸಿದವು ಎಂದಿದ್ದಾರೆ. ಸಂತ್ರಸ್ತರ ಸಮಸ್ಯೆಗಳ ಬಗ್ಗೆ ಕಾಳಜಿ ಇಲ್ಲದೇ ಇರುವುದು ಹಾಗೂ ಭೂಸ್ವಾಧೀನ ಪ್ರಾಧಿಕಾರದ ಪರವಾಗಿ ಕಾರ್ಯನಿರ್ವಹಿಸುತ್ತಿದ್ದುದು ಇದಕ್ಕೆ ಕಾರಣವಾಗಿರುತ್ತದೆಂದು ಹದಿನಾರು ಮಾಹಿತಿದಾರರು (6%) ಆರೋಪಿಸಿರುತ್ತಾರೆ.

ರಾಜಕೀಯ ಪಕ್ಷಗಳು ಮತ್ತು ಭೂಸಂತ್ರಸ್ತರು

ಕೋಷ್ಟಕ-3.30: ರಾಜಕೀಯ ಪಕ್ಷಗಳಿಗೆ ನಿಮ್ಮ ಸಮಸ್ಯೆಗಳ ಬಗ್ಗೆ ಅರಿವಿತ್ತೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	219	88
2	ಇಲ್ಲ	31	12
	ಒಟ್ಟು	**250**	**100**
ಹೌದಾದರೆ, ಬೆಂಬಲ ನೀಡಿದ ಕಾರಣಗಳು			
1	ತಮ್ಮ ಮತ ಬ್ಯಾಂಕನ್ನು ಭದ್ರ ಪಡಿಸುವುದು + ಸಮಸ್ಯೆಗಳನ್ನು ರಾಜಕೀಯ ಲಾಭಕ್ಕಾಗಿ ಬಳಕೆಮಾಡುವುದು + ಬೇರೆ ಪಕ್ಷಗಳನ್ನು ಟೀಕೆ ಮಾಡುವುದಕ್ಕಾಗಿ ಬಳಕೆ ಮಾಡುವುದು	146	58
2	ಬೇಜವಾಬ್ದಾರಿಯುತ ವರ್ತನೆ + ಸಂತ್ರಸ್ತರ ಬಗ್ಗೆ ಕಾಳಜಿ ಇಲ್ಲದೇ ಇರುವುದು	45	18
3	ಪ್ರಾಮಾಣಿಕವಾಗಿ ಸ್ಪಂದಿಸಿದರು	28	11
	ಒಟ್ಟು	**219**	**88**

ರಾಜಕೀಯ ಪಕ್ಷಗಳು ಮತ್ತು ಯೋಜನೆಯ ಸಂತ್ರಸ್ತರ ನಡುವಿನ ಸಂಬಂಧವನ್ನು ಕೋಷ್ಟಕ 3.30 ವಿವರಿಸುತ್ತದೆ. ರಾಜಕೀಯ ಪಕ್ಷಗಳು ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸಿರುತ್ತವೆಯೇ ಎಂಬ ಪ್ರಶ್ನೆಗೆ ಇನ್ನೂರಹತ್ತೊಂಬತ್ತು(88%) ಸಂದರ್ಶಿತರು ಹೌದು ಎಂದು ಉತ್ತರಿಸಿದರೆ, ಮೂವತ್ತೊಂದು ಮಾಹಿತಿದಾರರು(12%) ಇಲ್ಲ ಎಂದಿದ್ದಾರೆ. ತಮ್ಮ ಮತಬ್ಯಾಂಕನ್ನು ಭದ್ರಪಡಿಸುವುದು, ಸಮಸ್ಯೆಗಳನ್ನು ರಾಜಕೀಯ ಲಾಭಕ್ಕಾಗಿ ಬಳಕೆ ಮಾಡುವುದು ಮತ್ತು ಬೇರೆ ಪಕ್ಷಗಳನ್ನು ಟೀಕಿಸುವುದಕ್ಕೋಸ್ಕರ ರಾಜಕೀಯ ಪಕ್ಷಗಳು ನಮ್ಮನ್ನು ಬೆಂಬಲಿಸಿದ್ದವೆಂದು ನೂರನಲವತ್ತಾರು (58%) ಸಂತ್ರಸ್ತರು ಅಭಿಪ್ರಾಯ ಪಟ್ಟರೆ, ರಾಜಕೀಯ ಪಕ್ಷಗಳು ಬೇಜವಾಬ್ದಾರಿಯುತವಾಗಿ ವರ್ತಿಸಿದವು, ಅವುಗಳಿಗೆ ನಮ್ಮ ಸಮಸ್ಯೆಗಳ ಬಗ್ಗೆ ಕಾಳಜಿ ಇರಲಿಲ್ಲ ಎಂದು ನಲ್ವತ್ತೈದು (18%) ಸಂತ್ರಸ್ತರು ಆರೋಪಿಸಿದರೆ, ರಾಜಕಾರಣಿಗಳು ಪ್ರಾಮಾಣಿಕವಾಗಿ ನಮ್ಮ ಸಮಸ್ಯೆಗಳಿಗೆ ಸ್ಪಂದಿಸಿದ್ದರು ಎಂದು ಇಪ್ಪತ್ತೆಂಟು (11%) ಸಂತ್ರಸ್ತರು ತಿಳಿಸಿರುತ್ತಾರೆ. ರಾಜಕೀಯ ಪಕ್ಷಗಳು ನಮ್ಮ ಹಿತಾಸಕ್ತಿಯನ್ನು ಬೆಂಬಲಿಸಲು ಅವರ ಮೇಲೆ ಒತ್ತಡ ಹಾಕಿರುವುದು, ಮನವಿ ಮಾಡಿ ನಮ್ಮ ಸಮಸ್ಯೆಗಳನ್ನು ಪರಿಹರಿಸಲು ಆಗ್ರಹಿಸುವುದು ಕಾರಣವಾಗಿರುತ್ತದೆಂದು ನೂರಐವತ್ತನಾಲ್ಕು (62%) ಸಂತ್ರಸ್ತರು ತಿಳಿಸಿದರೆ, ಏನೂ ಮಾಡಿಲ್ಲ ಅವರಾಗಿಯೇ ನಮ್ಮ ಸಮಸ್ಯೆಗಳನ್ನು ಕಂಡು ಸಹಾಯಹಸ್ತವನ್ನು ಚಾಚಿದರು ಎಂದು ತೊಂಬತ್ತಾರು (38%) ಸಂತ್ರಸ್ತರು ಹೇಳಿರುತ್ತಾರೆ.

ಸಂತ್ರಸ್ತರು ಮತ್ತು ಹೋರಾಟದ ನಾಯಕತ್ವ

ಕೋಷ್ಟಕ–3.31(1) ಸಂತ್ರಸ್ತರ ಪರವಾಗಿ ಹೋರಾಟಗಳನ್ನು ಸಂಘಟಿಸಿದ ನಾಯಕರ ಬಗೆಗೆ ತಿಳಿದಿರುತ್ತದೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	107	43
2	ಇಲ್ಲ	143	57
ಒಟ್ಟು		**250**	**100**

ಭೂಸಂತ್ರಸ್ತರ ಪರವಾಗಿ ಹಲವಾರು ಹೋರಾಟಗಾರರು ಅವರ ಹಕ್ಕುಗಳನ್ನು ರಕ್ಷಿಸಲು ಹೋರಾಟಗಳನ್ನು ಸಂಘಟಿಸಿರುತ್ತಾರೆ. ನಿಮ್ಮ ಬೇಡಿಕೆಗಳ ಪರವಾಗಿ ಹೋರಾಟ ಮಾಡಿದ ನಾಯಕರುಗಳ ಬಗ್ಗೆ ನಿಮಗೆ ಎಷ್ಟು ತಿಳಿದಿತ್ತು ಎಂಬುದನ್ನು ಪ್ರಶ್ನಿಸಿದಾಗ ತಿಳಿದಿತ್ತು ಎಂದು ನೂರಏಳು (43%) ಮಾಹಿತಿದಾರರು ಅನಿಸಿಕೆಯನ್ನು ವ್ಯಕ್ತಪಡಿಸಿದರೆ, ಹೋರಾಟಗಾರರು ಹಾಗೂ ನಾಯಕರುಗಳ ಬಗ್ಗೆ ಏನೂ ಗೊತ್ತಿರಲಿಲ್ಲವೆಂದು ನೂರನಲ್ವತ್ತಮೂರು (57%) ಸಂತ್ರಸ್ತರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಹೋರಾಟಗಾರರು ನಿಮ್ಮ ಬೇಡಿಕೆಗಳನ್ನು ಬೆಂಬಲಿಸಿದ್ದರೇ ಎಂಬ ಪ್ರಶ್ನೆಗೆ ನೂರಏಳು (43%) ಮಾಹಿತಿದಾರರು ಹೌದು ಎಂದು ಉತ್ತರಿಸಿದರೆ, ಇಲ್ಲ ಎಂದು ನೂರನಲವತ್ತಮೂರು (57%) ಸಂತ್ರಸ್ತರು ತಿಳಿಸಿರುತ್ತಾರೆ ಎಂಬ ವಿವರಣೆಯನ್ನು ಕೋಷ್ಟಕ 3.31.1 ನೀಡುತ್ತದೆ.

ಕೋಷ್ಟಕ–3.31(2) ಹೋರಾಟಗಾರರು ನಿಮ್ಮನ್ನು ಯಾಕಾಗಿ ಬೆಂಬಲಿಸಿದರು?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಸ್ವಾರ್ಥ ಹಿತಾಸಕ್ತಿಗಾಗಿ	5	4.5
2	ನಮ್ಮ ಸಮಸ್ಯೆಗಳಿಗೆ ನಿಸ್ವಾರ್ಥವಾಗಿ ಸ್ಪಂದನೆ	82	77
3	ಭೂಸ್ವಾಧೀನದಲ್ಲಿ ತೊಡಗಿರುವವರ ವಿರುದ್ಧದ ಪೂರ್ವದ್ವೇಷ	4	3.5
4	ನಮ್ಮ ಸಮಸ್ಯೆಗಳಿಗೆ ನಿಸ್ವಾರ್ಥವಾಗಿ ಸ್ಪಂದನೆ + ಭೂಸ್ವಾಧೀನದಲ್ಲಿ ತೊಡಗಿರುವವರ ವಿರುದ್ಧದ ಪೂರ್ವದ್ವೇಷ + ನಾಯಕರುಗಳಾಗಿ ಬೆಳೆಯುವುದಕ್ಕೆ ಅವಕಾಶ	16	15
ಒಟ್ಟು		**107**	**100**

ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾದ ನಮ್ಮ ಅಳಲನ್ನು ಮನಗಂಡು ಯಾವುದೇ ಪ್ರತಿಫಲದ ಅಪೇಕ್ಷೆಯಿಲ್ಲದೆ ಹೋರಾಟಗಾರರು, ನಾಯಕರುಗಳು ನಮ್ಮ ಪರವಾಗಿ ನಿಂತು ಭೂಸ್ವಾಧೀನ ಪ್ರಾಧಿಕಾರದ ವಿರುದ್ಧ ಹೋರಾಟಗಳನ್ನು ಸಂಘಟಿಸಿದರೆಂದು ಎಂಬತ್ತೆರಡು (77%) ಸಂತ್ರಸ್ತರು ಅಭಿಪ್ರಾಯ ವ್ಯಕ್ತಪಡಿಸಿದರೆ, ನಮ್ಮ ಸಮಸ್ಯೆಗಳಿಗೆ ನಿಸ್ವಾರ್ಥವಾಗಿ ಸ್ಪಂದಿಸಿ, ನಾಯಕರುಗಳಾಗಿ ಬೆಳೆಯುವುದಕ್ಕೆ ದೊರಕಿದ ಅವಕಾಶ

ಹಾಗೂ ಭೂಸ್ವಾಧೀನಪಡಿಸುವವರ ವಿರುದ್ಧದ ಪೂರ್ವದ್ವೇಷದಿಂದಾಗಿ ಹೋರಾಟಗಾರರು ನಮ್ಮ ಸಮಸ್ಯೆಗಳಿಗೆ ಸ್ಪಂದಿಸಿದರೆಂದು ಹದಿನಾರು (15%) ಮಾಹಿತಿದಾರರು ತಿಳಿಸಿರುತ್ತಾರೆ. ತಮ್ಮ ಸ್ವಾರ್ಥಹಿತಾಸಕ್ತಿಯನ್ನು ಸಾಧಿಸುವುದಕ್ಕೋಸ್ಕರ ಹೋರಾಟಗಾರರು ನಮ್ಮನ್ನು ಬೆಂಬಲಿಸಿದರೆಂದು ಐದು (4.5%) ಮಾಹಿತಿದಾರರು ಆಕ್ರೋಶ ವ್ಯಕ್ತಪಡಿಸಿದರೆ, ಭೂಸ್ವಾಧೀನ ಪಡಿಸುವವರ ವಿರುದ್ಧ ಇರುವ ವೈಯಕ್ತಿಕ ದ್ವೇಷದಿಂದಾಗಿ ಹೋರಾಟಗಾರರು ನಮ್ಮನ್ನು ಬೆಂಬಲಿಸಿದರೆಂದು ನಾಲ್ಕು (3.5%) ಮಾಹಿತಿದಾರರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ–3.31(3) ಹೋರಾಟಗಳಿಗೆ ಅನುಸರಿಸಿದ ವಿಧಾನ

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಶಾಂತಿಯುತ ಪ್ರತಿಭಟನೆ	72	28.8
2	ಹಿಂಸಾತ್ಮಕ ಹೋರಾಟ	31	12.4
3	ರಾಜಕಾರಣಿಗಳು, ಅಧಿಕಾರಿಗಳ ಮೇಲೆ ಒತ್ತಡ	3	1.2
4	ಮಾಧ್ಯಮಗಳಲ್ಲಿ ಪ್ರಚಾರ ಸಿಗುವಂತೆ ನೋಡಿಕೊಂಡಿರುವುದು	3	1.2
5	ಏನೂ ಇಲ್ಲ + ಗೊತ್ತಿಲ್ಲ	141	56.4
ಒಟ್ಟು		**250**	**100**

ಭೂಸ್ವಾಧೀನ ಪ್ರಕ್ರಿಯೆ ಆರಂಭವಾದಾಗ ತೀವ್ರ ಪ್ರಮಾಣದಲ್ಲಿ ಅವುಗಳ ವಿರುದ್ಧ ಹೋರಾಟಗಳು ಸಂಘಟಿಸಲ್ಪಟ್ಟಿತ್ತು. ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರು ಹೋರಾಟಗಾರರು ಮತ್ತು ನಾಯಕರುಗಳ ನೆರವಿನೊಂದಿಗೆ ಯಾವ ತಂತ್ರಗಳನ್ನು ಬಳಸಿಕೊಂಡು ಹೋರಾಟಗಳನ್ನು ನಡೆಸಿದರು ಎಂಬುದರ ವಿವರಗಳನ್ನು 3.31.3ರ ಕೋಷ್ಟಕವು ತಿಳಿಸುತ್ತದೆ. ಹೋರಾಟಗಳಿಗೆ ಬಳಸಲಾದ ವಿಧಾನಗಳ ಬಗ್ಗೆ ಗೊತ್ತಿಲ್ಲವೆಂದು ನೂರನಲವತ್ತೊಂದು (56.4%) ಮಾಹಿತಿದಾರರು ತಿಳಿಸಿದರೆ, ಎಪ್ಪತ್ತೆರಡು (28.8%) ಸಂತ್ರಸ್ತರು ಶಾಂತಿಯುತ ಪ್ರತಿಭಟನೆಗಳ ಮೂಲಕ ಹೋರಾಟಗಳು ನಡೆಸಲ್ಪಟ್ಟಿತ್ತು ಎಂದಿದ್ದಾರೆ. ಹೋರಾಟಗಳು ಹಿಂಸಾತ್ಮಕವಾಗಿಯೂ, ಕಾನೂನುಗಳನ್ನು ವಿರೋಧಿಸಿ ನಡೆಯಿತು ಎಂಬ ಅಭಿಪ್ರಾಯವನ್ನು ಮೂವತ್ತೊಂದು (12.4%) ಸಂತ್ರಸ್ತರು ವ್ಯಕ್ತಪಡಿಸಿದರೆ, ಹೋರಾಟಗಳ ಮೂಲಕ ರಾಜಕಾರಣಿಗಳು ಮತ್ತು ಅಧಿಕಾರಿಗಳ ಮೇಲೆ ಒತ್ತಡವನ್ನು ತಂದು ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶ ಹೊಂದಿತ್ತು ಎಂಬುದು ಮೂರು (1.2%) ಮಾಹಿತಿದಾರರ ಅಭಿಪ್ರಾಯವಾದರೆ, ಸಂತ್ರಸ್ತರ ಸಮಸ್ಯೆಗಳಿಗೆ ಸಮೂಹ ಮಾಧ್ಯಮಗಳಲ್ಲಿ ಹೆಚ್ಚಿನ ಪ್ರಚಾರವನ್ನು ಪಡೆದುಕೊಂಡು ನಾಗರಿಕ ಸಮಾಜದ ಬೆಂಬಲ, ಸಹಾನುಭೂತಿಯನ್ನು ಗಳಿಸಿಕೊಂಡು ಸರಕಾರದ ಮೇಲೆ ಒತ್ತಡವನ್ನು ಹೇರಿ ಬೇಡಿಕೆಗಳನ್ನು ಪೂರೈಸುವ ತಂತ್ರವನ್ನು ಹೋರಾಟದ ಸಂದರ್ಭದಲ್ಲಿ ಉಪಯೋಗಿಸಲಾಗಿತ್ತೆಂದು ಮೂವರು (1.2%) ಮಾಹಿತಿದಾರರು ತಿಳಿಸಿರುತ್ತಾರೆ.

ಕೋಷ್ಟಕ–3.31(4) ಪರಿಹಾರ ದೊರಕುವಲ್ಲಿ ಯಾರು ಸಹಾಯ ಮಾಡಿದರು?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ರಾಜಕಾರಣಿಗಳು + ಹೋರಾಟಗಾರರು + ಸ್ವಯಂಸೇವಾ ಸಂಸ್ಥೆಗಳು	25	10
2	ಸ್ಥಳೀಯ ಪಂಚಾಯತ್ + ನಾಗರಿಕ ಸಮಾಜ	20	8
3	ಯಾರೂ ಇಲ್ಲ	205	82
	ಒಟ್ಟು	**250**	**100**

ಭೂಸ್ವಾಧೀನ ಪ್ರಕ್ರಿಯೆಯ ನಂತರ ಪರಿಹಾರವನ್ನು ಕ್ಲಪ್ತ ಸಮಯದಲ್ಲಿ ಪಡೆಯಲು ಸಹಕಾರವನ್ನು ಯಾರು ನೀಡಿರುತ್ತಾರೆ ಎಂಬ ಅಂಶದ ಬಗ್ಗೆ ಕೋಷ್ಟಕ ಸಂಖ್ಯೆ 3.31.4 ಬೆಳಕು ಚೆಲ್ಲುತ್ತದೆ. ನಮ್ಮ ಸಮಸ್ಯೆಗಳಿಗೆ ಯಾರೂ ಸ್ಪಂದಿಸಲಿಲ್ಲ ಹಾಗೂ ಪರಿಹಾರಗಳನ್ನು ಪಡೆಯುವುದಕ್ಕೆ ಯಾರೊಬ್ಬರೂ ಸಹಕಾರವನ್ನು ನೀಡಲಿಲ್ಲವೆಂದು ಬಹುಸಂಖ್ಯೆಯ ಇನ್ನೂರಐದು ಸಂತ್ರಸ್ತರು ತಮ್ಮ ಅಳಲನ್ನು ನಿವೇದಿಸಿದರೆ, ಇಪ್ಪತ್ತೈದು (10%) ಸಂತ್ರಸ್ತರುಗಳು ರಾಜಕಾರಣಿಗಳು, ಯೋಜನೆಯ ವಿರುದ್ಧ ಪ್ರತಿಭಟನೆಯನ್ನು ಸಂಘಟಿಸಿದ ಹೋರಾಟಗಾರರು ಮತ್ತು ಸ್ವಯಂಸೇವಾ ಸಂಘಟನೆಗಳು ಪರಿಹಾರ ದೊರಕುವಲ್ಲಿ ಸಹಾಯ ಮಾಡಿರುತ್ತಾರೆ ಎಂದರೆ, ಇಪ್ಪತ್ತು (8%) ಮಾಹಿತಿದಾರರು ನಾಗರಿಕ ಸಮಾಜ, ಸ್ಥಳೀಯ ಪಂಚಾಯತ್‌ನ ಸಹಕಾರದೊಂದಿಗೆ ಪರಿಹಾರ ಮತ್ತು ಪುನರ್‌ವಸತಿ ಸರಿಯಾಗಿ ದೊರಕಲು ಸಾಧ್ಯವಾಯಿತು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ–3.31(5) ಹೋರಾಟಗಳಿಂದ ಯಾವುದಾದರೂ ಪ್ರಯೋಜನವಾಗಿದೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	32	13
2	ಇಲ್ಲ	218	87
	ಒಟ್ಟು	**250**	**100**
ಹೌದಾದರೆ, ಹೇಗೆ?			
1	ಪರಿಹಾರ ಸರಿಯಾಗಿ ಸಿಗಲು ಸಾಧ್ಯವಾಯಿತು	19	8
2	ಸಮಸ್ಯೆಗಳನ್ನು ಸರಿಯಾಗಿ ಪ್ರತಿನಿಧಿಸಲು ಸಾಧ್ಯವಾಯಿತು	11	4
3	ಪರಿಹಾರ ಸರಿಯಾಗಿ ಸಿಗಲು ಸಾಧ್ಯವಾಯಿತು + ಸಮಸ್ಯೆಗಳನ್ನು ಸರಿಯಾಗಿ ಪ್ರತಿನಿಧಿಸಲು ಸಾಧ್ಯವಾಯಿತು + ರಾಜಕಾರಣಿಗಳು ಮತ್ತು ಅಧಿಕಾರಿಗಳ ಮೇಲೆ ಒತ್ತಡ ಹೇರಲು ಸಾಧ್ಯವಾಯಿತು	2	1
	ಒಟ್ಟು	**32**	**13**

ಬಲವಂತದ ಭೂಸ್ವಾಧೀನವನ್ನು ವಿರೋಧಿಸಿ ನ್ಯಾಯಯುತವಾದ ಪರಿಹಾರವನ್ನು ಯೋಜನೆಯ ಸಂತ್ರಸ್ತರಿಗೆ ಆಗ್ರಹಿಸಿ ನಡೆದಂತಹ ಹೋರಾಟಗಳು ಯಾವ ಲಾಭವನ್ನು ತಂದಿವೆ ಎಂಬುದನ್ನು ಅವಲೋಕಿಸಿದಾಗ ಯಾವುದೇ ರೀತಿಯ ಪ್ರಯೋಜನಗಳಾಗಲಿಲ್ಲವೆಂದು ಇನ್ನೂರಹದಿನೆಂಟು (87%) ಸಂತ್ರಸ್ತರು ಅಭಿಪ್ರಾಯಪಟ್ಟರೆ,

ಹೋರಾಟಗಳಿಂದ ಸಂತ್ರಸ್ತರಿಗೆ ಲಾಭವಾಗಿರುತ್ತದೆಯೆಂದು ಮೂವತ್ತೆರಡು (13%) ಮಾಹಿತಿದಾರರು ವಿವರಿಸಿರುತ್ತಾರೆ. ಹೋರಾಟಗಳಿಂದ ಪರಿಹಾರಗಳು ಸರಿಯಾಗಿ ದೊರಕಲು ಸಾಧ್ಯವಾಯಿತು ಎಂಬುದು ಹತ್ತೊಂಬತ್ತು (8%) ಮಾಹಿತಿದಾರರ ಅಭಿಪ್ರಾಯವಾದರೆ, ನಮ್ಮ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸಲು ಸಾಧ್ಯವಾಯಿತು ಎಂದು ಹನ್ನೊಂದು (4%) ಸಂತ್ರಸ್ತರು ಉತ್ತರಿಸಿರುತ್ತಾರೆ. ಹೋರಾಟಗಳಿಂದ ಅಧಿಕಾರಿಗಳ ಮತ್ತು ರಾಜಕಾರಣಿಗಳ ಮೇಲೆ ಒತ್ತಡವನ್ನು ಹೇರಿ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸಲು ಮತ್ತು ಪರಿಹಾರ ಸರಿಯಾಗಿ ಸಿಗಲು ಸಾಧ್ಯವಾಯಿತೆಂದು ಇಬ್ಬರು (1%) ಸಂದರ್ಶಿತರು ಅಭಿಪ್ರಾಯಪಟ್ಟಿರುತ್ತಾರೆ.

ಸಮೂಹ ಮಾಧ್ಯಮಗಳು ಮತ್ತು ಸಂತ್ರಸ್ತರು

ಕೋಷ್ಟಕ–3.32: ಸಮೂಹ ಮಾಧ್ಯಮಗಳಿಂದ ಏನಾದರೂ ಪ್ರಯೋಜನಗಳಾಗಿದೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	62	25
2	ಇಲ್ಲ	188	75
	ಒಟ್ಟು	**250**	**100**
ಹೌದಾದರೆ, ಯಾವ ರೀತಿಯಲ್ಲಿ?			
1	ಪ್ರಚಾರ ದೊರಕಿದೆ	23	9
2	ಪರಿಹಾರ ಸಮರ್ಪಕವಾಗಿ ದೊರೆಯಿತು + ಅಧಿಕಾರಿಗಳು ಸಮಸ್ಯೆಗೆ ಸ್ಪಂದಿಸಿದರು + ನಾಗರಿಕ ಸಮಾಜದ ಬೆಂಬಲ ದೊರೆಯಿತು	39	16
	ಒಟ್ಟು	**62**	**25**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಂತಹ ಬೃಹತ್ ಯೋಜನೆಗಳು ಮತ್ತು ಅವುಗಳು ಜಿಲ್ಲೆಯ ಧಾರಣಾಶಕ್ತಿ, ಸಾಮಾನ್ಯ ಜನಜೀವನದ ಮೇಲೆ ಬೀರಿರುವ ಪರಿಣಾಮ, ಜನಪರ ಹೋರಾಟಗಳ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡಿ ಜನಜಾಗೃತಿಯನ್ನು ಹೆಚ್ಚಿಸುವ ಕೆಲಸಗಳನ್ನು ಇಲ್ಲಿನ ಸಮೂಹ ಮಾಧ್ಯಮಗಳು ಮಾಡುತ್ತಲೇ ಬಂದಿವೆ. ಸಮೂಹ ಮಾಧ್ಯಮಗಳ ಪ್ರಚಾರದಿಂದಾಗಿ ಯೋಜನೆಯ ಸಂತ್ರಸ್ತರಿಗೆ ಯಾವುದಾದರೂ ಪ್ರಯೋಜನಗಳಾಗಿವೆಯೇ ಎಂಬ ಅಂಶವನ್ನು 3.32ರ ಕೋಷ್ಟಕದಲ್ಲಿ ವಿವರಿಸಲಾಗಿದೆ. ಸಮೂಹ ಮಾಧ್ಯಮಗಳಿಂದ ಯಾವುದೇ ರೀತಿಯ ಪ್ರಯೋಜನಗಳಾಗಲಿಲ್ಲ ಎಂದು ಸಂದರ್ಶಿತ ನೂರಎಂಬತ್ತೆಂಟು (75%) ಮಾಹಿತಿದಾರರು ತಿಳಿಸಿದರೆ, ಪ್ರಯೋಜನಗಳಾಗಿವೆ ಎಂದು ಅರವತ್ತೆರಡು (25%) ಸಂತ್ರಸ್ತರು ಅಭಿಪ್ರಾಯಪಟ್ಟಿರುತ್ತಾರೆ. ನಮ್ಮ ಸಮಸ್ಯೆಗಳಿಗೆ ದೊರಕಿದ ಪ್ರಚಾರದಿಂದಾಗಿ ಪರಿಹಾರಗಳು ಸಮರ್ಪಕವಾಗಿ ದೊರೆಯಲು ಸಾಧ್ಯವಾಯಿತು, ಇದರಿಂದಾಗಿ ಅಧಿಕಾರಿಗಳು ಸಮಸ್ಯೆಗಳಿಗೆ ಸೂಕ್ತವಾಗಿ ಸ್ಪಂದಿಸಿ, ನಾಗರಿಕ ಸಮಾಜದ ಬೆಂಬಲ ದೊರೆಯುವಂತಾಯಿತು ಎಂದು ಮೂವತ್ತೊಂಬತ್ತು (16%) ಮಾಹಿತಿದಾರರು ತಿಳಿಸಿರುತ್ತಾರೆ. ಸಮೂಹ

ಮಾಧ್ಯಮಗಳಿಂದಾಗಿ ನಮ್ಮ ಸಮಸ್ಯೆಗಳಿಗೆ ವ್ಯಾಪಕ ಪ್ರಚಾರ ದೊರೆಯುವಂತಾಯಿತು ಎಂದು ಇಪ್ಪತ್ತಮೂರು (9%) ಸಂತ್ರಸ್ತರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ–3.33: ಪರಿಹಾರ ಮತ್ತು ಪುನರ್‌ವಸತಿ ಸಮರ್ಪಕವಾಗಿ ದೊರಕಿದೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	8	3
2	ಇಲ್ಲ	242	97
	ಒಟ್ಟು	**250**	**100**

ಮಂಗಳೂರು ವಿಶೇಷ ಆರ್ಥಿಕ ವಲಯದ ಪ್ರವರ್ತಕರು ಇತರ ಎಲ್ಲಾ ಯೋಜನೆಗಳಿಗಿಂತ ಇಲ್ಲಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ ಕುಟುಂಬಗಳಿಗೆ ಅತ್ಯುತ್ತಮ ಪುನರ್‌ವಸತಿ ಮತ್ತು ಪರಿಹಾರದ ಪ್ಯಾಕೇಜ್‌ಗಳನ್ನು ನೀಡಲಾಗಿರುತ್ತದೆಯೆಂದು ತಿಳಿಸಿದ್ದರೂ ಪುನರ್‌ವಸತಿ ಮತ್ತು ಪರಿಹಾರಗಳು ಸಮರ್ಪಕವಾಗಿ ದೊರಕಿಲ್ಲ ಎಂಬ ಅಂಶವನ್ನು ಇನ್ನೂರನಲವತ್ತೆರಡು (97%) ಕುಟುಂಬಗಳು ತಿಳಿಸಿರುವುದನ್ನು ಕೋಷ್ಟಕ ಸಂಖ್ಯೆ 3.33 ಸ್ಪಷ್ಟಪಡಿಸುತ್ತದೆ. ಎಂಟು ಸಂತ್ರಸ್ತರು (3%) ಮಾತ್ರ ಪುನರ್‌ವಸತಿ ಮತ್ತು ಪರಿಹಾರಗಳು ಸರಿಯಾದ ಪ್ರಮಾಣದಲ್ಲಿ ಮತ್ತು ಕ್ಲಪ್ತ ಸಮಯದಲ್ಲಿ ದೊರಕಿರುವುದು ಹೊಸ ಬದುಕನ್ನು ಪುನರ್‌ವಸತಿ ಪ್ರದೇಶದಲ್ಲಿ ತೃಪ್ತಿಯಿಂದ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಟ್ಟಿರುತ್ತದೆ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ–3.34: ಸ್ಥಳಾಂತರದ ಬಗ್ಗೆ ಸಂತ್ರಸ್ತರ ಒಟ್ಟು ಅಭಿಪ್ರಾಯ

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಪರಿಸರ ಮಾಲಿನ್ಯ + ಅಸ್ಥಿರತೆ + ಸಮಸ್ಯೆಗಳಿಗೆ ಸ್ಪಂದನೆ ಇಲ್ಲ+ನೀರಿನ ಸಮಸ್ಯೆ	134	54
2	ಮೂಲಭೂತ ಸೌಕರ್ಯಗಳ ಅಲಭ್ಯತೆ + ಕಲುಷಿತ ಪರಿಸರ + ನಿರುದ್ಯೋಗ + ಆಡಳಿತ ವೈಫಲ್ಯ	108	43
3	ಕಳಪೆ ಮಟ್ಟದ ಭೂಮಿ + ಕಡಿಮೆ ಪರಿಹಾರ + ಸಾಂಸ್ಕೃತಿಕ ನಾಶ + ಮೂಲಭೂತ ಸೌಕರ್ಯಗಳ ಅವ್ಯವಸ್ಥೆ + ವೆಚ್ಚದ ಜೀವನ	8	3
	ಒಟ್ಟು	**250**	**100**

ಸ್ಥಳಾಂತರದ ನಂತರ ಪುನರ್‌ವಸತಿ ಕಾಲನಿಗಳಲ್ಲಿ ಸಮಸ್ಯೆಗಳಿಗೆ ಅಧಿಕಾರಿಗಳು ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿಲ್ಲ, ಇದರಿಂದಾಗಿ ಅಸ್ಥಿರತೆಯ ವಾತಾವರಣ ಸೃಷ್ಟಿಯಾಗಿರುತ್ತದೆ. ಆರಂಭಿಸಲ್ಪಟ್ಟ ಕೈಗಾರಿಕೆಗಳಿಂದ ಪರಿಸರ ಮಾಲಿನ್ಯವಾಗುತ್ತಿದ್ದು ಸಾಮಾನ್ಯ ಜನಜೀವನಕ್ಕೆ ಇದರಿಂದಾಗಿ ತೊಂದರೆಯಾಗುತ್ತಿದೆ. ಪುನರ್‌ವಸತಿ ಪ್ರದೇಶದಲ್ಲಿ ನೀರಿನ ಸಮಸ್ಯೆ ಇದ್ದು ಅದನ್ನು ಬಗೆಹರಿಸಲು ಅಧಿಕಾರಿಗಳು ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಸಂದರ್ಶಿತ ನೂರಮೂವತ್ನಾಲ್ಕು (54%) ಸಂತ್ರಸ್ತರು

ಅಭಿಪ್ರಾಯಪಟ್ಟರೆ, ಸ್ಥಳಾಂತರದಿಂದಾಗಿ ನಮ್ಮ ಉದ್ಯೋಗ ನಷ್ಟವಾಗಿ ಈಗ ನಾವುಗಳು ನಿರುದ್ಯೋಗಿಗಳಾಗುವಂತಹ ಪ್ರಮೇಯ ಬಂದಿರುತ್ತದೆ. ಸ್ವಚ್ಛವಾಗಿದ್ದ ಪರಿಸರವೀಗ ಕಲುಷಿತಗೊಂಡಿದ್ದು, ಪುನರ್‌ವಸತಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಲಭ್ಯತೆಯಿಲ್ಲದೇ ಇರುವುದು ಭೂಸ್ವಾಧೀನ ಪ್ರಾಧಿಕಾರದ ಆಡಳಿತ ವೈಫಲ್ಯಗಳು ಕಾರಣವಾಗಿರುತ್ತದೆಂದು ನೂರಎಂಟು (43%) ಮಾಹಿತಿದಾರರು ತಮ್ಮ ಆಕ್ರೋಶ ಮತ್ತು ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ. ಸ್ಥಳಾಂತರದ ನಂತರ ವಸತಿಗಳನ್ನು ನಿರ್ಮಿಸಲು ಪುನರ್‌ವಸತಿ ಕಾಲನಿಗಳಲ್ಲಿ ನೀಡಿರುವಂತಹ ಭೂಮಿ ಕಳಪೆ ಮಟ್ಟದ್ದಾಗಿದ್ದು ಕೊಟ್ಟಂತಹ ಪರಿಹಾರದ ಪ್ಯಾಕೇಜ್‌ಗಳು ಇತರ ಅಭಿವೃದ್ಧಿ ಯೋಜನೆಗಳಿಗೆ ಹೋಲಿಸಿದರೆ ಕಡಿಮೆಯಾಗಿರುತ್ತದೆ. ಸ್ಥಳಾಂತರದಿಂದಾಗಿ ಸ್ಥಳೀಯ ಸಾಂಸ್ಕೃತಿಕ ಜೀವನ, ಚಟುವಟಿಕೆಗಳು ಮತ್ತು ಧಾರ್ಮಿಕ ಆಚರಣೆಗಳು ಸಂಪೂರ್ಣವಾಗಿ ನಾಶವಾಗಿದ್ದು, ಪುನರ್‌ವಸತಿ ಪ್ರದೇಶಗಳಲ್ಲಿ ಉತ್ತಮ ಮೂಲಭೂತ ಸೌಲಭ್ಯವನ್ನು ಕಲ್ಪಿಸುವುದರಲ್ಲಿ ಪ್ರಾಧಿಕಾರ ಸಂಪೂರ್ಣವಾಗಿ ವಿಫಲವಾಗಿದ್ದು, ಸ್ಥಳಾಂತರಕ್ಕಿಂತ ಪೂರ್ವಪರಿಸ್ಥಿತಿಯನ್ನು ಹೋಲಿಸಿದರೆ ಈಗ ನಮ್ಮ ದೈನಂದಿನ ಖರ್ಚುವೆಚ್ಚಗಳು ಹೆಚ್ಚಾಗಿವೆಯೆಂದು ಎಂಟು (3%) ಮಾಹಿತಿದಾರರು ತಿಳಿಸಿರುತ್ತಾರೆ.

ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರುಗಳಿಗೆ ಪುನರ್‌ವಸತಿ ಕಾಲನಿಗಳಲ್ಲಿ ಕೊಡಮಾಡಿದ ಚಿಕ್ಕ ಮನೆಯ ನಿವೇಶನಗಳು ಅವಿಭಕ್ತ ಅಥವಾ ದೊಡ್ಡ ಕುಟುಂಬಗಳಿಗೆ ಒಂದೇ ಸೂರಿನಡಿಗೆ ಬದುಕಲು ಅವಕಾಶ ಮಾಡಿಕೊಡಲಿಲ್ಲ. ಇವುಗಳಲ್ಲದೆ ದೊಡ್ಡ ಕುಟುಂಬಗಳಲ್ಲಿನ ಸದಸ್ಯರ ನಡುವಿನ ಸಂಘರ್ಷಾತ್ಮಕ ಹಿತಾಸಕ್ತಿಗಳು ಅವಿಭಕ್ತ ಕುಟುಂಬಗಳ ಮುಂದುವರಿಕೆಗೆ ಹೊಡೆತ ನೀಡಿದವು. ಕೌಟುಂಬಿಕ ವಿಘಟನೆಗಳು ಪುನರ್‌ವಸತಿ ಪ್ರದೇಶಗಳಲ್ಲಿ ಹಲವಾರು ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಯಿತು. ಮಹಿಳೆಯರ ಸ್ಥಾನಮಾನ ಮತ್ತು ಅಂತಸ್ತಿನ ಅವನತಿಗೆ ಪ್ರಮುಖವಾಗಿ ಕಾರಣವಾಯಿತು. ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯು ಯಾವುದೇ ರೀತಿಯ ಉತ್ಪಾದನೆಗಳಿಗೆ ಸಹಕಾರಿಯಾಗಿರದೆ ಕೇವಲ ಬಳಕೆದಾರಳಾಗಿ ಬದಲಾದಳು. ಕೆಲವರು ನಗರ ಪ್ರದೇಶಗಳಲ್ಲಿ ಮನೆವಾರ್ತೆಗಳನ್ನು ನೋಡಿಕೊಳ್ಳುವ ಕೆಲಸಗಾರ್ತಿಯರಾಗಿ ಹಾಗೂ ಕೈಗಾರಿಕಾ ಕಾರ್ಮಿಕರಾಗಿ ಬದಲಾದರು. ಭೂಮಿಗೆ ಪರಿಹಾರವಾಗಿ ದೊರಕಿದ ನಗದು ಪರಿಹಾರ ಕುಟುಂಬದ ಯುವ ಸದಸ್ಯರಲ್ಲಿ ಕೆಟ್ಟ ಚಟಗಳಾದ ಕುಡಿತ, ಜೂಜು ಮುಂತಾದ ಸಮಾಜ ವಿದ್ರೋಹಿ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡಿತು.

ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ದೊಡ್ಡ ಹೊಡೆತಕ್ಕೊಳಗಾಗಿರುವುದು ಸಮಾಜದಲ್ಲಿನ ಹಿರಿಯರು ಮತ್ತು ಮಕ್ಕಳು. ಸಮಾಜ ಹಾಗೂ ಮುಖ್ಯವಾಹಿನಿಯಿಂದ ನಿರ್ಲಕ್ಷ್ಯಕ್ಕೆ ಒಳಗಾದ ಸಮುದಾಯವಿದಾಗಿದ್ದು ಇವರುಗಳಿಗೆ ವಿಶೇಷ ರಕ್ಷಣೆಯ ಅವಶ್ಯಕತೆಯಿರುತ್ತದೆ. ಕೃಷಿ ಭೂಮಿಯ ಸ್ವಾಧೀನದಿಂದಾದ ಜೀವನ ನಿರ್ವಹಣೆಯ ಉದ್ಯೋಗದ ನಷ್ಟದಿಂದಾಗಿ ಸಾಂಪ್ರದಾಯಿಕ ಸ್ಥಳೀಯ ಸಂಸ್ಕೃತಿಯ ನಾಶ ಮತ್ತು ಸಮಾಜ ನಗರೀಕರಣ ಪ್ರಕ್ರಿಯೆಗಳ ಹೊಡೆತಕ್ಕೆ ಒಳಗಾಗಿ ಜೀವನ ನೈಜ ಸ್ವಾರ್ಥಹಿತಾಸಕ್ತಿಗೆ ತೆರೆದುಕೊಂಡಿತು. ಭಾರತೀಯ

ಸಮಾಜದಲ್ಲಿ ಹೆತ್ತವರನ್ನು ದೇವರಿಗೆ ಸಮಾನವೆಂದು ಪರಿಗಣಿಸಲಾಗಿದ್ದು, ಮಕ್ಕಳಿಂದ ಗೌರವ ಆದರಗಳಿಂದ ನೋಡಿಕೊಳ್ಳಲ್ಪಡುತ್ತಿದ್ದ ಇವರುಗಳನ್ನು ಅವಲಂಬಿತರೇ ತಮ್ಮ ಸ್ವಾರ್ಥ ಹಿತಾಸಕ್ತಿಯ ಪೂರೈಕೆಗಾಗಿ ಅವಗಣಿಸಲ್ಪಟ್ಟಿರುವುದು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿರುತ್ತದೆ. ಸಂತ್ರಸ್ತ ಕುಟುಂಬದ ಹಿರಿಯ ಸದಸ್ಯರು ಒಟ್ಟು ಸೇರಿ ತಮ್ಮ ಪೂರ್ವನೆಲೆಯಲ್ಲಿ ಇದ್ದಂತೆಯೇ ತಮ್ಮ ಸಮಸ್ಯೆ, ಅಭಿಪ್ರಾಯಗಳನ್ನು ಹಂಚಿ ಸಮಯ ಕಳೆಯಲು ಇರುತ್ತಿದ್ದಂತಹ ಸಾರ್ವಜನಿಕ ಪ್ರದೇಶಗಳು ಇಲ್ಲದೇ ಇರುವುದು, ನಿರ್ಮಲ ಹಳ್ಳಿಯ ವಾತಾವರಣ, ಪರಿಶುದ್ಧ ಗಾಳಿ ಮತ್ತು ನೀರಿನ ಅಲಭ್ಯತೆ, ಕಲುಷಿತ ವಾತಾವರಣ ಮತ್ತು ಆರೋಗ್ಯ ಸಂಬಂಧಿ ಸೌಲಭ್ಯಗಳು ಲಭ್ಯವಿಲ್ಲದಿರುವುದು, ಕುಟುಂಬದ ಸದಸ್ಯರುಗಳ ಬೆಂಬಲ ಕಳೆದುಕೊಂಡಿರುವುದು, ಅವರುಗಳಲ್ಲಿ ಏಕಾಂಗಿತನ, ಮಾನಸಿಕ ಒತ್ತಡ ಹೆಚ್ಚಾಗಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿರುತ್ತದೆ.

ಪರಾಮರ್ಶನ ಗ್ರಂಥಗಳು ಮತ್ತು ಕೊನೆ ಟಿಪ್ಪಣಿಗಳು

[1] ಜೀನ್ ಡ್ರೀಜ್, ಮೀರಾ ಸಾಮ್ಸನ್, ಸತ್ಯಜಿತ್ ಸಿಂಗ್ (ಸಂ) (1997), ಡ್ಯಾಮ್ ಎಂಡ್ ದ ನೇಷನ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ. ಪುಟ 9–66.

[2] ವಸುದಾ ಧಗಮಾವರ್, ಸುಬ್ರತಾ ಡೇ, ನಿಖಿಲ್ ವರ್ಮ (ಸಂ) (2003), ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಎಂಡ್ ಡಿಸ್‌ಪ್ಲೇಸ್‌ಮೆಂಟ್, ದ ಪೀಪಲ್ ಆಫ್ ಕೊರ್ಬಾ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 5–260.

[3] ಕೆ.ಐ.ಎ.ಡಿ.ಬಿ., ಮಂಗಳೂರು ಕಛೇರಿಯಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಸ್ವಾಧೀನಪಡಿಸಲಾದ ಭೂಮಿಯ ಬಗೆಗಿನ ಅಂಕಿ ಅಂಶಗಳು. 2012.

[4] ಗವರ್ನ್‌ಮೆಂಟ್ ಆಫ್ ಇಂಡಿಯಾ (2005) 'ದ ಸ್ಪೆಷಲ್ ಎಕನಾಮಿಕ್ ಝೋನ್ಸ್ ಆ್ಯಕ್ಟ್, ಎವೈಲೇಬಲ್‌ಎಟ್‌ಎಚ್‌ಟಿಟಿಪಿ/ಡಬ್ಲ್ಯುಡಬ್ಲ್ಯುಡಬ್ಲ್ಯು.ಎಸ್‌ಇಝಡ್.ಕಾಮ್/ಡಾಕ್ಯುಮೆಂಟ್ಸ್/ಎಸ್‌ಇಝಡ್‌ಆ್ಯಕ್ಟ್.ಪಿ.ಡಿ.ಎಫ್.

[5] ಮಂಗಳೂರು ವಿಶೇಷ ಆರ್ಥಿಕ ವಲಯದ ಕಚೇರಿಯಿಂದ ಯೋಜನೆಯ ಜಾರಿಗೆ ಸಂಬಂಧಪಟ್ಟಂತೆ ಸ್ವಾಧೀನಪಡಿಸಿದ ಭೂಮಿಯ ಬಗೆಗೆ ಪಡೆದ ಅಂಕಿ ಅಂಶಗಳು. 2012.

[6] ಮೈಕೆಲ್ ಸೆರ್ನಾ (1999) ದ ಇಕನಾಮಿಕ್ಸ್ ಆಫ್ ಇನ್‌ವಾಲ್ಯೆಂಟರಿ ರಿಸೆಟ್ಲ್‌ಮೆಂಟ್, ಕ್ವೆಶ್ಚನ್ಸ್ ಎಂಡ್ ಚಾಲೆಂಜಸ್ (ಸಂ), ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟನ್ ಡಿ.ಸಿ. ಪುಟ 6–247.

[7] ಅದೇ. ಪುಟ 6–247.

[8] ಪರಶುರಾಮನ್ ಎಸ್.(1995), ಡೆವಲಪ್‌ಮೆಂಟ್ ಎಂಡ್ ಡಿಸ್‌ಪ್ಲೇಸ್‌ಮೆಂಟ್ ಇನ್ ಇಂಡಿಯನ್ ಫ್ಯಾಮಿಲೀಸ್, ದ ಇಂಡಿಯನ್ ಜರ್ನಲ್ ಆಫ್ ಸೋಶಿಯಲ್ ವರ್ಕ್, ವಾಲ್ಯೂಮ್ 55, ನಂ.2, ಎಪ್ರಿಲ್. ಪುಟ 195–210.

[9] ಮಾಥ್ಯೂ ಅರೆಪರಂಬಿಲ್(1988), "ಇಂಡಸ್ಟ್ರೀಸ್, ಮೈನ್ಸ್ ಎಂಡ್ ದಿಸ್ಪೊಝೆಶನ್ ಆಫ್ ಇಂಡಿಜೀನಸ್ ಪೀಪಲ್ಸ್ : ದ ಕೇಸ್ ಆಫ್ ಛೋಟಾನಾಗ್ಪುರ್". ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 38, ಎಪ್ರಿಲ್–ಜೂನ್. ಪುಟ 231–251.

[10] ಸಾಯಿನಾಥ ಪಿ., (2004) ಎವರಿ ವನ್ ಲವ್ಸ್ ಎ ಗುಡ್ ಡ್ರೌಟ್, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ. ಪುಟ 3–269.

[11] ಸಾವಿತ್ರಿ ರಾಮಯ್ಯ (2006) ಇಂಪ್ಯಾಕ್ಟ್ ಆಫ್ ಇನ್‌ವಾಲ್ಯೆಂಟರಿ ರೀಸೆಟ್ಲ್‌ಮೆಂಟ್ ಆನ್ ಲೆವೆಲ್ಸ್ ಆಫ್ ಲೀವಿಂಗ್, ಇನ್ ಹರಿಮೋಹನ್ ಮಾಥೂರ್ಸ್ (ಸಂ) ಮೇನೆಜಿಂಗ್ ರೀಸೆಟ್ಲ್‌ಮೆಂಟ್ ಇನ್ ಇಂಡಿಯಾ, ಎಪ್ರೋಚಸ್ ಎಂಡ್ ಇಸ್ಯೂಸ್, ಎಕ್ಸ್ಪೀರಿಯನ್ಸಸ್. ಓರಿಯೆಂಟಲ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ. ಪುಟ 123–141.

[12] ತುಕ್ರಾಲ್ ಇ.ಜಿ.(1988) ಡ್ಯಾಮ್ಸ್ ಫಾರ್ ಹೂಸ್ ಡೆವಲಪ್‌ಮೆಂಟ್, ಸೋಶಿಯಲ್ ಆ್ಯಕ್ಷನ್ 38(3). ಪುಟ 211–230.

[13] ಕ್ಲಾಡ್ ಆಲ್ವರಿಸ್, ರಮೇಶ್ ಬಿಲ್ಲೋರಿ (1998) ಡ್ಯಾಮಿಂಗ್ ದ ನರ್ಮದಾ, ನಟರಾಜ್ ಪಬ್ಲಿಷರ್ಸ್, ಡೆಹ್ರಾಡೂನ್. ಪುಟ 1–58.

[14] ಮನಿಷ್‌ಕುಮಾರ್ ವರ್ಮ(2004) ಡೆವಲಪ್‌ಮೆಂಟ್ ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಸೆಟ್ಲ್‌ಮೆಂಟ್, ರಾವತ್ ಪಬ್ಲಿಕೇಷನ್, ಜೈಪುರ್ ಎಂಡ್ ನ್ಯೂಡೆಲ್ಲಿ. ಪುಟ 15–259.

[15] 2011ರ ಜನಗಣತಿಯ ಅಂಕಿಅಂಶಗಳ ಆಧಾರದ ಮೇಲೆ ಅವಲಂಬಿಸಿ.

[16] ಮನಿಷ್‌ಕುಮಾರ್ ವರ್ಮ (2004) ಡೆವಲಪ್‌ಮೆಂಟ್ ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಸೆಟ್ಲ್‌ಮೆಂಟ್, ರಾವತ್ ಪಬ್ಲಿಕೇಷನ್, ಜೈಪುರ್ ಎಂಡ್ ನ್ಯೂಡೆಲ್ಲಿ. ಪುಟ 15–259.

[17] ಅದೇ. ಪುಟ 15–259.

[18] ವಸುದಾ ಧಗಮಾವರ್, ಸುಬ್ರತಾ ಡೇ, ನಿಖಿಲ್ ವರ್ಮ (ಸಂ) (2003), ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಎಂಡ್ ಡಿಸ್‌ಪ್ಲೇಸ್‌ಮೆಂಟ್, ದ ಪೀಪಲ್ ಆಫ್ ಕೊರ್ಬಾ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 5–260.

[19] ಅದೇ. ಪುಟ 5–260.

[20] ಮನಿಷ್‌ಕುಮಾರ್ ವರ್ಮ, (2004), 'ಡೆವಲಪ್‌ಮೆಂಟ್ ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಸೆಟ್ಲ್‌ಮೆಂಟ್', ರಾವತ್ ಪಬ್ಲಿಕೇಷನ್, ಜೈಪುರ್ ಎಂಡ್ ನ್ಯೂಡೆಲ್ಲಿ. ಪುಟ 15–259.

[21] ಡಾ. ಆರ್. ಜಾನಕಿ ರಾವ್(2012) ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್ – ಎ ಕೇಸ್ ಸ್ಟಡಿ, ಆಕಾಂಕ್ಷ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ. ಪುಟ 1–197.

[22] ಇನಾಕ್ಷಿ ಗಂಗೂಲಿ ತುಕ್ರಾಲ್, (1992), ಬಿಗ್ ಡ್ಯಾಮ್ಸ್ ಡಿಸ್‌ಪ್ಲೇಸ್‌ಡ್ ಪೀಪಲ್ : ರಿವರ್ಸ್ ಆಫ್ ಸಾರ್ರೋ, ರಿವರ್ಸ್ ಆಫ್ ಚೇಂಜ್, ನ್ಯೂಡೆಲ್ಲಿ, ಸೇಜ್ ಪಬ್ಲಿಕೇಷನ್ಸ್, ಪುಟ 20, 38, 41.

[23] ಡಾ. ಆರ್. ಜಾನಕಿ ರಾವ್(2012) ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್ – ಎ ಕೇಸ್ ಸ್ಟಡಿ, ಆಕಾಂಕ್ಷ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ. ಪುಟ 1–197.

[24] ಸತ್ಯನಾರಾಯಣ ಜಿ.(1999) ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಸೆಟ್ಲ್‌ಮೆಂಟ್, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ. ಪುಟ 13–196.

[25] ತುಕ್ರಾಲ್ ಇ.ಜಿ.(1988) ಡ್ಯಾಮ್ಸ್ ಫಾರ್ ಹೂಸ್ ಡೆವಲಪ್‌ಮೆಂಟ್, ಸೋಶಿಯಲ್ ಆ್ಯಕ್ಷನ್ 38(3). ಪುಟ 211–230.

[26] ಮೈಕೆಲ್ ಸೆರ್ನಾ, (1997), ದ ರಿಸ್ಕ್ಸ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಮಾಡೆಲ್ ಫಾರ್ ರೀಸೆಟ್ಲಿಂಗ್ ಡಿಸ್ಪ್ಲೇಸ್‌ಡ್ ಪಾಪ್ಯುಲೇಷನ್ಸ್, ವರ್ಲ್ಡ್ ಡೆವಲೆಪ್‌ಮೆಂಟ್, ವಾಲ್ಯೂಮ್ 25, ನಂ.10. ಪುಟ 1569–1588.

[27] ಫೆರ್ನಾಂಡೀಸ್, ವಾಲ್ಟೆರ್ ಎಂಡ್ ಮಹಮ್ಮದ್ ಆಸಿಫ್(1997) ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್ ಇನ್ ಒರಿಸ್ಸಾ, 1951 ಟು 1995, ಎ ಡಾಟಾ ಬೇಸ್‌ಡ್ ಒನ್ ದ ಎಕ್ಸಟೆಂಟ್ ಎಂಡ್ ನೇಚರ್, ನ್ಯೂಡೆಲ್ಲಿ, ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್. ಪುಟ 18–27.

[28] ಕ್ಲಾಡ್ ಆಲ್ವರಿಸ್, ರಮೇಶ್ ಬಿಲ್ಲೋರಿ (1998) ಡ್ಯಾಮಿಂಗ್ ದ ನರ್ಮದಾ, ನಟರಾಜ್ ಪಬ್ಲಿಷರ್ಸ್, ಡೆಹ್ರಾಡೂನ್. ಪುಟ 1–58.

[29] ಕಳವಾರು ಮತ್ತು ಕೆಂಜಾರು ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರ ಜೊತೆಯಲ್ಲಿ ಅನೌಪಚಾರಿಕವಾಗಿ ಗುಂಪು ಚರ್ಚೆಯಲ್ಲಿ ತೊಡಗಿದಾಗ ಸಂತ್ರಸ್ತರಿಂದ ವ್ಯಕ್ತವಾದ ಅಭಿಪ್ರಾಯ

[30] ಅದೇ.

[31] ಕುಡುಬಿಪದವಿನಲ್ಲಿ ಪರಿಶಿಷ್ಟ ಜನಾಂಗಕ್ಕೆ ಸೇರಿದ ಸಂತ್ರಸ್ತರ ಭೂಮಿಯನ್ನು ಮೇಲುಜಾತಿಯ ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಿಸಲು ಭೂಮಿಯನ್ನು ನೀಡಿರುವುದನ್ನು ಗಮನದಲ್ಲಿರಿಸಿ.

[32] ವಿಕ್ಟರ್ ಡಿ'ಸೋಜಾ, ಕಳವಾರು (ಹೆಸರು ಬದಲಾಯಿಸಲಾಗಿದೆ) ಅವರ ಮನೆಯನ್ನು ಮತ್ತು ಕೃಷಿಭೂಮಿಯನ್ನು ಬಲಪಂತದಿಂದ ನಾಶಪಡಿಸಿದುದನ್ನು ಗಮನದಲ್ಲಿರಿಸಿ.

[33] ಯೋಜನೆಗಾಗಿ ಭೂಮಿಯನ್ನು ಕಳೆದುಕೊಂಡು ಕೆಂಜಾರು ಪುನರ್‌ವಸತಿ ಕಾಲನಿಯಲ್ಲಿ ವಾಸಿಸುತ್ತಿರುವ ಸಂತ್ರಸ್ತರು.

ಅಧ್ಯಾಯ – 4

ಸ್ಥಳಾಂತರ ಮತ್ತು ಪುನರ್‌ವಸತಿಯ ಆರ್ಥಿಕ ಪರಿಣಾಮಗಳು

ಅಧ್ಯಾಯ – 4

ಸ್ಥಳಾಂತರ ಮತ್ತು ಪುನರ್‌ವಸತಿಯ ಆರ್ಥಿಕ ಪರಿಣಾಮಗಳು

ಭೂಸ್ವಾಧೀನ ತಂದೊಡ್ಡಿರುವ ಆರ್ಥಿಕ ಪರಿಣಾಮಗಳು

ಅಭಿವೃದ್ಧಿ ಯೋಜನೆಗಳು ತನ್ನ ಗರ್ಭದಲ್ಲಿ ರಾಷ್ಟ್ರದ ಮತ್ತು ಯೋಜನೆಯಿಂದ ತೊಂದರೆಗೀಡಾದ ಸಂತ್ರಸ್ತರ ಪ್ರಗತಿ ಹಾಗೂ ಯಶಸ್ಸನ್ನು ಸಾಧಿಸುವ ಉದ್ದೇಶವನ್ನು ಹೊಂದಿರುತ್ತದೆ. ಬೃಹತ್ ಯೋಜನೆಗಳು ಸ್ಥಾಪಿಸಲ್ಪಡುವುದರಿಂದ ರಾಷ್ಟ್ರ ಅಭಿವೃದ್ಧಿಯಾಗಿ, ಸಮಾಜದ ಹೆಚ್ಚಿನ ಜನರಿಗೆ ಅನುಕೂಲಗಳಾಗುವುದರಿಂದ ಅವುಗಳ ಸ್ಥಾಪನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗುವವರ ಮೇಲೆ ಹೆಚ್ಚಿನ ನಕಾರಾತ್ಮಕ ಪರಿಣಾಮಗಳಾದರೂ ಕೂಡಾ ಆಡಳಿತಶಾಹಿ ವ್ಯವಸ್ಥೆಯು ಸಂತ್ರಸ್ತರ ಬಗ್ಗೆ ಹೆಚ್ಚಿನ ಗಮನವನ್ನು ಸಾಮಾನ್ಯವಾಗಿ ನೀಡುವುದಿಲ್ಲ. ಸಾಮಾಜಿಕ ಹಾಗೂ ಆರ್ಥಿಕ ಅಂಶಗಳಿಗೆ ಪರಸ್ಪರ ಸಂಬಂಧವಿದ್ದು, ಸಾಮಾಜಿಕ ವ್ಯವಸ್ಥೆಯ ಮೇಲೆ ಆರ್ಥಿಕ ಅಂಶಗಳು ನೇರವಾದ ಪರಿಣಾಮಗಳನ್ನು ಬೀರುತ್ತವೆ. ಆರ್ಥಿಕಾಭಿವೃದ್ಧಿಯು ಸಾಮಾನ್ಯವಾಗಿ ಸಾಮಾಜಿಕ ಏರುಪೇರುಗಳಿಗೆ ಕಾರಣವಾಗುತ್ತದೆ. ಒಂದು ಜನಸಮುದಾಯದ ಸಾಮಾಜಿಕ ಅಂತಸ್ತಿನಲ್ಲಿ ಮೇಲ್‌ಸ್ತರಕ್ಕೆ ಏರುವುದಕ್ಕೆ ಆರ್ಥಿಕ ಬೆಳವಣಿಗೆಯ ಕೊಡುಗೆಗಳು ಪ್ರಮುಖವಾಗುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಸ್ಥಳಾಂತರಗಳ ಬಗೆಗಿನ ಅಧ್ಯಯನ ಮತ್ತು ವಿಶ್ಲೇಷಣೆಯನ್ನು ಸಾಮಾಜಿಕ ಹಾಗೂ ಆರ್ಥಿಕ ಅಂಶಗಳನ್ನು ಬೇರ್ಪಡಿಸಿ ನಡೆಸುವುದು ಕಷ್ಟ ಸಾಧ್ಯವಾಗುತ್ತದೆ. ಈಗಾಗಲೇ ಸ್ಥಳಾಂತರಕ್ಕೆ ಸಂಬಂಧಪಟ್ಟಂತೆ ಚರ್ಚಿಸಿರುವ ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳು ಅಷ್ಟೊಂದು ಸಂತೋಷದಾಯಕ ಫಲಿತಾಂಶಗಳನ್ನು ತೋರಿಸದಿರುವುದನ್ನು ಕಾಣಬಹುದು. ಪ್ರಸ್ತುತ ವಿಭಾಗದಲ್ಲಿ ಅಭಿವೃದ್ಧಿಯ ಮಾನದಂಡದಲ್ಲಿ ಪ್ರಮುಖವಾಗಿ ಪರಿಗಣಿಸಲ್ಪಟ್ಟಿರುವ ಆರ್ಥಿಕ ಅಂಶಗಳು ಸಾಮಾಜಿಕ ಅಂಶಗಳಿಗಿಂತ ಹೆಚ್ಚಿನ ಯಶಸ್ಸನ್ನು ಪಡೆಯಲು ಸಾಧ್ಯವಾಗಿರುತ್ತದೆಯೇ? ಸಂತ್ರಸ್ತರು ಭೂಮಿಯನ್ನು ಕಳೆದುಕೊಂಡ ನಂತರದಲ್ಲಿ ಅವರುಗಳ ಉದ್ಯೋಗ, ವರಮಾನ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಯಾವುದಾದರೂ ಸಕಾರಾತ್ಮಕ ಪ್ರಗತಿಯಾಗಿರುತ್ತದೆಯೇ? ಮುಂತಾದ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ಅಧ್ಯಯನ ಮಾಡಲಾಗಿರುತ್ತದೆ.

ಸ್ಥಳಾಂತರ ಮತ್ತು ಪುನರ್‌ವಸತಿಯ ಬಗ್ಗೆ ಜಾಗತಿಕ ಮಟ್ಟದಲ್ಲಿ ಅಧ್ಯಯನವನ್ನು ನಡೆಸಿ ಪ್ರಸಿದ್ಧರಾಗಿರುವ ಮೈಕೆಲ್ ಸೆರ್ನ್ನಾರವರು ಪ್ರತಿಪಾದಿಸಿದ 'ಸ್ಥಳಾಂತರ ಸಂತ್ರಸ್ತರ ಬದುಕಿನ ಮೇಲೆ ಸರಿಪಡಿಸಲಾಗದ ನಷ್ಟವನ್ನು ತಂದೊಡ್ಡುತ್ತದೆ'[1] ಎಂಬ ಮಾದರಿಯನ್ನು ವಿಶ್ಲೇಷಿಸುವ ಪ್ರಯತ್ನವನ್ನು ಅಧ್ಯಯನದ ಆದ್ಯತೆಯನ್ನಾಗಿ ಮಾಡಲಾಗಿರುತ್ತದೆ. ಬಲವಂತದ ಸ್ಥಳಾಂತರ ಮತ್ತು ಅಪರಿಚಿತ ಪ್ರದೇಶದಲ್ಲಿ ಪುನರ್‌ವಸತಿಗಳನ್ನು ಕಲ್ಪಿಸುವುದು

ಯೋಜನೆಯ ಸಂತ್ರಸ್ತರನ್ನು ಮತ್ತಷ್ಟು ಬಡವರನ್ನಾಗಿಸುತ್ತದೆ[2] ಎಂದು ಮೈಕಲ್ ಸೆರ್ನ್ನಾರವರು ತಮ್ಮ ಅಧ್ಯಯನದಲ್ಲಿ ವಿಶ್ಲೇಷಿಸುತ್ತಾರೆ. ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆ ಸಂತ್ರಸ್ತರ ಆರ್ಥಿಕ ಚಟುವಟಿಕೆಗಳ ಮೇಲೆ ಯಾವ ರೀತಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆಗಿಂತ ಮೊದಲು ಹಾಗೂ ನಂತರ ಪರಿಣಾಮ ಬೀರಿರುತ್ತದೆ ಎಂಬುದಕ್ಕೆ ಪ್ರಮುಖ ಆದ್ಯತೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ನೀಡಲಾಗಿರುತ್ತದೆ. ಸ್ಥಳಾಂತರ ಸಂತ್ರಸ್ತರ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಿರುತ್ತದೆ ಮತ್ತು ಸಮಾಜದ ಆರ್ಥಿಕ ವ್ಯವಸ್ಥೆ, ಸಾಮಾಜಿಕ, ಸಾಂಸ್ಕೃತಿಕ, ಆರೋಗ್ಯ, ಪರಿಸರ ಹಾಗೂ ಯೋಜನೆಯ ಭಾಗೀದಾರರ ಹೊಣೆಗಾರತ್ವಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿ ಅಧ್ಯಯನವನ್ನು ಮಾಡಲಾಗಿರುತ್ತದೆ.

ಕೋಷ್ಟಕ–4.1: ಮಾಹಿತಿದಾರರ ಆರ್ಥಿಕ ಸೂಚಕಗಳು

ಕ್ರ ಸಂ.	ಆರ್ಥಿಕ ಸೂಚಕಗಳು	ಸ್ಥಳಾಂತರಕ್ಕಿಂತ ಪೂರ್ವದಲ್ಲಿ				ಸ್ಥಳಾಂತರದ ನಂತರ			
		ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.	ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.
1	ಕೃಷಿ	120	48	130	52	10	4	240	96
2	ಕೂಲಿ ಕೆಲಸ	115	46	135	54	125	50	125	50
3	ವ್ಯಾಪಾರ	15	6	235	94	10	4	240	96
4	ವೃತ್ತಿಪರ	10	4	240	96	20	8	230	92

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರದ ಪ್ರದೇಶಗಳಲ್ಲಿ 1970ರ ದಶಕದ ಹಿಂದೆ ಕೃಷಿ ಚಟುವಟಿಕೆಗಳು ಪ್ರಧಾನವಾಗಿತ್ತು. ಹೆಚ್ಚು ಕುಟುಂಬಗಳು ತಮ್ಮ ಜೀವನಾಧಾರಕ್ಕಾಗಿ ಕೃಷಿಯನ್ನು ನಂಬಿಕೊಂಡಿದ್ದವು. ಭತ್ತ, ತೋಟಗಾರಿಕೆ ಮತ್ತು ತೆಂಗು ಪ್ರಧಾನ ಬೆಳೆಯಾಗಿದ್ದು, ವಾಣಿಜ್ಯ ಬೆಳೆಗಳಾದ ಅಡಿಕೆ, ಕೊಕ್ಕೊ ಕೃಷಿಯನ್ನು ಬೆಳೆಸುತ್ತಿದ್ದರು. 1974ರ ನವಮಂಗಳೂರು ಬಂದರಿನ ಸ್ಥಾಪನೆಯೊಂದಿಗೆ ಜಿಲ್ಲೆಯಲ್ಲಿ ಕೈಗಾರಿಕೀಕರಣ ಪ್ರಕ್ರಿಯೆ ಆರಂಭಗೊಂಡು ಬೃಹತ್ ಕೈಗಾರಿಕೆಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆಯಿಂದ ಜನರ ಮೂಲ ಉದ್ಯೋಗವಾದ ಕೃಷಿ ಚಟುವಟಿಕೆಯು ಅವನತಿಯನ್ನು ಕಾಣಲಾರಂಭಿಸಿತು. ಕೃಷಿ ಭೂಮಿಯ ನಷ್ಟ ಅಥವಾ ಕೈಗಾರಿಕೆಗಳ ಸ್ಥಾಪನೆಗೋಸ್ಕರ ಸ್ವಾಧೀನಪಡಿಸುವಿಕೆ ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿರುವ ವೃತ್ತಿ ವ್ಯವಸ್ಥೆಯನ್ನೇ ಸಂಪೂರ್ಣವಾಗಿ ಬದಲಾಯಿಸುತ್ತದೆ. ಕೃಷಿ ಅವಲಂಬಿತ ಉದ್ಯೋಗಗಳಿಗೆ ಅವಶ್ಯಕವಾದ ಫಲವತ್ತಾದ ಭೂಮಿಗಳನ್ನು ಕೈಗಾರಿಕೆಗಳ ಸ್ಥಾಪನೆಗಾಗಿ ಸ್ವಾಧೀನ ಮಾಡಿರುವುದರಿಂದ ಹಾಗೂ ಕೃಷಿಯನ್ನು ನಡೆಸಲು ಯೋಗ್ಯವಲ್ಲದ ಭೂಮಿಗಳು ಮಾತ್ರ ಉಳಿದಿರುವುದರಿಂದ ಭಾರಿ ಪ್ರಮಾಣದಲ್ಲಿ ಕೃಷಿ ಚಟುವಟಿಕೆಗಳು ಕಡಿಮೆಯಾಗಿರುತ್ತದೆ.

ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಸ್ವಾಧೀನಪಡಿಸಿರುವುದು ಸಂತ್ರಸ್ತರುಗಳ ಜೀವನಶೈಲಿಯಲ್ಲಿ ಹಲವಾರು ಬದಲಾವಣೆಗಳನ್ನು ತಂದಿರುತ್ತದೆ. ಕೋಷ್ಟಕ ಸಂಖ್ಯೆ 4.1ರ ಪ್ರಕಾರ,

ಭೂಸ್ವಾಧೀನಪಡಿಸಿದ ನಂತರ ಕೇವಲ ಹತ್ತು (4%) ಸಂತ್ರಸ್ತರು ಮಾತ್ರ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡು ಬಂದಿದ್ದು, ಭೂಸ್ವಾಧೀನಕ್ಕಿಂತ ಮೊದಲು ನೂರಇಪ್ಪತ್ತು (48%) ಮಾಹಿತಿದಾರರು ಕೃಷಿಯನ್ನು ಪ್ರಧಾನ ಜೀವನಾಧಾರವಾಗಿ ನಂಬಿಕೊಂಡಿದ್ದು, ಸ್ಥಳಾಂತರ ಹಾಗೂ ಪುನರ್‌ವಸತಿಯ ನಂತರ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿರುವುದನ್ನು ಗಮನಿಸಬಹುದು. ಹಿಂದೆ ಕೃಷಿ ಚಟುವಟಿಕೆಗಳಲ್ಲಿ ಕಾರ್ಮಿಕರಾಗಿ ಹಾಗೂ ಕೂಲಿಯಾಳುಗಳಾಗಿ ದುಡಿಯುತ್ತಿದ್ದ ನೂರಹದಿನೈದು (46%) ಮಾಹಿತಿದಾರರು ಸ್ಥಳಾಂತರದ ನಂತರ ಆರಂಭಗೊಂಡ ಕಟ್ಟಡ ನಿರ್ಮಾಣ ಹಾಗೂ ನೂರಇಪ್ಪತ್ತೈದು (50%) ಸಂತ್ರಸ್ತರು ಇತರ ಅಭಿವೃದ್ಧಿ ಚಟುವಟಿಕೆಗಳಲ್ಲಿ ಕಾರ್ಮಿಕರಾಗಿ ಭಾಗಿಯಾಗಿರುವುದು ಕಂಡು ಬಂದಿದ್ದು, ಕೃಷಿ ಕಾರ್ಮಿಕರಾಗಿದ್ದವರು ತಮ್ಮ ಬದುಕಿಗಾಗಿ ಕೃಷಿಗೆ ಸಂಬಂಧಪಡದ ಇತರ ಕೈಗಾರಿಕಾ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಅನಿವಾರ್ಯತೆಗೆ[3] ಒಳಗಾಗಿರುವುದನ್ನು ಗಮನಿಸಲಾಗಿರುತ್ತದೆ. ವ್ಯಾಪಾರ ಹಾಗೂ ವೃತ್ತಿಪರ ಕ್ಷೇತ್ರಗಳಲ್ಲಿ ಕ್ರಮವಾಗಿ ಹದಿನೈದು (6%) ಮತ್ತು ಹತ್ತು (4%) ಸಂತ್ರಸ್ತರು ತೊಡಗಿಸಿಕೊಂಡಿದ್ದು ಸ್ಥಳಾಂತರ ಹಾಗೂ ಪುನರ್‌ವಸತಿಯ ನಂತರ ಅಲ್ಪ ಪ್ರಮಾಣದಲ್ಲಿ ಈ ವರ್ಗದ ಸಂಖ್ಯೆ ಹತ್ತು (4%) ಮತ್ತು ಇಪ್ಪತ್ತಕ್ಕೆ (8%) ಹೆಚ್ಚಳವಾಗಿದ್ದು ಅಲ್ಪ ಪ್ರಮಾಣದಲ್ಲಿ ಅವರ ಉದ್ಯೋಗಗಳಲ್ಲಿ ಏರಿಕೆ ಕಂಡು ಬಂದಿರುತ್ತದೆ. ಕೈಗಾರಿಕೆಗಳು ಈ ಪ್ರದೇಶದಲ್ಲಿ ನೆಲೆನಿಲ್ಲಲು ಆರಂಭಗೊಂಡ ನಂತರ ಕೃಷಿ ಪ್ರಧಾನವಾಗಿದ್ದ ಪರಿಸರವು ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳಗೊಂಡು ಕೈಗಾರಿಕಾ ಪ್ರದೇಶವಾಗಿ ಮಾರ್ಪಾಟಾದುದನ್ನು ಕಾಣಬಹುದು. ತಮ್ಮ ಕೃಷಿ ಭೂಮಿಯನ್ನು ಕಳೆದುಕೊಂಡು ಯೋಜನೆಯ ಸಂತ್ರಸ್ತರು ನಿರ್ಗತಿಕರಾಗಿ ಆರಂಭಗೊಂಡ ಕೈಗಾರಿಕೆಗಳಲ್ಲಿ ಮತ್ತು ನಿರ್ಮಾಣ ಕಾಮಗಾರಿಗಳಲ್ಲಿ ಕಾರ್ಮಿಕರಿಗಾಗಿ ದುಡಿಯುವ ಅನಿವಾರ್ಯತೆ ಎದುರಾಯಿತು.

ಜೋಷಿ ಬಿ.ಎಲ್. ಅವರು ಬಲವಂತದ ಸ್ಥಳಾಂತರ ಮತ್ತು ಪುನರ್‌ವಸತಿಯಲ್ಲಿನ ನೇರ ಪರಿಣಾಮಗಳ ಬಗ್ಗೆ ಚರ್ಚಿಸುತ್ತಾ "ಪರಿಹಾರದ ರೂಪದಲ್ಲಿ ಕಡಿಮೆ ಪ್ರಮಾಣದ ನಗದು ಹಣ ಹಿಡುವಳಿದಾರರಿಗೆ ದೊರಕಿರುವುದರಿಂದ ಉತ್ತಮ ಕೃಷಿ ಭೂಮಿಯನ್ನು ಖರೀದಿಸಲು ಸಾಧ್ಯವಾಗದೇ ಇರುವುದು, ಅವರುಗಳು ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಮಿಕರಾಗಿ ಬದಲಾಗುವುದಕ್ಕೆ ಕಾರಣವಾಯಿತು. ಕುಶಲಕರ್ಮಿಗಳು ತಮ್ಮ ಮೂಲ ಕಸುಬನ್ನು ತ್ಯಜಿಸಿ, ಇಷ್ಟರವರೆಗೆ ಮಾಡದೇ ಇದ್ದಂತಹ ಹೊಸ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತಾಯಿತು".[4] ಪರಿಹಾರದ ಹಣದ ವಿತರಣೆ, ಪುನರ್‌ವಸತಿ ನೀಡಲ್ಪಟ್ಟ ಪ್ರದೇಶಗಳು, ರಕ್ತ ಸಂಬಂಧಿಗಳ ನಡುವೆ ಪರಿಹಾರದ ಹಣದ ಹಂಚಿಕೆ ಅವರುಗಳ ನಡುವೆ ವೈಮನಸ್ಸು ಮೂಡಲು ಕಾರಣವಾಗಿ ಕೌಟುಂಬಿಕ ವಿಘಟನೆಗಳಿಗೆ ಅವಕಾಶ ಮಾಡಿಕೊಟ್ಟಿತು. ಸಂತ್ರಸ್ತರ ಕೈಯಲ್ಲಿ ಹಣ ಸರಾಗವಾಗಿ ಹರಿದಾಡಲು ಆರಂಭ ಆದುದರಿಂದ ಕುಡಿತ, ಜೂಜು, ವೇಶ್ಯಾವಾಟಿಕೆಗಳಂತಹ ಸಾಮಾಜಿಕ ಅನಿಷ್ಟಗಳ

ಪ್ರಮಾಣದಲ್ಲಿ ಹೆಚ್ಚಳವಾಯಿತು. ಒಟ್ಟಿನಲ್ಲಿ ಸ್ಥಳಾಂತರ ಪ್ರಕ್ರಿಯೆಯಿಂದಾಗಿ ಸಾಮಾಜಿಕ ಸಾಮರಸ್ಯ ಹದಗೆಡಲಾರಂಭಿಸಿತ್ತು.[5] ಬಲವಂತದ ಸ್ಥಳಾಂತರದಿಂದ ಸಂತ್ರಸ್ತರು ತಮ್ಮ ಪೂರ್ವನೆಲೆಯಲ್ಲಿದ್ದ ಸಾಂಪ್ರದಾಯಿಕ ಉದ್ಯೋಗವನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ ಹೊಸ ನೆಲೆಗಳಲ್ಲಿ ಯಾವುದೇ ಉದ್ಯೋಗಗಳಿಲ್ಲದೆ ತಮಗೆ ಪರಿಹಾರವಾಗಿ ದೊರೆತ ನಿರೀಕ್ಷೆಗೂ ಮೀರಿದ ಹಣದಿಂದಾಗಿ ಐಷಾರಾಮದ ಜೀವನವನ್ನು ನಡೆಸಿ ಕೆಟ್ಟ ಚಟಗಳಿಗೆ ದಾಸರಾಗುತ್ತಾರೆ ಎಂಬ ಫಲಿತಗಳು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿಯೂ ಕಾಣಸಿಗುತ್ತವೆ.

ಅಂಕಣಕಾರರಾಗಿದ್ದು, ಭಾರತದ ಹಳ್ಳಿಗಳ ಜೀವನವನ್ನು ಅಧ್ಯಯನ ಮಾಡಿರುವ ಪಿ. ಸಾಯಿನಾಥ್‌ರವರು ವಿವರಿಸುವಂತೆ, 'ಬೃಹತ್ ಯೋಜನೆಗಳಿಂದ ಸಂತ್ರಸ್ತರಾದ ಜನರಿಗೆ ಪರಿಹಾರವಾಗಿ ಹಣವನ್ನು ನೀಡಿದರೆ, ಅದನ್ನು ಅವರು ತಮ್ಮ ಐಷಾರಾಮದ ಜೀವನಕ್ಕಾಗಿ ವ್ಯಯಿಸುತ್ತಾರೆ ಮತ್ತು ಪರಿಹಾರದ ಹಣ ಯಾವುದೇ ಉಪಯೋಗಕ್ಕೆ ಬರದಂತೆ ಖರ್ಚಾಗುತ್ತದೆ. ಸಂತ್ರಸ್ತರ ಹೆಂಡತಿ ಮಕ್ಕಳಿಗೆ ಬದುಕು ದುಸ್ತರವಾಗುತ್ತದೆ. ಭೂಮಿ ಇದ್ದಾಗ ಅದರಿಂದ ಕೃಷಿ ಮಾಡಿ ಫಸಲು ತೆಗೆಯಲು ಆಗುತ್ತದೆ. ಆದರೆ ಭೂಮಿಯೇ ಇಲ್ಲದಾದಾಗ ಸಂತ್ರಸ್ತರ ಕುಟುಂಬದ ಸದಸ್ಯರ ಬದುಕು ದುರಂತದಲ್ಲಿ ಮುಕ್ತಾಯವಾಗುತ್ತದೆ'[6] ಎಂದು ಉಲ್ಲೇಖಿಸಿರುತ್ತಾರೆ.

ನೆಲ್ಲೊ ಮತ್ತು ಕೊಲಬ್ ಮೇಲ್ದಂಡೆ ಯೋಜನೆಯಿಂದಾದ ಸಂತ್ರಸ್ತರ ಸ್ಥಳಾಂತರ ಮತ್ತು ಪುನರ್‌ವಸತಿಯ ಬಗ್ಗೆ ಅಧ್ಯಯನವನ್ನು ನಡೆಸಿದ ರೆಡ್ಡಿ ಯು.ಬಿ.(1992)ರವರು ಸ್ಥಳಾಂತರದಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿದ್ದ ಸಾಂಪ್ರದಾಯಿಕ ಜನಜೀವನ ಸಂಪೂರ್ಣವಾಗಿ ಶಿಥಿಲಗೊಂಡಿರುವುದು, ಬುಡಕಟ್ಟು, ಸ್ಥಳೀಯ ಜನರು ಬದಲಾಗಿರುವ ಪರಿಸ್ಥಿತಿಗೆ ಹೊಂದಿಕೊಳ್ಳಲು ಕಷ್ಟಪಡುತ್ತಿರುವುದನ್ನು ವಿವರಿಸುತ್ತಾ 'ಪುನರ್‌ವಸತಿ ಪ್ರಕ್ರಿಯೆಯು ಹೊಸ ಆರ್ಥಿಕ ಸಂಪನ್ಮೂಲಗಳನ್ನು ಸೃಷ್ಟಿಸಿ ಈಗಾಗಲೇ ಅಸ್ತಿತ್ವದಲ್ಲಿದ್ದ ಸಾಂಪ್ರದಾಯಿಕ ವ್ಯವಸ್ಥೆಯನ್ನು ಬದಲಾಯಿಸಿ ಸಂತ್ರಸ್ತರ ಜೀವನಶೈಲಿಯಲ್ಲಿ ಸಂಪೂರ್ಣ ಬದಲಾವಣೆಯನ್ನು ತಂದಿತ್ತು'[7] ಎಂಬ ಕಂಡುಕೊಳ್ಳುವಿಕೆಯನ್ನು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿಯೂ ಗಮನಿಸಲಾಗಿರುತ್ತದೆ.

ಕೋಷ್ಟಕ–4.2: ಸಂತ್ರಸ್ತರು ಹೊಂದಿದ್ದ ಭೂ ಒಡೆತನ ಮತ್ತು ಕೃಷಿ ಭೂಮಿ

ಕ್ರ. ಸಂ.	ಆರ್ಥಿಕ ಸೂಚಕಗಳು	ಸ್ಥಳಾಂತರಕ್ಕೆ ಮೊದಲು				ಸ್ಥಳಾಂತರದ ನಂತರ			
		ಹೌದು (ಸಂ.	ಶೇ.	ಇಲ್ಲ (ಸಂ.)	ಶೇ.	ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.
1	1 ಎಕ್ರೆವರೆಗೆ	57	22.8	193	77.2	3	1	247	98.8
2	1–3 ಎಕ್ರೆ	20	8	230	92	4	1.6	246	98.4
3	3ರಿಂದ 5ಎಕ್ರೆ	5	2	245	98	3	1.2	247	98.8
4	5ರಿಂದ 10ಎಕ್ರೆ	1	0	249	100	!	0.4	249	99.6
5	10 ಎಕ್ರೆಗಿಂತ ಹೆಚ್ಚು	4	1.6	246	98.4	2	0.8	248	99.2

ವ್ಯಕ್ತಿ ಹೊಂದಿರುವ ಭೂಮಿ ಮತ್ತು ಅಲ್ಲಿರುವಂತಹ ಅಮೂಲ್ಯ ಆಸ್ತಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಜನರ ಸಾಮಾಜಿಕ ಪ್ರತಿಷ್ಠೆ ಮತ್ತು ಸ್ಥಾನಮಾನವನ್ನು ನಿರ್ಧರಿಸುವ ಪ್ರಮುಖ ಮಾಪಕವಾಗಿರುತ್ತದೆ. 4.2ರ ಕೋಷ್ಟಕದ ಪ್ರಕಾರ ಭೂಸ್ವಾಧೀನಪಡಿಸಲಾಗಿರುವ ಸಂತ್ರಸ್ತರ ಭೂಮಾಲಕತ್ವದಲ್ಲಿ ಸ್ಥಳಾಂತರದ ನಂತರ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿರುವುದನ್ನು ಕಾಣಬಹುದು. ಒಂದು ಎಕ್ರೆಯವರೆಗಿನ ಕೃಷಿ ಭೂಮಿಯನ್ನು 22.8% ಮಾಹಿತಿದಾರರು ಸ್ಥಳಾಂತರಕ್ಕಿಂತ ಮೊದಲು ಹೊಂದಿದ್ದರೆ, ಸ್ಥಳಾಂತರದ ನಂತರ ಅದರ ಸಂಖ್ಯೆ ಒಂದು ಶೇಕಡಾಕ್ಕೆ ಇಳಿದಿರುತ್ತದೆ. ಒಂದರಿಂದ ಮೂರು ಎಕ್ರೆ ಭೂಮಿಯನ್ನು ಪೂರ್ವದಲ್ಲಿ ಎಂಟು ಶೇಕಡಾ ಮಾಹಿತಿದಾರರು ಹೊಂದಿದ್ದು ನಂತರ ಅದರ ಪ್ರಮಾಣ 1.6%ಕ್ಕೆ ಸೀಮಿತವಾಗಿರುತ್ತದೆ. ಮೂರರಿಂದ ಐದು ಎಕ್ರೆಯನ್ನು ಹಿಂದೆ 2% ಸಂತ್ರಸ್ತರು ಹೊಂದಿದ್ದು ಭೂಸ್ವಾಧೀನದ ನಂತರ ಅದು ಶೇಕಡಾ 1.2ಕ್ಕೆ ಇಳಿದಿರುತ್ತದೆ, ಐದರಿಂದ ಹತ್ತು ಎಕ್ರೆ ಭೂಮಿಯನ್ನು ಒಬ್ಬರು ಹೊಂದಿದ್ದು ಅದರ ಪ್ರಮಾಣದಲ್ಲಿ ಸ್ಥಳಾಂತರದ ನಂತರ ಯಾವುದೇ ರೀತಿಯ ಬದಲಾವಣೆ ಆಗಿರುವುದಿಲ್ಲ. ಸಂದರ್ಶಿತರಲ್ಲಿ ಒಟ್ಟು ನಾಲ್ಕು (1.6%) ಮಾಹಿತಿದಾರರು ಹತ್ತು ಎಕ್ರೆಗಿಂತ ಹೆಚ್ಚಿನ ಜಮೀನನ್ನು ಹೊಂದಿದ್ದು ಸ್ಥಳಾಂತರದ ನಂತರ ಅದರ ಪ್ರಮಾಣ ಎರಡಕ್ಕೆ (0.8%) ಇಳಿದಿರುತ್ತದೆ. ಸ್ಥಳಾಂತರದ ನಂತರ ಸಂತ್ರಸ್ತರು ತಮ್ಮ ಹೆಚ್ಚಿನ ಕೃಷಿ ಭೂಮಿಯನ್ನು ಕಳೆದುಕೊಂಡು ಕಡಿಮೆ ಭೂಪ್ರದೇಶಲ್ಲಿ ಮನೆ ಕಟ್ಟಿ ವಾಸಿಸಿಕೊಂಡು ಬಂದಿರುವುದು ಕಂಡು ಬರುತ್ತದೆ. ಒಟ್ಟಿನಲ್ಲಿ ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಹೆಚ್ಚಿನ ಸಂತ್ರಸ್ತರು ಒಂದರಿಂದ ಐದು ಎಕ್ರೆಯವರೆಗೆ ಭೂಮಾಲಕತ್ವವನ್ನು ಹೊಂದಿರುವ ಗುಂಪಿಗೆ ಸೇರಿದ್ದು ಸ್ಥಳಾಂತರವು ಈ ಅಂಕಿ ಅಂಶಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕಿ ಅವರುಗಳನ್ನು ಭೂರಹಿತರನ್ನಾಗಿಸಿ ಮನೆಗಳನ್ನು ಮಾತ್ರ ಹೊಂದಿರುವ ಪರಿಸ್ಥಿತಿ ನಿರ್ಮಾಣ ಮಾಡಿದೆ. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಭೂಸ್ವಾಧೀನಪಡಿಸುವಾಗ ಅದು ಹೆಚ್ಚು ಸಂಕಷ್ಟಕ್ಕೆ ಗುರಿ ಮಾಡುವುದು ಸಣ್ಣ ಭೂಮಿಯಲ್ಲಿ ಕಡಿಮೆ ಹಿಡುವಳಿಯನ್ನು ಹೊಂದಿರುವ ಕೃಷಿಕರನ್ನು ಎಂಬುದಾಗಿ ಹೆಚ್ಚಿನ ಸ್ಥಳಾಂತರದ ಬಗೆಗಿನ ಅಧ್ಯಯನದ ಫಲಿತಗಳು ತೋರಿಸುತ್ತವೆ. ಸಂತ್ರಸ್ತರು ತಮ್ಮ ಕೃಷಿ ಭೂಮಿಯನ್ನು ಬಹುತೇಕವಾಗಿ ಕಳೆದುಕೊಂಡಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಜೀವನವನ್ನು ನಡೆಸಲು ಭೂಮಿಯನ್ನು ಹೆಚ್ಚಿನ ಮಾಹಿತಿದಾರರು ಸ್ಥಳಾಂತರದ ಪೂರ್ವದಲ್ಲಿ ಅವಲಂಬಿತರಾಗಿದ್ದರು. ಜೀವನದ ಆಸರೆಗಾಗಿ ನಂಬಿಕೊಂಡು ಬಂದಿದ್ದ ಭೂಮಿಯನ್ನು ಕಳೆದುಕೊಂಡು ಹೆಚ್ಚಿನ ಕುಟುಂಬಗಳು ಭೂರಹಿತವಾದವು. 'ಹೆಚ್ಚಿನ ಶಿಕ್ಷಣ ಹಾಗೂ ಯಾವುದೇ ವಿಶೇಷ ಕೌಶಲ್ಯವನ್ನು ಹೊಂದಿರದ ಸಂತ್ರಸ್ತರು ಬೇರೆ ಉದ್ಯೋಗಗಳು ದೊರಕದೆ ಇರುವುದು ಮತ್ತು ತಮ್ಮ ಭೂಮಿ, ಸಂಪತ್ತನ್ನು ಕಳೆದುಕೊಂಡಿರುವುದು ಅವರುಗಳ ಜೀವನಕ್ಕೆ ಬಲವಾದ ಹೊಡೆತವನ್ನು ನೀಡಿತು. ಯೋಜನೆಯ ಆರಂಭದಿಂದ ಯಾವುದೇ ಲಾಭವನ್ನು ಪಡೆಯದ ಸಂತ್ರಸ್ತರು ದಿನಗೂಲಿ ಕಾರ್ಮಿಕರಾಗಿ ದುಡಿಯುವುದು ಅನಿವಾರ್ಯವಾಯಿತು'.[8] ಬಲವಂತದ ಸ್ಥಳಾಂತರಕ್ಕೆ ಸಂಬಂಧಪಟ್ಟಂತಹ ಹೆಚ್ಚಿನ ಅಧ್ಯಯನಗಳು (ಸತ್ಯನಾರಾಯಣ, 1999 ಮತ್ತು ಗಂಗೂಲಿ, 1988) ರೈತರು ಕೃಷಿ ಭೂಮಿಗಳನ್ನು ಕಳೆದುಕೊಂಡಿರುವುದನ್ನು

ವರದಿ ಮಾಡಿರುತ್ತದೆ. ಮೈಕಲ್ ಸೆರ್ನ್ನಾರವರ ವಾದದಂತೆ ಭೂಮಿಯನ್ನು ಕಳೆದುಕೊಳ್ಳುವುದು ಸಂತ್ರಸ್ತರ ದಾರಿದ್ರ್ಯ ಮತ್ತು ಅವನತಿಯ ಪ್ರಮುಖ ಲಕ್ಷಣವಾಗಿರುತ್ತದೆ[9] ಎಂಬ ಅಂಶ ಪ್ರಸ್ತುತ ಅಧ್ಯಯನದ ಸಂತ್ರಸ್ತರ ಬದುಕಿನೊಂದಿಗೆ ತಾಳೆಯಾಗುತ್ತದೆ.

ಮಾಹಿತಿದಾರರು ಹೊಂದಿದ್ದ ಭೂಮಾಲಕತ್ವದ ವ್ಯವಸ್ಥೆಯನ್ನು ಅವಲೋಕಿಸಿದಾಗ 70%ಕ್ಕಿಂತಲೂ ಹೆಚ್ಚಿನ ಮಾಹಿತಿದಾರರು ತಮ್ಮ ಸೀಮಿತ ಕೃಷಿಭೂಮಿಗಳನ್ನು ಕೈಗಾರಿಕಾ ಸಂಕೀರ್ಣದ ರಚನೆಗಾಗಿ ಸಂಪೂರ್ಣವಾಗಿ ಕಳೆದುಕೊಂಡಿರುತ್ತಾರೆ. ಬಹುತೇಕ ಅಧ್ಯಯನಗಳು (ಪರಶುರಾಮನ್, 1995; ಸತ್ಯನಾರಾಯಣ, 1999) ಸಣ್ಣ ಹಿಡುವಳಿದಾರರು ಮತ್ತು ಬಡ ರೈತರು ತಮ್ಮ ಕೃಷಿ ಭೂಮಿಗಳನ್ನು ಕೈಗಾರಿಕೆಗಳ ಸ್ಥಾಪನೆಗೋಸ್ಕರ ಕಳೆದುಕೊಂಡು ಭೂರಹಿತರಾಗಿರುತ್ತಾರೆ ಎಂಬುದನ್ನು ಬೆಟ್ಟು ಮಾಡಿ ತೋರಿಸುತ್ತದೆ. ಜೀವನವನ್ನು ನಿರ್ವಹಿಸುವುದಕ್ಕಾಗಿ ಶಿಕ್ಷಣ ಮತ್ತು ಯಾವುದೇ ವಿಶೇಷ ತಾಂತ್ರಿಕ ಕೌಶಲ್ಯದ ಅರಿವಿಲ್ಲದ ಭೂಸಂತ್ರಸ್ತರು ಬಲವಂತವಾಗಿ ದಿನಗೂಲಿ ಕಾರ್ಮಿಕರಾಗಿ ಬದಲಾಗಬೇಕಾಗುವುದು ಅನಿವಾರ್ಯವಾಯಿತು[10] (ಗಂಗೂಲಿ, ತುಕ್ರಾಲ್; 1988). ಪ್ರಸ್ತುತ ಯೋಜನೆಗಾಗಿ ಭೂಮಿ ಕಳೆದುಕೊಂಡವರ ಜೀವನಶೈಲಿಯನ್ನು ಹತ್ತಿರದಿಂದ ಅವಲೋಕಿಸಿದಾಗ ಸೀಮಿತ ಭೂಪ್ರದೇಶಗಳಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಮಾಹಿತಿದಾರರು ನಂತರದಲ್ಲಿ ವಿಶೇಷ ಆರ್ಥಿಕ ವಲಯದ ರಚನೆಯ ಕಾಮಗಾರಿಗಳಲ್ಲಿ ದಿನಗೂಲಿ ಕಾರ್ಮಿಕರಾಗಿ ಬದಲಾಗಿರುವುದನ್ನು ನೋಡಲಾಗಿರುತ್ತದೆ. ದೊಡ್ಡ ಕೃಷಿ ಭೂಮಿಯನ್ನು ಹೊಂದಿದ ಜಮೀನುದಾರರು, ಗುತ್ತಿನ ಮನೆಗಳಲ್ಲಿ ಕೃಷಿ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದ ಕೃಷಿ ಕಾರ್ಮಿಕರು ಮಾತ್ರ ಸ್ಥಳಾಂತರದ ನಂತರದ ಬದುಕು ಪುನರ್‌ವಸತಿ ಕಾಲನಿಗಳಲ್ಲಿ ತೃಪ್ತಿ ತಂದಿರುತ್ತದೆಯೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಇದಕ್ಕೆ ಕಾರಣಗಳೇನು ಎಂದು ಅರಿಯಲು ಪ್ರಯತ್ನಿಸಿದಾಗ 'ಹಿಂದೆ ಭೂಮಾಲೀಕರು ನಮಗೆ ಸರಿಯಾದ ವೇತನ ಹಾಗೂ ಸೌಲಭ್ಯಗಳನ್ನು ನೀಡುತ್ತಿರಲಿಲ್ಲ. ಕೇವಲ 3 ರಿಂದ 5 ಸೆಂಟ್ಸ್ ಭೂಮಿಯಲ್ಲಿ ಮನೆಗಳನ್ನು ನಿರ್ಮಿಸಿಕೊಟ್ಟು ಶೋಷಣೆಗೊಳಪಡಿಸುತ್ತಿದ್ದರು. ವಿಶೇಷ ಆರ್ಥಿಕ ವಲಯಕ್ಕಾಗಿ ಭೂಸ್ವಾಧೀನಪಡಿಸಿದ ನಂತರದಲ್ಲಿ ಪುನರ್‌ವಸತಿ ಕಾಲನಿಗಳಲ್ಲಿ ದೊರಕಿದ $2^3/_4$ ಸೆಂಟ್ಸ್ ಭೂಮಿಯಲ್ಲಿ ಪರಿಹಾರವಾಗಿ ದೊರಕಿದ ಹಣದಿಂದ ಚಿಕ್ಕ ಮನೆಗಳನ್ನು ನಿರ್ಮಿಸಿ ಕೈಗಾರಿಕೆಗಳಲ್ಲಿ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸುತ್ತಾ ಆತ್ಮಗೌರವದಿಂದ ಸ್ವಾವಲಂಬಿಗಳಾಗಿ ಬದುಕುತ್ತಿದ್ದೇವೆ. ಹಿಂದೆ ಇದ್ದಂತಹ ಶೋಷಣೆ ಪುನರ್‌ವಸತಿ ಕಾಲನಿಗಳಲ್ಲಿ ಪ್ರಸ್ತುತ ಇಲ್ಲ ಎಂಬ ಸಕಾರಾತ್ಮಕ ಅಂಶವನ್ನು ವ್ಯಕ್ತಪಡಿಸಿದ್ದು, ಭೂರಹಿತ ಕೃಷಿ ಕಾರ್ಮಿಕರಿಗೆ ದೊರಕಿದ ಪರಿಹಾರದ ಪ್ಯಾಕೇಜ್‌ಗಳು ಅವರುಗಳಿಗೆ ವರವಾಗಿ ಪರಿಣಮಿಸಿ ವೃತ್ತಿಯಲ್ಲಿ ಬದಲಾವಣೆಗಳಾದರೂ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿರುತ್ತದೆಯೆಂದು ತಿಳಿಸಿರುವುದು ಕೈಗಾರಿಕಾ ಸಂಕೀರ್ಣಗಳ ಸ್ಥಾಪನೆಗೆ ಭೂಸ್ವಾಧೀನಪಡಿಸಿದ ಸಂದರ್ಭಗಳಲ್ಲಿ ಮನೆಗಳನ್ನು ಮಾತ್ರ ಹೊಂದಿದ ಕೃಷಿ ಕಾರ್ಮಿಕರಿಗೆ ಲಾಭವಾಗಿರುವುದನ್ನು ಸೂಚಿಸುತ್ತದೆ.

ಕೋಷ್ಟಕ–4.3: ಸ್ಥಳಾಂತರದ ಪೂರ್ವದಲ್ಲಿ ಹಾಗೂ ನಂತರ ಸಂತ್ರಸ್ತರು ಬೆಳೆಯುತ್ತಿದ್ದ ಪ್ರಮುಖ ಬೆಳೆಗಳು

ಕ್ರ ಸಂ	ಆರ್ಥಿಕ ಸೂಚಕಗಳು	ಸ್ಥಳಾಂತರಕ್ಕೆ ಮೊದಲು				ಸ್ಥಳಾಂತರದ ನಂತರ			
		ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.	ಹೌದು (ಸಂ.)	ಶೇ.	ಇಲ್ಲ (ಸಂ.)	ಶೇ.
1	ಭತ್ತ	120	48	130	52	35	14	215	86
2	ತರಕಾರಿ	130	52	120	48	40	16	210	84
3	ತೋಟಗಾರಿಕೆ	86	34	164	66	1	0	249	100
4	ಮಲ್ಲಿಗೆ	25	10	225	90	0	0	250	100
5	ಕಬ್ಬು	15	6	235	94	1	0	248	99
6	ಬಾಳೆ	95	38	155	62	38	15	212	85
7	ಅಡಿಕೆ	85	34	165	66	39	16	211	84
8	ತೆಂಗು	130	52	120	48	40	16	210	84
9	ಇತರ ವಾಣಿಜ್ಯ ಬೆಳೆಗಳು	25	10	225	90	2	1	248	99

ಮಾಹಿತಿದಾರರ ಕೃಷಿ ಚಟುವಟಿಕೆಗಳ ಮೇಲೆ ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಹಾಗೂ ನಂತರ ಆದಂತಹ ಬದಲಾವಣೆಗಳನ್ನು ಕೋಷ್ಟಕ ಸಂಖ್ಯೆ 4.3 ವಿವರಿಸುತ್ತದೆ. ಭತ್ತವನ್ನು ನೂರಇಪ್ಪತ್ತು (48%) ಮಾಹಿತಿದಾರರು ಬೆಳೆಸುತ್ತಿದ್ದರೆ ಸ್ಥಳಾಂತರದ ನಂತರ ಭತ್ತದ ವ್ಯವಸಾಯದಲ್ಲಿ ತೊಡಗಿದ ಕೃಷಿಕರ ಸಂಖ್ಯೆ ಮೂವತ್ತೈದಕ್ಕೆ (14%) ಇಳಿದಿರುತ್ತದೆ. ಪೂರ್ವದಲ್ಲಿ ನೂರಮೂವತ್ತು (52%) ಮಾಹಿತಿದಾರರು ತರಕಾರಿಯ ಕೃಷಿಯಲ್ಲಿ ತೊಡಗಿದವರು, ಸ್ಥಳಾಂತರದ ನಂತರದಲ್ಲಿ ಇವರುಗಳ ಸಂಖ್ಯೆಯಲ್ಲಿ ಭಾರಿ ಕುಸಿತ ಕಂಡುಬಂದಿದ್ದು ಪ್ರಸ್ತುತ ನಲವತ್ತಕ್ಕೆ (16%) ಇಳಿದಿರುತ್ತದೆ. ಕೆಲವು ಮಾಹಿತಿದಾರರ ಪ್ರಕಾರ "ಹಿಂದೆ ನಾವು ಬೆಳೆಸುತ್ತಿದ್ದ ತರಕಾರಿಗಳನ್ನು ಮಂಗಳೂರು ಮತ್ತು ಬಜ್ಪೆಯ ಮಾರುಕಟ್ಟೆಯಲ್ಲಿ ಉತ್ತಮ ಬೆಲೆಗೆ ಮಾರಾಟ ಮಾಡುತ್ತಿದ್ದೆವು. ಆದರೆ ಈಗಿನ ಪರಿಸ್ಥಿತಿಯಲ್ಲಿ ನಮ್ಮ ದೈನಂದಿನ ಜೀವನಕ್ಕಾಗಿ ತರಕಾರಿಗಳನ್ನು ಪಕ್ಕದ ಮಾರುಕಟ್ಟೆಯಿಂದ ಖರೀದಿಸುವ ಪರಿಸ್ಥಿತಿ ನಿರ್ಮಾಣವಾಗಿದೆ" ಎಂಬ ಅಳಲನ್ನು ತೋಡಿಕೊಂಡಿರುತ್ತಾರೆ. ಕರಾವಳಿಯ ಮಲ್ಲಿಗೆಗೆ ಜಗತ್ತಿನಾದ್ಯಂತ ಉತ್ತಮ ಮಾರುಕಟ್ಟೆ ಹಾಗೂ ಬೇಡಿಕೆಯಿದ್ದು, ಯೋಜನೆಗಾಗಿ ಸ್ವಾಧೀನಪಡಿಸಲಾಗಿರುವ ಪ್ರದೇಶವನ್ನು ಸಮೀಕ್ಷಿಸಿದಾಗ ಹಿಂದೆ ಇಪ್ಪತ್ತೈದು (10%) ಮಾಹಿತಿದಾರರು ಮಲ್ಲಿಗೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರೆ, ಸ್ಥಳಾಂತರದ ನಂತರ ಇದರ ಸಂಖ್ಯೆ ಶೂನ್ಯಕ್ಕೆ (0%) ಇಳಿದಿರುತ್ತದೆ. ಸ್ಥಳಾಂತರಕ್ಕಿಂತ ಪೂರ್ವದಲ್ಲಿ ತೊಂಬತ್ತೈದು (38%) ಮಾಹಿತಿದಾರರು ಬಾಳೆ, ಎಂಬತ್ತೈದು (34%) ಅಡಿಕೆ ಬೆಳೆಗಾರರು, ನೂರಮೂವತ್ತು (52%) ತೆಂಗು ಬೆಳೆಗಾರರು ಇದ್ದು, ಸ್ಥಳಾಂತರದ ನಂತರ ಇವರ ಸಂಖ್ಯೆಯಲ್ಲಿ ಭಾರಿ ಇಳಿಕೆ

ಕಂಡುಬಂದಿದ್ದು ಪ್ರಸ್ತುತ ಮೂವತ್ತೆಂಟು (15%) ಬಾಳೆ ಕೃಷಿಕರು, ಮೂವತ್ತೊಂಬತ್ತು (16%) ಅಡಿಕೆ ಬೆಳೆಗಾರರು, ನಲವತ್ತು (16%) ತೆಂಗಿನ ಬೆಳೆಗಾರರು ಮಾತ್ರ ತಮ್ಮ ಹಿಂದಿನ ಕೃಷಿ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಕೃಷಿ ಹಾಗೂ ತೋಟಗಾರಿಕೆಗೆ ಉಪಯೋಗಿಸುತ್ತಿದ್ದ ಫಲವತ್ತಾದ ಭೂಮಿಯು ಯೋಜನೆಯ ಜಾರಿಗಾಗಿ ಸ್ವಾಧೀನಪಡಿಸಲ್ಪಟ್ಟಿರುವುದು ಹಾಗೂ ಪುನರ್‌ವಸತಿ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣಕ್ಕಾಗಿ ಮಾತ್ರ ಚಿಕ್ಕ ಭೂಮಿಯನ್ನು ನೀಡಿರುವುದು ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಕೃಷಿಕರು ಪುನರ್‌ವಸತಿ ನೆಲೆಯಲ್ಲಿ ಅದರಿಂದ ವಿಮುಖವಾಗಲು ಪ್ರಮುಖ ಕಾರಣವಾಗಿದೆ. ನೀಡಲ್ಪಟ್ಟ ನಗದು ಮೊತ್ತವನ್ನು ಪುನರ್‌ವಸತಿ ಪ್ರದೇಶದಲ್ಲಿ ಮನೆಗಳ ನಿರ್ಮಾಣಕ್ಕಾಗಿ ವೆಚ್ಚ ಮಾಡಿರುವುದರಿಂದ ಇತರೆಡೆ ಕೃಷಿ ಭೂಮಿಯನ್ನು ಖರೀದಿಸಲು ಆಗದೇ ಇರುವುದು ಸಂತ್ರಸ್ತರು ತಮ್ಮ ಹೊಸ ನೆಲೆಗಳಲ್ಲಿ ಹಿಂದೆ ನಡೆಸುತ್ತಿದ್ದ ಕೃಷಿ ಚಟುವಟಿಕೆಗಳಿಂದ ವಿಮುಖರಾಗುವುದಕ್ಕೆ ಪ್ರಮುಖ ಕಾರಣವಾಗಿದೆ.

ಸ್ಥಳಾಂತರದ ಪೂರ್ವದಲ್ಲಿ ತೋಟಗಾರಿಕೆ, ಬಾಳೆ, ಅಡಿಕೆ, ತೆಂಗು, ತರಕಾರಿ ಮತ್ತು ಇತರ ವಾಣಿಜ್ಯ ಬೆಳೆಗಳನ್ನು ಬೆಳೆದು ಸ್ವಾವಲಂಬಿಗಳಾಗಿ ಬದುಕುತ್ತಿದ್ದ ಮಾಹಿತಿದಾರರು, ನಂತರದಲ್ಲಿ ತಮ್ಮ ಫಲವತ್ತಾದ ಭೂಮಿಯನ್ನು ಕಳೆದುಕೊಂಡಿರುತ್ತಾರೆ. ಪೂರ್ವದಲ್ಲಿ ಸ್ವಾಧೀನಪಡಿಸಿದ ಪ್ರದೇಶದಲ್ಲಿ 52% ಮಾಹಿತಿದಾರರು ತೆಂಗಿನ ಬೆಳೆಯನ್ನು ಜೀವನಕ್ಕಾಗಿ ಅವಲಂಬಿಸಿದ್ದರೆ ಸ್ಥಳಾಂತರದ ನಂತರ 16% ಸಂತ್ರಸ್ತರು ತೆಂಗಿನ ಬೆಳೆಯನ್ನು ನಡೆಸುತ್ತಿದ್ದೇವೆಂದು ತಿಳಿಸಿರುವುದು ಸ್ಥಳಾಂತರ ಮತ್ತು ಕೈಗಾರಿಕೀಕರಣ ಯಾವ ರೀತಿಯಲ್ಲಿ ಸರಳ ಗ್ರಾಮೀಣ ಕೃಷಿ ಬದುಕನ್ನು ನಾಶಪಡಿಸಿ ನಗರೀಕರಣಕ್ಕೆ ಕಾರಣವಾಗುತ್ತಿದೆಯೆಂದು ವಿವರಿಸುತ್ತದೆ.

ಕೋಷ್ಟಕ-4.4: ಪುನರ್‌ವಸತಿ ಪ್ಯಾಕೇಜಿನಲ್ಲಿ ದೊರೆತ ಭೂಮಿಯ ವಸ್ತುಸ್ಥಿತಿ

ಕ್ರಸಂ	ಭೂಮಿಯ ಸ್ಥಿತಿ	ಸಂಖ್ಯೆ	ಶೇಕಡಾ
1	ಉತ್ತಮವಾಗಿತ್ತು	30	12
2	ಮಧ್ಯಮವಾಗಿತ್ತು	184	74
3	ಕಳಪೆ ಮಟ್ಟದಲ್ಲಿತ್ತು	36	14
ಒಟ್ಟು		**250**	**100**

ಯೋಜನೆಯ ಸಂತ್ರಸ್ತರಿಗೆ ಪುನರ್‌ವಸತಿ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಲು ಹಾಗೂ ಉತ್ತಮವಾಗಿ ಜೀವನ ನಿರ್ವಹಿಸಲು ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು. ಈ ಸೌಲಭ್ಯಗಳು ಹಾಗೂ ಸ್ಥಳಾಂತರಕ್ಕಿಂತ ಮೊದಲಿನ ವಸತಿ ವ್ಯವಸ್ಥೆ, ಮೂಲಭೂತ ಸೌಕರ್ಯಗಳಲ್ಲಿ ಯಾವುದು ಉತ್ತಮವಾಗಿತ್ತು ಎಂಬುದನ್ನು ಕಂಡುಕೊಳ್ಳಲು ಸಂದರ್ಶನದ ಸಂದರ್ಭದಲ್ಲಿ ಪ್ರಯತ್ನವನ್ನು ಮಾಡಲಾಗಿರುತ್ತದೆ. ಪುನರ್‌ವಸತಿ ಪ್ರದೇಶದಲ್ಲಿ ದೊರಕಿದ ಭೂಮಿ ಉತ್ತಮವಾಗಿತ್ತು ಎಂದು ಮೂವತ್ತು (12%) ಮಾಹಿತಿದಾರರು ಅಭಿಪ್ರಾಯ ವ್ಯಕ್ತಪಡಿಸಿದರೆ, ಸಾಧಾರಣವಾಗಿತ್ತು ಎಂಬ ಮಾತನ್ನು ನೂರಎಂಬತ್ತನಾಲ್ಕು (74%) ಸಂತ್ರಸ್ತರು

ವ್ಯಕ್ತಪಡಿಸುವುದರೊಂದಿಗೆ ತಮ್ಮ ಅಸಮಾಧಾನವನ್ನು ತಿಳಿಸಿರುತ್ತಾರೆ. ಸಂದರ್ಶಿತ ಮೂವತ್ತಾರು (14%) ಕುಟುಂಬಗಳ ಯಜಮಾನರುಗಳು ದೊರಕಿದ ಭೂಮಿ ಹಾಗೂ ಪೂರಕ ವ್ಯವಸ್ಥೆಗಳು ಕಳಪೆ ಮಟ್ಟದಲ್ಲಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಪುನರ್‌ವಸತಿ ಪ್ರದೇಶಗಳಲ್ಲಿ ರಸ್ತೆ, ವಿದ್ಯುತ್, ಬೀದಿ ದೀಪ, ಒಳಚರಂಡಿ, ಬ್ಯಾಂಕ್, ಅಂಚೆ ಕಚೇರಿ, ಆರೋಗ್ಯ ಕೇಂದ್ರಗಳು ನಿರ್ಮಾಣಗೊಂಡಿದ್ದರೂ ಅವುಗಳನ್ನು ಸಮರ್ಪಕವಾಗಿ ಕಾಯ್ದುಕೊಳ್ಳುವುದರಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂಬ ದೂರನ್ನು ಮಾಹಿತಿದಾರರು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ–4.5: ಪರಿಹಾರದ ರೂಪದಲ್ಲಿ ದೊರಕಿದ ಭೂಮಿಯ ಬಳಕೆ

ಕ್ರಸಂ	ಭೂಮಿಯ ಬಳಕೆ	ಸಂಖ್ಯೆ	ಶೇಕಡಾ
1	ಮನೆ ನಿರ್ಮಾಣ	226	90
2	ಮಕ್ಕಳಿಗೆ ಹಂಚಿಕೆ	22	9
3	ಏನೂ ಮಾಡಿಲ್ಲ	2	1
4	ವಿಕ್ರಯ / ಮಾರಾಟ	0	0
ಒಟ್ಟು		**250**	**100**

ಪರಿಹಾರದ ರೂಪದಲ್ಲಿ ಪುನರ್‌ವಸತಿ ಕಾಲನಿಗಳಲ್ಲಿ ದೊರಕಿದ ಭೂಮಿಯನ್ನು ಸಂತ್ರಸ್ತರು ಯಾವ ರೀತಿಯಲ್ಲಿ ಬಳಕೆ ಮಾಡಿದ್ದಾರೆ ಎಂಬ ಅಂಶವನ್ನು ಕೋಷ್ಟಕ 4.5 ವಿವರಿಸುತ್ತದೆ. ಭೂಮಿಯನ್ನು ಕಳೆದುಕೊಂಡ ಯೋಜನೆಯ ಸಂತ್ರಸ್ತರಲ್ಲಿ ಹೆಚ್ಚಿನ ಸಂಖ್ಯೆಯ ಇನ್ನೂರಇಪ್ಪತ್ತಾರು (90%) ಮಾಹಿತಿದಾರರು ಪುನರ್‌ವಸತಿ ಕಾಲನಿಯಲ್ಲಿ ಆಧುನಿಕ ರೀತಿಯ ಎಲ್ಲಾ ಸೌಕರ್ಯಗಳನ್ನೊಳಗೊಂಡ ಮನೆಗಳನ್ನು ನಿರ್ಮಿಸಿದ್ದು, ಇಪ್ಪತ್ತೆರಡು (9%) ಮಾಹಿತಿದಾರರು ಭೂಮಿಯನ್ನು ತಮ್ಮ ಮಕ್ಕಳಿಗೆ ಹಂಚಿಕೆ ಮಾಡಿದ್ದೇವೆ ಎಂದು ತಿಳಿಸಿದ್ದು, ಸಂದರ್ಶಿತ ಇಬ್ಬರು(1%) ಭೂಮಿಯನ್ನು ಹಾಗೆಯೇ ಬಿಟ್ಟಿರುವುದಾಗಿ ತಿಳಿಸಿರುತ್ತಾರೆ. ಪುನರ್‌ವಸತಿ ಪ್ರದೇಶದಲ್ಲಿ ಸಂಚರಿಸಿದಾಗ ಹೆಚ್ಚಿನ ಸಂತ್ರಸ್ತರು ಮನೆಗಳನ್ನು ನಿರ್ಮಿಸಿ ವಾಸಿಸುತ್ತಿರುವುದು ಕಂಡು ಬಂದಿರುತ್ತದೆ.

ಕೋಷ್ಟಕ–4.6: ಪರಿಹಾರದ ನಗದು ಮೊತ್ತವನ್ನು ಖರ್ಚು ಮಾಡಿದ ರೀತಿ

ಕ್ರಸಂ.	ಹಣ ಹೇಗೆ ಖರ್ಚಾಗಿರುತ್ತದೆ?	ಸಂಖ್ಯೆ	ಶೇಕಡಾ
1	ಮನೆ ನಿರ್ಮಾಣ	149	59.6
2	ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ	62	24.8
3	ಬೇರೆ ಭೂಮಿ ಖರೀದಿಗೆ	2	0.8
4	ಕುಟುಂಬ ಸದಸ್ಯರಲ್ಲಿ ಹಂಚಿಕೆ	5	2
5	ಮನೆ ನಿರ್ಮಾಣ+ಮಕ್ಕಳ ಉನ್ನತ ವ್ಯಾಸಂಗಕ್ಕೆ+ಕುಟುಂಬ ಸದಸ್ಯರಲ್ಲಿ ಹಂಚಿಕೆ+ಮಕ್ಕಳ ಮದುವೆಗೆ+ಸಾಲವನ್ನು ತೀರಿಸಿರುವುದು	32	12.8
ಒಟ್ಟು		**250**	**100**

4.6ರ ಕೋಷ್ಟಕವು ಯೋಜನೆಯ ಸಂತ್ರಸ್ತರು ನಗದು ರೂಪದಲ್ಲಿ ದೊರಕಿದ ಪರಿಹಾರದ ಮೊತ್ತವನ್ನು ಯಾವ ರೀತಿಯಲ್ಲಿ ವಿನಿಯೋಗಿಸಿದ್ದಾರೆ ಎಂಬುದನ್ನು ತಿಳಿಸುತ್ತದೆ. ನೂರನಲವತ್ತೊಂಬತ್ತು ಸಂತ್ರಸ್ತರು (59.6%) ಪರಿಹಾರದ ಹಣವನ್ನು ಪುನರ್‌ವಸತಿ ಪ್ರದೇಶದಲ್ಲಿ ಮನೆಗಳ ನಿರ್ಮಾಣಕ್ಕಾಗಿ ವೆಚ್ಚ ಮಾಡಿದರೆ, ಅರವತ್ತೆರಡು ಮಾಹಿತಿದಾರರು (24.8%) ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಖರ್ಚು ಮಾಡಲಾಯಿತು ಎಂದು ಉತ್ತರಿಸಿರುತ್ತಾರೆ. ಬೇರೆ ಪ್ರದೇಶದಲ್ಲಿ ಭೂಮಿಯನ್ನು ಖರೀದಿಸುವುದಕ್ಕೆ ಉಪಯೋಗಿಸಿದ್ದೇವೆ ಎಂದು ಇಬ್ಬರು (0.8%) ಹಾಗೂ ಕುಟುಂಬ ಸದಸ್ಯರಲ್ಲಿ ಹಂಚಿಕೆ ಮಾಡಿರುವುದಾಗಿ ಐದು (2%), ಮಕ್ಕಳ ಮದುವೆಗೆ ಹಾಗೂ ಹಿಂದೆ ಮಾಡಿದಂತಹ ಸಾಲವನ್ನು ತೀರಿಸುವುದಕ್ಕಾಗಿ ವ್ಯಯಿಸಲಾಗಿದೆಯೆಂದು ಮೂವತ್ತೆರಡು (12.8%) ಮಾಹಿತಿದಾರರು ತಿಳಿಸಿರುತ್ತಾರೆ. ಆಂಧ್ರಪ್ರದೇಶದ ರಾಮಗೊಂಡಮ್ ಮತ್ತು ಸಿಂಹಾದ್ರಿಯಲ್ಲಿ ಸ್ಥಾಪಿಸಲ್ಪಟ್ಟ ಎನ್.ಟಿ.ಪಿ.ಸಿ ಯೋಜನೆಯ ಭೂಸಂತ್ರಸ್ತರ ಬಗ್ಗೆ ಅಧ್ಯಯನವನ್ನು ನಡೆಸಿದ ಸತ್ಯನಾರಾಯಣ ಜಿ.[11] ಮತ್ತು ಡಾ. ಆರ್. ಜಾನಕಿರಾಮ್[12]ರವರು ಹೆಚ್ಚಿನ ಸಂಖ್ಯೆಯ ಸಂತ್ರಸ್ತರು ನಗದು ರೂಪದಲ್ಲಿ ದೊರಕಿದ ಪರಿಹಾರವನ್ನು ಅನುತ್ಪಾದಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬ ಫಲಿತವನ್ನು ಕಂಡುಕೊಂಡಿದ್ದು,[13] ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಲ್ಲಿ ಭೂಮಿಯನ್ನು ಕಳೆದುಕೊಂಡು ನಿರ್ವಸಿತರಾದ ಸಂತ್ರಸ್ತರು ಪರಿಹಾರದ ಮೊತ್ತವನ್ನು ಅನುತ್ಪಾದಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವುದು, ವಿಶೇಷವಾಗಿ ಮನೆಗಳ ನಿರ್ಮಾಣ, ಕುಟುಂಬ ಸದಸ್ಯರಲ್ಲಿ ಹಂಚಿಕೆ, ಕುಟುಂಬದ ಸದಸ್ಯರ ಮದುವೆ ಮುಂತಾದ ಕಾರಣಗಳಿಗೆ ಧಾರಾಳವಾಗಿ ಖರ್ಚು ಮಾಡಿರುವುದು ಕಂಡುಕೊಳ್ಳಲಾಗಿದೆ.

ಸ್ಥಳಾಂತರದ ಸಂದರ್ಭದಲ್ಲಿ ಸಂತ್ರಸ್ತರಾದವರಿಗೆ ಪರ್ಯಾಯವಾಗಿ ಬೇರೆ ಪ್ರದೇಶದಲ್ಲಿ ಭೂಮಿಯನ್ನು ನೀಡುವುದು, ಭೂಮಿ ಕಳೆದುಕೊಂಡವರಿಗೆ ಉದ್ಯೋಗವನ್ನು ಒದಗಿಸುವುದು ಪರಿಹಾರದ ಪ್ಯಾಕೇಜ್‌ಗಳನ್ನು ನೀಡುವ ಸಂದರ್ಭದಲ್ಲಿ ಇಲ್ಲಿಯವರೆಗೆ ಪಾಲಿಸಿಕೊಂಡು ಬಂದಿರುವ ಜನಪ್ರಿಯ ವಿಧಾನವಾಗಿತ್ತು. ಫಲವತ್ತಾದ ಪರ್ಯಾಯ ಕೃಷಿ ಭೂಮಿಯ ಅಲಭ್ಯತೆ, ಸಂತ್ರಸ್ತರಾದ ಎಲ್ಲಾ ಕುಟುಂಬದ ಒಬ್ಬ ಸದಸ್ಯರಿಗೆ ಆರಂಭಗೊಳ್ಳುವ ಉದ್ದಿಮೆಗಳಲ್ಲಿ ಖಾಯಂ ಉದ್ಯೋಗ ನೀಡಲು ಅವಕಾಶಗಳು ಇಲ್ಲದೇ ಇರುವುದು ಈ ರೀತಿಯ ಪರಿಹಾರದ ಪ್ಯಾಕೇಜ್‌ಗಳನ್ನು ನೀಡುವುದನ್ನು ಕಷ್ಟಕರವನ್ನಾಗಿಸಿದೆ. ಇದರ ಪರಿಣಾಮವಾಗಿ ಹೆಚ್ಚಿನ ಸಂದರ್ಭಗಳಲ್ಲಿ ಸ್ಥಳಾಂತರಗೊಂಡ ಸಂತ್ರಸ್ತರುಗಳಿಗೆ ಪರಿಹಾರವಾಗಿ ನಗದು ಹಣವನ್ನು ಮಾತ್ರ ನೀಡಲಾಗುತ್ತದೆ.[14] ಯೋಜನೆಗಳ ಬಲಿಪಶುಗಳಾದ ಸಂತ್ರಸ್ತರುಗಳು ಪಡೆಯುವ ನಿಕೃಷ್ಟ ನಗದು ಪರಿಹಾರದ ಮೊತ್ತಕ್ಕೂ, ಅವರುಗಳ ಬದುಕು ಮತ್ತಷ್ಟು ಆರ್ಥಿಕವಾಗಿ ಕುಸಿಯುವುದಕ್ಕೂ ನೇರ ಸಂಬಂಧಗಳಿವೆಯೆಂದು ಭಾರತದಲ್ಲಿ 1990ರ ದಶಕದ ನಂತರ ಸ್ಥಳಾಂತರದ ಬಗ್ಗೆ ಆಳವಾಗಿ ಅಧ್ಯಯನಗಳನ್ನು ಕೈಗೊಂಡಿದ್ದಂತಹ ಸಾಮಾಜಿಕ ವಿಜ್ಞಾನಿಗಳು ಅಭಿಪ್ರಾಯಪಟ್ಟಿರುತ್ತಾರೆ. ಪರಿಹಾರವಾಗಿ ದೊರೆತ ಹಣವನ್ನು ಯಾವ ರೀತಿಯಲ್ಲಿ ಖರ್ಚು ಮಾಡಬೇಕೆಂದು

ಗೊಂದಲಕ್ಕೊಳಗಾಗಿ ಸಾಮಾನ್ಯವಾಗಿ ಅನುತ್ಪಾದಕ ವಿಷಯಗಳಿಗೆ ಅವುಗಳನ್ನು ವ್ಯಯಿಸುತ್ತಾರೆ.[15] ಅನಿರೀಕ್ಷಿತವಾಗಿ ದೊರಕಿದ ನಿರೀಕ್ಷೆಗೂ ಮೀರಿದ ಹಣವನ್ನು ಕಾಂಕ್ರೀಟಿನ ಮನೆಗಳನ್ನು ನಿರ್ಮಿಸಲು, ಬೆಳ್ಳಿ ಬಂಗಾರದ ಆಭರಣಗಳನ್ನು ಖರೀದಿಸಲು, ವಾಹನದ ಖರೀದಿಗೆ, ಮನೆಯಲ್ಲಿನ ಆಧುನಿಕ ಪೀಠೋಪಕರಣ, ವಿದ್ಯುನ್ಮಾನ ವಸ್ತುಗಳು ಮತ್ತು ಸಾಮಾಜಿಕ ಬಾಧ್ಯತೆಗಳನ್ನು ಪೂರೈಸುವುದಕ್ಕಾಗಿ ಖರ್ಚು ಮಾಡುತ್ತಾರೆ. ಸಂತ್ರಸ್ತರುಗಳಿಗೆ ಯಾವ ರೀತಿಯಲ್ಲಿ ಹಣವನ್ನು ಖರ್ಚು ಮಾಡಬೇಕೆಂಬ ಅನುಭವ, ಜ್ಞಾನ ಇಲ್ಲದೆ ಇರುವುದು ಮತ್ತು ಮುಂದಿನ ಬದುಕಿನ ಬಗ್ಗೆ ಗಂಭೀರವಾಗಿ ಆಲೋಚಿಸದೆ ಮುಗ್ಧ ಮನಸ್ಸಿನಿಂದಾಗಿ ದುಬಾರಿ ಮೊತ್ತದ ವಸ್ತುಗಳನ್ನು ಖರೀದಿಸುವುದಕ್ಕಾಗಿ ಖರ್ಚು ಮಾಡಿ ತಮ್ಮ ಕಿಸೆಯನ್ನು ಖಾಲಿ ಮಾಡಿಕೊಳ್ಳುತ್ತಾರೆ[16] ಎಂಬುದಾಗಿ ಅಭಿವೃದ್ಧಿ ಯೋಜನೆಗಳಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಬಗ್ಗೆ ನಡೆದಂತಹ ಹೆಚ್ಚಿನ ಅಧ್ಯಯನಗಳು ತಮ್ಮ ಫಲಿತಗಳನ್ನು ಕಂಡುಕೊಂಡಿರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿಯೂ ಹೆಚ್ಚು ಕಡಿಮೆ ಇಂತಹದೆ ಪರಿಸ್ಥಿತಿ ನಿರ್ಮಾಣ ಆಗಿರುವುದನ್ನು ಕಂಡುಕೊಳ್ಳಲಾಗಿದೆ. ಅಭಿವೃದ್ಧಿ ಪ್ರಕ್ರಿಯೆಗಳಿಗಾಗಿ ಸಂತ್ರಸ್ತರುಗಳು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದು, ಭೂಮಿಗೆ ಬದಲಾಗಿ ಪುನರ್‌ವಸತಿ ಕಾಲನಿಗಳಲ್ಲಿ ದೊರಕಿದ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಪರಿಹಾರವಾಗಿ ದೊರಕಿದ ನಗದು ಹಣವನ್ನು ಖರ್ಚು ಮಾಡಿರುತ್ತೇವೆಂದು 60% ಮಾಹಿತಿದಾರರು ತಿಳಿಸಿದ್ದು, 13% ಸಂತ್ರಸ್ತರು ದೊರಕಿದ ಹಣದಿಂದ ಅವಲಂಬಿತ ಮಕ್ಕಳ ಮದುವೆ, ಉನ್ನತ ವ್ಯಾಸಂಗಕ್ಕಾಗಿ ವ್ಯಯಿಸಿದ್ದು ಕಂಡು ಬಂದಿದ್ದು, ಸಂದರ್ಶಿತರಲ್ಲಿ 2% ಮಾತ್ರ ಹೊಸ ಭೂಮಿಯನ್ನು ಖರೀದಿಸಲು ಪರಿಹಾರದ ಹಣವನ್ನು ಉಪಯೋಗಿಸಲಾಯಿತು ಎಂದು ತಿಳಿಸಿರುತ್ತಾರೆ. ಸ್ಥಳಾಂತರಕ್ಕಿಂತ ಮೊದಲು ಹಾಗೂ ನಂತರ ಸಂತ್ರಸ್ತರುಗಳು ಹೊಂದಿದ್ದ ಸೌಲಭ್ಯಗಳ ಬಗ್ಗೆ ತುಲನಾತ್ಮಕವಾಗಿ ಅಧ್ಯಯನ ಮಾಡಿದಾಗ ಸಂತ್ರಸ್ತರು ಪರಿಹಾರದ ಹಣವನ್ನು ಆಧುನಿಕ ಸೌಲಭ್ಯಗಳು, ವಿದ್ಯುನ್ಮಾನ ವಸ್ತುಗಳ ಖರೀದಿಗೆ ಹಾಗೂ ಐಷಾರಾಮದ ಜೀವನವನ್ನು ನಡೆಸಲು ಖರ್ಚು ಮಾಡಿರುವುದು ಎದ್ದು ಕಾಣುತ್ತದೆ. ತಮ್ಮ ಉದ್ಯೋಗವನ್ನು ಕಳೆದುಕೊಂಡು ಪುನರ್‌ವಸತಿಯ ನಂತರ ಕುಟುಂಬದ ಪೋಷಣೆಗೆ ಹಣವನ್ನು ಮೀಸಲಿರಿಸದೇ ವ್ಯಯ ಮಾಡಿರುವುದು ಸಂತ್ರಸ್ತರನ್ನು ಮತ್ತಷ್ಟು ಬಲಹೀನರನ್ನಾಗಿ ಮಾಡಿದೆ. ಪುನರ್‌ವಸತಿ ಕಾಲನಿಗಳಲ್ಲಿ ಸಂಚರಿಸಿದಾಗ ಆಧುನಿಕ ಸೌಲಭ್ಯಗಳನ್ನು ಹೊಂದಿದ ಮನೆಗಳಲ್ಲಿ, ಮಹಿಳೆಯರು ಮತ್ತು ಪುರುಷರು ತಮ್ಮ ದೈನಂದಿನ ಖರ್ಚುವೆಚ್ಚಗಳನ್ನು ತೂಗಿಸಲು ಬೀಡಿ ಕಟ್ಟುವ ಉದ್ಯೋಗದಲ್ಲಿ ತೊಡಗಿರುವುದು, ಮನೆಗಳ ನಿರ್ಮಾಣಕ್ಕೆ ಹಣವನ್ನು ಖರ್ಚು ಮಾಡಿ ದೈನಂದಿನ ಖರ್ಚು ವೆಚ್ಚಗಳಿಗೆ ಬ್ಯಾಂಕೇತರ ಸಂಸ್ಥೆಗಳಲ್ಲಿ ಹೆಚ್ಚಿನ ಬಡ್ಡಿಯನ್ನು ನೀಡಿ ಸಾಲ ಮಾಡಿ ಬದುಕುವ ಪರಿಸ್ಥಿತಿ ತಂದುಕೊಂಡಿರುವುದನ್ನು ಗಮನಿಸಿದಾಗ ಸ್ಥಳಾಂತರ ಬಡ ಮತ್ತು ಮಧ್ಯಮ ವರ್ಗಗಳ ಕುಟುಂಬದ ಜೀವನದ ಹಳಿಗಳನ್ನು ಯಾವ ರೀತಿಯಲ್ಲಿ ತಪ್ಪಿಸಿದೆಯೆಂದು ಕಂಡುಬರುತ್ತದೆ.

ಕೋಷ್ಟಕ–4.7: ಭೂಸ್ವಾಧೀನಕ್ಕಾಗಿ ನೀಡಲ್ಪಟ್ಟ ಪರಿಹಾರ ನಿರೀಕ್ಷಿತ ಮಟ್ಟದಲ್ಲಿತ್ತೇ?

ಕ್ರ.ಸಂ.	ಪರಿಹಾರದ ಮಟ್ಟ	ಸಂಖ್ಯೆ	ಶೇಕಡಾ
1	ನಿರೀಕ್ಷಿತ ಮಟ್ಟದಲ್ಲಿತ್ತು	49	19.6
2	ಕಡಿಮೆ ಪ್ರಮಾಣದಲ್ಲಿತ್ತು	185	74
3	ಪ್ರಚಲಿತ ಮಾರುಕಟ್ಟೆ ದರಕ್ಕೆ ಸಮವಾಗಿತ್ತು	2	0.8
4	ಕೈಗಾರಿಕೆಗಳಿಗೆ ಭೂಸ್ವಾಧೀನವಾದಾಗ ಬೇರೆ ರೀತಿಯ ಪರಿಹಾರದ ಅವಶ್ಯಕತೆ ಇದೆ	14	5.6
ಒಟ್ಟು		**250**	**100**

ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರುಗಳಿಗೆ ಅವರು ಹೊಂದಿರುವ ಭೂಮಿ ಮತ್ತು ಕುಟುಂಬದಲ್ಲಿ ಇರುವ ಒಟ್ಟು ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಪುನರ್‌ವಸತಿ ಕಾಲನಿಗಳಲ್ಲಿ ಮನೆಗಳನ್ನು ನಿರ್ಮಿಸಲು ನಿವೇಶನ, ನಗದು ಹಣವನ್ನು ನೀಡುವ ಆಕರ್ಷಕ ಪುನರ್‌ವಸತಿ ನೀತಿಯನ್ನು ಕರ್ನಾಟಕ ಸರಕಾರ ವಿವರಿಸಿತ್ತು. 4.7ರ ಕೋಷ್ಟಕವು ಮಾಹಿತಿದಾರರಿಗೆ ನೀಡಲ್ಪಟ್ಟ ಪರಿಹಾರದ ಬಗೆಗಿನ ಸಂತೃಪ್ತಿಯ ಮಟ್ಟವನ್ನು ವಿವರಿಸುತ್ತದೆ. ಬಹುಸಂಖ್ಯೆಯ ನೂರಎಂಬತ್ತೈದು (74%) ಸಂತ್ರಸ್ತರು ಪರಿಹಾರವಾಗಿ ದೊರಕಿದ ಪ್ಯಾಕೇಜ್ ನಿರೀಕ್ಷಿತ ಮಟ್ಟದಲ್ಲಿ ಇರದೇ ತಮ್ಮನ್ನು ವಂಚಿಸಲಾಗಿದೆ ಎಂಬ ಸಿಟ್ಟನ್ನು ವ್ಯಕ್ತಪಡಿಸಿದರೆ, ಪರಿಹಾರ ನಿರೀಕ್ಷಿತ ಪ್ರಮಾಣದಲ್ಲಿತ್ತು ಎಂಬ ಅಭಿಪ್ರಾಯವನ್ನು ನಲವತ್ತೊಂಬತ್ತು (19.6%) ಮಾಹಿತಿದಾರರು ವ್ಯಕ್ತಪಡಿಸಿ ದೊರಕಿದ ಪರಿಹಾರ ತೃಪ್ತಿಯನ್ನು ತಂದಿರುತ್ತದೆ ಎಂದಿದ್ದಾರೆ. ಕೈಗಾರಿಕೆಗಳು ರಾಷ್ಟ್ರದ ಅಭಿವೃದ್ಧಿಗೆ ಅನನ್ಯ ಕೊಡುಗೆಯನ್ನು ನೀಡುತ್ತದೆ. ಆದುದರಿಂದ ಅವುಗಳ ಸ್ಥಾಪನೆಗೋಸ್ಕರ ತಮ್ಮ ಭೂಮಿಯನ್ನು ತ್ಯಾಗ ಮಾಡಿ ಬಿಟ್ಟುಕೊಟ್ಟಂತಹ ಸಂತ್ರಸ್ತರಿಗೆ ಪರಿಹಾರವನ್ನು ನೀಡುವಾಗ ಬೇರೆಯೇ ರೀತಿಯ ಅತ್ಯುತ್ತಮ ಪರಿಹಾರದ ಪ್ಯಾಕೇಜ್‌ಗಳನ್ನು ನೀಡಬೇಕು ಎಂಬ ಅಭಿಪ್ರಾಯವನ್ನು ಸಂದರ್ಶಿತ ಹದಿನಾಲ್ಕು(5.6%) ಸಂತ್ರಸ್ತರು ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಇಬ್ಬರು(0.8%) ಮಾಹಿತಿದಾರರು ಪರಿಹಾರ ಪ್ರಚಲಿತ ಮಾರುಕಟ್ಟೆ ದರಗಳಿಗೆ ಅನುಗುಣವಾಗಿ ನೀಡಲ್ಪಟ್ಟಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಾಲ ಮತ್ತು ಸಂತ್ರಸ್ತರು

ಕೃಷಿ ಭೂಮಿ ಮತ್ತು ಅದಕ್ಕೆ ಪೂರಕವಾದ ಉದ್ಯೋಗಗಳ ನಷ್ಟ ಆರ್ಥಿಕ, ಸಾಮಾಜಿಕ ಸಾಂಪ್ರದಾಯಿಕ ಮೂಲಗಳ ಬೆಂಬಲ ಕಳೆದುಕೊಳ್ಳುವಿಕೆ ಗ್ರಾಮಸ್ಥರನ್ನು ಬದುಕಿನ ವಾಸ್ತವಿಕತೆಗಳಿಗೆ ತೆರೆದಿಡುತ್ತದೆ. ಸ್ಥಳಾಂತರಕ್ಕಿಂತ ಮೊದಲು ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಹೊಂದಾಣಿಕೆ ಮತ್ತು ಸೌಹಾರ್ದಯುತ ವಾತಾವರಣ ಅವರುಗಳು ಯಾವುದೇ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವಂತೆ ಮಾಡಿತ್ತು. ಅವಶ್ಯಕತೆ ಮತ್ತು ಬಿಕ್ಕಟ್ಟಿನ ಸಂದರ್ಭದಲ್ಲಿ ತೊಂದರೆಗೀಡಾದವರಿಗೆ ಹಳ್ಳಿಯಲ್ಲಿನ ಪರಸ್ಪರ ಸಹಾಯಕ್ಕೆ ಬರುವ ಸಾಮಾಜಿಕ ವ್ಯವಸ್ಥೆ ಹಿಂದಿನಿಂದಲೂ

ಅನೌಪಚಾರಿಕವಾಗಿ ಅಸ್ತಿತ್ವದಲ್ಲಿತ್ತು. ಬಲವಂತದ ಸ್ಥಳಾಂತರ ಅಸ್ತಿತ್ವದಲ್ಲಿದ್ದ ಎಲ್ಲಾ ಸಾಮಾಜಿಕ ಕೊಂಡಿಗಳನ್ನು ಕಿತ್ತೆಸೆದು ಅಪರಿಚಿತವಾದ ಹೊಸ ಪ್ರದೇಶದಲ್ಲಿ ಒಬ್ಬಂಟಿಗರಾಗಿ ಪರಿಚಿತರಲ್ಲದ ಇತರ ಸಂತ್ರಸ್ತರೊಂದಿಗೆ ಬದುಕುವ ಅನಿವಾರ್ಯತೆಯನ್ನು ಸೃಷ್ಟಿಸಿತು. ಇಂತಹ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಸ್ಥಳಾಂತರದ ಬಲಿಪಶುಗಳಾಗಿ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆ. ಸಂತ್ರಸ್ತ ಜನರು ಎದುರಿಸುತ್ತಿರುವ ಸಂದಿಗ್ಧ ಮತ್ತು ಗೊಂದಲದ ಪರಿಸ್ಥಿತಿಯಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸುವ ಪ್ರಯತ್ನದಲ್ಲಿ ತಾವು ಒಬ್ಬಂಟಿಗರು ಎಂಬ ಅಸಹಾಯಕತೆಯನ್ನು ಪ್ರದರ್ಶಿಸುತ್ತಾರೆ. ಇದರ ಪರಿಣಾಮವಾಗಿ ತಮ್ಮ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಹೊರಗಿನ ವ್ಯಕ್ತಿಗಳು ಅಥವಾ ಸಂಸ್ಥೆಗಳಿಂದ ಸಾಲವನ್ನು ಪಡೆದು ಹೊರಬರಲಾಗದಂತಹ ವಿಷವರ್ತುಲದೊಳಗೆ ಸಿಲುಕಿಕೊಳ್ಳುತ್ತಾರೆ.

ಕೋಷ್ಟಕ–4.8.1: ನಿಮಗೆ ಸಾಲವೇನಾದರೂ ಇತ್ತೇ?

ಕ್ರಸಂ.	ಸಾಲದ ಮಾಹಿತಿ	ಸಂಖ್ಯೆ	ಶೇಕಡಾ
1	ಹೌದು	95	38
2	ಇಲ್ಲ	155	62
	ಒಟ್ಟು	**250**	**100**
ಹೌದಾದರೆ, ಎಲ್ಲಿಂದ ಮತ್ತು ಯಾವಾಗಲಿಂದ		ಮೊದಲು	ನಂತರ
1	ಬ್ಯಾಂಕ್	0	11
2	ಸಹಕಾರಿ ಬ್ಯಾಂಕ್	12	24
3	ಕೈಗಡ	7	41
	ಒಟ್ಟು	**19**	**76**

ಭೂಸ್ವಾಧೀನ ಪ್ರಕ್ರಿಯೆಯಿಂದಾಗಿ ಕೃಷಿ ಭೂಮಿ ಹಾಗೂ ಉದ್ಯೋಗ ನಷ್ಟವಾಗಿರುವುದು, ಹಳ್ಳಿಗಳಲ್ಲಿ ದೊರಕುತ್ತಿದ್ದ ಸಾಂಪ್ರದಾಯಿಕ, ಸಾಮಾಜಿಕ ಮತ್ತು ಆರ್ಥಿಕ ಬೆಂಬಲದ ನಾಶವಾಗುವಿಕೆಯು ಸಂತ್ರಸ್ತರನ್ನು ಜೀವನದ ನೈಜ ಸಮಸ್ಯೆಗಳಿಗೆ ತೆರೆದಿಡುತ್ತದೆ. ಸಮಸ್ಯೆಗಳು ಬಂದಾಗ ಹಣಕಾಸಿನ ಸಹಾಯಕ್ಕಾಗಿ ಬೇರೆಯವರನ್ನು ಅವಲಂಬಿಸುವುದು ಅನಿವಾರ್ಯ ಆಗುತ್ತದೆ. ಹಣಕಾಸಿನ ಅಗತ್ಯತೆಗಾಗಿ ಗ್ರಾಮಾಂತರ ಪ್ರದೇಶದಲ್ಲಿನ ಜನರು ಸಾಲ ನೀಡುವಂತಹ ಹೊರಗಿನ ಅನಧಿಕೃತ ಸಂಸ್ಥೆಗಳ ಸಹಾಯ ಪಡೆಯುವ ಪರಿಸ್ಥಿತಿಗೆ ಒಳಗಾಗಿ ಸಾಲದ ವಿಷವರ್ತುಲದ ಬಲೆಗೆ ಸಿಲುಕಿ ಹಾಕಿಕೊಳ್ಳುತ್ತಾರೆ. 4.8.1ರ ಕೋಷ್ಟಕಕ್ಕೆ ಅನುಗುಣವಾಗಿ ಸಮೀಕ್ಷೆಗೆ ಒಳಪಡಿಸಲಾದ ನೂರಐವತ್ತೈದು (62%) ಕುಟುಂಬಗಳು ಯಾವುದೇ ರೀತಿಯ ಸಾಲವನ್ನು ಪಡೆಯದೆ ತಮ್ಮ ಅಗತ್ಯಗಳನ್ನು ಕುಟುಂಬ ಹೊಂದಿರುವ ಸಂಪನ್ಮೂಲಗಳ ಮೂಲಕವೇ ನಿರ್ವಹಿಸುತ್ತಿರುವುದು ಕಂಡುಬಂದಿದ್ದು, ತೊಂಬತ್ತೈದು (38%) ಮಾಹಿತಿದಾರರು ವಿವಿಧ ಮೂಲಗಳಿಂದ ಸಾಲವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಸ್ಥಳಾಂತರಕ್ಕಿಂತ ಮೊದಲು ಸಂತ್ರಸ್ತರು ಬ್ಯಾಂಕ್‌ಗಳ ಮೂಲಕ ಸಾಲವನ್ನು ಪಡೆಯದೇ ಇದ್ದದ್ದು, ಸ್ಥಳಾಂತರದ ನಂತರ ಹನ್ನೊಂದು ಮಾಹಿತಿದಾರರು ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ, ಇಪ್ಪತ್ತನಾಲ್ಕು ಸಂತ್ರಸ್ತರು ಸಹಕಾರಿ

ಬ್ಯಾಂಕ್‌ಗಳ ಮೂಲಕ ಹಾಗೂ ನಲವತ್ತೊಂದು ಸಂದರ್ಶಿತರು ತಮ್ಮ ಅಗತ್ಯಗಳನ್ನು ಪೂರೈಸುವುದಕ್ಕೆ ಇತರ ವ್ಯಕ್ತಿಗಳಿಂದ ಕೈಗಡವಾಗಿ ಸಾಲವನ್ನು ಪಡೆದಿರುತ್ತೇವೆ ಎಂದು ತಿಳಿಸಿರುತ್ತಾರೆ. ಸ್ಥಳಾಂತರಕ್ಕಿಂತ ಮೊದಲು ಹನ್ನೆರಡು ಸಂತ್ರಸ್ತರು ಸಹಕಾರಿ ಬ್ಯಾಂಕ್‌ಗಳ ಮೂಲಕ ಸಾಲವನ್ನು ಪಡೆದಿದ್ದು ಸ್ಥಳಾಂತರದ ನಂತರ ಇದರ ಸಂಖ್ಯೆ ಇಪ್ಪತ್ತನಾಲ್ಕಕ್ಕೆ ಏರಿರುತ್ತದೆ. ಇತರ ವ್ಯಕ್ತಿಗಳ ಮೂಲಕ ಕೈಗಡವಾಗಿ ಸ್ಥಳಾಂತರಕ್ಕಿಂತ ಮೊದಲು ಏಳು ಮಾಹಿತಿದಾರರು ಸಾಲವನ್ನು ಪಡೆದಿದ್ದರೆ ಸ್ಥಳಾಂತರದ ನಂತರ ಇದರ ಸಂಖ್ಯೆಯಲ್ಲಿ ಗಣನೀಯವಾಗಿ ಏರಿಕೆ ಕಂಡು ಬಂದು ನಲವತ್ತೊಂದು ಸಂತ್ರಸ್ತರು ಕೈಗಡವಾಗಿ ಇತರರಿಂದ ಸಾಲವನ್ನು ಪಡೆದಿರುತ್ತಾರೆ. ಮೇಲಿನ ಅಂಕಿ ಅಂಶಗಳು ಸ್ಥಳಾಂತರಕ್ಕೆ ಬಲಿಪಶುಗಳಾಗಿ ಸಂತ್ರಸ್ತರು ತಮ್ಮ ಅಗತ್ಯದ ಅವಶ್ಯಕತೆಗಳನ್ನು ಪೂರೈಸಲು ಬ್ಯಾಂಕೇತರ ಸಂಸ್ಥೆಗಳಿಂದ ಅಧಿಕ ಬಡ್ಡಿಯನ್ನು ನೀಡಿ ಅವುಗಳಿಂದ ಹೊರಬರಲಾಗದಂತಹ ಅಸಹಾಯಕ ಪರಿಸ್ಥಿತಿ ಏರ್ಪಟ್ಟಿರುವುದನ್ನು ಸ್ಪಷ್ಟವಾಗಿ ತಿಳಿಸಿದೆ.

ಕೋಷ್ಟಕ–4.8.2: ಯಾವುದಕ್ಕಾಗಿ ಸಾಲ ಮಾಡಿದ್ದೀರಿ?

ಕ್ರ.ಸಂ.	ಯಾವುದಕ್ಕಾಗಿ ಸಾಲ	ಸಂಖ್ಯೆ	ಶೇಕಡಾ
1	ಮನೆ ನಿರ್ಮಾಣ +ಮನೆ ಖರ್ಚು	90	36
2	ಅಗತ್ಯ ಖರ್ಚು+ ವಾಹನ ಖರೀದಿ+ ಮಕ್ಕಳ ಶಿಕ್ಷಣ	5	2
ಒಟ್ಟು		**95**	**38**

4.8.2ರ ಕೋಷ್ಟಕದ ಪ್ರಕಾರ ನೂರಐವತ್ತೈದು (62%) ಸಂತ್ರಸ್ತರು ಯಾವುದೇ ರೀತಿಯಲ್ಲಿ ಸಾಲವನ್ನು ಪಡೆಯದೇ ತಮ್ಮ ಅವಶ್ಯಕತೆಗಳನ್ನು ಕುಟುಂಬದ ಸದಸ್ಯರಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಸರಿತೂಗಿಸಿರುವುದು ಕಂಡುಬರುತ್ತದೆ. ತೊಂಬತ್ತೈದು (38%) ಮಾಹಿತಿದಾರರು ವಿವಿಧ ಮೂಲಗಳಿಂದ ಹಣವನ್ನು ಸಾಲದ ರೂಪದಲ್ಲಿ ಪಡೆದಿರುವುದಾಗಿ ತಿಳಿಸಿರುತ್ತಾರೆ. ಸಾಲ ಮಾಡಿರುವುದಕ್ಕೆ ನಿರ್ದಿಷ್ಟ ಕಾರಣಗಳು ಯಾವುವು ಎಂಬುದಾಗಿ ಅವರಿಗೆ ಆಯ್ಕೆಯ ಉತ್ತರವನ್ನು ನೀಡಿದಾಗ ತೊಂಬತ್ತು (36%) ಸಂತ್ರಸ್ತರು ಮನೆಗಳ ನಿರ್ಮಾಣ ಹಾಗೂ ಮನೆಯ ಖರ್ಚುವೆಚ್ಚಗಳನ್ನು ಸರಿದೂಗಿಸಲು ಸಾಲ ಮಾಡಬೇಕಾಗಿ ಬಂತು ಎಂದು ತಿಳಿಸಿರುತ್ತಾರೆ. ಭೂಸ್ವಾಧೀನ ಪ್ರಕ್ರಿಯೆಯ ನಂತರ ತಮ್ಮ ವಸತಿಯನ್ನು ಕಳೆದುಕೊಂಡ ಕಾರಣದಿಂದಾಗಿ ಪುನರ್‌ವಸತಿ ಕಾಲನಿಗಳಲ್ಲಿ ಅಥವಾ ಹೊಸದಾಗಿ ಖರೀದಿಸಿದ ಸ್ಥಳದಲ್ಲಿ ಮನೆಗಳನ್ನು ನಿರ್ಮಿಸುವ ಅನಿವಾರ್ಯತೆ, ಪರಿಹಾರವಾಗಿ ದೊರಕಿದ ನಗದು ಮೊತ್ತದಿಂದ ಹೊಸ ಮನೆಗಳನ್ನು ಕಟ್ಟಲು ಸಾಧ್ಯವಾಗದೇ ಇರುವುದು, ಪರಿಹಾರದ ಹಣವನ್ನು ಇನ್ನಿತರ ಅಗತ್ಯದ ಕಾರ್ಯಗಳಿಗೆ ವ್ಯಯಿಸಿರುವುದರಿಂದ ಸಾಲ ಮಾಡುವ ಅಗತ್ಯತೆಗೆ ಸಿಲುಕಿರುವುದು ಕಂಡುಬಂದಿರುತ್ತದೆ. ಮಕ್ಕಳ ಉನ್ನತ ಶಿಕ್ಷಣಕ್ಕಾಗಿ, ವಾಹನಗಳನ್ನು ಖರೀದಿಸಲು, ಕುಟುಂಬದ ಅಗತ್ಯದ ಖರ್ಚುವೆಚ್ಚವನ್ನು ಸರಿದೂಗಿಸಲು ಸಾಲ ಮಾಡುವ ಪ್ರಮೇಯ ಸೃಷ್ಟಿಯಾಯಿತು ಎಂದು ಐದು (2%) ಕುಟುಂಬಗಳು ವಿವರಿಸಿರುತ್ತವೆ. ಭೂಸ್ವಾಧೀನದಿಂದ ದೊರಕಿದ ಪರಿಹಾರದ ಮೊತ್ತದಿಂದ

ಅಗತ್ಯದ ಕಾರಣಗಳಿಗೆ ಹಿಂದೆ ಪಡೆದ ಸಾಲವನ್ನು ಮರುಪಾವತಿಸಲಾಗಿದೆಯೆಂದು ಮೂವತ್ತೆರಡು (13%) ಮಾಹಿತಿದಾರರು ಉತ್ತರಿಸಿರುತ್ತಾರೆ.

ಪ್ರಸ್ತುತ ಯೋಜನೆಯ ಭೂಸಂತ್ರಸ್ತರು ತಮ್ಮ ಅವಶ್ಯಕತೆಗಳನ್ನು ಪೂರೈಸಲು ಸಾಲವನ್ನೇನಾದರೂ ಪಡೆದಿರುತ್ತಾರೆಯೇ? ಪಡೆದಿದ್ದರೆ ಯಾವ ಕಾರಣಗಳಿಗೋಸ್ಕರ ಅದನ್ನು ವಿನಿಯೋಗಿಸಿದ್ದಾರೆ. ಪರಿಹಾರವಾಗಿ ದೊರೆತ ಹಣವನ್ನು ಪಡೆದ ಸಾಲವನ್ನು ತೀರಿಸಲು ಖರ್ಚು ಮಾಡಲಾಗಿರುತ್ತದೆಯೇ ಎಂಬ ಅಂಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದೆ. ಸ್ಥಳಾಂತರದ ಪೂರ್ವದಲ್ಲಿ 19 ಸಂತ್ರಸ್ತರು ವಿವಿಧ ಕಾರಣಗಳಿಗೋಸ್ಕರ ಸಾಲವನ್ನು ಪಡೆದಿದ್ದರೆ ಸ್ಥಳಾಂತರದ ನಂತರದಲ್ಲಿ ಸಾಲವನ್ನು ಪಡೆದವರ ಸಂಖ್ಯೆ 76ಕ್ಕೆ ಏರಿಕೆಯಾಗಿರುವುದನ್ನು ಗಮನಿಸಲಾಗಿದೆ. ಇದರಿಂದಾಗಿ ಸ್ಥಳಾಂತರದ ನಂತರ ಸಂತ್ರಸ್ತರು ಎದುರಿಸಿದ ಸಮಸ್ಯೆಗಳು ಅವರನ್ನು ಸಾಲಗಾರರನ್ನಾಗಿ ಮಾಡಿರುತ್ತದೆಯೆಂದು ಸ್ಪಷ್ಟವಾಗಿ ಹೇಳಬಹುದು. ಸ್ಥಳಾಂತರದ ಪೂರ್ವದಲ್ಲಿ ಸ್ವಾವಲಂಬಿಗಳಾಗಿ, ಸರಳ ಜೀವನವನ್ನು ನಡೆಸುತ್ತಿದ್ದ ಮಾಹಿತಿದಾರರು ತಮ್ಮ ವರಮಾನದ ಮಿತಿಯೊಳಗೆ ಜೀವನವನ್ನು ನಡೆಸಿ ಯಾವುದೇ ಬಾಹ್ಯ ವ್ಯಕ್ತಿಗಳು, ಸಂಸ್ಥೆಗಳಿಂದ ಸಾಲವನ್ನು ಪಡೆಯದೆ ಇದ್ದದ್ದು ಕಂಡು ಬಂದಿರುತ್ತದೆ. ಜಾನಕಿರಾವ್‌ರವರು ಆಂಧ್ರಪ್ರದೇಶದ ವಿಶಾಖಪಟ್ಟಣಂ ಸಮೀಪದ ಪಾರವಾಡದಲ್ಲಿ ಸಿಂಹಾದ್ರಿ ಕಲ್ಲಿದ್ದಲು ವಿದ್ಯುತ್ ಸ್ಥಾವರದ ರಚನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ 3120 ಕುಟುಂಬಗಳಲ್ಲಿ 156 ಕುಟುಂಬಗಳಿಂದ ಪಡೆದ ಅಂಕಿ ಅಂಶಗಳನ್ನು ವಿಶ್ಲೇಷಿಸಿ ಸ್ಥಳಾಂತರದ ನಂತರದಲ್ಲಿ ಸಂತ್ರಸ್ತರುಗಳು ಕೌಟುಂಬಿಕ ಕಾರಣಗಳಿಗಾಗಿ ಪಡೆದುಕೊಳ್ಳುವ ಸಾಲದ ಪ್ರಮಾಣದಲ್ಲಿ ಹಾಗೂ ಸಾಲ ಪಡೆದುಕೊಳ್ಳುವವರ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿರುತ್ತದೆ[17] ಎಂಬ ಫಲಿತವನ್ನು ಪ್ರಸ್ತುತ ಅಧ್ಯಯನಕ್ಕೆ ಹೋಲಿಸಿದಾಗ ಸ್ಥಳಾಂತರದ ನಂತರ ಅಗತ್ಯದ ಕಾರಣಗಳಿಗೋಸ್ಕರ ಸಾಲವನ್ನು ಪಡೆದವರ ಸಂಖ್ಯೆಯಲ್ಲಿ ಇಳಿಕೆಯಾಗದೆ ಏರಿಕೆಯಾಗಿರುವುದು ಕಂಡುಬರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಸ್ಥಳಾಂತರವು ಸಂತ್ರಸ್ತರನ್ನು ಸಾಲಗಾರರನ್ನಾಗಿ ಮಾಡುವುದರಲ್ಲಿ ಪರಿಣಾಮ ಬೀರಿತು ಎಂದು ಸ್ಪಷ್ಟವಾಗಿ ಹೇಳಬಹುದು.

ಸ್ಥಳಾಂತರ ಮತ್ತು ಉದ್ಯೋಗ

ಕೋಷ್ಟಕ 4.9.1 ಭೂಸ್ವಾಧೀನದಿಂದ ಆರಂಭಿಸಲ್ಪಟ್ಟ ಕೈಗಾರಿಕೆಗಳಲ್ಲಿ ನಿಮ್ಮ ಕುಟುಂಬದ ಸದಸ್ಯರಿಗೆ ಉದ್ಯೋಗ ದೊರಕಿದೆಯೇ?

ಕ್ರ.ಸಂ.	ಉದ್ಯೋಗ ದೊರಕಿರುತ್ತದೆ	ಸಂಖ್ಯೆ	ಶೇಕಡಾ
1	ಹೌದು	48	19
2	ಇಲ್ಲ	202	81
	ಒಟ್ಟು	**250**	**100**
ಹೌದಾದರೆ ಎಷ್ಟು ಜನರಿಗೆ?			
1	ಒಬ್ಬರಿಗೆ	48	19
ಗಂಡು / ಹೆಣ್ಣು			
1	ಗಂಡು	41	16
2	ಹೆಣ್ಣು	7	3
ಒಟ್ಟು		**48**	**19**
ದೊರಕಿರುವ ಉದ್ಯೋಗದ ಸ್ವರೂಪ?			
ಕ್ರ.ಸಂ.	ಉದ್ಯೋಗದ ಸ್ವರೂಪ	ಸಂಖ್ಯೆ	ಶೇಕಡಾ
1	ಖಾಯಂ	39	16
2	ತಾತ್ಕಾಲಿಕ	7	3
3	ದಿನಗೂಲಿ	2	1
	ಒಟ್ಟು	**48**	**19**

ಸಂತ್ರಸ್ತ ಕುಟುಂಬಗಳ ಅರ್ಹ ವ್ಯಕ್ತಿಗಳಿಗೆ ಉದ್ಯೋಗವನ್ನು ನೀಡುವ ಭರವಸೆಯನ್ನು ಭೂಸ್ವಾಧೀನ ಪ್ರಾಧಿಕಾರ ನೀಡಿತ್ತು. ನಲವತ್ತೆಂಟು (19%) ಸಂತ್ರಸ್ತರ ಅವಲಂಬಿತರಿಗೆ ಆರಂಭಿಸಲ್ಪಟ್ಟ ಕೈಗಾರಿಕೆಗಳಲ್ಲಿ ಉದ್ಯೋಗಗಳು ದೊರಕಲ್ಪಟ್ಟಿದ್ದರೆ ಇನ್ನೂರಎರಡು ಮಾಹಿತಿದಾರರ ಕುಟುಂಬದ ಸದಸ್ಯರಿಗೆ ಉದ್ಯೋಗಗಳು ದೊರಕಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಕುಟುಂಬದ ಸದಸ್ಯರಿಗೆ ಉದ್ಯೋಗ ದೊರಕದಿದ್ದರೆ ಹೆಚ್ಚುವರಿ ನಗದು ಪರಿಹಾರವನ್ನು ಪಡೆಯುವ ಆಯ್ಕೆಯನ್ನು ಭೂಸ್ವಾಧೀನ ಪ್ರಾಧಿಕಾರ ಯೋಜನೆಯ ಸಂತ್ರಸ್ತರಿಗೆ ನೀಡಿತ್ತು. ಸಂದರ್ಶಿತ ನಲ್ವತ್ತೆಂಟು (19%) ಮಾಹಿತಿದಾರರ ಕುಟುಂಬದ ಒಬ್ಬ ಸದಸ್ಯರಿಗೆ ಆರಂಭಿಸಲ್ಪಟ್ಟ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶ ದೊರಕಿದ್ದು ಅದರಲ್ಲಿ ನಲ್ವತ್ತೊಂದು (16%) ಕುಟುಂಬದ ಗಂಡು ಮಕ್ಕಳಿಗೆ ಉದ್ಯೋಗ ಲಭಿಸಿದ್ದು ಅಂಕಿ ಅಂಶಗಳ ಪ್ರಕಾರ ಸಂತ್ರಸ್ತರಿಗೆ ದೊರಕಿದ ಉದ್ಯೋಗಗಳ ಹೆಚ್ಚಿನ ಪಾಲು ಕುಟುಂಬದ ಗಂಡು ಮಕ್ಕಳಿಗೆ ನೀಡಲಾಗಿರುವುದು ಕಂಡು ಬರುತ್ತದೆ. ಸಂತ್ರಸ್ತರು ಪರಿಹಾರದ ರೂಪದಲ್ಲಿ ದೊರಕಿದ ನಗದು ಹಣವನ್ನು ಮನೆಗಳ ನಿರ್ಮಾಣ, ಹೆಣ್ಣುಮಕ್ಕಳ ಮದುವೆಗಾಗಿ ವೆಚ್ಚ ಮಾಡಿರುವುದರಿಂದ ಉದ್ಯೋಗದ ಅವಕಾಶ ಕುಟುಂಬದ ಹಿರಿಯ ಗಂಡು ಮಗನಿಗೆ ದೊರಕಿರುವುದು ಸಮೀಕ್ಷೆಯ ಸಂದರ್ಭದಲ್ಲಿ

ಕಂಡು ಬಂದಿರುತ್ತದೆ. ಒಟ್ಟು ನಲವತ್ತೆಂಟು ಉದ್ಯೋಗಗಳಲ್ಲಿ ಮುವತ್ತೊಂಬತ್ತು (16%) ಖಾಯಂ ಕೆಲಸ, ಏಳು ಸಂತ್ರಸ್ತರಿಗೆ ತಾತ್ಕಾಲಿಕ ನೆಲೆಯಲ್ಲಿ ನೌಕರಿ ಮತ್ತು ಇಬ್ಬರಿಗೆ ದಿನಗೂಲಿ ಆಧಾರದಲ್ಲಿ ನೇಮಕಗಳು ಮಾಡಲ್ಪಟ್ಟಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

ಸಾವಿರದ ಆರುನೂರ ಮೂವತ್ತೇಳು ಕುಟುಂಬಗಳಿಗೆ ಸೇರಿದ 2329 ಎಕ್ರೆ ಭೂಮಿಯನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗೋಸ್ಕರ ಸ್ವಾಧೀನಪಡಿಸಿಕೊಂಡಿದ್ದು, ಪುನರ್ವಸತಿ ಹಾಗೂ ಪುನರ್ನಿರ್ಮಾಣ ನೀತಿಗನುಗುಣವಾಗಿ ಒಂದು ಸಂತ್ರಸ್ತ ಕುಟುಂಬದ ಒಬ್ಬ ಸದಸ್ಯನಿಗೆ ಸ್ವಾಧೀನಪಡಿಸಲ್ಪಟ್ಟಿರುವ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬರಲಿರುವ ಕೈಗಾರಿಕೆಗಳಲ್ಲಿ ಉದ್ಯೋಗ ನೀಡುವ ಭರವಸೆಯನ್ನು ನೀಡಲಾಗಿತ್ತು. ಭೂಮಿಯನ್ನು ಕಳೆದುಕೊಂಡ ಹೆಚ್ಚಿನ ಸಂತ್ರಸ್ತರು ಯಾವುದೇ ವಿಶೇಷ ಕೌಶಲ್ಯವನ್ನು ಹೊಂದಿಲ್ಲದೇ ಇರುವುದರಿಂದ, ಆರಂಭಿಸಲ್ಪಡುವ ಕೈಗಾರಿಕೆಗಳಿಗೆ ವಿಶೇಷ ಕೌಶಲ್ಯ, ವಿದ್ಯಾಭ್ಯಾಸ ತರಬೇತಿಯನ್ನು ಹೊಂದಿದ ನೌಕರರ ಅವಶ್ಯಕತೆಯಿರುವುದರಿಂದ ಸಂತ್ರಸ್ತರನ್ನು ನೇಮಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕೈವಲ್ಯ ದೇಸಾಯಿ (2007) ತಮ್ಮ ಅಧ್ಯಯನದ ಫಲಿತವನ್ನು ವಿವರಿಸುತ್ತಾ "ಯೋಜನೆಗಾಗಿ ಭೂಮಿಯನ್ನು ಸ್ವಾಧೀನಪಡಿಸಿದ ನಂತರ ಕೃಷಿ ಹಾಗೂ ತೋಟಗಾರಿಕಾ ಚಟುವಟಿಕೆಗಳು ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿರುವುದರಿಂದ ಸಂತ್ರಸ್ತರುಗಳು ತಮ್ಮ ಉದ್ಯೋಗಗಳನ್ನು ಕಳೆದುಕೊಳ್ಳಬೇಕಾಯಿತು".[18] ಈ ಕಂಡುಕೊಳ್ಳುವಿಕೆಯ ಹಿನ್ನೆಲೆಯಲ್ಲಿ ಪ್ರಸ್ತುತ ಯೋಜನೆಯಿಂದ ತಮ್ಮ ಸಾಂಪ್ರದಾಯಿಕ ಉದ್ಯೋಗವನ್ನು ಕಳೆದುಕೊಂಡವರಿಗೆ ಭೂಸ್ವಾಧೀನ ಪ್ರಾಧಿಕಾರ ಉದ್ಯೋಗಗಳನ್ನು ನೀಡಿರುತ್ತದೆಯೇ ಎಂಬ ಅಂಶವನ್ನು ಗಮನಿಸಲು ಆದ್ಯತೆಯನ್ನು ನೀಡಲಾಗಿತ್ತು.

ಮೇ 12, 2015ಕ್ಕೆ ಮಂಗಳೂರು ವಿಶೇಷ ಆರ್ಥಿಕ ವಲಯದ ಕಛೇರಿಯಿಂದ ಪಡೆದ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಸಂತ್ರಸ್ತರುಗಳಿಗೆ ಉದ್ಯೋಗ ನೀಡುವ ಪುನರ್ವಸತಿ ನೀತಿಗೆ ಅನುಗುಣವಾಗಿ ಎಂ.ಆರ್.ಪಿ.ಎಲ್.ನಲ್ಲಿ 183, ಒ.ಎಮ್.ಪಿ.ಎಲ್.ನಲ್ಲಿ 221, ಎಮ್.ಎಸ್.ಇ.ಝಡ್. ಕಛೇರಿಯಲ್ಲಿ 4, ಕಾರ್ಡಿಲೇಟ್ ಸಂಸ್ಥೆಯಲ್ಲಿ 19, ಜೆ.ಬಿ.ಎಫ್.ನಲ್ಲಿ 45 ಹುದ್ದೆಗಳನ್ನು ನೀಡಲಾಗಿರುವುದು ತಿಳಿದು ಬರುತ್ತದೆ. ಒ.ಎಮ್.ಪಿ.ಎಲ್. ಮತ್ತು ಕಾರ್ಡಿಲೇಟ್ ಸಂಸ್ಥೆಗಳಲ್ಲಿ ತಲಾ 18, ಜೆ.ಬಿ.ಎಫ್.ನಲ್ಲಿ 70, ಐ.ಎಸ್.ಪಿ.ಆರ್.ಎಲ್.ನಲ್ಲಿ 14 ಹಾಗೂ ಪ್ರದೇಶದಲ್ಲಿ ಬರುವ ಇನ್ನಿತರ ಕೈಗಾರಿಕೆಗಳಲ್ಲಿ ಒಟ್ಟು 153 ಹುದ್ದೆಗಳನ್ನು ಸಂತ್ರಸ್ತರುಗಳ ಕುಟುಂಬದ ಸದಸ್ಯರುಗಳಿಗೆ ನೀಡಲು ಬಾಕಿ ಇರುತ್ತದೆ.[19] ಉದ್ಯೋಗ ನೀಡುವ ನೀತಿಗೆ ಅನುಗುಣವಾಗಿ 804 ಸಂತ್ರಸ್ತರುಗಳ ಕುಟುಂಬದ ಸದಸ್ಯರುಗಳಿಗೆ ಅವಕಾಶವನ್ನು ನೀಡಬೇಕು ಎಂದಿರುವ ಭೂಸ್ವಾಧೀನ ಪ್ರಾಧಿಕಾರ ಇಲ್ಲಿಯವರೆಗೆ 472 ಉದ್ಯೋಗಾವಕಾಶಗಳನ್ನು ಒದಗಿಸಿದ್ದು,[20] ಶೀಘ್ರದಲ್ಲಿಯೇ ಉಳಿದ 332 ಉದ್ಯೋಗಗಳನ್ನು ಒದಗಿಸಲಾಗುವುದು ಎಂದು ತಿಳಿಸಿರುತ್ತದೆ.

ಕೋಷ್ಟಕ–4.9.2: ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ನೀಡಲ್ಪಟ್ಟ ಉದ್ಯೋಗಾವಕಾಶಗಳು

ಕ್ರ.ಸಂ	ಉತ್ತರ	ಸಂಖ್ಯೆ	ಶೇಕಡಾ
1	ನೀಡಲ್ಪಟ್ಟಿರುತ್ತದೆ.	32	13
2	ನೀಡಲ್ಪಟ್ಟಿರುವುದಿಲ್ಲ.	218	87
	ಒಟ್ಟು	**250**	**100**
ಇಲ್ಲ ಎಂದಾದರೆ, ಕಾರಣಗಳು?			
1	ತಾಂತ್ರಿಕ ಶಿಕ್ಷಣದ ಕೊರತೆ+ಹೊರಗಿನವರಿಗೆ ಅವಕಾಶ	200	80
2	ಸ್ಥಳೀಯ ಮಾನವ ಸಂಪನ್ಮೂಲದ ಅಲಕ್ಷಿಸುವಿಕೆ	10	4
3	ಅವಕಾಶಗಳ ಬಗ್ಗೆ ಅರಿವಿಲ್ಲ	8	3
	ಒಟ್ಟು	**218**	**87**

4.9.2ರ ಕೋಷ್ಟಕವು ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ ಕುಟುಂಬದ ಸದಸ್ಯರಿಗೆ ವಿಶೇಷ ಆರ್ಥಿಕ ವಲಯದಲ್ಲಿ ಅಸ್ತಿತ್ವಕ್ಕೆ ಬಂದಿರುವ ಹಾಗೂ ಬರುತ್ತಿರುವ ಬೃಹತ್ ಕೈಗಾರಿಕಾ ಘಟಕಗಳಲ್ಲಿ ಅವರ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಎಷ್ಟು ಉದ್ಯೋಗಾವಕಾಶಗಳು ನೀಡಲ್ಪಟ್ಟಿವೆ ಎಂಬುದರ ಬಗ್ಗೆ ವಿವರಿಸುತ್ತದೆ. ಯೋಜನೆಗಾಗಿ ಭೂಮಿಯನ್ನು ಸ್ವಾಧೀನಪಡಿಸುವಂತಹ ಸಂದರ್ಭದಲ್ಲಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗುವವರಿಗೆ ನಗದು ಪರಿಹಾರ, ಪುನರ್‌ವಸತಿ ಕಾಲನಿಗಳಲ್ಲಿ ಮನೆಗಳ ನಿರ್ಮಾಣಕ್ಕೆ ಭೂಮಿ ಹಾಗೂ ಕುಟುಂಬದ ಓರ್ವ ಸದಸ್ಯನಿಗೆ ಆರಂಭವಾಗುವ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶವನ್ನು ಒದಗಿಸುವ ಆಕರ್ಷಕ ಪುನರ್‌ವಸತಿಯ ಪ್ಯಾಕೇಜ್‌ಗಳನ್ನು ಭೂಸ್ವಾಧೀನ ಪ್ರಾಧಿಕಾರ ಪ್ರಕಟಿಸಿತ್ತು. ಯೋಜನೆಯು ಸಂತ್ರಸ್ತರಿಗೆ ಎಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ ಮತ್ತು ಅದು ಸಂತ್ರಸ್ತರಿಗೆ ತೃಪ್ತಿ ಹಾಗೂ ಸಂತೋಷವನ್ನು ತಂದಿದೆಯೇ ಎಂಬುದನ್ನು ಪ್ರಶ್ನಿಸಿದಾಗ, ಅಸ್ತಿತ್ವಕ್ಕೆ ಬರುತ್ತಿರುವ ಕೈಗಾರಿಕೆಗಳಲ್ಲಿ ಶೈಕ್ಷಣಿಕ ಅರ್ಹತೆಗಳಿಗೆ ಅನುಗುಣವಾಗಿ ಯೋಗ್ಯ ಉದ್ಯೋಗಾವಕಾಶಗಳು ದೊರಕಿವೆ ಎಂದು ಮೂವತ್ತೆರಡು (13%) ಮಾಹಿತಿದಾರರು ತಿಳಿಸಿದರೆ, ಯಾವುದೇ ಉದ್ಯೋಗಾವಕಾಶಗಳು ದೊರೆತಿಲ್ಲ ಎಂದು ಬಹುಸಂಖ್ಯೆಯ ಇನ್ನೂರಹದಿನೆಂಟು (87%) ಮಾಹಿತಿದಾರರು ತಿಳಿಸಿರುತ್ತಾರೆ. ಯಾಕಾಗಿ ಉದ್ಯೋಗ ದೊರೆತಿಲ್ಲ ಎಂದು ಪ್ರಶ್ನಿಸಿದಾಗ ಸ್ಥಳೀಯ ಸಂತ್ರಸ್ತರನ್ನು ನಿರ್ಲಕ್ಷಿಸಿ ಹುದ್ದೆಗಳಿಗೆ ನೇಮಕ ಮಾಡುವಾಗ ಹೊರಗಿನವರಿಗೆ ಅವಕಾಶ ಮಾಡಿಕೊಟ್ಟಿರುವುದು ಮತ್ತು ಹುದ್ದೆಗೆ ಅರ್ಹವಾದ ಶೈಕ್ಷಣಿಕ ಅರ್ಹತೆ ಇಲ್ಲದೇ ಇದ್ದುದು ಕಾರಣವೆಂದು ಇನ್ನೂರು(80%) ಸಂತ್ರಸ್ತರು ತಿಳಿಸಿದರೆ, ಸ್ಥಳೀಯ ಮಾನವ ಸಂಪನ್ಮೂಲವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿತ್ತು ಎಂಬ ಆರೋಪವನ್ನು ಹತ್ತು (4%) ಮಾಹಿತಿದಾರರು ತಿಳಿಸಿದ್ದು, ಉದ್ಯೋಗಾವಕಾಶಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ ಇದ್ದುದರಿಂದ ಅವಕಾಶ ದೊರೆತಿಲ್ಲ ಎಂದು ಎಂಟು(3%) ಸಂತ್ರಸ್ತರು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ-4.9.3: ಉದ್ಯೋಗ ನೀಡುವಾಗ ಸ್ಥಳೀಯ ಅರ್ಹತೆಯುಳ್ಳವರನ್ನು ನಿರ್ಲಕ್ಷಿಸಲಾಗಿರುತ್ತದೆಯೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	15	6
2	ಇಲ್ಲ	33	13
	ಒಟ್ಟು	**48**	**19**
ದೊರಕಿದ ಉದ್ಯೋಗದಲ್ಲಿ ತೃಪ್ತಿಯಿದೆಯೇ?			
1	ತೃಪ್ತಿ ಇಲ್ಲದ್ದಕ್ಕೆ ಕಾರಣವೆಂದರೆ ಹೊರಗಿನವರಿಗೆ ಆದ್ಯತೆ + ತಾರತಮ್ಯ + ಶ್ರೀಮಂತರಿಗೆ ಆದ್ಯತೆ	16	6
2	ತೃಪ್ತಿ ಇದೆ	32	13
	ಒಟ್ಟು	**48**	**19**

ಉದ್ಯೋಗವನ್ನು ನೀಡುವಾಗ ಸ್ಥಳೀಯ ಅರ್ಹ ಸಂತ್ರಸ್ತರಿಗೆ ಯಾವುದೇ ರೀತಿಯ ತಾರತಮ್ಯವನ್ನು ಮಾಡದೆ ಉದ್ಯೋಗ ನೀಡಲಾಗಿರುತ್ತದೆಯೇ ಎಂದು ಉದ್ಯೋಗಗಳನ್ನು ಪಡೆದ ಸಂತ್ರಸ್ತರನ್ನು ಪ್ರಶ್ನಿಸಿದಾಗ ಮೂವತ್ತಮೂರು (13%) ಮಾಹಿತಿದಾರರು ಇಲ್ಲ ಎಂದು ಉತ್ತರಿಸಿದರೆ ಹದಿನೈದು (6%) ಮಾಹಿತಿದಾರರು ಹೌದು ಎಂದಿದ್ದಾರೆ. ಉದ್ಯೋಗಗಳನ್ನು ನೀಡುವ ಸಂದರ್ಭಗಳಲ್ಲಿ ಅರ್ಹತೆಯುಳ್ಳ ಸ್ಥಳೀಯ ಸಂತ್ರಸ್ತರನ್ನು ನಿರ್ಲಕ್ಷಿಸಿ ಹೊರಗಿನವರಿಗೆ ಅವಕಾಶಗಳನ್ನು ನೀಡಿರುವುದು, ಸಂತ್ರಸ್ತರಲ್ಲಿಯೇ ತಾರತಮ್ಯವನ್ನು ಮಾಡಿ ಪ್ರಭಾವಶಾಲಿ ಹಾಗೂ ಆರ್ಥಿಕವಾಗಿ ಬಲಿಷ್ಠರಾದ ಸಂತ್ರಸ್ತರುಗಳ ಪ್ರಭಾವಗಳಿಗೆ ಮಣಿದು ಉದ್ಯೋಗವನ್ನು ನೀಡಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ ಅನ್ಯಾಯವನ್ನು ಮಾಡಲಾಗಿರುತ್ತದೆ ಎಂಬುದಾಗಿ ಕಾರಣಗಳನ್ನು ನೀಡಿರುತ್ತಾರೆ. ಉದ್ಯೋಗವನ್ನು ಪಡೆದವರಲ್ಲಿ ಪರಿಹಾರದ ರೂಪದಲ್ಲಿ ವಿವಿಧ ಕೈಗಾರಿಕೆಗಳಲ್ಲಿ ಯೋಜನೆಯ ಸಂತ್ರಸ್ತರು ಎಂಬ ಕಾರಣಕ್ಕಾಗಿ ದೊರೆತ ಉದ್ಯೋಗದ ಬಗ್ಗೆ ತೃಪ್ತಿ ಇದೆಯಾ ಎಂದು ನಲ್ವತ್ತೆಂಟು ಮಾಹಿತಿದಾರರಲ್ಲಿ ಪ್ರಶ್ನಿಸಿದಾಗ ತೃಪ್ತಿ ಇದೆ ಎಂದು ಮೂವತ್ತೆರಡು (13%) ಸಂತ್ರಸ್ತರು ಉತ್ತರಿಸಿದರೆ ಇಲ್ಲ ಎಂಬುದಾಗಿ ಹದಿನಾರು(6%) ಮಾಹಿತಿದಾರರು ತಿಳಿಸಿರುತ್ತಾರೆ.

ಕುಶಲಕರ್ಮಿಗಳು ಮತ್ತು ಸ್ಥಳಾಂತರ

ಕೋಷ್ಟಕ-4.10: ಕುಶಲಕರ್ಮಿಗಳು ಸ್ಥಳಾಂತರದ ನಂತರ ಯಾವ ಉದ್ಯೋಗದಲ್ಲಿ ತೊಡಗಿಸಿಕೊಂಡಿರುತ್ತಾರೆ?

ಕ್ರ.ಸಂ.	ಸ್ಥಳಾಂತರದ ನಂತರದ ಉದ್ಯೋಗ	ಸಂಖ್ಯೆ	ಶೇಕಡಾ
1	ಅದೇ ಕೆಲಸದಲ್ಲಿ ಮುಂದುವರಿಕೆ	40	16
2	ಯಾವುದೇ ರೀತಿಯ ಉದ್ಯೋಗ ಇಲ್ಲ	1	0.4
3	ಬೇರೆ ರೀತಿಯ ಉದ್ಯೋಗ	31	12.4
4	ಕುಶಲಕರ್ಮಿಗಳಲ್ಲ	178	71.2
	ಒಟ್ಟು	**250**	**100**

ಸ್ವಯಂಪ್ರೇರಿತವಲ್ಲದ ಸ್ಥಳಾಂತರ ಪ್ರಕ್ರಿಯೆಯು ಕುಶಲಕರ್ಮಿಗಳ ಉದ್ಯೋಗದ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಿರುತ್ತದೆ ಎಂಬ ಅಂಶವನ್ನು ಕೋಷ್ಟಕ ಸಂಖ್ಯೆ 4.10 ವಿವರಿಸುತ್ತದೆ. ಸಂದರ್ಶಿತ ಸಂತ್ರಸ್ತರಲ್ಲಿ ನೂರಇಪ್ಪತ್ತೆಂಟು ಮಾಹಿತಿದಾರರು ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಕುಶಲಕರ್ಮಿಗಳಾಗಿರದೆ, ಕೃಷಿ ಚಟುವಟಿಕೆಗಳು ಮತ್ತು ಕೃಷಿಗೆ ಪೂರಕವಾದ ಕೆಲಸಗಳಲ್ಲಿ ಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸ್ಥಳಾಂತರದ ನಂತರ ಅವರ ಉದ್ಯೋಗಗಳಲ್ಲಿ ಪರಿವರ್ತನೆಯಾಗಿ ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿರುವುದನ್ನು ಗಮನಿಸಲಾಗಿರುತ್ತದೆ. ಒಂದು ನಿರ್ದಿಷ್ಟ ಕೌಶಲ್ಯವನ್ನು ಹೊಂದಿದ್ದು (ಚಮ್ಮಾರರು, ಕುಂಬಾರರು, ಬುಟ್ಟಿ ನೇಯುವವರು, ಕ್ಷೌರಿಕರು, ನೇಕಾರರು, ಇತ್ಯಾದಿ) ಅದನ್ನು ಜೀವನಾಧಾರ ಉದ್ಯೋಗವನ್ನಾಗಿ ನೆಚ್ಚಿಕೊಂಡಿದ್ದರೆ ಅಂಥವರನ್ನು ಕುಶಲಕರ್ಮಿಗಳು ಎಂದು ಕರೆಯಲಾಗುತ್ತದೆ. ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಪ್ರದೇಶದಲ್ಲಿ ವಾಸವಿರುವ ಇನ್ನೂರಐವತ್ತು ಮಾಹಿತಿದಾರರಲ್ಲಿ ಒಟ್ಟು ಎಪ್ಪತ್ತೆರಡು (28.8%) ಸಂದರ್ಶಿತರು ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಕುಶಲಕರ್ಮಿಗಳಾಗಿ ಸಮಾಜದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಪೈಕಿ ನಲವತ್ತು (16%) ಮಾಹಿತಿದಾರರು ಸ್ಥಳಾಂತರದ ನಂತರ ಅದೇ ಉದ್ಯೋಗವನ್ನು ಹೊಸ ಪ್ರದೇಶದಲ್ಲಿಯೂ ಮುಂದುವರಿಸಿದರೆ, ಮೂವತ್ತೊಂದು(12.4%) ಕುಶಲಕರ್ಮಿಗಳು ತಮ್ಮ ಹಿಂದಿನ ಕೌಶಲ್ಯದ ಉದ್ಯೋಗಕ್ಕೆ ಬದಲಾಗಿ ಹೊಸ ಪರಿಸರದಲ್ಲಿ ಜೀವನವನ್ನು ನಿರ್ವಹಿಸಲು ಹೊಸ ಉದ್ಯೋಗವನ್ನು ಅವಲಂಬಿಸಿರುವುದು ಕಂಡುಬಂದಿರುತ್ತದೆ. ಓರ್ವ(0.4%) ಸಂತ್ರಸ್ತ ಕುಶಲಕರ್ಮಿಗೆ ಯಾವುದೇ ರೀತಿಯ ಉದ್ಯೋಗ ದೊರಕದಿರುವುದು ತಿಳಿದು ಬಂದಿರುತ್ತದೆ. ಭಾರತದಲ್ಲಿ ಅಭಿವೃದ್ಧಿ ಮತ್ತು ಸ್ಥಳಾಂತರಕ್ಕೆ ಸಂಬಂಧಪಟ್ಟಂತೆ ನಡೆಸಲ್ಪಟ್ಟ ಹೆಚ್ಚಿನ ಅಧ್ಯಯನಗಳ ಫಲಿತಗಳನ್ನು ಗಮನಿಸಿದಾಗ, ಸ್ಥಳಾಂತರವು ಸಂತ್ರಸ್ತರು ತಮ್ಮ ಜೀವನಾಧಾರಕ್ಕಾಗಿ ಪಾರಂಪರಿಕವಾಗಿ ತಲೆಮಾರುಗಳಿಂದ ನಡೆಸಿಕೊಂಡು ಬರುತ್ತಿದ್ದ ಸಾಂಪ್ರದಾಯಿಕ ಉದ್ಯೋಗದಲ್ಲಿ ಬದಲಾವಣೆಗಳನ್ನು ತರುತ್ತದೆ ಮತ್ತು ಇವುಗಳಿಗೆ ಹೊಸ ಪ್ರದೇಶದಲ್ಲಿ ಅವಕಾಶಗಳು ಇಲ್ಲದೇ ಇರುವ ಕಾರಣ ಬದುಕನ್ನು ನಡೆಸುವುದಕ್ಕೋಸ್ಕರ ಅಪರಿಚಿತ ಉದ್ಯೋಗವನ್ನು ಆರಿಸಿಕೊಳ್ಳುವುದನ್ನು ಬಿಟ್ಟು ಅನ್ಯ ಮಾರ್ಗವಿಲ್ಲದಂತಹ ಸ್ಥಿತಿಯನ್ನು ನಿರ್ಮಿಸುತ್ತದೆ.[21] ಮೇಲಿನ ಕಂಡುಕೊಳ್ಳುವಿಕೆಯು ಪ್ರಸ್ತುತ ಅಧ್ಯಯನದ ಸಂತ್ರಸ್ತರುಗಳ ಜೀವನಶೈಲಿಯನ್ನು ಗಮನಿಸಿದಾಗ ಅವರ ಉದ್ಯೋಗದಲ್ಲಿ ಅನೇಕ ಪ್ರಮಾಣದ ಬದಲಾವಣೆಗಳಾಗಿರುವುದು ಕಂಡುಬರುತ್ತದೆ.

ಕೋಷ್ಟಕ–4.11: ಸ್ಥಳಾಂತರವು ನಿಮ್ಮ ಪಾರಂಪರಿಕ ಉದ್ಯೋಗದ ಚಟುವಟಿಕೆಗಳ ಮೇಲೆ ಯಾವುದಾದರೂ ಪರಿಣಾಮ ಬೀರಿದೆಯೆ?

ಕ್ರಸಂ	ಉತ್ತರ	ಸಂಖ್ಯೆ	ಶೇಕಡಾ
1	ಹೌದು	8	3
2	ಇಲ್ಲ	242	97
	ಒಟ್ಟು	**250**	**100**
ಹೌದಾದರೆ, ಕಾರಣಗಳು			
1	ಪಾರಂಪರಿಕ ಉದ್ಯೋಗದಲ್ಲಿ ಬದಲಾವಣೆ	3	1
2	ಹಳ್ಳಿ ಮದ್ದುಗಳನ್ನು ನೀಡಲು ಹೊಸ ಪ್ರದೇಶದಲ್ಲಿ ಅವಕಾಶವಿಲ್ಲ	5	2
	ಒಟ್ಟು	**8**	**3**

ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಜನರು ಸಾಮಾನ್ಯವಾಗಿ ಸಾಂಪ್ರದಾಯಿಕ ಮತ್ತು ತಲತಲಾಂತರದಿಂದ ತಮ್ಮ ಹಿರಿಯರು ನಡೆಸಿಕೊಂಡು ಬಂದಿರುವ ಉದ್ಯೋಗಗಳನ್ನು ತಮ್ಮ ಜೀವನಾಧಾರಕ್ಕಾಗಿ ಅವಲಂಬಿಸಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿರುವುದರಿಂದ ಮತ್ತು ಸ್ವಾತಂತ್ರ್ಯಾನಂತರ ಅಭಿವೃದ್ಧಿ ಚಟುವಟಿಕೆಗಳಿಗೆ ಒಳಗಾಗಿರುವುದರಿಂದ ಸಾಂಪ್ರದಾಯಿಕ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವವರ ಪ್ರಮಾಣ ಇತರ ಪ್ರದೇಶಗಳಿಗೆ ಹೋಲಿಸಿದರೆ ಕಡಿಮೆ ಪ್ರಮಾಣದಲ್ಲಿದೆ. ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಬುಟ್ಟಿ ಹೆಣೆಯುವುದು, ಶೇಂದಿ ತೆಗೆಯುವುದು, ಭೂತ ಕಟ್ಟುವವರು ಮತ್ತು ಹಳ್ಳಿ ಮದ್ದುಗಳನ್ನು ನೀಡುವವರು ಕಂಡುಬರುತ್ತಾರೆ. ದಕ್ಷಿಣ ಕನ್ನಡದಲ್ಲಿ ಇತರ ಪ್ರದೇಶಗಳಿಗಿಂತ ಬೀಡಿ ಉದ್ಯಮ ದೊಡ್ಡ ಪ್ರಮಾಣದಲ್ಲಿ ಬೆಳೆದಿರುವುದರಿಂದ ಹಳ್ಳಿಯಲ್ಲಿನ ಜನರು, ವಿಶೇಷವಾಗಿ ಮಹಿಳೆಯರು ಬೀಡಿ ಕಟ್ಟುವುದನ್ನು ತಮ್ಮ ಜೀವನಾಧಾರಕ್ಕಾಗಿ ಅವಲಂಬಿಸಿರುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಾಂಪ್ರದಾಯಿಕ ಉದ್ಯೋಗ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಸ್ಥಳಾಂತರ ಯಾವುದಾದರೂ ಪರಿಣಾಮವನ್ನು ಬೀರಿರುತ್ತದೆಯೇ ಎಂಬುದನ್ನು ಪರಿಶೀಲಿಸಲಾಗಿದೆ. ಭೂಸ್ವಾಧೀನ ಮತ್ತು ಸ್ಥಳಾಂತರ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಯಾವುದೇ ಪರಿಣಾಮಗಳನ್ನು ಬೀರಿಲ್ಲ ಎಂದು ಇನ್ನೂರನಲವತ್ತೆರಡು (97%) ಮಾಹಿತಿದಾರರು ಅಭಿಪ್ರಾಯ ವ್ಯಕ್ತಪಡಿಸಿದರೆ ಬದಲಾವಣೆಯನ್ನು ತಂದಿದೆ ಎಂದು ಎಂಟು (3%) ಸಂದರ್ಶಿತರು ತಿಳಿಸಿರುತ್ತಾರೆ. ಸ್ಥಳಾಂತರಗೊಂಡ ನಂತರ ಪುನರ್‌ವಸತಿ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಉದ್ಯೋಗಗಳನ್ನು ಮುಂದುವರಿಸಲು ಕಚ್ಚಾ ಸಾಮಗ್ರಿಗಳ ಅಲಭ್ಯತೆ ವಿಶೇಷವಾಗಿ ಬುಟ್ಟಿ ನೇಯುವುದು, ಹೊಸ ಪ್ರದೇಶಗಳಲ್ಲಿ ತಮ್ಮ ಮೂಲ ಕೌಶಲ್ಯದ ಉದ್ಯೋಗಗಳನ್ನು ಮುಂದುವರಿಸಲು ಅಗತ್ಯದ ಸೌಲಭ್ಯಗಳಿಲ್ಲದೆ ಇರುವುದು ಹಾಗೂ ಜೀವನ ನಿರ್ವಹಿಸಲು ತಮಗೆ ಅಪರಿಚಿತವಾದ ಉದ್ಯೋಗಕ್ಕೆ ಸೇರ್ಪಡೆಯಾಗುವ ಅನಿವಾರ್ಯತೆ ಮತ್ತು ಹೊಸ ಪ್ರದೇಶದಲ್ಲಿ ಹಳ್ಳಿಮದ್ದುಗಳನ್ನು ನೀಡಲು ಅವಕಾಶಗಳು ಇಲ್ಲದೆ ಇರುವುದು ಇದಕ್ಕೆ ಮುಖ್ಯ ಕಾರಣ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಕೋಷ್ಟಕ–4.12: ಭೂಸ್ವಾಧೀನ ಸಂಸ್ಥೆ ನಿಮಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಿತ್ತೇ?

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾ
1	ಹೌದು	35	14
2	ಇಲ್ಲ	215	86
	ಒಟ್ಟು	**250**	**100**
ಹೌದಾದರೆ, ಯಾವ ರೀತಿಯ ತರಬೇತಿ?			
1	ತಾಂತ್ರಿಕ ಶಿಕ್ಷಣ	27	11
2	ಸ್ವ ಉದ್ಯೋಗದ ಬಗ್ಗೆ ಮಾಹಿತಿ	8	3
	ಒಟ್ಟು	**35**	**14**

ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರು ಕೃಷಿಭೂಮಿ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಯಾವುದೇ ರೀತಿಯ ವಿಶೇಷ ತರಬೇತಿ ಹಾಗೂ ಕೌಶಲ್ಯದ ಅವಶ್ಯಕತೆಯಿರಲಿಲ್ಲ ಹಾಗೂ ಹೊಂದುವ ಅವಶ್ಯಕತೆಯೂ ಇರಲಿಲ್ಲ. ಸಾಂಪ್ರದಾಯಿಕ ಉದ್ಯೋಗಗಳು ಜನರಲ್ಲಿ ಸಮಾಜೀಕರಣ ಪ್ರಕ್ರಿಯೆಗಳ ಮೂಲಕ ಬೆಳೆದು ಬರುತ್ತವೆ. ಸ್ಥಳಾಂತರದ ನಂತರ ಪುನರ್‌ವಸತಿ ಪ್ರದೇಶಗಳಲ್ಲಿ ಸಾಂಪ್ರದಾಯಿಕ, ಪರಂಪರಾಗತ ಕೌಶಲ್ಯದಿಂದ ಜೀವನವನ್ನು ನಡೆಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಹೊಸ ಕೌಶಲ್ಯ ಮತ್ತು ತರಬೇತಿಯ ಅವಶ್ಯಕತೆ ಅಗತ್ಯವಾಗಿರುತ್ತದೆ. ಭೂಸ್ವಾಧೀನ ಪ್ರಾಧಿಕಾರ ಸಂತ್ರಸ್ತರಿಗೆ ಮುಂದೆ ಜೀವನವನ್ನು ನಡೆಸಲು ಯಾವುದಾದರೂ ಕೌಶಲ್ಯ ಅಭಿವೃದ್ಧಿಯ ಬಗೆಗೆ ತರಬೇತಿಯನ್ನು ನೀಡಿತ್ತೇ ಎಂಬ ವಿವರಣೆಯನ್ನು 4.12ರ ಕೋಷ್ಟಕ ನೀಡುತ್ತದೆ. ಸಂದರ್ಶಿತರಲ್ಲಿ ಇನ್ನೂರಹದಿನೈದು ಸಂತ್ರಸ್ತರು ಯಾವುದೇ ರೀತಿಯ ಕೌಶಲ್ಯ ಅಭಿವೃದ್ಧಿಯ ತರಬೇತಿಯನ್ನು ಭೂಸ್ವಾಧೀನ ಪ್ರಾಧಿಕಾರ ನೀಡಿಲ್ಲ ಎಂದು ತಿಳಿಸಿದರೆ, ಮೂವತ್ತೈದು ಸಂದರ್ಶಿತರು ತರಬೇತಿಯನ್ನು ನೀಡಲಾಗಿತ್ತು ಎಂಬುದಾಗಿ ಉತ್ತರಿಸಿರುತ್ತಾರೆ. ಯಾವ ರೀತಿಯ ತರಬೇತಿಯನ್ನು ನೀಡಲಾಗಿರುತ್ತದೆ ಎಂದು ಉತ್ತರಿಸಿದವರಲ್ಲಿ ಪ್ರಶ್ನಿಸಿದಾಗ ಇಪ್ಪತ್ತೇಳು (11%) ಮಾಹಿತಿದಾರರು ತಾಂತ್ರಿಕ ಶಿಕ್ಷಣವನ್ನು ಮುಂದುವರಿಸಲು ಎಲ್ಲಾ ರೀತಿಯ ಪ್ರೋತ್ಸಾಹಗಳನ್ನು ನೀಡಲಾಗಿತ್ತು ಎಂದರೆ, ಎಂಟು ಸಂತ್ರಸ್ತರು (3%) ಸ್ವಉದ್ಯೋಗವನ್ನು ನಡೆಸಲು ಮಾರ್ಗದರ್ಶನ ಮತ್ತು ಮಾಹಿತಿಯನ್ನು ಪ್ರಾಧಿಕಾರ ವ್ಯವಸ್ಥೆಗೊಳಿಸಿರುವುದನ್ನು ತಿಳಿಸಿರುತ್ತಾರೆ.

ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಲು ಆಧುನಿಕ ಕೌಶಲ್ಯ ಮತ್ತು ವಿಶೇಷ ತರಬೇತಿಗಳ ಅವಶ್ಯಕತೆಯಿರುತ್ತದೆ. ಯೋಜನೆಗಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುವವರು ಅಥವಾ ಅವರ ಅವಲಂಬಿತರುಗಳು ಯಾವುದೇ ವಿಶೇಷ ಕೌಶಲ್ಯವನ್ನು ಸ್ಥಳಾಂತರದ ಪೂರ್ವದಲ್ಲಿ ಹೊಂದಿಲ್ಲದೆ ಇದ್ದುದರಿಂದ ಅವರುಗಳಿಗೆ ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಉದ್ಯೋಗವನ್ನು ನೀಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕಾಗಿಯೇ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಸ್ವಾಧೀನಪಡಿಸಿರುವ

ಭೂಮಿಯ ಸಂತ್ರಸ್ತರುಗಳಿಗೆ ನೀಡಬೇಕಾಗಿರುವ ಕರ್ನಾಟಕ ಸರಕಾರದ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ನೀತಿ ಸಂತ್ರಸ್ತರುಗಳಿಗೆ ವಿಶೇಷ ತರಬೇತಿಯನ್ನು ನೀಡುವುದರ ಬಗೆಗೆ ವಿವರಿಸಿದೆ. ಮಂಗಳೂರಿನ ಕದ್ರಿ ಸಮೀಪದಲ್ಲಿರುವ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ಪ್ರಾಧಿಕಾರದ ಪ್ರಾಯೋಜಕತ್ವದಲ್ಲಿ ಮೂರು ತಂಡಗಳಲ್ಲಿ ಇಲ್ಲಿಯವರೆಗೆ ಒಟ್ಟು 411 ಉದ್ಯೋಗಾಕಾಂಕ್ಷಿಗಳಿಗೆ ವಿಶೇಷ ತಾಂತ್ರಿಕ ಡಿಪ್ಲೋಮಾ ತರಬೇತಿಗಳನ್ನು ಮೂರು ವರ್ಷದ ಅವಧಿಗೆ ನೀಡಲಾಗಿರುತ್ತದೆ. ತರಬೇತಿಯನ್ನು ಪೂರ್ತಿಗೊಳಿಸಿದ 293 ಅಭ್ಯರ್ಥಿಗಳಿಗೆ ಅಸ್ತಿತ್ವಕ್ಕೆ ಬಂದಿರುವ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶಗಳನ್ನು ಈಗಾಗಲೇ ಕಲ್ಪಿಸಲಾಗಿದ್ದು, 96 ಅಭ್ಯರ್ಥಿಗಳಿಗೆ ಉದ್ಯೋಗವನ್ನು ಸದ್ಯದಲ್ಲಿಯೇ ಒದಗಿಸಲಾಗುವುದು ಎಂಬ ಭರವಸೆಯನ್ನು ನೀಡಲಾಗಿರುತ್ತದೆ. ತರಬೇತಿಯನ್ನು ಪಡೆದ 22 ಅಭ್ಯರ್ಥಿಗಳು ಪುನರ್‌ವಸತಿ ನೀತಿಯಂತೆ ಉದ್ಯೋಗಾವಕಾಶದ ಬದಲು ನಗದು ಹಣವನ್ನು ಪರಿಹಾರವನ್ನಾಗಿ[22] ಪಡೆದಿರುತ್ತಾರೆ.

ಉದ್ಯೋಗವನ್ನು ನೀಡುವ ಸಂದರ್ಭದಲ್ಲಿ ಹೊರಗಿನವರಿಗೆ ಹೆಚ್ಚು ಅವಕಾಶಗಳನ್ನು ನೀಡಲಾಗಿರುತ್ತದೆಯೆಂದು ತಿಳಿಸಿದ ಮಾಹಿತಿದಾರರು ಸಂತ್ರಸ್ತರಲ್ಲಿಯೇ ತಾರತಮ್ಯವನ್ನು ಮಾಡಲಾಗಿತ್ತು ಎಂದು ಆರೋಪಿಸಿದ್ದು ಕಂಡು ಬಂದಿರುತ್ತದೆ. ಪ್ರಭಾವಶಾಲಿ ಹಾಗೂ ಸ್ಥಿತಿವಂತ ಸಂತ್ರಸ್ತರುಗಳು ತಮ್ಮ ಭೂಮಿಗೆ ಸಿಗಬೇಕಾದ ಪರಿಹಾರವಾದ ನಗದು, ಪುನರ್‌ವಸತಿ ಕಾಲನಿಗಳಲ್ಲಿ ತಮಗೆ ಬೇಕಾದಂತಹ ಯೋಗ್ಯವಾದ ನಿವೇಶನದ ಜೊತೆಗೆ ತಮ್ಮ ಅವಲಂಬಿತರಿಗೆ ಉದ್ಯೋಗವನ್ನು ತಮ್ಮ ಪ್ರಭಾವಗಳನ್ನು ಬಳಸಿ ತ್ವರಿತವಾಗಿ ಪಡೆಯುವಲ್ಲಿ ಸಫಲರಾದರು. ಸ್ಥಿತಿವಂತರಲ್ಲದ, ಬಡ ಸಂತ್ರಸ್ತರು ಪರಿಹಾರವನ್ನು ಪಡೆಯಲು ತುಂಬಾ ಕಷ್ಟಪಡಬೇಕಾಗಿ ಬಂದಿತು. ಹಲವಾರು ಬಾರಿ ಮಂಗಳೂರು ವಿಶೇಷ ಆರ್ಥಿಕ ವಲಯದ ಕಚೇರಿಗೆ ಅಲೆಯಬೇಕಾಗಿ ಬಂದದ್ದು ಮಾತ್ರವಲ್ಲದೆ ಉದ್ಯೋಗಾವಕಾಶವನ್ನು ಇನ್ನೂ ಪಡೆದಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ.

ಸ್ಥಳಾಂತರದ ಪೂರ್ವದ ಹಾಗೂ ನಂತರದ ಆರ್ಥಿಕ ಸ್ಥಿತಿಗತಿಗಳು

ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಅಂಕಿ ಅಂಶಗಳು ಸಂತ್ರಸ್ತರ ಆರ್ಥಿಕ ಸ್ಥಿತಿ ಸ್ಥಳಾಂತರದ ನಂತರದಲ್ಲಿ ಸಂಪೂರ್ಣವಾಗಿ ಹದಗೆಟ್ಟಿರುವುದನ್ನು ತೋರಿಸುತ್ತದೆ. ಸಂದರ್ಶಿತ 250 ಮಾಹಿತಿದಾರರಲ್ಲಿ 95%ದಷ್ಟು ಸಂತ್ರಸ್ತರು ಸ್ಥಳಾಂತರವು ಆರ್ಥಿಕ ದುಸ್ಥಿತಿಯನ್ನು ತಂದಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, 5% ಮಾಹಿತಿದಾರರು ಸ್ಥಳಾಂತರದ ನಂತರದ ಆರ್ಥಿಕ ಸ್ಥಿತಿ ಹಿಂದಿಗಿಂತ ಚೆನ್ನಾಗಿದೆಯೆಂದು ತೃಪ್ತಿ ವ್ಯಕ್ತಪಡಿಸಿರುವುದನ್ನು ತಿಳಿಸುತ್ತದೆ.

ಕೋಷ್ಟಕ–4.13: ಸ್ಥಳಾಂತರಕ್ಕಿಂತ ಮೊದಲು ಹಾಗೂ ನಂತರದ ಆರ್ಥಿಕ ಸ್ಥಿತಿಗತಿಗಳು

ಕ್ರಸಂ.		ಸ್ಥಳಾಂತರದ ಮೊದಲು		ಸ್ಥಳಾಂತರದ ನಂತರ	
		ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
1	ಚೆನ್ನಾಗಿತ್ತು	238	95	12	5
2	ಚೆನ್ನಾಗಿಲ್ಲ	12	5	238	95
	ಒಟ್ಟು	**250**	**100**	**250**	**100**
ಚೆನ್ನಾಗಿಲ್ಲವಾದರೆ ಹೇಗೆ?					
1	ಮೊದಲು ಚೆನ್ನಾಗಿತ್ತು. ನಂತರ ಚೆನ್ನಾಗಿಲ್ಲ	–	–	230	92
2	ಏನೂ ವ್ಯತ್ಯಾಸವಿಲ್ಲ	–	–	8	3
	ಒಟ್ಟು	–	–	**238**	**95**

ಸ್ಥಳಾಂತರ ಮತ್ತು ಪುನರ್‌ವಸತಿಗಿಂತ ಮೊದಲು ನಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿತ್ತು, ಹೊಸ ಪ್ರದೇಶದಲ್ಲಿ ಅದು ಬಿಗಡಾಯಿಸಿದೆಯೆಂದು ಇನ್ನೂರಮೂವತ್ತೆಂಟು (95%) ಮಾಹಿತಿದಾರರು ತಿಳಿಸಿದರೆ ಹಿಂದಿನ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ ಎಂದು ಹನ್ನೆರಡು(5%) ಸಂತ್ರಸ್ತರು ಅಭಿಪ್ರಾಯಪಟ್ಟಿರುತ್ತಾರೆ. ಪ್ರಸ್ತುತ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಎಂದು ಅಭಿಪ್ರಾಯಪಟ್ಟಿರುವ 238 ಸಂತ್ರಸ್ತರಲ್ಲಿ ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಮತ್ತು ನಂತರದ ಆರ್ಥಿಕ ಪರಿಸ್ಥಿತಿಯಲ್ಲಿ ಯಾವುದೇ ರೀತಿಯ ಬದಲಾವಣೆಗಳು ಆಗಲಿಲ್ಲವೆಂದು ಎಂಟು(3%) ಸಂತ್ರಸ್ತರು ಅಭಿಪ್ರಾಯಪಟ್ಟಿದ್ದರೆ, ಉಳಿದ ಇನ್ನೂರ ಮೂವತ್ತು(92%) ಮಾಹಿತಿದಾರರು ತಮ್ಮ ಪೂರ್ವನೆಲೆಯಲ್ಲಿದ್ದ ಆಗಿನ ಆರ್ಥಿಕ ಸ್ಥಿತಿಗೆ ಹೋಲಿಸಿದರೆ ಪ್ರಸ್ತುತ ಆರ್ಥಿಕ ಪರಿಸ್ಥಿತಿಗಳು ಚೆನ್ನಾಗಿಲ್ಲವೆಂದು ಆಕ್ರೋಶವನ್ನು ವ್ಯಕ್ತಪಡಿಸಿರುತ್ತಾರೆ. 4.13ರ ಕೋಷ್ಟಕವನ್ನು ಗಮನಿಸಿದಾಗ ಯೋಜನೆಯ ಸಂತ್ರಸ್ತರು ಭೂಸ್ವಾಧೀನ ಮತ್ತು ಸ್ಥಳಾಂತರದ ಪೂರ್ವದಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿತ್ತು. ಪುನರ್‌ವಸತಿಯ ನಂತರ ಮೂಲಭೂತ ವ್ಯವಸ್ಥೆಗಳ ಅಲಭ್ಯತೆ, ನಗರ ಪ್ರದೇಶಗಳಿಂದ ದೂರ ಇರುವುದು, ಅಸಮರ್ಪಕ ಸಾರಿಗೆ ವ್ಯವಸ್ಥೆ ಮತ್ತು ದೈನಂದಿನ ಖರ್ಚುವೆಚ್ಚಗಳಲ್ಲಿನ ಗಣನೀಯ ಪ್ರಮಾಣದ ಏರಿಕೆ ಮುಂತಾದವುಗಳು ಅವರ ಆರ್ಥಿಕ ಪರಿಸ್ಥಿತಿಯಲ್ಲಿ ಏರುಪೇರಾಗಲು ಪ್ರಮುಖ ಕಾರಣಗಳಾಗಿರುತ್ತದೆಯೆಂದು ಕಂಡುಕೊಳ್ಳಲಾಗಿರುತ್ತದೆ.

ಸತ್ಯನಾರಾಯಣ ಜಿ. (1999) ರವರು ಆಂಧ್ರಪ್ರದೇಶದ ರಾಮಗೊಂಡಮ್‌ನಲ್ಲಿ ವಿಶ್ವಬ್ಯಾಂಕ್‌ನ ಪ್ರಾಯೋಜಕತ್ವದಲ್ಲಿ ಆರಂಭಗೊಂಡ ದಕ್ಷಿಣ ಭಾರತದ ಪ್ರಥಮ ಬೃಹತ್ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನಾ ಸ್ಥಾವರದಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಬಗ್ಗೆ ನಡೆಸಿದ ಅಧ್ಯಯನದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಸಂತ್ರಸ್ತರ ಜೀವನ ಶೈಲಿಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿತು. ಪ್ರಮುಖವಾಗಿ ಕೃಷಿ ಭೂಮಿಯನ್ನು ಕಳೆದುಕೊಂಡು ಹೆಚ್ಚಿನ ಕುಟುಂಬಗಳು ಭೂರಹಿತ ಕುಟುಂಬಗಳಾಗಿ ಮಾರ್ಪಾಟಾದವು.

ಇದರಿಂದಾಗಿ ವಿಶೇಷವಾಗಿ ಹಿಂದುಳಿದ ಜಾತಿಗೆ ಸೇರಿದ ಜನರು ಶತಮಾನಗಳಿಂದ ಮಾಡಿಕೊಂಡು ಬಂದಂತಹ ಉದ್ಯೋಗಗಳಲ್ಲಿ ಬದಲಾವಣೆಗಳಾದವು. ಸ್ಥಳಾಂತರ ಸಂತ್ರಸ್ತರ ಆರ್ಥಿಕ ಪರಿಸ್ಥಿತಿಯಲ್ಲಿ ಬದಲಾವಣೆಗಳನ್ನು ತಂದು ಸ್ವಂತ ಭೂಮಿಯಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದವರು ಕೃಷಿ ಕಾರ್ಮಿಕರಾಗಬೇಕಾದಂತಹ ಪ್ರಮೇಯ ಸೃಷ್ಟಿಯಾಯಿತು. ಇದರಿಂದಾಗಿ ಸಂತ್ರಸ್ತರು ಭೂಮಿಯನ್ನು ಕಳೆದುಕೊಂಡ ನಂತರ ತಮ್ಮ ಪೂರ್ವ ಸ್ಥಿತಿಗಿಂತ ಕಡಿಮೆ ಆದಾಯವನ್ನು ಪಡೆಯುವಂತಾಯಿತು[23] ಎಂಬುದಾಗಿ ಉಲ್ಲೇಖಿಸುತ್ತಾ "ಸಂತ್ರಸ್ತರ ಜೀವನ ಮಟ್ಟದಲ್ಲಿ ಇಳಿಕೆಯಾಗುವುದಕ್ಕೆ ಮೂಲ ಕಾರಣ ಭೂಮಿಯನ್ನು ಕಳೆದುಕೊಂಡು ಅದರಿಂದಾಗಿ ಸೃಷ್ಟಿಯಾದ ನಿಕೃಷ್ಟ ಆರ್ಥಿಕ ಪರಿಸ್ಥಿತಿ ಹಾಗೂ ಉದ್ಯೋಗ ನಷ್ಟ"[24] ಎಂಬ ಕಂಡುಕೊಳ್ಳುವಿಕೆ ಪ್ರಸ್ತುತ ಯೋಜನೆಯಿಂದಾಗಿ ಭೂರಹಿತರಾದ ಸಂತ್ರಸ್ತರಲ್ಲಿಯೂ ಅವರ ದಯನೀಯ ಪರಿಸ್ಥಿತಿಗೆ ಕಾರಣವಾಗಿರುವುದು ಗಮನಿಸಬಹುದಾದಂತಹ ಪ್ರಮುಖ ಅಂಶವಾಗಿರುತ್ತದೆ.

ಸರ್ದಾರ್ ಸರೋವರ್ ಮತ್ತು ತೇಹ್ರಿ ಅಣೆಕಟ್ಟು ನಿರ್ಮಾಣಕ್ಕಾಗಿ ಸ್ಥಳಾಂತರಗೊಂಡ ಸಂತ್ರಸ್ತರ ಬವಣೆಗಳ ಬಗ್ಗೆ ಅಧ್ಯಯನ ನಡೆಸಿದ ಮೃದುಲಾ ಸಿಂಗ್‌ರವರು ಯಾಕಾಗಿ ಯೋಜನೆಗಳ ಸಂತ್ರಸ್ತರ ಆರ್ಥಿಕ ಪರಿಸ್ಥಿತಿ ಸ್ಥಳಾಂತರದ ನಂತರ ಪುನರ್‌ವಸತಿ ಪ್ರದೇಶಗಳಲ್ಲಿ ಹದಗೆಡುತ್ತದೆಯೆಂದು ವಿವರಿಸುತ್ತಾ, 'ಒಂದು ಪ್ರದೇಶದಿಂದ ಅಪರಿಚಿತವಾದ ಇನ್ನೊಂದು ಪ್ರದೇಶಕ್ಕೆ ಸ್ಥಿತ್ಯಂತರಗೊಳ್ಳುವ ಹಂತದಲ್ಲಿ ಹೊಸ ಪ್ರದೇಶದಲ್ಲಿನ ಸಮಸ್ಯೆಗಳನ್ನು ಸಂತ್ರಸ್ತರು ಸಮರ್ಪಕವಾಗಿ ಬಗೆಹರಿಸಲು ಸಾಧ್ಯವಾದಾಗ ಮಾತ್ರ ಅವರುಗಳು ಹೊಸ ಬದುಕನ್ನು ನಡೆಸಲು ಸಾಧ್ಯವಾಗುತ್ತದೆ. ಆದರೆ ಅಸಮರ್ಪಕ ಪುನರ್‌ವಸತಿ ಯೋಜನೆಗಳಿಂದಾಗಿ ಸಂತ್ರಸ್ತರುಗಳು ತಮ್ಮ ಬದುಕನ್ನು ಪುನರ್‌ನಿರ್ಮಿಸಲು ಹೋರಾಟಗಳನ್ನು ಸಂಘಟಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ'.[25] ಯೋಜನೆಗಳಲ್ಲಿ ಕಡಿಮೆ ಪ್ರಮಾಣದ ಅನುದಾನಗಳನ್ನು ಪುನರ್‌ವಸತಿಗೋಸ್ಕರ ಬಿಡುಗಡೆ ಮಾಡುವುದರಿಂದ 'ಹಣದ ಕೊರತೆಯಿಂದಾಗಿ ಸಂತ್ರಸ್ತರುಗಳಿಗೆ ಸುಲಭವಾಗಿ ತಮ್ಮ ಜೀವನವನ್ನು ನಡೆಸಲು ಸಾಧ್ಯವಾಗುವುದಿಲ್ಲ. ಮನೆಗಳನ್ನು ನಿರ್ಮಿಸುವುದಕ್ಕಾಗಿಯೇ ಎರಡಕ್ಕಿಂತ ಹೆಚ್ಚು ವರ್ಷಗಳು ಬೇಕಾಯಿತು. ತಮ್ಮ ದೈನಂದಿನ ಅವಶ್ಯಕತೆಗಳನ್ನು ಪೂರೈಸಲು ಬೇಕಾಗಿದ್ದ ವ್ಯವಸ್ಥೆಯನ್ನು ಅವರೇ ಮಾಡಬೇಕಾಗಿತ್ತು. ಇದರಿಂದಾಗಿ ಸಂತ್ರಸ್ತರುಗಳಿಗೆ ಎಲ್ಲಾ ಸಮಸ್ಯೆಗಳನ್ನು ಜೊತೆಯಾಗಿ ಎದುರಿಸಲು ಸಾಧ್ಯವಾಗಿರಲಿಲ್ಲ. ಆದುದರಿಂದ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರುಗಳಿಗೆ ಯಾವ ರೀತಿಯ ಯೋಗ್ಯ ಪುನರ್‌ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂಬುದನ್ನು ನಿರ್ಧರಿಸುವವರೆಗೆ ಅವರುಗಳನ್ನು ತಮ್ಮ ಮೂಲಪ್ರದೇಶಗಳಿಂದ ಸ್ಥಳಾಂತರಿಸಬಾರದು'[26] ಎಂಬ ಫಲಿತಗಳಿಗೆ ವಿರುದ್ಧವಾಗಿ 'ಯಾವುದೇ ಪೂರ್ವ ತಯಾರಿಗಳಿಲ್ಲದೆ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರುಗಳಿಗೆ ಆಲೋಚಿಸುವುದಕ್ಕೆ ಹಾಗೂ ತಮ್ಮ ಹಕ್ಕುಗಳನ್ನು ರಕ್ಷಿಸಲು

ಸಂಘಟಿತರಾಗಿ ಹೋರಾಟಗಳನ್ನು ನಡೆಸುವುದಕ್ಕೆ ತಯಾರಿ ನಡೆಸಲು ಅವಕಾಶಗಳನ್ನು ನೀಡದೇ ತರಾತುರಿಯಿಂದ ಆಮಿಷ, ಬೆದರಿಕೆಗಳನ್ನು ಒಡ್ಡಿ ವ್ಯವಸ್ಥಿತವಾಗಿ ರಚಿಸಲ್ಪಡದ ಪುನರ್‌ವಸತಿ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಲು ನಿವೇಶನಗಳನ್ನು ನೀಡಿ ಸ್ಥಳಾಂತರ ಮಾಡಿರುವುದು'[27] ಸಂತ್ರಸ್ತರುಗಳ ಆರ್ಥಿಕ ಅವನತಿಗೆ ಕಾರಣವಾಗಿರುವುದನ್ನು ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭದಲ್ಲಿಯೂ ಸಂತ್ರಸ್ತರ ಜೊತೆಯಲ್ಲಿ ಅನೌಪಚಾರಿಕವಾಗಿ ಗುಂಪುಚರ್ಚೆಯಲ್ಲಿ ತೊಡಗಿಸಿಕೊಂಡ ಸಂದರ್ಭದಲ್ಲಿ ತಿಳಿದುಬಂದಿರುವ ಅಂಶವಾಗಿರುತ್ತದೆ.

ಪ್ರಸ್ತುತ ಅಧ್ಯಾಯವು ಸ್ಥಳಾಂತರಗೊಂಡ ಸಂತ್ರಸ್ತರುಗಳ ಜೀವನದ ಮೇಲಾದ ಆರ್ಥಿಕ ಪರಿಣಾಮಗಳ ಮೇಲೆ ಬೆಳಕು ಚೆಲ್ಲುತ್ತದೆ. ಆರ್ಥಿಕ ಪರಿಣಾಮಗಳು ಸಂತ್ರಸ್ತರ ಸಾಮಾನ್ಯ ಜನಜೀವನ ಮತ್ತು ಸಾಮಾಜಿಕ ಚಟುವಟುಕೆಗಳ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರುತ್ತದೆ ಎಂಬುವುದನ್ನು ತಿಳಿಯಲು ಸಾಧ್ಯವಾಗುತ್ತದೆ. ಪ್ರಸ್ತುತ ಯೋಜನೆಯ ಸಂತ್ರಸ್ತರುಗಳಿಗೆ ದೊರಕಿದ ನಗದು ಪರಿಹಾರ ಕೌಟುಂಬಿಕ ಘರ್ಷಣೆಗಳಿಗೆ ಕಾರಣವಾಗಿ ಕುಟುಂಬಗಳ ವಿಘಟನೆ ಮತ್ತು ಸಂಬಂಧಗಳ ಹಳಸುವಿಕೆಗೆ ಕಾರಣವಾಯಿತು. ಹಿಂದೆ ಒಗ್ಗಟ್ಟಿನಲ್ಲಿ ಇದ್ದಂತಹ ಕುಟುಂಬಗಳನ್ನು ಪರಸ್ಪರ ದಾಯಾದಿಗಳಾಗಿ ಪರಿವರ್ತಿಸುವಲ್ಲಿ ಯೋಜನೆ ಕಾರಣವಾಯಿತು. ಇದರ ಪರಿಣಾಮವಾಗಿ ಹಿಂದೆ ಅವಿಭಕ್ತ ಕುಟುಂಬಗಳಾಗಿದ್ದವುಗಳು ಪರಿಹಾರದ ನಗದು ಹಣದ ಹಂಚಿಕೆ, ಉದ್ಯೋಗಾವಕಾಶ ಯಾರಿಗೆ ನೀಡಬೇಕು, ನಿವೇಶನ ಯಾರ ಹೆಸರಿನಲ್ಲಿ ಇರಬೇಕು ಎಂಬಿತ್ಯಾದಿ ಕಾರಣಗಳಿಂದಾಗಿ ವಿಘಟನೆಯಾಗಿ ವಿಭಕ್ತ ಕುಟುಂಬಗಳಾಗುವುದಕ್ಕೆ ಹೇತುವಾಯಿತು.

ಭೂಸ್ವಾಧೀನ ಪ್ರಾಧಿಕಾರದಿಂದ ಪರಿಹಾರವನ್ನು ಪಡೆದ ಹೆಚ್ಚಿನ ಸಂತ್ರಸ್ತರುಗಳು ಕುಟುಂಬದ ಇತರ ಸದಸ್ಯರೊಡನೆ ಅದನ್ನು ಹಂಚಿಕೊಳ್ಳಲು ಒಪ್ಪದೇ ಇದ್ದುದರಿಂದ ಕೌಟುಂಬಿಕ ಮನಸ್ತಾಪಗಳಲ್ಲಿ ಹೆಚ್ಚಳವಾಗಿ ವಿಘಟನೆಗಳಿಗೆ ಕಾರಣವಾಯಿತು. ಭೂಸ್ವಾಧಿನಕ್ಕೆ ಸಂಬಂಧಿಸಿದಂತೆ ಉದ್ಯೋಗಾವಕಾಶಗಳನ್ನು ಪರಿಹಾರವಾಗಿ ಪಡೆದ ಮಕ್ಕಳು ತಮ್ಮ ಹೆತ್ತವರನ್ನು ನಿಕೃಷ್ಟವಾಗಿ ಕಾಣಲಾರಂಭಿಸಿ ಹೊಸದಾಗಿ ಸೃಷ್ಟಿಯಾದ ಶ್ರೇಣೀಕೃತ ಆರ್ಥಿಕ ವ್ಯವಸ್ಥೆಗಳಿಗೆ ಅನುಗುಣವಾಗಿ ಕುಟುಂಬ ಮತ್ತು ಸಮುದಾಯಗಳ ನಡುವೆ ಇದ್ದಂತಹ ಭಾವನಾತ್ಮಕ ಸಂಬಂಧಗಳು ಬಿರುಕು ಬಿಡಲು ಅವಕಾಶ ಮಾಡಿಕೊಟ್ಟಿತು. ಉದ್ಯೋಗವನ್ನು ಪಡೆದ ಕುಟುಂಬದ ಫಲಾನುಭವಿಗಳು ತಮ್ಮ ಕುಟುಂಬವನ್ನು ತೊರೆದು ಉತ್ತಮ ಜೀವನವನ್ನು ನಡೆಸಲು ಆರಂಭಿಸಿದರೆ ಅವರುಗಳ ಅವಲಂಬಿತರು ವ್ಯಥೆಯಲ್ಲಿಯೇ ಜೀವನ ನಡೆಸುವಂತಾಯಿತು.

ಸಮಾಜದ ಮೇಲೆ ತಮ್ಮ ಪ್ರಭಾವವನ್ನು ಬೀರಲು ಶಕ್ತರಾಗಿರುವ ಮೇಲ್‌ಜಾತಿಯ ಮತ್ತು ಆರ್ಥಿಕವಾಗಿ ಬಲಿಷ್ಠರಾಗಿದ್ದ ಭೂಮಿಯನ್ನು ಕಳೆದುಕೊಂಡ ಸ್ಥಿತಿವಂತ ಸಂತ್ರಸ್ತರುಗಳು ಅಭಿವೃದ್ಧಿಯ ಹಾಗೂ ಪರಿಹಾರದ ಫಲಗಳನ್ನು ಉಪಯೋಗಿಸುವುದರಲ್ಲಿ ಯಶಸ್ವಿಯಾದರು. ಬಜ್ಪೆ ಸಮೀಪದ ಕುಡುಬಿಪದವಿನಲ್ಲಿ ಹಿಂದಿನಿಂದಲೂ

ನೆಲೆಸಿಕೊಂಡು ಬಂದಿದ್ದ ಪರಿಶಿಷ್ಟ ವರ್ಗಕ್ಕೆ ಸೇರಿದ 30 ಕುಟುಂಬಗಳ 24 ಎಕ್ರೆ ಪ್ರದೇಶವನ್ನು ಬಲವಂತದ ಮೂಲಕ ಸ್ವಾಧೀನಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಭೂಸ್ವಾಧೀನ ಪ್ರಾಧಿಕಾರ ಆ ಭೂಮಿಯನ್ನು ಪೆರ್ಮುದೆ ಗ್ರಾಮದಲ್ಲಿ ಪ್ರಭಾವಶಾಲಿ ಗುತ್ತಿನ ಮನೆಗಳಿಗೆ ಸೇರಿದ ಸಂತ್ರಸ್ತರುಗಳಿಗೆ ಮನೆ ನೀಡಿ ನಿವೇಶನ, ಕಂಬಳ ಇತ್ಯಾದಿ ಸಾಂಪ್ರದಾಯಿಕ ಕ್ರೀಡೆಗಳಿಗೆ ಅವಕಾಶ ಮಾಡಿಕೊಟ್ಟಿರುತ್ತದೆ. ಭೂಮಿಯನ್ನು ಕಳೆದುಕೊಂಡು ನಿರ್ವಸಿತರಾದ ಪರಿಶಿಷ್ಟ ವರ್ಗಕ್ಕೆ ಸೇರಿದ ಸಂತ್ರಸ್ತರು ಇನ್ನೂ ಸೂಕ್ತ ಪರಿಹಾರಕ್ಕಾಗಿ ನ್ಯಾಯಾಲಯಗಳಿಗೆ ಅಲೆಯುವಂತಹ ಪ್ರಸಂಗ ನಿರ್ಮಾಣವಾಗಿರುವುದು ಯಾವ ರೀತಿಯಲ್ಲಿ ಸಮಾಜದ ಬಲಿಷ್ಟ ಜಾತಿ, ಶ್ರೀಮಂತ ಕುಟುಂಬಗಳು ಅಭಿವೃದ್ಧಿಯ ಫಲವನ್ನು ಸಂತೋಷ ಮತ್ತು ತೃಪ್ತಿಯಿಂದ ಅನುಭವಿಸುತ್ತಿದ್ದಾರೆ ಎಂಬುದಕ್ಕೆ ಅತ್ಯುತ್ತಮ ಉದಾಹರಣೆಯಾಗಿರುತ್ತದೆ.

ಸಮಾನತೆ ಮತ್ತು ನ್ಯಾಯದ ಪರಿಕಲ್ಪನೆಗಳು ಹೊಸ ಸಂಸ್ಕೃತಿ ಮತ್ತು ಮೌಲ್ಯಗಳ ಪರಿಚಯದಿಂದಾಗಿ ಹುಟ್ಟಿಕೊಂಡು ಸಮಾಜದ ತುಳಿತಕ್ಕೊಳಪಟ್ಟ ಜನಸಮುದಾಯದ ಮೇಲೆ ಪ್ರಭಾವ ಬೀರಲಾರಂಭಿಸಿತು. ಅವರುಗಳು ತಮ್ಮ ಹಿಂದಿನ ಊಳಿಗಮಾನ್ಯ ಯಜಮಾನಿಕೆಯ ಆಧೀನವಾಗಿ ಕಾರ್ಯನಿರ್ವಹಿಸಲು ಇಷ್ಟಪಡದೆ ಸ್ವತಂತ್ರವಾಗಿ ಪುನರ್‌ವಸತಿ ಕಾಲನಿಗಳಲ್ಲಿ ಬುದುಕುವುದನ್ನು ಇಷ್ಟಪಟ್ಟರು. ಪ್ರಸ್ತುತ ಯೋಜನೆಯ ಜಾರಿಯಿಂದಾಗಿ ಸಂತೋಷ ಪಟ್ಟವರು ಹಿಂದಿನಿಂದಲೂ ಶ್ರೀಮಂತ ಭೂಮಾಲಿಕರ ಆಧೀನದಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದ ಕಾರ್ಮಿಕರು ಎಂಬುದಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದ್ದು ಪುನರ್‌ವಸತಿ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಿ ಜೀವನವನ್ನು ನಡೆಸುತ್ತಿರುವ ಅವರುಗಳ ಅಭಿಪ್ರಾಯದಂತೆ ಇನ್ನು ಯಾರ ಮೇಲೂ ನಮ್ಮ ಜೀವನಕ್ಕಾಗಿ ಅವಲಂಬಿತರಾಗುವ ಪ್ರಮೇಯವೇ ಇಲ್ಲ, ಕೃಷಿ ಕಾರ್ಮಿಕರಾಗಿದ್ದ ನಾವು ಈಗ ನಿರ್ಮಾಣ ಕಾಮಗಾರಿಗಳಲ್ಲಿ ಕಾರ್ಮಿಕರಾಗಿ ದುಡಿದು ಯಾರ ಹಂಗೂ ಇಲ್ಲದೇ ಬದುಕುವ ಪರಿಸ್ಥಿತಿಯು ನಿರ್ಮಾಣವಾಗಿರುತ್ತದೆ. ಮನೆಗಳ ಸ್ವಾಧೀನಕ್ಕಾಗಿ ನೀಡಲ್ಪಟ್ಟ ಪರಿಹಾರಗಳನ್ನು ಪಡೆದು ಪುನರ್‌ವಸತಿ ಕಾಲನಿಗಳಲ್ಲಿ ಸಂತೃಪ್ತರಾಗಿ ಬದುಕುವಂತಾಗಿದೆ ಎಂಬ ಅನಿಸಿಕೆಗಳು ಅವರುಗಳು ಯೋಜನೆಯಿಂದಾಗಿ ಹೊಸ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿರುತ್ತದೆಯೆಂಬುದನ್ನು ತಿಳಿಸುತ್ತದೆ.

ಆರ್ಥಿಕ ಸ್ವಾವಲಂಬಿಗಳಾಗಿ ಸ್ವಾಭಿಮಾನದಿಂದ ಜೀವಿಸುತ್ತಿದ್ದ ಸ್ವಾಧೀನಪಡಿಸಲಾದ ಭೂಮಿಯ ಮಾಲೀಕರನ್ನು ಯೋಜನೆಯ ಪ್ರಾಧಿಕಾರ ಮೂರ್ಖರನ್ನಾಗಿ ಮಾಡಿರುವುದು ಕಂಡುಬಂದಿರುತ್ತದೆ. ಸಂತ್ರಸ್ತರಿಗೆ ಅತ್ಯುತ್ತಮ ಪರಿಹಾರದ ಪ್ಯಾಕೇಜ್, ಸುಸಜ್ಜಿತ ಪುನರ್‌ವಸತಿ ಕಾಲನಿಗಳು, ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಆಕರ್ಷಕ ವೇತನವನ್ನೊಳಗೊಂಡ ಉದ್ಯೋಗವಕಾಶಗಳು ಎಂಬ ಭರವಸೆಗಳು ಇನ್ನೂ ಸಂಪೂರ್ಣವಾಗಿ ಪೂರೈಸಲ್ಪಡಲಿಲ್ಲ. ಪ್ರಭಾವಶಾಲಿ ಹಾಗೂ ಅದೃಷ್ಟವಂತ ಭೂಸಂತ್ರಸ್ತರುಗಳು ತಮ್ಮ ಹಿತಾಸಕ್ತಿಯನ್ನು ಬಲವಾಗಿ ಪ್ರತಿಪಾದಿಸಿ ಹೆಚ್ಚು ಲಾಭಗಳನ್ನು, ಅವಕಾಶಗಳನ್ನು ಪಡೆದಿರುವುದು ಎದ್ದು ಕಾಣುತ್ತದೆ. ಪರಿಹಾರವಾಗಿ

ದೊರೆತ ನಗದು ಹಣವನ್ನು ಹೆಚ್ಚಿನ ಸಂತ್ರಸ್ತರು ಪುನರ್‌ವಸತಿ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣ ಹಾಗೂ ತಮ್ಮ ಸಾಮಾಜಿಕ, ಆರ್ಥಿಕ ಅವಶ್ಯಕತೆಗಳಿಗನುಸಾರವಾಗಿ ಖರ್ಚು ಮಾಡಿ ತಮ್ಮ ಕೈಯನ್ನು ಬರಿದು ಮಾಡಿಕೊಂಡು ಪ್ರಸ್ತುತ ಜೀವನವನ್ನು ನಡೆಸುವುದಕ್ಕೆ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿರುವುದು ವ್ಯವಸ್ಥೆಯ ವ್ಯಂಗ್ಯ ಎಂದು ಹೇಳಬಹುದು. ತಮ್ಮ ಸಾಂಪ್ರದಾಯಿಕ ಕೃಷಿ ಚಟುವಟಿಕೆಗಳು, ಉದ್ಯೋಗಗಳನ್ನು ಕಳೆದುಕೊಂಡು ಬಲವಂತದಿಂದ ಜೀವನ ನಿರ್ವಹಣೆಗಾಗಿ ಕೈಗಾರಿಕಾ ಕಾರ್ಮಿಕರಾಗಿ, ಅಂಗಡಿಗಳಲ್ಲಿ ಮಾರಾಟ ಪ್ರತಿನಿಧಿಗಳಾಗಿ, ವಾಹನಗಳ ಚಾಲಕರಾಗಿ, ಸಣ್ಣ ವ್ಯಾಪಾರಸ್ಥರಾಗಿ ಬದಲಾಗಿರುವುದು, ಇವುಗಳನ್ನು ಮಾಡುವುದಕ್ಕೆ ಯಾವುದೇ ವಿಶೇಷ ಕೌಶಲ್ಯಗಳನ್ನು ಹೊಂದಿಲ್ಲದೆ ಪರಿತಪಿಸುವುದು ಕಂಡು ಬಂದಿರುತ್ತದೆ. ಕಾಮಗಾರಿಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿರುವವರಲ್ಲಿ ಹೆಚ್ಚಿನವರು ತಮ್ಮ ದುಡಿಮೆಗೆ ಸಂಪೂರ್ಣ ವೇತನವನ್ನು ಪಡೆಯದೆ ಮಧ್ಯವರ್ತಿಗಳಿಂದ ಶೋಷಣೆಗೆ ಒಳಗಾಗಿರುವುದು, ಪರಿಸ್ಥಿತಿಯು ಕೃಷಿಕರು ಮತ್ತು ಕೃಷಿ ಕಾರ್ಮಿಕರನ್ನು ಯಾವ ಸ್ಥಿತಿಗೆ ತಂದಿರುತ್ತದೆಯೆಂದು ತಿಳಿಸುತ್ತದೆ. ಇದೆಲ್ಲದರ ಪರಿಣಾಮವಾಗಿ ತಮ್ಮ ಪೂರ್ವನೆಲೆಗಳಲ್ಲಿ ಸಾಲವೆಂದರೆ ಏನೆಂದು ಗೊತ್ತಿಲ್ಲದ ಸಂತ್ರಸ್ತರು ಹೊಸ ನೆಲೆಗಳಲ್ಲಿ ಸಾಲಗಳನ್ನು ಅನೌಪಚಾರಿಕ ಸಂಸ್ಥೆ, ವ್ಯಕ್ತಿಗಳಿಂದ ಪಡೆದು ಹೊರಬರಲಾಗದಂತಹ ವಿಷವರ್ತುಲದೊಳಗೆ ಸಿಲುಕಿ ಒದ್ದಾಡುತ್ತಿದ್ದಾರೆ. ಭೂಸ್ವಾಧೀನಕ್ಕಿಂತ ಮೊದಲು ಉತ್ತಮ ಮಾಸಿಕ ವೇತನಗಳನ್ನು ತಮ್ಮ ಕೃಷಿ ಚಟುವಟಿಕೆಗಳಿಂದ ಪಡೆಯುತ್ತಿದ್ದವರ ಪ್ರಸ್ತುತ ಮಾಸಿಕ ವರಮಾನದಲ್ಲಿ ಭಾರಿ ಇಳಿಕೆಯಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದಿರುತ್ತದೆ. ಒಟ್ಟಿನಲ್ಲಿ ರಾಷ್ಟ್ರದ ಅಭಿವೃದ್ಧಿಗಾಗಿ ದೊಡ್ಡ ಮಟ್ಟದ ಆರ್ಥಿಕ ಮತ್ತು ಸಾಮಾಜಿಕ ಬೆಲೆಯನ್ನು ತೆತ್ತಿರುವ ಪ್ರಸ್ತುತ ಯೋಜನೆಯ ಜಾರಿಗಾಗಿ ಭೂಮಿಯನ್ನು ಕಳೆದುಕೊಂಡಿರುವ ಸಂತ್ರಸ್ತರುಗಳ ತ್ಯಾಗವನ್ನು ಪರಿಗಣಿಸದೆ ಇರುವುದು ವ್ಯವಸ್ಥೆಯ ದೊಡ್ಡ ದುರಂತವೆಂದು ಹೇಳಬಹುದು.

ಪರಾಮರ್ಶನ ಗ್ರಂಥಗಳು ಮತ್ತು ಕೊನೆ ಟಿಪ್ಪಣಿಗಳು

[1] ಮೈಕೆಲ್ ಸೆರ್ನ್ಯಾ, (1999)ವೈ ಎಕನಾಮಿಕ್ ಎನಾಲಿಸಿಸ್ ಈಸ್ ಎಸೆನ್ಸಿಯಲ್ ಟು ರಿಸೆಟ್ಲ್‌ಮೆಂಟ್, ಎ ಸೋಶಿಯಾಲಜಿಸ್ಟ್ ವ್ಯೂ: ವಾಷಿಂಗ್‌ಟನ್ ಡಿಸಿ, ವರ್ಲ್ಡ್ ಬ್ಯಾಂಕ್. ಪುಟ 129–165.

[2] ಮೈಕೆಲ್ ಸೆರ್ನ್ಯಾ, (1998) ಇನ್‌ವಾಲ್ಯೆಂಟರಿ ರೀಸೆಟ್ಲ್‌ಮೆಂಟ್ ಇನ್ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಪಾಲಿಸಿ ಗೈಡ್ ಲೈನ್ಸ್ ಇನ್ ವರ್ಲ್ಡ್ ಬ್ಯಾಂಕ್ ಫೈನಾನ್ಸ್‌ಡ್ ಪ್ರಾಜೆಕ್ಟ್ಸ್, ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟಈನ್ ಡಿ.ಸಿ. ಪುಟ 3–14.

[3] ಫೆರ್ನಾಂಡೀಸ್, ವಾಲ್ಟೆರ್ ಎಂಡ್ ಮಹಮ್ಮದ್ ಆಸಿಫ್(1997) ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್ ಇನ್ ಒರಿಸ್ಸಾ, 1951 ಟು 1995, ಎ ಡಾಟಾ ಬೇಸ್‌ಡ್ ಒನ್ ದ ಎಕ್ಸಟೆಂಟ್ ಎಂಡ್ ನೇಚರ್, ನ್ಯೂಡೆಲ್ಲಿ, ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್. ಪುಟ 18–27.

[4] ಜೋಷಿ ಬಿ.ಎಲ್. (1982) ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್, ಪರಿಮಳ ಪ್ರಕಾಶನ, ಔರಂಗಾಬಾದ್. ಪುಟ 182–199.

[5] ಅದೇ. ಪುಟ 182–199.

[6] ಸಾಯಿನಾಥ ಪಿ., (2004) ಎವರಿವನ್ ಲವ್ಸ್ ಎ ಗುಡ್ ಡ್ರೌಟ್, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 32–48.

[7] ರೆಡ್ಡಿ, ಐ.ಯು.ಬಿ., (1992) ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್, ಮಿತ್ತಲ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ. ಪುಟ 3–138.

[8] ಸತ್ಯನಾರಾಯಣ ಜಿ.(1999) ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ. ಪುಟ 13–196.

[9] ಮೈಕೆಲ್ ಸೆರ್ನ್ಯಾ, (1999) ದ ಇಕನಾಮಿಕ್ಸ್ ಆಫ್ ಇನ್‌ವಾಲ್ಯೆಂಟರಿ ರಿಸೆಟ್ಲ್‌ಮೆಂಟ್, ಕ್ವಶ್ಚನ್ಸ್ ಎಂಡ್ ಚಾಲೆಂಜಸ್ (ಸಂ), ವರ್ಲ್ಡ್ ಬ್ಯಾಂಕ್ ವಾಷಿಂಗ್‌ಟನ್ ಡಿ.ಸಿ. ಪುಟ 32–63.

[10] ಇನಾಕ್ಷಿ ಗಂಗೂಲಿ ತುಕ್ರಾಲ್, (1988), "ಡ್ಯಾಮ್ಸ್: ಫಾರ್ ಹೂಸ್ ಡೆವಲಪ್‌ಮೆಂಟ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 38, ಎಪ್ರಿಲ್–ಜೂನ್. ಪುಟ 211–230.

[11] ಸತ್ಯನಾರಾಯಣ ಜಿ.(1999) ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ. ಪುಟ 13–196.

[12] ಡಾ. ಆರ್. ಜಾನಕಿ ರಾವ್(2012) ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್ – ಎ ಕೇಸ್ ಸ್ಟಡಿ, ಆಕಾಂಕ್ಷ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ. ಪುಟ 1–197.

[13] ಅದೇ. ಪುಟ 1–197.

[14] ಡೇವಿಡ್ ಮರ್ಸ್ಡೆನ್, (1998), ರಿಸೆಟ್ಲ್‌ಮೆಂಟ್ ಎಂಡ್ ರೀಹೆಬಿಲಿಟೇಷನ್ ಇನ್ ಇಂಡಿಯಾ : ಸಮ್ ಲೆಸನ್ಸ್ ಫ್ರಮ್ ರೀಸೆಂಟ್ ಎಕ್ಸ್‌ಪೀರಿಯೆನ್ಸ್ ಇನ್ ಎಚ್.ಎಮ್. ಮಥೂರ್ ಎಂಡ್ ಡೇವಿಡ್ ಮರ್ಸಿಡನ್(ಸಂ.) ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್ ಎಂಡ್ ಇಂಪವರಿಸ್‌ಮೆಂಟ್ ರಿಸ್ಕ್ಸ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ. ಪುಟ 162–184.

[15] ಸಿಂಗ್, ಮೃದುಲಾ(1992) ಡಿಸ್‌ಪ್ಲೇಸ್‌ಮೆಂಟ್ ಬೈ ಸರ್ದಾರ್ ಸರೋವರ್ ಎಂಡ್ ತೇಹ್ರಿ, ಎ ಕಂಪ್ಯಾರೇಟಿವ್ ಸ್ಟಡಿ ಆಫ್ ಟು ಡ್ಯಾಮ್ಸ್, ಮಲ್ಟಿಪಲ್ ಆ್ಯಕ್ಷನ್ ರಿಸರ್ಚ್ ಗ್ರೂಪ್ ಪಬ್ಲಿಕೇಷನ್ಸ್, ಮಾರ್ಚ್. ಪುಟ 27–32.

[16] ಕೈವಲ್ಯ ದೇಸಾಯಿ, ವಿನೀತ್ ಜೈನ್, ರಾಹುಲ್ ಪಾಂಡೆ, ಶ್ರೀಕಾಂತ್ ಪಿ., ಉಪಮನ್ಯು ತ್ರಿವೇದಿ(2009) "ರೀಹೆಬಿಲಿಟೇಷನ್ ಆಫ್ ದ ಇಂದಿರಾಸಾಗರ್ ಪರಿಯೋಜನಾ ಡಿಸ್‌ಪ್ಲೇಸ್‌ಡ್". ಎಕನಾಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ, ಡಿಸಂಬರ್ 22, ವಾಲ್ಯೂಮ್ 44, ನಂ.51, ಪುಟ 29–32.

[17] ಡಾ. ಆರ್. ಜಾನಕಿ ರಾವ್(2012) ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್ – ಎ ಕೇಸ್ ಸ್ಟಡಿ, ಆಕಾಂಕ್ಷ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ. ಪುಟ 1–197.

[18] ಕೈವಲ್ಯ ದೇಸಾಯಿ, ವಿನೀತ್ ಜೈನ್, ರಾಹುಲ್ ಪಾಂಡೆ, ಶ್ರೀಕಾಂತ್ ಪಿ., ಉಪಮನ್ಯು ತ್ರಿವೇದಿ(2009) "ರೀಹೆಬಿಲಿಟೇಷನ್ ಆಫ್ ದ ಇಂದಿರಾಸಾಗರ್ ಪರಿಯೋಜನಾ ಡಿಸ್‌ಪ್ಲೇಸ್‌ಡ್". ಎಕನಾಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ, ಡಿಸಂಬರ್ 22, ವಾಲ್ಯೂಮ್ 44, ನಂ.51, ಪುಟ 29–32.

[19] ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಚೇರಿಯಿಂದ ವಿಶೇಷ ಆರ್ಥಿಕ ವಲಯದ ಸ್ಥಾಪನೆಗೆ ಸಂಬಂಧಪಟ್ಟಂತೆ ಸ್ವಾಧೀನಪಡಿಸಿದ ಭೂಮಿಯ ಸಂತ್ರಸ್ತರಿಗೆ ನೀಡಲ್ಪಟ್ಟ ಉದ್ಯೋಗಾವಕಾಶಗಳ ಅಂಕಿ ಅಂಶಗಳು. (ಅಗೋಸ್ಟ್ 2015ರವರೆಗೆ)

[20] ಅದೇ.

[21] ಶಂಕರ್ ವೆಂಕಟೇಶನ್(2007), ಇಂಡಸ್ಟ್ರಿಯಲ್ ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಷನ್, ಅನು ಪಬ್ಲಿಷರ್ಸ್, ಮೀರತ್. ಪುಟ 6–214.

[22] ಮಂಗಳೂರು ವಿಶೇಷ ಆರ್ಥಿಕ ವಲಯದ ಕಛೇರಿಯಿಂದ ಸಂತ್ರಸ್ತರ ಅವಲಂಬಿತರಿಗೆ ಮಂಗಳೂರಿನ ಪಾಲಿಟೆಕ್ನಿಕ್‌ನಲ್ಲಿ ತಾಂತ್ರಿಕ ಶಿಕ್ಷಣವನ್ನು ನೀಡಿದುದರ ಬಗೆಗೆ ಪಡೆದ ಮಾಹಿತಿ. (ಆಗೋಸ್ಟ್, 2015ರವರೆಗೆ).

[23] ಸತ್ಯನಾರಾಯಣ ಜಿ.(1999) ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ. ಪುಟ 13–196.

[24] ಅದೇ. ಪುಟ 13–196.

[25] ಸಿಂಗ್, ಮೃದುಲಾ(1992) ಡಿಸ್‌ಪ್ಲೇಸ್‌ಮೆಂಟ್ ಬೈ ಸರ್ದಾರ್ ಸರೋವರ್ ಎಂಡ್ ತೇಹ್ರಿ, ಎ ಕಂಪ್ಯಾರೇಟಿವ್ ಸ್ಟಡಿ ಆಫ್ ಟು ಡ್ಯಾಮ್ಸ್, ಮಲ್ಟಿಪಲ್ ಆ್ಯಕ್ಷನ್ ರಿಸರ್ಚ್ ಗ್ರೂಪ್ ಪಬ್ಲಿಕೇಷನ್ಸ್, ಮಾರ್ಚ್. ಪುಟ 27–32.

[26] ಅದೇ. ಪುಟ 27–32.

[27] ಅದೇ. ಪುಟ 27–32.

ಅಧ್ಯಾಯ – 5

ಸ್ಥಳಾಂತರ ಮತ್ತು ಪುನರ್‌ವಸತಿಯನ್ನು ಸಂತ್ರಸ್ತರು, ಹೋರಾಟಗಾರರು ಮತ್ತು ಅಧಿಕಾರಿಗಳು ಅರ್ಥೈಸಿಕೊಂಡ ರೀತಿ

ಅಧ್ಯಾಯ – 5

ಸ್ಥಳಾಂತರ ಮತ್ತು ಪುನರ್‌ವಸತಿಯನ್ನು ಸಂತ್ರಸ್ತರು, ಹೋರಾಟಗಾರರು ಮತ್ತು ಅಧಿಕಾರಿಗಳು ಅರ್ಥೈಸಿಕೊಂಡ ರೀತಿ

ಕೈಗಾರಿಕೆಗಳ ಸ್ಥಾಪನೆ ಮತ್ತು ಗಣಿಗಾರಿಕಾ ಚಟುವಟಿಕೆಗಳಿಂದ ನಿರ್ವಸಿತರಾಗುವ ಸಂತ್ರಸ್ತರುಗಳು ವೈವಿಧ್ಯಮಯ ಹಿತಾಸಕ್ತಿ ಮತ್ತು ಬೇಡಿಕೆಗಳನ್ನು ವ್ಯಕ್ತಪಡಿಸುತ್ತಿರುವುದು ಪ್ರಸ್ತುತ ಕ್ಷೇತ್ರದಲ್ಲಿ ಹಿಂದೆ ನಡೆದ ವಿವಿಧ ಅಧ್ಯಯನಗಳು ಉಲ್ಲೇಖಿಸಿರುತ್ತದೆ. ಅಣೆಕಟ್ಟುಗಳ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿದ ಸಂದರ್ಭಗಳಲ್ಲಿ ಭೂಮಿಯನ್ನು ಕಳೆದುಕೊಳ್ಳುವ ಬಹುತೇಕ ಸಂತ್ರಸ್ತರುಗಳು ಯೋಜನೆಗಳನ್ನು ವಿರೋಧಿಸಿ ಪ್ರತಿಭಟನೆಗಳನ್ನು ನಡೆಸಿರುವುದು ಕಂಡುಬಂದರೆ, ಕೈಗಾರಿಕೆಗಳ ಸ್ಥಾಪನೆಗೋಸ್ಕರ ಭೂಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರು ಒಟ್ಟಾಗಿ ಪ್ರತಿಭಟನೆಗಳನ್ನು ನಡೆಸುವುದು ಹೆಚ್ಚಾಗಿ ಕಾಣಸಿಗುವುದಿಲ್ಲ. ಕೈಗಾರಿಕೆಗಳ ಸ್ಥಾಪನೆಯು ಸ್ಥಳೀಯ ಜನರನ್ನು ಸ್ಥಳಾಂತರ ಮಾಡಿದರೂ ಅವರುಗಳಿಗೆ ಆಕರ್ಷಕವಾದ ಆರ್ಥಿಕ ಸವಲತ್ತುಗಳನ್ನು ಒದಗಿಸುವ ಭರವಸೆಗಳನ್ನು ನೀಡುವುದು ಇವುಗಳಿಗೆ ಪ್ರಮುಖ ಕಾರಣವಾಗಿರುತ್ತದೆ. ಪರಿಹಾರದ ರೂಪದಲ್ಲಿ ನೀಡಲ್ಪಡುವ ನಗದು, ನಿವೇಶನ, ಉದ್ಯೋಗಗಳು ಮತ್ತು ಪುನರ್‌ವಸತಿ ಕಾಲನಿಗಳಲ್ಲಿ ನಗರಗಳಲ್ಲಿರುವಂತಹ ಸುಸಜ್ಜಿತ ಆಧುನಿಕ ಸೌಲಭ್ಯಗಳು ದೊರಕುವುದರಿಂದ ಸ್ಥಳಾಂತರದ ಪೂರ್ವಕ್ಕಿಂತಲೂ ಮುಂದೆ ಉತ್ತಮ ಬದುಕನ್ನು ನಡೆಸಬಹುದು ಎಂಬ ಕಲ್ಪನೆ ಸಂತ್ರಸ್ತರುಗಳು ಭೂಸ್ವಾಧೀನ ಪ್ರಕ್ರಿಯೆಯನ್ನು ಹೆಚ್ಚು ಪ್ರಬಲವಾಗಿ ವಿರೋಧಿಸದಂತೆ ತಡೆಗಟ್ಟುತ್ತದೆ. 'ಸ್ಥಾಪಿಸಲ್ಪಡುವಂಥ ಕೈಗಾರಿಕೆಗಳು ಸಂತ್ರಸ್ತ ಕುಟುಂಬಗಳ ಸದಸ್ಯರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವುದಷ್ಟೇ ಅಲ್ಲದೇ ಪರ್ಯಾಯ ಆರ್ಥಿಕ ಅವಕಾಶಗಳನ್ನೂ ಒದಗಿಸುತ್ತದೆ'[1] ಎಂಬ ಹಿಂದೆ ನಡೆದ ಅಧ್ಯಯನಗಳ ಕಂಡುಕೊಳ್ಳುವಿಕೆಯು ದೊರಕಿದ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡ ಸಂತ್ರಸ್ತ ಕುಟುಂಬಗಳಲ್ಲಿ ವರಮಾನ ಮತ್ತು ಜೀವನಶೈಲಿಯಲ್ಲಿ ಉನ್ನತಿ ಆಗಿರುವುದನ್ನು ತೋರಿಸುತ್ತದೆ. ಸಾಮಾನ್ಯವಾಗಿ ಯೋಜನೆಗಳ ಸ್ಥಾಪನೆಯಿಂದ ತೊಂದರೆಗೊಳಗಾದ ಹೆಚ್ಚಿನ ಕುಟುಂಬಗಳು ಅವುಗಳ ವಿರುದ್ಧ ಧ್ವನಿ ಎತ್ತುವುದಿಲ್ಲ. 'ಕೈಗಾರಿಕೆಗಳ ಸ್ಥಾಪನೆಯಿಂದ ಲಾಭವನ್ನು ಪಡೆಯುವ ಗುಂಪುಗಳು ಅವುಗಳ ಪರವಾಗಿ ವಾದಿಸುವುದು ರಾಜಕೀಯ ಸಂಬಂಧಗಳನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತದೆ'[2] ಎಂಬ ಕಂಡುಕೊಳ್ಳುವಿಕೆ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ ಜನಸಮುದಾಯವನ್ನು ಒಂದೇ ವೇದಿಕೆಯಲ್ಲಿ ಒಟ್ಟು ಸೇರಿಸುವುದನ್ನು ಅತ್ಯಂತ ಕಷ್ಟಕರವಾಗಿಸುತ್ತದೆ. ಜನರನ್ನು ಸಂಕಷ್ಟಗಳಿಗೆ ಈಡುಮಾಡುವ, ಲಾಭ ನಷ್ಟಗಳನ್ನು ತಂದೊಡ್ಡುವ ಪ್ರಕ್ರಿಯೆಯನ್ನು ವಿಶ್ಲೇಷಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗಿರುತ್ತದೆ.

ಪ್ರೌಢ ಪ್ರಬಂಧದ ಮೂರನೇ ಅಧ್ಯಾಯದಲ್ಲಿ ಸ್ಥಳಾಂತರದಿಂದಾದ ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳನ್ನು ವಿವರವಾಗಿ ಚರ್ಚಿಸಲಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಂತಹ ಹೆಚ್ಚಿನ ಅಭಿವೃದ್ಧಿ ಚಟುವಟಿಕೆಗಳಂತೆ, ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಯಿಂದ ಸ್ಥಳಾಂತರಗೊಂಡ ಸಂತ್ರಸ್ತರ ಸಾಮಾಜಿಕ ಚೌಕಟ್ಟಿನಲ್ಲಿ ಏರುಪೇರಿಗೆ ಕಾರಣವಾಗಿ, ಕೌಟುಂಬಿಕ ವಿಘಟನೆ ಮತ್ತು ಘರ್ಷಣೆಗೆ ಅವಕಾಶವಾಗಿರುವುದು ಕಂಡುಬರುತ್ತದೆ. ನಾಲ್ಕನೇಯ ಅಧ್ಯಾಯದಲ್ಲಿ ಸ್ಥಳಾಂತರವು ಸಂತ್ರಸ್ತರ ಆರ್ಥಿಕ ಚಟುವಟಿಕೆಗಳಲ್ಲಿ ನೇರ ಪರಿಣಾಮವನ್ನು ಬೀರಿ, ಅವರ ವೃತ್ತಿಯಲ್ಲಿ ಬದಲಾವಣೆಗಳಾಗಿ ಹೊಸ ಪ್ರದೇಶದಲ್ಲಿ ವರಮಾನದ ಕುಸಿತಕ್ಕೆ ಕಾರಣವಾಗಿರುವುದನ್ನು ವಿವರಿಸಲಾಗಿರುತ್ತದೆ. ಪರಿಹಾರವಾಗಿ ದೊರಕಿದ ನಗದು ಹಣವನ್ನು ಭವಿಷ್ಯತ್ತಿನ ಜೀವನದ ದೂರಾಲೋಚನೆ ಇಲ್ಲದೇ ಅನುತ್ಪಾದಕ ಚಟುವಟಿಕೆಗಳಾದ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ ಮನೆಗಳ ನಿರ್ಮಾಣ, ಅವಲಂಬಿತ ಮಕ್ಕಳ ಆಡಂಬರದ ಮದುವೆಗಳಿಗೆ, ವಿದ್ಯುನ್ಮಾನ ಉಪಕರಣ, ವಾಹನಗಳ ಖರೀದಿಗೆ ಹಾಗೂ ಐಷಾರಾಮಿ ಜೀವನವನ್ನು ನಡೆಸುವುದಕ್ಕೆ ವಿನಿಯೋಗಿಸಿ ಪ್ರಸ್ತುತ ಜೀವನ ನಿರ್ವಹಣೆಗೆ ಪರದಾಟ ನಡೆಸುವುದನ್ನು ವಿವರಿಸಲಾಗಿರುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಯೋಜನೆಗಾಗಿ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರು, ಯೋಜನೆಯ ವಿರುದ್ಧ ಹೋರಾಟವನ್ನು ಸಂಘಟಿಸಿದ ನಾಯಕರುಗಳು, ಅಭಿವೃದ್ಧಿ, ಸ್ಥಳಾಂತರ ಮತ್ತು ಪುನರ್‌ವಸತಿಯನ್ನು ಯಾವ ರೀತಿಯಲ್ಲಿ ಪರಿಭಾವಿಸಿಕೊಂಡಿದ್ದಾರೆ ಮತ್ತು ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಯ ಅನಿವಾರ್ಯತೆಯನ್ನು ಅಧಿಕಾರಿಗಳು ಹೇಗೆ ಸಮರ್ಥಿಸಿಕೊಂಡಿರುತ್ತಾರೆ ಎಂಬುದರ ಬಗೆಗಿನ ವಿಶ್ಲೇಷಣೆಯನ್ನು ನೀಡಲಾಗಿರುತ್ತದೆ.

ಪುನರ್‌ವಸತಿಯ ಚರಿತ್ರೆಯನ್ನು ಗಮನಿಸಿದಾಗ ಅದು ಸಂತ್ರಸ್ತರಿಗೆ ತೃಪ್ತಿಯನ್ನು ತಂದಿರುವುದು ಕಂಡುಬಂದಿರುವುದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಬಲವಂತದ ಸ್ಥಳಾಂತರ ದೀರ್ಘವಾದ ಸಂಘರ್ಷ ಮತ್ತು ಹೋರಾಟಗಳಿಗೆ ಕಾರಣವಾಗಿರುವುದನ್ನು ಗಮನಿಸಬಹುದು. ಯೋಗ್ಯವಾದ ಪರಿಹಾರಗಳನ್ನು ಪಡೆಯುವುದಕ್ಕೋಸ್ಕರ ಆರಂಭವಾಗುವ ಹೋರಾಟಗಳು ಕೊನೆಗೆ ಸಂತ್ರಸ್ತರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಹೋರಾಡುವ ಹಂತಕ್ಕೆ ಬಂದು ತಲುಪುತ್ತದೆ. ಭೂಸ್ವಾಧೀನ ಮತ್ತು ಬಲವಂತದ ಸ್ಥಳಾಂತರ ಬಲಿಪಶುಗಳಾದ ಬಡಜನರನ್ನು ಮತ್ತಷ್ಟು ಅವನತಿಗೆ ತಳ್ಳಿ ಅವರ ದಾರಿದ್ರ್ಯಕ್ಕೆ ಅವಕಾಶ ಮಾಡಿಕೊಡುತ್ತದೆ[3] ಎಂಬ ತುಕ್ರಾಲ್‌ರವರ ಕಂಡುಕೊಳ್ಳುವಿಕೆಯನ್ನು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಹಿಂದೆ ಇದೇ ರೀತಿಯ ಅಧ್ಯಯನಗಳು ಯಾವ ರೀತಿಯ ಫಲಿತವನ್ನು ಕಂಡುಕೊಂಡಿವೆಯೆಂಬುದನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಭೂಮಿಯನ್ನು ಕಳೆದುಕೊಂಡವರ ಬದುಕಿನೊಂದಿಗೆ ತುಲನಾತ್ಮಕವಾಗಿ ಹೋಲಿಸಿ ಅಧ್ಯಯನವನ್ನು ಮಾಡಲಾಗಿರುತ್ತದೆ. 1990ರ ದಶಕದಲ್ಲಿ ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗಿರುವವರು ಎದುರಿಸುತ್ತಿರುವ ಸಮಸ್ಯೆಗಳಿಗೂ 2005ರಲ್ಲಿ ಸ್ಥಳಾಂತರಗೊಂಡು

ತಮ್ಮ ಬದುಕನ್ನು ಪುನರ್‌ವಸತಿ ಪ್ರದೇಶಗಳಲ್ಲಿ ಪುನರ್‌ಕಟ್ಟಿಕೊಳ್ಳುತ್ತಿರುವವರು ಎದುರಿಸುತ್ತಿರುವ ಸಮಸ್ಯೆಗಳಿಗೂ ಸಾಮ್ಯತೆಯಿರುವುದು ಕಂಡುಬಂದಿರುತ್ತದೆ.[4] ಅಪರಿಚಿತ ಪ್ರದೇಶದಲ್ಲಿ ಹಿಂದಿನ ಜೀವನಕ್ರಮವನ್ನು ಮುಂದುವರಿಸಲು ಸಾಧ್ಯವಾಗುತ್ತಿಲ್ಲವೆಂದು ಸಂದರ್ಶಿತ 96% ಮಾಹಿತಿದಾರರು ಅಭಿಪ್ರಾಯ ವ್ಯಕ್ತಪಡಿಸಿದರೆ ಕೇವಲ 4% ಸಂತ್ರಸ್ತರು ಹೊಸ ಬದುಕನ್ನು ಪುನರ್‌ವಸತಿ ಕಾಲನಿಗಳಲ್ಲಿ ಕಟ್ಟಿಕೊಳ್ಳಲು ಸಾಧ್ಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಅಂಶಕ್ಕೆ ಹೆಚ್ಚು ಆದ್ಯತೆಯನ್ನು ನೀಡಿ ಪರಿಶೀಲಿಸಿದಾಗ ಸಾಧ್ಯವಾಗಿರುತ್ತದೆಯೆಂದು ಅಭಿಪ್ರಾಯಪಟ್ಟ ಮಾಹಿತಿದಾರರು ತಮ್ಮ ಪೂರ್ವನೆಲೆಗಳಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳದೇ ಮಂಗಳೂರು ಮತ್ತು ಸಮೀಪದ ಸುರತ್ಕಲ್ ನಗರಗಳಲ್ಲಿ ಕಾರ್ಯಾಚರಿಸುವ ಸರಕಾರಿ ಕಚೇರಿಗಳಲ್ಲಿ, ಇತರ ಸೇವಾ ವಲಯಗಳಲ್ಲಿ ಉತ್ತಮ ವೇತನವನ್ನು ಪಡೆಯುತ್ತಿರುವ ಉದ್ಯೋಗದಲ್ಲಿರುವವರು ಎಂಬುದಾಗಿ ಕಂಡುಬಂದಿರುತ್ತದೆ. ಹಿಂದಿನಿಂದಲೂ ಭೂಮಿಯನ್ನೇ ಜೀವನಾಧಾರವಾಗಿ ನಂಬಿಕೊಂಡು ಬಂದು ಯೋಜನೆಯಿಂದಾಗಿ ಭೂಮಿಯನ್ನು ಕಳೆದುಕೊಂಡವರ ಬದುಕು ಸರಿಪಡಿಸಲಾಗದಷ್ಟು ಹಾನಿಗೀಡಾಗಿ, ಅವರುಗಳು ಮಾನಸಿಕ ಕ್ಲೇಶಕ್ಕೊಳಗಾಗಿರುವುದು ಅಧ್ಯಯನದ ಪ್ರಮುಖ ಫಲಿತಗಳಲ್ಲಿ ಒಂದಾಗಿರುತ್ತದೆ. ತಮ್ಮ ಸಾಂಪ್ರದಾಯಿಕ ಕೃಷಿಭೂಮಿ ಮತ್ತು ಕೃಷಿ ಚಟುವಟಿಕೆಗಳನ್ನು ಕಳೆದುಕೊಂಡಿರುವುದು, ಪುನರ್‌ವಸತಿ ಪ್ರದೇಶದಲ್ಲಿ ಯಾವುದೇ ಹೊಸ ಉದ್ಯೋಗವಿಲ್ಲದೆ ದೊರಕಿದ ಪರಿಹಾರದ ನಗದು ಹಣದಿಂದಾಗಿ ದೈಹಿಕವಾಗಿ ಸಮರ್ಥರಾಗಿದ್ದರೂ ಉದ್ಯೋಗದಿಂದ ನಿವೃತ್ತರಾದವರಂತೆ ಜೀವನವನ್ನು ನಡೆಸುತ್ತಿರುವುದು, ಕೌಟುಂಬಿಕ ಸಂಘರ್ಷ, ವಿಘಟನೆಯಿಂದಾಗಿ ಮಾನಸಿಕವಾಗಿ ಜರ್ಜರಿತರಾಗಿ ಹಿಂದಿನ ಸಂತೋಷವನ್ನು ಕಳೆದುಕೊಂಡಿರುವುದು, ಪುನರ್‌ವಸತಿ ಪ್ರದೇಶದಲ್ಲಿ ಅತ್ಯಾಧುನಿಕ ಸೌಲಭ್ಯಗಳಾದ ಒಳಚರಂಡಿ, ಬೀದಿದೀಪ, ಡಾಮರೀಕೃತ ರಸ್ತೆಗಳು ರಚನೆಗೊಂಡಿದ್ದರೂ ಅಲ್ಲಿರುವ ಪ್ರಮುಖ ಅವ್ಯವಸ್ಥೆಗಳಾದ ನೀರಿನ ಅಲಭ್ಯತೆ, ಅಸಮರ್ಪಕ ಒಳಚರಂಡಿ ವ್ಯವಸ್ಥೆ, ಬೀದಿದೀಪಗಳ ಕಳಪೆ ನಿರ್ವಹಣೆ, ಅಸಮರ್ಪಕ ಸಾರಿಗೆ ವ್ಯವಸ್ಥೆ, ಶೈಕ್ಷಣಿಕ ಹಾಗೂ ಆರೋಗ್ಯದ ಸೌಲಭ್ಯಗಳು ದೊರಕದೇ ಇರುವುದರ ಕಾರಣಗಳಿಂದ ನಮ್ಮ ಬದುಕು ಅಸ್ತವ್ಯಸ್ತಗೊಂಡಿತು ಎಂದು ತಮ್ಮ ಆಕ್ರೋಶವನ್ನು ಸಂತ್ರಸ್ತರು ವ್ಯಕ್ತಪಡಿಸಿರುವುದನ್ನು ಗಮನಿಸಲಾಗಿರುತ್ತದೆ.

5.1 ಭೂಸ್ವಾಧೀನ ಮತ್ತು ಸ್ಥಳಾಂತರವನ್ನು ಸಂತ್ರಸ್ತರು ಅರ್ಥೈಸಿಕೊಂಡ ರೀತಿ

ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಸ್ವಾಧೀನ ಪ್ರಕ್ರಿಯೆ ಆರಂಭವಾದ ಸಂದರ್ಭದಲ್ಲಿ ಸ್ಥಳೀಯ ನಿವಾಸಿಗಳು ವಿಭಿನ್ನ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಒಟ್ಟು ಪ್ರಕ್ರಿಯೆಯನ್ನು ಕುತೂಹಲ, ಆಕ್ರೋಶ, ಭಯ ಮತ್ತು ಆಘಾತದಿಂದ ಗಮನಿಸುತ್ತಿದ್ದರು. ಕೆಲವರು ಪರಿಹಾರದ ಪ್ಯಾಕೇಜ್‌ಗಳು ದೊರೆತ ನಂತರ ಉತ್ತಮ ಜೀವನ ನಡೆಸಬಹುದು ಎಂದು ಸಂತೋಷಪಟ್ಟರೆ, ಉಳಿದವರು ನಿರ್ಲಿಪ್ತರಾಗಿದ್ದರು.

ಇಂತಹ ಭಾವನೆಗಳನ್ನು ವ್ಯಕ್ತಪಡಿಸಲು ಹಲವಾರು ಕಾರಣಗಳಿದ್ದವು. ಆದರೆ ಬಹುತೇಕ ಸಂತ್ರಸ್ತರು ಭೂಸ್ವಾಧೀನ ಮತ್ತು ಸ್ಥಳಾಂತರಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಸ್ಥಳಾಂತರದಿಂದಾಗುವ ಲಾಭಗಳಿಗಿಂತ ಬಗೆಹರಿಸಲು ಅಸಾಧ್ಯವಾದ ನಷ್ಟಗಳು ತಮ್ಮ ಜೀವನದಲ್ಲಿ ಮುಂದೆ ಬರಲಿದೆಯೆಂದು ಭಾವಿಸಿದ ಸಂತ್ರಸ್ತರು ಸ್ಥಳಾಂತರದಿಂದಾಗಿ ಮುಂದೆ ಸಾಮಾಜಿಕ ಸಾಮರಸ್ಯ, ಒಗ್ಗೂಡುವಿಕೆ ನಾಶವಾಗಿ ವ್ಯಕ್ತಿ ಮತ್ತು ಸಮಾಜದಲ್ಲಿ ಗುರುತಿಸಿಕೊಳ್ಳುವಿಕೆ ಕಳೆದುಕೊಳ್ಳಬೇಕಾಗಬಹುದು ಎಂದು ಸಂಶಯಪಟ್ಟಿದ್ದು ಸ್ಥಳಾಂತರದ ನಂತರದಲ್ಲಿ ನಿಜವಾಗಿರುತ್ತದೆಯೆಂದು ತಿಳಿಸಿರುತ್ತಾರೆ. ಆರಂಭದಲ್ಲಿ ಸಂತ್ರಸ್ತರು ಪುನರ್‌ವಸತಿ ಪ್ರದೇಶಕ್ಕೆ ಸ್ಥಳಾಂತರಗೊಳ್ಳಲು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು. ವಿದ್ವಾಂಸರಾದ ಇನಾಕ್ಷಿ ಗಂಗೂಲಿಯವರ ಅಭಿಪ್ರಾಯದಂತೆ "ಸ್ಥಳಾಂತರಕ್ಕೆ ಸಂತ್ರಸ್ತರನ್ನು ಮಾನಸಿಕವಾಗಿ ಮೊದಲೇ ತಯಾರು ಮಾಡುವುದಿಲ್ಲ ಹಾಗೂ ಈ ಪ್ರಕ್ರಿಯೆಗೆ ಪ್ರವರ್ತಕರು ಯಾವುದೇ ಆದ್ಯತೆಯನ್ನು ನೀಡುವುದಿಲ್ಲ".[5] ನಾಗಾರ್ಜುನ ಅಣೆಕಟ್ಟು ಸ್ಥಾಪನೆಯ ಉದಾಹರಣೆಯನ್ನು ನೀಡಿದ ಲೇಖಕರು ಸ್ಥಳಾಂತರದ ಬಗ್ಗೆ ಸಂತ್ರಸ್ತರಿಗೆ ಮಾಹಿತಿಯನ್ನು ನೀಡಿದರೂ ಅವರು ತಮ್ಮ ಭೂಮಿಯನ್ನು ಬಿಟ್ಟು ಹೋಗಲಿಲ್ಲ. ಕೊನೆಗೆ ಕೆಲವರನ್ನು ಮಿಲಿಟರಿಯ ನೆರವಿನೊಂದಿಗೆ ಸ್ಥಳಾಂತರಿಸುವ ಅನಿವಾರ್ಯತೆ ಎದುರಾಯಿತು. ಎಹಾರಡ್ ಅಣೆಕಟ್ಟು ನಿರ್ಮಾಣದ ಸಂದರ್ಭದಲ್ಲಿಯೂ ಸಂತ್ರಸ್ತರಿಗೆ ಸ್ಥಳಾಂತರದ ಬಗೆಗೆ ಯಾವುದೇ ಪೂರ್ವಸೂಚನೆಯನ್ನು ನೀಡಿರಲಿಲ್ಲ. ಕೊನೆಗೆ ನೀರಿನ ಮಟ್ಟ ಏರುತ್ತಾ ಹೋದಂತೆ ಸಂತ್ರಸ್ತರು ಜೀವಭಯದಿಂದ ತಮ್ಮ ಮನೆಗಳಿಂದ ಓಡಿಹೋಗುವ ಪ್ರಸಂಗ ನಿರ್ಮಾಣವಾಗಿತ್ತು.[6] ಕೊಯ್ನಾ ಅಣೆಕಟ್ಟಿನ ರಚನೆಯ ಸಂದರ್ಭದಲ್ಲಿಯೂ ಸಂತ್ರಸ್ತರು ಸ್ಥಳಾಂತರಕ್ಕೆ ಸಿದ್ಧರಿರದ ವೇಳೆಯಲ್ಲಿ ನೀರಿನಮಟ್ಟದಲ್ಲಿ ಏರಿಕೆಯಾಗಿ ಅವರುಗಳಿಗೆ ತಮ್ಮ ಮನೆಗಳಿಂದ ಜೀವನಾವಶ್ಯಕ ವಸ್ತುಗಳನ್ನು ತೆಗೆದುಕೊಂಡು ಹೋಗಲು ಅವಕಾಶವಾಗಲಿಲ್ಲ[7] ಎಂಬುದನ್ನು ಉಲ್ಲೇಖಿಸಿರುತ್ತಾರೆ. ಸ್ಥಳಾಂತರಗೊಂಡ ಸಂತ್ರಸ್ತರು ತಮ್ಮ ಹಿಂದಿನ ವಾಸಸ್ಥಳಕ್ಕೆ ಒಗ್ಗಿಹೋಗಿರುವುದರಿಂದ ಹೊಸ ಪುನರ್‌ವಸತಿ ಪ್ರದೇಶದಲ್ಲಿ ಯಾವುದೇ ರೀತಿಯ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸಿದರೂ ಹಿಂದಿನ ನೆನಪುಗಳು ಅವರ ಮನಸ್ಸಿನಿಂದ ಮಾಸಿಹೋಗುವುದಿಲ್ಲ. ಆದುದರಿಂದ ಮಾನಸಿಕ ಕ್ಲೇಶಗಳಿಗೆ ಒಳಗಾಗಿ ಹೊಸ ಪ್ರದೇಶದಲ್ಲಿ ಅಪರಿಚಿತರಾಗಿಯೇ ಉಳಿಯುತ್ತಾರೆ ಎಂಬ ಹಿಂದಿನ ಅಧ್ಯಯನಗಳ ಕಂಡುಕೊಳ್ಳುವಿಕೆಯನ್ನು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿಯೂ ಗಮನಿಸಲಾಗಿರುತ್ತದೆ.

ಸ್ಥಳಾಂತರದ ಪೂರ್ವದಲ್ಲಿ ಕೃಷಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಕುಟುಂಬಗಳು ಸರಳ ಮತ್ತು ಸುಂದರ ಜೀವನವನ್ನು ನೆಮ್ಮದಿಯಿಂದ ನಡೆಸುತ್ತಿದ್ದವು. ಭೂಮಿಯನ್ನು ಕಳೆದುಕೊಂಡ ದುಃಖವಿದ್ದರೂ ಭೂಸ್ವಾಧೀನ ಪ್ರಾಧಿಕಾರ ಸಂತ್ರಸ್ತರಿಗಾಗಿ ನಿರ್ಮಿಸಿದ ಪುನರ್‌ವಸತಿ ಕಾಲನಿಗಳಲ್ಲಿ ಮುಂದಿನ ಬದುಕನ್ನು ಉತ್ತಮವಾಗಿ ನಡೆಸಬಹುದೆಂಬ ಭರವಸೆಯನ್ನು ಹೊಂದಿದ್ದವು. ಇವುಗಳಿಗೆ ಪೂರಕವಾಗಿ ಭೂಸ್ವಾಧೀನ ಪ್ರಾಧಿಕಾರ ಆಕರ್ಷಕವಾದ ಪುನರ್‌ವಸತಿ ಮತ್ತು ಪರಿಹಾರದ ಪ್ಯಾಕೇಜ್‌ಗಳ ಬಗ್ಗೆ ಸಂತ್ರಸ್ತರಲ್ಲಿ

ಹುಸಿ ಭರವಸೆಯನ್ನು[8] ತುಂಬಿತ್ತು. ಆದರೆ ಪುನರ್‌ವಸತಿ ಪ್ರದೇಶಗಳಲ್ಲಿನ ಅವ್ಯವಸ್ಥೆಗಳಿಂದಾಗಿ ಭ್ರಮನಿರಸನವಾಗಿ ಈಗ ಸಾಮಾನ್ಯ ಬದುಕನ್ನು ನಡೆಸುವುದು ಕೂಡಾ ದುಸ್ತರವಾಗಿದೆ ಎಂಬುದು ಹೆಚ್ಚಿನ ಸಂತ್ರಸ್ತರ ಅಭಿಪ್ರಾಯವಾಗಿರುತ್ತದೆ.

ಪೆರ್ಮುದೆ ಪುನರ್‌ವಸತಿ ಕಾಲನಿಯಲ್ಲಿ ನೀಡಲ್ಪಟ್ಟ $12^1/_2$ ಸೆಂಟ್ಸ್ ನಿವೇಶನದಲ್ಲಿ ಮನೆಯನ್ನು ನಿರ್ಮಿಸಿ ವಾಸಿಸುತ್ತಿರುವ ರಮಾ ಶೆಟ್ಟಿಯವರು (ಹೆಸರು ಬದಲಾಯಿಸಲಾಗಿದೆ) ತಮ್ಮ ಪೂರ್ವದ ಜೀವನವನ್ನು ನೆನೆಸಿಕೊಳ್ಳುತ್ತಾ, 'ನಾವು ಗುತ್ತಿನ ಮನೆತನಕ್ಕೆ ಸೇರಿದವರಾಗಿರುತ್ತೇವೆ. ಹಿಂದೆ ಇಪ್ಪತ್ತನಾಲ್ಕು ಎಕ್ರೆ ಕೃಷಿ ಭೂಮಿಯನ್ನು ಹೊಂದಿದ್ದು ಒಕ್ಕಲುಗಳು ಮತ್ತು ಕೃಷಿ ಕಾರ್ಮಿಕರ ನೆರವಿನೊಂದಿಗೆ ಕೃಷಿ ಚಟುವಟಿಕೆಗಳನ್ನು ನಡೆಸಿಕೊಂಡು ಗೌರವಯುತ ಜೀವನವನ್ನು ನಡೆಸುತ್ತಿದ್ದೆವು. ಎಪ್ಪತ್ತು ವರ್ಷಗಳ ಹಿಂದೆ ವಿಸ್ತಾರವಾದ ಭೂಮಿಯಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿ ಕಟ್ಟಿದಂತಹ ಮನೆ ನಮ್ಮ ಕಣ್ಣೆದುರಿನಲ್ಲಿಯೇ ನಾಶವಾಗಿ ಪ್ರಸ್ತುತ ಪರಿಹಾರದ ರೂಪದಲ್ಲಿ ದೊರಕಿದ ನಿವೇಶನದಲ್ಲಿ ಕಾಂಕ್ರೀಟಿನ ಮನೆಯನ್ನು ಕಟ್ಟಿ ವಾಸಿಸುತ್ತಿದ್ದೇವೆ. ಹಿರಿಯರಿಂದ ಬಳುವಳಿಯಾಗಿ ಬಂದಂತಹ ಭೂಮಿಯನ್ನು ಕಳೆದುಕೊಂಡ ವೇದನೆಯನ್ನು ಮರೆಯಲಾಗುತ್ತಿಲ್ಲ. ಅಲ್ಲಿನ ಭೂಮಿ ಹಾಗೂ ಹಿಂದಿನಿಂದಲೂ ಆರಾಧಿಸಿಕೊಂಡು ಬರುತ್ತಿದ್ದ ದೈವ–ದೇವರುಗಳೊಂದಿಗಿನ ಭಾವನಾತ್ಮಕ ಸಂಬಂಧ ಯಾವತ್ತೂ ನೆನಪಾಗುತ್ತದೆ. ಹಿಂದೆ ನಮಗೆ ಬೇಕಾದ ತರಕಾರಿ, ದವಸ–ಧಾನ್ಯಗಳನ್ನು ನಾವೇ ಬೆಳೆಯುತ್ತಿದ್ದೆವು. ಈಗ ಎಲ್ಲದಕ್ಕೂ ಬಜ್ಪೆ ಪೇಟೆಯ ಮಾರುಕಟ್ಟೆಯನ್ನು ಅವಲಂಬಿಸಬೇಕಾಗಿದೆ. ಹಣ ಕೊಟ್ಟರೂ ನಾವು ಬೆಳೆಯುತ್ತಿದ್ದಂತಹ ರುಚಿಕರ ಹಣ್ಣುಗಳು ಮತ್ತು ಆಹಾರ ಸಾಮಾಗ್ರಿಗಳು ದೊರಕುತ್ತಿಲ್ಲ. ಗುತ್ತಿನ ಮನೆಗೆ ಸೇರಿದವರಾಗಿ ಸಮಾಜದಿಂದ ಗೌರವಿಸಲ್ಪಡುತ್ತಿದ್ದ ನಾವು ಪ್ರಸ್ತುತ ಭಿಕ್ಷುಕರ ರೀತಿಯಲ್ಲಿ ಜೀವಿಸುವ ಪರಿಸ್ಥಿತಿ ಬಂದಿರುತ್ತದೆ'[9] ಎಂಬ ಮಾತುಗಳು ಅಭಿವೃದ್ಧಿ ಆಧಾರಿತ ಚಟುವಟಿಕೆಗಳು ಜನರ ಜೀವನವನ್ನು ಯಾವ ರೀತಿಯಲ್ಲಿ ಸಂಪೂರ್ಣವಾಗಿ ಹಾಳುಗೆಡವಿರುತ್ತವೆಯೆಂದು ತಿಳಿಸುತ್ತದೆ. ಭೂಮಿಯನ್ನು ಕಳೆದುಕೊಂಡ ನಂತರ ಪುನರ್‌ವಸತಿ ಪ್ರದೇಶಗಳಲ್ಲಿ ಉತ್ತಮ ಜೀವನ ಸಾಧ್ಯವಾಗುತ್ತದೆಯೆಂಬ ಭ್ರಮೆ ಸಂಪೂರ್ಣವಾಗಿ ಕಳಚಿಹೋಗಿ ಪ್ರಸ್ತುತ ದಯನೀಯ ಬದುಕು ನಡೆಸುವುದಕ್ಕೆ ಭೂಸ್ವಾಧೀನ ಪ್ರಾಧಿಕಾರ ನೀಡಿದ ಹುಸಿ ಭರವಸೆಗಳೇ ಕಾರಣವಾಗಿತ್ತು ಎಂಬ ಆಕ್ರೋಶ, ಅಳಲು ಸಂತ್ರಸ್ತರಾದ ರಮಾ ಶೆಟ್ಟಿಯವರ ಮಾತಿನಿಂದ ತಿಳಿದುಬರುತ್ತಿತ್ತು. ಇವರ ಮಾತುಗಳಲ್ಲಿ ಭೂಸ್ವಾಧೀನವು ಹಿಂದಿನ ಅಂತಸ್ತು, ಜೀವನಕ್ರಮವನ್ನು ಅಳಿಸಿ ಹಾಕಿ ಹೊಸ ಪ್ರದೇಶದಲ್ಲಿ ಅವರುಗಳು ಅಪರಿಚಿತರಾಗಿ ಬದುಕುವ ಪರಿಸ್ಥಿತಿ ನಿರ್ಮಿಸಿರುವುದನ್ನು ವಿವರಿಸುತ್ತದೆ.

ಬಜ್ಪೆಯ ಶಾಂತಿನಗರ ಪುನರ್‌ವಸತಿ ಪ್ರದೇಶದಲ್ಲಿ ಮನೆ ನಿರ್ಮಿಸಿ ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿರುವ ಸಂದೀಪ್ ಮಾರ್ಲರವರ (ಹೆಸರು ಬದಲಾಯಿಸಲಾಗಿದೆ) ಮಾತುಗಳಲ್ಲಿ ಸ್ಥಳಾಂತರವು ಬದುಕನ್ನು ಯಾವ ರೀತಿಯಲ್ಲಿ ಬದಲಾಯಿಸಿರುತ್ತದೆಯೆಂಬುದು ಕಂಡುಬರುತ್ತದೆ. ಪೆರ್ಮುದೆ ಗ್ರಾಮದಲ್ಲಿ 30

ಎಕ್ರೆಗಿಂತಲೂ ಹೆಚ್ಚಿನ ಕೃಷಿಭೂಮಿಯನ್ನು ಹೊಂದಿದ ಗುತ್ತಿನ ಮನೆಗೆ ಸೇರಿದವರು ಇವರಾಗಿದ್ದು ತಮ್ಮ ಭೂಮಿಯಲ್ಲಿ ಕೃಷಿ ಕಾರ್ಮಿಕರ ನೆರವಿನೊಂದಿಗೆ ಹಲವಾರು ದಶಕಗಳಿಂದ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ನೂರಾರು ಕಾರ್ಮಿಕರಿಗೆ ಉದ್ಯೋಗವನ್ನು ನೀಡಿರುವ ಸಂದೀಪ್ ಮಾರ್ಲರವರು ಊರಿನ ಜನರಲ್ಲಿ ಏನಾದರೂ ಸಮಸ್ಯೆಗಳು ಬಂದಾಗ ಅದನ್ನು ರಾಜಿ ಪಂಚಾಯಿತಿಕೆಯಲ್ಲಿ ಇತ್ಯರ್ಥಪಡಿಸುತ್ತಿದ್ದರು. ಊರವರಿಂದ ಉನ್ನತ ಮಟ್ಟದ ಗೌರವ, ಮರ್ಯಾದೆಯನ್ನು ಪಡೆಯುತ್ತಿದ್ದವರು, ಭೂತಕೋಲ, ಕಂಬುಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಸಮಾಜದ ಗಣ್ಯವ್ಯಕ್ತಿಯಾಗಿದ್ದವರು, ಪ್ರಸ್ತುತ ಪರಿಹಾರವಾಗಿ ದೊರಕಿದ 12$^1/_2$ ಸೆಂಟ್ಸ್ ಮನೆ ನಿವೇಶನದಲ್ಲಿ ಆಧುನಿಕ ಸೌಲಭ್ಯಗಳನ್ನೊಳಗೊಂಡ ಮನೆಯನ್ನು ನಿರ್ಮಿಸಿದ್ದು ತಮ್ಮ ಮನೆಯ ಮುಂದಿನ ಪ್ರದೇಶದಲ್ಲಿ 0.5 ಸೆಂಟ್ಸ್ ಭೂಮಿಯಲ್ಲಿ ಭತ್ತವನ್ನು ಬೆಳೆಸುತ್ತಿದ್ದಾರೆ. ಇದರ ಬಗ್ಗೆ ಅವರಲ್ಲಿ ಕುತೂಹಲದಿಂದ ಪ್ರಶ್ನಿಸಿದಾಗ ಹಿಂದಿನ ಕೃಷಿ ಚಟುವಟಿಕೆಗಳು ಈಗ ಕೈತಪ್ಪಿದ್ದರೂ ಮನೆಯೆದುರಿನ ಚಿಕ್ಕ ಪ್ರದೇಶದಲ್ಲಿ ಭತ್ತವನ್ನು ನಾಟಿ ಮಾಡಿರುವುದರಿಂದ ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಗುತ್ತದೆಯೆಂದು ತಿಳಿಸಿರುವುದು[10] ಯೋಜನೆಯ ಸಂತ್ರಸ್ತರು ತಮ್ಮ ಪೂರ್ವದ ಜೀವನಕ್ರಮವನ್ನು ಇನ್ನೂ ಮರೆತಿರುವುದಿಲ್ಲವೆಂಬುವುದಕ್ಕೆ ಜ್ವಲಂತ ಉದಾಹರಣೆಯಾಗಿ ಕಂಡುಬಂದಿರುತ್ತದೆ.

"ಬಲವಂತದ ಸ್ಥಳಾಂತರದಿಂದಾಗಿ ಅಲ್ಲಿನ ನಿವಾಸಿಗಳು ತಮಗೆ ಚಿರಪರಿಚಿತವಾಗಿರುವ ಸಾಮಾಜಿಕ ಪರಿಸರದಿಂದ ಒಮ್ಮೆಲೆ ಹೊರದಬ್ಬಲ್ಪಟ್ಟವರಂತಾಗಿ, ಹೊಸ ಪರಿಸರದಲ್ಲಿ ಜೀವನವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ವಿಶೇಷವಾಗಿ ಹಳ್ಳಿಗಳಲ್ಲಿ ಒಟ್ಟಾಗಿ ವಾಸಿಸುವ ರಕ್ತ ಸಂಬಂಧಿಗಳು ತಮ್ಮ ಕಷ್ಟದ ಸಮಯದಲ್ಲಿ ಪರಸ್ಪರ ಸಹಕಾರಕ್ಕೆ ಬರುತ್ತಿದ್ದರು. ಸ್ಥಳಾಂತರದಿಂದಾಗಿ ಬೇರೆ ಬೇರೆ ಪ್ರದೇಶದಲ್ಲಿ ನಿವೇಶನಗಳನ್ನು ಪಡೆದು ಹರಿದು ಹಂಚಿ ಹೋಗುವುದು ಅವರುಗಳ ಬದುಕಿಗೆ ತುಂಬಲಾರದ ಹಾನಿಯನ್ನು ತರುತ್ತದೆ. ಸಾಮಾಜಿಕ ಮತ್ತು ಭೌಗೋಳಿಕ ಪರಿಸರ ಹಳ್ಳಿಗಳಲ್ಲಿನ ಆರ್ಥಿಕ ವ್ಯವಸ್ಥೆಯ ಮೇಲೆ ನೇರ ಪರಿಣಾಮ ಬೀರುತ್ತಿದ್ದು, ಅಲ್ಲಿನ ಜನರು ಅದರ ಮೇಲೆಯೇ ತಮ್ಮ ಜೀವನಕ್ಕಾಗಿ ಅವಲಂಬಿಸಿರುವುದು ಸ್ಥಳಾಂತರದಿಂದಾಗಿ ಬದಲಾಗುತ್ತದೆ".[11] ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿನ ಅವಿದ್ಯಾವಂತ ಕೃಷಿಕರ ಫಲವತ್ತಾದ ಕೃಷಿಭೂಮಿಯನ್ನು ಸ್ವಾಧೀನಪಡಿಸಿರುವುದು ನಂತರದ ಸಮಯದಲ್ಲಿ ಅವರುಗಳು ಪುನರ್‌ವಸತಿ ಕಾಲನಿಗಳ ನಗರದ ಸೌಲಭ್ಯಗಳಿಗೆ ಹೊಂದಿಕೆಯಾಗದೇ ಇರುವುದು ಮತ್ತು ಸಾಂಪ್ರದಾಯಿಕ, ಸಾಮಾಜಿಕ ವ್ಯವಸ್ಥೆಯ ಕೊಂಡಿಗಳು ಸಂಪೂರ್ಣವಾಗಿ ಕಳಚಿಕೊಂಡಿರುವುದೇ ಕಾರಣಗಳಾಗಿರುತ್ತದೆಯೆಂದು ಹೇಳಬಹುದು. ಸ್ಥಳಾಂತರದ ನಂತರ ಸಂತ್ರಸ್ತರಲ್ಲಿ ಕೆಟ್ಟಚಟಗಳು 31%ಕ್ಕೆ ಹೆಚ್ಚಳವಾಗಿರುವುದು ಕಂಡುಬಂದಿದ್ದು ಇದಕ್ಕೆ ಅವರುಗಳಿಗೆ ಭೂಮಿಯ ಪರಿಹಾರವಾಗಿ ದೊಡ್ಡ ಮೊತ್ತದ ನಗದು ಹಣ ದೊರಕಿರುವುದು ಕಾರಣವಾಗಿರುತ್ತದೆ. ರಜನಿ ಅಯ್ಯರ್ (2005) ಮತ್ತು ಮನಿಷ್‌ಕುಮಾರ್ ವರ್ಮಾ (2004) ಅವರುಗಳು ಸಂತ್ರಸ್ತರುಗಳು ಭೂಮಿಯನ್ನು

ಕಳೆದುಕೊಂಡ ಆಘಾತ, ಅದರಿಂದ ಉದ್ಭವವಾದ ಅಭದ್ರತೆಯ ಮನೋಭಾವಗಳು ಸಾಮಾಜಿಕ ವ್ಯವಸ್ಥೆಯ ಅಸ್ತವ್ಯಸ್ತಗಳಿಗೆ ಕಾರಣಗಳಾಗಿರುವುದಲ್ಲದೆ ಅವರುಗಳಲ್ಲಿ ಮದ್ಯಪಾನ, ಜೂಜಾಟದಂತಹ ಕೆಟ್ಟ ಚಟಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿ ಸಾಮಾಜಿಕ ಸಾಮರಸ್ಯ ಹದಗೆಡುವುದಕ್ಕೂ ಹೆಚ್ಚು ಅವಕಾಶ ಮಾಡಿಕೊಡುತ್ತದೆ[12] ಎಂಬ ಫಲಿತವು ಪ್ರಸ್ತುತ ಯೋಜನೆಯ ಪುನರ್‌ವಸತಿ ಹಾಗೂ ಇತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರಲ್ಲಿಯೂ ಕಾಣಸಿಗುತ್ತದೆ.

ಮಧುಸೂದನ್‌ರವರು ಸಂತ್ರಸ್ತರ ಬವಣೆಗಳ ಬಗೆಗೆ ವಿವರಿಸುತ್ತಾ, ಸಂತ್ರಸ್ತರು ಭೂಮಿಯನ್ನು ಮಾತ್ರ ಕಳೆದುಕೊಳ್ಳುವುದಲ್ಲ, ಹೊಸ ತಂತ್ರಜ್ಞಾನ ಕಾಲೂರಬೇಕಾದರೆ ಪಾರಂಪರಿಕ ತಂತ್ರಜ್ಞಾನ ಮತ್ತು ಸಾಂಪ್ರದಾಯಿಕ ಮಾನವ ಕೌಶಲ್ಯಗಳು ಸಂಪೂರ್ಣವಾಗಿ ನಾಶವಾಗುತ್ತದೆ. ಹಳೆಯ ಕೌಶಲ್ಯವನ್ನು ಕೈ ಬಿಡುವುದು ಅನಿವಾರ್ಯವಾಗುತ್ತದೆ. ಗ್ರಾಮೀಣ ಜನಜೀವನದ ಅವಿಭಾಜ್ಯ ಅಂಗಗಳಾಗಿದ್ದ ಕಮ್ಮಾರಿಕೆ, ನೇಕಾರಿಕೆ, ಕುಂಬಾರಿಕೆ, ಚಮ್ಮಾರಿಕೆ ಮುಂತಾದ ವೃತ್ತಿಗಳು ಕಣ್ಮರೆಯಾಗುತ್ತದೆ. ಭೂಸ್ವಾಧೀನದಿಂದ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರು ತಮ್ಮ ಸಾಂಪ್ರದಾಯಿಕ ವೃತ್ತಿಯಿಂದಲೂ ನಿರ್ವಸಿತರಾಗಿ ಹೊಸ ನೆಲೆಗಳಲ್ಲಿ ಯಾವುದೇ ಉದ್ಯೋಗವಿಲ್ಲದೆ ಕೆಟ್ಟಚಟಗಳಿಗೆ ದಾಸರಾಗುತ್ತಾರೆ. ಪರಿಹಾರದ ರೂಪದಲ್ಲಿ ಸಿಕ್ಕಿದ ಊಹಿಸಲು ಅಸಾಧ್ಯವಾದ ನಗದು ಹಣವು ಸಂತ್ರಸ್ತರು ದಾರಿ ತಪ್ಪುವುದಕ್ಕೆ ಕಾರಣವಾಗುತ್ತದೆ[13] ಎಂಬ ಫಲಿತ ಹಾಗೂ ಮೈಕಲ್ ಸೆರ್ನ್ನಾರವರು ವಿಶ್ವಬ್ಯಾಂಕಿನಿಂದ ಪ್ರಾಯೋಜಿಸಲ್ಪಟ್ಟ ಅಭಿವೃದ್ಧಿ ಯೋಜನೆಗಳ ಸ್ಥಳಾಂತರ ಪ್ರಕ್ರಿಯೆಯ ಪುನರ್‌ವಸತಿಗಳ ಅಧ್ಯಯನದ ಸಂದರ್ಭದಲ್ಲಿ ಬಲವಾಗಿ ಪ್ರತಿಪಾದಿಸಿದ "ಬೃಹತ್ ಯೋಜನೆಗಳ ಸಂತ್ರಸ್ತರ ಪುನರ್‌ವಸತಿ ಮಾಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಅವರ ಜೀವನ ಸಂತ್ರಸ್ತರಾಗುವ ಪೂರ್ವಸ್ಥಿತಿಗಿಂತ ಕಡಿಮೆಯಾಗಬಾರದು ಮತ್ತು ಭಾವನಾತ್ಮಕ ಸಂಬಂಧಗಳಿಗೆ ಧಕ್ಕೆ ಬರಬಾರದು. ಪುನರ್‌ವಸತಿಯ ನಂತರದ ಪರಿಹಾರದ ಪ್ಯಾಕೇಜ್‌ಗಳು ಅವರುಗಳಿಗೆ ಉತ್ತಮ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡುವಂತಿರಬೇಕು"[14] ಎಂಬ ಅಂಶಗಳನ್ನು ಪ್ರಸ್ತುತ ಯೋಜನೆಯ ಸಂತ್ರಸ್ತರ ಪುನರ್‌ವಸತಿ ಸಂದರ್ಭದಲ್ಲಿ ಪರಿಗಣಿಸದೆ, ಎಲ್ಲಾ ಸಂತ್ರಸ್ತರಿಗೂ ಪುನರ್‌ವಸತಿ ಕಾಲನಿಗಳಲ್ಲಿ ಡಾಂಬರೀಕೃತ ರಸ್ತೆ, ಒಳಚರಂಡಿ, ವಿದ್ಯುತ್‌ದೀಪಗಳಂತಹ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ ನಗರದ ವಾತಾವರಣವನ್ನು ಸೃಷ್ಟಿಸಿದಾಗ ಸಂತ್ರಸ್ತರು ಸಂತೋಷ, ತೃಪ್ತಿಯುತ ಜೀವನವನ್ನು ನಡೆಸಲು ಸಾಧ್ಯವಿದೆಯೆಂದು ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವವರ ಮಾನಸಿಕ ಅಂಶಗಳಿಗೆ ಆದ್ಯತೆಯನ್ನು ನೀಡದೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಪ್ರಾಮುಖ್ಯತೆ ನೀಡಿರುವುದು ಕಾರಣವಾಗಿರುತ್ತದೆ. ಹೆಚ್ಚಿನ ಪುನರ್‌ವಸತಿ ಕಾಲನಿಗಳಲ್ಲಿ, ವಿಶೇಷವಾಗಿ ಕೋಡಿಕೆರೆ ಮತ್ತು ಜೋಕಟ್ಟೆಯಲ್ಲಿ ವಾಸಿಸುತ್ತಿರುವ ಸಂತ್ರಸ್ತರು ನೀರಿನ ಅಲಭ್ಯತೆಯಿಂದಾಗಿಯೇ ಹೆಚ್ಚು ಮಾನಸಿಕ ಕ್ಲೇಷಗಳಿಗೆ ಒಳಗಾಗಿರುವುದು ಕಂಡುಬರುತ್ತದೆ. ತಮ್ಮ ಪೂರ್ವನೆಲೆಗಳಲ್ಲಿ ಯಥೇಚ್ಛ ನೀರು ಲಭ್ಯವಾಗುತ್ತಿದ್ದು,

ಪುನರ್‌ವಸತಿ ಕಾಲನಿಗಳಲ್ಲಿ ಅಳವಡಿಸಲಾಗಿರುವ ನಳ್ಳಿಗಳಲ್ಲಿ ವಾರಕ್ಕೆ ಎರಡು ದಿನ ನೀರು ಬಂದರೆ ಅದೇ ಹೆಚ್ಚು ಎಂದು ಪರಿಗಣಿಸಿರುವ ಸಂತ್ರಸ್ತರು ನೀರಿನ ಲಭ್ಯತೆಗಾಗಿ ಪ್ರಸ್ತುತ ಆಡಳಿತ ವ್ಯವಸ್ಥೆಯ ವಿರುದ್ಧ ಹೋರಾಟಗಳನ್ನು ನಡೆಸುವುದು ಪುನರ್‌ವಸತಿ ಕಾಲನಿಗಳಲ್ಲಿರುವ ಅವ್ಯವಸ್ಥೆಗಳನ್ನು ಎತ್ತಿ ತೋರಿಸುತ್ತದೆ.

'ಹಿಂದಿನಿಂದ ವಾಸಿಸಿಕೊಂಡು ಬಂದಿದ್ದ ಭೂಮಿಯನ್ನು ಶಾಶ್ವತವಾಗಿ ಕಳೆದುಕೊಂಡ ದುಃಖ ಒಂದು ಕಡೆಗಿದ್ದರೆ, ಹೊಸ ನೆಲೆಗಳಲ್ಲಿ ಉತ್ತಮ ಬದುಕು ಸಾಧ್ಯವಾಗುತ್ತದೆ ಎಂಬ ನಂಬಿಕೆ ಹುಸಿಯಾದದ್ದು' ಸಂತ್ರಸ್ತರನ್ನು ಮಾನಸಿಕ ಕ್ಲೇಷಗಳಿಗೆ ಒಳಮಾಡಿದ್ದನ್ನು ಕೆಂಜಾರು ಪುನರ್‌ವಸತಿ ಕಾಲನಿಯಲ್ಲಿ ವಾಸಿಸುತ್ತಿದ್ದ ನಿವಾಸಿಗಳ ಜೊತೆಯಲ್ಲಿ ಮಾತುಕತೆಗಳನ್ನು ನಡೆಸಿದ ಸಂದರ್ಭದಲ್ಲಿ ಕಂಡುಬಂದಿರುತ್ತದೆ. 'ಪಿತ್ರಾರ್ಜಿತವಾಗಿ ದೊರಕಿದ ಭೂಮಿಯನ್ನು ಕಳೆದುಕೊಂಡು ಪ್ರಸ್ತುತ ಪುನರ್‌ವಸತಿ ಕಾಲನಿಗಳಲ್ಲಿ ಮನೆಗಳ ನಿರ್ಮಾಣಕ್ಕಾಗಿ $5^1/_2$ ಸೆಂಟ್ಸ್ ನಿವೇಶನವನ್ನು ಮಾತ್ರ ನೀಡಿರುತ್ತಾರೆ. ಜಾಗದ ದಾಖಲೆ ಪತ್ರಗಳು ಸರಿಯಾಗಿಲ್ಲವೆಂಬ ಕಾರಣ ನೀಡಿ ಪರಿಹಾರಕ್ಕಾಗಿ ವರ್ಷಗಟ್ಟಲೆ ಸರಕಾರಿ ಕಛೇರಿಗಳು ಮತ್ತು ಮಂಗಳೂರು ವಿಶೇಷ ಆರ್ಥಿಕ ವಲಯ ಪ್ರಾಧಿಕಾರದ ಕಛೇರಿಗೆ ಅಲೆಯುವಂತೆ ಮಾಡಿರುತ್ತಾರೆ. ಪ್ರಸ್ತುತ ಈ ವಿವಾದದ ಬಗ್ಗೆ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದೆ'. ಪರಿಹಾರದ ನಗದು ಹಣ, ಕುಟುಂಬದ ಸದಸ್ಯರಲ್ಲಿ ಒಬ್ಬರಿಗೆ ಸ್ಥಾಪಿಸಲ್ಪಟ್ಟ ಕೈಗಾರಿಕೆಗಳಲ್ಲಿ ಉದ್ಯೋಗವೂ ದೊರೆತಿಲ್ಲ. ನಿವೇಶನದಲ್ಲಿ ಸಾಲ ಮಾಡಿ ಮನೆಯನ್ನು ಕಟ್ಟಿ ಜೀವಿಸುತ್ತಿದ್ದರೂ ಬದುಕು ಅತಂತ್ರವಾಗಿದೆಯೆಂದು ತಮ್ಮ ಅಳಲನ್ನು ವ್ಯಕ್ತಪಡಿಸಿದ[15] ದಯಾನಂದ ಪೂಜಾರಿಯವರು (ಹೆಸರು ಬದಲಾಯಿಸಲಾಗಿದೆ) 'ಸಮೀಪದಲ್ಲಿಯೇ ಸ್ಥಾಪಿಸಲ್ಪಟ್ಟ ಕೈಗಾರಿಕೆಗಳಿಂದ ಹೊರಬರುತ್ತಿರುವ ಹೊಗೆ ಹಾಗೂ ಇತರ ತ್ಯಾಜ್ಯಗಳಿಂದಾಗಿ ಕಾಲನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಲ್ಲಿ ಆರೋಗ್ಯದ ಸಮಸ್ಯೆ ದಿನೇದಿನೇ ಹೆಚ್ಚಾಗುತ್ತಿದೆ. ಹೆಚ್ಚಿನ ಜನರಿಗೆ ಮಲೇರಿಯಾ, ಡೆಂಗ್ಯೂ ಮುಂತಾದ ಸಾಂಕ್ರಾಮಿಕ ರೋಗಗಳು ಬಂದಿರುತ್ತವೆ. ಹತ್ತಿರದಲ್ಲಿಯೇ ಕಲ್ಲಿನ ಕೋರೆಯಲ್ಲಿ ಕಲ್ಲುಗಳನ್ನು ಒಡೆಯಲು ಮಾಡುವ ಸ್ಫೋಟಗಳು ಮತ್ತು ನಿರ್ಮಾಣ ಕಾಮಗಾರಿಗಳಿಂದ ಆಗುತ್ತಿರುವ ವಿಪರೀತ ಸದ್ದಿನಿಂದಾಗಿ ಭೂಕಂಪನವಾದ ಅನುಭವವಾಗುತ್ತಿದ್ದು ಹೊಸತಾಗಿ ನಿರ್ಮಿಸಿದ ಮನೆಗಳ ಗೋಡೆ ಬಿರುಕುಬಿಟ್ಟಿರುತ್ತದೆ. ಕೈಗಾರಿಕೆಗಳ ಸ್ಥಾಪನೆಗಾಗಿ ಈ ಪ್ರದೇಶದಿಂದಲೂ ಮುಂದೆ ನಮ್ಮನ್ನು ಸ್ಥಳಾಂತರಗೊಳಿಸುತ್ತಾರೆ ಎಂಬ ಮಾತುಗಳು ಕೇಳಿ ಬರುತ್ತಿದ್ದು ಇದರಿಂದಾಗಿ ಪರಿಸರದಲ್ಲಿ ಭಯದ ವಾತಾವರಣ ನಿರ್ಮಾಣವಾಗಿರುತ್ತದೆ. ಇದು ನನ್ನೊಬ್ಬನ ಕಥೆ ಮಾತ್ರವಲ್ಲ. ಭೂಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿದವರಲ್ಲಿ ಹೆಚ್ಚಿನವರಿಗೆ ಪರಿಹಾರದ ನಗದು ಮೊತ್ತ ಮತ್ತು ನಿವೇಶನಗಳನ್ನು ನೀಡಲು ಸತಾಯಿಸಲಾಗಿರುತ್ತದೆ'[16] ಎಂದು ತಿಳಿಸಿ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಭೂಮಿಯನ್ನು ಕಳೆದುಕೊಂಡು ಅತಂತ್ರರಾಗಿರುವ ನಮ್ಮ ಭವಿಷ್ಯತ್ತಿನ ಬದುಕು ಉತ್ತಮವಾಗಬಹುದು ಎಂಬ ನಂಬಿಕೆಯನ್ನು ಕಳೆದುಕೊಂಡು

ಬದುಕುತ್ತಿದ್ದೇವೆ ಎಂಬ ಮಾತುಗಳು ಅಭಿವೃದ್ಧಿ ಚಟುವಟಿಕೆಗಳ ಲಾಭ ಯಾರಿಗೆ ದೊರಕಿರುತ್ತದೆ ಎಂಬುದನ್ನು ಸೂಚ್ಯವಾಗಿ ತೋರಿಸುತ್ತದೆ.

ಬಜ್ಪೆ ಸಮೀಪದ ಉಲ್ಲಾಂಜೆ ಕುಂಟಪದವಿನಲ್ಲಿ ತನ್ನ ಒಂದು ಎಕ್ರೆ ಕೃಷಿ ಭೂಮಿಯಲ್ಲಿ ತರಕಾರಿಯನ್ನು ಬೆಳೆದು 12 ಮಕ್ಕಳನ್ನು ಹೊಂದಿದ್ದ ಸಂಕಪ್ಪ ಗೌಡರದು (ಹೆಸರು ಬದಲಾಯಿಸಲಾಗಿದೆ) ಭೂಸ್ವಾಧೀನಕ್ಕಿಂತ ಮೊದಲು ಸಂತೃಪ್ತ ಕುಟುಂಬವಾಗಿತ್ತು. ಬೆವರು ಸುರಿಸಿ ತರಕಾರಿಯನ್ನು ಬೆಳೆದು ಮಾರಾಟದಿಂದ ಬಂದ ಗಳಿಕೆಯಿಂದ ತಮ್ಮ ಎಂಟು ಮಕ್ಕಳಿಗೆ ಮದುವೆಯನ್ನು ನಡೆಸಿದ ಸಂಕಪ್ಪನವರು ಸ್ವಂತ ಬಾವಿ, ನೀರಾವರಿಗೆ ಪಂಪ್‌ಸೆಟ್‌ನ್ನು ಹೊಂದಿದ್ದರು. ಮಂಗಳೂರು ವಿಶೇಷ ಆರ್ಥಿಕ ವಲಯದ ಭೂಸ್ವಾಧೀನಾಧಿಕಾರಿಗಳು ರಾತ್ರೋರಾತ್ರಿ ಸಂಕಪ್ಪನವರ ವಾಸದ ಮನೆಯನ್ನು ಬಿಟ್ಟು ಕೃಷಿಭೂಮಿಯಲ್ಲಿ ಬೆಳೆದಿದ್ದ ತರಕಾರಿ ತೋಟವನ್ನು ಸಂಪೂರ್ಣವಾಗಿ ನಾಶಪಡಿಸಿ ಬಲವಂತವಾಗಿ ಭೂಸ್ವಾಧೀನಪಡಿಸಿದ್ದು ಅವರನ್ನು ಮಾನಸಿಕ ಅಸ್ವಸ್ಥರನ್ನಾಗಿ ಮಾಡಿರುವುದು[17] ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂತ್ರಸ್ತರ ಅಭಿಪ್ರಾಯಗಳಿಗೆ ಗೌರವವನ್ನು ಕೊಡದೆ ಬಲಪ್ರಯೋಗ ನಡೆಸಿ ಭೂಸ್ವಾಧೀನಪಡಿಸಿರುವುದಕ್ಕೆ ಜ್ವಲಂತ ಉದಾಹರಣೆಯಾಗಿರುತ್ತದೆ.

ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದ ಜನರ ಬದುಕು ಮಾತ್ರ ದುಃಸ್ಥಿತಿಗೆ ತಳ್ಳಲ್ಪಟ್ಟದ್ದಲ್ಲ. ಮಂಗಳೂರು ವಿಶೇಷ ಆರ್ಥಿಕ ವಲಯದ ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರಗುಳಿದ ಬಜ್ಪೆ ಗ್ರಾಮದ ಶಾಂತಿಗುಡ್ಡೆ ಪ್ರದೇಶದ ಸುಮಾರು 115 ಕುಟುಂಬಗಳ ಜೀವನ ಕಳೆದ ಐದಾರು ವರ್ಷಗಳಿಂದ ದುಸ್ತರವಾಗಿರುವುದು ಕಾಣುತ್ತದೆ. ಕೈಗಾರಿಕಾ ಸಮುಚ್ಚಯಗಳಿಗೆ ಅತೀ ಸಮೀಪದಲ್ಲಿಯೇ ಇದ್ದರೂ ಶಾಂತಿಗುಡ್ಡೆಯ 138/1 ಸರ್ವೆ ನಂಬರಿನ 115 ಕುಟುಂಬಗಳಿರುವ ಜಾಗವನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರಗಿಟ್ಟು ಸುತ್ತಮುತ್ತಲಿನ ಉಳಿದೆಲ್ಲಾ ಭೂಮಿಯನ್ನು ಸ್ವಾಧೀನಪಡಿಸಿ ಯೋಜನೆ ಕಾರ್ಯಗತಗೊಂಡಿರುವುದರಿಂದ ಅಲ್ಲಿನ ನಿವಾಸಿಗಳ ಜೀವನ ವಿಷವರ್ತುಲದ ನಡುವೆ ಇರುವ ದ್ವೀಪದಂತೆ ಆಗಿರುತ್ತದೆ. ಈ ಪ್ರದೇಶದ ಸುತ್ತಲೂ ಕಣ್ಣು ಹಾಯಿಸಿದಲ್ಲೆಲ್ಲಾ ಬೃಹತ್ ಕೈಗಾರಿಕೆಗಳ ಸಂಕೀರ್ಣಗಳೇ ಕಂಡುಬರುತ್ತವೆ. ಕೈಗಾರಿಕೆಗಳಿಂದ ಹೊರಬರುತ್ತಿರುವ ಬೆಂಕಿ, ಧೂಳು, ಹೊಗೆಯುಗುಳುವ ಚಿಮಿಣಿಗಳು, ಕಿವಿಗಡಚಿಕ್ಕುವ ಸ್ಫೋಟ, ಕೈಗಾರಿಕಾ ಪ್ಲಾಂಟ್‌ಗಳ ಭಾರೀ ಪ್ರಮಾಣದ ಶಬ್ದ ಶಾಂತಿಗುಡ್ಡೆ ಪರಿಸರದಲ್ಲಿ ಸರಕಾರ ನೀಡಿದ ಐದು ಸೆಂಟ್ಸ್ ನಿವೇಶನದಲ್ಲಿ ಮನೆಗಳನ್ನು ಕಟ್ಟಿ ವಾಸಿಸುತ್ತಿರುವ ಬಡಜನರ ಬದುಕನ್ನು ನರಕಸದೃಶವನ್ನಾಗಿ ಮಾಡಿರುವುದು ಕಂಡುಬಂದಿದ್ದು, ಕೈಗಾರಿಕೆಗಳು ಹೊರಬಿಡುವ ವಿಷಕಾರಿ ತ್ಯಾಜ್ಯಗಳ ನಡುವೆಯೇ ಬದುಕಬೇಕಾದ ಕಾರಣ ಇವರ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ಮಾರಕ ಪರಿಣಾಮ ಉಂಟು ಮಾಡಿದ್ದು ಅಲರ್ಜಿ, ಶೀತ, ತುರಿಕೆ, ಕಿವಿ ಮತ್ತು ಕಣ್ಣಿನ ಸಮಸ್ಯೆಗಳು ಮಕ್ಕಳು, ಯುವಕರು, ವೃದ್ಧರೆನ್ನದೇ ಎಲ್ಲಾ ವಯೋಮಾನದ ಸಂತ್ರಸ್ತರನ್ನೂ ಬಾಧಿಸುತ್ತಿದೆ. ಅಘಾತಕಾರಿ ಸ್ಫೋಟ, ಕಂಪನಗಳಿಂದ ಈಗಾಗಲೇ ಬಹುತೇಕ ಮನೆಗಳು ಬಿರುಕು ಬಿಟ್ಟಿದ್ದು ಕುಸಿತದ ಭೀತಿ ಎದುರಾಗಿರುತ್ತದೆ.

ಕೈಗಾರಿಕಾ ಸಂಕೀರ್ಣಗಳು ತಲೆಯೆತ್ತಿರುವ ಸುತ್ತಲಿನ ಪ್ರದೇಶಗಳಾದ ಜೋಕಟ್ಟೆ, ಕಳವಾರು, ಬೈಕಂಪಾಡಿ ಮುಂತಾದ ಪ್ರದೇಶಗಳಲ್ಲಿಯೂ ಪರಿಸ್ಥಿತಿ ಇದಕ್ಕಿಂತ ಹೊರತಾಗಿಲ್ಲ. ಇದರಿಂದಾಗಿ ಯೋಜನೆಯ ಜಾರಿಗಾಗಿ ಭೂಮಿಯನ್ನು ಕಳೆದುಕೊಂಡು ಅತಂತ್ರರಾಗಿರುವ ಸಂತ್ರಸ್ತರ ಬದುಕಷ್ಟೇ ನಾಶವಾಗಿರದೇ ಸ್ವಾಧೀನಕ್ಕೊಳಪಟ್ಟ ಪ್ರದೇಶದಲ್ಲಿ ಕಾರ್ಯಾರಂಭವನ್ನು ಮಾಡಿರುವ ಬೃಹತ್ ಕೈಗಾರಿಕೆಗಳ ಸಮೀಪದಲ್ಲಿ ಭೂಸ್ವಾಧೀನಕ್ಕೊಳಗಾಗದೇ ವಾಸಿಸುತ್ತಿರುವ ಕುಟುಂಬಗಳ ಜೀವನವು ಹದಗೆಟ್ಟು ಹೋಗಿರುವುದನ್ನು[18] ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ.

ಯೋಜನೆಯಿಂದ ಸಂತ್ರಸ್ತರಾಗಿ ಭೂಮಿಯನ್ನು ಕಳೆದುಕೊಂಡವರಿಗೆ ಮನೆಗಳನ್ನು ನಿರ್ಮಿಸಲು ಹನ್ನೊಂದು ಪುನರ್‌ವಸತಿ ಕಾಲನಿಗಳನ್ನು ರಚಿಸಲಾಗಿದ್ದು, ಸಂತ್ರಸ್ತರು ತಮ್ಮ ಪೂರ್ವದಲ್ಲಿ ಹೊಂದಿದ್ದ ಭೂಮಿಗಳಿಗೆ ಅನುಗುಣವಾಗಿ ಮನೆಗಳನ್ನು ನಿರ್ಮಿಸಲು ಕಾಲನಿಗಳಲ್ಲಿ ನಿವೇಶನಗಳನ್ನು ನೀಡಲಾಗಿರುತ್ತದೆ.[19] ಹೆಚ್ಚಿನ ಭೂಸಂತ್ರಸ್ತರು ತಮಗೆ ಪರಿಹಾರವಾಗಿ ದೊರಕಿದ ನಗದು ಹಣವನ್ನು ಬಳಸಿ ಪುನರ್‌ವಸತಿ ಕಾಲನಿಗಳಲ್ಲಿ ಮನೆಗಳನ್ನು ಕಟ್ಟಿ ತಮ್ಮ ಜೀವನವನ್ನು ಮುಂದುವರಿಸುತ್ತಿದ್ದಾರೆ. ಕಾಲನಿಗಳ ಸಂಪೂರ್ಣ ನಿರ್ವಹಣೆಯನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ಪ್ರಾಧಿಕಾರ ಪುನರ್‌ವಸತಿ ನೀತಿಯಂತೆ ಐದು ವರ್ಷಗಳ ಕಾಲ ನಡೆಸಿ ಅಭಿವೃದ್ಧಿಪಡಿಸಿ ನಂತರದಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಗರಪಾಲಿಕೆಗಳಿಗೆ ಹಸ್ತಾಂತರಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.[20] ಈ ನಿಯಮವು ಸಂತ್ರಸ್ತರುಗಳಿಗೆ ಹಲವಾರು ಸಮಸ್ಯೆಗಳನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಹೊಸತಾಗಿ ಕಟ್ಟಿಸಿದ ಮನೆಗಳಿಗೆ ಗ್ರಾಮ ಪಂಚಾಯತ್ ಅಥವಾ ನಗರಪಾಲಿಕೆ ಮನೆಸಂಖ್ಯೆಯನ್ನು ನೀಡುವುದಕ್ಕೆ ಪ್ರಸ್ತುತ ನಿಯಮದಿಂದಾಗಿ ಅವಕಾಶವಿರುವುದಿಲ್ಲ. ನಿವೇಶನಗಳಿಗೆ ಸರಿಯಾದ ದಾಖಲೆಪತ್ರಗಳು ಇಲ್ಲದೇ ಇರುವುದು ಪುನರ್‌ವಸತಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರುಗಳಿಗೆ ಹೊಸ ಪಡಿತರಚೀಟಿಗಳನ್ನು ಹೊಂದುವುದಕ್ಕೆ ಮತ್ತು ಅದರ ನವೀಕರಣಕ್ಕೆ ಹಾಗೂ ಸರಕಾರದಿಂದ ದೊರಕುವ ಇತರ ಸೌಲಭ್ಯಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೆಚ್ಚಿನ ಭೂಸಂತ್ರಸ್ತರು ತಮ್ಮ ಅಳಲನ್ನು ತೋಡಿಕೊಂಡಿರುತ್ತಾರೆ. ಕಾಲನಿಗಳಲ್ಲಿ ಒಳಚರಂಡಿ, ರಸ್ತೆ, ಬೀದಿದೀಪಗಳನ್ನು, ಆಟದ ಮೈದಾನಗಳನ್ನು ನಿರ್ಮಿಸುವುದಾಗಿ ಪುನರ್‌ವಸತಿ ನೀತಿ ವಿವರಿಸಿದ್ದರೂ ಎಲ್ಲಾ ಹನ್ನೊಂದು ಕಾಲನಿಗಳಲ್ಲಿ ಮೂಲಭೂತ ಸೌಕರ್ಯಗಳು ಸುಸಜ್ಜಿತವಾಗಿ ರಚಿಸಲ್ಪಟ್ಟಿಲ್ಲದಿರುವುದು ಸಂತ್ರಸ್ತರುಗಳ ಬದುಕನ್ನು ಮತ್ತಷ್ಟು ಹೀನಾಯಗೊಳಿಸಿರುವುದು ಕಂಡುಬಂದಿರುತ್ತದೆ. ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳು ಸಂಪೂರ್ಣಗೊಂಡಿಲ್ಲದಿರುವುದರಿಂದ ಮಳೆಯ ನೀರು ಸಮರ್ಪಕವಾಗಿ ಹರಿದುಹೋಗುತ್ತಿಲ್ಲ. ಚರಂಡಿಯ ಒಳಗೆ ಮಳೆಯ ನೀರು ತುಂಬಿಕೊಳ್ಳುತ್ತಿರುವುದು ಕಾಲನಿಗಳಲ್ಲಿ ವಾಸಿಸುತ್ತಿರುವ ಚಿಕ್ಕ ಮಕ್ಕಳ ಪ್ರಾಣಕ್ಕೆ ಸಂಚಕಾರ ತರುವ ಸಾಧ್ಯತೆಯಿದೆ ಮಾತ್ರವಲ್ಲದೇ ಅಲ್ಲಿ ತುಂಬುವ ಕೊಳಚೆ ನೀರು ಸೊಳ್ಳೆಗಳ ಉತ್ಪಾದನಾ ತಾಣಗಳಾಗಿ

ಪರಿಣಮಿಸಿ ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ದಾರಿ ಮಾಡಿಕೊಡುತ್ತಿದೆ[21] ಎಂದು ಪೆರ್ಮುದೆ ಪುನರ್‌ವಸತಿ ಕಾಲನಿಯಲ್ಲಿ ವಾಸಿಸುತ್ತಿರುವವರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿರುತ್ತಾರೆ.

ಒರಿಸ್ಸಾದ ಭುವನೇಶ್ವರದಲ್ಲಿ ಸ್ಥಾಪಿಸಲ್ಪಟ್ಟ ನೆಲ್ಕೊ ಮತ್ತು ಕೊಲಬ್ ಮೇಲ್ದಂಡೆ ಯೋಜನೆಯ ಭೂಸಂತ್ರಸ್ತರ ಅಧ್ಯಯನವನ್ನು ನಡೆಸಿದ ರೆಡ್ಡಿ ಯು.ಬಿ. (1992)ರವರು 'ಸಂತ್ರಸ್ತರ ಪುನರ್‌ವಸತಿಯನ್ನು ಅತ್ಯಂತ ನಿಧಾನಗತಿಯಲ್ಲಿ ಮತ್ತು ಜಾಗರೂಕವಾಗಿ ಜಾರಿಗೆ ತಂದಾಗ ಮಾತ್ರ ಸ್ಥಳೀಯ ಜನರು ಬದಲಾದ ಪರಿಸ್ಥಿತಿಗೆ ಹೊಂದಾಣಿಕೆಯಾಗಲು ಸಾಧ್ಯವಾಗುತ್ತದೆ. ದೂರದೃಷ್ಟಿತ್ವದ ಕೊರತೆ ಹಾಗೂ ಸಮರ್ಪಕವಾದ ಪೂರ್ವಯೋಜನೆಗಳನ್ನು ಕೈಗೊಳ್ಳದೇ ಇರುವುದರಿಂದಾಗಿ ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸಲು ಆರಂಭಿಸಿದ ಸಂತ್ರಸ್ತರುಗಳ ಬದುಕು ಯಾತನಾಮಯವಾಗಲು ಕಾರಣವಾಯಿತು'[22] ಎಂಬ ಕಂಡುಕೊಳ್ಳುವಿಕೆಯು ಸಂತ್ರಸ್ತರ ಪುನರ್‌ವಸತಿಯನ್ನು ಪ್ರಾಮಾಣಿಕವಾಗಿ ಹಾಗೂ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವಶ್ಯಕತೆಗಳಿಗೆ ಅನುಗುಣವಾಗಿ ನಡೆಸಿದಾಗ ಮಾತ್ರ ಸಂತ್ರಸ್ತರು ಸಂತೃಪ್ತರಾಗುತ್ತಾರೆ ಎನ್ನುವುದನ್ನು ಸೂಚಿಸುತ್ತದೆ. ಪ್ರಸ್ತುತ ಯೋಜನೆಯ ನಿರ್ವಸಿತರಿಗಾಗಿ ಪುನರ್‌ವಸತಿ ಕಾಲನಿಗಳನ್ನು ರಚಿಸಿದ ಸಂದರ್ಭದಲ್ಲಿನ ದೂರದೃಷ್ಟಿತ್ವ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯ ಕೊರತೆಯಿಂದಾಗಿಯೇ ಸಂತ್ರಸ್ತರುಗಳು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿತು ಎಂದು ತಿಳಿದುಬರುತ್ತದೆ.

ತಮ್ಮ ಜೀವನ ನಿರ್ವಹಣೆಗಾಗಿ ಗ್ರಾಮಾಂತರ ಪ್ರದೇಶದಲ್ಲಿ ನಡೆಸುತಿದ್ದ ಸಾಂಪ್ರದಾಯಿಕ ಉದ್ಯೋಗಗಳು ಹೊಸ ಪ್ರದೇಶದಲ್ಲಿ ನಗರದ ವಾತಾವರಣ ನಿರ್ಮಾಣಗೊಂಡ ಕಾರಣ ಸಂತ್ರಸ್ತರುಗಳಿಗೆ ಮುಂದುವರಿಸಲು ಆಗುವುದಿಲ್ಲ. ಗದ್ದೆ ಮತ್ತು ತೋಟಗಳ ಕೃಷಿ ಚಟುವಟಿಕೆಗಳಲ್ಲಿ ದುಡಿಯುತ್ತಿದ್ದ ಶ್ರಮಿಕವರ್ಗದ ಕಾರ್ಮಿಕರು, ಗದ್ದೆ ಮತ್ತು ತೋಟಗಳು ಭೂಸ್ವಾಧೀನದ ಬಳಿಕ ಸಂಪೂರ್ಣವಾಗಿ ನಾಶವಾದುದರಿಂದ ಪುನರ್‌ವಸತಿ ಪ್ರದೇಶಗಳಲ್ಲಿ ಅದೇ ಉದ್ಯೋಗವನ್ನು ಮುಂದುವರಿಸಲಾಗದೇ ಪರಿತಪಿಸುವ ವಾತಾವರಣ ಸೃಷ್ಟಿಯಾಗಿರುತ್ತದೆ. ಹೊಸ ಪ್ರದೇಶದಲ್ಲಿ ಪರಿಹಾರದ ನಗದು ಮೊತ್ತದ ಜೊತೆಗೆ ಅನೌಪಚಾರಿಕ ವಲಯಗಳಿಂದ ಸಾಲವನ್ನು ಪಡೆದು ಕಷ್ಟದಿಂದ ಮನೆಗಳನ್ನು ನಿರ್ಮಿಸಿ ವಾಸಿಸುತ್ತಿರುವ ಶ್ರಮಿಕವರ್ಗದವರ ಜೊತೆಯಲ್ಲಿ ಮಾತನಾಡಿದಾಗ, 'ನಮ್ಮ ಭೂಮಿಯ ದಾಖಲೆಪತ್ರಗಳು ಸರಿಯಾಗಿಲ್ಲವೆಂಬ ಕಾರಣವನ್ನು ನೀಡಿ ಸೂಕ್ತ ಪರಿಹಾರವನ್ನು ನೀಡಲು ಸತಾಯಿಸುತ್ತಿದ್ದಾರೆ. ಉದ್ಯೋಗವನ್ನೂ ಕೊಟ್ಟಿಲ್ಲ. ಗದ್ದೆ ಕೆಲಸಗಳಿಗೆ ಹೋಗೋಣವೆಂದರೆ ಪ್ರಸ್ತುತ ಪ್ರದೇಶದಲ್ಲಿ ಗದ್ದೆಗಳೇ ಇಲ್ಲ. ಇದರಿಂದಾಗಿ ಜೀವನ ನಿರ್ವಹಣೆ ಕಷ್ಟಕರವಾಗಿರುತ್ತದೆ'[23] ಎಂದು ತಿಳಿಸಿರುವುದು ದೊಡ್ಡ ಯೋಜನೆಗಳು ಬಂದಾಗ ಧ್ವನಿ ಇಲ್ಲದ ಬಡಜನರ ಬದುಕು ಯಾವ ರೀತಿಯಲ್ಲಿ ಲೆಕ್ಕಕ್ಕೇ ಸಿಗದಂತೆ ಮೂರಾಬಟ್ಟೆಯಾಗುತ್ತದೆ ಎಂಬುದನ್ನು ಎತ್ತಿ ತೋರಿಸುತ್ತದೆ.

ಭೂಸ್ವಾಧೀನ ಪ್ರಕ್ರಿಯೆಯಿಂದ ಹೆಚ್ಚು ತೊಂದರೆಗೊಳಗಾದವರು ಹಳ್ಳಿಗಳಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಸಾಂಪ್ರದಾಯಿಕ ಉದ್ಯೋಗಗಳನ್ನು ಮಾಡುತ್ತಿದ್ದ ಕೆಳಜಾತಿಗೆ ಸೇರಿದವರೆಂದು ಕರೆಯಿಸಿಕೊಳ್ಳುತ್ತಿದ್ದ ಬಡಜನತೆ. ಭೂಸ್ವಾಧೀನಕ್ಕೊಳಪಟ್ಟ ಪ್ರದೇಶದಲ್ಲಿ ನಿರ್ದಿಷ್ಟ ಜಾತಿಗೆ ಸೇರಿದ ಕೆಲವು ಸಂತ್ರಸ್ತರು ಈ ಹಿಂದೆ ತಾಳೆಯ ಮತ್ತು ತೆಂಗಿನ ಮರದಿಂದ ಶೇಂದಿ ಇಳಿಸುವುದನ್ನು ತಮ್ಮ ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದರು. ನಂತರದಲ್ಲಿ ತೆಂಗಿನ ತೋಟ ಮತ್ತು ತಾಳೆಯ ಮರಗಳು ಸಂಪೂರ್ಣವಾಗಿ ನಶಿಸಿ, ಹಿಂದೆ ಮಾಡುತ್ತಿದ್ದ ಸಾಂಪ್ರದಾಯಿಕ ಕಸುಬನ್ನು ಪ್ರಸ್ತುತದಲ್ಲಿ ಮುಂದುವರಿಸಲು ಸಾಧ್ಯವಾಗುತ್ತಿಲ್ಲವೆಂದು ತಮ್ಮ ಕೊರಗನ್ನು ವ್ಯಕ್ತಪಡಿಸಿರುತ್ತಾರೆ. ಯೋಜನೆಗಾಗಿ ಸ್ವಾಧೀನಪಡಿಸಲ್ಪಟ್ಟ ಪ್ರದೇಶದಲ್ಲಿ ಕುಶಲಕರ್ಮಿಗಳಾದ ಕುಂಬಾರರು, ನೇಕಾರರು, ಚಮ್ಮಾರರು, ಕ್ಷೌರಿಕರ ಸಂಖ್ಯೆ ಕಡಿಮೆ ಕಂಡುಬಂದಿದ್ದು, ಹೆಚ್ಚಿನ ಕುಶಲಕರ್ಮಿಗಳು ಪುನರ್‌ವಸತಿ ಪ್ರದೇಶದಲ್ಲಿ ನೆಲೆನಿಂತ ಬಳಿಕ ತಮ್ಮ ಸಾಂಪ್ರದಾಯಿಕ ಉದ್ಯೋಗವನ್ನು ಮುಂದುವರೆಸಲು ಸಾಧ್ಯವಾಗದೇ ಹೊಸ ಉದ್ಯೋಗವನ್ನು ನಡೆಸಲು ಯಾವುದೇ ವಿಶೇಷ ಕೌಶಲ್ಯಗಳ ಅರಿವಿಲ್ಲದೇ ಒದ್ದಾಡುತ್ತಿರುವುದು ಅವರುಗಳ ಬದುಕು ಅಸಹನೀಯವಾಗಿರುವುದಕ್ಕೆ ಸಾಕ್ಷಿಯಾಗಿರುತ್ತದೆ.

ಎಲ್ಲಾ ಪುನರ್‌ವಸತಿ ಕಾಲನಿಗಳು ನಗರ ಪ್ರದೇಶಗಳಿಂದ ದೂರದಲ್ಲಿ ನಿರ್ಮಾಣ ಆಗಿರುವುದರಿಂದ ಸಮರ್ಪಕ ಸಾರಿಗೆ ವ್ಯವಸ್ಥೆ ಇಲ್ಲದೇ ಇರುವುದು ಸಂತ್ರಸ್ತರ ಜೀವನವನ್ನು ಮತ್ತಷ್ಟು ಸಂಕಷ್ಟಗಳಿಗೆ ಸಿಲುಕಿಸಿದೆ. ಅವಲಂಬಿತರ ಶಿಕ್ಷಣಕ್ಕಾಗಿ ಪುನರ್‌ವಸತಿ ಪ್ರದೇಶದಲ್ಲಿ ಹಿಂದಿಗಿಂತಲೂ ಹೆಚ್ಚು ಖರ್ಚು ಮಾಡುವ ಸಂದರ್ಭ ಬಂದಿರುತ್ತದೆ ಎಂದು ತಿಳಿಸಿದ ಸಂದರ್ಶಿತರು ಹಿಂದಿನ ನೆಲೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಸಮೀಪದಲ್ಲಿಯೇ ಶಾಲಾ-ಕಾಲೇಜುಗಳು ಲಭ್ಯವಿದ್ದವು ಮಾತ್ರವಲ್ಲ ಸಾರಿಗೆ ವ್ಯವಸ್ಥೆಗಳು ಕೂಡಾ ಅತ್ಯುತ್ತಮವಾಗಿದ್ದವು. ಪುನರ್‌ವಸತಿ ಪ್ರದೇಶ ಶಾಲಾ-ಕಾಲೇಜುಗಳಿಂದ 8 ರಿಂದ 10 ಕಿ.ಮೀ. ದೂರದಲ್ಲಿದ್ದು, ದಿನನಿತ್ಯದ ಓಡಾಟಕ್ಕೆ ಸಾರ್ವಜನಿಕ ವಾಹನಗಳ ಲಭ್ಯತೆ ಇಲ್ಲದೆ ಇರುವುದರಿಂದ ಒಂದು ಮಗುವಿಗೆ ತಿಂಗಳಿಗೆ 500 ರಿಂದ 600 ರೂಪಾಯಿಯವರೆಗೆ ಖರ್ಚು ಬರುತ್ತಿರುವುದು ಇದಕ್ಕೆ ಪುನರ್‌ವಸತಿ ಪ್ರದೇಶದಿಂದ ದೂರದ ಸುರತ್ಕಲ್, ಮಂಗಳೂರಿಗೆ ಸರಿಯಾದ ಬಸ್ಸುಗಳ ವ್ಯವಸ್ಥೆ ಇಲ್ಲದೆ ಇರುವುದು ಕಾರಣವಾಗಿದ್ದು ಹೆಚ್ಚಿನ ಖರ್ಚು-ವೆಚ್ಚವನ್ನು ತರುತ್ತದೆ. ಅಸೌಖ್ಯದಿಂದ ದೂರದ ಆಸ್ಪತ್ರೆಗಳಿಗೆ ರೋಗಿಗಳನ್ನು, ವೃದ್ಧರನ್ನು ಕರೆದುಕೊಂಡು ಹೋಗುವುದಕ್ಕೆ ವಾಹನಗಳನ್ನು ಬಾಡಿಗೆಗೆ ಪಡೆಯುವುದು ಹೆಚ್ಚಿನ ಖರ್ಚನ್ನು ತಂದು ಮೊದಲೇ ಆರ್ಥಿಕವಾಗಿ ಬಲಿಷ್ಟರಾಗಿರದ ನಮ್ಮ ಜೀವನ ನರಕ ಸದೃಶವಾಗಿರುತ್ತದೆ. ಇದಕ್ಕೆ ಪುನರ್‌ವಸತಿ ಪ್ರದೇಶಗಳಲ್ಲಿ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ವ್ಯವಸ್ಥೆ ಕಲ್ಪಿಸಲು ಆದ್ಯತೆ ನೀಡದಿರುವುದು ಕಾರಣವಾಗಿರುತ್ತದೆಯೆಂದು ಸಂತ್ರಸ್ತರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತಾರೆ.

ಭೂಸ್ವಾಧೀನದ ನಂತರ ಅತ್ಯುತ್ತಮ ಪರಿಹಾರ, ಆರಂಭಗೊಳ್ಳುವ ಕೈಗಾರಿಕೆಗಳಲ್ಲಿ ಕುಟುಂಬದ ಒಬ್ಬ ಸದಸ್ಯರಿಗೆ ಒಳ್ಳೆಯ ಉದ್ಯೋಗ, ಪುನರ್‌ವಸತಿ ಪ್ರದೇಶದಲ್ಲಿ ನಗರಗಳಲ್ಲಿ ದೊರಕುವ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತೇವೆಂದು ಪೊಳ್ಳು ಭರವಸೆಯನ್ನು ನೀಡಿದ ಭೂಸ್ವಾಧೀನಕ್ಕೆ ಬಂದಂತಹ ಅಧಿಕಾರಿಗಳು, ನಮ್ಮಲ್ಲಿ ಹಗಲುಗನಸು, ಭರವಸೆಗಳನ್ನು ತುಂಬಿದರು. ಆದರೆ, ಈಗ ಪುನರ್‌ವಸತಿ ಪ್ರದೇಶದಲ್ಲಿನ ಸಮಸ್ಯೆಗಳಿಗೆ ಜಾಣ ಕಿವುಡುತನವನ್ನು ಪ್ರದರ್ಶಿಸುತ್ತಾ ಇದ್ದಾರೆ ಎಂದು ತಮ್ಮ ಅಸಹಾಯಕ ಸ್ಥಿತಿಯ ಬಗ್ಗೆ ಮಾಹಿತಿದಾರರು ಪಶ್ಚಾತ್ತಾಪವನ್ನು ವ್ಯಕ್ತಪಡಿಸುತ್ತಿರುವುದು ಅವರ ಮಾತುಗಳಲ್ಲಿ ವ್ಯಕ್ತಗೊಂಡಿರುತ್ತದೆ.

ಶಾಲಾ–ಕಾಲೇಜು, ಆರೋಗ್ಯ ವ್ಯವಸ್ಥೆ, ಅಂಚೆ ಕಛೇರಿ, ಬ್ಯಾಂಕ್, ಮಾರುಕಟ್ಟೆಗಳ ರಚನೆಗಳನ್ನು ಪುನರ್‌ವಸತಿ ನೀತಿಯಲ್ಲಿ ವಿವರಿಸಿದ್ದರೂ ಅವುಗಳನ್ನು ಕಲ್ಪಿಸದೇ ಇರುವುದು ಮತ್ತಷ್ಟು ಸಮಸ್ಯೆಗಳನ್ನು ಸೃಷ್ಟಿಸಿರುತ್ತದೆ. ವಾರದ ಎಲ್ಲಾ ದಿನಗಳಲ್ಲಿ ಕುಡಿಯಲು ಮತ್ತು ಮನೆವಾರ್ತೆಯ ಬಳಕೆಗಾಗಿ ನೀರು ಲಭ್ಯವಾಗುವುದಿಲ್ಲ. ವಾರಕ್ಕೆ ಎರಡು ಬಾರಿ ಆರುನೂರು ರೂಪಾಯಿಯಷ್ಟು ಖರ್ಚು ಮಾಡಿ ಖಾಸಗಿ ನೀರು ಸರಬರಾಜು ಟ್ಯಾಂಕರ್‌ಗಳಿಂದ ನೀರನ್ನು ತಂದು ತುಂಬಿಸುವ ಪರಿಸ್ಥಿತಿಯಿದೆ. ನೋಡುವುದಕ್ಕೆ ಸುಸಜ್ಜಿತ ಕಾಲನಿಗಳು. ಆದರೆ ಇಲ್ಲಿರುವ ಅವ್ಯವಸ್ಥೆಗಳನ್ನು ಕೇಳುವವರಿಲ್ಲ'[24] ಎಂದು ಪ್ರತಿಕ್ರಿಯಿಸಿದ ಕೋಡಿಕೆರೆ, ಕುಳಾಯಿ ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳು ವ್ಯವಸ್ಥೆಯ ಬಗ್ಗೆ ತಮ್ಮ ಅತೃಪ್ತಿಯನ್ನು ತೋಡಿಕೊಂಡಿರುತ್ತಾರೆ. ಸ್ಥಳಾಂತರದ ಪೂರ್ವದಲ್ಲಿ ಹೆಚ್ಚಿನ ನಗದು ಪರಿಹಾರ, ಉದ್ಯೋಗ ಮತ್ತು ಪುನರ್‌ವಸತಿ ಪ್ರದೇಶಗಳಲ್ಲಿ ಸುಸಜ್ಜಿತ ಮನೆ ನಿವೇಶನಗಳನ್ನು ಪರಿಹಾರವಾಗಿ ನೀಡುತ್ತೇವೆ ಎಂದು ನಮ್ಮನ್ನು ನಂಬಿಸಿದ ಭೂಸ್ವಾಧೀನ ಪ್ರಾಧಿಕಾರದ ಅಧಿಕಾರಿಗಳು, ಕಾಲನಿಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೇ ನಮ್ಮನ್ನು ವಂಚಿಸಿರುತ್ತಾರೆ ಎಂದು ತಮ್ಮ ಸಿಟ್ಟು, ಅಳಲನ್ನು ತೆರೆದಿಟ್ಟ ಸಂತ್ರಸ್ತರುಗಳು 'ಬೀಡಿಕಟ್ಟಿ ಬದುಕೋಣವೆಂದರೆ ಅದಕ್ಕೂ ಇಲ್ಲಿ ಸಮರ್ಪಕ ವ್ಯವಸ್ಥೆಗಳಿಲ್ಲ. ಕೂಲಿ ಕೆಲಸ ಮಾಡೋಣವೆಂದರೆ ಅವಕಾಶಗಳೇ ಲಭ್ಯವಿಲ್ಲ'[25] ಎಂದು ಉತ್ತರಿಸಿ ಪ್ರಸ್ತುತ ನಮ್ಮ ಜೀವನವು ನಾಲ್ಕು ಗೋಡೆಯ ನಡುವೆ ಇರುವ ಬಂಧಿಗಳಂತಾಗಿದೆ ಎಂದು ಪಶ್ಚಾತ್ತಾಪಪಡುತ್ತಿರುವುದು ವ್ಯವಸ್ಥೆಯ ದೊಡ್ಡ ಅಣಕವೆಂದು ಪರಿಗಣಿಸಬಹುದು.

'ಮೂಲನೆಲೆಗಳಿಂದ ಯಾವುದೇ ಕಾರಣಕ್ಕೂ ಸ್ಥಳಾಂತರವಾಗುವುದಿಲ್ಲವೆಂದು ಪಟ್ಟುಹಿಡಿದು ಕುಳಿತುಕೊಂಡಾಗ ಗೂಂಡಾಶಕ್ತಿಗಳನ್ನು ಬಳಸಿ ನಮ್ಮ ಮನೆಯ ಸುತ್ತಲಿನ ಮರಗಳನ್ನು, ತೋಟಗಳನ್ನು ನಾಶಪಡಿಸಿದ್ದಲ್ಲದೇ, ನಮ್ಮ ವಿರುದ್ಧ ಸರಕಾರಿ ಕೆಲಸಕ್ಕೆ ಅಡ್ಡಿಪಡಿಸಿದರೆಂದು ಆರೋಪ ಹೊರಿಸಿ ಪೋಲೀಸ್ ಠಾಣೆಗಳಲ್ಲಿ ಸುಳ್ಳು ದೂರುಗಳನ್ನು ದಾಖಲಿಸಿದರು. ಹೀಗೆ ಪರಿಸರದಲ್ಲಿ ಭಯದ ವಾತಾವರಣವನ್ನು ಸೃಷ್ಟಿಸಿ ಬಲವಂತದಿಂದ ನಮ್ಮ ಭೂಮಿಯನ್ನು ಸ್ವಾಧೀನಪಡಿಸಿ ನಮ್ಮನ್ನು ಸ್ಥಳಾಂತರಗೊಳಿಸಿದರು'[26] ಎಂಬ ಅಭಿಪ್ರಾಯವನ್ನು ಕೆಲವು ಸಂತ್ರಸ್ತರು ವ್ಯಕ್ತಪಡಿಸಿರುತ್ತಾರೆ.

ಭೂಮಿಯನ್ನು ಕಳೆದುಕೊಂಡರೂ ಸ್ಥಳಾಂತರ ನಂತರದ ಹೊಸ ವ್ಯವಸ್ಥೆಯಲ್ಲಿ ಒಳ್ಳೆಯ ಜೀವನವನ್ನು ನಡೆಸಬಹುದು ಎಂಬ ನಂಬಿಕೆ ಸಂತ್ರಸ್ತರಲ್ಲಿ ಇದ್ದಿತ್ತು. ಇದಕ್ಕೆ ಭೂಸ್ವಾಧೀನ ಪ್ರಾಧಿಕಾರದ ಅಧಿಕಾರಿಗಳು ನೀಡಿದ ಆಶ್ವಾಸನೆಗಳೇ ಕಾರಣವಾಗಿದ್ದವು ಎಂಬುದು ಹೆಚ್ಚಿನ ಸಂತ್ರಸ್ತರ ಅಭಿಪ್ರಾಯವಾಗಿತ್ತು. 'ಸ್ವಾಧೀನಗೊಂಡ ಭೂಮಿಯ ನ್ಯಾಯೋಚಿತ ಪರಿಹಾರವನ್ನು ನೀಡಲು ಅಧಿಕಾರಿಗಳು ನಮ್ಮನ್ನು ತುಂಬಾ ಸತಾಯಿಸಿದ್ದರು ಮಾತ್ರವಲ್ಲದೇ ನಮ್ಮಿಂದ ಲಂಚವನ್ನು ಕೂಡಾ ಪಡೆದುಕೊಂಡಿದ್ದರು. ಸಿರಿವಂತ ಹಾಗೂ ಪ್ರಭಾವೀ ಭೂಸಂತ್ರಸ್ತರು ಪುನರ್‌ವಸತಿ ಪ್ರದೇಶಗಳಲ್ಲಿ ಅತ್ಯುತ್ತಮ ನಿವೇಶನಗಳನ್ನು ಹಾಗೂ ತಮ್ಮ ಮಕ್ಕಳಿಗೆ ಸ್ಥಾಪಿಸಲ್ಪಟ್ಟ ಕೈಗಾರಿಕೆಗಳಲ್ಲಿ ಉತ್ತಮ ಉದ್ಯೋಗವನ್ನು ಶೀಘ್ರವಾಗಿ ಪಡೆಯುವಲ್ಲಿ ಯಶಸ್ವಿಯಾದರು. ಮಧ್ಯವರ್ತಿಗಳು ನಮಗೆ ಶೀಘ್ರವಾಗಿ ಪರಿಹಾರವನ್ನು ದೊರಕಿಸಿಕೊಡುತ್ತೇವೆ ಎಂದು ನಂಬಿಸಿ, ಆರ್ಥಿಕವಾಗಿ ನಮ್ಮನ್ನು ಶೋಷಿಸಿ ಮೋಸಗೊಳಿಸಿದ ಪ್ರಸಂಗಗಳೂ ನಡೆದಿರುತ್ತದೆ'[27] ಎಂದು ಸಂತ್ರಸ್ತರು ತಮ್ಮ ಅಸಹಾಯಕತೆಯನ್ನು ವಿವರಿಸಿದ್ದು ವ್ಯವಸ್ಥೆಯ ವ್ಯಂಗ್ಯವೆಂದು ಹೇಳಬಹುದು. ಭೂಮಿ ಕಳೆದುಕೊಂಡು ಯೋಗ್ಯ ಪರಿಹಾರ ದೊರಕದೇ ನೊಂದಿದ್ದ ಸಂತ್ರಸ್ತರ ನೋವನ್ನು ಕಡಿಮೆಗೊಳಿಸುವ ಬದಲಾಗಿ ತಮ್ಮ ಲಾಭವನ್ನೇ ಗುರಿಯಾಗಿರಿಸಿ ಮಧ್ಯವರ್ತಿಗಳು ಸಂತ್ರಸ್ತರನ್ನು ಶೋಷಣೆಗೊಳಪಡಿಸಿದ್ದು ಅವರ ಸಮಸ್ಯೆಗಳು ಹೆಚ್ಚು ಬಿಗಡಾಯಿಸುವಂತೆ ಮಾಡಿರುವುದು ಸಂತ್ರಸ್ತರ ಮಾತುಗಳಲ್ಲಿ ಕಂಡುಬರುತ್ತಿತ್ತು. ಪುನರ್‌ವಸತಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ನೀಡದೇ ಇರುವುದು ಸಂತ್ರಸ್ತರುಗಳ ಯಾತನಾಮಯ ಬದುಕಿಗೆ ಕಾರಣವಾಗಿರುತ್ತದೆ. ನಗರಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಪುನರ್‌ವಸತಿ ಪ್ರದೇಶಗಳಲ್ಲಿ ನೀಡಿದ್ದರೂ ಅವುಗಳು ಸಮರ್ಪಕವಾಗಿ ನಿರ್ವಹಿಸಲ್ಪಡದೇ ಇದ್ದುದು ಸಂತ್ರಸ್ತರುಗಳ ಸಮಸ್ಯೆ ಹೆಚ್ಚಳವಾಗಿರುವುದಕ್ಕೆ ಕಾರಣವಾಗಿರುತ್ತದೆ. ಭೂಸ್ವಾಧೀನದ ಸಂದರ್ಭದಲ್ಲಿ ಅಧಿಕಾರಿಗಳು ತೋರಿಸಿದ ಕಾಳಜಿ ಮತ್ತು ಆಸಕ್ತಿ, ಸಂತ್ರಸ್ತರ ಪುನರ್‌ವಸತಿ ವ್ಯವಸ್ಥೆಯನ್ನು ಕಲ್ಪಿಸುವ ಸಂದರ್ಭದಲ್ಲಿ ಮಾಡದೇ ಅಸಡ್ಡೆಯನ್ನು ಮಾಡಿರುವುದನ್ನು, ಸಂತ್ರಸ್ತರುಗಳ ಸಮಸ್ಯೆಗಳಿಗೆ ಪುನರ್‌ವಸತಿಯ ನಂತರ ಸ್ಪಂದಿಸದೇ ಇರುವುದು ಅವರುಗಳ ಬದುಕು ಅಸಹನೀಯಗೊಳ್ಳಲು ಕಾರಣವಾಗಿರುತ್ತದೆ ಎಂಬುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಶೋಧಕನು ಸಂತ್ರಸ್ತರ ಜೊತೆಯಲ್ಲಿ ಮಾತುಕತೆ ನಡೆಸಿದ ಸಂದರ್ಭದಲ್ಲಿ ಅರಿತುಕೊಂಡ ವಾಸ್ತವಿಕ ಅಂಶವಾಗಿರುತ್ತದೆ. ಸ್ಥಳಾಂತರದ ಸಂದರ್ಭದಲ್ಲಿ ಅಧಿಕಾರಿಗಳು ತೋರಿಸಿದ ಆಸಕ್ತಿಯನ್ನು, ಪುನರ್‌ವಸತಿಯ ನಂತರದಲ್ಲಿಯೂ ತೋರಿಸಿರುತ್ತಿದ್ದರೆ ಸಂತ್ರಸ್ತರು ಯಾವುದೇ ಸಮಸ್ಯೆಗಳನ್ನು ಎದುರಿಸುವ ಪ್ರಮೇಯವೇ ಸೃಷ್ಟಿಯಾಗುತ್ತಿರಲಿಲ್ಲ ಎಂಬುದು ಹೆಚ್ಚಿನ ಸಂತ್ರಸ್ತರ ಅಭಿಪ್ರಾಯವಾಗಿತ್ತು.

ಬಲವಂತದ ಸ್ಥಳಾಂತರದ ಇತಿಹಾಸವನ್ನು ಗಮನಿಸಿದರೆ ಸಂತ್ರಸ್ತರ ಅವನತಿ ಹಾಗೂ ಸಾಮಾಜಿಕ ಅಸ್ತವ್ಯಸ್ತಗಳ ಬಗೆಗೆ ಹೆಚ್ಚು ವಿವರಿಸುತ್ತದೆ.[28] ಭಾರತದಲ್ಲಿ ಸ್ವಾತಂತ್ರ್ಯಾನಂತರ ಸ್ಥಳಾಂತರಿಸಲ್ಪಟ್ಟ 75% ಅಂದರೆ ಇಪ್ಪತ್ತು ದಶಲಕ್ಷ ಸಂತ್ರಸ್ತರು ದೈಹಿಕವಾಗಿ ಮಾತ್ರ ಸ್ಥಳಾಂತರಿಸಲ್ಪಟ್ಟಿದ್ದಾರೆಯೇ ಹೊರತು ಸಾಮಾಜಿಕವಾಗಿ,

ಮಾನಸಿಕ ಮತ್ತು ಆರ್ಥಿಕವಾಗಿ ಪುನರ್‌ವಸತಿಯನ್ನು ಹೊಂದಿರುವುದಿಲ್ಲ. ಯೋಜನೆಗಳ ಪ್ರವರ್ತಕರು ಆಕರ್ಷಕ ಪುನರ್‌ವಸತಿ ಪ್ಯಾಕೇಜ್‌ಗಳ ಮೂಲಕ ಮುಗ್ಧ ಜನರಲ್ಲಿ ಒಮ್ಮಿಂದೊಮ್ಮೆಲೆ ಶ್ರೀಮಂತರಾಗುವ, ಉತ್ತಮ ಸೌಲಭ್ಯಗಳನ್ನು ಕಲ್ಪಿಸುವ ಹುಸಿ ಭರವಸೆಗಳನ್ನು ನೀಡಿ ಯೋಜನೆಯ ಬಲಿಪಶುಗಳು ತಮ್ಮ ಭೂಮಿಯನ್ನು ಭೂಸ್ವಾಧೀನ ಪ್ರಾಧಿಕಾರದ ಸುಪರ್ದಿಗೆ ನೀಡಿ ಹೊಸ ಪ್ರದೇಶಗಳಲ್ಲಿ ಉತ್ತಮ ಬದುಕು ಸಾಧ್ಯವಾಗಬಹುದು ಎಂದು ಆಶಿಸುತ್ತಾರೆ. ಪುನರ್‌ವಸತಿ ಪ್ರದೇಶಗಳಲ್ಲಿ ವ್ಯವಸ್ಥೆಗಳನ್ನು ಸರಿಯಾದ ರೀತಿಯಲ್ಲಿ ಕಲ್ಪಿಸದಿದ್ದರೆ ಸಂತ್ರಸ್ತರ ಬದುಕು ಅಸಹನೀಯವಾಗುತ್ತದೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಭೂಸಂತ್ರಸ್ತರುಗಳಿಗೆ ನಂತರದಲ್ಲಿ ಉತ್ತಮ ಜೀವನವನ್ನು ನಡೆಸಲು ಅವಕಾಶ ಮಾಡಿಕೊಡದೆ ಇದ್ದುದಕ್ಕೆ ಮೂಲ ಕಾರಣ ಅಲ್ಲಿದ್ದಂತಹ ಅವ್ಯವಸ್ಥೆಗಳು. ಮೈಕಲ್ ಸೆರ್ನ್ನಾರವರ ಕಂಡುಕೊಳ್ಳುವಿಕೆಯಂತೆ, 'ಸ್ಥಳಾಂತರಿಸಲ್ಪಟ್ಟ ಜನರಿಗೆ ಸರಿಯಾದ ಸಾಮಾಜಿಕ ನ್ಯಾಯ ದೊರೆತಾಗ ಮಾತ್ರ ಅದು ಯೋಗ್ಯ ಪರಿಹಾರದ ಪ್ಯಾಕೇಜ್ ಆಗುತ್ತದೆ. ಭೂಮಿಯನ್ನು ಕಳೆದುಕೊಂಡವರಿಗೆ ಹೊಸ ಯೋಗ್ಯ ಕೃಷಿಭೂಮಿಯನ್ನು ನೀಡುವುದರ ಮೂಲಕ, ಉದ್ಯೋಗವಿಲ್ಲದವರಿಗೆ ಉದ್ಯೋಗಾವಕಾಶ, ಆಹಾರದ ಕೊರತೆಯಿದ್ದಲ್ಲಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡುವುದು, ವಸತಿಹೀನರಿಗೆ ವಸತಿ ಕಲ್ಪಿಸುವುದು, ಅನಾರೋಗ್ಯ ಸಮಸ್ಯೆಯಿರುವಲ್ಲಿ ಉತ್ತಮ ಆರೋಗ್ಯ ವ್ಯವಸ್ಥೆ ಕಲ್ಪಿಸುವುದು, ಸಂತ್ರಸ್ತರನ್ನು ಸಾಮಾಜಿಕ ಪುನರ್‌ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದರ ಮೂಲಕ ಸಂತ್ರಸ್ತರು ತಮ್ಮ ಆಘಾತ, ದುಃಖ, ಆಕ್ರೋಶವನ್ನು ಹೋಗಲಾಡಿಸುವಂತೆ ಮಾಡುವುದೇ ಅತ್ಯುತ್ತಮ ಪರಿಹಾರವಾಗಿರುತ್ತದೆ'[29] ಎಂಬ ಫಲಿತವನ್ನು ಪುನರ್‌ವಸತಿ ವ್ಯವಸ್ಥೆಗಳನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಸಮರ್ಪಕವಾಗಿ ಹಾಗೂ ವ್ಯವಸ್ಥಿತವಾಗಿ ಅಳವಡಿಸಿಕೊಂಡಾಗ ಮಾತ್ರ ಸಂತ್ರಸ್ತರ ದುಃಸ್ವಪ್ನವನ್ನು ನಿವಾರಿಸಿ ಅವರುಗಳು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂಬುದಾಗಿ ಹೇಳಬಹುದು.

ಮಂಗಳೂರು ವಿಶೇಷ ಆರ್ಥಿಕ ವಲಯದ ಪ್ರಥಮ ಹಂತದ ಭೂಸ್ವಾಧೀನದ ಸಂದರ್ಭದಲ್ಲಿ ಅದನ್ನು ಪ್ರತಿಭಟಿಸುವುದಕ್ಕಾಗಿ ಸಂತ್ರಸ್ತರು ಯಾವುದೇ ಸಂಘಟನೆಗಳನ್ನು ವ್ಯವಸ್ಥಿತವಾಗಿ ರಚಿಸಿರುವುದು ಕಂಡುಬಂದಿರುವುದಿಲ್ಲ. ಸ್ಥಳೀಯರ ನಾಯಕತ್ವದಲ್ಲಿ ಸೂಕ್ತ ಪರಿಹಾರವನ್ನು ಪಡೆಯುವುದಕ್ಕೋಸ್ಕರ ಒತ್ತಡ ಗುಂಪು ಒಂದನ್ನು ರಚಿಸಿಕೊಂಡು ಯಾವುದೇ ಹೆಚ್ಚಿನ ಹೋರಾಟ, ಪ್ರತಿಭಟನೆಗಳಿಲ್ಲದೆ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯ ಪ್ರಾಧಿಕಾರದ ಮೇಲೆ ಹೆಚ್ಚು ಪರಿಹಾರವನ್ನು ಮತ್ತು ಪುನರ್‌ವಸತಿ ಕಾಲನಿಗಳಲ್ಲಿ ಮನೆ ನಿವೇಶನಗಳನ್ನು ಪಡೆಯುವುದಕ್ಕೆ ಮಾತ್ರ ಹೋರಾಟಗಳು ಸೀಮಿತವಾಗಿತ್ತು. ಇದಕ್ಕೆ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರಿಗೆ ಸಿಗುವ ಪರಿಹಾರಗಳ ಬಗ್ಗೆ ಸಮರ್ಪಕ ಮಾಹಿತಿ ಇಲ್ಲದೇ ಇದ್ದುದು ಕಾರಣವಾಗಿತ್ತು. ಇದರೊಂದಿಗೆ ಭೂಸ್ವಾಧೀನದಲ್ಲಿ ತೊಡಗಿಸಿಕೊಂಡ ಅಧಿಕಾರಿಗಳು ಸಂತ್ರಸ್ತರುಗಳಿಗೆ ಮುಂದೆ ಒಳ್ಳೆಯ ಜೀವನವನ್ನು ನಡೆಸಲು ಬೇಕಾಗಿರುವಂತಹ ನಗದು, ಉದ್ಯೋಗ, ಮನೆ ನಿವೇಶನಗಳನ್ನು

ನೀಡುತ್ತೇವೆ ಎಂಬುದಾಗಿ ನೀಡಿದ ಭರವಸೆಗಳೇ ಕಾರಣವಾಗಿತ್ತು. ಕೃಷಿ ಚಟುವಟಿಕೆಯಿಂದ ಬೇಸತ್ತ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರಿಗೆ ಮುಂದೆ ನಗರಗಳಲ್ಲಿ ದೊರಕುವಂತಹ ಸೌಲಭ್ಯಗಳು ಲಭ್ಯವಾಗುತ್ತದೆ ಎಂಬ ಆಕರ್ಷಣೆ ಕಾರಣವಾಗಿರುವುದು ಸಂತ್ರಸ್ತರ ಜೊತೆಯಲ್ಲಿ ಮಾತನಾಡುವಾಗ ಕಂಡುಕೊಳ್ಳಲಾದ ಅಂಶವಾಗಿರುತ್ತದೆ.

ಕರ್ನಾಟಕ ಸರಕಾರ ಎರಡು ಸಾವಿರದ ಆರರಲ್ಲಿ ಹೊರಡಿಸಿದ ಅಧಿಸೂಚನೆಗನುಗುಣವಾಗಿ ದ್ವಿತೀಯ ಹಂತದ ವಿಸ್ತರಣೆಗಾಗಿ ಎಕ್ಕಾರು, ಪೆರ್ಮುದೆ, ಕುತ್ತೆತ್ತೂರು, ಶಿಬರೂರುಗಳಲ್ಲಿನ 2447 ಎಕ್ರೆ ಭೂಸ್ವಾಧೀನಕ್ಕೆ ಆದೇಶವನ್ನು ಹೊರಡಿಸಿದಾಗ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರು 'ಕೃಷಿಭೂಮಿ ಸಂರಕ್ಷಣಾ ಸಮಿತಿ'ಯನ್ನು ಸ್ಥಳೀಯವಾಗಿ ಸಂಘಟಿಸಿ ಭೂಸ್ವಾಧೀನದ ವಿರುದ್ಧ ತೀವ್ರ ರೀತಿಯ ಪ್ರತಿಭಟನೆಗಳು ಆರಂಭಗೊಂಡು ಚಳುವಳಿಯ ಕಾವು ಹೆಚ್ಚಳಗೊಂಡಿತು. ಗುರುವಾಯನಕೆರೆ ನಾಗರಿಕ ಸೇವಾ ಟ್ರಸ್ಟ್, ರೈತ ಸಂಘ, ದಲಿತ ಸಂಘರ್ಷ ಸಮಿತಿ, ಸಿ.ಪಿ.ಐ.ಎಂ., ಡಿ.ವೈ.ಎಫ್.ಐ. ಸಂಘಟನೆಗಳು ಮತ್ತು ಪ್ರಗತಿಪರ ಚಿಂತಕರು ಭೂಮಿಯನ್ನು ಕಳೆದುಕೊಳ್ಳಲಿರುವ ಸಂತ್ರಸ್ತರ ಪರವಾಗಿ ತೀವ್ರ ರೀತಿಯ ಹೋರಾಟಗಳನ್ನು ಸಂಘಟಿಸಲು ಆರಂಭಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಮಠಾಧಿಪತಿಗಳಾದ ಕೇಮಾರು ಸ್ವಾಮೀಜಿ ಮತ್ತು ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶ್ವರತೀರ್ಥ ಶ್ರೀಪಾದ ಸ್ವಾಮೀಜಿಯವರ ಸಕ್ರಿಯ ಬೆಂಬಲದಿಂದಾಗಿ ಆರಂಭಗೊಂಡ ಹೋರಾಟಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಯ ಬಗೆಗಿನ ಭೂಸ್ವಾಧೀನ, ಪರಿಸರ ಮಾಲಿನ್ಯದ ಬಗ್ಗೆ ಬಲವಾದ ಜನಾಭಿಪ್ರಾಯವನ್ನು ರೂಪಿಸುವಲ್ಲಿ ಯಶಸ್ವಿಯಾಯಿತು.

ಎಷ್ಟು ಪರಿಹಾರವನ್ನು ನೀಡಿದರೂ ತಲೆಮಾರುಗಳಿಂದ ವಾಸಿಸುತ್ತಾ ಬಂದಿರುವ ಮನೆ, ಕೃಷಿ ಭೂಮಿಯನ್ನು ಕೈಗಾರಿಕೆಗಳ ಸ್ಥಾಪನೆಗಾಗಿ ನೀಡುವುದಿಲ್ಲವೆಂದು ಸಂತ್ರಸ್ತರನ್ನು ಸಂಘಟಿಸಿದ ಸ್ಥಳೀಯ ನಾಯಕರುಗಳು ತಮ್ಮ ಜೀವನಾಧಾರಕ್ಕಾಗಿ ಅವಲಂಬಿಸಿದ ಉದ್ಯೋಗಕ್ಕೂ ಹೋಗದೆ ಭೂಸ್ವಾಧೀನಾಧಿಕಾರಿಗಳು ಭೂಮಿಯ ಸರ್ವೆಗೆ ಬಂದಾಗ ಅದಕ್ಕೆ ಅವಕಾಶಗಳನ್ನು ನೀಡದೆ, ಪ್ರತಿಭಟಿಸಿ ಹೋರಾಟದ ಕಾವನ್ನು ಉಳಿಯುವಂತೆ ಮಾಡಲಾಯಿತು ಎಂದು ತಿಳಿಸಿರುತ್ತಾರೆ. ಕರಪತ್ರಗಳನ್ನು ಮುದ್ರಿಸಿ ಸಂತ್ರಸ್ತರಾಗುವ ಜನರ ಮನೆಮನೆಗಳಿಗೆ ಹಂಚಿ ಭೂಸ್ವಾಧೀನದಿಂದಾಗುವ ಕಷ್ಟ ನಷ್ಟಗಳ ಬಗ್ಗೆ ಅರಿವು ಮೂಡಿಸಿದಷ್ಟೆ ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂ.ಆರ್.ಪಿ.ಎಲ್. ಮತ್ತು ಬಿ.ಎ.ಎಸ್.ಎಫ್. ಕೈಗಾರಿಕೆಗಳ ಸ್ಥಾಪನೆಯಿಂದ ಸುರತ್ಕಲ್, ಬಾಳ, ಕಾನ, ಚೇಳ್ಯಾರು, ಚೊಕ್ಕಬೆಟ್ಟು, ಜೋಕಟ್ಟೆ, ಪೆರ್ಮುದೆ ಮುಂತಾದ ಪ್ರದೇಶಗಳಲ್ಲಿ ಯಾವ ರೀತಿಯಲ್ಲಿ ಕೃಷಿ ಚಟುವಟಿಕೆಗಳು ನಾಶವಾಗಿ ಪರಿಸರ ಮಾಲಿನ್ಯವಾಯಿತು ಎಂಬುದರ ಬಗ್ಗೆ ಭೂಸಂತ್ರಸ್ತರಾಗುವವರನ್ನು ಕರೆದುಕೊಂಡು ಹೋಗಿ ವಾಸ್ತವಿಕ ಪರಿಸ್ಥಿತಿಯನ್ನು ಅವಲೋಕಿಸುವಂತೆ ಮಾಡಿ ಸಂತ್ರಸ್ತರಾಗಲಿದ್ದವರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ಮಾಡಿದರು. ಕೈಗಾರಿಕೆಗಳ ಸ್ಥಾಪನೆಗಾಗಿ ಭೂಮಿಯನ್ನು ಕಳೆದುಕೊಂಡು

ಸುರತ್ಕಲ್ ಸಮೀಪದ ಕೃಷ್ಣಾಪುರ ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿದ್ದ ಸಂತ್ರಸ್ತರ ಜೊತೆಯಲ್ಲಿ ಸಮಾಲೋಚನೆಗಳನ್ನು ಏರ್ಪಡಿಸಿ ಸಂತ್ರಸ್ತರಾಗುವವರ ಮುಂದಿನ ಜೀವನ ಯಾವ ರೀತಿಯಾಗಿರುತ್ತದೆಯೆಂದು ಪ್ರಾಥಮಿಕ ಮಾಹಿತಿಯನ್ನು ಪಡೆಯುವಂತಹ ಕಾರ್ಯಕ್ರಮಗಳನ್ನು ನಡೆಸಿ ಅರಿವು ಮೂಡಿಸಲು ಪ್ರಯತ್ನಿಸಲಾಯಿತು ಎಂದು ಹೋರಾಟಗಾರರು ತಿಳಿಸಿ, ನಂದಿಗುಡಿಯಲ್ಲಿ ಕೃಷಿಕರು ಯಾವ ರೀತಿಯಲ್ಲಿ ಕೈಗಾರಿಕೆಗಳ ಸ್ಥಾಪನೆಯ ವಿರುದ್ಧ ಹೋರಾಟ ನಡೆಸಿ ತಮ್ಮ ಭೂಮಿಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದರು[30] ಎಂಬುದನ್ನು ಉಲ್ಲೇಖಿಸಿ ವಿಶೇಷ ಆರ್ಥಿಕ ವಲಯದ ರಚನೆಗಾಗಿ ಭೂಸ್ವಾಧೀನದ ವಿರುದ್ಧ ಹೋರಾಟಗಳನ್ನು ಸಂಘಟಿಸಿರುವುದು ಹೋರಾಟದಲ್ಲಿ ತೊಡಗಿಸಿಕೊಂಡ ನಾಯಕರುಗಳ ಸಂದರ್ಶನದ ಸಂದರ್ಭದಲ್ಲಿ ತಿಳಿದು ಬಂದಿರುತ್ತದೆ. ಮಂಗಳೂರಿನ ಜಿಲ್ಲಾಧಿಕಾರಿಗಳ ಹಾಗೂ ಮಂಗಳೂರು ವಿಶೇಷ ಆರ್ಥಿಕ ವಲಯದ ಕಚೇರಿಗಳ ಮುಂದೆ ಧರಣಿ, ಮೆರವಣಿಗೆಗಳು, ಹೋರಾಟಗಳನ್ನು ಸಂಘಟಿಸುವುದರ ಮೂಲಕ, ಮಂಗಳೂರಿನ ಪ್ರಭಾತ ಚಿತ್ರಮಂದಿರದಲ್ಲಿ ಆಗ ತಾನೇ ಬಿಡುಗಡೆಯಾಗಿದ್ದ ಕನ್ನಡ ಚಲನಚಿತ್ರ 'ಮಾತಾಡ್ ಮಾತಾಡ್ ಮಲ್ಲಿಗೆ'ಯಲ್ಲಿ ಕೃಷಿಕರು ಅಣೆಕಟ್ಟು ಸ್ಥಾಪನೆಗಾಗಿ ಭೂಸ್ವಾಧೀನದ ವಿರುದ್ಧ ಹೋರಾಟ ನಡೆಸಿ ಯಾವ ರೀತಿಯಲ್ಲಿ ಯಶಸ್ಸನ್ನು ಸಾಧಿಸಿದರು ಎಂದು ಸಂತ್ರಸ್ತರನ್ನು ತಮ್ಮ ಖರ್ಚಿನಲ್ಲೇ ಸಿನೆಮಾ ವೀಕ್ಷಿಸುವಂತೆ ಮಾಡಿ ಅವರಲ್ಲಿ ಜಾಗೃತಿಯನ್ನು ಮೂಡಿಸಿರುವುದರ ಮೂಲಕವೂ ಕರ್ನಾಟಕ ಸರಕಾರ ಮಂಗಳೂರು ವಿಶೇಷ ಆರ್ಥಿಕ ವಲಯದ ದ್ವಿತೀಯ ಹಂತದ ವಿಸ್ತರಣೆಗಾಗಿ ಮಾಡಿದ ಭೂಸ್ವಾಧೀನ ಅಧಿಸೂಚನೆಯನ್ನು ಹಿಂತೆಗೆಯುವಂತೆ ಮಾಡಲಾಯಿತು ಎಂಬ ತಮ್ಮ ಹೋರಾಟದ ಅನುಭವಗಳನ್ನು ವಿವರಿಸಿದ್ದು ಯಾವ ರೀತಿಯಲ್ಲಿ ಒತ್ತಡವನ್ನು ತಂದಾಗ ಸರಕಾರ ತನ್ನ ಜನವಿರೋಧಿ ನೀತಿಗಳಿಂದ ಹಿಂದೆ ಸರಿಯುತ್ತದೆ ಎಂಬುದಕ್ಕೆ ಸ್ಪಷ್ಟ ಉದಾಹರಣೆ ಯಾಗಿರುತ್ತದೆಯೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತಾರೆ.

ಸಂತ್ರಸ್ತರುಗಳು ರಚಿಸಿದ ಸಂಘಟನೆಗಳು ಸೂಕ್ತ ಪರಿಹಾರ, ಮನೆ ನಿವೇಶನ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸುವ ಸಲುವಾಗಿ ಸರಕಾರದ ಮತ್ತು ಮಂಗಳೂರು ವಿಶೇಷ ಆರ್ಥಿಕ ವಲಯದ ಪ್ರಾಧಿಕಾರದ ಮೇಲೆ ಒತ್ತಡವನ್ನು ಹೇರುವುದರಲ್ಲಿ ಹಾಗೂ ಪರಿಣಾಮಕಾರಿ ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವುದರಲ್ಲಿ ಯಶಸ್ವಿಯಾಗಿರುವುದು ಕಂಡುಬಂದಿರುತ್ತದೆ. ಹೋರಾಟಗಳಿಂದಾಗಿಯೇ ಹೆಚ್ಚಿನ ಪರಿಹಾರದ ಮೊತ್ತ, ಶೀಘ್ರವಾಗಿ ಪರಿಹಾರಗಳನ್ನು ಪಡೆಯಲು ಸಾಧ್ಯವಾಯಿತೆಂಬುದು ಹೆಚ್ಚಿನ ಭೂಸಂತ್ರಸ್ತರ ಅಭಿಪ್ರಾಯವಾಗಿರುತ್ತದೆ. ಹೋರಾಟಕ್ಕಾಗಿ ಶಾಂತಿಯುತ ಪ್ರತಿಭಟನೆಯ ವಿಧಾನಗಳನ್ನು ಮಾತ್ರ ಬಳಸಲಾಗಿದ್ದೂ ಪೋಲೀಸ್ ಮತ್ತು ಆಡಳಿತ ವ್ಯವಸ್ಥೆಯು ಬಲಪ್ರಯೋಗದ ಮೂಲಕ ಶಾಂತಿಯುತ ಪ್ರತಿಭಟನೆಗಳನ್ನು ಹತ್ತಿಕ್ಕಲು ಪ್ರಯತ್ನಪಟ್ಟಿದಲ್ಲದೆ ನಾಯಕತ್ವವನ್ನು ವಹಿಸಿದವರ ಮೇಲೆ ಯಾವುದೇ ಕಾರಣಗಳಿಲ್ಲದೆ ಕ್ರಿಮಿನಲ್ ದಾವೆಗಳನ್ನು ಹೂಡುವುದರ ಮೂಲಕ ನ್ಯಾಯಯುತ ಹೋರಾಟವನ್ನು ದಮನ ಮಾಡುವುದಕ್ಕೆ ಎಲ್ಲಾ

ರೀತಿಯ ವ್ಯವಸ್ಥಿತ ಪ್ರಯತ್ನಗಳನ್ನು ಮಾಡಿತ್ತು ಎಂಬುದಾಗಿ ಹೋರಾಟದಲ್ಲಿ ತೊಡಗಿಸಿಕೊಂಡ ಭೂಸಂತ್ರಸ್ತರುಗಳು ತಮ್ಮ ಆಗಿನ ಅಸಹಾಯಕತೆ ಮತ್ತು ಹೋರಾಟದ ಮನೋಭಾವವನ್ನು ವ್ಯಕ್ತಪಡಿಸಿರುತ್ತಾರೆ. ರಾಜಕೀಯ ಪಕ್ಷಗಳು ಹೋರಾಟಗಳಿಗೆ ಬೆಂಬಲ ವ್ಯಕ್ತಪಡಿಸಿರುವುದು ತಮ್ಮ ಮತಬ್ಯಾಂಕ್‌ಗಳನ್ನು ಭದ್ರಪಡಿಸುವುದಕಷ್ಟೆ ಹೊರತು ಸಂತ್ರಸ್ತರು ಎದುರಿಸುತ್ತಿರುವ ಸಮಸ್ಯೆಗಳಿಗೆ ಯಾವ ರೀತಿಯಲ್ಲಿಯೂ ನೈಜವಾಗಿ ಸ್ಪಂದಿಸಿರುವುದಿಲ್ಲವೆಂದು ಹೆಚ್ಚಿನ ಸಂದರ್ಶಿತ ಮಾಹಿತಿದಾರರುಗಳ ಅಭಿಪ್ರಾಯವಾಗಿತ್ತು. ರಾಜಕೀಯ ಪಕ್ಷಗಳು ಆಡಳಿತ ಪಕ್ಷವನ್ನು ಟೀಕೆ ಮಾಡುವುದಕ್ಕಾಗಿ ಹಾಗೂ ತಮ್ಮ ರಾಜಕೀಯ ಲಾಭಕ್ಕಾಗಿ ಮಾತ್ರ ಭೂಸ್ವಾಧೀನ ಪ್ರಕ್ರಿಯೆಯನ್ನು ಉಪಯೋಗಿಸಿದವು ಎಂದು ಶೇ 88% ಸಂದರ್ಶಿತರು ತಿಳಿಸಿದ್ದು ಅವರುಗಳು ಭೂಸ್ವಾಧೀನ ಪ್ರಾಧಿಕಾರದ ಪರವಾಗಿ ಕಾರ್ಯನಿರ್ವಹಿಸಿದರು. ಭೂಸ್ವಾಧೀನ ಪ್ರಕ್ರಿಯೆಯ ವಿರುದ್ಧ ಹೋರಾಟದಲ್ಲಿ ತೊಡಗಿದ್ದ ಮುಖಂಡರುಗಳಿಗೆ ಹಣದ ಆಮಿಷವನ್ನು ಒಡ್ಡಿ ಹೋರಾಟದಿಂದ ಹಿಂದೆ ಸರಿಯುವಂತೆ ಒತ್ತಾಯಿಸಿ, ಅದಕ್ಕೆ ಮುಖಂಡರು ಜಗ್ಗದೆ ಹೋದಾಗ ದೈಹಿಕ ಹಲ್ಲೆಯನ್ನು ನಡೆಸುವ ಬೆದರಿಕೆಯನ್ನು ಒಡ್ಡಿದರು ಎಂಬುದಾಗಿ ಭೂಸ್ವಾಧೀನದ ವಿರುದ್ಧ ಹೋರಾಟದಲ್ಲಿ ತೊಡಗಿದ್ದ ನಾಯಕರುಗಳು ತಿಳಿಸಿರುತ್ತಾರೆ. ಸಮಾಜದಲ್ಲಿದ್ದ ಧಾರ್ಮಿಕ ಮುಖಂಡರನ್ನು ಹೊರತುಪಡಿಸಿ ಜಿಲ್ಲೆಯಲ್ಲಿ ತೋರ್ಪಡಿಕೆಯ ಸಾಮಾಜಿಕ ಮತ್ತು ಜನಪರ ಕಾಳಜಿಯನ್ನು ವ್ಯಕ್ತಪಡಿಸುವ ಗಣ್ಯವ್ಯಕ್ತಿಗಳನ್ನು ನಮ್ಮ ಹೋರಾಟಕ್ಕೆ ಬೆಂಬಲವನ್ನು ಸೂಚಿಸಿ ಎಂಬುದಾಗಿ ಮನವಿ ಮಾಡಿದಾಗ ಯಾರೂ ನಮ್ಮ ಬೇಡಿಕೆಗಳಿಗೆ ಮಾನವೀಯತೆಯಿಂದ ಸ್ಪಂದಿಸಿ ಬೆಂಬಲವನ್ನು ವ್ಯಕ್ತಪಡಿಸಿರುವುದಿಲ್ಲ ಎಂಬ ಹೇಳಿಕೆ ಸಮಾಜದಲ್ಲಿದ್ದ ಪ್ರತಿಷ್ಠಿತ ವ್ಯಕ್ತಿಗಳು ಆಡಳಿತ ವ್ಯವಸ್ಥೆಯನ್ನು ಟೀಕಿಸದೇ ತಟಸ್ಥ ಧೋರಣೆಯನ್ನು ತಾಳಿ ಪರೋಕ್ಷವಾಗಿ ಆಡಳಿತಶಾಹಿ ವ್ಯವಸ್ಥೆಯನ್ನು ಬೆಂಬಲಿಸಿ ಲಾಭವನ್ನು ಪಡೆಯುತ್ತಿರುವುದಕ್ಕೆ ಸ್ಪಷ್ಟ ದೃಷ್ಟಾಂತವಾಗಿರುತ್ತದೆಯೆಂಬ ಆಕ್ರೋಶವು ಸಂತ್ರಸ್ತರ ಪರ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಎಲ್ಲಾ ಪ್ರಮುಖ ನಾಯಕರುಗಳ ಒಮ್ಮತದ ಅಭಿಪ್ರಾಯವಾಗಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿರುತ್ತದೆ.

ಸಮೂಹ ಮಾಧ್ಯಮಗಳಾದ ದಿನಪತ್ರಿಕೆಗಳು ಹಾಗೂ ದೃಶ್ಯಮಾಧ್ಯಮಗಳು ನಮ್ಮ ಸಮಸ್ಯೆಗಳ ಬಗ್ಗೆ ವಿಸ್ತಾರವಾಗಿ ಚರ್ಚಿಸಿ ಸಾರ್ವಜನಿಕ ಅಭಿಪ್ರಾಯ ಮತ್ತು ಸಹಾನುಭೂತಿ ನಮ್ಮ ಪರವಾಗಿ ನಿರ್ಮಾಣವಾಗಲು ಸಾಧ್ಯವಾಯಿತು. ಇದರಿಂದಾಗಿ ಭೂಸ್ವಾಧೀನ ಮತ್ತು ಪುನರ್‌ವಸತಿಯ ಹೊಣೆಯನ್ನು ಹೊತ್ತಿದ್ದ ಅಧಿಕಾರಿಗಳು ನಮ್ಮ ಸಮಸ್ಯೆಗಳಿಗೆ ಪೂರಕವಾಗಿ ಸ್ಪಂದಿಸುವಂತೆ ಮಾಡಿತು ಎಂಬುದಾಗಿ ಸಂದರ್ಶಿತ 25% ಸಂತ್ರಸ್ತರುಗಳು ಅಭಿಪ್ರಾಯ ವ್ಯಕ್ತಪಡಿಸಿರುವುದು ಪ್ರಚಲಿತ ಜ್ವಲಂತ ಸಮಸ್ಯೆಗಳಿಗೆ ಸಮೂಹ ಮಾಧ್ಯಮಗಳು ಯಾವ ರೀತಿಯಲ್ಲಿ ಜನಾಭಿಪ್ರಾಯವನ್ನು ರೂಪಿಸಿ ಸಮಸ್ಯೆಗಳ ಪರಿಹಾರಕ್ಕಾಗಿ ಪೂರಕ ವಾತಾವರಣವನ್ನು ಯಶಸ್ವಿಯಾಗಿ ಸೃಷ್ಟಿಸಬಹುದು ಎಂಬುದನ್ನು ತೋರಿಸುತ್ತದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಬಂದಂತಹ ಕೈಗಾರಿಕೆಗಳು ಬೃಹತ್ ಪ್ರಮಾಣದಲ್ಲಿ ಪರಿಸರ ನಾಶ ಹಾಗೂ ಸಮುದ್ರದ ನೀರಿನ ಮಾಲಿನ್ಯಕ್ಕೆ ಕಾರಣವಾಗಿರುವುದು ಕಂಡುಬರುತ್ತದೆ. ಉಡುಪಿ ಜಿಲ್ಲೆಯ ಪಡುಬಿದ್ರಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನಾ ಸ್ಥಾವರವು ಹಾರುಬೂದಿಯ ಸಮರ್ಪಕ ವಿಲೇವಾರಿ ನಡೆಸದೆ ಎಲ್ಲೂರು, ಪಾದೆಬೆಟ್ಟು ಮತ್ತು ಸಮೀಪದ ಪ್ರದೇಶಗಳ ಕೃಷಿಭೂಮಿಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಿಸಿರುವುದು ಕಂಡುಬರುತ್ತದೆ. ಎಂ.ಆರ್.ಪಿ.ಎಲ್. ಕುಳಾಯಿ ಮತ್ತು ಚೇಳ್ಯಾರು ಪ್ರದೇಶದಲ್ಲಿ ಹೊರಚೆಲ್ಲುವ ಕಲುಷಿತ ವಸ್ತುಗಳು ವಾತಾವರಣಕ್ಕೆ ಸೇರಿ ಅಲ್ಲಿಯೇ ಸಮೀಪದಲ್ಲಿನ ಕೃಷ್ಣಾಪುರ, ಜೋಕಟ್ಟೆ ಪ್ರದೇಶದ ಜನರು ಉಸಿರಾಟದ ತೊಂದರೆಗಳಿಗೆ ಒಳಗಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿರುತ್ತದೆ. ಪ್ರಸ್ತುತ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುವ ಪ್ರದೇಶಗಳಲ್ಲಿ ಬರಲಿರುವ ಬೃಹತ್ ಕೈಗಾರಿಕೆಗಳು ಪರಿಸರ ನಾಶಕ್ಕೆ ಮತ್ತು ಮಾಲಿನ್ಯಕ್ಕೆ ಕಾರಣವಾಗಿ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಯೂರಿದ ಎಂ.ಆರ್.ಪಿ.ಎಲ್. ಮತ್ತು ಇತರ ಕೈಗಾರಿಕೆಗಳು ಹೊರಚೆಲ್ಲುವ ಮಾಲಿನ್ಯಗಳಿಂದ ನಮ್ಮ ಬದುಕು ದುಸ್ತರವಾಗಬಹುದು ಎಂಬುದಾಗಿ ಹೆಚ್ಚಿನ ಭೂಸಂತ್ರಸ್ತರು ತಮ್ಮ ಭೀತಿಯನ್ನು ವ್ಯಕ್ತಪಡಿಸಿರುವುದನ್ನು ಗಮನಿಸಲಾಗಿರುತ್ತದೆ. ಕರಾವಳಿ ಜಿಲ್ಲೆಯಲ್ಲಿ ಲಕ್ಷಾಂತರ ಜನರು ಮೀನುಗಾರಿಕೆಯನ್ನು ತಮ್ಮ ಜೀವನಾಧಾರವಾಗಿ ಮಾಡಿಕೊಂಡಿರುತ್ತಾರೆ. ಬೃಹತ್ ಕೈಗಾರಿಕೆಗಳ ತ್ಯಾಜ್ಯ ವಸ್ತುಗಳನ್ನು ಸಮುದ್ರಕ್ಕೆ ವಿಸರ್ಜಿಸುವುದರಿಂದ ಮುಂದೆ ಮತ್ಸ್ಯಕ್ಷಾಮ ಉಂಟಾಗಿ ಮೀನುಗಾರರು ಉದ್ಯೋಗವನ್ನೇ ಕಳೆದುಕೊಳ್ಳುವ ಪ್ರಮೇಯ ಸೃಷ್ಟಿಯಾಗಬಹುದು ಎಂಬುದಾಗಿ ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡ ಸಂತ್ರಸ್ತರ ಜೊತೆಯಲ್ಲಿ ಮಾತುಕತೆ ನಡೆಸಿದಾಗ ಅರಿತುಕೊಂಡ ವಿಷಯವಾಗಿರುತ್ತದೆ. ಭೂಸ್ವಾಧೀನಕ್ಕಿಂತ ಪೂರ್ವದಲ್ಲಿ ಯಥೇಚ್ಚವಾಗಿ ನೀರಿನ ಲಭ್ಯತೆಯನ್ನು ಹೊಂದಿದ್ದ ಸಂತ್ರಸ್ತರುಗಳಿಗೆ ಪುನರ್‌ವಸತಿ ಪ್ರದೇಶಗಳಲ್ಲಿ ವಾರದ ಎಲ್ಲಾ ದಿನಗಳಲ್ಲಿ ತಮ್ಮ ಮೂಲಭೂತ ಅವಶ್ಯಕತೆಗಳಿಗೂ ನೀರು ಲಭ್ಯವಾಗದೇ ಇದ್ದು, ಹೊರಪ್ರದೇಶದಿಂದ ದುಬಾರಿ ಹಣವನ್ನು ತೆತ್ತು ಟ್ಯಾಂಕರ್‌ಗಳ ಮೂಲಕ ನೀರನ್ನು ಖರೀದಿಸುವ ಪರಿಸ್ಥಿತಿ ನಿರ್ಮಾಣವಾಗಿರುತ್ತದೆಂದು ಹೆಚ್ಚಿನ ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವ ಸಂತ್ರಸ್ತರು ತಮ್ಮ ಅತೃಪ್ತಿ, ಅಳಲನ್ನು ತೋಡಿಕೊಂಡಿರುತ್ತಾರೆ.

ಒಟ್ಟಾರೆ ಭೂಸ್ವಾಧೀನದಿಂದಾಗಿ ಸಾಂಪ್ರದಾಯಿಕ ಉದ್ಯೋಗವನ್ನು ಕಳೆದುಕೊಂಡು ಅನಿಶ್ಚಿತ ಬದುಕನ್ನು ನಡೆಸುತ್ತಿರುವ ಸಂತ್ರಸ್ತರುಗಳು ಪುನರ್‌ವಸತಿ ಪ್ರದೇಶಗಳಲ್ಲಿ ತಮ್ಮ ಬದುಕನ್ನು ಪುನರ್‌ನಿರ್ಮಿಸುವುದಕ್ಕೆ ಹರಸಾಹಸಪಡುತ್ತಿದ್ದಾರೆ. ಮನೆಗಳನ್ನು ನಿರ್ಮಿಸಲು ನಗರ ಪ್ರದೇಶಗಳಿಂದ ದೂರದಲ್ಲಿ ದೊರಕಿರುವ ನಿವೇಶನಗಳಿಂದಾಗಿ ದೈನಂದಿನ ಬದುಕಿಗೆ ಅವಶ್ಯವಿರುವ ವಸ್ತುಗಳನ್ನು ದೂರದ ಪ್ರದೇಶದಿಂದ ಖರೀದಿಸಿ ತರಲು ಅಧಿಕ ಖರ್ಚನ್ನು ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪುನರ್‌ವಸತಿ ಕಾಲನಿಗಳಲ್ಲಿನ ಮೂಲಭೂತ

ವ್ಯವಸ್ಥೆಗಳಾದ ಒಳಚರಂಡಿ, ಬೀದಿದೀಪ, ರಸ್ತೆಗಳ ಸರಿಯಾದ ನಿರ್ವಹಣೆ ಇಲ್ಲದೆ ತೊಂದರೆಗಳನ್ನು ಅನುಭವಿಸುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳು ಭೂಸ್ವಾಧೀನಕ್ಕಿಂತ ಮೊದಲು ಪುನರ್‌ವಸತಿ ಪ್ರದೇಶಗಳಲ್ಲಿ ಅತ್ಯುತ್ತಮ ಸೌಲಭ್ಯಗಳನ್ನು ಒದಗಿಸುತ್ತೇವೆ ಎಂಬ ಆಶ್ವಾಸನೆಗಳನ್ನು ನೀಡಿ ನಂತರದ ದಿನಗಳಲ್ಲಿ ಸಂತ್ರಸ್ತರಿಗೆ ಒಂದು ಸಂತೃಪ್ತ ಬದುಕನ್ನು ನಡೆಸುವುದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸದೆ ಅಲಕ್ಷಿಸಿರುವುದು ಸಂತ್ರಸ್ತರುಗಳ ಬದುಕು ದುಸ್ತರವಾಗಿ ಪರಿಣಮಿಸುವುದಕ್ಕೆ ಕಾರಣವಾಗಿರುತ್ತದೆ. ತಮ್ಮ ಹಿಂದಿನ ಶ್ರೀಮಂತ ಸಂಸ್ಕೃತಿಯ ನಾಶ ಸಂತ್ರಸ್ತರುಗಳಿಗೆ ದುಃಸ್ವಪ್ನವಾಗಿ ಕಾಡುತ್ತಿದ್ದು ಹೊಸ ಪ್ರದೇಶದಲ್ಲಿ ಹೊಂದಾಣಿಕೆಯ ಮತ್ತು ತೃಪ್ತಿಯ ಜೀವನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡದಿರುವುದು ಕಂಡುಬಂದಿರುತ್ತದೆ. ಶ್ರಮಿಕವರ್ಗಕ್ಕೆ ಅಭಿವೃದ್ಧಿ ಚಟುವಟಿಕೆಗಳ ಯಾವುದೇ ಲಾಭ ಬಾರದೇ ಅವುಗಳನ್ನು ಸಮಾಜದ ಶ್ರೀಮಂತ, ಗಣ್ಯ ಸಮುದಾಯ ಅನುಭವಿಸುತ್ತಿರುವುದು ಅವರುಗಳಲ್ಲಿ ಅತೃಪ್ತಿಯನ್ನು ಹುಟ್ಟುಹಾಕಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ.

5.2 ಭೂಸಂತ್ರಸ್ತರ ಪರವಾಗಿ ನಡೆದ ಹೋರಾಟಗಳು ಮತ್ತು ಹೋರಾಟಗಾರರ ಪಾತ್ರ

ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯ ಮತ್ತು ಭೂಸ್ವಾಧೀನಕ್ಕಾಗಿ ಸರಕಾರಿ ಅಧಿಸೂಚನೆಗಳು ಹೊರಡಿಸಲ್ಪಟ್ಟು ಭೂಸ್ವಾಧೀನ ಪ್ರಕ್ರಿಯೆ ಆರಂಭವಾದಾಗ ಎರಡು ರೀತಿಯ ಪ್ರಮುಖ ಹೋರಾಟಗಳು ಆರಂಭವಾಗಿತ್ತು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವಂತಹ ವಿಪುಲ ಅವಕಾಶಗಳನ್ನು ಗಮನಿಸಿ ಹಲವಾರು ಬೃಹತ್ ಕೈಗಾರಿಕೆಗಳ ಆರಂಭದ ಬಗ್ಗೆ ಮಾಹಿತಿಗಳು ಕೇಳಿ ಬಂದ ತಕ್ಷಣದಲ್ಲಿ, 'ಕರಾವಳಿ ಪ್ರದೇಶ ಅತ್ಯಂತ ಸಂಕೀರ್ಣವಾದಂತಹ ಪ್ರದೇಶ. ಇಲ್ಲಿ ಆರಂಭವಾಗುವ ಕೈಗಾರಿಕೆಗಳು ಇಲ್ಲಿನ ನೆಲ, ಜಲ, ಪರಿಸರವನ್ನು ನಾಶ ಮಾಡುತ್ತದೆ. ವಿಶೇಷವಾಗಿ ಪಶ್ಚಿಮಘಟ್ಟ ಪ್ರದೇಶದಲ್ಲಿರುವ ವೈವಿಧ್ಯಮಯ ಸಸ್ಯ ಸಂಕುಲ ಹಾಗೂ ಪ್ರಾಣಿ ಪ್ರಭೇದಗಳು ನಾಶವಾಗುತ್ತವೆಯಲ್ಲದೆ ಜಿಲ್ಲೆಯ ಧಾರಣಾಸಾಮರ್ಥ್ಯವನ್ನು ಪರಿಗಣಿಸದೆ ಕೈಗಾರಿಕೆಗಳನ್ನು ಸ್ಥಾಪಿಸುವುದು ಸಮರ್ಥನೀಯವಲ್ಲ' ಎಂಬುದಾಗಿ ಪರಿಸರಪರ ಚಳುವಳಿಗಳು ಆರಂಭವಾಯಿತು. ಅಷ್ಟೇ ಪ್ರಮುಖವಾಗಿ ಆರಂಭಿಸಲ್ಪಡುವ ಯೋಜನೆಗಳಿಂದ ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗುವ ಇಲ್ಲಿನ ಹಿಂದುಳಿದ ವರ್ಗ, ಬಡ ಕೃಷಿಕರಿಗೆ ಹೆಚ್ಚಿನ ಪರಿಹಾರವನ್ನು ದೊರಕಿಸುವ ಸಲುವಾಗಿ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರ ಪರವಾಗಿ ನಡೆಯಲ್ಪಟ್ಟ ಹೋರಾಟಗಳು, ಅವುಗಳ ಯಶಸ್ಸಿನ ಮಟ್ಟ ಮತ್ತು ಸಂಘಟನೆಯ ನಾಯಕರುಗಳು ಯಾವ ರೀತಿಯಲ್ಲಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು ಎಂಬ ವಿಷಯಗಳ ಬಗ್ಗೆ ವಿವರಣೆಗಳನ್ನು ಈ ಕೆಳಗೆ ನೀಡಲಾಗಿರುತ್ತದೆ.

ಬೃಹತ್ ಯೋಜನೆಗಳಿಂದಾಗಿ ತಮ್ಮ ಪಾರಂಪರಿಕ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರು ಅದರಿಂದಾಗಿ ಅಘಾತಕ್ಕೆ ಒಳಗಾಗಿ ಸಿಟ್ಟಿನಿಂದ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯನ್ನು ಹಮ್ಮಿಕೊಳ್ಳುವುದು ಅತ್ಯಂತ ಸಹಜವಾದುದಾಗಿರುತ್ತದೆ. ಯೋಜನೆಗಳನ್ನು ಜಾರಿಗೆ ತರುವಾಗಿನ ಪಾರದರ್ಶಕತೆಯ ಕೊರತೆ ಹಾಗೂ ಜನರ ಬೇಡಿಕೆಗಳ ಬಗ್ಗೆ ಅಧಿಕಾರಿಗಳು ನಕಾರಾತ್ಮಕವಾಗಿ ವರ್ತಿಸಿದಾಗ ಸಂತ್ರಸ್ತರು ತಮ್ಮ ಹಕ್ಕುಗಳನ್ನು ಉಳಿಸಿಕೊಳ್ಳುವುದಕ್ಕೆ ಅನಿವಾರ್ಯವಾಗಿ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಆರಂಭಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಗ್ರಾಮಾಂತರ ತಾಲೂಕುಗಳಲ್ಲಿ ವಿಶೇಷ ಆರ್ಥಿಕ ವಲಯದ ರಚನೆಯ ಸರಕಾರಿ ಅಧಿಸೂಚನೆ 2007ರಲ್ಲಿ ಹೊರಡಿಸಲ್ಪಟ್ಟಾಗ ಭೂಸಂತ್ರಸ್ತರ ಪರ ಅಧಿಕ ಪರಿಹಾರವನ್ನು ಪಡೆಯುವುದಕ್ಕೋಸ್ಕರ, ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶವನ್ನು ಪಡೆಯುವುದಕ್ಕಾಗಿ ಮತ್ತು ಪುನರ್‌ವಸತಿ ಕಾಲನಿಗಳಲ್ಲಿ ಮೂಲಭೂತ ಸೌಲಭ್ಯವನ್ನು ಕಲ್ಪಿಸುವುದಕ್ಕಾಗಿ ಹಲವಾರು ಜನಪರ ಹೋರಾಟಗಳು ನಡೆದು ರಾಷ್ಟ್ರಮಟ್ಟದಲ್ಲಿಯೇ ಜನರ ಗಮನವನ್ನು ಸೆಳೆಯಿತು. ಈ ನಿಟ್ಟಿನಲ್ಲಿ ಸಕ್ರಿಯವಾಗಿ ಸಂತ್ರಸ್ತರ ಪರ ನಡೆದ ಹೋರಾಟಗಳು, ಅದರ ಉದ್ದೇಶ, ಯಶಸ್ಸಿನ ಮಟ್ಟವನ್ನು ಅಧ್ಯಯನದಲ್ಲಿ ವಿವರಿಸುವುದಕ್ಕೋಸ್ಕರ ಹತ್ತು ನಾಯಕರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದ್ದು ಅದರಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಮೂವರು, ಒಬ್ಬರು ಶಿಕ್ಷಕರು, ಇಬ್ಬರು ಮಾಧ್ಯಮದ ವಕ್ತಾರರು, ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಇಬ್ಬರು ಹಾಗೂ ಇಬ್ಬರು ಗ್ರಾಮ ಪಂಚಾಯತ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದವರನ್ನು ಸಂದರ್ಶಿಸಿ ವಿಶೇಷ ಆರ್ಥಿಕ ವಲಯದ ರಚನೆಯ ಬಗ್ಗೆ ಅವರಿಂದ ಮಾಹಿತಿಯನ್ನು ಕಲೆಹಾಕಲಾಗಿದೆ. ಆರು ಪುರುಷ ಮತ್ತು ನಾಲ್ಕು ಮಹಿಳಾ ಹೋರಾಟಗಾರರನ್ನು ಮಾಹಿತಿ ಪಡೆಯುವುದಕ್ಕಾಗಿ ಸಂದರ್ಶಿಸಲಾಗಿದ್ದು, ಅದರ ವಿವರ ಹೀಗಿದೆ.

ವಿಶೇಷ ಆರ್ಥಿಕ ವಲಯದ ರಚನೆಯ ಉದ್ದೇಶವೇನು ಎಂಬ ಪ್ರಶ್ನೆಗೆ ಆರ್ಥಿಕಾಭಿವೃದ್ಧಿಗೆ ಸಹಕರಿಸುವುದು ಎಂದು ನಾಲ್ವರು ತಿಳಿಸಿದರೆ ದೊಡ್ಡ ಯೋಜನೆಗಳನ್ನು ಜಾರಿಗೆ ತರುವುದು ಇದರ ಉದ್ದೇಶವೆಂದು ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಮೂವರು ಅಭಿಪ್ರಾಯಪಟ್ಟಿದ್ದು, ಬೃಹತ್ ಯೋಜನೆಗಳ ಜಾರಿಯಿಂದ ಶ್ರೀಮಂತರಿಗೆ ಮಾತ್ರ ಅನುಕೂಲವಾಗುತ್ತದೆ ಎಂದು ಮೂವರು ಆಕ್ರೋಶವನ್ನು ವ್ಯಕ್ತಪಡಿಸಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷ ಆರ್ಥಿಕ ವಲಯವನ್ನು ರಚಿಸಿ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ಸ್ಥಳೀಯ ಪ್ರದೇಶಕ್ಕೆ ಹಾಗೂ ಜನರಿಗೆ ಯಾವುದೇ ರೀತಿಯ ಲಾಭವಿಲ್ಲವೆಂದು ಎಲ್ಲಾ ಹತ್ತು ಸಂದರ್ಶಿತ ನಾಯಕರುಗಳು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುತ್ತಾರೆ. ಅಭಿವೃದ್ಧಿ ಕಾರ್ಯಗಳಿಗೆ ಬಲವಂತದಿಂದ ಭೂಸ್ವಾಧೀನಪಡಿಸುವುದು ತಪ್ಪಲ್ಲವೆಂದು ಹೋರಾಟದಲ್ಲಿ ತೊಡಗಿಸಿಕೊಂಡ ಇಬ್ಬರು ನಾಯಕರು ತಮ್ಮ ಉತ್ತರವನ್ನು ನೀಡಿರುತ್ತಾರೆ. ಬೃಹತ್ ಯೋಜನೆಗಳು, ಕೈಗಾರಿಕೆಗಳ

ಸ್ಥಾಪನೆಗೆ ಬಲವಂತದಿಂದ ಭೂಮಿಯನ್ನು ಸ್ವಾಧೀನಪಡಿಸಿದಾಗ ಸ್ಥಳೀಯ ಸಾಂಸ್ಕೃತಿಕ ಚೌಕಟ್ಟು, ಪರಿಸರದಲ್ಲಿ ಅಸಮತೋಲನ ಉಂಟಾಗುತ್ತದೆ. ಯೋಜನೆಯಿಂದ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರಿಗೆ ಯೋಗ್ಯ ಪರಿಹಾರವನ್ನು ನೀಡದೆ ಶೋಷಿಸಲಾಗುತ್ತದೆ. ಇದರಿಂದಾಗಿ ಅವರುಗಳ ಬದುಕಿನ ದಿಕ್ಕು ತಪ್ಪುತ್ತದೆಯಲ್ಲದೇ ಪುನರ್‌ವಸತಿ ಪ್ರದೇಶದಲ್ಲಿ ಉತ್ತಮ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸದೆ ಸಂತ್ರಸ್ತರ ಸಾಮಾನ್ಯ ಜನಜೀವನಕ್ಕೆ ತೊಂದರೆಯನ್ನುಂಟು ಮಾಡುವುದಲ್ಲದೇ ಸ್ಥಳಾಂತರದಿಂದ ತೊಂದರೆಗೀಡಾದ ಜನರ ಬದುಕು ಸಂಪೂರ್ಣವಾಗಿ ನಾಶವಾಗುತ್ತದೆಂದು ಯೋಜನೆಗಳಿಗೆ ಭೂಮಿಯನ್ನು ಸ್ವಾಧೀನಪಡಿಸುವುದನ್ನು ಪ್ರತಿಭಟಿಸಿದ ಎಂಟು ಸಂದರ್ಶಿತರು ತಿಳಿಸಿರುತ್ತಾರೆ.

ಯೋಜನೆಯ ಜಾರಿಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಮೇಲೆ ಏನಾದರೂ ನಕಾರಾತ್ಮಕ ಪರಿಣಾಮವಾಗಿರುತ್ತದೆಯೇ ಎಂಬುದನ್ನು ಪ್ರಶ್ನಿಸಿದಾಗ ಎಲ್ಲಾ ಹತ್ತು ಸಂದರ್ಶಿತ ನಾಯಕರು ಒಮ್ಮತದಿಂದ ಹೌದು ಎಂದು ಉತ್ತರಿಸಿರುತ್ತಾರೆ. ಯೋಜನೆಗಾಗಿ ತಮ್ಮ ಜೀವನಾಧಾರವಾಗಿರುವ ಭೂಮಿಯನ್ನು ಸಂತ್ರಸ್ತರು ಕಳೆದುಕೊಳ್ಳುವುದಲ್ಲದೇ ತಾವು ಮಾಡುತ್ತಿದ್ದಂತಹ ಉದ್ಯೋಗವನ್ನೂ ಕಳೆದುಕೊಳ್ಳುತ್ತಾರೆ. ಹೊಸ ಪ್ರದೇಶದಲ್ಲಿ ತಮ್ಮ ಹಿಂದಿನ ಕೌಶಲ್ಯದ ಉದ್ಯೋಗವನ್ನು ಮುಂದುವರಿಸಲಾಗದೆ, ಹೊಂದಾಣಿಕೆ ಕಷ್ಟವಾಗಿ ಸಂತ್ರಸ್ತರಲ್ಲಿ ಮಾನಸಿಕ ತುಮುಲ, ಒತ್ತಡ ಹೆಚ್ಚಳವಾಗಿ ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿರುತ್ತದೆಯಲ್ಲದೇ ಅವರುಗಳ ಆಶ್ರಿತರ ಶೈಕ್ಷಣಿಕ ಅಭಿವೃದ್ಧಿಗೆ ಧಕ್ಕೆ ತಂದಿರುತ್ತದೆಂದು ಐದು ನಾಯಕರು ತಿಳಿಸಿರುತ್ತಾರೆ. ಕೈಗಾರಿಕೆಗಳ ಸ್ಥಾಪನೆಗೋಸ್ಕರ ಭೂಸ್ವಾಧೀನಪಡಿಸುವುದರಿಂದ ಸ್ಥಳೀಯ ಸಂಸ್ಕೃತಿಯು ಸಂಪೂರ್ಣವಾಗಿ ನಾಶವಾಗುವುದಲ್ಲದೇ, ಕೌಟುಂಬಿಕ ವಾತಾವರಣದಲ್ಲಿಯೂ ಬದಲಾವಣೆಯನ್ನು ತರುತ್ತದೆ. ಒಟ್ಟಾಗಿ ಜೀವಿಸುತ್ತಿದ್ದ ಕುಟುಂಬಗಳಲ್ಲಿ ಪರಿಹಾರವಾಗಿ ಪಡೆದ ನಗದು ಹಾಗೂ ಭೂಮಿಯ ಪಾಲಿಗೋಸ್ಕರ ಘರ್ಷಣೆಗಳು ಏರ್ಪಟ್ಟು ಕೌಟುಂಬಿಕ ವಿಘಟನೆಗೆ ಕಾರಣವಾಗಿರುವುದಲ್ಲದೇ, ಭೂಮಿಯನ್ನು ಕಳೆದುಕೊಂಡು ಅಪರಿಚಿತ ಪ್ರದೇಶದಲ್ಲಿ ವಾಸ್ತವ್ಯವನ್ನು ನಡೆಸುವುದರಿಂದ ಬಂಧುಬಳಗದವರಿಂದ ಅವಗಣನೆಗೆ ಒಳಗಾಗುವ ಸಂದರ್ಭ ನಿರ್ಮಾಣವಾಗುತ್ತದೆಯೆಂದು ಐದು ಹೋರಾಟಗಾರರು ಭೂಸ್ವಾಧೀನ ಹಾಗೂ ಬಲವಂತದ ಸ್ಥಳಾಂತರದಿಂದ ಆಗುವ ನಕಾರಾತ್ಮಕ ಪರಿಣಾಮಗಳ ಬಗೆಗೆ ತಾವು ಕಂಡುಕೊಂಡಿದ್ದನ್ನು ನೇರವಾಗಿ ತಿಳಿಸಿರುತ್ತಾರೆ.

ಬೃಹತ್ ಯೋಜನೆಗಳು ಮತ್ತು ಬಲವಂತದ ಭೂಸ್ವಾಧೀನವನ್ನು ವಿರೋಧಿಸಿ ಹೋರಾಟವನ್ನು ಸಂಘಟಿಸುವ ನಾಯಕರು ಹಾಗೂ ಸರಕಾರೇತರ ಸಂಘಟನೆಗಳು ಇತರ ಪ್ರದೇಶಗಳಲ್ಲಿ ಇದೇ ರೀತಿಯ ಹೋರಾಟವನ್ನು ಮಾಡುತ್ತಿರುವ ಸಂಘಟನೆಗಳು ಮತ್ತು ನಾಯಕರೊಂದಿಗೆ ಸಾಮಾನ್ಯವಾಗಿ ಸಂಪರ್ಕದಲ್ಲಿರುತ್ತಾರೆ. ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯ ಭೂಸಂತ್ರಸ್ತರ ಪರವಾಗಿ

ಹೋರಾಟಗಳನ್ನು ಅಯೋಜಿಸಿದ ಮುಂದಾಳುಗಳಲ್ಲಿ ನಿಮಗೆ ರಾಷ್ಟ್ರದ ಇತರ ಪ್ರದೇಶಗಳಲ್ಲಿ ಭೂಸ್ವಾಧೀನದ ವಿರುದ್ಧ ಹೋರಾಟವನ್ನು ಮುನ್ನಡೆಸಿದ ನಾಯಕರ ಬಗೆಗೆ ತಿಳಿದಿರುತ್ತದೆಯೇ ಎಂದು ಪ್ರಶ್ನಿಸಿದಾಗ ಏಳು ಸಂದರ್ಶಿತರು ತಿಳಿದಿರುತ್ತದೆಯೆಂದು, ಉಳಿದ ಮೂವರು ಇಲ್ಲ ಎಂದು ಉತ್ತರಿಸಿರುತ್ತಾರೆ. ಯೋಜನೆಗಳ ಸ್ಥಾಪನೆಗೋಸ್ಕರ ಭೂಮಿಯನ್ನು ಸ್ವಾಧೀನಪಡಿಸುವ ಬಗೆಗಿನ ಕಾನೂನುಗಳ ತಿಳುವಳಿಕೆ ನಾಯಕರಲ್ಲಿ ಎಷ್ಟಿದೆ ಎಂಬುದನ್ನು ಅರಿಯುವುದಕ್ಕೋಸ್ಕರ ಅವರಲ್ಲಿ ಪ್ರಸ್ತುತ ಜಾರಿಯಲ್ಲಿರುವ ಭೂಸ್ವಾಧೀನ ಕಾನೂನಿನ ಬಗ್ಗೆ ತಿಳಿದಿರುತ್ತದೆಯೇ ಎಂದು ಪ್ರಶ್ನಿಸಿದಾಗ ಎಲ್ಲಾ ಹತ್ತು ನಾಯಕರು ತಿಳಿದಿರುತ್ತದೆಯೆಂದು ಉತ್ತರಿಸಿ, ಯೋಜನೆಯ ಸಂತ್ರಸ್ತರಿಗೆ ಯಾವ ರೀತಿಯ ಪರಿಹಾರವನ್ನು ನೀಡಬೇಕೆಂದು ಬಯಸುತ್ತೀರಿ ಎಂದು ಪ್ರಶ್ನಿಸಿದಾಗ ಮೂವರು ಸದ್ಯ ಜಾರಿಯಲ್ಲಿರುವ ಕಾನೂನಿಗೆ ಅನುಗುಣವಾಗಿ ಪರಿಹಾರವನ್ನು ನೀಡಬೇಕು. ಭೂಮಿಯನ್ನು ಕಳೆದುಕೊಂಡವರು ಪುನರ್‌ವಸತಿ ಪ್ರದೇಶಗಳಲ್ಲಿ ತಮ್ಮ ಎಲ್ಲಾ ನೋವುಗಳನ್ನು ಮರೆತು ಭೂಸ್ವಾಧೀನಕ್ಕಿಂತ ಮೊದಲು ಅನುಭವಿಸುತ್ತಿದ್ದ ಎಲ್ಲಾ ಸೌಲಭ್ಯಗಳು ಅನುಭವಿಸುವಂತೆ ಹಾಗೂ ಆರ್ಥಿಕವಾಗಿ ಸಬಲೀಕರಣ ಮಾಡುವಂತಹ, ಸಂತ್ರಸ್ತರಲ್ಲಿ ನಾವು ಕಡೆಗಣಿಸಲ್ಪಟ್ಟವರು ಎಂಬ ಮನೋಭಾವನೆ ತೊಲಗಿಸಿ ಆತ್ಮವಿಶ್ವಾಸದಿಂದ ಬದುಕನ್ನು ಕಟ್ಟಿಕೊಳ್ಳುವಂತಹ ಪರಿಹಾರಗಳು ಸಿಗಬೇಕು ಎಂದು ಉತ್ತರಿಸಿದ್ದಾರೆ. ಉಳಿದ ಏಳು ನಾಯಕರು ಸ್ಥಳೀಯ ಸಮಿತಿಯು ಸಾಮಾಜಿಕ ಮತ್ತು ಅರ್ಥಿಕ ಅಧ್ಯಯನವನ್ನು ನಡೆಸಿ ಸಂತ್ರಸ್ತರಿಗೆ ಆಗುತ್ತಿರುವ ಎಲ್ಲಾ ರೀತಿಯ ಹಾನಿಗಳ ಬಗ್ಗೆ ತಿಳಿದುಕೊಂಡು, ಅದಕ್ಕನುಗುಣವಾಗಿ ಅವರುಗಳಿಗೆ ತೃಪ್ತಿಯಾಗುವಂತಹ ಪರಿಹಾರದ ಪ್ಯಾಕೇಜ್‌ಗಳನ್ನು ಒದಗಿಸಬೇಕು ಎಂದು ಪ್ರತಿಕ್ರಿಯೆ ನೀಡಿರುತ್ತಾರೆ.

ಖಾಸಗಿ ಭೂಮಿಯನ್ನು ಸ್ವಾಧೀನಪಡಿಸದೆ ಸರಕಾರಿ ಹಾಗೂ ಬರಡು ಭೂಮಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬಹುದೆಂದು ಅಭಿಪ್ರಾಯಪಟ್ಟ ಎಲ್ಲಾ ಹತ್ತು ಸಂದರ್ಶಿತರು, ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಮಿಯನ್ನು ಸ್ವಾಧೀನಪಡಿಸಲಾಗುತ್ತದೆ ಎಂಬ ಸುಳಿವು ಮೊದಲೇ ಲಭ್ಯವಾಗಿತ್ತೆಂದು ನಾಲ್ವರು ನಾಯಕರು ತಿಳಿಸಿರುತ್ತಾರೆ. ಯಾವುದೇ ಪೂರ್ವಮಾಹಿತಿ ಭೂಸ್ವಾಧೀನದ ಬಗ್ಗೆ ಇರಲಿಲ್ಲವೆಂದು ಆರು ಸಂದರ್ಶಿತರು ತಿಳಿಸಿದ್ದಾರೆ. ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಸ್ಥಳೀಯ ಪರಿಸರ ಮತ್ತು ಜನಜೀವನ ಸಂಪೂರ್ಣವಾಗಿ ನಾಶವಾಗುತ್ತದೆಂದು ಅಭಿಪ್ರಾಯಪಟ್ಟ ಎಲ್ಲಾ ಹತ್ತು ಸಂದರ್ಶಿತರು ಇದಕ್ಕೆ ಬೃಹತ್ ಕೈಗಾರಿಕೆಗಳ ತ್ಯಾಜ್ಯ ವಿಲೇವಾರಿ ಸಮರ್ಪಕವಾಗಿಲ್ಲದೇ ಇರುವುದು ಕಾರಣವೆಂದು ಉತ್ತರಿಸಿರುತ್ತಾರೆ. ಇದರಿಂದ ಕೈಗಾರಿಕಾ ಸಂಕೀರ್ಣಗಳ ಹತ್ತಿರದಲ್ಲಿ ವಾಸಿಸುತ್ತಿರುವವರ ಜೀವನ ಅಸಹನೀಯವಾಗುತ್ತದೆಂದು ಮೂವರು ಅಭಿಪ್ರಾಯಪಟ್ಟರೆ, ಏಳು ಸಂದರ್ಶಿತರು ಕೈಗಾರಿಕೆಗಳ ಸ್ಥಾಪನೆಯಿಂದಾಗಿ ನೆಲ, ಜಲ, ವಾಯುಮಾಲಿನ್ಯ ಉಂಟಾಗಿ ಪರಿಸರ ಸಂಪೂರ್ಣವಾಗಿ ನಾಶವಾಗುತ್ತದೆಯೆಂದಿದ್ದಾರೆ.

ಯಾವ ಕಾರಣಗಳಿಗೋಸ್ಕರ ಸಂತ್ರಸ್ತರ ಪರ ಹೋರಾಟದಲ್ಲಿ ತೊಡಗಿಸಿಕೊಂಡಿರುತ್ತೀರಿ ಎಂಬ ಪ್ರಶ್ನೆಗೆ ಉತ್ತರವಾಗಿ ಭೂಸ್ವಾಧೀನ ಪ್ರಾಧಿಕಾರ ಮತ್ತು ಸರಕಾರಿ ವ್ಯವಸ್ಥೆಯಿಂದ ಭೂಸಂತ್ರಸ್ತರಿಗೆ ಆಗಿರುವ ಅನ್ಯಾಯವನ್ನು ಪ್ರತಿಭಟಿಸಲು ಎಂದು ನಾಲ್ವರು ಪ್ರತಿಕ್ರಿಯಿಸಿದರೆ, ಭೂಮಿಯನ್ನು ಕಳೆದುಕೊಂಡು ಮುಂದಿನ ಬದುಕಿನ ಬಗ್ಗೆ ಭರವಸೆಯನ್ನು ಕಳೆದುಕೊಂಡ ಸಂತ್ರಸ್ತರ ಸಂಕಷ್ಟಗಳನ್ನು ಗಮನಿಸಿ, ಅಧಿಕಾರಿಗಳ ದಮನಕಾರಿ ಪ್ರವೃತ್ತಿಯನ್ನು ಕಂಡು ಹೋರಾಟಕ್ಕೆ ಮುಂದಾಳತ್ವವನ್ನು ವಹಿಸಿದೆವು ಎಂದು ನಾಲ್ವರು ಉತ್ತರಿಸಿರುತ್ತಾರೆ. ಯೋಜನೆಯ ಜಾರಿಯಲ್ಲಿ ಪಾರದರ್ಶಕತೆ ಇಲ್ಲದೇ ಇದ್ದದ್ದು, ಭೂಸ್ವಾಧೀನ ಪ್ರಾಧಿಕಾರದ ಅಧಿಕಾರಿಗಳಿಂದಾದ ಮೋಸ, ತಾರತಮ್ಯ, ದೌರ್ಜನ್ಯಗಳನ್ನು ಖಂಡಿಸಿ ಹೋರಾಟದಲ್ಲಿ ತೊಡಗಿಸಿಕೊಂಡೆವೆಂದು ಇಬ್ಬರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿರುತ್ತಾರೆ.

ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಸಂದರ್ಶಿತ ಹತ್ತು ನಾಯಕರುಗಳಲ್ಲಿ ಇಬ್ಬರ ಭೂಮಿ ಯೋಜನೆಗಾಗಿ ಸ್ವಾಧೀನಪಡಿಸಲಾಗಿದ್ದು, ಎಂಟು ಮುಂದಾಳುಗಳ ಭೂಮಿಯನ್ನು ಸ್ವಾಧೀನಪಡಿಸದಿರುವುದು ಕಂಡುಬಂದಿದ್ದು, ಸಂತ್ರಸ್ತರ ಬವಣೆಗಳನ್ನು ಕಂಡು ಸಾಮಾಜಿಕ ಕಳಕಳಿಯಿಂದ ಹೋರಾಟಕ್ಕೆ ಬೆಂಬಲ ನೀಡಿರುವುದು ಅಧ್ಯಯನದಿಂದ ಕಂಡುಬಂದಿರುತ್ತದೆ. ಅಧಿಕಾರಿಗಳು, ರಾಜಕಾರಣಿಗಳಿಗೆ ಮನವಿಯನ್ನು ನೀಡಿ ಒತ್ತಡ ಹೇರುವ ಶಾಂತಿಯುತ ವಿಧಾನಗಳನ್ನು ಹೋರಾಟಕ್ಕಾಗಿ ಬಳಸಲಾಗಿರುತ್ತದೆಯೆಂದು ಎಂಟು ನಾಯಕರು ತಿಳಿಸಿದ್ದು, ಪ್ರತಿಭಟನೆ, ಮುತ್ತಿಗೆ ಹಾಕುವುದು, ಮೆರವಣಿಗೆಯನ್ನು ಸಂಘಟಿಸುವುದು, ವಿಶೇಷ ಆರ್ಥಿಕ ವಲಯ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಸತ್ಯಾಗ್ರಹವನ್ನು ಹಮ್ಮಿಕೊಳ್ಳುವ ಮೂಲಕ ಸಂತ್ರಸ್ತರ ಅಸಮಾಧಾನವನ್ನು ವ್ಯಕ್ತಪಡಿಸುವ ವಿಧಾನವನ್ನು ಹೋರಾಟಕ್ಕೆ ಬಳಸಿಕೊಳ್ಳಲಾಗಿರುತ್ತದೆಯೆಂದು ಇಬ್ಬರು ಸಂದರ್ಶಿತರು ತಿಳಿಸಿರುತ್ತಾರೆ. ಹೋರಾಟವನ್ನು ನಾಗರಿಕ ಸಮಾಜ ಸಂಪೂರ್ಣವಾಗಿ ಬೆಂಬಲಿಸಿರುತ್ತದೆ ಎಂಬ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಹೇಗೆ ನಾಗರಿಕ ಸಮಾಜದ ಬೆಂಬಲ ವ್ಯಕ್ತವಾಯಿತೆಂದು ಕೇಳಿದಾಗ ನಾಗರಿಕ ಸಮಾಜ ನಮ್ಮೊಂದಿಗೆ ಸಹಭಾಗಿತ್ವ ಹಾಗೂ ಸಹಕಾರವನ್ನು ನೀಡುವುದರ ಮೂಲಕ ಬೆಂಬಲಿಸಿರುತ್ತದೆಯೆಂದು ಎಂಟು ನಾಯಕರು ತಿಳಿಸಿದರೆ, ಇಬ್ಬರು ನಾಯಕರು ನಮ್ಮ ಸಮಸ್ಯೆಗಳಿಗೆ ಸಾರ್ವಜನಿಕರು ಪರೋಕ್ಷ ಬೆಂಬಲ ವ್ಯಕ್ತಪಡಿಸುವುದರ ಮೂಲಕ ಸಹಕರಿಸಿದರು ಎಂದಿದ್ದಾರೆ.

ರಾಜಕೀಯ ಪಕ್ಷಗಳು ಸಾಮಾನ್ಯವಾಗಿ ಜನಪರ ಹೋರಾಟಗಳನ್ನು ಹಲವಾರು ಕಾರಣಗಳಿಗೋಸ್ಕರ ಬೆಂಬಲಿಸುತ್ತವೆ. ಯೋಜನೆಯ ವಿರುದ್ಧ ನಡೆಯಲ್ಪಟ್ಟ ಹೋರಾಟಗಳನ್ನು ರಾಜಕೀಯ ಪಕ್ಷಗಳು ಬೆಂಬಲಿಸಿವೆಯಾ ಎಂಬುದನ್ನು ಪ್ರಶ್ನಿಸಿದಾಗ ಸಂದರ್ಶಿತ ಆರು ನಾಯಕರು ಹೌದು ಎಂದರೆ, ನಾಲ್ವರು ಇಲ್ಲವೆಂದಿದ್ದಾರೆ. ಹೋರಾಟವನ್ನು ಸಂಘಟಿಸಿದ ಸಂದರ್ಶಿತ ಹತ್ತು ಮುಖಂಡರುಗಳಲ್ಲಿ ಏಳು ನಾಯಕರು ಯಾವುದೇ

ರಾಜಕೀಯ ಪಕ್ಷಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡಿರದೆ ತಟಸ್ಥರಾಗಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿರುತ್ತದೆ.

ಯೋಜನೆಯ ಜಾರಿಯಿಂದಾಗಿ ಸಂತ್ರಸ್ತರಿಗೆ ಆಗಿರುವ ಅನ್ಯಾಯವನ್ನು ಕಂಡು ಹೋರಾಟದಲ್ಲಿ ಸಾಮಾಜಿಕ ಕಾಳಜಿಯಿಂದ ತೊಡಗಿಸಿಕೊಂಡೆವೆಂದು ನಾಲ್ಕು ಮುಖಂಡರು ತಿಳಿಸಿದರೆ, ಸಂತ್ರಸ್ತರಿಗೆ ಆಗಿರುವ ಅನ್ಯಾಯವನ್ನು ಒಪ್ಪಿಕೊಳ್ಳದೆ ಅವುಗಳನ್ನು ಸರಿಪಡಿಸಲು ಹೋರಾಟಗಳು ಅನಿವಾರ್ಯವಾಯಿತೆಂದು ಅಭಿಪ್ರಾಯಪಟ್ಟ ಆರು ಹೋರಾಟಗಾರರು ಬೃಹತ್ ಕೈಗಾರಿಕೆಗಳಿಂದ ಸ್ಥಳೀಯ ಪರಿಸರ ನಾಶವಾಗುತ್ತಿದ್ದು, ಅವುಗಳ ಸ್ಥಾಪನೆಯನ್ನು ತಡೆಗಟ್ಟುವುದಕ್ಕಾಗಿ ಹಾಗೂ ಕೃಷಿ ಚಟುವಟಿಕೆಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಟಗಳನ್ನು ಸಂಘಟಿಸುವುದು ಅನಿವಾರ್ಯವಾಯಿತು ಎಂದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿರುತ್ತಾರೆ. ಯೋಜನೆಯಿಂದ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರೆಲ್ಲರೂ ಹೋರಾಟವನ್ನು ಬೆಂಬಲಿಸಿರುತ್ತಾರೆಯೇ ಎಂಬ ಪ್ರಶ್ನೆಗೆ ಹೌದು ಎಂದು ಆರು ಸಂದರ್ಶಿತರು ಉತ್ತರಿಸಿದರೆ, ನಾಲ್ವರು ಇಲ್ಲವೆಂದಿದ್ದಾರೆ. ಸಂತ್ರಸ್ತರಲ್ಲಿ ಅಧಿಕಾರಿಗಳನ್ನು ಎದುರಿಸುವ ಧೈರ್ಯದ ಕೊರತೆ, ಅವರಲ್ಲಿದ್ದ ಜಡತ್ವ ಹಾಗೂ ಪಕ್ಷಪಾತದ ಧೋರಣೆಗಳಿಂದಾಗಿ ಹೋರಾಟವನ್ನು ಬೆಂಬಲಿಸಲಿಲ್ಲವೆಂದು ನಾಲ್ವರು ಉತ್ತರಿಸಿರುತ್ತಾರೆ. ಸ್ಥಳೀಯ ಎಲ್ಲಾ ಸರಕಾರೇತರ ಸ್ವಯಂಸೇವಾ ಸಂಘಟನೆಗಳು ಹೋರಾಟವನ್ನು ಸಕ್ರಿಯವಾಗಿ ಬೆಂಬಲಿಸಿತೆಂದು ಎಲ್ಲಾ ಹತ್ತು ಹೋರಾಟಗಾರರು ತಿಳಿಸಿರುತ್ತಾರೆ.

ಸಂತ್ರಸ್ತರ ಪರ ಹೋರಾಟದಲ್ಲಿ ತೊಡಗಿಸಿಕೊಂಡ ಕಾರಣ ಭೂಸ್ವಾಧೀನ ಪ್ರಾಧಿಕಾರ ಹಾಗೂ ಅಧಿಕಾರಿಗಳು ನಿಮ್ಮನ್ನು ಬೆದರಿಸುವ ತಂತ್ರವನ್ನು ಉಪಯೋಗಿಸಿದ್ದರೇ ಎಂಬುದಾಗಿ ಸಂದರ್ಶಿತರನ್ನು ಪ್ರಶ್ನಿಸಿದಾಗ ಐವರು ಹೌದು ಎಂದೂ, ಇನ್ನುಳಿದ ಐದು ಸಂದರ್ಶಿತರು ಇಲ್ಲವೆಂದಿರುತ್ತಾರೆ. ಯಾವ ರೀತಿಯಲ್ಲಿ ನಿಮ್ಮನ್ನು ಹತ್ತಿಕ್ಕುವ ಪ್ರಯತ್ನ ಮಾಡಲಾಯಿತು ಎಂದಾಗ ಸ್ಥಳೀಯ ಗೂಂಡಾಗಳನ್ನು ಬಳಸಿಕೊಂಡು ಜೀವ ಬೆದರಿಕೆಯೊಡ್ಡುವುದು, ಹೆದರಿಸುವುದು, ಕೈಕಾಲು ತೆಗೆಯುವ ಎಚ್ಚರಿಕೆಯನ್ನು ನೀಡುವುದು ಹಾಗೂ ಪೋಲೀಸ್ ಠಾಣೆಗಳಲ್ಲಿ ಯಾವುದೇ ಕಾರಣಗಳಿಲ್ಲದೆ ನಮ್ಮ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲು ಮಾಡುವ ವಿಧಾನವನ್ನು ಉಪಯೋಗಿಸಲಾಗಿತ್ತು ಎಂದು ಐದು ಮಾಹಿತಿದಾರರು ತಿಳಿಸಿದ್ದಾರೆ.

ಸಂತ್ರಸ್ತರ ಪರ ನಡೆದ ಹೋರಾಟಗಳ ಯಶಸ್ಸಿನ ಮಟ್ಟವನ್ನು ಕೇಳಿದಾಗ ಯಶಸ್ಸನ್ನು ಸಾಧಿಸಲಾಗಿರುತ್ತದೆಯೆಂದು ಐವರು, ಇಲ್ಲ ಎಂದು ಮೂವರು, ಸ್ವಲ್ಪ ಮಟ್ಟಿಗೆಯೆಂದು ಇಬ್ಬರು ತಿಳಿಸಿದ್ದು, ಹೋರಾಟಗಳನ್ನು ಸಂಘಟಿಸುವುದರ ಮೂಲಕ ಜಿಲ್ಲೆಯಲ್ಲಿ ನೆಲೆಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಕೈಗಾರಿಕೆಗಳು ಆರಂಭವಾಗದಂತೆ ತಡೆಯುವಲ್ಲಿ ಯಶಸ್ಸನ್ನು ಸಾಧಿಸಲಾಗಿರುತ್ತದೆಯೆಂದು ಸಂದರ್ಶಿತ ನಾಯಕರು, ಅಧಿಕಾರಿಗಳ ಗಮನವನ್ನು ಸೆಳೆದು ಸಂತ್ರಸ್ತರಿಗೆ ಯೋಗ್ಯ ಪರಿಹಾರ, ಉದ್ಯೋಗಗಳನ್ನು ದೊರಕಿಸುವಲ್ಲಿ ಸಫಲರಾಗಿದ್ದೇವೆಂದು

ಉತ್ತರಿಸಿ, ಸಂತ್ರಸ್ತರಿಗೆ ಹೆಚ್ಚಿನ ಪ್ರಮಾಣದಲ್ಲಿ ಅನ್ಯಾಯವಾಗದಂತೆ ತಡೆಗಟ್ಟುವಲ್ಲಿ ಯಶಸ್ವಿಯಾಗಿರುತ್ತೇವೆಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿರುತ್ತಾರೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಜನರಿಗೆ ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸಲು ಅವಕಾಶವಿರುತ್ತದೆ. ಅನ್ಯಾಯವಾದಾಗ ಪ್ರಶ್ನಿಸುವುದಕ್ಕೆ, ಪ್ರತಿಭಟನೆಯನ್ನು ಹಮ್ಮಿಕೊಳ್ಳುವ ಹಕ್ಕು ಸಂವಿಧಾನದತ್ತವಾಗಿ ಎಲ್ಲಾ ಪ್ರಜೆಗಳಿಗೂ ಸಮಾನವಾಗಿ ನೀಡಲ್ಪಟ್ಟಿರುತ್ತದೆ. ನಮ್ಮ ಸಂವಿಧಾನದ 19ನೇಯ ವಿಧಿಯು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗೆಗೆ ವಿವರಿಸಿ, ಎಲ್ಲಾ ಪ್ರಜೆಗಳಿಗೂ ತಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸುವುದಕ್ಕೆ ಅವಕಾಶ ಮಾಡಿಕೊಟ್ಟಿರುತ್ತದೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಎರಡನೇ ಹಂತದ ವಿಸ್ತರಣೆಗೆ ಸಂಬಂಧಪಟ್ಟಂತೆ 2447 ಎಕ್ರೆ ಭೂಮಿಯ ಸ್ವಾಧೀನದ ಬಗ್ಗೆ ಕರ್ನಾಟಕ ಸರಕಾರ 2006ರಲ್ಲಿ ತನ್ನ ಅಧಿಸೂಚನೆಯನ್ನು ಹೊರಡಿಸಿತು. ಎಕ್ಕಾರು, ಪೆರ್ಮುದೆ, ಕುತ್ತೆತ್ತೂರು, ಕಳವಾರು, ಶಿಬರೂರುಗಳ ಫಲವತ್ತಾದ ಕೃಷಿಭೂಮಿಯ ಸ್ವಾಧೀನದ ಬಗ್ಗೆ ಅಧಿಸೂಚನೆಯಲ್ಲಿ ವಿವರಿಸಿತ್ತು. ಸ್ಥಳೀಯ ಯುವ ನಾಯಕರುಗಳು, 'ಕೃಷಿಭೂಮಿ ಸಂರಕ್ಷಣಾ ಸಮಿತಿ' ಎಂಬ ಸಂಘಟನೆಯನ್ನು ರಚಿಸಿ ಭೂಸ್ವಾಧೀನ ಪ್ರಕ್ರಿಯೆಯ ವಿರುದ್ಧ ಸಕ್ರಿಯ ಹೋರಾಟದಲ್ಲಿ ತೊಡಗಿದರು. ಹೋರಾಟದಲ್ಲಿ ತೊಡಗಿಸಿಕೊಂಡ ನಾಯಕರುಗಳನ್ನು ಸಂದರ್ಶಿಸಿದಾಗ ಯಾವೆಲ್ಲಾ ರೀತಿಯಲ್ಲಿ ನ್ಯಾಯಯುತವಾದ ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಗಳಾದವು ಎಂಬುದನ್ನು ತಿಳಿಸಿರುತ್ತಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆ ಅಸ್ತಿತ್ವದಲ್ಲಿದ್ದರೂ ಜನರು ತಮ್ಮ ಹಕ್ಕುಗಳನ್ನು ಅನುಭವಿಸುವುದರಿಂದ ಯಾವ ರೀತಿಯಲ್ಲಿ ವಂಚಿತರಾದರು ಎಂದು ಅವರುಗಳ ಮಾತಿನಿಂದ ತಿಳಿದುಬರುತ್ತದೆ. ಭೂಸ್ವಾಧೀನದ ವಿರುದ್ದ ಹೋರಾಟದಲ್ಲಿ ಮುಂಚೂಣಿಯಲ್ಲಿ ನಿಂತು ನಾಯಕತ್ವವನ್ನು ವಹಿಸಿದ ಯಾವುದೇ ರೀತಿಯ ವಿದ್ಯಾಭ್ಯಾಸವನ್ನು ಹೊಂದಿಲ್ಲದ ಮೋನಪ್ಪ ಪಕ್ಷಿಕೆರೆಯವರು (ಹೆಸರು ಬದಲಾಯಿಸಲಾಗಿದೆ) ತಮ್ಮ ಅನುಭವವನ್ನು ವಿವರಿಸುತ್ತಾ "ಅನ್ನ ಕೊಟ್ಟ ಮಣ್ಣಿನ ಋಣವನ್ನು ತೀರಿಸುವುದಕ್ಕೆ, ಅಪ್ಪ ಅಮ್ಮನ ಋಣ ಹಾಗೂ ಭೂಮಿಯ ಪಾವಿತ್ರ್ಯತೆಯನ್ನು ರಕ್ಷಿಸುವುದಕ್ಕೋಸ್ಕರ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕಾಗಿ ದ್ವಿತೀಯ ಹಂತದ ಭೂಸ್ವಾಧೀನದ ಸಂದರ್ಭದಲ್ಲಿ ಹೋರಾಡಬೇಕಾಯಿತು. ನಾಯಕತ್ವ ವಹಿಸಿದಕ್ಕೋಸ್ಕರ ಹೋರಾಟದಿಂದ ಹಿಂದೆ ಸರಿಯಲು ಮಧ್ಯವರ್ತಿಗಳ ಮೂಲಕ ಮಂಗಳೂರು ವಿಶೇಷ ಆರ್ಥಿಕ ವಲಯದ ಭೂಸ್ವಾಧೀನಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹತ್ತು ಲಕ್ಷ ರೂಪಾಯಿ ನಗದು ಹಣ ಹಾಗೂ ಮನೆ ನಿವೇಶನ ನೀಡುವುದರ ಬಗ್ಗೆ ಆಮಿಷ ಒಡ್ಡಿದ್ದರು. ಅದಕ್ಕೆ ಒಪ್ಪದೆ ಹೋರಾಟ ಮುಂದುವರಿಸಿದ್ದಕ್ಕಾಗಿ ಮಂಗಳೂರು ತಾಲೂಕಿನ ವಿವಿಧ ಪೋಲೀಸ್ ಠಾಣೆಗಳಲ್ಲಿ ಕೊಲೆ ಯತ್ನ, ಸರಕಾರಿ ಕಾರ್ಯಕ್ಕೆ ಅಡ್ಡಿ ಇತ್ಯಾದಿ ಪೂರ್ವಾಗ್ರಹಪೀಡಿತ ಹನ್ನೊಂದು ಕ್ರಿಮಿನಲ್ ದಾವೆಗಳನ್ನು ಹಾಕಿ ಹೋರಾಟದಿಂದ ಹಿಂದೆ ಸರಿಯುವಂತೆ ಮಾಡಲು ಪ್ರಯತ್ನಿಸಿದರು. ಯಾವುದಕ್ಕೂ ಜಗ್ಗದೇ ಹೋರಾಟ ಮುಂದುವರಿಸಿದ್ದರಿಂದಾಗಿ ದ್ವಿತೀಯ ಹಂತದ

ವಿಸ್ತರಣೆಗೆ ಸಂಬಂಧಪಟ್ಟ ಭೂಸ್ವಾಧೀನ ಪ್ರಕ್ರಿಯೆ ರದ್ದುಗೊಂಡಿತು' ಎಂಬ ಅಭಿಪ್ರಾಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ನಡೆದ ಬಲಪ್ರಯೋಗಕ್ಕೆ ಒಂದು ಉತ್ತಮ ಉದಾಹರಣೆ ಎಂಬುದಾಗಿ ಇಲ್ಲಿ ಉಲ್ಲೇಖಿಸಬಹುದು.

ಭೂಸ್ವಾಧೀನ ಪ್ರಕ್ರಿಯೆಗಳನ್ನು ವಿರೋಧಿಸಿ ಹೋರಾಟದಲ್ಲಿ ತೊಡಗಿದ ನಾಯಕರುಗಳನ್ನು ಅಭಿವೃದ್ಧಿ ಚಟುವಟಿಕೆಗಳ ವಿರೋಧಿಗಳು, ನಕ್ಸಲೈಟ್, ಸಿ.ಐ.ಎ. ಏಜೆಂಟರುಗಳು, ಭ್ರಷ್ಟರು[31] ಎಂಬುದಾಗಿ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರಲ್ಲಿ ಸುಳ್ಳು ಮಾಹಿತಿಯನ್ನು ಹಬ್ಬಿಸಿ ಹೋರಾಟಗಳನ್ನು ದಮನಿಸುವ ಪ್ರಯತ್ನಗಳಾದವು. ಇವುಗಳಿಗೆ ಜಗ್ಗದೆ ಇದ್ದಾಗ ಸುಳ್ಳು ಆಮಿಷಗಳು, ಸ್ಥಳೀಯ ಗೂಂಡಾಗಳನ್ನು ಬಳಸಿ ಹಲ್ಲೆಗೆ ಪ್ರಯತ್ನ ಮತ್ತು ಪೋಲೀಸ್ ಠಾಣೆಗಳಲ್ಲಿ ಸುಳ್ಳು ಕೇಸುಗಳನ್ನು ಹಾಕಿ ವಿಶೇಷ ಆರ್ಥಿಕ ವಲಯಕ್ಕಾಗಿ ಭೂಸ್ವಾಧೀನದ ವಿರುದ್ಧ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಕೊಂಡ ಮುಂದಾಳುಗಳನ್ನು ಹಿಂದಕ್ಕೆ ಸರಿಯುವಂತೆ ಪ್ರಜಾಸತ್ತಾತ್ಮಕ ತತ್ವಗಳಿಗೆ ವಿರುದ್ಧವಾಗಿ ಎಲ್ಲಾ ಪ್ರಯತ್ನಗಳಾದವು. ಇದರಿಂದಾಗಿ ನಮ್ಮ ಹಕ್ಕುಗಳು ಸಾರಾಸಗಟಾಗಿ ಉಲ್ಲಂಘನೆಯಾಗಿ ಒಂದು ಭಯಯುತ ವಾತಾವರಣ ಸೃಷ್ಟಿಯಾಗಿತ್ತು ಎಂದು ಮಾಹಿತಿದಾರರು ತಮ್ಮ ಅನುಭವವನ್ನು ವಿವರಿಸಿರುತ್ತಾರೆ.

ಕರಾವಳಿ ಪ್ರದೇಶದಲ್ಲಿ ಬಲಿಷ್ಟವಾಗಿ ನೆಲೆಯೂರಿರುವ ಎರಡೂ ರಾಷ್ಟ್ರೀಯ ಪಕ್ಷಗಳು ಸಂತ್ರಸ್ತರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ನಿರ್ವಸಿತರ ಸಮಸ್ಯೆಗಳ ಬಗ್ಗೆ ಕಣ್ಣೀರು ಒರೆಸುವ ತಂತ್ರಗಳನ್ನು ಮಾತ್ರ ಮಾಡಿದರೇ ಹೊರತು ಯೋಜನೆಗಾಗಿ ಭೂಸ್ವಾಧೀನಪಡಿಸಲ್ಪಟ್ಟ ಸಂತ್ರಸ್ತರ ಬೇಡಿಕೆಗಳ ಈಡೇರಿಕೆಗೆ ಯಾವುದೇ ರೀತಿಯ ಗಂಭೀರ ಪ್ರಯತ್ನಗಳನ್ನು ಮಾಡಲಿಲ್ಲ. ಪರೋಕ್ಷವಾಗಿ ವಿಶೇಷ ಆರ್ಥಿಕ ವಲಯದ ಪ್ರವರ್ತಕರಿಗೆ ಎಲ್ಲಾ ರೀತಿಯ ನೆರವನ್ನು ಒದಗಿಸಿರುತ್ತಾರೆ. ತಮ್ಮ ರಾಜಕೀಯ ಶಕ್ತಿಯನ್ನು ಉಪಯೋಗಿಸಿ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ನಾಯಕರುಗಳಿಗೆ ಹಲವಾರು ಆಸೆ, ಆಮಿಷಗಳನ್ನು ಒಡ್ಡಿ ಹೋರಾಟದ ನಾಯಕತ್ವವನ್ನು ವಹಿಸದೇ ಹಿಂದೆ ಸರಿಯುವಂತೆ ಒತ್ತಾಯಿಸಿರುವುದು ಎರಡನೇ ಹಂತದ ವಿಸ್ತರಣೆಗೆ ಸಂಬಂಧಪಟ್ಟಂತೆ ಭೂಸ್ವಾಧೀನದ ವಿರುದ್ಧ ಹೋರಾಟದಲ್ಲಿ ತೊಡಗಿಸಿಕೊಂಡ ನಾಯಕರುಗಳ ಜೊತೆಯಲ್ಲಿ ಮಾತನಾಡಿದಾಗ ಕಂಡುಬಂದ ಪ್ರಮುಖ ಅಂಶವಾಗಿರುತ್ತದೆ. ಎಡಪಂಥೀಯ ಪಕ್ಷಗಳಾದ ಸಿ.ಪಿ.ಐ(ಯಂ.), ರೈತ ಸಂಘ, ದಲಿತ ಸಂಘರ್ಷ ಸಮಿತಿ, ಮಂಗಳೂರು ನಾಗರಿಕ ಹಿತರಕ್ಷಣಾ ವೇದಿಕೆ, ಗುರುವಾಯನಕೆರೆ ನಾಗರಿಕ ಸೇವಾ ಟ್ರಸ್ಟ್, ಡಿ.ವೈ.ಎಫ್.ಐ. ಹಾಗೂ ಹಲವಾರು ಸರಕಾರೇತರ ಸಂಸ್ಥೆಗಳು ಮಾತ್ರ ಸಂತ್ರಸ್ತರ ಬೇಡಿಕೆಗಳನ್ನು ಮತ್ತು ಬಲವಂತದ ಭೂಸ್ವಾಧೀನ ಪ್ರಕ್ರಿಯೆಯ ವಿರುದ್ಧ ಧ್ವನಿ ಎತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿರುತ್ತದೆ. ಜನರ ಹಿತಾಸಕ್ತಿಯನ್ನು ಬೆಂಬಲಿಸಬೇಕಾದ ರಾಜಕೀಯ ಪಕ್ಷಗಳು, ತಮ್ಮ ಮತಬ್ಯಾಂಕ್‌ನ್ನು ಭದ್ರಪಡಿಸಿಕೊಳ್ಳಲು ಪ್ರಾಮುಖ್ಯತೆ ನೀಡಿದವೇ ಹೊರತು ಸಂತ್ರಸ್ತರ ಬವಣೆಗಳು ಮತ್ತು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನೇ ಮಾಡಿರುವುದಿಲ್ಲ.

ಮಂಗಳೂರು ವಿಶೇಷ ಆರ್ಥಿಕ ವಲಯದ ದ್ವಿತೀಯ ಹಂತದ ವಿಸ್ತರಣೆಗೆ ಸಂಬಂಧಪಟ್ಟ ಅಧಿಸೂಚನೆಯ ವಿರುದ್ಧ ಪ್ರಬಲ ಹೋರಾಟಗಳನ್ನು ಸಂಘಟಿಸಿ ಸರಕಾರದ ಮೇಲೆ ಒತ್ತಡವನ್ನು ಹೇರಲಾಗಿತ್ತು. ಇದರಿಂದಾಗಿ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ಶ್ರೀ ಬಿ. ಎಸ್. ಯಡಿಯೂರಪ್ಪರವರ ನೇತೃತ್ವದ ಭಾರತೀಯ ಜನತಾ ಪಕ್ಷದ ಸರಕಾರ ಭೂಸ್ವಾಧೀನ ಪ್ರಕ್ರಿಯೆಯನ್ನು ಹಿಂತೆಗೆದುಕೊಂಡಿತು. ಇದಕ್ಕೆ ಮೂಲಕಾರಣ ಸಂಘಟಿತ ಹೋರಾಟವಾಗಿತ್ತು. ಆದರೆ ಹೋರಾಟದ ಯಶಸ್ಸು ತೊಡಗಿಸಿಕೊಂಡ ನಾಯಕರುಗಳಿಗೆ ಮತ್ತು ಸಂತ್ರಸ್ತರುಗಳಿಗೆ ದೊರಕದೇ ಕೊನೆಯ ಕ್ಷಣದಲ್ಲಿ ಹೋರಾಟದ ಮುಂದಾಳತ್ವವನ್ನು ವಹಿಸಿದ ಹಿರಿಯ ಮಠಾಧೀಶರಿಗೆ ಹೋಗಿರುತ್ತದೆ. ಹಿರಿಯ ಮಠಾಧೀಶರಿಂದಾಗಿಯೇ ಭೂಸ್ವಾಧೀನ ಪ್ರಕ್ರಿಯೆ ರದ್ದುಗೊಂಡಿರುವುದು ಎಂಬ ಪ್ರಚಾರವು ಯಾರಿಗೋ ದಕ್ಕಬೇಕಾದ ಯಶಸ್ಸನ್ನು ಅವರಿಗೆ ದೊರಕದಂತೆ ಮಾಡಿ ಇನ್ಯಾರಿಗೋ ಅದರ ಶ್ರೇಯಸ್ಸನ್ನು ನೀಡುವ ಹುನ್ನಾರ ಎಂಬುದನ್ನು ಸಕ್ರಿಯವಾಗಿ ಭೂಸ್ವಾಧೀನದ ವಿರುದ್ಧ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ನಾಯಕರುಗಳು ತಿಳಿಸಿ ಈ ಬೆಳವಣಿಗೆಗಳು ಸಾಮಾನ್ಯ ಸಂತ್ರಸ್ತರ ಪಾತ್ರವನ್ನು ನಗಣ್ಯಗೊಳಿಸಿರುತ್ತದೆ ಎಂದು ಹೇಳಿರುತ್ತಾರೆ.

5.3 ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಅಧಿಕಾರಿಗಳ ಅಭಿಪ್ರಾಯ

ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದ ಅಧಿಕಾರಿಗಳಿಂದ ಯೋಜನೆಯ ಬಗ್ಗೆ ಅಭಿಪ್ರಾಯವನ್ನು ಸಂಗ್ರಹಿಸಲಾಗಿದ್ದು ಒಟ್ಟು ಹತ್ತು ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯಲಾಗಿರುತ್ತದೆ. ಇವರಲ್ಲಿ ಒಂಬತ್ತು ಪುರುಷ ಹಾಗೂ ಒಬ್ಬರು ಮಹಿಳಾ ಅಧಿಕಾರಿಗಳಾಗಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದಿರುವ ಮಂಗಳೂರು ವಿಶೇಷ ಆರ್ಥಿಕ ವಲಯದ ಉದ್ದೇಶವೇನು ಎಂಬ ಪ್ರಶ್ನೆಗೆ ಎಲ್ಲಾ ಹತ್ತು ಸಂದರ್ಶಿತರು ಪ್ರದೇಶದ ಹಾಗೂ ರಾಷ್ಟ್ರದ ಒಟ್ಟು ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶವನ್ನು ಪ್ರಸ್ತುತ ಯೋಜನೆ ಹೊಂದಿರುತ್ತದೆಯೆಂದು ಉತ್ತರಿಸಿರುತ್ತಾರೆ. ಯಾಕಾಗಿ ಈ ಪ್ರದೇಶವನ್ನು ಯೋಜನೆಗಾಗಿ ಆಯ್ಕೆ ಮಾಡಿಕೊಳ್ಳಲಾಯಿತು ಎಂಬ ಪ್ರಶ್ನೆಗೆ ಸಂದರ್ಶಿತ ಆರು ಅಧಿಕಾರಿಗಳು ಬೃಹತ್ ಕೈಗಾರಿಕೆಗಳ ಸಂಕೀರ್ಣಗಳನ್ನು ರಚಿಸುವುದಕ್ಕೆ ಇಲ್ಲಿ ಅತ್ಯುತ್ತಮವಾದ ಮೂಲಭೂತ ಸೌಲಭ್ಯಗಳು (ಸಂಪರ್ಕ, ಸಾರಿಗೆ, ನೀರು, ಹೆದ್ದಾರಿಗಳು, ಕೌಶಲ್ಯಯುತ ಯುವ ಜನರು) ಲಭ್ಯವಿರುವುದು ಮೂಲ ಕಾರಣವೆಂದರೆ, ಇಬ್ಬರು ಅಧಿಕಾರಿಗಳ ಪ್ರಕಾರ ಪ್ರದೇಶದಲ್ಲಿ ಮನೆಗಳ ಸಂಖ್ಯೆ, ಜನಸಾಂದ್ರತೆ ಕಡಿಮೆಯಿದ್ದು ಕೃಷಿಯೋಗ್ಯವಲ್ಲದ ಬರಡು ಭೂಮಿ ಹೆಚ್ಚಾಗಿ ದೊರಕುವುದರಿಂದಾಗಿ ಈ ಪ್ರದೇಶವನ್ನು ಆಯ್ಕೆ ಮಾಡಲಾಗಿದೆ ಎಂದಿದ್ದಾರೆ. ಮಂಗಳೂರು ಬಂದರಿನ ಮೂಲಕ ಜಗತ್ತಿನ ಯಾವ ಪ್ರದೇಶಕ್ಕೂ ಸಂಪರ್ಕವನ್ನು ಸಾಧಿಸಲು ಸಾಧ್ಯವಾಗುವುದು ಯೋಜನೆ ಇಲ್ಲಿ ಆರಂಭವಾಗುವುದಕ್ಕೆ ಕಾರಣವೆಂದು ಇಬ್ಬರು ಅಧಿಕಾರಿಗಳು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಹಿಂದುಳಿದ

ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳು ದೊರಕದಿರುವುದರಿಂದ ಹಾಗೂ ಅಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಯಾವುದೇ ಪೂರಕ ವಾತಾವರಣ ಇಲ್ಲದಿರುವುದರಿಂದಾಗಿ ಕೈಗಾರಿಕೆಗಳ ಸ್ಥಾಪನೆ ಕಾರ್ಯಸಾಧುವಲ್ಲವೆಂದು ಸಂದರ್ಶಿತ ಎಂಟು ಅಧಿಕಾರಿಗಳು ತಿಳಿಸಿದ್ದು, ಕೈಗಾರಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಸ್ಥಾಪಿಸುವುದರಿಂದ ಸ್ಥಳೀಯ ಯುವ ಜನತೆಗೆ ಉದ್ಯೋಗಾವಕಾಶಗಳು ಹೆಚ್ಚು ದೊರಕಿ, ಪ್ರದೇಶ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುತ್ತದೆಯೆಂದು ಎಲ್ಲಾ ಹತ್ತು ಅಧಿಕಾರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಯಾವೆಲ್ಲಾ ಕಾರಣಗಳಿಗಾಗಿ ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಲಾಗುತ್ತದೆಯೆಂದು ಅಧಿಕಾರಿಗಳಲ್ಲಿ ಪ್ರಶ್ನಿಸಿದಾಗ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಯ ಬಗ್ಗೆ ಎಂದು ನಾಲ್ವರು, ಕಾಲಕಾಲಕ್ಕೆ ಸರಕಾರದ ನೀತಿಯನ್ನು ಜಾರಿಗೊಳಿಸಲು ಹಾಗೂ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅವಕಾಶ ನೀಡುವುದಕ್ಕಾಗಿ ಎಂದು ನಾಲ್ವರು, ಸರಕಾರದ ನೀತಿಗಳನ್ನು ಜಾರಿಗೊಳಿಸಲು ಎಂದು ಒಬ್ಬರು, ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅವಕಾಶ ನೀಡಲು ಎಂದು ಒಬ್ಬರು ತಿಳಿಸಿರುತ್ತಾರೆ. ಒಟ್ಟಾರೆಯಾಗಿ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಭೂಸ್ವಾಧೀನಪಡಿಸುವುದು ಸರಿ ಎಂದು ಅಭಿಪ್ರಾಯವನ್ನು ಎಲ್ಲಾ ಹತ್ತು ಸಂದರ್ಶಿತ ಅಧಿಕಾರಿಗಳು ವ್ಯಕ್ತಪಡಿಸಿರುತ್ತಾರೆ. ಕೈಗಾರಿಕೆಗಳ ಸ್ಥಾಪನೆಯಿಂದಾಗಿ ಸ್ಥಳೀಯ ಜನರಿಗೆ ಉದ್ಯೋಗಾವಕಾಶಗಳು ದೊರಕುತ್ತದೆಯೆಂದು ಎಂಟು ಅಧಿಕಾರಿಗಳು ತಿಳಿಸಿದರೆ, ಭೂಸ್ವಾಧೀನಪಡಿಸುವುದರಿಂದ ಸಕಾಲದಲ್ಲಿ ಸರಕಾರಿ ಯೋಜನೆಗಳನ್ನು ಜಾರಿಪಡಿಸಲು ಸಾಧ್ಯವಾಗುತ್ತದೆಯೆಂದು ಒಬ್ಬರು ಹಾಗೂ ಇದರಿಂದಾಗಿ ನಿರ್ದಿಷ್ಟವಾಗಿ ಆಯ್ಕೆಯಾದ ಸ್ಥಳದಲ್ಲಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ಸಾಧ್ಯವಾಗುತ್ತದೆಯೆಂದು ಓರ್ವ ಅಧಿಕಾರಿ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿರುತ್ತಾರೆ.

ಭೂಮಿಯನ್ನು ಸ್ವಾಧೀನಪಡಿಸದೇ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವುದು ಸಾಧ್ಯವಾಗುವುದಿಲ್ಲವೆಂದು ಸಂದರ್ಶಿತ ಏಳು ಅಧಿಕಾರಿಗಳು ಹೇಳಿದರೆ, ಸಾಧ್ಯವಿದೆಯೆಂದು ಮೂವರು ಅಭಿಪ್ರಾಯಪಟ್ಟಿರುತ್ತಾರೆ. ಸರಕಾರದ ಬಲವಂತವಿಲ್ಲದೆ ನಾಗರಿಕ ಸಮಾಜ ಸ್ವಯಂಪ್ರೇರಿತವಾಗಿ ನೀಡಿದ ಭೂಮಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು ಎಂದು ಆರು ಅಧಿಕಾರಿಗಳು, ಸರಕಾರಿ ಭೂಮಿಯನ್ನು ಕೈಗಾರಿಕೆಗಳ ಸ್ಥಾಪನೆಗೆ ಬಳಸಿಕೊಳ್ಳಬೇಕೆಂದು ಇಬ್ಬರು ಹಾಗೂ ಕೃಷಿಯೋಗ್ಯವಲ್ಲದ ಅನುಪಯುಕ್ತ ಭೂಮಿಯಲ್ಲಿ ಉದ್ದಿಮೆಗಳು ಆರಂಭವಾಗಬೇಕೆಂದು ಇಬ್ಬರು ಅಧಿಕಾರಿಗಳು ತಮ್ಮ ಅನಿಸಿಕೆಯನ್ನು ತಿಳಿಸಿರುತ್ತಾರೆ. ಯಾವುದೇ ಕೈಗಾರಿಕೆಗಳು ಸ್ಥಾಪನೆಗೊಂಡರೂ ಅವುಗಳು ಪರಿಸರಕ್ಕೆ ಧಕ್ಕೆ ತಾರದೇ ಪರಿಸರಸ್ನೇಹಿಯಾಗಿರಬೇಕೆಂದು ಎಲ್ಲಾ ಸಂದರ್ಶಿತ ಅಧಿಕಾರಿಗಳು ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಭೂಸ್ವಾಧೀನಕ್ಕಾಗಿ ಅಳವಡಿಸಿಕೊಂಡ ವಿಧಾನ ಕ್ರಮಬದ್ಧ ಹಾಗೂ ಕಾನೂನಿಗೆ ಅನುಗುಣವಾಗಿತ್ತು ಎಂದು ಎಲ್ಲಾ ಹತ್ತು ಅಧಿಕಾರಿಗಳು ತಮ್ಮ ವಿಧಾನವನ್ನು ಸಮರ್ಥಿಸಿಕೊಂಡಿರುತ್ತಾರೆ. ಭೂಸ್ವಾಧೀನದ ಸಂದರ್ಭದಲ್ಲಿ

ಸಂತ್ರಸ್ತರ ಪ್ರತಿಭಟನೆಗಳನ್ನು ಅವರಿಗೆ ಯೋಗ್ಯ ಪರಿಹಾರಗಳನ್ನು ನೀಡಿ ತೃಪ್ತಿಗೊಳ್ಳುವಂತೆ ಮಾಡಲಾಯಿತು ಎಂದು ಎಂಟು ಅಧಿಕಾರಿಗಳು ತಿಳಿಸಿದರೆ, ಬಾಧಿತರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸಾಕಷ್ಟು ಪರಿಹಾರವನ್ನು ನೀಡಿ ಪ್ರತಿಭಟನೆಯನ್ನು ಹಿಂತೆಗೆಸಲಾಯಿತೆಂದು ಇಬ್ಬರು ಅಧಿಕಾರಿಗಳು ತಮ್ಮ ಕ್ರಮವನ್ನು ಸಮರ್ಥಿಸಿರುತ್ತಾರೆ.

ಯೋಜನೆಯ ಸಂತ್ರಸ್ತರಿಗೆ ಭೂಸ್ವಾಧೀನದ ಸಂದರ್ಭದಲ್ಲಿ ಸರಿಯಾದ ಪ್ರಮಾಣದ ನಗದು, ಪುನರ್‌ವಸತಿ ಕಾಲನಿಗಳಲ್ಲಿ ಭೂಮಿ, ಅವರ ಅವಲಂಬಿತರಿಗೆ ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಉದ್ಯೋಗ ಹಾಗೂ ಉದ್ಯೋಗವನ್ನು ಪಡೆಯಲು ಅಗತ್ಯವಿರುವ ಕೌಶಲ್ಯವನ್ನು ನೀಡುವ ಆಶ್ವಾಸನೆಯನ್ನು ಮನವರಿಕೆ ಮಾಡಿ ಭೂಮಿಯನ್ನು ಸ್ವಾಧೀನಪಡಿಸಲಾಯಿತೆಂದು ಒಂಬತ್ತು ಅಧಿಕಾರಿಗಳು ಉತ್ತರಿಸಿದರೆ, ಅವಲಂಬಿತರಿಗೆ ಉದ್ಯೋಗವನ್ನು ಪಡೆಯುವುದಕ್ಕಾಗಿ ಅಗತ್ಯವಿರುವ ಕೌಶಲ್ಯವನ್ನು ನೀಡುವ ಭರವಸೆಯನ್ನು ನೀಡಲಾಗಿತ್ತು ಎಂದು ಒಬ್ಬರು ಅಧಿಕಾರಿಗಳು ವಿವರಿಸಿರುತ್ತಾರೆ. ಈ ಎಲ್ಲಾ ಭರವಸೆಗಳನ್ನು ನಂತರದಲ್ಲಿ ಸಮರ್ಪಕವಾಗಿ ಪೂರೈಸಲಾಗಿರುತ್ತದೆಯೆಂದು ಎಲ್ಲಾ ಹತ್ತು ಅಧಿಕಾರಿಗಳು ತಿಳಿಸಿದ್ದು, ಉದ್ಯೋಗ ಮತ್ತು ಸರ್ವರೀತಿಯ ನೆರವನ್ನು ನೀಡಲಾಗಿದೆಯೆಂದು ಆರು, ಯೋಗ್ಯ ಪರಿಹಾರ ನೀಡಲಾಗಿದೆಯೆಂದು ಇಬ್ಬರು, ಗೊತ್ತಿಲ್ಲವೆಂದು ಇಬ್ಬರು ಅಧಿಕಾರಿಗಳು ತಿಳಿಸಿರುತ್ತಾರೆ. ಪರಿಹಾರದ ಪ್ಯಾಕೇಜ್‌ನ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸಿದ ಯೋಜನೆಯ ಸಂತ್ರಸ್ತರುಗಳಿಗೆ ನಗದು, ಪುನರ್‌ವಸತಿ ಕಾಲನಿಯಲ್ಲಿ ನಿವೇಶನವನ್ನು ನೀಡುವುದರ ಮೂಲಕ ತೃಪ್ತರನ್ನಾಗಿಸಲಾಗಿದೆಯೆಂದು ಆರು ಅಧಿಕಾರಿಗಳು ಮಾಹಿತಿ ನೀಡಿದರೆ, ಪರಿಹಾರವಾಗಿ ಉತ್ತಮ ನಗದು ಮೊತ್ತವನ್ನು ನೀಡುವುದರ ಮೂಲಕ ಸಂತ್ರಸ್ತರ ಅತೃಪ್ತಿಯನ್ನು ನಿವಾರಿಸಲಾಗಿದೆಯೆಂದು ಇಬ್ಬರು ಅಧಿಕಾರಿಗಳು ಹಾಗೂ ಸಂತ್ರಸ್ತರಿಗೆ ಕೊಟ್ಟ ಪರಿಹಾರ ಯೋಗ್ಯ ಮಟ್ಟದ್ದಾಗಿದೆಯೆಂದು ಮನವರಿಕೆ ಮಾಡುವುದರ ಮೂಲಕ ಅವರನ್ನು ಸಂತೃಪ್ತರಾಗುವಂತೆ ಮಾಡಲಾಗಿದೆಯೆಂದು ಇಬ್ಬರು ಅಧಿಕಾರಿಗಳು ಹೇಳಿರುತ್ತಾರೆ.

ಯೋಜನೆಯ ಸಂತ್ರಸ್ತರ ಸಬಲೀಕರಣಕ್ಕಾಗಿ ಯಾವ ರೀತಿಯ ಕಾರ್ಯಕ್ರಮಗಳನ್ನು ಭೂಸ್ವಾಧೀನ ಪ್ರಾಧಿಕಾರ ಹಮ್ಮಿಕೊಂಡಿರುತ್ತದೆ ಎಂಬುದನ್ನು ಅಧಿಕಾರಿಗಳಲ್ಲಿ ಪ್ರಶ್ನಿಸಿದಾಗ ಆರಂಭಗೊಳ್ಳುವ ಕೈಗಾರಿಕೆಗಳಲ್ಲಿ ಸಂತ್ರಸ್ತರಿಗೆ ಅಥವಾ ಅವರ ಅವಲಂಬಿತರಿಗೆ ಉದ್ಯೋಗ ದೊರಕಿಸಿಕೊಡುವುದರ ಮೂಲಕ, ಉದ್ಯೋಗವನ್ನು ಪಡೆಯುವುದಕ್ಕಾಗಿ ನಿರ್ದಿಷ್ಟ ಕೌಶಲ್ಯದ ಅಭಿವೃದ್ಧಿಗಾಗಿ ಯುವ ಜನತೆಗೆ ಕೌಶಲ್ಯ ತರಬೇತಿಯನ್ನು ನೀಡುವುದರ ಮೂಲಕ ಹಾಗೂ ಸಂತ್ರಸ್ತರು ಸ್ವಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಪೂರಕ ಮಾಹಿತಿಯನ್ನು ಒದಗಿಸಿ ಪ್ರೋತ್ಸಾಹಿಸುವುದರ ಮೂಲಕ ಸಂತ್ರಸ್ತರ ಸಬಲೀಕರಣಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆಯೆಂದು ಸಂದರ್ಶಿತ ಆರು ಅಧಿಕಾರಿಗಳು ತಿಳಿಸಿದರೆ, ಇಬ್ಬರು ಅಧಿಕಾರಿಗಳು ಸಂತ್ರಸ್ತರಿಗೆ ಉದ್ಯೋಗ ದೊರಕಿಸುವುದು, ಕೌಶಲ್ಯ ತರಬೇತಿ, ಸಾಲದ ವ್ಯವಸ್ಥೆಯನ್ನು ಮಾಡುವುದರ ಮೂಲಕ ಅವರನ್ನು ಸ್ವಾವಲಂಬಿಗಳಾಗಿ ಪುನರ್‌ವಸತಿ ಪ್ರದೇಶದಲ್ಲಿ ಬದುಕುವುದಕ್ಕೆ ಅವಕಾಶ ಮಾಡಿಕೊಡಲಾಗಿರುತ್ತದೆಯೆಂದು ತಿಳಿಸಿದರೆ, ಉದ್ಯೋಗ ಮತ್ತು

ಸ್ವಉದ್ಯೋಗವನ್ನು ಹೊಂದುವುದಕ್ಕೆ ಪೂರಕ ವಾತಾವರಣವನ್ನು ಕಲ್ಪಿಸಲಾಗಿರುತ್ತದೆಯೆಂದು ಇಬ್ಬರು ಅಧಿಕಾರಿಗಳು ತಿಳಿಸಿರುತ್ತಾರೆ.

ಸಂತ್ರಸ್ತರಿಗೆ ಸಿಗಬೇಕಾದ ಪರಿಹಾರ, ಸೌಲಭ್ಯಗಳನ್ನು ನಿರ್ಧರಿಸುವುದಕ್ಕಾಗಿ ಅಧಿಕಾರಿಗಳನ್ನು ಒಳಗೊಂಡ ಸಮಿತಿಯಲ್ಲಿ ಭೂಮಿ ಕಳೆದುಕೊಂಡು ಸಂತ್ರಸ್ತರಾದವರ ಪ್ರತಿನಿಧಿಗಳನ್ನು ಸದಸ್ಯರನ್ನಾಗಿ ಸೇರ್ಪಡೆಗೊಳಿಸುವ ಮೂಲಕ ಹಾಗೂ ಆರಂಭಗೊಂಡ ಕೈಗಾರಿಕೆಗಳಲ್ಲಿ ಸಂತ್ರಸ್ತರ ಕುಟುಂಬಗಳ ಅವಲಂಬಿತರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದರ ಮೂಲಕ ಸಂತ್ರಸ್ತರನ್ನು ಯೋಜನೆಯ ಜಾರಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತೇವೆಂದು ಐದು ಅಧಿಕಾರಿಗಳು ತಿಳಿಸಿದರೆ, ಉದ್ಯೋಗ ನೀಡುವುದರ ಮೂಲಕವೆಂದು ಮೂವರು ಹಾಗೂ ಸಂತ್ರಸ್ತರ ಸಮಸ್ಯೆಗಳನ್ನು ಪ್ರತಿನಿಧಿಸಲು ಸಮಿತಿಗಳನ್ನು ರಚಿಸುವುದರ ಮೂಲಕ ಅವರಿಗೆ ಪ್ರಾತಿನಿಧ್ಯ ನೀಡಲಾಗಿರುತ್ತದೆಯೆಂದು ಇಬ್ಬರು ಅಧಿಕಾರಿಗಳು ತಿಳಿಸಿರುತ್ತಾರೆ. ಪ್ರಚಲಿತದಲ್ಲಿರುವ ಭೂಸ್ವಾಧೀನ ಹಾಗೂ ಪರಿಹಾರ ನೀತಿಗಳು ಸಮರ್ಪಕವಾಗಿರುತ್ತದೆ ಹಾಗೂ ಅವುಗಳ ಪ್ರಕಾರ ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಗೋಸ್ಕರ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರಿಗೆ ಸೂಕ್ತ ಪರಿಹಾರ ಒದಗಿಸಲಾಗಿರುತ್ತದೆಯೆಂದು ಎಲ್ಲಾ ಹತ್ತು ಸಂದರ್ಶಿತ ಅಧಿಕಾರಿಗಳು ತಿಳಿಸಿರುತ್ತಾರೆ. ಶೇಕಡಾ ತೊಂಬತ್ತೊಂಬತ್ತರಷ್ಟು ಕುಟುಂಬಗಳು ರಚಿಸಲಾಗಿರುವ ಪುನರ್‌ವಸತಿ ಪ್ರದೇಶದಲ್ಲಿ ಸಂತೃಪ್ತಿಯಿಂದ ನೆಲೆಸಿರುತ್ತಾರೆಂದು ಎಲ್ಲಾ ಹತ್ತು ಅಧಿಕಾರಿಗಳು ತಿಳಿಸಿದ್ದು, ಪುನರ್‌ವಸತಿ ಪ್ರದೇಶದಲ್ಲಿ ಪಾರದರ್ಶಕ ರೀತಿಯಲ್ಲಿ ನಿವೇಶನವನ್ನು ಹಂಚಿರುವುದು ಇದಕ್ಕೆ ಕಾರಣವೆಂದು ಇಬ್ಬರು ಅಧಿಕಾರಿಗಳು ತಿಳಿಸಿದರೆ, ಸಂತ್ರಸ್ತರೊಂದಿಗೆ ಸಮಾಲೋಚಿಸಿ ಪುನರ್‌ವಸತಿ ನಿವೇಶನಗಳನ್ನು ಹಂಚಿರುವುದು ಕಾರಣವಾಗಿದೆಯೆಂದು ಎಂಟು ಅಧಿಕಾರಿಗಳು ತಿಳಿಸಿರುತ್ತಾರೆ. ಇತರ ಯೋಜನೆಗಳಿಗಿಂತ ಭಿನ್ನವಾಗಿ ಇಲ್ಲಿ ಪರಿಹಾರವನ್ನು ನೀಡಲಾಗಿರುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಆರು ಅಧಿಕಾರಿಗಳು ಸಂತ್ರಸ್ತ ಕುಟುಂಬದ ಅರ್ಹ ಸದಸ್ಯರಿಗೆ ತರಬೇತಿ ಭತ್ಯೆಯನ್ನು ನೀಡಿರುವುದು ಹಾಗೂ ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ತಾಂತ್ರಿಕ ತರಬೇತಿಯನ್ನು ನೀಡಿ ಅವರಲ್ಲಿ ಹೊಸ ಉದ್ಯೋಗಕ್ಕೆ ಬೇಕಾದ ಕೌಶಲ್ಯವನ್ನು ಬೆಳೆಸಿ ಉದ್ಯೋಗ ಸೇರುವುದಕ್ಕೆ ಅವಕಾಶ ನೀಡಿರುವ ಉದಾಹರಣೆ ಬೇರೆ ಯಾವ ಯೋಜನೆಗಳಲ್ಲೂ ಮಾಡಿಲ್ಲವೆಂದು ತಿಳಿಸಿದರೆ, ಸಂತ್ರಸ್ತರಿಗೆ ಬೇರೆ ಕಡೆ ನೀಡಿರದಂತಹ ಅತ್ಯುತ್ತಮ ಪರಿಹಾರದ ಪ್ಯಾಕೇಜ್‌ಗಳನ್ನು ನೀಡಲಾಗಿರುತ್ತದೆಯೆಂದು ಇಬ್ಬರು ಅಧಿಕಾರಿಗಳು ಹೇಳಿದರೆ, ಸಂತ್ರಸ್ತರ ಸಮಿತಿಗಳನ್ನು ರಚಿಸಿ ಅವರೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ನೀಡಿರುವುದರಿಂದ ಇದು ಇತರ ಯೋಜನೆಗಳಿಗಿಂತ ಭಿನ್ನವೆಂದು ಒಬ್ಬರು ಅಧಿಕಾರಿಗಳು ತಿಳಿಸಿದರೆ, ಸಂತ್ರಸ್ತರಿಗೆ ಯೋಗ್ಯ ಉದ್ಯೋಗ ನೀಡಿರುವುದು ಈ ಯೋಜನೆಯ ವಿಶೇಷವೆಂದು ಓರ್ವ ಅಧಿಕಾರಿ ತಿಳಿಸಿರುತ್ತಾರೆ.

ಸಂದರ್ಶಿತ ಅಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತಹ ಮೂಲಭೂತ ಸೌಲಭ್ಯಗಳು, ನೈಸರ್ಗಿಕ ಸಂಪನ್ಮೂಲ ಮತ್ತು ಯಥೇಚ್ಛವಾಗಿ ದೊರಕುವ ಶಿಕ್ಷಿತ ಮಾನವ ಸಂಪನ್ಮೂಲಗಳಿಂದಾಗಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಎಲ್ಲಾ ರೀತಿಯಿಂದಲೂ ಪ್ರಶಸ್ತವಾದ ಪ್ರದೇಶವಾಗಿರುತ್ತದೆಯೆಂಬ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ರಾಷ್ಟ್ರದ ಒಟ್ಟು ಅಭಿವೃದ್ಧಿಯ ದೃಷ್ಟಿಯಿಂದ ಯೋಜನೆಗಳಿಗಾಗಿ ಭೂಸ್ವಾಧೀನಪಡಿಸಿರುವುದನ್ನು ಸಮರ್ಥಿಸಿ, ಇದರಿಂದಾಗಿ ಸ್ಥಳೀಯ ಜನರಿಗೆ ಉದ್ಯೋಗಾವಕಾಶಗಳು ದೊರಕಿ, ಆ ಪ್ರದೇಶದ ಆರ್ಥಿಕ ಅಭಿವೃದ್ಧಿಯಾಗುತ್ತದೆ ಎಂದು ಬೃಹತ್ ಕೈಗಾರಿಕೆಗಳ ಸ್ಥಾಪನೆಯನ್ನು ಸಮರ್ಥಿಸಿರುತ್ತಾರೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿದ ಸಂದರ್ಭದಲ್ಲಿ ಇತರ ಯೋಜನೆಗಳಿಗಿಂತ ಭಿನ್ನವಾಗಿ ಯಾವುದೇ ತಾರತಮ್ಯವನ್ನು ಮಾಡದೇ ಸಂತ್ರಸ್ತರುಗಳಿಗೆ ಅತ್ಯುತ್ತಮ ಪರಿಹಾರದ ಪ್ಯಾಕೇಜ್‌ಗಳನ್ನು ನೀಡಲಾಗಿತ್ತು. ಕಾನೂನಿನ ಚೌಕಟ್ಟನ್ನು ಉಲ್ಲಂಘಿಸದೇ ಸಂತ್ರಸ್ತರ ಪೂರ್ಣ ಸಮ್ಮತಿಯೊಂದಿಗೆ ಅವರುಗಳ ಭೂಮಿಯನ್ನು ಸ್ವಾಧೀನಪಡಿಸಲಾಗಿರುತ್ತದೆ. ನಿರ್ವಸಿತರು ಮುಂದೆ ಅತ್ಯುತ್ತಮ ಜೀವನವನ್ನು ನಡೆಸುವುದಕ್ಕಾಗಿ ಎಲ್ಲಾ ಅನುಕೂಲಗಳನ್ನು ಒಳಗೊಂಡ ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಲಾಗಿದ್ದು, ಅವರುಗಳ ಸಮಸ್ಯೆಗಳಿಗೆ ತಕ್ಷಣದಲ್ಲಿ ಸ್ಪಂದಿಸಲಾಗಿರುತ್ತದೆಯೆಂದು ಅಭಿವೃದ್ಧಿ ಚಟುವಟಿಕೆಗಳಿಗೋಸ್ಕರ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಸಮರ್ಥಿಸಿಕೊಂಡದ್ದು ಕಂಡುಬಂದರೆ, ಇದಕ್ಕೆ ವ್ಯತಿರಿಕ್ತವಾಗಿ ಭೂಸಂತ್ರಸ್ತರು ನಮ್ಮ ಅಭಿಪ್ರಾಯ ಮತ್ತು ಅಸಮ್ಮತಿಯನ್ನು ಪರಿಗಣಿಸದೇ ಬಲಪ್ರಯೋಗಿಸಿ ಭೂಸ್ವಾಧೀನ ನಡೆಸಲಾಗಿರುತ್ತದೆ ಎಂದು ತಮ್ಮ ಅಳಲನ್ನು ತೋಡಿಕೊಂಡಿರುತ್ತಾರೆ. ಭೂಸ್ವಾಧೀನ ಪ್ರಾಧಿಕಾರದ ಅಧಿಕಾರಿಗಳು ಆಕರ್ಷಕ ನಗದು ಪರಿಹಾರ, ಕುಟುಂಬದ ಸದಸ್ಯರಲ್ಲಿ ಒಬ್ಬರಿಗೆ ಸ್ಥಾಪಿಸಲ್ಪಡುವ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶ, ಸರ್ವಸಜ್ಜಿತ ಪುನರ್‌ವಸತಿ ಕಾಲನಿ ಮುಂತಾದ ಆಮಿಷಗಳನ್ನು ಒಡ್ಡಿ ಯಾವುದೇ ಸಮರ್ಪಕ ಪರಿಹಾರಗಳನ್ನು ನೀಡದೇ ನಮ್ಮನ್ನು ವಂಚಿಸಿರುತ್ತಾರೆಂದು ಸಂತ್ರಸ್ತರುಗಳು ಆರೋಪಿಸಿರುತ್ತಾರೆ. ಪರಿಹಾರವನ್ನು ವಿತರಿಸುವಲ್ಲಿ ಹಾಗೂ ಉದ್ಯೋಗವನ್ನು ನೀಡುವ ಸಂದರ್ಭದಲ್ಲಿ ಪ್ರಭಾವಶಾಲಿ ಸಂತ್ರಸ್ತರಿಗೆ ಆದ್ಯತೆಯನ್ನು ನೀಡಿ ತಾರತಮ್ಯವನ್ನು ಮಾಡಿರುತ್ತಾರೆ. ನಮ್ಮ ಭೂಮಿಯ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಪರಿಹಾರವನ್ನು ನೀಡುವಲ್ಲಿ ಪಾರದರ್ಶಕ ರೀತಿಯಲ್ಲಿ ವರ್ತಿಸದೇ ನಮ್ಮಿಂದ ಲಂಚವನ್ನು ಅಪೇಕ್ಷಿಸಿರುತ್ತಾರೆ. ಕಾಲನಿಗಳಲ್ಲಿ ಸರಿಯಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸದೇ ನಮ್ಮ ಜೀವನವನ್ನು ಕಷ್ಟಕರವನ್ನಾಗಿ ಮಾಡಿರುತ್ತಾರೆ. ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸದೇ ಬೇಜವಾಬ್ದಾರಿಯಿಂದ ವರ್ತಿಸಿದ್ದು, ಉತ್ತಮ ಬದುಕನ್ನು ನಡೆಸುವುದಕ್ಕೆ ಪೂರಕ ವಾತಾವರಣವನ್ನು ನಿರ್ಮಿಸದೇ ಅಸಡ್ಡೆಯಿಂದ ವರ್ತಿಸಿರುತ್ತಾರೆ. ಅಭಿವೃದ್ಧಿ ಚಟುವಟಿಕೆಗಳ ಲಾಭ ಮುಖ್ಯವಾಗಿ ದಕ್ಕಬೇಕಾಗಿರುವುದು ಅವುಗಳ ಸ್ಥಾಪನೆಗಾಗಿ ಭೂಮಿಯನ್ನು ತ್ಯಾಗ ಮಾಡಿದ ಸಂತ್ರಸ್ತರಿಗೆ.

ಆದರೆ ಅದರ ಲಾಭವನ್ನು ಸಮಾಜದ ಬಲಿಷ್ಠ ವರ್ಗ ಪಡೆಯುತ್ತಿದೆಯೆಂದು ತಮ್ಮ ಆಕ್ರೋಶ, ಅಸಮಾಧಾನವನ್ನು ವ್ಯಕ್ತಪಡಿಸಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ.

ಭೂಸಂತ್ರಸ್ತರ ಪರವಾಗಿ ಹೋರಾಟಗಳನ್ನು ಸಂಘಟಿಸಿದ ನಾಯಕರನ್ನು ವಂಚಕರು, ನಕ್ಸಲೈಟ್ಸ್, ಮತಾಂತರ ಮಾಡುವವರು, ಅಭಿವೃದ್ಧಿ ಚಟುವಟಿಕೆಗಳ ವಿರೋಧಿಗಳೆಂದು ಭೂಸ್ವಾಧೀನಪಡಿಸುವ ಪ್ರಾಧಿಕಾರದ ಅಧಿಕಾರಿಗಳು ಸಂತ್ರಸ್ತರ ಎದುರು ಬಿಂಬಿಸಲು ಪ್ರಯತ್ನಿಸಿದ್ದರು[32] ಎಂದು ತಿಳಿಸಿದ ಹೋರಾಟದ ಮುಂಚೂಣಿಯಲ್ಲಿದ್ದ ನಾಯಕರುಗಳು ಹೋರಾಟ, ಪ್ರತಿಭಟನೆಗಳನ್ನು ದಮನಿಸಲು ಎಲ್ಲಾ ಪ್ರಯತ್ನಗಳನ್ನು ಸರಕಾರ ಮತ್ತು ಪ್ರಾಧಿಕಾರ ಮಾಡಿತ್ತು ಎಂದು ಆರೋಪಿಸಿರುತ್ತಾರೆ. ಸಂಘಟಿತ ಹೋರಾಟಗಳಿಗೆ ತಲೆಬಾಗಿ ಮಂಗಳೂರು ವಿಶೇಷ ಆರ್ಥಿಕ ವಲಯದ ದ್ವಿತೀಯ ಹಂತದ ವಿಸ್ತರಣೆಗೆ ಸಂಬಂಧಪಟ್ಟ ಭೂಸ್ವಾಧೀನದ ಅಧಿಸೂಚನೆಯನ್ನು ಸರಕಾರ ಹಿಂಪಡೆದುಕೊಂಡಿತು. ರಾಜಕೀಯ ಪಕ್ಷಗಳು ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸದೇ ಯೋಜನೆಯ ಜಾರಿಯ ಪರವಾಗಿದ್ದರು ಎಂದು ಉತ್ತರಿಸಿದ ನಾಯಕರುಗಳು ಹೋರಾಟಗಳ ಮೂಲಕವೇ ಸಂತ್ರಸ್ತರುಗಳು ಯೋಗ್ಯ ಪರಿಹಾರವನ್ನು ಪಡೆಯುವಂತಾಯಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಪರಾಮರ್ಶನ ಗ್ರಂಥಗಳು ಮತ್ತು ಕೊನೆ ಟಿಪ್ಪಣಿಗಳು

[1] ವಸುದಾ ಧಗಮಾವರ್, ಸುಬ್ರತಾ ಡೇ, ನಿಖಿಲ್ ವರ್ಮ (ಸಂ) (2003), ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಎಂಡ್ ಡಿಸ್‌ಪ್ಲೇಸ್‌ಮೆಂಟ್, ದ ಪೀಪಲ್ ಆಫ್ ಕೊರ್ಬಾ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 3–23.

[2] ಸೇನ್‌ಗುಪ್ತಾ, ನಿರ್ಮಲ್ (1979), 'ಡೆಸ್ಟಿಟ್ಯೂಟ್ ಎಂಡ್ ಡೆವಲಪ್‌ಮೆಂಟ್', ಎ ಕೇಸ್ ಸ್ಟಡಿ ಆಫ್ ಭೌರಿ ಕಮ್ಯೂನಿಟಿ ಇನ್ ಬೊಕಾರೋ ರೀಜನ್, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ. ಪುಟ 189–216.

[3] ಇನಾಕ್ಷಿ ಗಂಗೂಲಿ ತುಕ್ರಾಲ್, (1988), "ಡ್ಯಾಮ್ಸ್ ಫಾರ್ ಹೂಸ್ ಡೆವಲಪ್‌ಮೆಂಟ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 38(3), ಎಪ್ರಿಲ್–ಜೂನ್. ಪುಟ 211–230.

[4] ಎನ್.ಎಂ.ಪಿ.ಟಿ, ಎಂ.ಆರ್.ಪಿ.ಎಲ್ ಮತ್ತು ಬಜ್ಪೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಥಾಪನೆಗಾಗಿ ಸ್ಥಳಾಂತರಗೊಂಡ ಸಂತ್ರಸ್ತರಿಗಾಗಿ ಸುರತ್ಕಲ್‌ನ ಕೃಷ್ಣಾಪುರ, ಚೇಳ್ಯಾರು ಮತ್ತು ಬಜ್ಪೆಯ ಸೌಹಾರ್ದನಗರದಲ್ಲಿ 1990ರ ನಂತರ ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಲಾಗಿರುತ್ತದೆ. ಅಲ್ಲಿನ ನಿವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ಸಂತ್ರಸ್ತರ ಪುನರ್‌ವಸತಿ ಕಾಲನಿಗಳಿಗೆ ಹೋಲಿಸಿದಾಗ ಸಂತ್ರಸ್ತರು ಸಮಾನವಾದ ಸಮಸ್ಯೆಗಳನ್ನು (ನೀರು, ಒಳಚರಂಡಿ, ಸಾರಿಗೆ ಸಂಪರ್ಕ, ಇತ್ಯಾದಿ) ಎದುರಿಸುತ್ತಿರುವುದು ಕಂಡುಬರುತ್ತದೆ.

[5] ಇನಾಕ್ಷಿ ಗಂಗೂಲಿ ತುಕ್ರಾಲ್, (1992), 'ಬಿಗ್ ಡ್ಯಾಮ್ಸ್ ಡಿಸ್‌ಪ್ಲೇಸ್ಡ್ ಪೀಪಲ್ : ರಿವರ್ಸ್ ಆಫ್ ಸೊರ್ರೋ, ರಿವರ್ಸ್ ಆಫ್ ಚೇಂಜ್', ನ್ಯೂಡೆಲ್ಲಿ, ಸೇಜ್ ಪಬ್ಲಿಕೇಷನ್ಸ್, ಪುಟ 20, 38, 41.

[6] ಅದೇ. ಪುಟ 201–223.

[7] ಅದೇ. ಪುಟ 201–223.

[8] ಮಂಗಳೂರು ವಿಶೇಷ ಆರ್ಥಿಕ ವಲಯದಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರಿಗೆ ಕರ್ನಾಟಕ ಸರಕಾರ ಪುನರ್‌ವಸತಿಯ ಬಗ್ಗೆ ಹೊರಡಿಸಿದ ಆದೇಶಗಳು. ಸರಕಾರಿ ಆದೇಶ ಸಂಖ್ಯೆ ಕಂ.ಇ. 309, ಆರ್.ಇ.ಎಚ್. 2006, ದಿನಾಂಕ 20–06–2007; ಕಂ.ಇ. 83, ಆರ್.ಇ.ಎಚ್. 2009, ದಿನಾಂಕ 16–06–2010; ಆರ್.ಡಿ. 116, ಆರ್.ಇ.ಎಚ್. 2011, ದಿನಾಂಕ 02–11–2011 – ಆಕರ್ಷಕ ಪುನರ್‌ವಸತಿ ಪ್ಯಾಕೇಜ್‌ಗಳ ಬಗ್ಗೆ ವಿವರಿಸಿತ್ತು. ಆದರೆ, ಪ್ರಸ್ತುತ ಆದೇಶಗಳು ಪರಿಣಾಮಕಾರಿಯಾಗಿ ಜಾರಿಗೆ ಬಂದಿಲ್ಲದಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ.

[9] ರಮಾ ಶೆಟ್ಟಿ, ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಹಿರಿಯರಿಂದ ಪಡೆದುಕೊಂಡು ಬಂದಿದ್ದ ಇಪ್ಪತ್ತನಾಲ್ಕು ಎಕ್ರೆ ಭೂಮಿಯನ್ನು ಕಳೆದುಕೊಂಡು ಪ್ರಸ್ತುತ ಪುನರ್‌ವಸತಿ ಕಾಲನಿಯಲ್ಲಿ ವಾಸಿಸುತ್ತಿರುವ ಸಂತ್ರಸ್ತರು.

[10] ಸಂದೀಪ್ ಮಾರ್ಲ, ಭೂಸಂತ್ರಸ್ತರು ಹಾಗೂ ಕೃಷಿಕರು, ಪ್ರಸ್ತುತ ಶಾಂತಿನಗರ ಪುನರ್‌ವಸತಿ ಕಾಲನಿಯ ನಿವಾಸಿ.

[11] ವರ್ಷಾ ಗಂಗೂಲಿ (2005). 'ಡಿಸ್‌ಪ್ಲೇಸ್‌ಮೆಂಟ್, ರೀಹೆಬಿಲಿಟೇಷನ್ ಎಂಡ್ ರೀಸೆಟ್ಲ್‌ಮೆಂಟ್ : ದ ಕೇಸ್ ಆಫ್ ಮಲ್ಧಾರಿ ಫ್ಯಾಮಿಲೀಸ್ ಆಫ್ ಗಿರ್ ಫಾರೆಸ್ಟ್', ಸೋಷಿಯಾಲಜಿಕಲ್ ಬುಲೆಟಿನ್, ವಾಲ್ಯೂಮ್ 54, ನಂ. 1, ಜನವರಿ–ಎಪ್ರಿಲ್. ಪುಟ 3–17.

[12] ರಜನಿ ಅಯ್ಯರ್ (2005). 'ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಸೆಟ್ಲ್‌ಮೆಂಟ್: ಭೀಮಾ ಇರ್ರಿಗೇಶನ್ ಪ್ರಾಜೆಕ್ಟ್ ಇನ್ ಮಹಾರಾಷ್ಟ್ರ', ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 55, ಎಪ್ರಿಲ್–ಜೂನ್. ಪುಟ 167–175.

[13] ಮಧುಸೂದನ, (2005). "ಅಭಿವೃದ್ಧಿ : ಪಶ್ಚಿಮದ ಮಾದರಿ ಎಷ್ಟು ಸರಿ?", ಹೊಸತು ಪತ್ರಿಕೆ, ಫೆಬ್ರವರಿ 15. ಪುಟ 18–26.

[14] ಮೈಕೆಲ್ ಸೆರ್ನ್ಯಾ ಎಂ. (1998) 'ಇನ್‌ವಾಲೆಂಟರಿ ರೀಸೆಟ್ಲ್‌ಮೆಂಟ್ ಇನ್ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಪಾಲಿಸಿ ಗೈಡ್ ಲೈನ್ಸ್ ಇನ್ ವರ್ಲ್ಡ್ ಬ್ಯಾಂಕ್ ಫೈನಾನ್ಸ್‌ಡ್ ಪ್ರಾಜೆಕ್ಟ್', ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟನ್ ಡಿ.ಸಿ. ಪುಟ 27–41.

[15] ದಯಾನಂದ ಪೂಜಾರಿ, ಭೂಸಂತ್ರಸ್ತರು. ಪ್ರಸ್ತುತ ಕೆಂಜಾರು ಪುನರ್‌ವಸತಿ ಕಾಲನಿಯ ನಿವಾಸಿ.

[16] ಅದೇ.

[17] ಸಂಕಪ್ಪ, ಉಲ್ಲಾಂಜೆ ಕುಂಟಪದವಿನಲ್ಲಿ ಯೋಜನೆಗಾಗಿ ತನ್ನ ಮನೆಯ ಸುತ್ತಲಿನ ತರಕಾರಿ ತೋಟವನ್ನು ಕಳೆದುಕೊಂಡ ಸಂತ್ರಸ್ತರು

[18] ಬಜ್ಪೆ ಸಮೀಪದ ಸರ್ವೆ ನಂ. 138/1ರಲ್ಲಿ ಸರಕಾರ ನೀಡಿದ ಐದು ಸೆಂಟ್ಸ್ ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸಿ ವಾಸಿಸುತ್ತಿರುವ ಬಡಜನರು. ಈ ಪರಿಸರದ ಎಲ್ಲಾ ನಿವಾಸಿಗಳು ತಮ್ಮ ಭೂಮಿಯನ್ನು ಯೋಜನೆಗಾಗಿ ಸ್ವಾಧೀನಪಡಿಸಿ ಎಂದು ಒತ್ತಾಯಿಸುತ್ತಿದ್ದಾರೆ. ಆದರೆ ಅಧಿಕಾರಿಗಳು, 'ಇದು ಸರಕಾರಿ ಜಾಗ. ಕುಟುಂಬಗಳ ಸಂಖ್ಯೆ ಹೆಚ್ಚಿರುವುದರಿಂದ ಎಲ್ಲರಿಗೂ ಉದ್ಯೋಗ ಮತ್ತು ಪರಿಹಾರವನ್ನು ನೀಡಲು ಸಾಧ್ಯವಿಲ್ಲ' ಎಂದು ಅವರ ಮನವಿಯನ್ನು ತಿರಸ್ಕರಿಸಿರುತ್ತಾರೆ.

[19] ವಿಶೇಷ ಆರ್ಥಿಕ ವಲಯಕ್ಕೆ ಸಂಬಂಧಪಟ್ಟಂತೆ ಪುನರ್‌ವಸತಿ ನೀತಿಯ ಅನ್ವಯ ನಿವೇಶನಗಳನ್ನು ಹಂಚುವ ಬಗೆಗಿನ ಸರಕಾರಿ ಆದೇಶ ಸಂಖ್ಯೆ ಕಂ.ಇ. 309, ಆರ್.ಇ.ಎಚ್. 2006, ಬೆಂಗಳೂರು. ದಿನಾಂಕ 20–06–2007, ಅನುಕ್ರಮ ಸಂಖ್ಯೆ 6(3)(ಈ). ಪುಟ ಸಂಖ್ಯೆ 2.

[20] ವಿಶೇಷ ಆರ್ಥಿಕ ವಲಯಕ್ಕೆ ಸಂಬಂಧಪಟ್ಟಂತೆ ಪುನರ್‌ವಸತಿ ನೀತಿಯ ಅನ್ವಯ ಕಾಲನಿಗಳನ್ನು ಐದು ವರ್ಷಗಳ ಕಾಲ ಅಭಿವೃದ್ಧಿಪಡಿಸಿ ನಂತರದಲ್ಲಿ ಸ್ಥಳೀಯ ಆಡಳಿತಕ್ಕೆ ಹಸ್ತಾಂತರಿಸುವ ಬಗೆಗಿನ ವಿವರಣೆ.

[21] ಪೆರ್ಮುದೆ ಪುನರ್‌ವಸತಿ ಪ್ರದೇಶದಲ್ಲಿ ವಾಸಿಸುತ್ತಿರುವ ಮಹಿಳೆಯರು ವ್ಯಕ್ತಪಡಿಸಿದ ಸಾಮಾನ್ಯ ಅಭಿಪ್ರಾಯ.

[22] ರೆಡ್ಡಿ, ಐ.ಯು.ಬಿ., (1992). "ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್", ಮಿತ್ತಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ. ಪುಟ 3–138.

[23] ನಗರದ ವಾತಾವರಣ ನಿರ್ಮಾಣವಾಗಿರುವುದರಿಂದ ಸಂತ್ರಸ್ತರು ಸಾಂಪ್ರದಾಯಿಕ ಉದ್ಯೋಗವನ್ನು ಕಳೆದುಕೊಂಡಿರುವುದು.

[24] ಕೋಡಿಕೆರೆ ಮತ್ತು ಕುಳಾಯಿ ಪುನರ್‌ವಸತಿ ಪ್ರದೇಶದಲ್ಲಿ ವಾಸಿಸುತ್ತಿರುವ ಸಂತ್ರಸ್ತರು ವ್ಯಕ್ತಪಡಿಸಿದ ಅಭಿಪ್ರಾಯ.

[25] ಕೋಡಿಕೆರೆ ಮತ್ತು ಕುಳಾಯಿ ಪುನರ್‌ವಸತಿ ಪ್ರದೇಶದಲ್ಲಿ ವಾಸಿಸುತ್ತಿರುವ ಸಂತ್ರಸ್ತರು ವ್ಯಕ್ತಪಡಿಸಿದ ಅಭಿಪ್ರಾಯ. ಬೀಡಿ ಕಟ್ಟಿ ಅದನ್ನು ದೂರದ ಸುರತ್ಕಲ್ ಪ್ರದೇಶದಲ್ಲಿರುವ ಗುತ್ತಿಗೆದಾರರಿಗೆ ವಾರದಲ್ಲಿ ಮೂರು ದಿನ ತಲುಪಿಸಬೇಕು. ಸಮರ್ಪಕ ಸಾರಿಗೆ ವ್ಯವಸ್ಥೆ ಇಲ್ಲದಿರುವುದರಿಂದ ಇದು ಸಾಧ್ಯವಿರುವುದಿಲ್ಲ.

[26] ಉಲ್ಲಾಂಜೆ ಕುಂಟಪದವಿನ ಸಂಕಪ್ಪ, ಬಜ್ಪೆ ನೆಲ್ಲಿದಡಿಗುತ್ತುವಿನ ನಲವತ್ತು ಕುಟುಂಬಗಳು ಮತ್ತು ಚಂದ್ರಿಕಾ ಟೀಚರ್ ಅವರ ಭೂಮಿಯನ್ನು ಪ್ರಾಧಿಕಾರ ಬಲಪ್ರಯೋಗಿಸಿ ಸ್ವಾಧೀನಪಡಿಸಿಕೊಂಡಿರುವುದು.

[27] ಕೋಡಿಕೆರೆ, ಕೆಂಜಾರು ಮತ್ತು ಕಳವಾರು ಪುನರ್‌ವಸತಿ ಕಾಲನಿಗಳಲ್ಲಿ ಕ್ಷೇತ್ರಕಾರ್ಯದ ಸಂದರ್ಭ ಮಾಹಿತಿದಾರರು ನೀಡಿದ ವಿವರಗಳು.

[28] ಮೈಕೆಲ್ ಸೆರ್ನ್ಯಾ (1997), "ದ ರಿಸ್ಕ್ಸ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಮಾಡೆಲ್ ಫಾರ್ ರೀಸೆಟ್ಲಿಂಗ್ ಡಿಸ್ಪ್ಲೇಸ್‌ಡ್ ಪಾಪ್ಯುಲೇಷನ್ಸ್", ವರ್ಲ್ಡ್ ಡೆವಲೆಪ್‌ಮೆಂಟ್, ವಾಲ್ಯೂಮ್ 25, ನಂ.10. ಪುಟ 1569–1588.

[29] ಅದೇ. ಪುಟ 1569–1588.

[30] ದ್ವಿತೀಯ ಹಂತದ ಭೂಸ್ವಾಧೀನವನ್ನು ಪ್ರತಿಭಟಿಸಿ ಹೋರಾಟಗಳನ್ನು ಸಂಘಟಿಸಿದ ನಾಯಕರುಗಳ ಹೇಳಿಕೆ.

[31] ದ್ವಿತೀಯ ಹಂತದ ಭೂಸ್ವಾಧೀನವನ್ನು ಪ್ರತಿಭಟಿಸಿ ಹೋರಾಟಗಳನ್ನು ಸಂಘಟಿಸಿದ ನಾಯಕರುಗಳ ಬಗ್ಗೆ ಅಧಿಕಾರಿಗಳು ಮಾಡಿದ ಅಪಪ್ರಚಾರದ ಬಗ್ಗೆ ಸಾರ್ವಜನಿಕವಾಗಿ ಕೇಳಿಬಂದ ಹೇಳಿಕೆಯ ಆಧಾರದಲ್ಲಿ ಹೋರಾಟಗಾರರು ತಿಳಿಸಿದಂತೆ.

[32] ಅದೇ.

ಉಪಸಂಹಾರ

ಅಧ್ಯಯನದ ಫಲಿತಗಳು ಮತ್ತು ಶಿಫಾರಸ್ಸುಗಳು

ಉಪಸಂಹಾರ

ಅಧ್ಯಯನದ ಫಲಿತಗಳು ಮತ್ತು ಶಿಫಾರಸ್ಸುಗಳು

ಅಭಿವೃದ್ಧಿ ಕಾರ್ಯಕ್ರಮಗಳು ಜನರ ಬಲವಂತದ ಸ್ಥಳಾಂತರಕ್ಕೆ ಕಾರಣವಾಗುವುದು ಎಂಬುದು ಸ್ಪಷ್ಟವಾಗಿ ಅರಿವಾಗುವ ಅಂಶ. ಇವುಗಳು ಸಾಮಾನ್ಯ ಜನಜೀವನದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತದೆಯೆಂದು ಅಭಿವೃದ್ಧಿ ಚಟುವಟಿಕೆಗಳನ್ನು ನಿರ್ಧರಿಸುವ ಸಂದರ್ಭದಲ್ಲಿಯೇ ಗಮನಕ್ಕೆ ಬರುವುದರಿಂದ, ಭವಿಷ್ಯತ್ತಿನಲ್ಲಿ ಆಗಬಹುದಾದ ಅನಾಹುತಗಳನ್ನು ತಪ್ಪಿಸುವುದಕ್ಕೆ ಅಥವಾ ಕನಿಷ್ಟ ಮಟ್ಟಕ್ಕೆ ಸೀಮಿತಗೊಳಿಸುವುದಕ್ಕೆ ಯೋಜನೆಯನ್ನು ಜಾರಿಗೆ ತರುವ ಅಧಿಕಾರಿಗಳಿಗೆ ಸಾಕಷ್ಟು ಸಮಯಾವಕಾಶಗಳು ದೊರಕುತ್ತದೆ. ಯೋಜನೆಗಳು ತಂದೊಡ್ಡುವ ಸಮಸ್ಯೆಗಳ ಬಗ್ಗೆ ಮೊದಲೇ ತಿಳಿದಿದ್ದರೂ, ಅವುಗಳು ಜನರ ಸ್ಥಳಾಂತರಕ್ಕೆ ಅವಕಾಶವೀಯುತ್ತದೆ ಮಾತ್ರವಲ್ಲದೇ ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತದೆ ಎಂಬ ಅರಿವಿದ್ದರೂ ಅಧಿಕಾರಿಗಳು ಜನರ ಸಮಸ್ಯೆಗಳನ್ನು ಕನಿಷ್ಟ ಮಟ್ಟಕ್ಕೆ ತರುವುದಕ್ಕೆ ಯಾವುದೇ ಆದ್ಯತೆಗಳನ್ನು ಸಾಮಾನ್ಯವಾಗಿ ನೀಡದೇ ಇರುವುದು ಅಚ್ಚರಿಯ ಅಂಶವಾಗಿರುತ್ತದೆ. ಸ್ಥಳಾಂತರದ ಸಂತ್ರಸ್ತರ ಪುನರ್‌ವಸತಿಯ ಬಗ್ಗೆ ಸಾಕಷ್ಟು ವ್ಯವಸ್ಥಿತ ಅಧ್ಯಯನಗಳು ನಡೆಯಲ್ಪಟ್ಟಿದ್ದರೂ ಸ್ಥಳಾಂತರಕ್ಕೆ ಕಾರಣವಾಗುವ ಯೋಜನೆಗಳು ತಂದೊಡ್ಡುವ ವಿನಾಶಕಾರಿ ಪರಿಣಾಮಗಳನ್ನು ಯೋಜನೆಗಳ ಪ್ರವರ್ತಕರುಗಳೇ ಹೊತ್ತುಕೊಂಡು, ಸಂತ್ರಸ್ತರ ಪುನರ್‌ವಸತಿಗೆ ಸಂಬಂಧಪಟ್ಟ ನ್ಯಾಯೋಚಿತ ಪರಿಹಾರಗಳನ್ನು ನೀಡದೇ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಂಡಿರುವುದು ಕಂಡುಬರುತ್ತದೆ (ಮೈಕೆಲ್ ಸೆರ್ನ್ಯಾ, 1995; ಮೆಕ್‌ಡೊವೆಲ್, 1996; ಮಾಥೂರ್ ಮತ್ತು ಮರ್ಸಿಡೆನ್, 2006). ಸಾಮಾನ್ಯವಾಗಿ ಸಂತ್ರಸ್ತರ ಸಮಸ್ಯೆಗಳು, ಬವಣೆಗಳು ಮತ್ತು ತೊಳಲಾಟಗಳಿಗೆ ಯಾವುದೇ ಪ್ರಾಮುಖ್ಯತೆಯನ್ನು ನೀಡಲಾಗುವುದಿಲ್ಲ. ತಮ್ಮ ಇಚ್ಛೆಗೆ ವಿರುದ್ಧವಾಗಿ ಬಲವಂತವಾಗಿ ಹೇರಲ್ಪಟ್ಟ ಬೃಹತ್ ಯೋಜನೆಗಳಿಂದಾಗಿ ಭೂಮಿಯನ್ನು ಕಳೆದುಕೊಂಡ ನತದೃಷ್ಟ ಸಂತ್ರಸ್ತರುಗಳೇ ತಮ್ಮ ಸಮಸ್ಯೆ ಮತ್ತು ಪರದಾಟಗಳನ್ನು ನಿವಾರಿಸುವುದಕ್ಕೆ ಹೋರಾಡಬೇಕಾದ ಸನ್ನಿವೇಶಗಳು ಸೃಷ್ಟಿಯಾಗಿರುವುದು ಹೆಚ್ಚಿನ ಅಭಿವೃದ್ಧಿ ಚಟುವಟಿಕೆಗಳಲ್ಲಿ ಕಂಡುಬಂದಿರುವಂತಹ ಸಾಮಾನ್ಯ ಅಂಶವಾಗಿರುತ್ತದೆ.

ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟಂತೆ ಜಗತ್ತಿನಾದ್ಯಂತ, ವಿಶೇಷವಾಗಿ ಭಾರತದಲ್ಲಿ ಹಲವಾರು ಸಂಶೋಧನೆಗಳು ನಡೆದು ಕೈಗಾರಿಕೀಕರಣ ತಂದೊಡ್ಡುವ ಅನಾಹುತಗಳ ಬಗ್ಗೆ ಸಾಕಷ್ಟು ಪುಸ್ತಕಗಳು ಪ್ರಕಟಿತಗೊಂಡಿವೆ. ಆದರೆ, ಇಂದಿಗೂ ಅವುಗಳು ತರುವ ಸಮಸ್ಯೆಗಳ ಬಗ್ಗೆ ಗಂಭೀರವಾದ ಅಧ್ಯಯನಗಳು ನಡೆಸಲ್ಪಡುತ್ತಿರುವುದು ಯೋಜನೆಗಳು ತಂದೊಡ್ಡುವ ಸಮಸ್ಯೆಗಳ ಅಗಾಧತೆಯನ್ನು ವಿವರಿಸುತ್ತದೆ. ಹೆಚ್ಚಿನ ಅಧ್ಯಯನಗಳು ಸಂತ್ರಸ್ತರ ಬವಣೆಗಳ ಬಗ್ಗೆ ಮಾತ್ರ ವಿವರಿಸುತ್ತದೆಯಲ್ಲದೇ ಅವುಗಳ ನಿವಾರಣೆಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಕಾರ್ಯಸಾಧುವಾದ ಪರಿಹಾರಗಳನ್ನು ಸೂಚಿಸಿರುವುದು ಕಂಡುಬಂದಿರುವುದಿಲ್ಲ.

ಸಂತ್ರಸ್ತರು ಕಳೆದುಕೊಂಡ ತಮ್ಮ ಪೂರ್ವ ಜೀವಿತವನ್ನು ಹಾಗೂ ಜೀವನಶೈಲಿಯನ್ನು ಯಾವ ರೀತಿಯಿಂದಾಗಿ ಹೊಸ ನೆಲೆಗಳಲ್ಲಿ ಪುನಃ ಪಡೆಯಬಹುದು ಅಥವಾ ಹೊಂದಾಣಿಕೆಯಿಂದ ಹೇಗೆ ಜೀವಿಸಬಹುದು ಎಂಬುದನ್ನು ವಿವರಿಸುವುದಕ್ಕೆ ಹೆಚ್ಚಿನ ಅಧ್ಯಯನಗಳು ಗಂಭೀರವಾದ ಪ್ರಯತ್ನಗಳನ್ನು ಮಾಡಿರುವುದು ಕಂಡುಬಂದಿರುವುದಿಲ್ಲ. ಹೆಚ್ಚಿನ ಸಂತ್ರಸ್ತರು ಪುನರ್‌ವಸತಿಯ ನಂತರದಲ್ಲಿ ತಾವು ಹಿಂದೆ ಹೊಂದಿದ್ದಕ್ಕಿಂತಲೂ ಕಡಿಮೆ ಭೂಮಿಯನ್ನು ಹೊಂದಿರುವುದು, ಉದ್ಯೋಗವನ್ನು ಕಳೆದುಕೊಂಡಿರುವುದು, ಆದಾಯದಲ್ಲಿ ಕುಸಿತ, ಸಾಮೂಹಿಕ ಆಸ್ತಿಯನ್ನು ಉಪಯೋಗಿಸುವುದರಿಂದ ವಂಚಿತರಾಗುವುದು, ಸಾರ್ವಜನಿಕ ಸೇವೆಗಳ ಅಲಭ್ಯತೆ ವಿಶೇಷವಾಗಿ ಹೊಸ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ, ಆರೋಗ್ಯ ವ್ಯವಸ್ಥೆ, ನೀರು ಮತ್ತು ವಿದ್ಯುತ್‌ನ ಅಲಭ್ಯತೆ, ಯೋಗ್ಯ ಜೀವನವನ್ನು ನಡೆಸುವುದಕ್ಕೆ ಅವಕಾಶಗಳು ಇಲ್ಲದಿರುವುದು ಮುಂತಾದ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವುದು ಕಂಡುಬರುತ್ತದೆ. ಯೋಜನೆಗಳ ಸಂತ್ರಸ್ತರುಗಳ ಆದಾಯ ಮತ್ತು ಜೀವನಮಟ್ಟ ಪುನರ್‌ವಸತಿಯ ನಂತರದಲ್ಲಿ ಯಾವುದೇ ಕಾರಣಕ್ಕೂ ಕಡಿಮೆಯಾಗಬಾರದು ಎಂಬುದಾಗಿ ಜಾಗರೂಕತೆಯಿಂದ ಜಾರಿಗೆ ತಂದಂತಹ ಜನಸ್ನೇಹಿ ಪುನರ್‌ವಸತಿ ಕಾರ್ಯಕ್ರಮಗಳು ಕೂಡಾ ತಮ್ಮ ಗುರಿಯನ್ನು ತಲುಪುವಲ್ಲಿ ವಿಫಲವಾಗಿರುವುದು ಸಮಸ್ಯೆಯ ಗಂಭೀರತೆಯನ್ನು ವಿವರಿಸುತ್ತದೆ.

ಪ್ರಸ್ತುತ ಕಾಲಘಟ್ಟದಲ್ಲಿ ರಾಷ್ಟ್ರವು ತನ್ನ 'ವಿಶೇಷ ಅಧಿಕಾರ'ವನ್ನು ಚಲಾಯಿಸಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಗೊಳಿಸಿ ಖಾಸಗಿ ಕೈಗಾರಿಕಾ ಸಂಕೀರ್ಣಗಳನ್ನು ರಚಿಸುವುದಕ್ಕೋಸ್ಕರ ಮಾರಾಟ ಮಾಡುವ ಅಥವಾ ಗುತ್ತಿಗೆ ಕೊಡುವ ವ್ಯವಸ್ಥೆಯನ್ನು ರಾಷ್ಟ್ರಾದ್ಯಂತ ಕಾಣಬಹುದು. ಪ್ರಸ್ತುತ ಈ ಪ್ರಕ್ರಿಯೆಯಿಂದ ಹಲವಾರು ಪ್ರಶ್ನೆಗಳು ಉದ್ಭವಿಸುತ್ತದೆ. ಅಭಿವೃದ್ಧಿ ಆಧಾರಿತ ಭೂಸ್ವಾಧೀನ ಪ್ರಕ್ರಿಯೆಗಳು ಸಾರ್ವಜನಿಕ ಉದ್ದೇಶಗಳಿಗಾಗಿಯೇ ಮಾಡಲ್ಪಡುತ್ತಿದೆಯೇ? ಖಾಸಗಿ ಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಯಲ್ಲಿ ರಾಷ್ಟ್ರವು ಭೂಮಿಯನ್ನು ಸ್ವಾಧೀನಪಡಿಸಿ ಕೈಗಾರಿಕೆಗಳ ಸ್ಥಾಪನೆಗೆ ನೀಡುವುದು ನ್ಯಾಯಸಮ್ಮತವೇ? ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ದಿಮೆದಾರರು ಕೃಷಿಕರಿಂದ ನೇರವಾಗಿ ಭೂಮಿಯನ್ನು ಖರೀದಿಸುವುದಕ್ಕೆ ಅವಕಾಶವಿರುವುದಿಲ್ಲ. ಸಮಾಜದಲ್ಲಿರುವ ಕೆಳಸ್ತರದ, ದುರ್ಬಲರ ಭೂಮಿಗಳನ್ನು ನಿಕೃಷ್ಟ ಪರಿಹಾರದ ಮೊತ್ತವನ್ನು ನೀಡಿ ಬಲವಂತವಾಗಿ ಸ್ವಾಧೀನಪಡಿಸಿ, ಅದನ್ನು ಅಭಿವೃದ್ಧಿಪಡಿಸಿ ಖಾಸಗಿ ಬಂಡವಾಳಶಾಹಿಗಳಿಗೆ ಅಧಿಕ ಲಾಭಕ್ಕಾಗಿ ಮಾರಾಟ ಮಾಡುವುದು ಸಾಮಾಜಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿರುತ್ತದೆ.

ಬೃಹತ್ ಕೈಗಾರಿಕೆಗಳ ಸ್ಥಾಪನೆಯಿಂದ ಮಾತ್ರ ರಾಷ್ಟ್ರದ ಒಟ್ಟು ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆಯೆಂಬ ಪರಿಕಲ್ಪನೆಯನ್ನು ಒಪ್ಪಿಕೊಂಡ ಸರಕಾರ, ಈ ನಿಟ್ಟಿನಲ್ಲಿ ಮಿಶ್ರ ಆರ್ಥಿಕ ನೀತಿಯನ್ನು ಅಳವಡಿಸಿಕೊಂಡು ಸಾರ್ವಜನಿಕ ಮತ್ತು ಖಾಸಗಿ ಪ್ರಾಯೋಜಕತ್ವದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾರಂಭಿಸಿತು. ಪಾಶ್ಚಿಮಾತ್ಯ ರಾಷ್ಟ್ರಗಳು ಅಭಿವೃದ್ಧಿಯನ್ನು ಹೊಂದಲು, ಅತ್ಯುತ್ತಮ ತಂತ್ರಜ್ಞಾನವನ್ನು

ಅಳವಡಿಸಿಕೊಳ್ಳಲು ಅವುಗಳು ಕೈಗಾರಿಕೀಕರಣಕ್ಕೆ ಹೆಚ್ಚು ಒತ್ತನ್ನು ನೀಡಿರುವುದು ಪ್ರಮುಖ ಕಾರಣಗಳು ಎಂದು ಅರ್ಥೈಸಿಕೊಂಡ ಸರಕಾರ ನಮ್ಮ ಪರಿಸರಕ್ಕೆ ಬೃಹತ್ ಕೈಗಾರಿಕೆಗಳ ಸ್ಥಾಪನೆ ಸೂಕ್ತವಾಗಿ ಹೊಂದಿಕೆಯಾಗುತ್ತದೆಯೇ ಎಂಬ ಔಚಿತ್ಯವನ್ನು ಪರಿಗಣಿಸದೆ ಕೈಗಾರಿಕೀಕರಣದ ಮೂಲಕ ಮಾತ್ರವೇ ಅಭಿವೃದ್ಧಿ ಸಾಧ್ಯ ಎಂದು ಪರಿಭಾವಿಸಿಕೊಂಡು ಅವುಗಳ ಸ್ಥಾಪನೆಗೆ ಪ್ರಾಶಸ್ತ್ಯವನ್ನು ನೀಡಿರುವುದು ಪರಿಸರ ಅಸಮತೋಲನ ಹಾಗೂ ಹಲವಾರು ಜ್ವಲಂತ ಸಮಸ್ಯೆಗಳಿಗೆ ನಂತರದಲ್ಲಿ ಕಾರಣವಾಗಿರುತ್ತದೆ. ಬೃಹತ್ ಕೈಗಾರಿಕಾ ಸಂಕೀರ್ಣದ ಸ್ಥಾಪನೆಯ ಮುಖಾಂತರ ರಾಷ್ಟ್ರದ ಒಟ್ಟು ಆದಾಯ ಹಾಗೂ ಜನರ ತಲಾ ವರಮಾನ, ಜೀವನ ಮಟ್ಟವನ್ನು ಏರಿಸಬಹುದು ಎಂಬ ಪರಿಕಲ್ಪನೆ ವಿವಾದಾತ್ಮಕವಾಗಿದ್ದರೂ, ಸ್ವಾತಂತ್ರ್ಯನಂತರದಲ್ಲಿ ಕೈಗಾರಿಕೀಕರಣ ಪ್ರಕ್ರಿಯೆಗೆ ಹೆಚ್ಚಿನ ಒತ್ತನ್ನು ನೀಡಿರುವುದು ಹಲವಾರು ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗಿರುವುದನ್ನು ಹೆಚ್ಚಿನ ಅಧ್ಯಯನಗಳು ಬೆಟ್ಟು ಮಾಡಿ ತೋರಿಸುತ್ತದೆ.

ಸಾಮಾನ್ಯವಾಗಿ ಮೂರು ಪ್ರಮುಖ ಕಾರಣಗಳಿಂದಾಗಿ ದೊಡ್ಡ ಮಟ್ಟದಲ್ಲಿ ಜನರನ್ನು ತಮ್ಮ ಮೂಲನೆಲೆಗಳಿಂದ ಇನ್ನೊಂದು ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತದೆ. ಯುದ್ಧ, ಜನಾಂಗೀಯ ಸಂಘರ್ಷ, ಆಂತರಿಕ ದಂಗೆ, ಭಯೋತ್ಪಾದನೆ, ರಾಷ್ಟ್ರಗಳ ವಿಭಜನೆ ಮತ್ತು ಕೋಮು ಗಲಭೆಗಳು ಸಂತ್ರಸ್ತರುಗಳ ಸ್ಥಳಾಂತರಕ್ಕೆ ರಾಜಕೀಯ ಕಾರಣಗಳಾಗುತ್ತದೆ. ಭೂಕಂಪ, ಸುನಾಮಿ, ಬರಗಾಲ, ನೆರೆ, ಚಂಡಮಾರುತ, ಕರಾವಳಿ ಪ್ರದೇಶಗಳಲ್ಲಿ ಕಡಲ್ಕೊರೆತ ಮುಂತಾದ ಅವಘಡಗಳು ಜನರ ಸ್ಥಳಾಂತರಕ್ಕೆ ನೈಸರ್ಗಿಕ ಕಾರಣಗಳಾಗುತ್ತದೆ. ಕೈಗಾರಿಕೆಗಳ ಸ್ಥಾಪನೆ, ಅಣೆಕಟ್ಟುಗಳ ನಿರ್ಮಾಣ, ವಿಮಾನ ನಿಲ್ದಾಣಗಳ ರಚನೆ, ಹೆದ್ದಾರಿಗಳ ವಿಸ್ತರಣೆ, ರೈಲ್ವೆ ಸಂಪರ್ಕದ ವಿಸ್ತರಣೆ ಹಾಗೂ ರಾಷ್ಟ್ರದ ರಕ್ಷಣೆಗೆ ಸಂಬಂಧಪಟ್ಟ ಮಿಲಿಟರಿ ಸ್ಥಾವರಗಳ ಸ್ಥಾಪನೆಗಳು ಮತ್ತು ಅಭಿವೃದ್ಧಿ ಪ್ರೇರಿತ ಚಟುವಟಿಕೆಗಳಿಂದಾಗಿ ಬಲವಂತದಿಂದ ಜಗತ್ತಿನಾದ್ಯಂತ ತಮ್ಮ ಮೂಲನೆಲೆಗಳಿಂದ ಜನರನ್ನು ಸ್ಥಳಾಂತರಿಸಲಾಗುತ್ತದೆ. ಆಧುನಿಕ ಅಭಿವೃದ್ಧಿ ಚಟುವಟಿಕೆಗಳು ಸಂತ್ರಸ್ತರನ್ನು ದೈಹಿಕವಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸ್ಥಳಾಂತರಿಸುವುದು ಮಾತ್ರವಲ್ಲದೆ, ಜನರು ತಮ್ಮ ಜೀವನ ನಿರ್ವಹಣೆಗಾಗಿ ನಂಬಿಕೊಂಡು ಬಂದಿದ್ದ ಸಾಂಪ್ರದಾಯಿಕ ಕೌಶಲ್ಯಗಳನ್ನು ಒಳಗೊಂಡಿದ್ದ ಉದ್ಯೋಗಗಳಾದ ಕೃಷಿ ಚಟುವಟಿಕೆ, ಕಮ್ಮಾರಿಕೆ, ಕುಂಬಾರಿಕೆ, ಮೀನುಗಾರಿಕೆಗಳಿಂದ ವಿಮುಖರನ್ನಾಗಿಸಿ ಲಕ್ಷಾಂತರ ಸಂಖ್ಯೆಯಲ್ಲಿ ಕೈಗಾರಿಕಾ ಸಂಕೀರ್ಣಗಳಲ್ಲಿ ಮತ್ತು ನಿರ್ಮಾಣ ಕಾಮಗಾರಿಗಳಲ್ಲಿ ದಿನಗೂಲಿ ನೌಕರರಾಗುವುದಕ್ಕೆ ಕಾರಣವಾಗಿ ತಮ್ಮ ಮೂಲವೃತ್ತಿಯಿಂದಲೂ ಬಲವಂತವಾಗಿ ಸ್ಥಳಾಂತರಗೊಳ್ಳುವಿಕೆಗೆ ಕಾರಣವಾಗಿರುತ್ತದೆ.

ಭಾರತದಲ್ಲಿ ಜನರ ಕಲ್ಯಾಣ ಹಾಗೂ ರಾಷ್ಟ್ರದ ವರಮಾನವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಚಟುವಟಿಕೆಗಳು 1990ರ ನಂತರ ಹೆಚ್ಚಿನ ವೇಗವನ್ನು ಪಡೆದುಕೊಂಡಿತು. ರಾಷ್ಟ್ರ ಒಪ್ಪಿಕೊಂಡ ಉದಾರವಾದಿ ಮತ್ತು ಖಾಸಗೀಕರಣ ಪ್ರಕ್ರಿಯೆಯಿಂದಾಗಿ ಬೃಹತ್ ಕೈಗಾರಿಕೆಗಳ ಸ್ಥಾಪನೆ ದೊಡ್ಡ ಮಟ್ಟದಲ್ಲಿ ಆರಂಭಗೊಂಡಿತು.

ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಮತ್ತು ಜಗತ್ತಿನ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ಸೇರ್ಪಡೆಗೊಳ್ಳಲು, ಚೀನಾದಲ್ಲಿ ಅಸ್ತಿತ್ವಕ್ಕೆ ಬಂದು ಯಶಸ್ಸನ್ನು ಕಂಡ ವಿಶೇಷ ಆರ್ಥಿಕ ವಲಯಗಳ ಮಾದರಿಯನ್ನು 2005ನೇ ಇಸವಿಯಲ್ಲಿ ಸಂಸತ್ ಅಧಿವೇಶನದಲ್ಲಿ ಕಾನೂನುಗಳನ್ನು ರಚಿಸುವುದರ ಮೂಲಕ ಜಾರಿಗೆ ತರಲಾಯಿತು. ಪ್ರಸ್ತುತ ದೇಶಾದ್ಯಂತ 734 ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗೆ ಕೇಂದ್ರ ಸರಕಾರ ತನ್ನ ಅನುಮೋದನೆಯನ್ನು ನೀಡಿದ್ದು, ಸಂತ್ರಸ್ತರ ಪ್ರತಿಭಟನೆಯನ್ನು ಬಲವಂತವಾಗಿ ಹತ್ತಿಕ್ಕಿ ಫಲವತ್ತಾದ ಲಕ್ಷಾಂತರ ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಿ ಹಲವಾರು ವಲಯಗಳು ಕಾರ್ಯಾರಂಭವನ್ನು ಮಾಡಿರುತ್ತದೆ. ಕರ್ನಾಟಕದಲ್ಲಿ 76 ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗೆ ಅನುಮತಿ ದೊರೆತಿದ್ದು ಅವುಗಳಲ್ಲಿ 18 ವಲಯಗಳಲ್ಲಿ ಬೃಹತ್ ಕೈಗಾರಿಕಾ ಸಂಕೀರ್ಣಗಳು ಅಸ್ತಿತ್ವಕ್ಕೆ ಬಂದಿದ್ದು ತನ್ನ ಕಾರ್ಯನಿರ್ವಹಣೆಯನ್ನು ಆರಂಭಿಸಿರುವುದು ಕಂಡುಬಂದಿರುತ್ತದೆ.

ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದಿರುವ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕಾಗಿ ಭೂಸ್ವಾಧೀನಪಡಿಸಿದ ಸಂತ್ರಸ್ತರುಗಳ ಜೀವನಶೈಲಿ, ಆರ್ಥಿಕತೆ, ಸಂಸ್ಕೃತಿ, ಶಿಕ್ಷಣ, ಆರೋಗ್ಯ, ಸಾಮಾಜಿಕ, ರಾಜಕೀಯ ಮತ್ತು ಕೌಟುಂಬಿಕ ವ್ಯವಸ್ಥೆಯ ಮೇಲೆ ಭೂಸ್ವಾಧೀನ ಪ್ರಕ್ರಿಯೆ ಬೀರಿದ ಪರಿಣಾಮಗಳ ವಿಶ್ಲೇಷಣೆಗೆ ಸಂಬಂಧಪಟ್ಟದ್ದಾಗಿರುತ್ತದೆ. ತೋಕೂರು, ಬಾಳ, ಪೆರ್ಮುದೆ, ಕಳವಾರು, ಕುತ್ತೆತ್ತೂರು, ತೆಂಕ ಎಕ್ಕಾರು, ಬಜ್ಪೆ ಮತ್ತು ಕುಳಾಯಿ ಪ್ರದೇಶದಲ್ಲಿ ಯೋಜನೆಗಾಗಿ 2004ರಂದು ಅಧಿಸೂಚನೆ ಹೊರಡಿಸಲ್ಪಟ್ಟು 2379 ಎಕ್ರೆ ಭೂಮಿಯನ್ನು ಸ್ವಾಧೀನಪಡಿಸಲಾಗಿರುತ್ತದೆ. ಒಟ್ಟು 1637 ಕುಟುಂಬಗಳು ತಮ್ಮ ವಾಸದ ಮನೆ, ಕೃಷಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುತ್ತಾರೆ. ಪುನರ್‌ವಸತಿಗೋಸ್ಕರ ತೋಕೂರು, ಕುಳಾಯಿ, ಬಜ್ಪೆ, ಪೆರ್ಮುದೆ ಮತ್ತು ಕಳವಾರಿನಲ್ಲಿ 245 ಎಕ್ರೆ ಭೂಪ್ರದೇಶದಲ್ಲಿ ಹನ್ನೊಂದು ಪುನರ್‌ವಸತಿ ಕಾಲನಿಗಳನ್ನು ನಿರ್ಮಿಸಲಾಗಿದ್ದು 1295 ಸಂತ್ರಸ್ತರುಗಳಿಗೆ ಮನೆಗಳ ನಿರ್ಮಾಣಕ್ಕೋಸ್ಕರ ನಿವೇಶನಗಳನ್ನು ನೀಡಲಾಗಿರುತ್ತದೆ. ಈ ಅಧ್ಯಯನವು ಸ್ಥಳಾಂತರ ಸಂತ್ರಸ್ತರ ಜೀವನಶೈಲಿ, ಆರೋಗ್ಯ, ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಮೇಲೆ ಬೀರಿದ ಪರಿಣಾಮಗಳ ಬಗ್ಗೆ ಪರಿಶೀಲಿಸುವುದು ಹಾಗೂ ದಾಖಲೀಕರಣವನ್ನು ಮಾಡುವ ಉದ್ದೇಶದೊಂದಿಗೆ ಕೈಗೊಳ್ಳಲಾಗಿರುತ್ತದೆ. ಯೋಜನೆಯು ಸಂತ್ರಸ್ತರ ಜೀವನಶೈಲಿಯ ಮೇಲೆ ಯಾವುದಾದರೂ ಸಕಾರಾತ್ಮಕ ಪರಿಣಾಮಗಳನ್ನು ಬೀರುವಲ್ಲಿ ಯಶಸ್ವಿಯಾಗಿರುತ್ತದೆಯೇ ಎಂಬ ಅಂಶಕ್ಕೂ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿರುತ್ತದೆ. 'ಬೃಹತ್ ಯೋಜನೆಗಳ ಸಂತ್ರಸ್ತರ ಪುನರ್‌ವಸತಿ ಮಾಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಅವರ ಜೀವನ ಪೂರ್ವಸ್ಥಿತಿಗಿಂತ ಕಡಿಮೆಯಾಗಬಾರದು, ಭಾವನಾತ್ಮಕ ಸಂಬಂಧಗಳಿಗೆ ಧಕ್ಕೆ ಬರಬಾರದು ಹಾಗೂ ಪುನರ್‌ವಸತಿಯ ಪರಿಹಾರದ ಪ್ಯಾಕೇಜ್‌ಗಳು ಸಂತ್ರಸ್ತರಿಗೆ ಮುಂದಕ್ಕೆ ಉತ್ತಮ ಜೀವನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು' ಎಂಬ ಮೈಕೆಲ್ ಸೆರ್ನ್ನಾರವರ ಕಂಡುಕೊಳ್ಳುವಿಕೆ ಹಾಗೂ ಭಾರತದಲ್ಲಿ ಜಾರಿಯಲ್ಲಿರುವ ಪುನರ್‌ವಸತಿ ನೀತಿ ವಿವರಿಸುವ,

'ಸಂತ್ರಸ್ತರ ಆದಾಯ ಸ್ಥಳಾಂತರದ ನಂತರ ಹೊಸನೆಲೆಗಳಲ್ಲಿ ಯಾವುದೇ ಕಾರಣಕ್ಕೂ ಕಡಿಮೆಯಾಗಬಾರದು' ಎಂಬ ತಾತ್ವಿಕ ಅಂಶಗಳನ್ನು ಸೈದ್ಧಾಂತಿಕ ಚೌಕಟ್ಟನ್ನಾಗಿ ಬಳಸಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಮೇಲೆ ವಿವರಿಸಿದ ಫಲಿತಗಳು ಸಂತ್ರಸ್ತ ಜನರ ಸಬಲೀಕರಣಕ್ಕೆ ಅಥವಾ ಅವರುಗಳ ಜೀವನಶೈಲಿಯ ಕುಸಿತಕ್ಕೆ ಕಾರಣವಾಗಿರುತ್ತದೆಯೇ ಎಂಬ ಅಂಶಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ನಡೆಸಲಾಗಿರುತ್ತದೆ. ಅಧ್ಯಯನಕ್ಕಾಗಿ ಸರಳ ಯಾದೃಚ್ಛಿಕ ವಿಧಾನದ ಮೂಲಕ ಪುನರ್‌ವಸತಿ ಕಾಲನಿಗಳಲ್ಲಿ ವಾಸಿಸುತ್ತಿರುವ 250 ಸಂತ್ರಸ್ತರಿಂದ ಸಂದರ್ಶನ, ಗುಂಪುಚರ್ಚೆ ಮತ್ತು ಅವಲೋಕನ ವಿಧಾನಗಳ ಮೂಲಕ ಅಗತ್ಯವಿರುವ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಿ, ವೈಜ್ಞಾನಿಕ ವಿಶ್ಲೇಷಣೆಯನ್ನು ನಡೆಸಲಾಗಿರುತ್ತದೆ. ಮಾಹಿತಿಗಳನ್ನು 2013 ಮತ್ತು 2014ರ ಅವಧಿಯಲ್ಲಿ ಪಡೆಯಲಾಗಿರುತ್ತದೆ. ಅಧ್ಯಯನವು ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ನೀತಿಗಳು ಭಾರತದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಯಾವ ರೀತಿಯಲ್ಲಿ ದೇಶದ ಪ್ರಜಾಪ್ರಭುತ್ವ, ಸಂವಿಧಾನ, ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಭಿನ್ನತೆಗಳನ್ನು ಬದಿಗಿರಿಸಿ ಯೋಜನೆಯ ಬಲಿಪಶುಗಳು ತಮ್ಮ ಬದುಕನ್ನು ಉಳಿಸಿಕೊಳ್ಳಬೇಕಾದರೆ ಯಾವೆಲ್ಲಾ ಕಷ್ಟನಷ್ಟಗಳನ್ನು ಎದುರಿಸುತ್ತಾರೆ ಎಂಬುದರ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಅಭಿವೃದ್ಧಿಯೇತರ ಚಟುವಟಿಕೆಗಳೂ ಸಂತ್ರಸ್ತರ ಸ್ಥಳಾಂತರಕ್ಕೆ ಕಾರಣವಾಗುತ್ತವೆ ಎಂಬ ಅರಿವು ಪ್ರಸ್ತುತ ಅಧ್ಯಯನವನ್ನು ಕೈಗೊಂಡಿರುವ ಸಂಶೋಧಕನಿಗಿರುತ್ತದೆ. ನೈಸರ್ಗಿಕ ವಿಕೋಪಗಳಿಂದ, ಕೋಮು ಗಲಭೆಗಳಾದಂತಹ ಸಂದರ್ಭದಲ್ಲಿ ಮತ್ತು ರಾಜಕೀಯ ಕಾರಣಗಳಿಗಾಗಿಯೂ ಜನರನ್ನು ಸ್ಥಳಾಂತರಿಸಲಾಗುತ್ತದೆ. ಯಾವುದೇ ಕಾರಣಗಳಿಗಾಗಿ ಜನರನ್ನು ಸ್ಥಳಾಂತರಿಸಿದಾಗ ತೊಂದರೆಗೀಡಾದ ಸಂತ್ರಸ್ತರ ಪುನರ್‌ವಸತಿಯನ್ನು ಸಮರ್ಪಕವಾಗಿ ಮಾಡಬೇಕು. ತುರ್ತುಸಂದರ್ಭಗಳಲ್ಲಿ ಜನರ ಜೀವವನ್ನು ಉಳಿಸುವುದಕ್ಕಾಗಿ ನಡೆಸುವ ಸ್ಥಳಾಂತರಗಳು ಯಾವ ರೀತಿಯಲ್ಲಿ ಪ್ರಶಂಸಿಸಲ್ಪಡುತ್ತವೆಯೋ, ಅದೇ ರೀತಿಯಲ್ಲಿ ಯೋಜಿತ ಅಭಿವೃದ್ಧಿ ಚಟುವಟಿಕೆಗಳಿಂದ ಸಂತ್ರಸ್ತರಾಗುವವರ ಯೋಗ್ಯ ಪುನರ್‌ವಸತಿಯನ್ನು ನಡೆಸುವುದು ಸರಕಾರದ ದೊಡ್ಡ ಜವಾಬ್ದಾರಿಯಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಸಂತ್ರಸ್ತರ ಪುನರ್‌ವಸತಿಯನ್ನು ವ್ಯವಸ್ಥಿತವಾಗಿ ಮತ್ತು ಯೋಜನಾಬದ್ಧವಾಗಿ ನಡೆಸುವುದಕ್ಕೆ ಸಾಕಷ್ಟು ಅವಕಾಶಗಳಿರುತ್ತದೆ. ಅಭಿವೃದ್ಧಿ ಚಟುವಟಿಕೆಗಳಿಗೆ ಕೊಟ್ಟಷ್ಟೇ ಆದ್ಯತೆಯನ್ನು ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಪುನರ್‌ವಸತಿಗೆ ನೀಡಿದ ದೃಷ್ಟಾಂತ ಯಾವುದೇ ಯೋಜನೆಯ ಜಾರಿಯ ಸಂದರ್ಭದಲ್ಲಿ ಕಂಡುಬಂದಿರುವುದಿಲ್ಲ. ರಾಷ್ಟ್ರಾದ್ಯಂತ ಏಕರೂಪದ ಪುನರ್‌ವಸತಿ ನೀತಿ ಇಲ್ಲದೆ ಇರುವುದರಿಂದ ಒಂದು ಯೋಜನೆಯಿಂದ ಇನ್ನೊಂದು ಯೋಜನೆಗೆ ಹಾಗೂ ರಾಜ್ಯದಿಂದ ಇತರ ರಾಜ್ಯಗಳಲ್ಲಿ ಭಿನ್ನವಾದ ಪುನರ್‌ವಸತಿ ನೀತಿ ಪ್ಯಾಕೇಜ್‌ಗಳನ್ನು ನೀಡುವುದು ಸಮಸ್ಯೆ ಮತ್ತಷ್ಟು ಗಂಭೀರವಾಗುವುದಕ್ಕೆ ಕಾರಣವಾಗಿರುತ್ತದೆ.

ಮೈಕೆಲ್ ಸೆರ್ನ್ನಾರವರ ಸೀಮಾಂತಿಕರಣದ ಅಪಾಯ ಮತ್ತು ಪುನರ್‌ವಸತಿಯ ಮಾದರಿಯನ್ನು ಪ್ರಸ್ತುತ ಅಧ್ಯಯನದ ಮಾದರಿಯನ್ನಾಗಿ ಬಳಸಿಕೊಳ್ಳಲಾಗಿರುತ್ತದೆ. ಸೆರ್ನ್ನಾರವರು (1990) ಸ್ಥಳಾಂತರದಿಂದಾಗಿ ಸಂತ್ರಸ್ತರ ಬದುಕಿನ ಮೇಲೆ ಪರಸ್ಪರ ಸಂಬಂಧವಿರುವ ಎಂಟು ಸೀಮಾಂತಿಕರಣದ ಆಯಾಮಗಳು ನೇರ ಪರಿಣಾಮ ಬೀರುತ್ತದೆ ಎಂದು ಕಂಡುಕೊಂಡಿರುತ್ತಾರೆ. ಉದ್ಯೋಗ ನಷ್ಟ, ನಿರ್ವಸಿತರಾಗುವುದು, ಆಹಾರದ ಅಭದ್ರತೆ, ಅಪರಾಧ ಪ್ರಮಾಣದಲ್ಲಿ ಹೆಚ್ಚಳವಾಗುವಿಕೆ, ಸಾಮೂಹಿಕ ಆಸ್ತಿಯನ್ನು ಬಳಸುವುದರಿಂದ ಹೊರಗಿಡಲ್ಪಡುವುದು, ಭೂರಹಿತರಾಗುವುದು, ಆರೋಗ್ಯ ಮತ್ತು ಸಾಂಕ್ರಾಮಿಕ ರೋಗಗಳ ಸಮಸ್ಯೆ, ಸಾಮಾಜಿಕ ವಿಘಟನೆಗಳು ಭೂಸ್ವಾಧೀನದಿಂದಾಗಿ ಸಂತ್ರಸ್ತರುಗಳ ಮೇಲೆ ನೇರ ಪರಿಣಾಮ ಬೀರಿ ಅವರನ್ನು ಸಾಮಾನ್ಯ ಜನಜೀವನವನ್ನು ಮುಂದಕ್ಕೆ ನಡೆಸದಿರುವಂತೆ ಮಾಡುತ್ತದೆಯೆಂದು ಅಭಿಪ್ರಾಯಪಟ್ಟಿರುತ್ತಾರೆ. ಸೆರ್ನ್ನಾರವರ ಕಂಡುಕೊಳ್ಳುವಿಕೆಯಂತೆ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರು ಪರಸ್ಪರ ಸಂಬಂಧವಿರುವ ಎಂಟು ಸಮಸ್ಯೆಗಳನ್ನು ಅನುಭವಿಸಿ ಅವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕು ಸರಿಪಡಿಸಲಾಗದಷ್ಟು ಹಾನಿಗೀಡಾಗುತ್ತದೆ ಮತ್ತು ಆರ್ಥಿಕವಾಗಿ ಮತ್ತಷ್ಟು ದಾರಿದ್ರ್ಯಕ್ಕೆ ಒಳಗಾಗುತ್ತದೆಯೆಂಬ ಫಲಿತ ಜಗತ್ತಿನ ಯಾವುದೇ ಅಭಿವೃದ್ಧಿ ಆಧಾರಿತ ಚಟುವಟಿಕೆಗಳಿಂದ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗುವವರಿಗೆ ಸಾರ್ವಕಾಲಿಕ ಮತ್ತು ಜಾಗತಿಕವಾಗಿ ಅನ್ವಯಿಸುತ್ತದೆಯೆಂಬ ತೀರ್ಮಾನಕ್ಕೆ ಬರಬಹುದು. ಮಂಗಳೂರು ವಿಶೇಷ ಆರ್ಥಿಕ ವಲಯದ ರಚನೆಯಿಂದ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುವ ಮತ್ತು ಪುನರ್‌ವಸತಿ ಕಾಲನಿಗಳಲ್ಲಿ ಪುನರ್-ಬದುಕನ್ನು ಕಟ್ಟಿಕೊಳ್ಳುತ್ತಿರುವವರಿಗೂ ಇದು ಅನ್ವಯವಾಗುತ್ತದೆಯೆಂದು ಅಧ್ಯಯನದಿಂದ ಖಾತರಿಯಾಗಿರುವುದು ಕಂಡುಬರುತ್ತದೆ. ಅಧ್ಯಯನದಿಂದ ಕಂಡುಕೊಳ್ಳಲಾದ ಪ್ರಮುಖ ಫಲಿತಗಳನ್ನು ಈ ಕೆಳಗಿನಂತೆ ನೀಡಲಾಗಿರುತ್ತದೆ:

1. ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಯಿಂದಾದ ಸ್ಥಳಾಂತರದ ತೀವ್ರತೆ ಸ್ಥಳಾಂತರಗೊಂಡ ಸಂತ್ರಸ್ತರುಗಳ ಕುಟುಂಬಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ತಂದುಕೊಟ್ಟಿರುತ್ತದೆ. ಈ ಬದಲಾವಣೆಯಲ್ಲಿ ಕೆಲವೊಂದು ನೇರ ಬದಲಾವಣೆಯಾಗಿದ್ದರೆ, ಇನ್ನೂ ಕೆಲವು ಪರೋಕ್ಷ ಬದಲಾವಣೆಗಳಾಗಿರುತ್ತದೆ. ಬಹಳಷ್ಟು ಕುಟುಂಬಗಳು ತಮ್ಮ ಭೂಮಿ, ದನ-ಕರು, ಚರಾಸ್ತಿಗಳನ್ನು ಕಳೆದುಕೊಂಡರೆ ಇನ್ನು ಕೆಲವರು ತಮ್ಮ ಭಾವನೆಗಳನ್ನು ಮತ್ತು ಭೂಮಿಯ ಮೇಲಿನ ವೈಯಕ್ತಿಕ ಅಕ್ಕರೆಯನ್ನು ಇನ್ನೂ ಮರೆಯಲು ಸಾಧ್ಯವಾಗದೆ ಕೊರಗುವ ಪರಿಸ್ಥಿತಿ ಸ್ಥಳಾಂತರದ ನಂತರದ ದಿನಗಳಲ್ಲಿ ನಿರ್ಮಾಣಗೊಂಡಿರುವುದು ಪ್ರಸ್ತುತ ಅಧ್ಯಯನದಿಂದ ಕಂಡುಬಂದಿರುತ್ತದೆ. ಇದರಿಂದಾಗಿ ಭೂಮಿ-ಮಾನವ-ಪ್ರಾಣಿಗಳ ನಡುವಣ ಸಂಬಂಧಗಳು ನಶಿಸಿ ಮನುಷ್ಯ ಮತ್ತು ಯಂತ್ರಗಳ ಸಂಬಂಧಗಳು ಗಾಢವಾಗುತ್ತಿರುವುದು ಹಾಗೂ ಬದುಕು ಯಾಂತ್ರಿಕವಾಗುತ್ತಿರುವುದನ್ನು

ಗಮನಿಸಲಾಗಿರುತ್ತದೆ. ಸ್ಥಳಾಂತರದಿಂದಾಗಿ ಹೆಚ್ಚಿನ ಸಂತ್ರಸ್ತರುಗಳು ತಮ್ಮ ಸ್ವ-ಅವಲಂಬಿತ ನೀರು ಮತ್ತು ಆಹಾರದ ಮೂಲಗಳನ್ನು ಕಳೆದುಕೊಂಡಿರುವುದು ಮಾತ್ರವಲ್ಲದೆ ಸ್ಥಳಾಂತರದಿಂದ ತಮ್ಮ ಬಲಿಷ್ಠ ಸಾಮಾಜಿಕ, ಆರ್ಥಿಕ ಮತ್ತು ಮೌಲ್ಯಯುತವಾದ ಜೀವನದಿಂದ ವಂಚಿತರಾಗಿರುವುದು ಕಂಡುಬಂದಿರುತ್ತದೆ.

2. ಸಂತ್ರಸ್ತರುಗಳು ತಮ್ಮ ಕೃಷಿ ಭೂಮಿಗಳನ್ನು ಬಹುತೇಕವಾಗಿ ಕಳೆದುಕೊಂಡಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಅರಿತುಕೊಳ್ಳಲಾಗಿರುತ್ತದೆ. ತಮ್ಮ ದೈನಂದಿನ ಜೀವನಕ್ಕಾಗಿ ಹೆಚ್ಚಿನ ಸಂತ್ರಸ್ತರು ಸ್ಥಳಾಂತರದ ಪೂರ್ವದಲ್ಲಿ ಕೃಷಿ ಚಟುವಟಿಕೆಗಳನ್ನೇ ಅವಲಂಬಿಸಿದ್ದರು. ಮಾಹಿತಿದಾರರು ಹೊಂದಿದ್ದ ಭೂಮಾಲಕತ್ವದ ವ್ಯವಸ್ಥೆಯನ್ನು ಅವಲೋಕಿಸಿದಾಗ 70%ಕ್ಕಿಂತಲೂ ಹೆಚ್ಚಿನ ಸಂತ್ರಸ್ತರುಗಳು ಹಿಂದೆ ತಮ್ಮ ಪೂರ್ವಜರಿಂದ ಪರಂಪರಾಗತವಾಗಿ ಬಂದಂತಹ ಭೂಮಿಯ ಒಡೆತನವನ್ನು ಹೊಂದಿದ್ದು ಕೃಷಿ ಚಟುವಟಿಕೆಗಳ ಆದಾಯದಿಂದ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದರು. ಸರಾಸರಿ ಜಮೀನಿನ ಒಡೆತನವನ್ನು ಹೊಂದಿದ್ದ ಕೃಷಿಕರ ಭೂಮಿ ಯೋಜನೆಗಾಗಿ ಸ್ವಾಧೀನಪಡಿಸಲ್ಪಟ್ಟಿದ್ದು ಪ್ರಸ್ತುತ ಭೂರಹಿತರಾಗಿರುತ್ತಾರೆ. ಮಂಗಳೂರು ವಿಶೇಷ ಆರ್ಥಿಕ ವಲಯದ ಕಚೇರಿ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಮಂಗಳೂರು ಕಚೇರಿ)ಯು ಆರ್ಥಿಕ ವಲಯದ ರಚನೆಗಾಗಿ ಸರಕಾರಿ ಮತ್ತು ಬರಡು ಭೂಮಿಗಳನ್ನು, ಕೃಷಿ ಚಟುವಟಿಕೆಗಳು ನಡೆಸಲ್ಪಡದ ಅನುಪಯುಕ್ತ ಭೂಮಿಗಳನ್ನು ಸ್ವಾಧೀನಪಡಿಸಲಾಗಿರುತ್ತದೆಯೆಂಬ ಅಂಕಿಅಂಶಗಳನ್ನು ನೀಡಿದರೂ ವಾಸ್ತವವಾಗಿ ಫಲವತ್ತಾದ ಕೃಷಿ ಭೂಮಿಗಳನ್ನು ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆಗಾಗಿ ಸ್ವಾಧೀನಪಡಿಸಲಾಗಿರುವುದು ಕಂಡುಬಂದಿರುವುದು ಪ್ರಸ್ತುತ ಅಧ್ಯಯನದ ಪ್ರಮುಖ ಫಲಿತಗಳಲ್ಲಿ ಒಂದಾಗಿರುತ್ತದೆ. ಕೃಷಿ ಭೂಮಿಯನ್ನು ಕಳೆದುಕೊಂಡ ಹೆಚ್ಚಿನವರು ಹಿಂದುಳಿದ ಜಾತಿ, ವರ್ಗ ಮತ್ತು ಪರಿಶಿಷ್ಟ ಜಾತಿ, ವರ್ಗಗಳಿಗೆ ಸೇರಿದವರಾಗಿದ್ದು ತಮ್ಮ ಭೂಮಿಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಿ ಅದರ ಆದಾಯದ ಮೇಲೆಯೇ ತಮ್ಮ ಜೀವನಕ್ಕಾಗಿ ಅವಲಂಬಿತರಾಗಿದ್ದವರು. ಪ್ರಸ್ತುತ ಕಾಲಘಟ್ಟದಲ್ಲಿ ಸಮಾಜದ ಬಲಿಷ್ಠ ಜಾತಿಗೆ ಸೇರಿದ ಜನರು ಹಿಂದೆ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದು, ಇವರುಗಳು 1974ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಡಿ. ದೇವರಾಜ್ ಅರಸುರವರು ತಂದಂತಹ 'ಉಳುವವನೇ ಹೊಲದೊಡೆಯ' ಎಂಬ ಭೂಸುಧಾರಣಾ ಕಾನೂನುಗಳಿಗೆ ಅನುಗುಣವಾಗಿ ಆಗಿನ ಕಾಲದ ಭೂಮಾಲೀಕರ ಕೈಯಲ್ಲಿದ್ದ ಭೂಮಿಯಲ್ಲಿ ಗೇಣಿದಾರರಾಗಿ ದುಡಿಯುತ್ತಿದ್ದ ಕೃಷಿ ಭೂಮಿಯ ಮಾಲಕತ್ವವನ್ನು ಪಡೆದಂತಹ ಕೃಷಿಕರ ಭೂಮಿಯೂ ಸ್ವಾಧೀನಪಡಿಸಲ್ಪಟ್ಟಿರುವುದು ಕಂಡುಬಂದಿರುತ್ತದೆ.

3. ಭೂಸ್ವಾಧೀನಕ್ಕಿಂತ ಮೊದಲು ಕೃಷಿ ಚಟುವಟಿಕೆಗಳಲ್ಲಿ 48% ಸಂದರ್ಶಿತರು ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಕಂಡುಬಂದಿದ್ದು, ಭೂಸ್ವಾಧೀನ ಮತ್ತು ಸ್ಥಳಾಂತರದ ನಂತರ ಇವರ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿ 4% ಸಂತ್ರಸ್ತರುಗಳು ಮಾತ್ರ ತೊಡಗಿಸಿಕೊಂಡಿರುವುದು ಗಮನಿಸಲಾಗಿರುತ್ತದೆ. ಕೃಷಿ ಚಟುವಟಿಕೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದವರ ಪ್ರಮಾಣ ಹಿಂದೆ 46% ಆಗಿದ್ದು, ಸ್ಥಳಾಂತರದ ನಂತರ ಇವರುಗಳ ಸಂಖ್ಯೆಯಲ್ಲಿ ಇಳಿಕೆಯಾಗಿ ಕೈಗಾರಿಕಾ ಕಾರ್ಮಿಕರಾಗಿ ಪರಿವರ್ತನೆಯಾದವರ ಸಂಖ್ಯೆ 50%ಕ್ಕೆ ಏರಿಕೆಯಾಗಿರುವುದನ್ನು ಅರಿತುಕೊಳ್ಳಲಾಗಿರುತ್ತದೆ. ಈ ಕಂಡುಕೊಳ್ಳುವಿಕೆಯು ಭೂಸ್ವಾಧೀನ ಮತ್ತು ಸ್ಥಳಾಂತರದಿಂದ ಜನರು ನಡೆಸುತ್ತಿದ್ದ ಮೂಲ ಉದ್ಯೋಗದಲ್ಲಿಯೇ ಬದಲಾವಣೆಯಾಗಿರುವುದನ್ನು ಸೂಚಿಸುತ್ತದೆ.

4. ಯೋಜನೆಗಳನ್ನು ಸ್ಥಾಪಿಸಲು ಸ್ವಾಧೀನಪಡಿಸಲ್ಪಟ್ಟ ಪ್ರದೇಶಗಳಲ್ಲಿ ವಾಸ್ತವ್ಯವಿದ್ದ ಭೂರಹಿತ ಕೃಷಿ ಕಾರ್ಮಿಕರಿಗೆ ಕನಿಷ್ಟ ಪರಿಹಾರಗಳನ್ನು ನೀಡಿ ಅವರನ್ನು ಯೋಜನಾ ಪ್ರದೇಶಗಳಿಂದ ಸ್ಥಳಾಂತರಿಸಲಾಗಿರುತ್ತದೆ. ಕೃಷಿ ಮತ್ತು ಕೂಲಿ ಕಾರ್ಮಿಕರ ಬದುಕು ಈ ಭೂಮಿಯೊಂದಿಗೆ ಬೆರೆತು ಹೋಗಿರುವುದರಿಂದ ಅವರುಗಳು ಕೃಷಿ ಕಾರ್ಯದಿಂದ ಬೇರ್ಪಟ್ಟು ಜೀವನ ನಡೆಸುವುದು ದುಸ್ತರವಾಗಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ. ಹಿಂದೆ ಕೃಷಿ ಕಾರ್ಮಿಕರಾಗಿದ್ದ ಹೆಚ್ಚಿನ ಸಂದರ್ಶಿತರು ಪ್ರಸ್ತುತ ಕೃಷಿಗೆ ಸಂಬಂಧಪಡದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ ಇನ್ನೂ ಕೆಲವರು ನಿರುದ್ಯೋಗಿಗಳಾಗಿ ಸಾಲ ಮತ್ತು ವಲಸೆಯಂತಹ ವ್ಯವಸ್ಥೆಗೆ ತಮ್ಮನ್ನು ಒಗ್ಗಿಸಿಕೊಂಡಿರುತ್ತಾರೆ. ಸಂದರ್ಶಿತ ಹೆಚ್ಚಿನ ಕುಟುಂಬಗಳು ತಮ್ಮ ಸಾಂಪ್ರದಾಯಿಕ ಜಾತಿ ಆಧಾರಿತ ಕಸುಬುಗಳನ್ನು ಬಿಟ್ಟು ಬೇರೆಯೇ ಆದಂತಹ ಉದ್ಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಸಮಾಧಾನದಿಂದ ಜೀವನ ನಡೆಸುತ್ತಿರುವುದು ಕಂಡುಬರುತ್ತದೆ.

5. ಭೂಸಂತ್ರಸ್ತರ ಕುಟುಂಬದ ಒಬ್ಬ ಸದಸ್ಯನಿಗೆ ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಉದ್ಯೋಗ ಎಂಬ ನೀತಿ ಹೆಚ್ಚಿನ ಸಂತ್ರಸ್ತ ಕುಟುಂಬಗಳ ಓರ್ವ ಸದಸ್ಯರಿಗೆ ಉದ್ಯೋಗವನ್ನು ಒದಗಿಸುವುದರಲ್ಲಿ ಯಶಸ್ಸನ್ನು ಸಾಧಿಸಿರುವುದು ಅವರ ಅವಲಂಬಿತ ಕುಟುಂಬಗಳು ಆರ್ಥಿಕವಾಗಿ ಬಲಿಷ್ಟರಾಗುವುದಕ್ಕೆ ಕಾರಣವಾಗಿರುತ್ತದೆ. ಈಗಾಗಲೇ ಸ್ವಾಧೀನಪಡಿಸಲಾಗಿರುವ ಭೂಪ್ರದೇಶದಲ್ಲಿ ಒ.ಎಮ್.ಪಿ.ಎಲ್., ಕಾರ್ಡಿಲೇಟ್, ಜೆ.ಬಿ.ಎಫ್ ಹಾಗೂ ಐ.ಎಸ್.ಪಿ.ಆರ್.ಎಲ್.ನ ಘಟಕಗಳು ಕಾರ್ಯಾರಂಭವನ್ನು ಮಾಡಿದ್ದು ಸಂತ್ರಸ್ತ ಕುಟುಂಬಗಳ ಸುಮಾರು 600 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶವನ್ನು ಒದಗಿಸಿರುವುದು ಅವರುಗಳ ಜೀವನಶೈಲಿಯಲ್ಲಿ ಬದಲಾವಣೆಗಳಾಗಿರುವುದನ್ನು ಗಮನಿಸಲಾಗಿರುತ್ತದೆ. ಸಂತ್ರಸ್ತರುಗಳು ತಮ್ಮ ಸಾಂಪ್ರದಾಯಿಕ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳದೆ ಆಧುನೀಕರಣ ಮತ್ತು

ನಗರೀಕರಣ ಪ್ರಕ್ರಿಯೆಗಳ ಪ್ರಭಾವಕ್ಕೆ ಒಳಗಾಗಿರುವುದು ಅಧ್ಯಯನದ ಸಂದರ್ಭದಲ್ಲಿ ಸ್ಪಷ್ಟವಾಗಿ ಗೋಚರಿಸಿರುತ್ತದೆ.

6. ಸ್ಥಳಾಂತರ ಸಂತ್ರಸ್ತರುಗಳ ಅವಲಂಬಿತರ ಶಿಕ್ಷಣದ ಮೇಲೆ ಯಾವುದೇ ರೀತಿಯ ನಕಾರಾತ್ಮಕ ಪರಿಣಾಮಗಳನ್ನು ಬೀರಿರುವುದು ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿರುವುದಿಲ್ಲ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಪೋಷಕರು ತಮ್ಮ ಅವಲಂಬಿತರ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ಚ್ಯುತಿ ಬಾರದಂತೆ ಜಾಗ್ರತೆ ವಹಿಸುವುದು ಹಿಂದಿನಿಂದಲೂ ನಡೆದು ಬಂದಂತಹ ರೂಢಿಯಾಗಿರುತ್ತದೆ. ಸುಭಾಷ್ ರಂಜನ್ ನಾಯಕ್ (2005)ರವರು ಒಡಿಸ್ಸಾದ ಲಂಜಿಗರ ಯೋಜನೆಯ ಸಂತ್ರಸ್ತರ ಅಧ್ಯಯನದಲ್ಲಿ ಕಂಡುಕೊಂಡಂತಹ 'ಯಾವುದೇ ಶಿಕ್ಷಣವನ್ನು ಪಡೆಯದ ಸಮಾಜದ ಕೆಳಸ್ತರದ ಮತ್ತು ಆರ್ಥಿಕವಾಗಿ ಬಲಿಷ್ಟರಲ್ಲದವರನ್ನು ಬೃಹತ್ ಕೈಗಾರಿಕೆಗಳ ನಿರ್ಮಾಣಕ್ಕಾಗಿ ಸಾಮಾನ್ಯವಾಗಿ ಸ್ಥಳಾಂತರಿಸಲಾಗುತ್ತದೆ' ಎಂಬ ಫಲಿತ ಪ್ರಸ್ತುತ ಯೋಜನೆಯ ಸಂತ್ರಸ್ತರುಗಳಿಗೆ ಅನ್ವಯವಾಗದಿರುವುದು ಕಂಡುಬಂದಿದ್ದು, ಸಮಾಜದ ದೀನ, ದಲಿತ ಬಡವರು ಮಾತ್ರವಲ್ಲದೇ ಮೇಲ್‌ಜಾತಿ ಹಾಗೂ ಆರ್ಥಿಕವಾಗಿ ಬಲಿಷ್ಟರಾಗಿದ್ದವರ (ವಿಶೇಷವಾಗಿ ಗುತ್ತು ಮನೆತನಗಳ) ಭೂಮಿ ಕೂಡ ಯೋಜನೆಗಾಗಿ ಸ್ವಾಧೀನಪಡಿಸಲಾಗಿರುವುದು ಕಂಡುಬರುತ್ತದೆ. ಆಂಧ್ರಪ್ರದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದಂತಹ ಕೃಷಿಯಾಧಾರಿತ ಕೈಗಾರಿಕಾ ಸಂಕೀರ್ಣಗಳ ಸ್ಥಾಪನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಜೀವನಶೈಲಿಯ ಬಗ್ಗೆ ಕೈಗೊಂಡ ಅಧ್ಯಯನದಲ್ಲಿ 'ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರಲ್ಲಿ 58.6% ಅನಕ್ಷರಸ್ಥರು ಮತ್ತು 24.2% ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಪಡೆದವರು' ಎಂಬ ಮುತ್ತಯ್ಯ ಹಾಗೂ ಮಾಥೂರ್‌ರವರ ಕಂಡುಕೊಳ್ಳುವಿಕೆ ಪ್ರಸ್ತುತ ಅಧ್ಯಯನದಲ್ಲಿ ಕಂಡುಬರುವುದಿಲ್ಲ. ಸ್ವಾಧೀನಪಡಿಸಿದ ಭೂಮಿಯ ಮಾಲಕತ್ವ ಕುಟುಂಬದ ಯಜಮಾನನದ್ದಾಗಿದ್ದರೂ ಅವರುಗಳ ಕುಟುಂಬದಲ್ಲಿ 70%ಕ್ಕಿಂತಲೂ ಹೆಚ್ಚಿನವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪಡೆದವರು ಎಂಬುದು ಗಮನಿಸಬೇಕಾದ ಅಂಶಗಳಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಂತಹ ಹೆಚ್ಚಿನ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಭೂಸ್ವಾಧೀನಪಡಿಸಿದ ಕುಟುಂಬಗಳಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿರುತ್ತದೆ. ಸಂತ್ರಸ್ತರುಗಳ ಶೈಕ್ಷಣಿಕ ಮಟ್ಟ ಹಾಗೂ ಅವರನ್ನು ಬೆಂಬಲಿಸಿ ಹೋರಾಟಗಳನ್ನು ಸಂಘಟಿಸಿದವರಲ್ಲಿ ವಿದ್ಯಾವಂತ, ಪ್ರಜ್ಞಾವಂತ ಬುದ್ಧಿಜೀವಿಗಳ ಸಂಖ್ಯೆ ಹೆಚ್ಚಿರುವುದನ್ನು ಗಮನಿಸಲಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1996ರಲ್ಲಿ ನೆಲೆ ಕಂಡುಕೊಳ್ಳಲು ಬಂದ ಕೋಜೆಂಟ್ರಿಕ್ಸ್ ಸ್ಥಾವರವು ಸಂಘಟಿತ ಹೋರಾಟಗಳಿಂದಾಗಿಯೇ ಜಾರಿಗೆ ಬಂದಿರಲಿಲ್ಲ. ಪ್ರಸ್ತುತ ಜಿಲ್ಲೆಯ ನಿಡ್ಡೋಡಿ ಗ್ರಾಮದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಕಲ್ಲಿದ್ದಲು

ಆಧಾರಿತ ಉಷ್ಣ ವಿದ್ಯುತ್ ಸ್ಥಾವರ ಜಿಲ್ಲೆಯ ವಿದ್ಯಾವಂತ ಬುದ್ಧಿಜೀವಿಗಳ ಪ್ರತಿಭಟನೆಯ ಕಾರಣದಿಂದಾಗಿಯೇ ನೇಪಥ್ಯಕ್ಕೆ ಸರಿಯುತ್ತಿದೆ. ಈ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ವಿಮರ್ಶಿಸಿದಾಗ ದೇಶದ ಇತರ ಪ್ರದೇಶಗಳಲ್ಲಿ ಅಭಿವೃದ್ಧಿ ಪ್ರೇರಿತ ಚಟುವಟಿಕೆಗಳಿಗೆ ಸಮಾಜದಲ್ಲಿ ತುಳಿತಕ್ಕೊಳಗಾದ ದೀನದಲಿತ, ಬಡವರ ಭೂಮಿಯನ್ನು ಸ್ವಾಧೀನಪಡಿಸಲಾಗಿದ್ದರೂ, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಸಾಮಾಜಿಕ ಭೇದಭಾವಗಳಿಲ್ಲದೆ ಎಲ್ಲಾ ಸಮುದಾಯಗಳಿಗೆ ಸೇರಿದ ಜನರ ಭೂಮಿಯನ್ನು ಸ್ವಾಧೀನಪಡಿಸಲಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಂತಹ ಬೃಹತ್ ಕೈಗಾರಿಕೆಗಳು ಮತ್ತು ವಿಶೇಷ ಆರ್ಥಿಕ ವಲಯದ ಸ್ಥಾಪನೆಯ ಭೂಸ್ವಾಧೀನದ ಪ್ರಕ್ರಿಯೆಗೆ ಹೆಚ್ಚು ಬಲಿಪಶುಗಳಾಗಿರುವುದು ನಗರಗಳಲ್ಲಿ ಜೀವಿಸುವ ಮಧ್ಯಮ ಹಾಗೂ ಶ್ರೀಮಂತ ವರ್ಗವಾಗಿರದೇ, ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಯನ್ನು ಜೀವನಕ್ಕಾಗಿ ಅವಲಂಬಿಸಿದವರು ಎಂಬುದು ಗಮನಿಸಬೇಕಾದ ಅಂಶವಾಗಿರುತ್ತದೆ.

7. ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದೆ ಅವಿಭಕ್ತ ಕುಟುಂಬಗಳು ಅಸ್ತಿತ್ವದಲ್ಲಿದ್ದವು. 1990ರ ನಂತರದ ಕೈಗಾರಿಕೀಕರಣ ಪ್ರಕ್ರಿಯೆಗಳಿಂದಾಗಿ ಹೆಚ್ಚಿನ ಕುಟುಂಬಗಳು ವಿಭಕ್ತ ಮತ್ತು ಚಿಕ್ಕ ಕುಟುಂಬಗಳಾಗಿ ವಿಂಗಡಿಸಲ್ಪಟ್ಟು ಕುಟುಂಬದ ಕೌಟುಂಬಿಕ ನೆಲೆಗಟ್ಟುಗಳು ಸಡಿಲಗೊಂಡು ಹಂಚಿಹೋಗಿರುವುದು ಕಂಡುಬರುತ್ತದೆ. ಸಂದರ್ಶಿತ 51 ಮಾಹಿತಿದಾರರು, ಭೂಸ್ವಾಧೀನದ ನಂತರದಲ್ಲಿ ನೀಡಿದ ಪುನರ್‌ವಸತಿಯ ಪ್ಯಾಕೇಜ್ ಕುಟುಂಬದವರಲ್ಲಿ ವಿಶೇಷವಾಗಿ ಅಣ್ಣ-ತಮ್ಮಂದಿರು, ತಂದೆ-ಮಕ್ಕಳು, ರಕ್ತ ಸಂಬಂಧಿಕರ ನಡುವೆ ಹಂಚಿಕೆಗೆ ಸಂಬಂಧಪಟ್ಟಂತೆ ಘರ್ಷಣೆಗಳಿಗೆ ಕಾರಣವಾಗಿ ಒಟ್ಟಾಗಿ ವಾಸಿಸುತ್ತಿದ್ದ ಕುಟುಂಬದ ಸದಸ್ಯರ ನಡುವೆ ವೈಮನಸ್ಸನ್ನು ತಂದು, ಹಿಂದೆ ಇದ್ದಂತಹ ಸೌಹಾರ್ದಯುತ ಸಂಬಂಧಗಳನ್ನು ಅಳಿಸಿ ಹಾಕಿ ದಾಯಾದಿಗಳನ್ನಾಗಿ ಮಾಡಿತು ಎಂದು ತಿಳಿಸಿದ್ದು, ಸ್ಥಳಾಂತರವು ಕೌಟುಂಬಿಕ ವಿಘಟನೆಗೆ ಕಾರಣವಾಗಿರುತ್ತದೆಯೆಂಬುದನ್ನು ಗಮನಿಸಲಾಗಿರುತ್ತದೆ. ಬಲವಂತದ ಸ್ಥಳಾಂತರದ ಬಗ್ಗೆ ಕೈಗೊಳ್ಳಲಾಗಿರುವ ಹೆಚ್ಚಿನ ಅಧ್ಯಯನಗಳು ಸಂತ್ರಸ್ತರಿಗೆ ನೀಡಿದ ನಗದು ಪರಿಹಾರ ಮತ್ತು ಪುನರ್‌ವಸತಿಯ ಪ್ಯಾಕೇಜ್‌ಗಳು ಕೌಟುಂಬಿಕ ವಿಘಟನೆಗಳಿಗೆ ಹೇತುವಾಗುತ್ತದೆಯೆಂಬ ಫಲಿತವನ್ನು ಕಂಡುಕೊಂಡಿರುವುದನ್ನು ಗಮನಿಸಬಹುದು. ಪರಿಹಾರದ ಹಣದ ಹಂಚಿಕೆ, ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗವೆಂಬ ಪುನರ್‌ವಸತಿ ನೀತಿ ಹೆಚ್ಚಿನ ಕುಟುಂಬಗಳಲ್ಲಿ ಕೌಟುಂಬಿಕ ಸಂಘರ್ಷಗಳಿಗೆ ಕಾರಣವಾಗಿರುವುದು ಪ್ರಸ್ತುತ ಅಧ್ಯಯನ ಕಂಡುಕೊಂಡಿರುವ ಪ್ರಮುಖ ಫಲಿತಗಳಲ್ಲಿ ಒಂದಾಗಿರುತ್ತದೆ. ಇಂತಹ ಏಕಾಏಕಿ ಬದಲಾವಣೆಗಳಿಂದ ಹೆಚ್ಚಿನ ಕುಟುಂಬಗಳು ತಮ್ಮ ನೆಮ್ಮದಿಯನ್ನು ಕಳೆದುಕೊಂಡು ಮಾನಸಿಕವಾಗಿ

ಖಿನ್ನತೆ ಹಾಗೂ ಆರೋಗ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿಗೆ ಒಳಗಾಗಿ ಏಕಾಂಗಿತನದಿಂದ ಕೊರಗುತ್ತಿರುವುದು ಪುನರ್‌ವಸತಿ ಕಾಲನಿಗಳಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಭೂಸ್ವಾಧೀನದ ನಂತರದಲ್ಲಿ ಪರಿಹಾರದ ಪ್ಯಾಕೇಜ್‌ಗಳ ಸಮರ್ಪಕ ಹಂಚಿಕೆಗಾಗಿ ಕುಟುಂಬದ ಸದಸ್ಯರೊಳಗೆ ಏರ್ಪಟ್ಟ ಸಂಘರ್ಷಗಳು ಎಲ್ಲಾ ರೀತಿಯ ಮಾನವೀಯ ಸಂಬಂಧಗಳನ್ನು ಅಳಿಸಿ ಹಾಕಿ ಸಂತ್ರಸ್ತರುಗಳ ಬದುಕು ಅವನತಿಗೆ ತಳ್ಳಲ್ಪಟ್ಟಿರುವುದು ಅಭಿವೃದ್ಧಿ ಚಟುವಟಿಕೆಗಳು ಸಮಾಜದಲ್ಲಿರುವ ದುರ್ಬಲರ ಮತ್ತು ದೀನದಲಿತರ ಬದುಕನ್ನು ಮೂರಾಬಟ್ಟೆ ಮಾಡುವುದಕ್ಕೆ ಕಾರಣವಾಗುತ್ತದೆಯೆಂಬುದಕ್ಕೆ ಜ್ವಲಂತ ಉದಾಹರಣೆಗಳಾಗಿರುತ್ತದೆಯೆಂಬ ಅಂಶ ಅಧ್ಯಯನದ ಸಂದರ್ಭದಲ್ಲಿ ಎದ್ದು ಕಾಣುತ್ತಿತ್ತು.

8. ಬಲವಂತದ ಸ್ಥಳಾಂತರ ಸಂತ್ರಸ್ತರುಗಳ ಆರೋಗ್ಯದ ಮೇಲೆ ಸರಿಪಡಿಸಲಾಗದಂತಹ ಪರಿಣಾಮಗಳನ್ನು ಬೀರಿರುತ್ತದೆ. ತಮ್ಮ ಪೂರ್ವನೆಲೆಯಲ್ಲಿ ಉತ್ತಮ ಆರೋಗ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಮಾಡಿದ ಖರ್ಚಿಗೆ ಹೋಲಿಸಿದರೆ ಪುನರ್‌ವಸತಿ ಹಾಗೂ ತಮ್ಮ ಹೊಸನೆಲೆಗಳಲ್ಲಿ ಹೆಚ್ಚಿನ ಹಣವನ್ನು ಆರೋಗ್ಯ ಸುಧಾರಣೆಗಾಗಿ ಖರ್ಚು ಮಾಡುತ್ತಿರುವುದನ್ನು ಗಮನಿಸಲಾಗಿರುತ್ತದೆ. ಯಾವುದೇ ಪೂರ್ವಸೂಚನೆಗಳಿಲ್ಲದೆ ಅಪರಿಚಿತವಾದ ಹೊಸನೆಲೆಗಳಲ್ಲಿ ಪುನರಪಿ ಹೊಸ ಬದುಕನ್ನು ನಡೆಸುವುದಕ್ಕಾಗಿ ಸ್ಥಳಾಂತರಗೊಳ್ಳುವ ಅನಿವಾರ್ಯತೆ, ಅವರುಗಳ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೆ ನೇರ ಪರಿಣಾಮವನ್ನು ಬೀರಿರುತ್ತದೆ. ಹೊಸ ಪ್ರದೇಶದಲ್ಲಿ ಹಿಂದಿನಂತೆಯೇ ಹೊಂದಾಣಿಕೆ ಸಾಧ್ಯವಾಗದಿರುವುದು, ಒದಗಿಸಿದ ಮೂಲಭೂತ ಸೌಲಭ್ಯಗಳ ನಿರ್ವಹಣೆ ಸಮರ್ಪಕವಾಗಿಲ್ಲದೇ ಇರುವುದು, ಪುನರ್‌ವಸತಿ ಪ್ರದೇಶಗಳ ಬಳಿಯಲ್ಲಿಯೇ ಬೃಹತ್ ಕೈಗಾರಿಕೆಗಳ ಹಾರುಬೂದಿ ಮತ್ತು ತ್ಯಾಜ್ಯ ವಸ್ತುಗಳು ಪರಿಸರಕ್ಕೆ ಸೇರುವುದರಿಂದಾಗಿ ಸಂತ್ರಸ್ತರುಗಳು ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ. ಸಂತ್ರಸ್ತರುಗಳಲ್ಲಿರುವ ಅಸುರಕ್ಷತೆಯ ಭಾವನೆ, ಸ್ಥಳಾಂತರದ ಪೂರ್ವದಲ್ಲಿ ನಡೆಸುತ್ತಿದ್ದ ಪ್ರಶಾಂತ ಹಾಗೂ ಸರಳ ಜೀವನದ ನೆನಪುಗಳು ಅವರ ಮನಸ್ಥಿತಿಯನ್ನು ಹೊಸ ಪ್ರದೇಶಕ್ಕೆ ಹೊಂದಿಸಿಕೊಳ್ಳಲು ಕಷ್ಟಕರವನ್ನಾಗಿ ಮಾಡಿ ಮಾನಸಿಕ ಕ್ಲೇಶಗಳಿಗೆ ಒಳಪಡಿಸಿರುವುದರಿಂದ ಸಂತ್ರಸ್ತರುಗಳ ಆರೋಗ್ಯದ ಸಮಸ್ಯೆಯು ಉಲ್ಬಣಗೊಂಡಿರುವುದನ್ನು ಗಮನಿಸಲಾಗಿರುತ್ತದೆ. ಕರ್ನಾಟಕ ಸರಕಾರದ ಪುನರ್‌ವಸತಿ ನೀತಿಯು ಕಾಲನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದರ ಜೊತೆಯಲ್ಲಿ ಸಂತ್ರಸ್ತರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದರೂ ಯಾವುದೇ ಕಾಲನಿಗಳಲ್ಲಿ ಆರೋಗ್ಯಕ್ಕೆ ಸಂಬಂಧಪಟ್ಟಂತೆ ವ್ಯವಸ್ಥೆಗಳು ರಚಿಸಲ್ಪಟ್ಟಿರುವುದಿಲ್ಲ. ಪುನರ್‌ವಸತಿ ನೀತಿಯಲ್ಲಷ್ಟೇ ಅವುಗಳ ಉಲ್ಲೇಖವಿದ್ದು ಅನುಷ್ಠಾನಕ್ಕೆ ಬಂದಿಲ್ಲದಿರುವುದನ್ನು ಗಮನಿಸಲಾಗಿರುತ್ತದೆ.

9. ಸ್ಥಳಾಂತರಕ್ಕಿಂತ ಪೂರ್ವದಲ್ಲಿ ಸಂತ್ರಸ್ತ ಕುಟುಂಬಗಳ ಮಹಿಳೆಯರು ತಮ್ಮನ್ನು ಹೆಚ್ಚಾಗಿ ಮನೆ, ಭೂಮಿ, ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾ ಹೆಚ್ಚು-ಕಡಿಮೆ ಮನೆಯ ಯಜಮಾನರು ಎಂದು ಕರೆಯಿಸಿಕೊಳ್ಳುವ ಪುರುಷ ವರ್ಗದವರ ಅಧೀನವಾಗಿ ಸಾಮಾಜಿಕ, ಆರ್ಥಿಕ ಮತ್ತು ಮೌಲ್ಯಯುತವಾದ ಕಾಳಜಿಯಿಂದ ತಮ್ಮ ಭದ್ರತೆಯನ್ನು ಕಂಡುಕೊಂಡಿದ್ದರು. ಕೃಷಿ ಮತ್ತು ಅದಕ್ಕೆ ಪೂರಕ ಚಟುವಟಿಕೆಗಳಾದ ತೋಟಗಾರಿಕೆ, ಹೈನುಗಾರಿಕೆ, ಗುಡಿಕೈಗಾರಿಕೆಗಳಂತಹ ಸ್ವಸ್ಥ-ಪುಷ್ಟಿ ಕೆಲಸಗಳಲ್ಲಿ ತೊಡಗಿದ್ದರಿಂದ ಸದಾ ಕಾರ್ಯನಿರತರಾಗಿದ್ದ ಮಹಿಳೆಯರು ಏಕಾಏಕಿ ಬಲವಂತವಾಗಿ ದೂಡಲ್ಪಟ್ಟ ಹೊಸ ಪರಿಸರದಲ್ಲಿ ತಮ್ಮನ್ನು ಒಗ್ಗಿಸಿಕೊಳ್ಳಲು ಮಾನಸಿಕವಾಗಿ ತಯಾರಾಗದಿರುವುದು ಕಂಡುಬಂದಿರುತ್ತದೆ. ಹೊಸ ಜವಾಬ್ದಾರಿಗಳ ಹೇರಿಕೆ, ಕಳೆದುಕೊಳ್ಳಲ್ಪಟ್ಟ ನೆರೆಹೊರೆಯ ಸಂಬಂಧಗಳು, ಸ್ವಸಹಾಯ ಸಂಘಗಳಂತಹ ಕೃತಕ ಗುಂಪುಗಳ ರಚನೆ, ಪುರುಷ ವರ್ಗದವರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವುದರಿಂದ ಉದ್ಯೋಗಕ್ಕೆ ಸೇರಲೇಬೇಕಾದ ಅನಿವಾರ್ಯತೆ, ಆರೋಗ್ಯದ ಸಮಸ್ಯೆಯಲ್ಲಿ ಹೆಚ್ಚಳ, ಸಾಮಾಜಿಕ ಸ್ಥಳಾಂತರದಿಂದಾದ ಮಾನಸಿಕ ಖಿನ್ನತೆ ಈ ಎಲ್ಲಾ ಅಂಶಗಳು ಸ್ಥಳಾಂತರಿಸಲ್ಪಟ್ಟ ಕುಟುಂಬದ ಮಹಿಳೆಯರಲ್ಲಿ ಅಭದ್ರತೆಯ ವಾತಾವರಣವನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಕೃಷಿ ಸಮಾಜದ ಮೂಲ ಘಟಕವಾಗಿರುವ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಬದಲಾವಣೆ ಹೊಂದುತ್ತಿರುವುದರಿಂದ ಮಹಿಳೆಯರಿಗೆ ಅವಿಭಕ್ತ ಕುಟುಂಬದಿಂದ ಸಿಗುತ್ತಿದ್ದ ಮಾನಸಿಕ ಭದ್ರತೆ, ಹೆರಿಗೆ ಮತ್ತು ಮಕ್ಕಳ ಪಾಲನೆಯಂತಹ ಸಂದರ್ಭಗಳಲ್ಲಿ ದೊರಕುತ್ತಿದ್ದ ಕೌಟುಂಬಿಕ ಸಹಾಯ ಈಗ ಇಲ್ಲವಾಗಿರುವುದು ಮಹಿಳೆಯರ ಆರೋಗ್ಯದಲ್ಲಿ ಏರುಪೇರನ್ನು ಉಂಟು ಮಾಡುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಬದಲಾದ ಪರಿಸರದಲ್ಲಿ ಹೆಚ್ಚುತ್ತಿರುವ ಕೈಗಾರಿಕಾ ಚಟುವಟಿಕೆಗಳಿಂದ ಆಗುತ್ತಿರುವ ಪರಿಸರ ಮಾಲಿನ್ಯವು ಹೆಚ್ಚಾಗಿ ಮಹಿಳೆಯರನ್ನೇ ಬಾಧಿಸುತ್ತಿರುವುದು ಅಧ್ಯಯನದಲ್ಲಿ ಕಂಡುಬಂದಿರುತ್ತದೆ. ಇದೆಲ್ಲದರ ಹೊರತಾಗಿಯೂ ಕುಟುಂಬದ ಮಹಿಳೆಯರು ತಮ್ಮನ್ನು ಸ್ವಉದ್ಯೋಗ ಮತ್ತು ಸ್ವಸಹಾಯ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು ಹಳೆಯ ಜೀವನಶೈಲಿಯನ್ನು ಬಿಟ್ಟು ಹೊಸ ಜೀವನವನ್ನು ನಡೆಸುವ ನಿರೀಕ್ಷೆಯಲ್ಲಿ ಮುಂದುವರಿಯುತ್ತಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಅರಿತುಕೊಳ್ಳಲಾಗಿರುತ್ತದೆ.

10. ಸಂತ್ರಸ್ತರು ತಮಗೆ ದೊರೆತ ಪರಿಹಾರದ ನಗದು ಮೊತ್ತವನ್ನು ಮನೆಗಳ ನಿರ್ಮಾಣ ಮತ್ತು ಐಷಾರಾಮದ ವಸ್ತುಗಳನ್ನು ಖರೀದಿಸಲು ಖರ್ಚು ಮಾಡಿರುವುದನ್ನು ಕಂಡಾಗ ಸಂತ್ರಸ್ತರುಗಳ ಆರ್ಥಿಕ ಮಟ್ಟ ಪರಿಹಾರದ ಪ್ಯಾಕೇಜ್‌ಗಳನ್ನು ಪಡೆದ ನಂತರ ಉತ್ತಮಗೊಂಡರೂ ಅದನ್ನು ತಮ್ಮ ದೀರ್ಘಕಾಲದ ಭವಿಷ್ಯಕ್ಕಾಗಿ ತೊಡಗಿಸಿಕೊಳ್ಳದೇ ತಮ್ಮ ಐಷಾರಾಮದ ಜೀವನಕ್ಕಾಗಿ ಖರ್ಚು ಮಾಡಿರುವುದರಿಂದ

ಸಂತ್ರಸ್ತ ಕುಟುಂಬಗಳು ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿರುತ್ತದೆ ಎಂಬುದು ವ್ಯಾಪಕವಾಗಿ ಕಂಡುಬರುತ್ತದೆ. ಬಹುಸಂಖ್ಯೆಯ ಸಂತ್ರಸ್ತರು ಪರಿಹಾರದ ನಗದು ಹಣವನ್ನು ಅನುತ್ಪಾದಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದು, 60% ಸಂತ್ರಸ್ತರು ದೊರಕಿದ ನಗದು ಹಣವನ್ನು ಮನೆಗಳ ನಿರ್ಮಾಣಕ್ಕೆ ಖರ್ಚು ಮಾಡಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. ಸ್ಥಳಾಂತರದ ಪೂರ್ವದಲ್ಲಿ ಮಣ್ಣಿನಿಂದ ರಚಿಸಲ್ಪಟ್ಟ ಕಚ್ಚಾಮನೆಗಳಲ್ಲಿ ವಾಸಿಸುತ್ತಿದ್ದ ಸಂತ್ರಸ್ತರು, ನಂತರದಲ್ಲಿ ಕಾಂಕ್ರೀಟಿನ ಆಧುನಿಕ ಮನೆಗಳನ್ನು ಹೊಂದಿರುವುದು ಹಾಗೂ ಆಧುನಿಕ ಜೀವನಶೈಲಿಗೆ ಬೇಕಾದಂತಹ ಅಡುಗೆ ಅನಿಲ, ವಾಷಿಂಗ್‌ಮೆಷಿನ್, ವಿದ್ಯುನ್ಮಾನ ವಸ್ತುಗಳು, ವಾಹನ ಮತ್ತು ಶೌಚಾಲಯದ ವ್ಯವಸ್ಥೆಗಳು ಪುನರ್‌ವಸತಿ ಕಾಲನಿಗಳಲ್ಲಿ ಹೊಂದಿದ್ದರೂ, ಈ ಸೌಲಭ್ಯಗಳು ಅವರಿಗೆ ತೃಪ್ತಿ ಮತ್ತು ಸಂತೋಷ ತಂದುಕೊಟ್ಟಿರುವುದಿಲ್ಲ ಎಂಬುದನ್ನು ಗಮನಿಸಲಾಗಿರುತ್ತದೆ. ಹಿಂದೆ ಜೀವಿಸುತ್ತಿದ್ದ ಪ್ರದೇಶದ ಜೊತೆಯಲ್ಲಿ ಸಂತ್ರಸ್ತರಿಗಿದ್ದಂತಹ ಆತ್ಮೀಯ ಮತ್ತು ಭಾವನಾತ್ಮಕ ಸಂಬಂಧಗಳ ಹಿನ್ನೆಲೆಯಲ್ಲಿ ಎಲ್ಲಾ ಆಧುನಿಕ ಮೂಲಭೂತ ಸೌಕರ್ಯಗಳನ್ನು ಪುನರ್‌ವಸತಿ ಪ್ರದೇಶದಲ್ಲಿ ಕಲ್ಪಿಸಿದ್ದರೂ ಅವರುಗಳಲ್ಲಿ ತೃಪ್ತಿ ಮತ್ತು ಸಂತೋಷಗಳು ಇಲ್ಲದಿರುವುದಕ್ಕೆ ಮೂಲಕಾರಣವಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಎದ್ದು ಕಾಣುತ್ತಿತ್ತು.

11. ಭೂಸ್ವಾಧೀನಕ್ಕಿಂತ ಮೊದಲು ಜೀವನವನ್ನು ನಡೆಸುವುದಕ್ಕೆ ನೆಚ್ಚಿಕೊಂಡು ಬಂದಿದ್ದ ಉದ್ಯೋಗದ ನಷ್ಟ, ಸರಿಯಾದ ರೀತಿಯಲ್ಲಿ ಪರಿಹಾರಗಳನ್ನು ನೀಡದೇ ಇರುವುದು ಹಾಗೂ ಪರಿಹಾರದ ಪ್ಯಾಕೇಜ್‌ಗಳನ್ನು ನೀಡುವಲ್ಲಿ ವಿಳಂಬ ನೀತಿಯನ್ನು ಅನುಸರಿಸಿ ಸತಾಯಿಸಿದ್ದು, ಭೂಮಿಯ ನ್ಯಾಯೋಚಿತವಾದ ಪರಿಹಾರಗಳನ್ನು ದೊರಕಿಸಿ ಕೊಡುವರೆಂದು ನಂಬಿದ್ದ ಮಧ್ಯವರ್ತಿಗಳು ವಂಚನೆ ಮಾಡಿದ್ದು ಮತ್ತು ಅಧಿಕಾರಿಗಳು ಲಂಚವನ್ನು ಅಪೇಕ್ಷಿಸಿದ್ದು ಸಂತ್ರಸ್ತರುಗಳ ಸಂತೋಷವನ್ನು ಅಳಿಸಿ ಹಾಕುವುದಕ್ಕೆ ಕಾರಣವಾಗಿರುವ ಅಂಶಗಳೆಂದು ತಿಳಿದುಬರುತ್ತದೆ. ಹೊಸ ನೆಲೆಗಳಲ್ಲಿ ಹಿಂದಿನ ಉದ್ಯೋಗಗಳನ್ನು ಮುಂದುವರಿಸಿಕೊಂಡು ಹೋಗಲು ಅವಕಾಶವಿಲ್ಲದಿರುವುದು, ಮೂಲಭೂತ ವ್ಯವಸ್ಥೆಗಳಾದ ನೀರು, ಒಳಚರಂಡಿ, ರಸ್ತೆ, ಆರೋಗ್ಯ ವ್ಯವಸ್ಥೆಗಳು, ಅಸಮರ್ಪಕ ಸಾರಿಗೆ ವ್ಯವಸ್ಥೆ ಮತ್ತು ನಗರ ಪ್ರದೇಶದಿಂದ ದೂರದಲ್ಲಿ ಪುನರ್‌ವಸತಿ ಕಾಲನಿಗಳು ನಿರ್ಮಿಸಲ್ಪಟ್ಟಿರುವುದು ಹೊಸ ಪರಿಸರಕ್ಕೆ ಸಂತ್ರಸ್ತರುಗಳು ಒಮ್ಮಿಂದೊಮ್ಮೆಲೆ ಒಗ್ಗಿಕೊಳ್ಳಲು ಕಷ್ಟವಾಗಿರುತ್ತದೆ.

12. ಸ್ಥಳಾಂತರದ ಪೂರ್ವದಲ್ಲಿ ಸಂದರ್ಶಿತ 250 ಮಾಹಿತಿದಾರರಲ್ಲಿ 17 ಜನರು ಮಾತ್ರ ಸಾಲಗಾರರಾಗಿದ್ದರೆ, ನಂತರದಲ್ಲಿ ಸಾಲದ ಶೂಲಕ್ಕೆ ಸಿಲುಕಿದವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿರುತ್ತದೆ. ಹೆಚ್ಚಿನ ಸಂತ್ರಸ್ತರು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಅಥವಾ ಸಹಕಾರಿ ಸಂಸ್ಥೆಗಳಿಂದ ಸಾಲವನ್ನು ಪಡೆಯದೇ, ಅನೌಪಚಾರಿಕ ಸಂಸ್ಥೆ ಮತ್ತು ವ್ಯಕ್ತಿಗಳಿಂದ ಸಾಲವನ್ನು ಪಡೆದಿರುತ್ತಾರೆ. ಮನೆಗಳನ್ನು ನಿರ್ಮಿಸಲು

ಹಾಗೂ ದೈನಂದಿನ ಖರ್ಚುವೆಚ್ಚಗಳನ್ನು ಸರಿದೂಗಿಸಲು ಸಾಲವನ್ನು ಹೆಚ್ಚಿನ ಬಡ್ಡಿ ತೆತ್ತು ಪಡೆದಿರುವುದು ಸಂತ್ರಸ್ತರ ಆರ್ಥಿಕ ಪರಿಸ್ಥಿತಿ ಸ್ಥಳಾಂತರದ ನಂತರದಲ್ಲಿ ಬಿಗಡಾಯಿಸಲು ಕಾರಣವಾಗಿರುತ್ತದೆಯೆಂಬುದನ್ನು ವಿವರಿಸುತ್ತದೆ.

13. ಪುನರ್‌ವಸತಿ ಪ್ರದೇಶದಲ್ಲಿ ವಾಣಿಜ್ಯ ಸಂಕೀರ್ಣ, ಉದ್ಯಾನವನ ಮುಂತಾದ ಪ್ರಮುಖ ವಿಷಯಗಳಿಗೆ ಕಾದಿರಿಸಿದ ಆಯಕಟ್ಟಿನ ನಿವೇಶನಗಳನ್ನು ಆ ಕಾರಣಗಳಿಗೋಸ್ಕರ ಉಪಯೋಗಿಸದೇ, ಭೂಸ್ವಾಧೀನ ಪ್ರಕ್ರಿಯೆಗೆ ಸಹಕರಿಸಿದ ಪ್ರಭಾವಿ ಸಂತ್ರಸ್ತರುಗಳಿಗೆ ಮನೆಗಳ ನಿರ್ಮಾಣಕ್ಕಾಗಿ ನೀಡಿ ತಾರತಮ್ಯವನ್ನು ಮಾಡಲಾಗಿರುತ್ತದೆ. ಪ್ರಭಾವಿ ಸಂತ್ರಸ್ತರುಗಳು ಪುನರ್‌ವಸತಿ ಕಾಲನಿಗಳಲ್ಲಿನ ಆಯಕಟ್ಟಿನ ಪ್ರದೇಶಗಳಲ್ಲಿ ನಿವೇಶನ, ತ್ವರಿತವಾಗಿ ಪರಿಹಾರವನ್ನು ಪಡೆದಿರುವುದು ಭೂಸ್ವಾಧೀನ ಪ್ರಾಧಿಕಾರ ಪರಿಹಾರವನ್ನು ನೀಡುವ ಸಂದರ್ಭದಲ್ಲಿ ಪಕ್ಷಪಾತವನ್ನು ಹಾಗೂ ಪಾರದರ್ಶಕತೆಗೆ ಪ್ರಾಮುಖ್ಯತೆಯನ್ನು ನೀಡದಿರುವುದನ್ನು ಸೂಚಿಸುತ್ತದೆ. ಪರಿಹಾರಗಳನ್ನು ಕಲ್ಪಿಸುವ ಸಂದರ್ಭದಲ್ಲಿ ಅಧಿಕಾರಿವರ್ಗವು ಸಂತ್ರಸ್ತರ ನಡುವೆ ತಾರತಮ್ಯವನ್ನು ಮಾಡಿ ಭ್ರಷ್ಟಾಚಾರದಲ್ಲಿ ತೊಡಗಿದ್ದುದು ಕಂಡುಬಂದಿರುತ್ತದೆ.

14. ಪ್ರಜಾಸತ್ತಾತ್ಮಕ ತತ್ವಗಳಿಗೆ ವಿರುದ್ಧವಾಗಿ, ಜನರ ಹಕ್ಕುಗಳನ್ನು ಪರಿಗಣಿಸದೇ ಭೂಸ್ವಾಧೀನಕ್ಕಾಗಿ ಬಲಪ್ರಯೋಗಿಸಿದ ಉದಾಹರಣೆಗಳು ಕಂಡುಬಂದಿರುವುದು ಮಾತ್ರವಲ್ಲದೇ ಭೂಮಿಯನ್ನು ಸ್ವಯಂಪ್ರೇರಿತವಾಗಿ ನೀಡದಿದ್ದಲ್ಲಿ ಬಲವಂತದ ಮೂಲಕ ಸ್ವಾಧೀನಪಡಿಸಿ ನೀಡಬೇಕಾದ ಪರಿಹಾರಗಳಿಗೋಸ್ಕರ ಸತಾಯಿಸಲಾಗುವುದು ಮಾತ್ರವಲ್ಲದೇ ಪುನರ್‌ವಸತಿ ಕಾಲನಿಗಳಲ್ಲಿ ವಾಸಯೋಗ್ಯವಲ್ಲದ ನಿವೇಶನಗಳನ್ನು ನೀಡಲಾಗುವುದೆಂದು ಬೆದರಿಕೆಯೊಡ್ಡಿ ಸಂತ್ರಸ್ತರುಗಳು ಸಂವಿಧಾನದತ್ತವಾಗಿ ಅನುಭವಿಸುತ್ತಿದ್ದ ಹಕ್ಕುಗಳನ್ನು ದಮನ ಮಾಡುವ ಪ್ರಯತ್ನಗಳು ಭೂಸ್ವಾಧೀನ ಪ್ರಾಧಿಕಾರದಿಂದ ನಡೆದಿರುತ್ತದೆ ಎಂಬ ಅಂಶವು ಪ್ರಜಾಸತ್ತಾತ್ಮಕ ವ್ಯವಸ್ಥೆಯ ವಿಡಂಬನೆಯಾಗಿ ಕಂಡುಬಂದಿರುತ್ತದೆ. ಪೋಲೀಸ್ ಠಾಣೆಗಳಲ್ಲಿ ಸಂತ್ರಸ್ತರ ಮೇಲೆ ಆಧಾರ ರಹಿತ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುವುದರ ಮೂಲಕ ಮತ್ತು ಸ್ಥಳೀಯ ಗೂಂಡಾ ಶಕ್ತಿಯನ್ನು ಬಳಸಿಕೊಂಡು ದೈಹಿಕವಾಗಿ ಹಲ್ಲೆ ನಡೆಸುತ್ತೇವೆಂದು ಬೆದರಿಸಿ ಸಂತ್ರಸ್ತರಲ್ಲಿ ಭೀತಿಯ ವಾತಾವರಣವನ್ನು ಸೃಷ್ಟಿಸಿರುವುದು, ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸಿದ ಸಂದರ್ಭದಲ್ಲಿ ರಾತ್ರೋರಾತ್ರಿ ಸಂತ್ರಸ್ತರ ಕಾನೂನುಬದ್ಧ ಭೂಮಿಯಲ್ಲಿ ಅಕ್ರಮ ಪ್ರವೇಶ ಮಾಡಿ ಕೃಷಿ ಮತ್ತು ತೋಟಗಳನ್ನು ನಾಶ ಮಾಡಿದಂತಹ ಪ್ರಸಂಗಗಳು ನಡೆದಿರುತ್ತದೆಯೆಂಬುದು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಸಾರಾಸಗಟಾಗಿ ಉಲ್ಲಂಘಿಸಿರುವುದಕ್ಕೆ ಸ್ಪಷ್ಟ ಉದಾಹರಣೆಗಳಾಗಿ ಕಂಡುಬರುತ್ತವೆ.

15. ಭೂಸ್ವಾಧೀನ ಪ್ರಕ್ರಿಯೆಗಿಂತ ಪೂರ್ವದಲ್ಲಿ ಸಂತ್ರಸ್ತರಿಗೆ ಅರಿವು ನೀಡುವ ಯಾವುದೇ ರೀತಿಯ ಸಭೆಗಳನ್ನು ಪ್ರಾಧಿಕಾರ ಆಯೋಜಿಸಿರಲಿಲ್ಲವೆಂಬ ಅಭಿಪ್ರಾಯವು ಭೂಸ್ವಾಧೀನ ಹಾಗೂ ಪುನರ್‌ವಸತಿಯನ್ನು ಕಲ್ಪಿಸುವ ಸಂದರ್ಭದಲ್ಲಿ ಸಂತ್ರಸ್ತರ ಅಭಿಪ್ರಾಯಕ್ಕೆ ಮನ್ನಣೆ ಕೊಡದಿರುವುದನ್ನು ಸೂಚಿಸುತ್ತದೆ. ಪುನರ್‌ವಸತಿ ನೀತಿಯು ಎಲ್ಲಾ ಹನ್ನೊಂದು ಕಾಲನಿಗಳಲ್ಲಿ ಸಂತ್ರಸ್ತರಿಗೆ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ನೀಡಬೇಕೆಂದು ತಿಳಿಸಿರುತ್ತದೆ. ಕಾಲನಿಗಳಲ್ಲಿ ಒಳಚರಂಡಿ, ರಸ್ತೆ, ಬೀದಿದೀಪ, ಆಟದ ಮೈದಾನ, ಉದ್ಯಾನವನ, ಆರೋಗ್ಯ ಕೇಂದ್ರಗಳು ಮತ್ತು ವಾಣಿಜ್ಯ ಸಂಕೀರ್ಣಗಳನ್ನು ಒದಗಿಸಬೇಕೆಂದು ಉಲ್ಲೇಖಿಸಿದ್ದರೂ ಅವುಗಳು ಕಾರ್ಯರೂಪಕ್ಕೆ ಬಂದಿರುವುದಿಲ್ಲ. ರಚಿಸಿದ ರಸ್ತೆ, ಒಳಚರಂಡಿ ಮತ್ತು ಬೀದಿದೀಪದ ವ್ಯವಸ್ಥೆಗಳು ಸಮರ್ಪಕವಾಗಿ ನಿರ್ವಹಿಸಲ್ಪಡದೇ ಹೆಚ್ಚು ಸಮಸ್ಯೆಗಳನ್ನು ಸೃಷ್ಟಿಸಿರುತ್ತದೆ. ಹೆಚ್ಚಿನ ಪುನರ್‌ವಸತಿ ಕಾಲನಿಗಳಲ್ಲಿ, ವಿಶೇಷವಾಗಿ ಕೋಡಿಕೆರೆ, ಶಾಂತಿನಗರ ಮತ್ತು ಪೆರ್ಮುದೆಯಲ್ಲಿ ವಾಸಿಸುತ್ತಿರುವ ಸಂತ್ರಸ್ತರುಗಳು ನೀರಿನ ಅಲಭ್ಯತೆಯಿಂದಾಗಿಯೇ ಹೆಚ್ಚಿನ ಮಾನಸಿಕ ಕ್ಲೇಶಗಳಿಗೆ ಒಳಗಾಗಿರುವುದು ಕಂಡುಬರುತ್ತದೆ.

16. ಬಲವಂತದ ಭೂಸ್ವಾಧೀನವನ್ನು ವಿರೋಧಿಸಿ ಹಾಗೂ ಸೂಕ್ತ ಪರಿಹಾರವನ್ನು ಪಡೆಯುವುದಕ್ಕೋಸ್ಕರ ಸಂತ್ರಸ್ತರು ಸಂಘಟನೆಗಳನ್ನು ರಚಿಸಿ ಸರಕಾರದ ಮೇಲೆ ಒತ್ತಡ ಹೇರುವ ತಂತ್ರಗಳನ್ನು ಬಳಸಿದ್ದರು. ಪ್ರಜಾಸತ್ತಾತ್ಮಕ ವ್ಯವಸ್ಥೆಯು ಎಲ್ಲಾ ಪ್ರಜೆಗಳಿಗೆ ಶಾಂತಿಯುತವಾಗಿ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹಾಗೂ ನಿರ್ಭೀತಿಯಿಂದ ವ್ಯಕ್ತಪಡಿಸಲು ಅವಕಾಶಗಳನ್ನು ನೀಡಿರುತ್ತದೆ. ಆದರೆ, ಬಲವಂತದ ಭೂಸ್ವಾಧೀನವನ್ನು ವಿರೋಧಿಸಿ ಹೋರಾಟಗಳನ್ನು ಸಂಘಟಿಸಿದ ನಾಯಕರುಗಳಿಗೆ ವಿವಿಧ ಆಮಿಷಗಳನ್ನು ಒಡ್ಡಿ ಹೋರಾಟದಿಂದ ಹಿಂದೆ ಸರಿಯುವಂತೆ ಮಾಡಲು ತೆರೆಮರೆಯ ಪ್ರಯತ್ನಗಳು ನಡೆಸಲ್ಪಟ್ಟಿರುತ್ತವೆ. ಇದಕ್ಕೆ ಜಗ್ಗದೇ ಇದ್ದ ಸಂದರ್ಭದಲ್ಲಿ ಸ್ಥಳೀಯ ಗೂಂಡಾಗಳನ್ನು ಬಳಸಿ ಹಲ್ಲೆ ಮಾಡಿರುವಂತಹದು, ಪೋಲೀಸ್ ಠಾಣೆಗಳಲ್ಲಿ ಸುಳ್ಳು ಕ್ರಿಮಿನಲ್ ದಾವೆಗಳನ್ನು ವಿಶೇಷವಾಗಿ ಸರಕಾರಿ ಕೆಲಸಕ್ಕೆ ಅಡ್ಡಿ, ಕೊಲೆ ಪ್ರಯತ್ನ ಮುಂತಾದ ಪ್ರಕರಣಗಳನ್ನು ದಾಖಲಿಸಿ ಅವರುಗಳನ್ನು ಹೋರಾಟದಿಂದ ಹಿಂದೆ ಸರಿಸಲು ವ್ಯರ್ಥ ಪ್ರಯತ್ನಗಳಾಗಿರುವುದು ಕಂಡುಬಂದಿರುತ್ತದೆ. ಕರ್ನಾಟಕ ಸರಕಾರ ಮಂಗಳೂರು ವಿಶೇಷ ಆರ್ಥಿಕ ವಲಯದ ದ್ವಿತೀಯ ಹಂತದ ವಿಸ್ತರಣೆಗಾಗಿ ಎಕ್ಕಾರು, ಪೆರ್ಮುದೆ, ಕುತ್ತೆತ್ತೂರು ಹಾಗೂ ಶಿಬರೂರು ಗ್ರಾಮಗಳಲ್ಲಿನ ಒಟ್ಟು 2447 ಎಕ್ರೆ ಭೂಮಿಯ ಸ್ವಾಧೀನಕ್ಕಾಗಿ 2007ರಲ್ಲಿ ಹೊರಡಿಸಿದ ಅಧಿಸೂಚನೆಯು ಸಂತ್ರಸ್ತರಾಗುವವರ ಸಕ್ರಿಯ ಹೋರಾಟಗಳಿಂದಾಗಿಯೇ ಹಿಂಪಡೆಯಲ್ಪಟ್ಟಿರುವುದು ಗಮನಿಸಬೇಕಾದ ಅಂಶವಾಗಿರುತ್ತದೆ.

17. ಭೂಸ್ವಾಧೀನದ ವಿರುದ್ಧ ಪ್ರಬಲವಾಗಿ ಹೋರಾಟಗಳನ್ನು ಸಂಘಟಿಸಿರುವುದೇ ಸರಕಾರವು ನಗದು ಪರಿಹಾರದ ಮೊತ್ತವನ್ನು ಹೆಚ್ಚಿಸುವುದಕ್ಕೆ ಕಾರಣವಾಗಿರುತ್ತದೆ. ಕರಾವಳಿ ಪ್ರದೇಶದಲ್ಲಿ ಬಲಿಷ್ಟವಾಗಿ ನೆಲೆಯೂರಿರುವ ಎರಡು ರಾಷ್ಟೀಯ ಪಕ್ಷಗಳು ಸಂತ್ರಸ್ತರುಗಳ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವುದಿಲ್ಲ. ನಿರ್ವಸಿತರ ಸಮಸ್ಯೆಗಳ ಬಗ್ಗೆ ಕಣ್ಣೀರು ಒರೆಸುವ ತಂತ್ರಗಳನ್ನು ಮಾತ್ರ ಮಾಡಿದವೇ ಹೊರತು ಯೋಜನೆಗಾಗಿ ಭೂಸ್ವಾಧೀನಪಡಿಸಲ್ಪಟ್ಟ ಸಂತ್ರಸ್ತರ ಬೇಡಿಕೆಗಳ ಈಡೇರಿಕೆಗೆ ಯಾವುದೇ ರೀತಿಯ ಗಂಭೀರ ಪ್ರಯತ್ನವನ್ನು ಮಾಡಿರುವುದಿಲ್ಲ. ರಾಜಕೀಯ ಪಕ್ಷಗಳು ಹೋರಾಟದಲ್ಲಿ ತೊಡಗಿಸಿಕೊಂಡ ನಾಯಕರುಗಳಿಗೆ ವಿವಿಧ ಆಮಿಷಗಳನ್ನು ಒಡ್ಡಿ ಹೋರಾಟದಿಂದ ಹಿಂದೆ ಸರಿಸಲು ಪ್ರಯತ್ನಿಸಿದರಲ್ಲದೆ, ಪರೋಕ್ಷವಾಗಿ ಭೂಸ್ವಾಧೀನ ಪ್ರಾಧಿಕಾರವನ್ನು ಬೆಂಬಲಿಸಿರುವುದು ಅಧ್ಯಯನದಿಂದ ಕಂಡುಬಂದಿರುತ್ತದೆ. ಎಡಪಂಥೀಯ ಪಕ್ಷಗಳು ಮತ್ತು ಪ್ರಗತಿಪರ ನಾಗರಿಕ ಸಂಘಟನೆಗಳು ಮಾತ್ರ ಸಂತ್ರಸ್ತರ ಹೋರಾಟವನ್ನು ಸಕ್ರಿಯವಾಗಿ ಬೆಂಬಲಿಸಿ ಸಾಮಾಜಿಕ ಕಳಕಳಿಯನ್ನು ಪ್ರದರ್ಶಿಸಿರುತ್ತವೆ. ತೋರಿಕೆಯ ಸಾಮಾಜಿಕ ಕಳಕಳಿಯನ್ನು ಪ್ರದರ್ಶಿಸುವ ಸಮಾಜದಲ್ಲಿನ ಕೆಲವು ಗಣ್ಯ ಹಾಗೂ ಪ್ರಭಾವಶಾಲಿ ವ್ಯಕ್ತಿಗಳ ಬಳಿ ಮಂಗಳೂರು ವಿಶೇಷ ಆರ್ಥಿಕ ವಲಯದ ಸ್ಥಾಪನೆ ಹಾಗೂ ಬಲವಂತದ ಭೂಸ್ವಾಧೀನವನ್ನು ತಡೆಯುವಂತೆ ಸಂತ್ರಸ್ತರು ಸ್ವತಃ ವಿನಂತಿಸಿದ್ದರೂ ಅವರುಗಳು ಯೋಜನೆಯನ್ನು ವಿರೋಧಿಸಿರುವುದು ಎಲ್ಲಿಯೂ ದಾಖಲಿಸಲ್ಪಡದಿರುವುದು ಸಮಾಜದಲ್ಲಿ ಗಣ್ಯರೆಂದು ಕರೆಸಿಕೊಳ್ಳುವ ಸಮುದಾಯ ಯಾವತ್ತಿಗೂ ಆಡಳಿತಶಾಹಿ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಪರವಾಗಿ ಕಾರ್ಯನಿರ್ವಹಿಸುವುದನ್ನು ಸೂಚಿಸುತ್ತದೆ.

18. ಆಡಳಿತಶಾಹಿ ವ್ಯವಸ್ಥೆಯು ಅಭಿವೃದ್ಧಿ ಚಟುವಟಿಕೆಗಳಿಗೆ ಭೂಸ್ವಾಧೀನ ಅನಿವಾರ್ಯ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಥೇಚ್ಛವಾಗಿ ದೊರಕುವ ಮೂಲಭೂತ ಸೌಲಭ್ಯಗಳಿಂದಾಗಿಯೇ ಕೈಗಾರಿಕೆಗಳ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಾಣವಾಗಿರುತ್ತದೆಯೆಂದು ಭೂಸ್ವಾಧೀನ ಪ್ರಕ್ರಿಯೆಯನ್ನು ಬಲವಾಗಿ ಸಮರ್ಥಿಸಿಕೊಂಡಿರುವುದು ಕಂಡುಬಂದಿದ್ದು, ಆರಂಭಿಸಲ್ಪಡುವ ಕೈಗಾರಿಕೆಗಳಿಂದ ಇಲ್ಲಿನ ಯುವಜನತೆಗೆ ಉದ್ಯೋಗಾವಕಾಶಗಳು ದೊರಕಿ ಪ್ರದೇಶ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುತ್ತದೆ. ಭೂಸ್ವಾಧೀನಕ್ಕಾಗಿ ಅಳವಡಿಸಿಕೊಂಡ ವಿಧಾನ ಕ್ರಮಬದ್ಧ ಹಾಗೂ ಕಾನೂನುಸಮ್ಮತವಾಗಿತ್ತೆಂದು ಸಮರ್ಥಿಸಿಕೊಂಡ ಅಧಿಕಾರಿಗಳು, ಪ್ರಸ್ತುತ ಯೋಜನೆಯಿಂದಾಗಿ ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾಗಿರುವವರಿಗೆ ಬೇರೆ ಯಾವ ಯೋಜನೆಗಳಲ್ಲಿನ ಸಂತ್ರಸ್ತರಿಗೂ ನೀಡಿರದಿದ್ದಂತಹ ಅತ್ಯುತ್ತಮ ನಗದು ಪರಿಹಾರ ಮತ್ತು ಪುನರ್‌ವಸತಿಯನ್ನು ಕಲ್ಪಿಸಲಾಗಿರುತ್ತದೆ. ಎಲ್ಲಾ ಅರ್ಹ ಸಂತ್ರಸ್ತ ಕುಟುಂಬದ ಒಬ್ಬ ಸದಸ್ಯರಿಗೆ ಆರಂಭಿಸಲ್ಪಡುವ ಕೈಗಾರಿಕೆಗಳಲ್ಲಿ

ಉದ್ಯೋಗಾವಕಾಶಗಳನ್ನು ಒದಗಿಸಲಾಗುತ್ತದೆಯೆಂಬ ಮಾತುಗಳು ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲದಿರುವುದು ಯೋಜನೆಯಿಂದ ಸಂತ್ರಸ್ತಗೊಂಡ ಕುಟುಂಬಗಳ ಸಬಲೀಕರಣಕ್ಕೆ ಪ್ರಬಲ ಹೊಡೆತ ನೀಡಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಕ್ಕೆ ಬಂದಿರುತ್ತದೆ.

ನೀಡಲ್ಪಟ್ಟಂತಹ ಪುನರ್‌ವಸತಿ ಪ್ಯಾಕೇಜ್‌ಗಳು ಹೆಚ್ಚಿನ ಕುಟುಂಬಗಳಿಗೆ ಶಾಶ್ವತ ಪರಿಹಾರವಾಗದೇ ಕೇವಲ ತಾತ್ಕಾಲಿಕ ಪರಿಹಾರವಾಗಿ, ಸ್ಥಳಾಂತರಿಸಲ್ಪಟ್ಟ ಕುಟುಂಬಗಳನ್ನು ಒಂದು ರೀತಿಯಲ್ಲಿ ಅತಂತ್ರ ಸ್ಥಿತಿಗೆ ತಳ್ಳಿರುತ್ತದೆ ಎಂಬುದು ಕ್ಷೇತ್ರಕಾರ್ಯದ ಫಲಿತಗಳಲ್ಲಿ ಎದ್ದು ಕಾಣುವ ಅಂಶವಾಗಿದೆಯಲ್ಲದೆ ಇದರಿಂದಾಗಿ ಹೆಚ್ಚಿನ ಕುಟುಂಬಗಳು ಶಾಶ್ವತ ಬಿಕ್ಕಟ್ಟಿಗೆ ಸಿಲುಕಿದುದನ್ನು ಅರಿತುಕೊಳ್ಳಲಾಗಿರುತ್ತದೆ. ತಮ್ಮ ಉದ್ಯೋಗವನ್ನು ಕಳೆದುಕೊಂಡು ಪುನರ್‌ವಸತಿಯ ನಂತರ ಪರಿಹಾರದ ರೂಪದಲ್ಲಿ ದೊರೆತ ಹಣವನ್ನು ಕುಟುಂಬದ ಪೋಷಣೆಗೆ ಮೀಸಲಿರಿಸದೇ ಖರ್ಚು ಮಾಡಿರುವುದು ಸಂತ್ರಸ್ತರನ್ನು ಆರ್ಥಿಕವಾಗಿ ಬಲಹೀನರನ್ನಾಗಿ ಮಾಡಿರುತ್ತದೆ. ಪುನರ್‌ವಸತಿ ಕಾಲನಿಗಳಲ್ಲಿ ಆಧುನಿಕ ಸೌಲಭ್ಯಗಳಿರುವ ಮನೆಗಳನ್ನು ನಿರ್ಮಿಸಿ ದೈನಂದಿನ ಖರ್ಚುವೆಚ್ಚಗಳನ್ನು ಸರಿದೂಗಿಸಲು ಬೀಡಿ ಕಟ್ಟುವುದರಲ್ಲಿ ತೊಡಗಿಸಿಕೊಂಡ ಪುರುಷರು ಮತ್ತು ಮಹಿಳೆಯರನ್ನು ಗಮನಿಸಿದಾಗ, ಸ್ಥಳಾಂತರ ಸಂತ್ರಸ್ತರ ಬದುಕನ್ನು ಯಾವ ರೀತಿಯಲ್ಲಿ ದಯನೀಯ ಪರಿಸ್ಥಿತಿಗೆ ತಂದಿರುತ್ತದೆ ಎಂಬುದು ಗಮನಕ್ಕೆ ಬರುತ್ತದೆ.

ವಿಶೇಷ ಆರ್ಥಿಕ ವಲಯದ ಯೋಜನೆಗಳನ್ನು ನಿರ್ಧರಿಸುವ ಆಡಳಿತಶಾಹಿ ವ್ಯವಸ್ಥೆ ಮತ್ತು ಬಂಡವಾಳಶಾಹಿಗಳು ಅವುಗಳ ಜಾರಿಯ ಬಗೆಗಿನ ಸರಿಯಾದ ಮಾಹಿತಿಗಳನ್ನು ಸಂತ್ರಸ್ತರಾಗುವವರಿಗೆ ನೀಡುವುದಿಲ್ಲ. ಸ್ಥಳೀಯ ಸರಕಾರಗಳಾದ ಗ್ರಾಮ ಪಂಚಾಯತ್ ಮತ್ತು ವಾರ್ಡ್ ಸಭೆಗಳಿಗೆ ಯಾವುದೇ ರೀತಿಯ ಮಾಹಿತಿಗಳನ್ನು ನೀಡದೇ ನೇರವಾಗಿ ಕೇಂದ್ರ ಹಾಗೂ ರಾಜ್ಯ ಸರಕಾರದಿಂದ ಅನುಮೋದನೆಯನ್ನು ಪಡೆಯಲ್ಪಟ್ಟು ವಿಶೇಷ ಆರ್ಥಿಕ ವಲಯಗಳು ಜಾರಿಗೆ ಬರುತ್ತಿರುವುದರಿಂದಾಗಿ ಸ್ಥಳೀಯ ಪ್ರದೇಶಗಳ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿರುವುದು ಅಧ್ಯಯನದ ಸಂದರ್ಭದಲ್ಲಿ ತಿಳಿದುಬರುತ್ತದೆ. ವಿಶೇಷ ಆರ್ಥಿಕ ವಲಯದ ನೀತಿ ಮತ್ತು ಕಾಯ್ದೆಗಳು ಭಾರತದ ಸಂವಿಧಾನ ಮತ್ತು ಸಾರ್ವಭೌಮತೆಯನ್ನು ಬದಿಗಿರಿಸಿ ಮತ್ತಷ್ಟು ವಸಾಹತುಗಳನ್ನು ಸ್ಥಾಪಿಸುವ ಭರದಲ್ಲಿ ಸಾಗುತ್ತಿದೆ. ಈ ಕಾಯ್ದೆಗಳ ಪ್ರಕಾರ ಸಂವಿಧಾನಾತ್ಮಕ ಹಕ್ಕುಗಳು ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅನುಷ್ಠಾನಕ್ಕೆ ಬರುವುದಿಲ್ಲ. ತ್ವರಿತವಾಗಿ ಆರ್ಥಿಕಾಭಿವೃದ್ಧಿ, ರಾಷ್ಟ್ರದ ವಿದೇಶೀ ವಿನಿಮಯಗಳನ್ನು ಹಾಗೂ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿ ರಚಿಸಲ್ಪಡುತ್ತಿರುವ ವಿಶೇಷ ಆರ್ಥಿಕ ವಲಯದ ಸ್ಥಾವರಗಳಿಗೆ ದೇಶದ ಯಾವುದೇ ಕಾರ್ಮಿಕ ಕಾಯಿದೆಗಳು ಅನ್ವಯವಾಗುವುದಿಲ್ಲ. ಪರಿಸರ ಸಂಬಂಧಿ ಕಾನೂನುಗಳಿಗೆ ಅನುಗುಣವಾಗಿ ಸ್ಥಾವರಗಳನ್ನು ರಚಿಸಬೇಕೆಂಬ ಕಡ್ಡಾಯ ನೀತಿಗಳನ್ನು ಪಾಲಿಸುವುದರಿಂದ ವಿನಾಯಿತಿ ನೀಡಲಾಗಿರುತ್ತದೆ. ಅರಣ್ಯ ಕಾಯಿದೆಗಳೂ

ಅನ್ವಯವಾಗುವುದಿಲ್ಲ. 'ರಾಷ್ಟ್ರೀಯ ಅಭಿವೃದ್ಧಿಗಾಗಿ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆ' ಎಂಬುದಾಗಿ ಯೋಜನೆಗಳ ಅನುಷ್ಠಾನವನ್ನು ಸಮರ್ಥಿಸಲಾಗುತ್ತದೆ. ಆದರೆ, ಕೆಲವೇ ಶ್ರೀಮಂತ ಬಂಡವಾಳಶಾಹಿಗಳ ಆದಾಯ ಹೆಚ್ಚಾಗುವುದರಿಂದ ರಾಷ್ಟ್ರದ ಅಭಿವೃದ್ಧಿಯು ಆಗುವುದಿಲ್ಲ. ಸಮಾಜದಲ್ಲಿ ವಾಸಿಸುವ ಕಟ್ಟಕಡೆಯ ವ್ಯಕ್ತಿಯ ಆದಾಯ, ಜೀವನಮಟ್ಟ ಮತ್ತು ಸಂತೃಪ್ತಿ ಹೆಚ್ಚಾದಾಗ ಮಾತ್ರ ನಿಜವಾದ ಅಭಿವೃದ್ಧಿ ಎಂದೆನಿಸುತ್ತದೆ. ಕೆಲವೇ ವರ್ಗದ ಜನರ ಒಳಿತಿಗಾಗಿ ಅಧಿಕ ಜನರ ಹಿತಾಸಕ್ತಿಗಳನ್ನು ಬಲಿಕೊಡುವುದು ನಿಜವಾದ ಅಭಿವೃದ್ಧಿ ಪ್ರಕ್ರಿಯೆಗಳಲ್ಲ ಎಂದು ಹೇಳಬಹುದು. ಸಾವಿರಾರು ಜನರ ಬದುಕಿನ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡು ಕೆಲವೇ ವ್ಯಕ್ತಿಗಳ ಆದಾಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಯೋಜನೆಗಳಿಂದ ಸಮಗ್ರ ಅಭಿವೃದ್ಧಿಯನ್ನು ಸಾಧಿಸಿದಂತಾಗುವುದಿಲ್ಲ. ರಾಷ್ಟ್ರದಲ್ಲಿ ಕೃಷಿ ಚಟುವಟಿಕೆಗಳು ಸಾಂಪ್ರದಾಯಿಕ ಉದ್ಯೋಗದ ಮೂಲವಾಗಿದ್ದು, ಹಿಂದಿನಿಂದಲೂ ಸಂಕೀರ್ಣವಾದ ಜಾತಿ ವ್ಯವಸ್ಥೆಯನ್ನು ಹೊಂದಿದ್ದು ಪ್ರತಿಯೊಂದು ಜಾತಿಯು ತನ್ನದೇ ಆದ ಉಪಕಸುಬುಗಳನ್ನು ನಡೆಸಿಕೊಂಡು ಬರುತ್ತಿದ್ದು ಅವುಗಳು ಒಂದಕ್ಕೊಂದು ಪೂರಕವಾಗಿ ಹೊಂದಿಕೊಂಡಿರುತ್ತದೆ. ಇದರಿಂದಾಗಿ ರಾಷ್ಟ್ರದ ಒಟ್ಟು ಸಾಮಾಜಿಕ ವ್ಯವಸ್ಥೆ ಮತ್ತು ಚೌಕಟ್ಟಿನ ಮಿತಿಯೊಳಗಡೆ ಅಭಿವೃದ್ಧಿಯನ್ನು ಸಾಧಿಸಲು ಯೋಜನೆಗಳನ್ನು ತಯಾರಿಸುವುದು ಇಂದಿನ ಅವಶ್ಯಕತೆಯಾಗಿರುತ್ತದೆ. ಮಹಾತ್ಮ ಗಾಂಧೀಜಿಯವರು ಪ್ರತಿಪಾದಿಸಿದ ಅಭಿವೃದ್ಧಿಯ ಮಂತ್ರಗಳಾದ ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳು, ಕೈಗಾರಿಕೆಗಳು ಮತ್ತು ಗುಡಿಕೈಗಾರಿಕೆಗಳು, ಸ್ವಾವಲಂಬನೆ ಇತ್ಯಾದಿ ಅಭಿವೃದ್ಧಿಯ ಪರಿಕಲ್ಪನೆಗಳು ಹೆಚ್ಚು ಹೊಂದಿಕೆಯಾಗಿ 'ಸರ್ವೋದಯ' ಎಂಬ ಪರಿಕಲ್ಪನೆಯಡಿಯಲ್ಲಿ ಕಾರ್ಯಾರಂಭಿಸಿದರೆ ಮಾತ್ರ ಸಮಾಜದಲ್ಲಿರುವ ಎಲ್ಲರ ಒಳಿತಿಗೆ ನಾಂದಿಯಾಗಬಹುದು. ಇಲ್ಲದಿದ್ದರೆ ಕಾರ್ಲ್ ಮಾರ್ಕ್ಸ್ ಪ್ರತಿಪಾದಿಸಿದಂತೆ ಬಂಡವಾಳಶಾಹಿ ಸಾಮ್ರಾಜ್ಯದಿಂದ ಕೆಲವೇ ಮಂದಿಯ ಅಭಿವೃದ್ಧಿಯಾಗಿ ಸಂಪೂರ್ಣ ವ್ಯವಸ್ಥೆ ನಿರಂತರ ಜಾತಿ ಮತ್ತು ವರ್ಗ ಸಂಘರ್ಷಗಳಿಂದ ತುಂಬಿ ಮನುಕುಲದ ಅವನತಿಗೆ ಮುನ್ನುಡಿಯಾಗಬಹುದು ಎಂಬ ಸತ್ಯ ಪ್ರಸ್ತುತ ಅಧ್ಯಯನದಿಂದ ತಿಳಿದುಬರುತ್ತದೆ.

ಸಲಹೆಗಳು

ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳಿಗೆ ಅನುಗುಣವಾಗಿ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಸಂದರ್ಭಗಳಲ್ಲಿ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿರುವ ಕೆಲವು ಮಹತ್ವದ ಸಲಹೆಗಳನ್ನು ಈ ಕೆಳಗೆ ನೀಡಲಾಗಿರುತ್ತದೆ.

- ಬೃಹತ್ ಯೋಜನೆಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಇನ್ನೊಂದು ರಾಷ್ಟ್ರದ ಯಶಸ್ವಿ ಮಾದರಿಯನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತರುವುದನ್ನು ತಪ್ಪಿಸಬೇಕು. ಆಯಾ ಪ್ರದೇಶಗಳ ಪ್ರಾದೇಶಿಕ ಭಿನ್ನತೆಗಳನ್ನು ಮತ್ತು ವೈಶಿಷ್ಟ್ಯಗಳನ್ನು ಗಣನೆಗೆ ತೆಗೆದುಕೊಂಡು, ಅಲ್ಲಿಯ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು

ಆಧಾರವಾಗಿಟ್ಟುಕೊಂಡು ಜನಸ್ನೇಹಿ ಮತ್ತು ಪರಿಸರಸ್ನೇಹಿ ಯೋಜನೆಗಳನ್ನು ರೂಪಿಸುವುದಕ್ಕೆ ಪ್ರಾಶಸ್ತ್ಯವನ್ನು ನೀಡಬೇಕು.

- ಸ್ಥಳಾಂತರ ಮತ್ತು ಸ್ವಯಂಪ್ರೇರಿತವಲ್ಲದ ಪುನರ್‌ವಸತಿ ಪ್ರಕ್ರಿಯೆಗಳಲ್ಲಿ ತಳಮಟ್ಟದ ಸಮಾಜೋ-ಆರ್ಥಿಕ ಮತ್ತು ಸಾಂಸ್ಕೃತಿಕ ಸಮೀಕ್ಷೆಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಗುಣಮಟ್ಟದ ಪುನರ್‌ವಸತಿಗಳು ಮೂಲತಃ ಸಮಾಜೋ-ಆರ್ಥಿಕ ಸಮೀಕ್ಷೆಗಳ ಚೌಕಟ್ಟಿನ ಆಧಾರದಲ್ಲಿ ರಚಿಸಲ್ಪಟ್ಟಿರುತ್ತದೆ. ಆದುದರಿಂದ ಯೋಜನೆಗಳನ್ನು ಜಾರಿಗೆ ತರುವ ಪ್ರಾಧಿಕಾರವು, ಕಾರ್ಯಾನುಷ್ಠಾನಗೊಳಿಸುವ ಪೂರ್ವದಲ್ಲಿ ವೈಜ್ಞಾನಿಕವಾಗಿ ಸಂತ್ರಸ್ತರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಮೀಕ್ಷೆಗಳನ್ನು ಅರ್ಹ ಸಂಸ್ಥೆಗಳ ಮುಖಾಂತರ ನಿಷ್ಪಕ್ಷಪಾತವಾಗಿ ನಡೆಸಬೇಕು. ಈ ಪ್ರಕ್ರಿಯೆಗಳು ಸಂತ್ರಸ್ತರ ಪುನರ್‌ವಸತಿಗೆ ಸಂಬಂಧಪಟ್ಟಂತೆ ಸಮಗ್ರವಾದ, ಯೋಗ್ಯವಾದ, ಹೊಂದಾಣಿಕೆ ಮಾಡಲು ಸಾಧ್ಯವಾಗುವಂತಹ ಗುಣಮಟ್ಟದ ಪುನರ್‌ವಸತಿ ಯೋಜನೆಗಳನ್ನು ಹಮ್ಮಿಕೊಳ್ಳುವುದಕ್ಕೆ ಅವಕಾಶಗಳನ್ನು ಮಾಡಿಕೊಡುತ್ತದೆ.
- ಸ್ಥಳಾಂತರವನ್ನು ಕನಿಷ್ಟ ಮಟ್ಟಕ್ಕೆ ಸೀಮಿತಗೊಳಿಸುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕು. ಯೋಜನೆಗಳ ಜಾರಿಗಾಗಿ ಕೃಷಿಯೋಗ್ಯ ಭೂಮಿಗಳನ್ನು ಸ್ವಾಧೀನಪಡಿಸದೇ, ಬರಡು ಅಥವಾ ಸರಕಾರಿ ಭೂಮಿಗಳಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಯ ಸಾಧ್ಯತೆಗಳ ಬಗ್ಗೆ ಹೆಚ್ಚು ಗಮನವನ್ನು ನೀಡಬೇಕು.
- ಪ್ರಸ್ತುತ ಭಾರತದಲ್ಲಿ ವಸಾಹತುಶಾಹಿ ವ್ಯವಸ್ಥೆಯು ಜಾರಿಗೆ ತಂದಂತಹ ಭೂಸ್ವಾಧೀನ ಕಾನೂನುಗಳನ್ನು ಭೂಸ್ವಾಧೀನ ಪ್ರಕ್ರಿಯೆಗಳಲ್ಲಿ ಉಪಯೋಗಿಸಲಾಗುತ್ತಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆ ಜಾರಿಯಲ್ಲಿದ್ದರೂ, ಇಲ್ಲಿಯವರೆಗೆ ಜಾರಿಗೆ ಬಂದಂತಹ ಭೂಸ್ವಾಧೀನಕ್ಕೆ ಸಂಬಂಧಪಟ್ಟಂತಹ ತಿದ್ದುಪಡಿ ಮಸೂದೆಗಳಲ್ಲಿಯೂ ವಸಾಹತುಶಾಹಿ ಪಾಳೆಗಾರಿಕೆಯ ನಿಯಮಗಳೇ ಮುಂದುವರಿಸಲ್ಪಡುತ್ತಿದೆ. ಭೂಸ್ವಾಧೀನಪಡಿಸುವ 'ರಾಷ್ಟ್ರದ ವಿಶೇಷ ಅಧಿಕಾರ'ವನ್ನು ಜನಪರ ಹಿತಾಸಕ್ತಿಗಳನ್ನು ಗಣನೆಗೆ ತೆಗೆದುಕೊಂಡು ಬದಲಾಯಿಸಿ, ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಸಂತ್ರಸ್ತರಾಗುವವರು ಪಾಲ್ಗೊಳ್ಳುವಂತಾಗುವ ಕಾನೂನುಗಳನ್ನು ಜಾರಿಗೆ ತರುವುದಕ್ಕೆ ಆಡಳಿತಶಾಹಿ ವ್ಯವಸ್ಥೆ ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಬೇಕು.
- ಯೋಜನೆಯ ಸ್ಥಳಾಂತರ ಮತ್ತು ಪುನರ್‌ವಸತಿಗೆ ಸಂಬಂಧಪಟ್ಟ ಪ್ರಾಧಿಕಾರವು ಸಂತ್ರಸ್ತರ ಭೌತಿಕ ಪುನರ್‌ವಸತಿಗೆ ಮಾತ್ರ ಹೆಚ್ಚಿನ ಆದ್ಯತೆಯನ್ನು ನೀಡಿರುವುದನ್ನು ಅಧ್ಯಯನವು ಕಂಡುಕೊಂಡಿರುತ್ತದೆ. ಇದರ ಜೊತೆಯಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಭಾವನಾತ್ಮಕ ಮತ್ತು ಪರಿಸರಕ್ಕೆ ಆದ್ಯತೆಯನ್ನು ನೀಡಿ ಪುನರ್‌ವಸತಿಯನ್ನು ಕಲ್ಪಿಸುವುದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕು.
- ಅಭಿವೃದ್ಧಿಗೆ ಸಂಬಂಧಪಟ್ಟಂತಹ ಯೋಜನೆಗಳನ್ನು ಜನರ ಮೇಲೆ ಬಲವಂತವಾಗಿ ಹೇರದೇ, ಸ್ಥಳೀಯ ಗ್ರಾಮಸಭೆಗಳಲ್ಲಿ ಯಾವ ಯೋಜನೆ ಸೂಕ್ತವಾಗುತ್ತದೆ ಎಂಬುದನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವ

ವ್ಯವಸ್ಥೆ ಅಸ್ತಿತ್ವಕ್ಕೆ ಬರಬೇಕು. ಆದುದರಿಂದ, ಯೋಜನೆಗಳನ್ನು ರೂಪಿಸುವಾಗ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯತ್‌ಗಳ ಒಪ್ಪಿಗೆ ಪಡೆಯುವುದನ್ನು ಕಡ್ಡಾಯಗೊಳಿಸಬೇಕು.

- ಅಭಿವೃದ್ಧಿ ಯೋಜನೆಗಳಿಂದ ಸ್ಥಳಾಂತರಿಸಲ್ಪಟ್ಟ ಜನರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಏಕಾಏಕಿ ಬದಲಾಗುವುದರಿಂದ ಅವರ ಸಾಮಾಜಿಕ ಮತ್ತು ಆರ್ಥಿಕ ಪುನಶ್ಚೇತನಕ್ಕೆ ಬೇಕಾಗುವ ಚಟುವಟಿಕೆಗಳು ಮತ್ತು ಪುನರ್‌ವಸತಿ ಕೇಂದ್ರಗಳನ್ನು ಒದಗಿಸಿಕೊಟ್ಟು ಸ್ಥಳಾಂತರಿಸಲ್ಪಟ್ಟ ಜನಸಾಮಾನ್ಯರ ದೈನಂದಿನ ಬದುಕಿಗೆ ಹೊಂದಿಕೊಳ್ಳುವ ಹಾಗೆ ಸಹಕರಿಸುವುದು ಮತ್ತು ಅವರ ಮಾನಸಿಕ ನೆಮ್ಮದಿಯನ್ನು ಹೆಚ್ಚಿಸುವುದು ಸರಕಾರದ ಜವಾಬ್ದಾರಿಯಾಗಿರುತ್ತದೆ. ಪುನರ್‌ವಸತಿ ಪ್ರದೇಶಗಳಲ್ಲಿ ಸಾಮಾನ್ಯ ಜನಜೀವನವನ್ನು ನಡೆಸುವುದಕ್ಕೆ ಪೂರಕವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಯಲ್ಲಿ ಅವುಗಳ ಸಮರ್ಪಕ ನಿರ್ವಹಣೆಗೆ ವ್ಯವಸ್ಥೆಗಳನ್ನು ಮಾಡಬೇಕು. ಇದರಿಂದ ತಮ್ಮ ಮೂಲನೆಲೆಗಳಿಂದ ಸ್ಥಳಾಂತರಿಸಲ್ಪಟ್ಟ ಸಂತ್ರಸ್ತರು ತಮ್ಮ ನೋವನ್ನು ಮರೆತು ಉತ್ತಮ ಬದುಕನ್ನು ನಡೆಸುವುದಕ್ಕೆ ಅವಕಾಶವಾಗುತ್ತದೆ.
- ಯೋಜನೆಗಳು ಕಾರ್ಯಗತವಾದ ನಂತರದಲ್ಲಿ ಕೈಗಾರಿಕೆಗಳು ಆರಂಭಗೊಂಡ ಪ್ರದೇಶ, ಅಲ್ಲಿ ವಾಸಿಸುತ್ತಿರುವ ಜನರ ಮೇಲಾಗುವ ಪರಿಣಾಮಗಳು ಮತ್ತು ಪ್ರಭಾವಗಳನ್ನು ಕಾಲಕಾಲಕ್ಕೆ ಸೂಕ್ತವಾಗಿ ಅಧ್ಯಯನ ನಡೆಸುವ ಕೇಂದ್ರಗಳ ಅಗತ್ಯತೆ ಇರುತ್ತದೆ. ಯೋಜನೆಯಿಂದ ಸಂತ್ರಸ್ತರಾಗುವ ಎಲ್ಲರಿಗೂ ಯಾವುದೇ ತಾರತಮ್ಯವನ್ನು ಮಾಡದೇ ಸೂಕ್ತ ಪರಿಹಾರವನ್ನು ವಿಶೇಷವಾಗಿ ನಗದು, ನಿವೇಶನ, ಉದ್ಯೋಗ, ಇತ್ಯಾದಿ ಪರಿಹಾರಗಳು ಮತ್ತು ಶಾಲೆ, ಆರೋಗ್ಯ ಕೇಂದ್ರ, ಮಾರುಕಟ್ಟೆ, ರಸ್ತೆಗಳು, ಒಳಚರಂಡಿ, ಶೌಚಾಲಯ, ವಿದ್ಯುತ್, ನೀರು ಮುಂತಾದ ಮೂಲಭೂತ ಸೌಕರ್ಯಗಳು ದೊರಕಿರುತ್ತದೆಯೇ ಎಂಬುದನ್ನು ಗಮನಿಸಲು ಪ್ರಾಧಿಕಾರದ ಅಧಿಕಾರಿಗಳು ಮತ್ತು ಸಂತ್ರಸ್ತರ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಬೇಕು.
- ಅಭಿವೃದ್ಧಿ ಚಟುವಟಿಕೆಗಳನ್ನು ಪ್ರತಿಭಟಿಸಿ ನಡೆಯುತ್ತಿರುವ ಹೋರಾಟ ಮತ್ತು ಚಳುವಳಿಗಳ ನೇತೃತ್ವ ವಹಿಸಿದವರ ಅಭಿಪ್ರಾಯಗಳನ್ನು ಯಾವುದೇ ಪೂರ್ವಾಗ್ರಹಗಳಿಲ್ಲದೇ ಮುಕ್ತವಾಗಿ ಸರಕಾರ ಆಲಿಸಬೇಕು. ಜನಸಾಮಾನ್ಯರಿಗೆ ಆಗುವ ತೊಂದರೆಗಳನ್ನು ಅರ್ಥೈಸಿಕೊಳ್ಳುವುದು ಸರಕಾರದ ಜವಾಬ್ದಾರಿಯಾಗಿರುತ್ತದೆ. ಚಳುವಳಿ ಮತ್ತು ಹೋರಾಟಗಳನ್ನು ಹತ್ತಿಕ್ಕುವ ಪ್ರಯತ್ನಗಳನ್ನು ನಿಲ್ಲಿಸಿ, ಅವರ ಅಭಿಪ್ರಾಯಗಳು ಮತ್ತು ಬೇಡಿಕೆಗಳು ನ್ಯಾಯೋಚಿತವಾಗಿದ್ದರೆ ಆಲಿಸಿ ಅದಕ್ಕನುಗುಣವಾಗಿ ತನ್ನ ಯೋಜನೆಯ ನೀತಿಗಳನ್ನು ರೂಪಿಸಿದಾಗ ಮಾತ್ರ ಅಭಿವೃದ್ಧಿ ಚಟುವಟಿಕೆಗಳು ಜನಸ್ನೇಹಿಯಾಗುತ್ತದೆ ಎಂಬುದನ್ನು ಸರಕಾರ ಅರಿತುಕೊಳ್ಳಬೇಕು.

- ಜಾಗರೂಕವಾಗಿ ಅಧ್ಯಯನಗಳ ಮೂಲಕ ಯೋಜನೆಗಳನ್ನು ನಿರ್ಧರಿಸುವುದು. ಎಲ್ಲಾ ಹಂತಗಳಲ್ಲಿ ಸಂತ್ರಸ್ತರ ಭಾಗೀದಾರಿಕೆಯನ್ನು ಖಾತರಿಪಡಿಸಬೇಕು. ಭೂರಹಿತ ಮತ್ತು ಕುಶಲಕರ್ಮಿಗಳ ಹಿತಾಸಕ್ತಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಸ್ಥಳಾಂತರ ಪ್ರಕ್ರಿಯೆಯನ್ನು ಪುನರ್‌ವ್ಯಾಖ್ಯಾನಿಸಬೇಕು, ಸಂತ್ರಸ್ತರಿಗೆ ಶಿಕ್ಷಣ ಮತ್ತು ತಾಂತ್ರಿಕ ತರಬೇತಿಗಳನ್ನು ನೀಡಿ ಸ್ವಾವಲಂಬಿಗಳನ್ನಾಗಿ ಮಾಡಬೇಕು. ಪುನರ್‌ವಸತಿಗೆ ಸಂಬಂಧಿಸಿದ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸುವುದು ಮತ್ತು ಭೂಮಿಯ ನಷ್ಟಕ್ಕೆ ಯಾವುದು ಸೂಕ್ತ ಪರಿಹಾರವಾಗುತ್ತದೆಯೆಂದು ವೈಜ್ಞಾನಿಕ ಅಧ್ಯಯನಗಳ ಮೂಲಕ ಕಂಡುಕೊಳ್ಳುವುದು ಸಂತ್ರಸ್ತರ ಸಮಸ್ಯೆಗಳ ಅಗಾಧತೆಯನ್ನು ಕಡಿಮೆಗೊಳಿಸುವುದಕ್ಕೆ ಸಹಕಾರಿಯಾಗುತ್ತದೆ.
- ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಪ್ರದೇಶದ ಜನರೊಂದಿಗೆ ಆ ಯೋಜನೆಗೆ ಸಂಬಂಧಿಸಿದ ಮಾಹಿತಿಗಳನ್ನು ಚರ್ಚಿಸಿ, ಜನರ ಅಭಿಪ್ರಾಯಗಳೇನು? ಸರಕಾರ ಸ್ಥಾಪಿಸುವ ಯೋಜನೆ ಯಾವುದು? ಮತ್ತು ಅದರಿಂದಾಗುವ ಅನುಕೂಲಗಳೇನು? ಯೋಜನೆಯು ಸ್ಥಳೀಯ ಜನರ ಬದುಕನ್ನು ಹೇಗೆ ಉತ್ತಮಪಡಿಸುತ್ತದೆ? ಎಂಬುದನ್ನು ನಾಗರಿಕ ಸಮಾಜಕ್ಕೆ ಅರ್ಥಮಾಡಿಸಬೇಕು.
- ಕೇಂದ್ರ ಪರಿಸರ ಮಂತ್ರಾಲಯ ಎಲ್ಲಾ ಉದ್ದಿಮೆಗಳನ್ನು ಅವುಗಳ ಮಾಲಿನ್ಯ ಸಾಧ್ಯತೆಗಳಿಗನುಸಾರವಾಗಿ ವಿಂಗಡಿಸಿದ್ದು, ಅವುಗಳ ಸ್ಥಾಪನೆಗೆ ಸೂಕ್ತ ಪ್ರದೇಶಗಳನ್ನು ಸೂಚಿಸಿದೆ. ಸಾಧ್ಯವಾದಷ್ಟು ಮಟ್ಟಿಗೆ ಇದರ ಪಾಲನೆಯಾಗಬೇಕು.
- ಪ್ರಸ್ತಾವಿತ ಕೈಗಾರಿಕೆಗಳ ಅನುಷ್ಠಾನದಿಂದಾಗಿ ಆ ಪ್ರದೇಶದ ಪರಿಸರದ ಮೇಲಾಗಬಹುದಾದ ಪರಿಣಾಮಗಳ ಬಗೆಗಿನ ವರದಿಯನ್ನು ಪ್ರಸ್ತುತ ಉದ್ದಿಮೆಯಿಂದ ನೇಮಿಸಲ್ಪಟ್ಟ ಕನ್ಸಲ್ಟೆಂಟ್ ಸಂಸ್ಥೆ ಮಾಡುವುದರ ಬದಲು, ನಾಗರಿಕ ಸಮಾಜದಿಂದ ಸೂಚಿಸಲ್ಪಟ್ಟ ಪರಿಣಿತರ ಸಮಿತಿ ಮಾಡಬೇಕು.
- ಅನುಷ್ಠಾನಕ್ಕೆ ಪೂರ್ವದಲ್ಲಿ ಉದ್ದಿಮೆದಾರರು ಒಪ್ಪಿಕೊಂಡ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
- ಅಭಿವೃದ್ಧಿಯ ಒಟ್ಟು ಮಾನದಂಡಗಳನ್ನು, ಮಾದರಿಗಳನ್ನು ಬಳಸುವಾಗ ಜನಸಾಮಾನ್ಯರ ಕಾಳಜಿ, ಪರಿಸರ ಸಂರಕ್ಷಣೆ, ಸಂಪನ್ಮೂಲಗಳ ಸೂಕ್ತ ಬಳಕೆ, ಆರೋಗ್ಯ, ಶಿಕ್ಷಣ, ಸಹಬಾಳ್ವೆ, ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಬೇಕು.
- ಅಭಿವೃದ್ಧಿ ಯೋಜನೆಗಳಿಂದ ಕೆಲವೊಂದು ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಸೂಕ್ಷ್ಮತೆಗಳು ಅಳಿದು ಹೋಗುವ ಸಾಧ್ಯತೆಗಳಿರುವುದರಿಂದ ಯೋಜನೆಗಳನ್ನು ನಿರ್ಧರಿಸುವವರು ಈ ಬಗ್ಗೆ ಹೆಚ್ಚಿನ ಒತ್ತನ್ನು ನೀಡಬೇಕು.

ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದ ಹೆಚ್ಚಿನ ಸಿದ್ಧಾಂತಗಳು ಬಡತನವನ್ನು ನಿವಾರಿಸುವುದೇ ಪ್ರಥಮ ಆದ್ಯತೆಯನ್ನಾಗಿ ಪರಿಗಣಿಸಿದ್ದರೆ, ಬೃಹತ್ ಉದ್ದಿಮೆಗಳ ಸಂಕೀರ್ಣಗಳ ಸ್ಥಾಪನೆಯಿಂದಾಗುವ

ಬಲವಂತದ ಸ್ಥಳಾಂತರಗಳು, ಅವುಗಳಿಗೆ ವಿರುದ್ಧವಾಗಿರುವ ನಕಾರಾತ್ಮಕ ಪರಿಣಾಮಗಳನ್ನು ಬೀರಿರುವುದನ್ನು ಗಮನಿಸಬಹುದು. ಇದರಿಂದಾಗಿ ಸಂತ್ರಸ್ತರಾದವರ ಜೀವನ ದಯನೀಯ ಪರಿಸ್ಥಿತಿಗೆ ತಳ್ಳಲ್ಪಟ್ಟಿರುವುದು ಜಗತ್ತಿನಾದ್ಯಂತ ಕಂಡುಬರುತ್ತದೆ. ಸಾಂಪ್ರದಾಯಿಕ ಅಭಿವೃದ್ಧಿಯ ಸಿದ್ಧಾಂತಗಳು 'ಮರುಹಂಚಿಕೆಯೊಂದಿಗೆ ಬೆಳವಣಿಗೆ' ಎಂಬ ಆಶ್ವಾಸನೆಗಳನ್ನು ನೀಡಿದ್ದರೂ, ಪ್ರಸ್ತುತ ಅಭಿವೃದ್ಧಿಯ ನೀತಿಗಳು ಅಭಿವೃದ್ಧಿಯ ಫಲಗಳನ್ನು ಎಲ್ಲರಿಗೂ ಸಮಾನ ಹಾಗೂ ನ್ಯಾಯೋಚಿತವಾಗಿ ಹಂಚುವುದರಲ್ಲಿ ವಿಫಲಗೊಂಡಿರುವುದರಿಂದ ಸಮಾಜದ ಆಯ್ದ ಕೆಲವೇ ವರ್ಗ ಅಭಿವೃದ್ಧಿ ಪ್ರಕ್ರಿಯೆಯ ಫಲಗಳನ್ನು ಬಾಚಿಕೊಂಡಿದ್ದರೆ, ಹೆಚ್ಚಿನ ಜನರು ಅದರಿಂದಾಗಿ ನೋವನ್ನೇ ಅನುಭವಿಸಿರುವುದನ್ನು ಲಘುವಾಗಿ ಪರಿಗಣಿಸಲು ಸಾಧ್ಯವಾಗುವುದಿಲ್ಲ. ವಿವಿಧ ಅಭಿವೃದ್ಧಿ ಯೋಜನೆಗಳು ಮತ್ತು ಅಭಿವೃದ್ಧಿಯ ಮಾದರಿಗಳ ಹೆಸರಿನಲ್ಲಿ ದೇಶಾದ್ಯಂತ ಜನರ ಜೀವನ ಮತ್ತು ಬದುಕಿನ ಕ್ರಮಗಳು ದುಸ್ತರಗೊಳ್ಳುತ್ತಿವೆ. ಅಭಿವೃದ್ಧಿ ಯಾರಿಗೆ, ಯಾಕೆ ಮತ್ತು ಹೇಗೆ ಎಂಬ ಪ್ರಶ್ನೆಗಳು ಜನಸಾಮಾನ್ಯರನ್ನು ಕಾಡುತ್ತಿದೆ. ದೊಡ್ಡ ಒಪ್ಪಂದಗಳು, ನೀತಿಗಳು, ಅಭಿವೃದ್ಧಿಯ ಮಾದರಿಗಳು ನಿಜವಾಗಿಯೂ ಅಭಿವೃದ್ಧಿಯನ್ನು ಮಾಡಿದ್ದೇ ಆಗಿದ್ದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 69 ವರ್ಷಗಳೇ ಕಳೆದರೂ ಸಾಮಾನ್ಯ ಜನಜೀವನ ಇನ್ನೂ ಸ್ವಾತಂತ್ರ್ಯಪೂರ್ವದಲ್ಲಿದ್ದ ಹಾಗೆಯೇ ಇರುತ್ತಿರಲಿಲ್ಲ. ಫಲವತ್ತಾದ ಭೂಮಿಯನ್ನು ಕಳೆದುಕೊಂಡ ಜನರ ಮನಸ್ಥಿತಿ ನಂತರ ಸರಿಯಾದ ಮೂಲಸೌಕರ್ಯಗಳೂ ಇಲ್ಲದೇ ಇರುವ ಸ್ಥಳಾಂತರ ಮತ್ತು ಪುನರ್‌ವಸತಿಯ ಜೀವನವನ್ನು ವಿಶ್ಲೇಷಿಸಿದಾಗ ವಿಶೇಷ ಆರ್ಥಿಕ ವಲಯಗಳು ಕೇವಲ ಬಂಡವಾಳಶಾಹಿ ಧೋರಣೆಗಳನ್ನು ಹೊಂದಿದ್ದು ಕೆಲವೇ ಶ್ರೀಮಂತ ವರ್ಗದವರ ಶ್ರೀಮಂತಿಕೆಯನ್ನು ಹೆಚ್ಚಿಸುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಹೆಚ್ಚಿನ ಅತಿ ಯಾಂತ್ರೀಕೃತ ಕಾರ್ಯಗಳು ನೈಸರ್ಗಿಕ ಸಂಪನ್ಮೂಲಗಳನ್ನು ಹಾಳುಗೆಡವಿ ಪರಿಸರ ಅಸಮತೋಲನವನ್ನು ಸೃಷ್ಟಿಸುತ್ತಿದೆ. ಸರಕಾರದ ನೀತಿಗಳಿಗೆ ಅನುಗುಣವಾಗಿ ಬೃಹತ್ ಯೋಜನೆಗಳಿಂದಾಗಿ ಭೂಮಿಯನ್ನು ಕಳೆದುಕೊಳ್ಳುವ ಸಂತ್ರಸ್ತರುಗಳಿಗೆ ಪ್ರಥಮವಾಗಿ ಅಭಿವೃದ್ಧಿಯ ಲಾಭವನ್ನು ಪಡೆಯುವ ಅವಕಾಶವನ್ನು ನೀಡಬೇಕು ಎಂಬ ವಾದವು ಪ್ರಸ್ತುತ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿರುತ್ತದೆ. ಸಂತ್ರಸ್ತರುಗಳನ್ನು ಯೋಜನೆಗಳ ಭಾಗಿದಾರರನ್ನಾಗಿ ಮಾಡುವುದರ ಮುಖಾಂತರ ಅವರುಗಳ ಸಂಕಷ್ಟಗಳನ್ನು ನಿವಾರಿಸಬಹುದಲ್ಲದೇ ಸಂಘರ್ಷಯುತ ವಾತಾವರಣ ಸೃಷ್ಟಿಯಾಗುವುದನ್ನು ತಪ್ಪಿಸಬಹುದು. ಇವುಗಳಲ್ಲದೇ ನ್ಯಾಯಸಮ್ಮತವಾದ, ಜನರಿಗೆ ಒಪ್ಪಿಗೆಯಾಗುವ ಹಾಗೂ ಪರಿಸರಕ್ಕೆ ಪೂರಕವಾಗಿರುವ ಸಹ್ಯ ಅಭಿವೃದ್ಧಿಯ ಮಾದರಿಗಳನ್ನು ಜಾರಿಗೆ ತರುವುದಕ್ಕೆ ಆದ್ಯತೆಯನ್ನು ನೀಡಬೇಕು. ಯೋಜನೆಗಳ ಜಾರಿಯಲ್ಲಿ ಜನರ ಅಭಿಪ್ರಾಯಗಳಿಗೆ ಪ್ರಾಮುಖ್ಯತೆಯನ್ನು ನೀಡಬೇಕು. ಯೋಜನೆಗಳಿಗಾಗಿ ಜನರು ತಮ್ಮ ಭೂಮಿಯನ್ನು ತ್ಯಾಗಮಾಡುವುದರಿಂದಾಗಿ ಮಾತ್ರವೇ ಅಭಿವೃದ್ಧಿ ಸಾಧಿಸುವ ಗುರಿಯನ್ನು ಹೊಂದಿರುವ ಬೃಹತ್ ಯೋಜನೆಗಳು ಜಾರಿಗೆ ಬರಲು ಸಾಧ್ಯವಾಗುತ್ತದೆ ಎಂಬ ಅಂಶವನ್ನು ಯಾವತ್ತೂ ಧಿಕ್ಕರಿಸಬಾರದು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಎರಡೂ ಕರಾವಳಿ ಪ್ರದೇಶಗಳು ಪ್ರಾಕೃತಿಕವಾಗಿ ಅತ್ಯಂತ ಸೂಕ್ಷ್ಮ ಪ್ರದೇಶಗಳು. ಕರ್ನಾಟಕದಲ್ಲಿ ಜನಸಾಂದ್ರತೆ ಅಧಿಕವಾಗಿರುವ ಈ ಪ್ರದೇಶಗಳಲ್ಲಿ ಈಗಾಗಲೇ ಸಾಕಷ್ಟು ಕೈಗಾರಿಕೀಕರಣವಾಗಿದ್ದು, ದೇಶದ ಇತರ ಭಾಗಗಳಿಂದ ಇಲ್ಲಿಗೆ ಜನರ ವಲಸೆ ಮೂಲಸೌಕರ್ಯಗಳ ಮೇಲೆ ಒತ್ತಡ ಹೇರುತ್ತಿದೆ. ಇಲ್ಲಿ ಅಸ್ತಿತ್ವದಲ್ಲಿರುವ ಬೃಹತ್ ಕೈಗಾರಿಕೆಗಳು ಈಗಾಗಲೇ ಇಲ್ಲಿಯ ಸಮೃದ್ಧ ಕೃಷಿ ಭೂಮಿಯನ್ನು ಕಬಳಿಸಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆ ಕಂಡುಕೊಂಡಿದ್ದ ಉದ್ದಿಮೆಯೊಂದರ ಪ್ರವರ್ತಕರು 1992ರ ಒಳಗೆ ತ್ಯಾಜ್ಯವನ್ನು ಸಂಸ್ಕರಿಸಿ ಕೃಷಿ ಚಟುವಟಿಕೆಗಳಿಗೆ ಬಳಸುತ್ತೇವೆ ಎಂದಿದ್ದರೂ ಇಂದಿಗೂ ತನ್ನ ಜಲತ್ಯಾಜ್ಯವನ್ನೆಲ್ಲಾ ಸಮುದ್ರದ ಒಡಲಿಗೆ ಸೇರಿಸಿ ಜಲಮಾಲಿನ್ಯವನ್ನು ಮಾತ್ರವಲ್ಲದೇ ಪರಿಸರ ಮಾಲಿನ್ಯವನ್ನೂ ಹೆಚ್ಚಿಸಿ ಮೀನುಗಾರರ ಮತ್ತು ಸಾಮಾನ್ಯರ ಜನಜೀವನವನ್ನು ದುಸ್ತರಗೊಳಿಸಿರುತ್ತದೆ. ಜಿಲ್ಲೆಯಲ್ಲಿರುವ ಮೂಲಭೂತ ಸೌಕರ್ಯಗಳು ಬೃಹತ್ ಉದ್ದಿಮೆಗಳ ಸ್ಥಾಪನೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿರುತ್ತದೆ. ಆದರೆ, ಇಲ್ಲಿನ ಪರಿಸರಕ್ಕೆ ಹೊಂದಿಕೆಯಾಗುವ, ಸ್ಥಳಾಂತರವನ್ನು ಕನಿಷ್ಟ ಮಟ್ಟಕ್ಕೆ ಸೀಮಿತಗೊಳಿಸುವ ಪಾಶ್ಚಿಮಾತ್ಯ ರಾಷ್ಟ್ರಗಳ ಅಭಿವೃದ್ಧಿಯ ಮಾದರಿಗಳನ್ನು ಅಳವಡಿಸದೇ ಪರಿಸರಕ್ಕೆ ಪೂರಕವಾದ, ಜನಸ್ನೇಹಿ, ಸಹ್ಯ ಅಭಿವೃದ್ಧಿಯ ಮಾದರಿಗಳಿಗೆ ಅನುಗುಣವಾಗಿ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟರೆ ಸಂತ್ರಸ್ತರ ಸಮಸ್ಯೆಗಳನ್ನು ಕನಿಷ್ಟ ಪ್ರಮಾಣಕ್ಕೆ ಸೀಮಿತಗೊಳಿಸಬಹುದು. ಪಾಶ್ಚಿಮಾತ್ಯ ಮಾದರಿಗಳನ್ನು ಅಭಿವೃದ್ಧಿಯ ಚಟುವಟಿಕೆಗಳಿಗೆ ಕುರುಡಾಗಿ ಅಳವಡಿಸಿಕೊಂಡರೆ ಒಂದು ದಿನ ನಾವೆಲ್ಲರೂ ನಮ್ಮದಲ್ಲದ ಪರಿಸರದಲ್ಲಿ ನಮ್ಮದಲ್ಲದ ದಿನಗಳನ್ನು ನಡೆಸಬೇಕಾದ ಪ್ರಮೇಯ ಸೃಷ್ಟಿಯಾಗುತ್ತದೆ. ಆದುದರಿಂದ, ನಮ್ಮ ಸುತ್ತಮುತ್ತಲಿನ ಅಭಿವೃದ್ಧಿ ಚಟುವಟಿಕೆಗಳ ಸೂಕ್ಷ್ಮವಾದ ಅಧ್ಯಯನವನ್ನು ನಡೆಸಿ ಅಭಿವೃದ್ಧಿ ಪ್ರಕ್ರಿಯೆಗಳು ನಮಗೆ ಮತ್ತು ನಮ್ಮ ಪರಿಸರಕ್ಕೆ ಪೂರಕವಾಗಿರುತ್ತದೆಯೇ ಎನ್ನುವುದನ್ನು ಶೀಘ್ರವಾಗಿ ಗಮನಿಸಬೇಕಾಗಿದೆ ಹಾಗೂ ಅದಕ್ಕೆ ತಕ್ಕ ಪರಿಹಾರಗಳನ್ನು ನಾವೇ ಕಂಡುಕೊಳ್ಳಬೇಕಾಗುತ್ತದೆ.

ಪರಾಮರ್ಶನ ಗ್ರಂಥಗಳು

ಪರಾಮರ್ಶನಕ್ಕೊಳಪಡಿಸಿದ ಗ್ರಂಥಗಳು

1. ಅಜ್ಮಲ್ ಹುಸೇನ್ (2007), 'ಅಂಡರ್‌ಸ್ಟ್ಯಾಂಡಿಂಗ್ ಪಾಪ್ಯುಲೇಷನ್ ಡಿಸ್‌ಪ್ಲೇಸ್‌ಮೆಂಟ್ – ಆ್ಯನ್ ಓವರ್‌ವ್ಯೂ', ಇಕ್ವಾಫೈ ಬುಕ್ಸ್, ದ ಇಕ್ವಾಫೈ ಯುನಿವರ್ಸಿಟಿ ಪ್ರೆಸ್, ಹೈದರಾಬಾದ್, ಇಂಡಿಯಾ.
2. ಅಮರ್ತ್ಯ ಸೇನ್ (2000), 'ಡೆವಲಪ್‌ಮೆಂಟ್ ಆ್ಯಸ್ ಫ್ರೀಡಮ್', ಒಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.
3. ಅಮರ್ತ್ಯ ಸೇನ್, ಜೀನ್ ಡ್ರೀಸ್, (1999), 'ಒಮ್ನಿಬಸ್', ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.
4. ಆರ್.ಕೆ. ಸಪ್ರು, (2003), 'ಡೆವಲಪ್‌ಮೆಂಟ್ ಎಡ್‌ಮಿನಿಸ್ಟ್ರೇಷನ್', ಸ್ಟರ್ಲಿಂಗ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.
5. ಇನಾಕ್ಷಿ ಗಂಗೂಲಿ ತುಕ್ರಾಲ್, (1992), "ಬಿಗ್ ಡ್ಯಾಮ್ಸ್ ಡಿಸ್‌ಪ್ಲೇಸ್‌ಡ್ ಪೀಪಲ್ : ರಿವರ್ಸ್ ಆಫ್ ಸೊರ್ರೋ, ರಿವರ್ಸ್ ಆಫ್ ಚೇಂಜ್", ನ್ಯೂಡೆಲ್ಲಿ, ಸೇಜ್ ಪಬ್ಲಿಕೇಷನ್ಸ್.
6. ಎ.ಪಿ.ಜೆ. ಅಬ್ದುಲ್ ಕಲಾಂ, ರಾಜನ್ ವೈ.ಎಸ್., (1998), 'ಎ ವಿಷನ್ ಫಾರ್ ದ ನ್ಯೂ ಮಿಲೇನಿಯಮ್', ವೈಕಿಂಗ್ ಪೆಂಗ್ವಿನ್ ಬುಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ.
7. ಕಾಮೇಶ್ವರ ಚೌಧರಿ, (1999), ಗ್ಲೋಬಲೈಸೇಶನ್, ಗವರ್‌ನೆನ್ಸ್ ಎಂಡ್ ಡೆವಲಪ್‌ಮೆಂಟ್ ಇನ್ ಇಂಡಿಯಾ(ಸಂ.), ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.
8. ಕಾರ್ವೆ, ಐರಾವತಿ, ಜೈ ನಿಂಬಾರ್‌ಕರ್, (1969), "ಎ ಸರ್ವೆ ಆಫ್ ದ ಪೀಪಲ್ ಡಿಸ್‌ಪ್ಲೇಸ್‌ಡ್ ಥ್ರೂ ಕೊಯ್ನ ಡ್ಯಾಮ್", ಡೆಕ್ಕನ್ ಕಾಲೇಜ್ ಪೋಸ್ಟ್ ಗ್ರಾಜುವೇಟ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಪೂನಾ.
9. ಕಾಸಾಸ್ ಎಂ., (1980) 'ಎನ್‌ವಿರಾನ್‌ಮೆಂಟ್ ಆ್ಯಸ್ ಕ್ವೆಸ್ಟ್ ಆಫ್ ವಾಟರ್ ರಿಸೋರ್‌ಸಸ್ ಡೆವಲಪ್‌ಮೆಂಟ್' ಇನ್ ಅಸೀತ್ ಕೆ. ಬಿಸ್ವಾಸ್(ಸಂ.), ಎನ್‌ವಿರಾನ್‌ಮೆಂಟಲ್ ಇಂಪ್ಲಿಕೇಶನ್ಸ್ ಆಫ್ ವಾಟರ್ ಡೆವಲಪ್‌ಮೆಂಟ್ ಫಾರ್ ಡೆವಲಪಿಂಗ್ ಕಂಟ್ರೀಸ್, ಆಕ್ಸ್‌ಫರ್ಡ್ ಪೆರ್ಗಮನ್ ಪ್ರೆಸ್, ಲಂಡನ್.
10. ಕ್ಲಾಡ್ ಆಲ್ವರಿಸ್, ರಮೇಶ್ ಬಿಲ್ಲೋರಿ, (1998), "ಡ್ಯಾಮಿಂಗ್ ದ ನರ್ಮದಾ", ನಟರಾಜ್ ಪಬ್ಲಿಷರ್ಸ್, ಡೆಹ್ರಾಡೂನ್.
11. ಗುರುರಾಜ್ ಭಟ್ (1975), 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಎಂಡ್ ಕಲ್ಚರ್', ಪಬ್ಲಿಷ್‌ಡ್ ಬೈ ಗುರುರಾಜ್ ಭಟ್, ಮಣಿಪಾಲ್ ಪವರ್ ಪ್ರೆಸ್, ಮಣಿಪಾಲ್.
12. ಚಂದ್ರಶೇಖರ ಟಿ.ಆರ್., (1998), 'ಅಮರ್ತ್ಯ ಸೇನ್‌ರ ಅಭಿವೃದ್ಧಿ ಅಧ್ಯಯನಗಳು', ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.
13. ಚಂದ್ರ ಪೂಜಾರಿ ಎಂ., (2010), 'ಯಾಕೀಗ ಭೂಮಿ ಪ್ರಶ್ನೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
14. ಚಂದ್ರ ಪೂಜಾರಿ ಎಂ., (2010), 'ಸಮುದಾಯ ಮತ್ತು ಸಹಭಾಗಿತ್ವ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
15. ಚಂದ್ರ ಪೂಜಾರಿ, (1998), 'ಪರಿಸರ ಮತ್ತು ಅಭಿವೃದ್ಧಿ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
16. ಚಂದ್ರ ಪೂಜಾರಿ ಎಂ., ನಿತ್ಯಾನಂದ ಬಿ. ಶೆಟ್ಟಿ (2008), ಕರಾವಳಿ ಕರ್ನಾಟಕದ ಕೋಮುವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

17. ಚಂದ್ರ ಪೂಜಾರಿ ಎಂ. (2009), 'ಸಂಶೋಧನೆ : ಏನು? ಏಕೆ? ಹೇಗೆ?', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

18. ಚಂದ್ರ ಪೂಜಾರಿ ಎಂ. (2005), 'ಸಂಶೋಧಕರು ಮತ್ತು ಕ್ಷೇತ್ರಕಾರ್ಯ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

19. ಚಂದ್ರಶೇಖರಯ್ಯ ಕೆ. (1966), "ರೀಹೆಬಿಲಿಟೇಷನ್ ಆ್ಯಂಡ್ ಸೋಷಿಯಲ್ ರೀಅಡ್ಜೆಸ್ಟ್‌ಮೆಂಟ್ ಇನ್ ದ ತುಂಗಭದ್ರಾ ವಾಟರ್ ಸ್ಪ್ರೆಡ್ ಏರಿಯಾ", ಮಿಮಿಯೊ, ಧಾರವಾಡ, ಕರ್ನಾಟಕ ಯೂನಿವರ್ಸಿಟಿ.

20. ಜಾನ್ ಡಬ್ಲ್ಯು. ಬೆಸ್ಟ್ ಎಂಡ್ ಜೇಮ್ಸ್ ವಿ. ಕಾಹ್ನ್, (2006), "ರಿಸರ್ಚ್ ಇನ್ ಎಜ್ಯುಕೇಶನ್", ಪ್ರೆಂಟೈಸ್–ಹಾಲ್ ಆಫ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಪಬ್ಲಿಕೇಷನ್, ನ್ಯೂಡೆಲ್ಲಿ.

21. ಜಾನ್ ಹ್ಯಾರಿಸ್, (2001), 'ಡಿಪೊಲಿಟಿಸೈರಿಝಿಂಗ್ ಡೆವಲಪ್‌ಮೆಂಟ್', ಲೆಫ್ಟ್‌ವರ್ಡ್ ಬುಕ್ಸ್, ನ್ಯೂಡೆಲ್ಲಿ.

22. ಜಿ.ವಿ.ಜೋಷಿ ಮತ್ತು ಸುಧೀರ್‌ರಾಜ್, (2009), 'ಡೆವಲಪ್‌ಮೆಂಟ್ ಪಾಸಿಬಿಲಿಟೀಸ್ ಇನ್ ಕೋಸ್ಟಲ್ ಕರ್ನಾಟಕ', ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಕೋಸ್ಟಲ್ ಕರ್ನಾಟಕ, ಜಸ್ಟಿಸ್ ಕೆ.ಎಸ್.ಹೆಗ್ಡೆ ಇನ್ಸ್ಟಿಟ್ಯೂಟ್ ಆಫ್ ಮೆನೇಜ್‌ಮೆಂಟ್.

23. ಜೀನ್ ಡ್ರೀಜ್, ಮೀರಾ ಸಾಮ್ಸನ್, ಸತ್ಯಜಿತ್ ಸಿಂಗ್ (ಸಂ) (1997), "ಡ್ಯಾಮ್ ಎಂಡ್ ದ ನೇಷನ್", ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.

24. ಜೆನ್ ನೆಡರ್‌ವಿನ್ ಪೀಟರ್‌ಸೆ, (1997), 'ಡೆವಲಪ್‌ಮೆಂಟ್ ಥಿಯರಿ – ರೀಕನ್‌ಸ್ಟ್ರಕ್ಷನ್, ಡೀಕನ್‌ಸ್ಟ್ರಕ್ಷನ್', ವಿಸ್ತಾರ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

25. ಜೋಷಿ ಬಿ.ಎಲ್., (1982), "ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್", ಪರಿಮಳ ಪ್ರಕಾಶನ, ಔರಂಗಾಬಾದ್.

26. ಜೋಷಿ, ವಿದ್ಯುತ್, (1987), 'ಸಬ್‌ಮರ್ಜಿಂಗ್ ವಿಲೇಜಸ್ : ಪ್ರಾಬ್ಲಮ್ಸ್ ಆ್ಯಂಡ್ ಪ್ರಾಸ್ಪೆಕ್ಟ್ಸ್', ಅಜಂತಾ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

27. ಡಾರೆನ್ ಎಕಮೊಗ್ಲು (1980), ಇಂಟ್ರಡಕ್ಷನ್ ಟು ಮಾಡರ್ನ್ ಎಕನಾಮಿಕ್ ಗ್ರೋತ್, ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್ ನ್ಯೂಜೆರ್ಸಿ.

28. ಡಾ. ಆರ್. ಜಾನಕಿ ರಾವ್(2012) ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್ – ಎ ಕೇಸ್ ಸ್ಟಡಿ, ಆಕಾಂಕ್ಷ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ.

29. ತನೇಜ ಎಂ.ಎಲ್. ಮತ್ತು ಮಯ್ಯರ್ ಆರ್. ಎಂ., (2000) 'ಎಕನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಎಂಡ್ ಪ್ಲಾನಿಂಗ್', ವಿಶಾಲ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ.

30. ದಾಸ್ ಎ.ಕೆ. ಆ್ಯಂಡ್ ಎಸ್.ಕೆ. ಬ್ಯಾನರ್ಜಿ, (1962), "ಇಂಪ್ಯಾಕ್ಟ್ ಆಫ್ ಇಂಡಸ್ಟ್ರಿಯಲೈಝೇಷನ್ ಆನ್ ದ ಲೈಫ್ ಆಫ್ ದ ಟ್ರೈಬಲ್ಸ್ ಆಫ್ ವೆಸ್ಟ್‌ಬೆಂಗಾಲ್", ಟ್ರೈಬಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್, ಕಲ್ಕತ್ತಾ.

31. ದೇಬರಾ ಇಡೆ (2006), 'ಡೆವಲಪ್‌ಮೆಂಟ್ ಮೆಥಡ್ಸ್ ಎಂಡ್ ಎಪ್ರೋಚಸ್ – ಕ್ರಿಟಿಕಲ್ ರಿಫ್ಲೆಕ್ಸನ್ಸ್', ರಾವತ್ ಪಬ್ಲಿಕೇಷನ್ಸ್, ಆಗ್ರಾ.

32. ನಾರ್ಮನ್ ಎಸ್. ಬುಕನಾನ್ (1946), ಡೆಲಿಬರೇಟ್ ಇಂಡಸ್ಟ್ರಿಯಲೈಸೇಷನ್ ಫಾರ್ ಹೈಯರ್ ಇನ್‌ಕಮ್, ಎಕನಾಮಿಕ್ ಜರ್ನಲ್, ಡಿಸಂಬರ್ ವಾಲ್ಯೂಮ್ 56, ಲಂಡನ್.
33. ನಿ. ಮುರಾರಿ ಬಲ್ಲಾಳ್, (1996), 'ಯಾರದೋ ಮುಖ, ಯಾರದೋ ದೇಹ – ಕುದುರೆಮುಖ', ಗುರುವಾಯನಕೆರೆ ನಾಗರಿಕ ಸೇವಾ ಟ್ರಸ್ಟ್, ಗುರುವಾಯನಕೆರೆ.
34. ನೆಲ್ಸನ್ ಆರ್.ಆರ್. (1956) ಎ ಥಿಯರಿ ಆಫ್ ಲೋ ಲೆವೆಲ್ ಇಕ್ವಿಲಿಬ್ರಿಯಮ್ ಟ್ರ್ಯಾಪ್, ಎ.ಇ.ಆರ್, ಡಿಸೆಂಬರ್.
35. ಪರಶುರಾಮನ್ ಎಸ್. (1999), 'ದ ಡೆವಲಪ್‌ಮೆಂಟಲ್ ಡಿಲೇಮಾ', ಮೆಕ್‌ಮಿಲನ್ ಪ್ರೆಸ್, ಲಂಡನ್.
36. ಪಿ. ಹ್ಯಾರಿಸನ್, (2003), 'ಥರ್ಡ್ ವರ್ಲ್ಡ್ ಟುಮಾರೋ', ಸ್ಟರ್ಲಿಂಗ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.
37. ಪೌಲ್ ಗ್ರೀಡಿ ಪಿ., ಜೋನಾಥನ್ ಎನ್ಸಾರ್, (2005) 'ರೀಇನ್‌ವೆಂಟಿಂಗ್ ಡೆವಲಪ್‌ಮೆಂಟ್, ಟ್ರಾನ್ಸ್‌ಲೇಟಿಂಗ್ ರೈಟ್ಸ್ ಬೇಸ್‌ಡ್ ಎಪ್ರೋಚಸ್, ಝಡ್ ಬುಕ್ಸ್, ಲಂಡನ್.
38. ಫೆರ್ನಾಂಡೀಸ್, ವಾಲ್ಟರ್ ಎಂಡ್ ಮಹಮ್ಮದ್ ಆಸಿಫ್(1997) ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್ ಇನ್ ಒರಿಸ್ಸಾ, 1951 ಟು 1995, ಎ ಡಾಟಾ ಬೇಸ್‌ಡ್ ಒನ್ ದ ಎಕ್ಸ್‌ಟೆಂಟ್ ಎಂಡ್ ನೇಚರ್, ನ್ಯೂಡೆಲ್ಲಿ, ಇಂಡಿಯನ್ ಸೋಶಿಯಲ್ ಇನ್‌ಸ್ಟಿಟ್ಯೂಟ್.
39. ಬಾರ್ಬನೆ ಡಿ'ಸೋಜ, ದಾಕ್ಷಾಯಿಣಿ ಮದನ್‌ಗೋಪಾಲ್, (2010), "ರೆಸ್‌ಪೊಂಡಿಂಗ್ ಟು ಡೆವಲಪ್‌ಮೆಂಟ್ – ಇನ್‌ಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್", ಪಬ್ಲಿಷ್‌ಡ್ ಬೈ ಬುಕ್ಸ್ ಫಾರ್ ಚೇಂಜ್, ಬೆಂಗಳೂರು.
40. ಮನಿಷ್‌ಕುಮಾರ್ ವರ್ಮ, (2004), 'ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಸೆಟ್ಲ್‌ಮೆಂಟ್', ರಾವತ್ ಪಬ್ಲಿಕೇಷನ್, ಜೈಪುರ್ ಎಂಡ್ ನ್ಯೂಡೆಲ್ಲಿ.
41. ಮಾಧವ ಗಾಡ್ಗಿಳ್, ರಾಮಚಂದ್ರ ಗುಹಾ, (1995), "ಇಕಾಲಜಿ ಎಂಡ್ ಇಕ್ವಿಟಿ", ರೌಟ್‌ಲೆಡ್ಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.
42. ಮುತ್ತಯ್ಯ ಬಿ.ಸಿ. ಮತ್ತು ಮಾಥೂರ್ ಜೆ.ಎಸ್., (1975), "ರೀಹೆಬಿಲಿಟೇಷನ್ ಆಫ್ ಡಿಸ್‌ಪ್ಲೇಸ್ಡ್ ವಿಲೇಜರ್ಸ್, ಎ ಸೋಷಿಯೋ–ಎಕನಾಮಿಕ್ ಎಂಡ್ ಎಟಿಟ್ಯೂಡಿನಲ್ ಸ್ಟಡಿ ಇನ್ ಅನ್ ಎಗ್ರೋ–ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್ ಇನ್ ರೂರಲ್ ಆಂಧ್ರಪ್ರದೇಶ್", ಪಬ್ಲಿಷ್‌ಡ್ ಬೈ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಕಮ್ಯೂನಿಟಿ ಡೆವಲಪ್‌ಮೆಂಟ್, ಹೈದರಾಬಾದ್., ಸ್ಪಾನ್‌ಸರ್ಡ್ ಬೈ ಫೋರ್ಡ್ ಫೌಂಡೇಶನ್, ನ್ಯೂಡೆಲ್ಲಿ.
43. ಮೈಕೆಲ್ ಸೆರ್ನ್ಯಾ, (1999)"ವೈ ಎಕನಾಮಿಕ್ ಎನಾಲಿಸಿಸ್ ಈಸ್ ಎಸೆನ್ಸಿಯಲ್ ಟು ರಿಸೆಟ್ಲ್‌ಮೆಂಟ್, ಎ ಸೋಶಿಯಾಲಜಿಸ್ಟ್ ವ್ಯೂ". ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟನ್ ಡಿಸಿ.
44. ಮೋಹನಕೃಷ್ಣ ರೈ ಕೆ., (1999), 'ಪರಿಸರದ ಚಳುವಳಿಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
45. ಮ್ಯಿಂಟ್ ಎಚ್.ಎಲ್.(1971) ಎಕನಾಮಿಕ್ಸ್ ಆಫ್ ಡೆವಲಪ್‌ಮೆಂಟ್ ಎಂಡ್ ಪ್ಲಾನಿಂಗ್, ವಿಶಾಲ್ ಪಬ್ಲಿಷಿಂಗ್ ಕಂಪೆನಿ, ನ್ಯೂಡೆಲ್ಲಿ.

46. ರಗ್ನಾರ್ ನರ್ಕ್ಸ್ (1961) ಪ್ರಾಬ್ಲಮ್ಸ್ ಆಫ್ ಕ್ಯಾಪಿಟಲ್ ಫಾರ್ಮೇಷನ್ ಇನ್ ಅಂಡರ್‌ಡೆವಲಪ್‌ಡ್ ಕಂಟ್ರೀಸ್, ಆಕ್ಸ್‌ಫರ್ಡ್ ಯುನಿವರ್ಸಿಟಿ, ನ್ಯೂಯಾರ್ಕ್.

47. ರಜನಿ ಕೊಥಾರಿ (1988), 'ಸ್ಟೇಟ್ ಎಗೈನ್‌ಸ್ಟ್ ಡೆಮಾಕ್ರಸಿ : ಇನ್‌ಸರ್ಚ್ ಆಫ್ ಹ್ಯೂಮನ್ ಗವರ್ನೆನ್ಸ್', ಅಜಂತಾ ಪಬ್ಲಿಷರ್ಸ್, ನ್ಯೂಡೆಲ್ಲಿ.

48. ರಜನಿ ಕೊಥಾರಿ (1998) (ಸಂ.), "ರೀಥಿಂಕಿಂಗ್ ಡೆವಲಪ್‌ಮೆಂಟ್ ಇನ್ ಸರ್ಚ್ ಆಫ್ ಹ್ಯೂಮನ್ ಆಲ್ಟರ್‌ನೇಟಿವ್ಸ್", ಅಜಂತ ಪಬ್ಲಿಕೇಶನ್ಸ್, ನ್ಯೂಡೆಲ್ಲಿ.

49. ರಜನಿ ಕೊಥಾರಿ, (2000), 'ಪಾಲಿಟಿಕ್ಸ್ ಇನ್ ಇಂಡಿಯಾ', ಓರಿಯಂಟ್ ಬ್ಲ್ಯಾಕ್‌ಸ್ವ್ಯಾನ್ ಪ್ರೈವೇಟ್ ಲಿಮಿಟೆಡ್, ನ್ಯೂಡೆಲ್ಲಿ.

50. ರಮೇಶ್ ಮಂಗಲೇಕರ್, (2009), 'ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಷನ್, ಅನು ಪಬ್ಲಿಷರ್ಸ್, ಮೀರತ್.

51. ರಾಬರ್ಟ್ ಎಷರ್ ಎಂಡ್ ಅರ್ಥರ್ ಜೆ. ವೋಷಸ್, (2001), 'ಡೆವಲಪ್‌ಮೆಂಟ್ ಆಫ್ ದ ಎಮರ್ಜಿಂಗ್ ಕಂಟ್ರೀಸ್', ಎನ್ ಎಜೆಂಡಾ ಫಾರ್ ರೀಸರ್ಚ್, ದ ಬ್ರೂಕಿಂಗ್ ಇನ್‌ಸ್ಟಿಟ್ಯೂಶನ್, ವಾಷಿಂಗ್‌ಟನ್ ಡಿ.ಸಿ.

52. ರೆಡ್ಡಿ, ಐ.ಯು.ಬಿ., (1992), "ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಶನ್", ಮಿತ್ತಲ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

53. ಲಾಯ್ಡ್ ರೂಡಾಲ್ಫ್, ಸೂಸಾನ್ ಹೋಬರ್ ರೂಡಾಲ್ಫ್, (1987), 'ಇನ್‌ಪರ್‌ಸ್ಯೂಟ್ ಆಫ್ ಲಕ್ಷ್ಮಿ – ದ ಪೊಲಿಟಿಕಲ್ ಎಕಾನಮಿ ಆಫ್ ದ ಇಂಡಿಯನ್ ಸ್ಟೇಟ್', ಓರಿಯೆಂಟ್ ಲಾಂಗ್‌ಮೆನ್ ಲಿಮಿಟೆಡ್, ಬಾಂಬೆ.

54. ಲಿಪಾಲ್ಡೊ ಜೋಸ್ ಬಾರ್ಟಲೋಮ್, ಕ್ರಿಸ್ ಡಿ ವೇಟ್, ಹರ್ಷ ಮಂದಾರ್ ಮತ್ತು ವಿಜಯ್‌ಕುಮಾರ್ ನಾಗರಾಜ್ (2000), 'ಡಿಸ್‌ಪ್ಲೇಸ್‌ಮೆಂಟ್, ರೀಹೆಬಿಲಿಟೇಷನ್, ರಿಪರೇಷನ್ ಆ್ಯಂಡ್ ಡೆವಲಪ್‌ಮೆಂಟ್', ಪ್ರಿಪೇರ್ಡ್ ಫಾರ್ ದ ವರ್ಲ್ಡ್ ಕಮಿಷನ್ ಆನ್ ಡ್ಯಾಮ್ಸ್, ಸ್ಪಾನ್ಸರ್ಡ್ ಬೈ ಸೆಕ್ರೇಟರಿಯೇಟ್ ಆಫ್ ದ ವರ್ಲ್ಡ್ ಕಮಿಷನ್ ಆನ್ ಡ್ಯಾಮ್ಸ್, ಕೇಪ್‌ಟೌನ್, ಸೌತ್‌ಆಫ್ರಿಕಾ.

55. ಲೈಬೆನ್‌ಸ್ಟೈನ್ ಹೆನ್ರಿ (1957) ಎಕನಾಮಿಕ್ಸ್ ಬ್ಯಾಕ್‌ವರ್ಡ್‌ನೆಸ್ ಎಂಡ್ ಎಕನಾಮಿಕ್ ಗ್ರೋಥ್, ಸ್ಟಡೀಸ್ ಇನ್ ದ ಥಿಯರಿ ಆಫ್ ಎಕನಾಮಿಕ್ ಡೆವಲಪ್‌ಮೆಂಟ್.

56. ವಸುದಾ ಧಗಮಾವರ್, ಸುಬ್ರತಾ ಡೇ, ನಿಖಿಲ್ ವರ್ಮ (ಸಂ) (2003), ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಎಂಡ್ ಡಿಸ್‌ಪ್ಲೇಸ್‌ಮೆಂಟ್, ದ ಪೀಪಲ್ ಆಫ್ ಕೊರ್ಬಾ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

57. ವಾಸುದೇವ ರಾವ್ ಡಿ., (2000), 'ಡೆವಲಪ್‌ಮೆಂಟ್ ವಿದ್ ಹ್ಯೂಮನ್ ಟಚ್', ಅಟ್ಲಾಂಟಿಕ್ ಪಬ್ಲಿಷರ್ಸ್ ಎಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ.

58. ವಿಗಾಸ್ ಫಿಲಿಪ್ (1987) "ದ ಹಿರಾಕುಡ್ ಡ್ಯಾಂ, ಜಸ್ಟಿಸ್ ಥರ್ಟಿ ಇಯರ್ಸ್ ಆಫ್ಟರ್", ಮಲ್ಟಿಪಲ್ ಆ್ಯಕ್ಷನ್ ರೀಸರ್ಚ್ ಗ್ರೂಪ್, ನ್ಯೂಡೆಲ್ಲಿ.

59. ವಿದ್ಯಾರ್ಥಿ ಎಲ್.ಪಿ., ರಾಯ್ ಬಿ.ಕೆ. (1977), 'ಟ್ರೈಬಲ್ ಕಲ್ಚರ್ ಆಫ್ ಇಂಡಿಯಾ', ಕಾನ್ಸೆಪ್ಟ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

60. ವಿದ್ಯಾರ್ಥಿ ಎಲ್.ಪಿ (1970). 'ಸೋಷಿಯೋ-ಕಲ್ಚರಲ್ ಇಂಪ್ಲಿಕೇಷನ್ಸ್ ಆಫ್ ಇಂಡಸ್ಟ್ರಿಯಲೈಝೇಷನ್ ಇನ್ ಇಂಡಿಯಾ – ಎ ಕೇಸ್ ಸ್ಟಡಿ ಆಫ್ ಟ್ರೈಬಲ್ ಬಿಹಾರ್', ಪ್ಲ್ಯಾನಿಂಗ್ ಕಮಿಷನ್, ರಿಸರ್ಚ್ ಪ್ರೋಗ್ರಾಮ್ ಕಮಿಟಿ, ನ್ಯೂಡೆಲ್ಲಿ.

61. ವಂದನ ಶಿವ, (1993). "ಇಂಪವರಿಷ್‌ಮೆಂಟ್ ಆಫ್ ದ ಎನ್ವಿರಾನ್‌ಮೆಂಟ್ : ವುಮೆನ್ ಎಂಡ್ ಚಿಲ್ಡ್ರನ್, ಲಾಸ್ಟ್ ಮೈಸ್", ನ್ಯೂಡೆಲ್ಲಿ.

62. ವಂದನ ಶಿವ (1993). "ಎಕೋಫೆಮಿನಿಸಂ, ಕೈಲ್ ಫಾರ್ ವುಮೆನ್", ನ್ಯೂಡೆಲ್ಲಿ.

63. ವಂದನ ಶಿವ, (1991). 'ಎಕಾಲಜಿ ಆ್ಯಂಡ್ ದ ಪಾಲಿಟಿಕ್ಸ್ ಆಫ್ ಸರ್‌ವೈವಲ್', ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

64. ಶಿವ ಸಿ. ಧಕಲ್ (2009). 'ಎ ರಿಪೋರ್ಟ್ ಆಫ್ ಪೀಪಲ್ಸ್ ಆಡಿಟ್ ಆಫ್ ಎಸ್.ಈ.ಝಡ್.', ಕರ್ನಾಟಕ, ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್, ಮುಂಬಯಿ.

65. ಶ್ರೀವಾಸ್ತವ, (1998) (ಸಂ) ದ ಡೆವಲಪ್‌ಮೆಂಟಲ್ ಡಿಬೇಟ್,ಕ್ರಿಟಿಕಲ್ ಪರ್‌ಸ್ಪೆಕ್ಟಿವ್ಸ್, ರಾವತ್ ಪಬ್ಲಿಕೇಷನ್ಸ್, ಜೈಪುರ.

66. ಶೂಮಾಕರ್ ಇ.ಎಫ್. (1973) ಸ್ಮಾಲ್ ಈಸ್ ಬ್ಯೂಟಿಫುಲ್, ಬ್ಲಾಂಡ್ ಎಂಡ್ ಬ್ರಿಕ್ಸ್, ಲಂಡನ್.

67. ಶಂಕರ್ ವೆಂಕಟೇಶನ್(2007). ಇಂಡಸ್ಟ್ರಿಯಲ್ ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಹೆಬಿಲಿಟೇಷನ್, ಅನು ಪಬ್ಲಿಷರ್ಸ್, ಮೀರತ್.

68. ಸತ್ಯನಾರಾಯಣ ಜಿ.(1999) ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಎಂಡ್ ರೀಸೆಟ್ಲ್‌ಮೆಂಟ್, ರಾವತ್ ಪಬ್ಲಿಕೇಷನ್, ನ್ಯೂಡೆಲ್ಲಿ.

69. ಸಾಯಿನಾಥ ಪಿ., (2004). "ಎವರಿವನ್ ಲವ್ಸ್ ಎ ಗುಡ್ ಡ್ರೌಟ್", ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

70. ಸಾವಂತ್ ಪಿ.ಆರ್. (1985). 'ರಿವರ್ ಡ್ಯಾಂ ಕನ್‌ಸ್ಟ್ರಕ್ಷನ್ ಆ್ಯಂಡ್ ರೀಸೆಟ್ಲ್‌ಮೆಂಟ್ ಆಫ್ ಎಫೆಕ್ಟೆಡ್ ವಿಲೇಜಸ್', ಇಂಟರ್-ಇಂಡಿಯಾ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

71. ಸಾವಿತ್ರಿ ರಾಮಯ್ಯ (2006) ಇಂಪ್ಯಾಕ್ಟ್ ಆಫ್ ಇನ್‌ವಾಲ್ಯೆಂಟರಿ ರೀಸೆಟ್ಲ್‌ಮೆಂಟ್ ಆನ್ ಲೆವೆಲ್ಸ್ ಆಫ್ ಲೀವಿಂಗ್, ಇನ್ ಹರಿಮೋಹನ್ ಮಾಥೂರ್ಸ್ (ಸಂ) ಮೇನೆಜಿಂಗ್ ರೀಸೆಟ್ಲ್‌ಮೆಂಟ್ ಇನ್ ಇಂಡಿಯಾ, ಎಪ್ರೋಚಸ್ ಎಂಡ್ ಇಸ್ಸ್ಯೂಸ್, ಎಕ್ಸ್ಪೀರಿಯನ್ಸಸ್. ಓರಿಯೆಂಟಲ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

72. ಸುಂದರ್ ರಾಜ್ ಡಿ. (2003). "ಇಂಟರ್‌ನಲ್ ಡಿಸ್‌ಪ್ಲೇಸ್‌ಮೆಂಟ್ ಇನ್ ಇಂಡಿಯಾ : ಕಾಸಸ್ ಎಂಡ್ ಕಾನ್‌ಸೀಕ್ವೆನ್ಸಸ್", ಮ್ಯಾನ್ ಆ್ಯಂಡ್ ಡೆವಲಪ್‌ಮೆಂಟ್, ಸೆಪ್ಟೆಂಬರ್.

73. ಸಂಜೀವ್ ಕಗ್ರಾಮ್, (2004). 'ಡ್ಯಾಮ್ಸ್ ಎಂಡ್ ಡೆವಲಪ್‌ಮೆಂಟ್', ಓರಿಯಂಟಲ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

74. ಹರ್ಷ್‌ಮೆನ್ ಎ.ಬಿ. (1958) ದ ಸ್ಟ್ರಾಟಜಿ ಆಫ್ ಎಕನಾಮಿಕ್ ಡೆವಲಪ್‌ಮೆಂಟ್, ಯೆಲೆ ಯುನಿವರ್ಸಿಟಿ ಪ್ರೆಸ್, ನ್ಯೂ ಹೆವನ್.

75. ಹುಸೇನ್ ಮುನಿರಲ್, (2008). "ಇಂಟರಾಗೇಟಿಂಗ್ ಡೆವಲಪ್‌ಮೆಂಟ್, ಸ್ಟೇಟ್ ಡಿಸ್‌ಪ್ಲೇಸ್‌ಮೆಂಟ್ ಎಂಡ್ ಪಾಪ್ಯುಲರ್ ರೆಸಿಸ್ಟೆನ್ಸ್ ಇನ್ ನಾರ್ತ್‌ಈಸ್ಟ್ ಇಂಡಿಯಾ", ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

76. ಹೇಮಲತಾ ರಾವ್, (2001), 'ರೀಜನಲ್ ಡಿಸ್‌ಪ್ಯಾರಿಟಿಸ್ ಎಂಡ್ ಡೆವಲಪ್‌ಮೆಂಟ್ ಇನ್ ಇಂಡಿಯಾ', ಆಷೀಸ್ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ.

ಸರಕಾರದ ನೀತಿಗಳು ಮತ್ತು ವರದಿಗಳು

77. ಇಂಪೀರಿಯಲ್ ಗಝೆಟಿಯರ್ ಆಫ್ ಇಂಡಿಯಾ, ಸೌತ್ ಕೆನರಾ, 1908.

78. ಎಸ್.ಎ.ಗಿಲಾನಿ (ಸಂ.), ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಗಝೆಟಿಯರ್, ಗವರ್ನ್‌ಮೆಂಟ್ ಆಫ್ ಕರ್ನಾಟಕ, ಕಾವೇರಿ ಭವನ, ಬೆಂಗಳೂರು.

79. ಕರ್ನಾಟಕ ಸರಕಾರ, ಮಾನವ ಅಭಿವೃದ್ಧಿ ವರದಿ – 2005; ಯೋಜನಾ ಮತ್ತು ಅಂಕಿಅಂಶಗಳ ಇಲಾಖಾ ವರದಿ, ಬೆಂಗಳೂರು.

80. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಸ್ಟೇಟ್ ಡೊಮೆಸ್ಟಿಕ್ ಪ್ರೊಡಕ್ಟ್, ಕರ್ನಾಟಕ, ಬೆಂಗಳೂರು, ಡೈರೆಕ್ಟರೇಟ್ ಆಫ್ ಎಕನಾಮಿಕ್ಸ್ ಎಂಡ್ ಸ್ಟೆಟಿಸ್ಟಿಕ್ಸ್, 2004–2005.

81. ಗವರ್ನ್‌ಮೆಂಟ್ ಆಫ್ ಇಂಡಿಯಾ, ಸೆನ್ಸಸ್ ಆಫ್ ಇಂಡಿಯಾ 2001, ಗವರ್ನ್‌ಮೆಂಟ್ ಪ್ರೆಸ್.

82. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಕರ್ನಾಟಕ, 1999, ಬೆಂಗಳೂರು. ಡಿಪಾರ್ಟ್‌ಮೆಂಟ್ ಆಫ್ ಪ್ಲಾನಿಂಗ್ ಆ್ಯಂಡ್ ಸ್ಟ್ಯಾಟಿಸ್ಟಿಕ್ಸ್, 1999.

83. ಗವರ್ನ್‌ಮೆಂಟ್ ಆಫ್ ಇಂಡಿಯಾ (2005) 'ದ ಸ್ಪೆಷಲ್ ಎಕನಾಮಿಕ್ ಝೋನ್ಸ್ ಆ್ಯಕ್ಟ್, ಎವೈಲೇಬಲ್ ಎಟ್ ಎಚ್‌ಟಿಟಿಪಿ/ಡಬ್ಲ್ಯುಡಬ್ಲ್ಯುಡಬ್ಲ್ಯು.ಎಸ್‌ಇಝಡ್.ಕಾವ್/ಡಾಕ್ಯುಮೆಂಟ್ಸ್/ ಎಸ್‌ಇಝಡ್‌ಆ್ಯಕ್ಟ್.ಪಿ.ಡಿ.ಎಫ್.

84. ಗವರ್ನಮೆಂಟ್ ಆಫ್ ಇಂಡಿಯಾ, 'ವರ್ಕಿಂಗ್ ಗ್ರೂಪ್ ಆನ್ ಡೆವಲಪ್‌ಮೆಂಟ್ ಆ್ಯಂಡ್ ವೆಲ್‌ಫೇರ್ ಆಫ್ ಶೆಡ್ಯೂಲ್ಡ್ ಟ್ರೈಬ್ಸ್ ಡ್ಯೂರಿಂಗ್ ದ ಏಯ್ಟ್‌ತ್ ಫೈವ್ ಇಯರ್ ಪ್ಲ್ಯಾನ್(1990–95). ಇಯರ್ 1994.

85. 'ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಎಟ್ ಎ ಗ್ಲ್ಯಾನ್ಸ್', 2010–11, ಡಿಸ್ಟ್ರಿಕ್ಟ್ ಎಡ್ಮಿನಿಸ್ಟ್ರೇಶನ್, ಮಂಗಳೂರು.

86. ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ–ಅಂಶಗಳ ನೋಟ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಮಂಗಳೂರು, ದಕ್ಷಿಣ ಕನ್ನಡ, 2013–14.

87. ಫೈನಲ್ ರಿಪೋರ್ಟ್ ಆಫ್ ಹೈಪವರ್ ಕಮಿಟಿ ಫಾರ್ ರೀಡ್ರೆಸ್ಸಲ್ ಆಫ್ ರೀಜನಲ್ ಇಂಬ್ಯಾಲನ್ಸಸ್, ಬೆಂಗಳೂರು, 2002.

88. ಮಂಗಳೂರು ವಿಶೇಷ ಆಥಿಕ ವಲಯ ಸ್ಥಾಪನೆಗೆ ಸಂಬಂಧಪಟ್ಟಂತೆ ಕರ್ನಾಟಕ ಸರಕಾರ ಹೊರಡಿಸಿದ ಆದೇಶ ಸಂಖ್ಯೆ ಕಂ.ಇ.309, ಆರ್.ಇ.ಎಚ್. 2006, ಬೆಂಗಳೂರು, ದಿನಾಂಕ 20–06–2007.

89. ಮಂಗಳೂರು ವಿಶೇಷ ಆಥಿಕ ವಲಯ ಸ್ಥಾಪನೆಗೆ ಸಂಬಂಧಪಟ್ಟಂತೆ ಕರ್ನಾಟಕ ಸರಕಾರ ಹೊರಡಿಸಿದ ಆದೇಶ ಸಂಖ್ಯೆ ಕಂ.ಇ.309, ಆರ್.ಇ.ಎಚ್. 2006, ಬೆಂಗಳೂರು, ದಿನಾಂಕ 20–06–2007.

90. ಮಂಗಳೂರು ವಿಶೇಷ ಆರ್ಥಿಕ ವಲಯದ ಸಂತ್ರಸ್ತರ ಪುನರ್‌ವಸತಿಗೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯ ಸರಕಾರದ ಆದೇಶ ಸಂಖ್ಯೆ ಆರ್.ಡಿ.116, ಆರ್.ಇ.ಎಚ್. 2011, ಬೆಂಗಳೂರು, ದಿನಾಂಕ 02–12–2011.

91. ಮೈಕೆಲ್ ಸೆರ್ನಾ, (1998). "ಇನ್‌ವಾಲ್ಯೆಂಟರಿ ರೀಸೆಟ್ಲ್‌ಮೆಂಟ್ ಇನ್ ಡೆವಲಪ್‌ಮೆಂಟ್ ಪ್ರಾಜೆಕ್ಟ್", ಪಾಲಿಸಿ ಗೈಡ್ ಲೈನ್ಸ್ ಇನ್ ವರ್ಲ್ಡ್ ಬ್ಯಾಂಕ್ ಫೈನಾನ್ಸ್‌ಡ್ ಪ್ರಾಜೆಕ್ಟ್ಸ್, ವರ್ಲ್ಡ್ ಬ್ಯಾಂಕ್, ವಾಷಿಂಗ್‌ಟನ್ ಡಿ.ಸಿ.

92. ಸೌತ್ ಕೆನರಾ ಡಿಸ್ಟ್ರಿಕ್ಟ್ ಗಝೆಟಿಯರ್, 2004.

93. ಸ್ಟಾಟೋಕ್ ಜೆ. 'ಮದ್ರಾಸ್ ಡಿಸ್ಟ್ರಿಕ್ಟ್ ಮಾನ್ಯುವಲ್ ಫಾರ್ ಸೌತ್ ಕೆನರಾ', ಮದ್ರಾಸ್, 1894.

94. ಹೆರಾಲ್ಡ್ ಸ್ಟುವರ್ಟ್, ಮೆಡ್ರಾಸ್ ಡಿಸ್ಟ್ರಿಕ್ಟ್ ಮಾನ್ಯುವಲ್.

95. 2011ರ ಜನಗಣತಿಯ ವರದಿ, ಗವರ್ನ್‌ಮೆಂಟ್ ಆಫ್ ಇಂಡಿಯಾ.

ಸಂಶೋಧನಾ ಪ್ರೌಢ ಪ್ರಬಂಧಗಳು

96. ಆರ್. ವಿ. ಚಂದ್ರಶೇಖರ್ (2011), 'ಕರ್ನಾಟಕದ ವಿಶೇಷ ಆರ್ಥಿಕ ವಲಯಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ', ಪಿ.ಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪ್ರೌಢ ಪ್ರಬಂಧ.

97. ಚಂದ್ರ ಪೂಜಾರಿ, (1995), 'ಟ್ರೆಂಡ್ಸ್ ಇನ್ ಎಂಟರ್‌ಪ್ರಿನ್ಯೂರ್‌ಷಿಪ್ ಎಂಡ್ ರೀಜನಲ್ ಡೆವಲಪ್‌ಮೆಂಟ್ – ಎ ಸ್ಟಡಿ ವಿಥ್ ರೆಫರೆನ್ಸ್ ಟು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್'. ಎನ್ ಅನ್‌ಪಬ್ಲಿಷ್‌ಡ್ ಥೀಸಿಸ್ ಸಬ್ಮಿಟ್ಟೆಡ್ ಟು ಮ್ಯಾಂಗಲೋರ್ ಯುನಿವರ್ಸಿಟಿ ಫಾರ್ ದ ಅವಾರ್ಡ್ ಆಫ್ ಪಿ.ಎಚ್.ಡಿ. ಡಿಗ್ರಿ.

98. ಜಗನ್ನಾಥ ಮಲ್ಲಿಕಾ (2010), 'ಪ್ರೈವೆಟ್ ಇನ್‌ವೆಸ್ಟ್‌ಮೆಂಟ್ ಆ್ಯಂಡ್ ಎಕನಾಮಿಕ್ ಗ್ರೋಥ್ ಇನ್ ಇಂಡಿಯಾ : ಎನ್ ಎಂಪಿರಿಕಲ್ ಅನಾಲಿಸಿಸ್', ಎನ್ ಅನ್‌ಪಬ್ಲಿಷ್‌ಡ್ ಥೀಸಿಸ್ ಸಬ್‌ಮಿಟ್ಟೆಡ್ ಟು ಐಸ್ಯಾಕ್, ಬೆಂಗಳೂರು ಫಾರ್ ಪಿ.ಎಚ್.ಡಿ ಡಿಗ್ರಿ.

99. ಬಿರಾದಾರ್ ಎಸ್. ಬಿ. (2005), 'ದ ಎಫೆಕ್ಟ್ಸ್ ಆಫ್ ಇನ್‌ವಾಲಿಯೆಂಟರಿ ಡಿಸ್‌ಪ್ಲೇಸ್‌ಮೆಂಟ್ ಆನ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್, ಎನ್ ಅನ್‌ಪಬ್ಲಿಷ್‌ಡ್ ಥೀಸಿಸ್ ಸಬ್‌ಮಿಟ್ಟೆಡ್ ಟು ಕರ್ನಾಟಕ ಯೂನಿವರ್ಸಿಟಿ, ಧಾರವಾಡ್ ಫಾರ್ ದ ಅವಾರ್ಡ್ ಆಫ್ ಪಿ.ಎಚ್.ಡಿ ಡಿಗ್ರಿ.

100. ಮಹೇಂದ್ರ ಆರ್. (2002), 'ದ ಇಂಪ್ಯಾಕ್ಟ್ ಆಫ್ ಮೆಗಾ ಇಂಡಸ್ಟ್ರೀಸ್ ಆನ್ ಚಿಲ್ಡ್ರನ್ ಎಂಡ್ ಯೂತ್ ಇನ್ ದ ಡಿಸ್‌ಪ್ಲೇಸ್‌ಡ್ ಏರಿಯಾ ಇನ್ ಸೌತ್ ಕೆನರಾ ಆ್ಯಂಡ್ ಉಡುಪಿ ಡಿಸ್ಟ್ರಿಕ್ಟ್ಸ್ ಆಫ್ ಕರ್ನಾಟಕ', ಎನ್ ಅನ್‌ಪಬ್ಲಿಷ್‌ಡ್ ಥೀಸಿಸ್ ಸಬ್‌ಮಿಟ್ಟೆಡ್ ಟು ಮ್ಯಾಂಗಲೋರ್ ಯೂನಿವರ್ಸಿಟಿ ಫಾರ್ ದ ಅವಾರ್ಡ್ ಆಫ್ ಪಿ.ಎಚ್.ಡಿ. ಡಿಗ್ರಿ.

101. ಮಾಲಿನಿ ಎಲ್. ತಂತ್ರಿ (2011), 'ಸ್ಪೆಷಲ್ ಎಕನಾಮಿಕ್ ಝೋನ್ಸ್ ಇನ್ ಇಂಡಿಯಾ : ಆರ್ ದೀಸ್ ಎನ್‌ಕ್ಲೇವ್ಸ್ ಎಫಿಷಿಯೆಂಟ್', ವರ್ಕಿಂಗ್ ಪೇಪರ್ 274, ಐಸ್ಯಾಕ್, ಬೆಂಗಳೂರು.

ಸಂಶೋಧನಾ ಲೇಖನಗಳು

102. ಇನಾಕ್ಷಿ ಗಂಗೂಲಿ ತುಕ್ರಾಲ್, (1988). "ಡ್ಯಾಮ್ಸ್ ಫಾರ್ ಹೂಸ್ ಡೆವಲಪ್‌ಮೆಂಟ್", ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 38, ಎಪ್ರಿಲ್–ಜೂನ್.

103. ಇನಾಕ್ಷಿ ಗಂಗೂಲಿ ತುಕ್ರಾಲ್, (1996). 'ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಆ್ಯಂಡ್ ರೀಹೆಬಿಲಿಟೇಷನ್ – ಲೊಕೇಟಿಂಗ್ ಜೆಂಡರ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

104. ಇಯಾನ್ ಕುಕ್, ರಾಮಚಂದ್ರ ಭಟ್ಟ ಮತ್ತು ವಿದ್ಯಾ ದಿನಕರ್, (2013), 'ದ ಮಲ್ಟಿಪಲ್ ಡಿಸ್‌ಪ್ಲೇಸ್‌ಮೆಂಟ್ ಆಫ್ ಮ್ಯಾಂಗಲೋರ್ ಸ್ಪೆಷಲ್ ಎಕನಾಮಿಕ್ ಝೋನ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 48, ನಂ. 33, ಆಗೋಸ್ಟ್ 17.

105. ಉಪೇಂದ್ರ ಹೊಸಬೆಟ್ಟು, (2004), 'ಕೈಗಾರಿಕೆಗಳು – ಪರಿಸರ – ಉದ್ಯೋಗ ಅವಕಾಶಗಳು', ಸಬೀಹಾ ಭೂಮಿಗೌಡ(ಸಂ.) 'ನಾವು ಮತ್ತು ನಮ್ಮ ಪರಿಸರ', ಡಾ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ.

106. ಉಷಾ ರಮಾನಾಥನ್, (1996), 'ಡಿಸ್‌ಪ್ಲೇಸ್‌ಮೆಂಟ್ ಆ್ಯಂಡ್ ಲಾ', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

107. ಕೇಶವ ಉಚ್ಚಿಲ, (2000), 'ಶತಮಾನದ ಬೀಸುನೋಟ', ಇನ್ "ಪೊಲಿ", ಮುಕುಂದ ಪ್ರಭು (ಸಂ)., ದಕ್ಷಿಣ ಕನ್ನಡ ಜಿಲ್ಲಾಡಳಿತ, ಮಂಗಳೂರು.

108. ಕೈವಲ್ಯ ದೇಸಾಯಿ, ವಿನೀತ್ ಜೈನ್, ರಾಹುಲ್ ಪಾಂಡೆ, ಶ್ರೀಕಾಂತ್ ಪಿ., ಉಪಮನ್ಯು ತ್ರಿವೇದಿ(2009) "ರೀಹೆಬಿಲಿಟೇಷನ್ ಆಫ್ ದ ಇಂದಿರಾಸಾಗರ್ ಪರಿಯೋಜನಾ ಡಿಸ್‌ಪ್ಲೇಸ್‌ಡ್". ಎಕನಾಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ, ಡಿಸೆಂಬರ್ 22, ವಾಲ್ಯೂಮ್ 44, ನಂ.51.

109. ಡಾ. ಚಿಕಾತಿ ಶ್ರೀನೂ (2013), ಚಾಲೆಂಜಸ್ ಎಂಡ್ ಫ್ಯೂಚರ್ ಆಫ್ ಸ್ಪೆಷಲ್ ಎಕನಾಮಿಕ್ ಝೋನ್ಸ್ ಇನ್ ಇಂಡಿಯಾ – ಎ ಪರ್‌ಸ್ಪೆಕ್ಟಿವ್, ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಮಾರ್ಕೆಟಿಂಗ್ ಫಿನಾನ್ಸಿಯಲ್ ಸರ್ವಿಸಸ್ ಎಂಡ್ ಮ್ಯಾನೇಜ್‌ಮೆಂಟ್ ರೀಸರ್ಚ್ ವಾಲ್ಯೂಮ್ 2, ಮಾರ್ಚ್, ಐ.ಎಸ್.ಎಸ್.ಎನ್ 2277–3622.

110. ಡೇವಿಡ್ ಮರ್ಸ್ಡೆನ್, (1998), ರಿಸೆಟ್ಲ್‌ಮೆಂಟ್ ಎಂಡ್ ರೀಹೆಬಿಲಿಟೇಷನ್ ಇನ್ ಇಂಡಿಯಾ ; ಸಮ್ ಲೆಸನ್ಸ್ ಫ್ರಮ್ ರೀಸೆಂಟ್ ಎಕ್ಸ್‌ಪೀರಿಯೆನ್ಸಸ್ ಇನ್ ಎಚ್.ಎಮ್. ಮಧೂರ್ ಎಂಡ್ ಡೇವಿಡ್ ಮರ್ಸಿಡನ್(ಸಂ.) ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್ ಎಂಡ್ ಇಂಪವರಿಸ್‌ಮೆಂಟ್ ರಿಸ್ಕ್ಸ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

111. ತುಕ್ರಾಲ್ ಇ.ಜಿ.(1988) ಡ್ಯಾಮ್ಸ್ ಫಾರ್ ಹೂಸ್ ಡೆವಲಪ್‌ಮೆಂಟ್, ಸೋಶಿಯಲ್ ಆ್ಯಕ್ಷನ್ 38(3).

112. ನಾಯಕ್ ವಿದ್ಯಾ, (2004), 'ಪರಿಸರ ಸಂರಕ್ಷಣಾ ಚಳುವಳಿಗಳು ಮತ್ತು ಮಹಿಳೆ', ಸಬೀಹಾ ಭೂಮಿಗೌಡ(ಸಂ.) 'ನಾವು ಮತ್ತು ನಮ್ಮ ಪರಿಸರ', ಡಾ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ.

113. ಪರಶುರಾಮನ್ ಎಸ್.(1995), "ಡೆವಲಪ್‌ಮೆಂಟ್ ಎಂಡ್ ಡಿಸ್‌ಪ್ಲೇಸ್‌ಮೆಂಟ್ ಇನ್ ಇಂಡಿಯನ್ ಫ್ಯಾಮಿಲೀಸ್", ದ ಇಂಡಿಯನ್ ಜರ್ನಲ್ ಆಫ್ ಸೋಶಿಯಲ್ ವರ್ಕ್, ವಾಲ್ಯೂಮ್ 55, ನಂ.2, ಎಪ್ರಿಲ್.

114. ಪರಶುರಾಮನ್ ಎಸ್., (1996), 'ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್, ಡಿಸ್‌ಪ್ಲೇಸ್‌ಮೆಂಟ್ ಆ್ಯಂಡ್ ಔಟ್‌ಕಮ್ಸ್ ಫಾರ್ ಡಿಸ್‌ಪ್ಲೇಸ್‌ಡ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

115. ಪಾರ್ಥಸಾರಥಿ ಬ್ಯಾನರ್ಜಿ, (2006), 'ಲ್ಯಾಂಡ್ ಎಕ್ವಿಝಿಶನ್ ಆ್ಯಂಡ್ ಪೆರ್ಯುಂಟ್ ರೆಸಿಸ್ಟೆನ್ಸ್ ಎಟ್ ಸಿಂಗೂರ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 41, ನಂ. 46, ನವೆಂಬರ್ 18.

116. ಪಿಯೂಸ್ ಫಿಡ್ಲೆಸ್ ಪಿಂಟೋ, (2000), 'ಲ್ಯಾಂಡ್ ಸಿಸ್ಟಮ್ – ಎನ್ ಓವರ್ ವ್ಯೂ', ಇನ್ "ಪೊಲಿ", ಮುಕುಂದ ಪ್ರಭು (ಸಂ)., ದಕ್ಷಿಣ ಕನ್ನಡ ಜಿಲ್ಲಾಡಳಿತ, ಮಂಗಳೂರು.

117. ಪ್ರಭಾಕರ ಶಿಶಿಲ, (2000), 'ಪ್ರಾಬ್ಲಮ್ಸ್ ಆಫ್ ಇಂಡಸ್ಟ್ರಿಯಲೈಸೇಷನ್', ಇನ್ "ಪೊಲಿ", ಮುಕುಂದ ಪ್ರಭು(ಸಂ)., ದಕ್ಷಿಣ ಕನ್ನಡ ಜಿಲ್ಲಾಡಳಿತ, ಮಂಗಳೂರು.

118. ಪೌಲ್ ರೊಸೆನ್‌ಸ್ಟೈನ್ ರೊಡಾನ್ ಎನ್. (1943), ಪ್ರಾಬ್ಲಮ್ಸ್ ಆಫ್ ಇಂಡಸ್ಟ್ರಿಯಲೈಸೇಷನ್ ಆಫ್ ಈಸ್ಟರ್ನ್ ಎಂಡ್ ಸೌತ್ ಈಸ್ಟರ್ನ್ ಯೂರೋಪ್, ಎಕನಾಮಿಕ್ ಜರ್ನಲ್, ವಾಲ್ಯೂಮ್ 55, ಸೆಪ್ಟೆಂಬರ್.

119. ಫೆರ್ನಾಂಡಿಸ್, ವಾಲ್ಟೆರ್, (1991), 'ಪವರ್ ಆ್ಯಂಡ್ ಪವರ್‌ಲೆಸ್: ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್ ಆ್ಯಂಡ್ ಡಿಸ್‌ಪ್ಲೇಸ್‌ಮೆಂಟ್ ಆಫ್ ಟ್ರೈಬಲ್ಸ್', ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 41, ನಂ. 3, ಜುಲೈ–ಸೆಪ್ಟೆಂಬರ್.

120. ಬಾಲಕೃಷ್ಣನ್ ರಾಜಗೋಪಾಲ್, (2000), "ಡ್ಯಾಮ್ಸ್ ಎಂಡ್ ಡೆವಲಪ್‌ಮೆಂಟ್", ಆರ್ಟಿಕಲ್ ಪಬ್ಲಿಷ್‌ಡ್ ಇನ್ ವರ್ಲ್ಡ್ ಬ್ಯಾಂಕ್ ಫೈನ್ಯಾನ್ಸ್‌ಡ್ ಪ್ರಾಜೆಕ್ಟ್ಸ್, ವಾಷಿಂಗ್ಟನ್ ಡಿ.ಸಿ.

121. ಬಿ.ಕೆ.ಸಿನ್ಹಾ, (1996), 'ಡ್ರಾಫ್ಟ್ ನ್ಯಾಷನಲ್ ಪಾಲಿಸಿ ಫಾರ್ ರೀಹೆಬಿಲಿಟೇಷನ್ – ಒಬ್ಜೆಕ್ಟಿವ್ಸ್ ಆ್ಯಂಡ್ ಪ್ರಿನ್ಸಿಪಲ್ಸ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

122. ಬೈರನ್ ಜೆ ಗುಡ್, (1996), 'ಮೆಂಟಲ್ ಹೆಲ್ತ್ ಕಾನ್ಸೀಕ್ವೆನ್ಸಸ್ ಆಫ್ ಡಿಸ್‌ಪ್ಲೇಸ್‌ಮೆಂಟ್ ಆ್ಯಂಡ್ ರೀಸೆಟ್ಲ್‌ಮೆಂಟ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

123. ಭವಾನಿ ಶಂಕರ ಬಿ.ಎ., (2000), 'ಅಭಿವೃದ್ಧಿ ಇನ್ನೊಂದು ಮುಖ', ಹೊಸತು ಪತ್ರಿಕೆ, ಜುಲೈ 3.

124. ಮಹಾಪಾತ್ರ ಎಲ್.ಕೆ. (1995), 'ದ ಒರಿಸ್ಸಾ ರೀಸೆಟ್ಲ್‌ಮೆಂಟ್ ಆ್ಯಂಡ್ ರೀಹೆಬಿಲಿಟೇಷನ್ ಆಫ್ ಪ್ರಾಜೆಕ್ಟ್ಸ್ ಎಫೆಕ್ಟೆಡ್ ಪರ್ಸನ್ಸ್ ಪಾಲಿಸಿ, 1994: ಎ ಕ್ರಿಟಿಕ್', ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 45, ಜುಲೈ–ಸೆಪ್ಟೆಂಬರ್.

125. ಮಾಥ್ಯೂ ಅರೆಪೆರಂಬಿಲ್, (1988), "ಇಂಡಸ್ಟ್ರೀಸ್, ಮೈನ್ಸ್ ಎಂಡ್ ಡಿಸ್‌ಪೊಸೆಶ್ಯನ್ ಆಫ್ ಇನ್‌ಡಿಜೀನಸ್ ಪೀಪಲ್ಸ್; ದ ಕೇಸ್ ಆಫ್ ಛೋಟಾನಾಗ್ಪುರ್". ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 38, ಎಪ್ರಿಲ್–ಜೂನ್.

126. ಮಾಥ್ಯೂ ಅರೆಪೆರಂಬಿಲ್, (1996), 'ಡಿಸ್‌ಪ್ಲೇಸ್‌ಮೆಂಟ್ ಡ್ಯೂ ಟು ಮೈನಿಂಗ್ ಇನ್ ಝಾರ್ಖಂಡ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

127. ಮೇಧಾ ಪಾಟ್ಕರ್ (1989) ದ ಟ್ರಾಜಿಕ್ ಸ್ಟೋರಿ ಆಫ್ ಡಿಸ್‌ಪ್ಲೇಸ್‌ಮೆಂಟ್: ಎ ಕೇಸ್ ಸ್ಟಡಿ ಆಫ್ ಟ್ರೈಬಲ್ಸ್ ಎಫೆಕ್ಟೆಡ್ ಬೈ ಸರದಾರ್ ಸರೋವರ್ ಪ್ರಾಜೆಕ್ಟ್ ಇನ್ ಎ.ಪಿ. ಫೆರ್ನಾಂಡೀಸ್ (ಸಂ) ರಿಪೋರ್ಟ್ ಆಫ್ ವರ್ಕ್‌ಶಾಪ್ ಆನ್ ರಿಹ್ಯಾಬಿಲಿಟೇಷನ್ ಆಫ್ ಪರ್ಸನ್ಸ್ ಡಿಸ್‌ಪ್ಲೇಸ್‌ಡ್ ಬೈ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಐಸ್ಯಾಕ್, ಬೆಂಗಳೂರು.

128. ಮೈಕೆಲ್ ಸೆರ್ನ್ಯಾ, (1996), 'ಪಬ್ಲಿಕ್ ಪಾಲಿಸಿ ರೆಸ್ಪಾನ್ಸಸ್ ಟು ಡೆವಲಪ್‌ಮೆಂಟ್–ಇಂಡ್ಯೂಸ್‌ಡ್ ಪಾಪ್ಯುಲೇಷನ್ ಡಿಸ್‌ಪ್ಲೇಸ್‌ಮೆಂಟ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

129. ಮೈಕೆಲ್ ಸೆರ್ನಾ, (1999), "ದ ಇಕನಾಮಿಕ್ಸ್ ಆಫ್ ಇನ್‌ವಾಲ್ಯೆಂಟರಿ ರಿಸೆಟ್ಲ್‌ಮೆಂಟ್, ಕ್ವೆಶ್ಚನ್ಸ್ ಎಂಡ್ ಚಾಲೆಂಜಸ್ (ಸಂ)", ವರ್ಲ್ಡ್ ಬ್ಯಾಂಕ್ ವಾಷಿಂಗ್‌ಟನ್ ಡಿ.ಸಿ.

130. ಮೈಕೆಲ್ ಸೆರ್ನಾ, (1997), "ದ ರಿಸ್ಕ್ಸ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಮಾಡೆಲ್ ಫಾರ್ ರೀಸೆಟ್ಲಿಂಗ್ ಡಿಸ್ಪ್ಲೇಸ್‌ಡ್ ಪಾಪ್ಯುಲೇಷನ್ಸ್", ವರ್ಲ್ಡ್ ಡೆವಲಪ್‌ಮೆಂಟ್, ವಾಲ್ಯೂಮ್ 25, ನಂ.10.

131. ರೇಣು ಮೋದಿ, (2004), 'ಸರ್ದಾರ್ ಸರೋವರ್ ಔಸ್ಟೀಸ್, ಕೋಪಿಂಗ್ ವಿತ್ ಡಿಸ್‌ಪ್ಲೇಸ್‌ಮೆಂಟ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 39, ನಂ. 11, ಮಾರ್ಚ್ 13.

132. ರೋಲಿ ಅಸ್ಥಾನ, (1996), 'ಇನ್‌ವಾಲಿಯೆಂಟರಿ ರೀಸೆಟ್ಲ್‌ಮೆಂಟ್ ಸರ್ವೆ ಆಫ್ ಇಂಟರ್‌ನ್ಯಾಷನಲ್ ಎಕ್ಸ್‌ಪೀರಿಯೆನ್ಸ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

133. ವಿಧು ವರ್ಮಾ, (2004), 'ಎನ್‌ಜೆಂಡರಿಂಗ್ ಡೆವಲಪ್‌ಮೆಂಟ್ – ಲಿಮಿಟ್ಸ್ ಆಫ್ ಫೆಮಿನಿಸ್ಟ್ ಥಿಯರೀಸ್ ಆ್ಯಂಡ್ ಜಸ್ಟೀಸ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 39, ನಂ. 49, ಡಿಸೆಂಬರ್ 4.

134. ವಿಲಿಯಂ ಸ್ಟಾನ್ಲಿ,(1996), "ಮಚ್‌ಕುಂದ್, ಅಪ್ಪರ್ ಕೋಲಬ್ ಎಂಡ್ ನೆಲ್ಕೊ ಪ್ರಾಜೆಕ್ಟ್ಸ್ ಇನ್ ಕೊರಾಪುಟ್ ಡಿಸ್ಟ್ರಿಕ್ಟ್, ಒರಿಸ್ಸಾ, ಎಕನಾಮಿಕ್ ಎಂಡ್ ಪೊಲಿಟಿಕಲ್ ವೀಕ್ಲಿ, ವಾಲ್ಯೂಮ್ 31, ನಂ.24, ಜೂನ್–15.

135. ವೀಣಾ ದಾಸ್, (1996), 'ಡಿಸ್‌ಲೋಕೇಷನ್ ಆ್ಯಂಡ್ ರೀಹೆಬಿಲಿಟೇಷನ್ – ಡಿಫೈನಿಂಗ್ ಎ ಫೀಲ್ಡ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

136. ವಿನಿತಾ ಶರ್ಮಾ (2007), 'ಇಂಪ್ಲಿಕೇಷನ್ಸ್ ಆಫ್ ಎ ಸ್ಪೆಷಲ್ ಎಕನಾಮಿಕ್ ಝೋನ್ ಆನ್ ಪ್ರಾಜೆಕ್ಟ್ ಎಫೆಕ್ಟೆಡ್ ಪೀಪಲ್', ಮ್ಯಾನ್ ಎಂಡ್ ಡೆವಲಪ್‌ಮೆಂಟ್, ಡಿಸೆಂಬರ್, ನ್ಯೂಡೆಲ್ಲಿ.

137. ಸುಭಾಷ್ ರಂಜನ್ ನಾಯಕ್ (2008), 'ಡಿಸ್‌ಪ್ಲೇಸ್‌ಮೆಂಟ್ ಆ್ಯಂಡ್ ಡೆವಲಪ್‌ಮೆಂಟ್ ಇನ್ ದ ಕಂಟೆಕ್ಸ್ಟ್ ಆಫ್ ಲಾಂಜೀಘರ್ ಪ್ರಾಜೆಕ್ಟ್, ಒರಿಸ್ಸಾ', ಸೋಷಿಯಲ್ ಆ್ಯಕ್ಷನ್, ವಾಲ್ಯೂಮ್ 58, ಜನವರಿ–ಮಾರ್ಚ್.

138. ಸಂಗೀತಾ ಗೋಯಲ್, (1996), "ಎಕನಾಮಿಕ್ ಪರ್‌ಸ್ಪೆಕ್ಟಿವ್ಸ್ ಆನ್ ರೀಸೆಟ್ಲ್‌ಮೆಂಟ್ ಎಂಡ್ ರೀಹೆಬಿಲಿಟೇಷನ್", ಇ.ಪಿ.ಡಬ್ಲ್ಯೂ, ವಾಲ್ಯೂಮ್ 31, ನಂ. 24, ಜೂನ್ 15, 1996.

139. ಸಿಂಗ್, ಛತ್ರಪತಿ (1999), 'ರೀಹೆಬಿಲಿಟೇಷನ್ ಆ್ಯಂಡ್ ದ ರೈಟ್ ಟು ಪ್ರಾಪರ್ಟಿ', ಇನ್ ಫೆರ್ನಾಂಡಿಸ್ ಆ್ಯಂಡ್ ಗಂಗೂಲಿ ತುಕ್ರಾಲ್(ಸಂ.) 'ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಆ್ಯಂಡ್ ರೀಹೆಬಿಲಿಟೇಷನ್'.

140. ಸಿಂಗ್, ಮೃದುಲಾ(1992) ಡಿಸ್‌ಪ್ಲೇಸ್‌ಮೆಂಟ್ ಬೈ ಸರ್ದಾರ್ ಸರೋವರ್ ಎಂಡ್ ತೇಹ್ರಿ, ಎ ಕಂಪ್ಯಾರೇಟಿವ್ ಸ್ಟಡಿ ಆಫ್ ಟು ಡ್ಯಾಮ್ಸ್, ಮಲ್ಟಿಪಲ್ ಆ್ಯಕ್ಷನ್ ರಿಸರ್ಚ್ ಗ್ರೂಪ್ ಪಬ್ಲಿಕೇಷನ್ಸ್, ಮಾರ್ಚ್.

141. ಸ್ಕಡ್ಡರ್ ಟಿ. (1996), 'ಡೆವಲಪ್‌ಮೆಂಟ್ – ಇನ್‌ಡ್ಯೂಸ್ಡ್ ಇಂಪವರಿಷ್‌ಮೆಂಟ್, ರೆಸಿಸ್ಟೆನ್ಸ್ ಆ್ಯಂಡ್ ರಿವರ್ ಬೇಸಿನ್ ಡೆವಲಪ್‌ಮೆಂಟ್', ಇನ್ ಸಿ.ಎಮ್.ಸಿ. ಡೋವೆಲ್(ಸಂ.), 'ಅಂಡರ್‌ಸ್ಟ್ಯಾಂಡಿಂಗ್ ಇಂಪವರಿಷ್‌ಮೆಂಟ್ : ದ ಕಾನ್‌ಸೀಕ್ವೆನ್ಸ್ ಆಫ್ ಡೆವಲಪ್‌ಮೆಂಟ್ ಇಂಡ್ಯೂಸ್‌ಡ್ ಡಿಸ್‌ಪ್ಲೇಸ್‌ಮೆಂಟ್', ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಲಂಡನ್.

142. ಸ್ಟಿಂಗ್‌ಮೆನ್, ಅಮ್ಮಂಡೆ, (1973) ಇನ್ ಎಂ.ಪಿ. ಈಸ್ವರ್ಸ್(ಸಂ.), "ಆಪರೇಟಿಂಗ್ ಎಂಡ್ ಅಪ್ಪರ್", ಸ್ಪಿಂಗರ್ ವೆರ್ಲಾಗ್, ನ್ಯೂಯಾರ್ಕ್.

143. ಸ್ಮಿತು ಕೊಥಾರಿ, (1996), 'ಹೂಸ್ ನೇಷನ್? ದ ಡಿಸ್‌ಪ್ಲೇಸ್‌ಡ್ ಆ್ಯಸ್ ವಿಕ್ಟಿಮ್ಸ್ ಆಫ್ ಡೆವಲಪ್‌ಮೆಂಟ್', ಇ.ಪಿ.ಡಬ್ಲ್ಯೂ., ವಾಲ್ಯೂಮ್ 31, ನಂ. 24, ಜೂನ್ 15.

144. ಹರಿಮೋಹನ ಮಾಥೂರ್, ಡೇವಿಡ್ ಮರ್‌ಸ್ಡನ್, (2006), "ಮ್ಯಾನೇಜಿಂಗ್ ರೀಸೆಟ್ಲ್‌ಮೆಂಟ್ ಇನ್ ಇಂಡಿಯಾ, ಎಪ್ರೋಚಸ್, ಇಶ್ಯೂಸ್, ಎಕ್ಸ್‌ಪೀರಿಯನ್ಸಸ್(ಸಂ).", ಒರಿಯೆಂಟಲ್ ಯುನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

145. ಹರಿಮೋಹನ್ ಮಾಥೂರ್, (2000), 'ದ ರೋಲ್ ಆಫ್ ಎಕನಾಮಿಸ್ಟ್ ಇನ್ ರೀಸೆಟ್ಲ್‌ಮೆಂಟ್ ಪ್ಲ್ಯಾನಿಂಗ್', ಮ್ಯಾನ್ ಎಂಡ್ ಡೆವಲಪ್‌ಮೆಂಟ್, ವಾಲ್ಯೂಮ್ 22, ನಂ. 3.

146. ಹಿಗ್ಗಿನ್ಸ್ ಬಿ. (1986), ದ ಡ್ಯುಯಲಿಸ್ಟಿಕ್ ಥಿಯರಿ ಆಫ್ ಅಂಡರ್‌ಡೆವಲಪ್‌ಡ್ ಏರಿಯಾಸ್, ಎಕನಾಮಿಕ್ ಡೆವಲಪ್‌ಮೆಂಟ್ ಎಂಡ್ ಕಲ್ಚರಲ್ ಚೇಂಜ್, ವಾಲ್ಯೂಮ್ ನಂ.2.

ಅನುಬಂಧ – 1

ಮಂಗಳೂರು ವಿಶೇಷ ಆರ್ಥಿಕ ವಲಯ ಕುರಿತಾದ ಆಯ್ದ ಛಾಯಾಚಿತ್ರಗಳು



1. ಭೂಸ್ವಾಧೀನಕ್ಕಿಂತ ಮೊದಲು ಕೃಷಿ ಚಟುವಟಿಕೆಗಳು ನಡೆಯುತ್ತಿದ್ದ ಭೂಮಿ



2. ಸ್ವಾಧೀನಪಡಿಸಲ್ಪಟ್ಟಿರುವ ಭೂಮಿಯಲ್ಲಿ ಕೈಗಾರಿಕೆಗಳ ಸ್ಥಾಪನೆ



3. ಮಂಗಳೂರು ವಿಶೇಷ ಆರ್ಥಿಕ ವಲಯದ ಕಛೇರಿಯಲ್ಲಿ ಭೂ ಸಂತ್ರಸ್ತರಿಂದ ಪ್ರತಿಭಟನೆ




4. ಭೂಮಿ ಕಳೆದುಕೊಂಡವರು ಪುನರ್‌ವಸತಿಗಾಗಿ ಹೋರಾಟ ಮಾಡುತ್ತಿರುವುದು




5. ಸ್ವಾಧೀನಪಡಿಸಿದ ಭೂಮಿಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ತಯಾರಿ



6. ಭೂಮಿಯನ್ನು ಕಳೆದುಕೊಂಡು ಸಂತ್ರಸ್ತರಾದವರ ಬಲವಂತದ ಸ್ಥಳಾಂತರ







7. ಪೆರ್ಮುದೆ ಪುನರ್‌ವಸತಿ ಕಾಲನಿಯಲ್ಲಿ ಮನೆಗಳ ನಿರ್ಮಾಣ



8. ಕೋಡಿಕೆರೆ ಪುನರ್‌ವಸತಿ ಕಾಲನಿ ನಿರ್ಮಾಣಗೊಂಡ ಮನೆ